ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ ೬

ವಚನ ಸಾಹಿತ್ಯ : ಭಾಗ-೧



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೯ : ವಚನ ಸಾಹಿತ್ಯ : ಭಾಗ–೧

❖

- ಬಸವಣ್ಣನವರ ವಚನಸಂಪುಟ
- ಬಸವಸ್ತೋತ್ರದ ವಚನಗಳು

❖

ಪ್ರಧಾನ ಸಂಪಾದಕರು ಮತ್ತು ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 9 : VACHANA SAHITY : BHAGA-1
Edited by : Dr. Veeranna Rajur, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxiv + 672=706

Copies: 1000
Price Rs: 350/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೯–ವಚನ ಸಾಹಿತ್ಯ : ಭಾಗ–೧

ಸಂಪಾದಕರು : ಡಾ. ವೀರಣ್ಣ ರಾಜೂರ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೧೯
ಪುಟಗಳು: xxxiv + ೬೭೨=೭೦೬

ಪ್ರತಿಗಳು: ೧೦೦೦
ಬೆಲೆ ರೂ: ೩೫೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ

ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮುಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ–೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ–ಧಾರ್ಮಿಕ–ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ–೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ–ವ್ಯಾಪ್ತಿ–ವಿಧಾನ–ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
 ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ-೨ **-ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ-೩ **-ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ-೪ **-ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ-೫ **-ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ-೬ **-ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ-೭ **-ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ-೮ **-ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ-೯ **-ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ-೪

೨. ವಚನ ಸಂಕಲನ-೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ-೧೦ **-ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ-೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ-೧ **-ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ-೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವೀರಣ್ಣ ರಾಜೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ವೀರಣ್ಣ ರಾಜೂರ

'ಸಮಗ್ರ ವಚನ ಸಾಹಿತ್ಯ ಜನಪ್ರಿಯ ಆವೃತ್ತಿ ಪ್ರಕಟಣ ಯೋಜನೆ' ಡಾ. ಎಂ.ಎಂ. ಕಲಬುರ್ಗಿ ಅವರು ರೂಪಿಸಿದ ಒಂದು ಐತಿಹಾಸಿಕ ಮಹತ್ವದ ಪ್ರತಿಷ್ಠಿತ ಯೋಜನೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಡಿಯಲ್ಲಿ ಕೈಕೊಂಡ ಈ ಯೋಜನೆಯಲ್ಲಿ ಎಲ್ಲ ಶರಣರ ಎಲ್ಲ ವಚನಗಳನ್ನು ೧೪ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಹೀಗಾಗಿ ಇದು ಒಂದು ಇಡೀ ಸಾಹಿತ್ಯ ಪ್ರಕಾರದ ಸಮಗ್ರ ಪ್ರಕಟಣೆಯ ಒಂದು ಅಪೂರ್ವ ಯೋಜನೆ ಎನಿಸಿದೆ. ಇದರಲ್ಲಿ ಮೊದಲ ನಾಲ್ಕು ಸಂಪುಟಗಳು ಏಕವ್ಯಕ್ತಿ ಸಮಗ್ರ ವಚನಗಳನ್ನು ಒಳಗೊಂಡಿದ್ದರೆ, ಐದನೆಯದು ಎಲ್ಲ ಶಿವಶರಣೆಯರ ಎಲ್ಲ ವಚನಗಳನ್ನು ಅಳವಡಿಸಿಕೊಂಡಿದೆ. ಮುಂದಿನ ಒಂಬತ್ತು ವಿವಿಧ ಶರಣರ ವಚನಗಳನ್ನು ಸೇರಿಸಿಕೊಂಡ ಸಂಕೀರ್ಣ ಸಂಪುಟಗಳಾಗಿವೆ. ಒಟ್ಟು ಹದಿನಾಲ್ಕರಲ್ಲಿ ಒಂಬತ್ತು ಸಂಪುಟಗಳು ಬಸವಯುಗದ ವಚನಕಾರರಿಗೆ ಸಂಬಂಧಿಸಿದರೆ, ಉಳಿದ ಐದು ಬಸವೋತ್ತರಯುಗದ ವಚನಕಾರರಿಗೆ ಮೀಸಲಾಗಿವೆ.

'ಬಸವಣ್ಣನವರ ವಚನಸಂಪುಟ' ಈ ಯೋಜನೆಯ ಮೊದಲ ಸಂಪುಟವಾಗಿದೆ. ಇದು ಎರಡು ಕಾಂಡಗಳಲ್ಲಿ ಒಡೆದುಕೊಂಡಿದೆ. ಮೊದಲಕಾಂಡದಲ್ಲಿ ಬಸವಣ್ಣನವರ ಷಟ್‌ಸ್ಥಲ ವಚನಗಳಿದ್ದರೆ, ಎರಡನೆಯದರಲ್ಲಿ ವಿವಿಧ ಮೂಲಗಳಲ್ಲಿ ದೊರೆಯುವ ಹೆಚ್ಚಿನ ವಚನಗಳನ್ನು ಸಂಗ್ರಹಿಸಲಾಗಿದೆ. ಎರಡೂ ಕಾಂಡ ಸೇರಿ ಒಟ್ಟು ೧೪೨೯ ವಚನಗಳು ಅಳವಟ್ಟಿವೆ. ಅವುಗಳಲ್ಲಿ ೯೬೦ ಷಟ್‌ಸ್ಥಲವಚನಗಳು; ೪೬೯ ಹೆಚ್ಚಿನ ವಚನಗಳು.

ಬಸವಣ್ಣನವರ ವಚನಗಳ ಪ್ರಕಟಣೆಗೆ ಒಂದು ದೀರ್ಘ ಪರಂಪರೆಯಿದೆ. ಅದು ೧೮೮೬ರಿಂದ ಆರಂಭವಾಗಿ ಇಲ್ಲಿಯವರೆಗೆ ನಡೆದುಬಂದಿದೆ. ಅರದಲ್ಲಿಯೇ ಮರಿಶಂಕರದ್ಯಾವರು (೧೮೮೬), ಫ.ಗು.ಹಳಕಟ್ಟಿ(೧೯೨೬), ಶಿ.ಶಿ. ಬಸವನಾಳ(೧೯೫೧), ಆರ್. ಸಿ. ಹಿರೇಮಠ(೧೯೬೮), ಎಲ್. ಬಸವರಾಜು(೧೯೯೦) ಮತ್ತು ಎಂ.ಎಂ. ಕಲಬುರ್ಗಿ(೧೯೯೩) ಅವರ ಪ್ರಕಟಣೆಗಳು ಪ್ರಮುಖ ಮೈಲುಗಲ್ಲುಗಳೆನಿಸಿವೆ.

ಇವುಗಳಲ್ಲಿ ಮೊದಲ ಎರಡು ಗ್ರಂಥಸಂಪಾದನಶಾಸ್ತ್ರವಿನ್ನೂ ಕನ್ನಡದಲ್ಲಿ ಪ್ರಚಾರಗೊಂಡಿರದ ಸಂದರ್ಭದಲ್ಲಿ ಪ್ರಕಟವಾದ ಗ್ರಂಥಗಳೆನಿಸಿದರೆ, ಉಳಿದ ಮೂರು ಶಾಸ್ತ್ರೀಯ ಪರಿಷ್ಕರಣದೊಂದಿಗೆ

ಹೊರಬಂದ ಕೃತಿಗಳಾಗಿವೆ. ಕೊನೆಯದು ಶಾಸ್ತ್ರೀಯ ತಳಹದಿಯ ಮೇಲೆ ರೂಪುಗೊಂಡ ಜನಪ್ರಿಯ ಆವೃತ್ತಿಯಾಗಿದೆ.

ಈ ಎಲ್ಲ ಆವೃತ್ತಿಗಳಲ್ಲಿ ಕಾಲದಿಂದ ಕಾಲಕ್ಕೆ ದೊರೆತ ಹೊಸ ಹೊಸ ಹಸ್ತಪ್ರತಿಗಳ ಹಿನ್ನೆಲೆಯಲ್ಲಿ ಶುದ್ಧಪಾಠಗಳನ್ನು ಕಂಡುಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆಯುತ್ತ ಬಂದಿದೆ. ಹಿಂದಿನವರ ಕೃತಿಗಳಲ್ಲಿ ಉಳಿದಿರುವ ಕೊರತೆಗಳನ್ನು ಮುಂದಿನವರು ತುಂಬಿಕೊಳ್ಳಲು ಸಾಕಷ್ಟು ಶ್ರಮಿಸಿದ್ದಾರೆ. ಈ ದೃಷ್ಟಿಯಿಂದ ಡಾ. ಎಂ.ಎಂ. ಕಲಬುರ್ಗಿ ಅವರ ಈ ಆವೃತ್ತಿ ಬಹುಮಟ್ಟಿಗೆ ಪೂರ್ಣತೆಯತ್ತ ಸಾಗಿ ನಡೆದ ಒಂದು ಮಹತ್ವದ ಸಂಪಾದನೆ ಎನಿಸಿದೆ.

ಪ್ರಸ್ತುತ ಸಂಪುಟವನ್ನು ಸಿದ್ಧಪಡಿಸುವಲ್ಲಿ ಪ್ರಾಚೀನವೂ, ಸಮಗ್ರವೂ ಹಾಗೂ ಹೆಚ್ಚು ಶುದ್ಧವೂ ಎನಿಸಿದ ಕನ್ನಡ ಅಧ್ಯಯನಪೀಠದ ತಾ.ಪ್ರ ೫೧ನ್ನು ಮೂಲಪ್ರತಿಯಾಗಿ ಇಟ್ಟುಕೊಳ್ಳಲಾಗಿದೆ. ತತ್ಪೂರ್ವದ ಎಲ್ಲ ಪ್ರಕಟಿತ ಷಟ್‌ಸ್ಥಲ ವಚನ ಗ್ರಂಥಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಬಸವಣ್ಣನವರ ವಚನಗಳನ್ನು ಅಳವಡಿಸಿಕೊಂಡ ೬೭ ಪ್ರಾಚೀನ ಆಕರಗಳನ್ನು ಗಮನಿಸಿ, ಅವುಗಳಲ್ಲಿ ಹೊಸದಾಗಿ ದೊರೆಯುವ ಹೆಚ್ಚಿನ ವಚನಗಳನ್ನು ಸಂಗ್ರಹಿಸಲಾಗಿದೆ. ಕೃತಿ ಪರಿಷ್ಕರಣದಲ್ಲಿ ಈ ಕೆಳಗಿನ ವಿಧಾನವನ್ನು ಅನುಸರಿಸಲಾಗಿದೆ :

೧. ಎಲ್ಲ ಮೂಲಗಳಲ್ಲಿ ದೊರೆಯುವ ಬಸವಣ್ಣನವರ ಎಲ್ಲ ವಚನಗಳನ್ನು ಮೊದಲು ಸಂಗ್ರಹಿಸುವುದು.

೨. ಅವುಗಳಲ್ಲಿ ತತ್ವ–ರೂಪ–ಆಶಯಗಳ ಹಿನ್ನೆಲೆಯಲ್ಲಿ ಪ್ರಕ್ಷಿಪ್ತವೆನಿಸಿದ ವಚನಗಳನ್ನು ಕೈಬಿಡುವುದು.

೩. ಜನಪ್ರಿಯ ಆವೃತ್ತಿಯಾಗಿರುವುದರಿಂದ–ಎಲ್ಲ ಆಕರಗಳಲ್ಲಿ ದೊರೆಯುವ ಪಾಠಾಂತರಗಳನ್ನು ಸಂಗ್ರಹಿಸದೆ–ಶುದ್ಧ ಪಾಠವನ್ನು ಮಾತ್ರ ಸ್ವೀಕರಿಸುವುದು.

೪. ಈ ಹಿಂದಿನ ಆವೃತ್ತಿಗಳಲ್ಲಿ ಉಳಿದಿದ್ದ ಪುನರುಕ್ತಿ ದೋಷ, ಪಾಠದೋಷ, ಅಂಕಿತಪಲ್ಲಟ ಸಮಸ್ಯೆಗಳನ್ನು ಪರಿಹರಿಸಿಕೊಂಡು ಶುದ್ಧರೂಪದ ನಿಜವಚನಗಳನ್ನು ಮಾತ್ರ ಉಳಿಸಿಕೊಳ್ಳುವುದು.

೫. ಪ್ರಾಚೀನರು ಷಟ್‌ಸ್ಥಲಾನುಗುಣವಾಗಿ ಜೋಡಿಸಿದ ವಚನಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು, ಅದಕ್ಕೆ ಹೊರತಾದ ವಿವಿಧ ಸಂಕಲನಗಳಲ್ಲಿ ದೊರೆಯುವ ಹೊಸ ವಚನಗಳನ್ನು 'ಹೆಚ್ಚಿನ ವಚನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಕಾರಾದಿಯಾಗಿ ಪ್ರತ್ಯೇಕ ಭಾಗದಲ್ಲಿ ಅಳವಡಿಸುವುದು.

ಈ ವಿಧಾನದ ಬಳಿವಿಡಿದು ಬಸವಣ್ಣನವರ ವಚನ ಸಂಪುಟ ೧೯೯೩ ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾಯಿತು. ಅದರಲ್ಲಿ ಒಟ್ಟು ೧೪೨೬ ವಚನಗಳಿವೆ. ಅವುಗಳಲ್ಲಿ ೯೬೦ ಷಟ್‌ಸ್ಥಲ ವಚನಗಳು ; ೪೬೬ ಹೆಚ್ಚಿನ ವಚನಗಳು. ಇದರ ಎರಡನೆಯ ಆವೃತ್ತಿ ೨೦೦೧ ರಲ್ಲಿ ಹೊರಬಂದಿತು. ಅದರಲ್ಲಿ ಒಟ್ಟು ೧೪೧೪ ವಚನಗಳಿವೆ. ಅವುಗಳಲ್ಲಿ ೯೬೦ ಷಟ್‌ಸ್ಥಲವಚನಗಳು; ೪೫೪ ಹೆಚ್ಚಿನ ವಚನಗಳು. ಪ್ರಥಮ ಆವೃತ್ತಿಯ ಹೆಚ್ಚಿನ ವಚನಗಳಲ್ಲಿ ೧೭ ವಚನಗಳನ್ನು ಪುನರುಕ್ತಿ, ಅನ್ಯಕರ್ತೃತ್ವ, ಪ್ರಕ್ಷಿಪ್ತ ಕಾರಣವಾಗಿ ಕೈಬಿಡಲಾಗಿದೆ. ೫ ವಚನಗಳನ್ನು ಹೊಸದಾಗಿ

ಸೇರಿಸಲಾಗಿದೆ (೧೪೨೬-೧೭=೧೪೦೯+೫=೧೪೧೪). ಮೂರನೆಯ ಆವೃತ್ತಿ ೨೦೧೬ ರಲ್ಲಿ ಬೆಳಕಿಗೆ ಬಂದಿದೆ. ಇದರಲ್ಲಿ ಒಟ್ಟು ೧೪೦೭ ವಚನಗಳಿವೆ. ಅವುಗಳಲ್ಲಿ ೯೬೦ ಷಟ್‌ಸ್ಥಲ ವಚನಗಳು; ೪೪೭ ಹೆಚ್ಚಿನ ವಚನಗಳು. ದ್ವಿತೀಯ ಆವೃತ್ತಿಯಲ್ಲಿನ ಹೆಚ್ಚಿನ ವಚನಗಳಲ್ಲಿ ೮ ವಚನಗಳನ್ನು ಕೈಬಿಡಲಾಗಿದೆ. ಒಂದು ವಚನವನ್ನು ಹೆಚ್ಚಿಗೆ ಸೇರಿಸಿಕೊಳ್ಳಲಾಗಿದೆ(೧೪೧೪-೮=೧೪೦೬+೧=೧೪೦೭).

ಹೀಗೆ ಬಸವಣ್ಣನವರ ವಚನ ಸಂಪುಟ ಮೂರು ಆವೃತ್ತಿಯಲ್ಲಿ ಪ್ರಕಟವಾಗಿದ್ದು, ಒಂದರಿಂದ ಮತ್ತೊಂದಕ್ಕೆ ಬರುವಲ್ಲಿ ಪುನರುಕ್ತಿ, ಪ್ರಕ್ಷಿಪ್ತ ವಚನಗಳನ್ನು ಕೈಬಿಡುತ್ತ, ಹೊಸದಾಗಿ ದೊರೆತುವನ್ನು ಸೇರಿಸುತ್ತ ಬರಲಾಗಿದೆ. ಪ್ರಸ್ತಾವನೆಯಲ್ಲಿ ಬಸವಣ್ಣನವರ ಜೀವನ ವೃತ್ತಾಂತ, ಅವರ ವಚನಗಳ ಪರಿಷ್ಕರಣ ಪರಂಪರೆ, ಸಂಪಾದಕರು ತಾವು ಅನುಸರಿಸಿದ ಪರಿಷ್ಕರಣ ವಿಧಾನ, ಎದುರಾದ ಸಮಸ್ಯೆಗಳು, ಕಂಡುಕೊಮಡ ಪರಿಹಾರಗಳು, ತಮ್ಮ ಪರಿಷ್ಕರಣದ ವಿಶೇಷತೆ ಕುರಿತು ಸ್ಪಷ್ಟಪಡಿಸಿದ್ದಾರೆ. ಅನುಬಂಧದಲ್ಲಿ ವಚನಗಳ ಅಕಾರಾದಿ, ಕಠಿಣಪದಕೋಶ ಮತ್ತು ಆಕರಗ್ರಂಥಗಳ ವಿವರಗಳನ್ನು ಕೊಟ್ಟಿದ್ದಾರೆ.

ಪ್ರಸ್ತುತ ಸಂಪುಟ ಸಿದ್ಧಪಡಿಸಲು ಮೂರನೆಯ ಆವೃತ್ತಿಯನ್ನು ಆಯ್ದುಕೊಳ್ಳಲಾಗಿದೆ. ಅದರಲ್ಲಿ ಉಳಿದಿದ್ದ ಅಕ್ಷರದೋಷ, ಪಾಠದೋಷ, ವಚನ ಕ್ರಮಸಂಖ್ಯಾ ವ್ಯತ್ಯಾಸಗಳನ್ನು ಸರಿಪಡಿಸಲಾಗಿದೆ. ತುಂಬ ಪ್ರಸಿದ್ಧವಾದ 'ಕೃಷಿ ಕೃತ್ಯ ಕಾಯಕದಿಂದಾದೊಡೇನು' ಎಂಬ ವಚನ ಹಳಕಟ್ಟಿಯವರ ವಚನಶಾಸ್ತ್ರಸಾರ(ಭಾಗ-೧, ವ. ೧೭೨೭) ಗ್ರಂಥದಲ್ಲಿ ಅಡಕವಾಗಿದ್ದು, ಬಸವಣ್ಣನವರ ವಚನಸಂಪುಟದಲ್ಲಿ ಸೇರದೆ ಹೋಗಿದೆ. ಅದನ್ನು ಇಲ್ಲಿ ಹೆಚ್ಚಿನ ವಚನಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಹಾಗೆಯೇ ಹೆಚ್ಚಿನ ವಚನಗಳಲ್ಲಿ ಸೇರಿದ-ಬಸವಣ್ಣನವರ ವಚನ ಶೈಲಿ, ಶರಣತತ್ವದ ಆಶಯ, ಭಾಷಾ ಬಳಕೆಯ ದೃಷ್ಟಿಯಿಂದ ಅಸಹಜವೆನಿಸಿದ ೨೦ ವಚನಗಳನ್ನು ತೆಗೆದು 'ಪ್ರಕ್ಷಿಪ್ತ ವಚನಗಳು' ಶೀರ್ಷಿಕೆಯ ಅಡಿಯಲ್ಲಿ ಅನುಬಂಧಕ್ಕೆ ವರ್ಗಾಯಿಲಾಗಿದೆ. 'ಪರಮಾನಂದ ಸುಧೆ' ಎಂಬ ವಚನ ಸಂಕಲನದಲ್ಲಿ ದೊರೆಯುವ ಕೂಡಲಸಂಗಮದೇವ ಅಂಕಿತದ ಒಂದು ಹೊಸ ವಚನವನ್ನು ಅದರ ರಚನಾರೀತಿಯನ್ನು ಗಮನಿಸಿ ಪ್ರಕ್ಷಿಪ್ತ ವಚನಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಹೀಗಾಗಿ ಇಲ್ಲಿನ ವಚನ ಸಂಖ್ಯೆ ೧೪೦೯ ಆಗುತ್ತದೆ. ಹೀಗಿದ್ದೂ ಹೆಚ್ಚಿನ ವಚನಗಳನ್ನು ಇನ್ನಷ್ಟು ಸೂಕ್ಷ್ಮ ಪರೀಕ್ಷೆಗೆ ಒಳಪಡಿಸಿ ಅವುಗಳ ಶುದ್ಧಾಶುದ್ಧತೆಗಳನ್ನು ನಿರ್ಣಯಿಸುವ ಅಗತ್ಯವಿದೆಯೆಂದು ತಿಳಿಸಬಯಸುತ್ತೇನೆ.

ಬಸವಸ್ತೋತ್ರದ ವಚನಗಳು :

ಈ ಸಂಪುಟದಲ್ಲಿ ಸೇರಿದ ಮತ್ತೊಂದು ಕೃತಿ 'ಬಸವಸ್ತೋತ್ರದ ವಚನಗಳು'. ಇದನ್ನು ಡಾ. ಎಂ. ಎಂ. ಕಲಬುರ್ಗಿ ಅವರು ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಿಂದ ಪ್ರಕಟಿಸಿದ್ದಾರೆ. ಆಗ ಅವರು ಶ್ರೀ ಬಸವೇಶ್ವರಪೀಠದ ಪ್ರಭಾರ ಅಧ್ಯಕ್ಷರಾಗಿದ್ದರು. ಇದರಲ್ಲಿ ಇಬ್ಬರು ಪ್ರಾಚೀನ ಸಂಪಾದಕರು ಸಂಕಲಿಸಿದ ಎರಡು ಕೃತಿಗಳು ಅಳವಟ್ಟಿವೆ. ಒಂದು ಹರತಾಳ ಚೆನ್ನಂಜೇದೇವನದು; ಮತ್ತೊಂದು ಸಂಪಾದನೆಯ ಬೋಳಬಸವೇಶ್ವರನದು.

ಚೆನ್ನಂಜೇದೇವನ ಕೃತಿಯಲ್ಲಿ ೧೭ ಜನ ವಚನಕಾರರ ೧೪೨ ವಚನಗಳಿದ್ದರೆ, ಬೋಳಬಸವೇಶ್ವರನ ಕೃತಿಯಲ್ಲಿ ೧೭ ಜನ ವಚನಕಾರರ ೧೨೪ ವಚನಗಳಿವೆ. ಎರಡರಲ್ಲಿಯ ಸಮಾನ ವಚನಕಾರರು ಮತ್ತು ಸಮಾನ ವಚನಗಳನ್ನು ಕಳೆದರೆ ಒಟ್ಟು ೨೧ ಜನ ವಚನಕಾರರ ೨೪೮ ವಚನಗಳು ಇಲ್ಲಿ ಸಂಗ್ರಹವಾದಂತಾಗಿದೆ. ಎರಡು ಕೃತಿಗಳಲ್ಲಿ ಚೆನ್ನಂಜೇದೇವನದು ಈ ಮೊದಲು ೧೯೬೮ರಲ್ಲಿ ಎಸ್. ಎಂ. ಹುಣಿಶ್ಯಾಳ ಮತ್ತು ಸಿ.ಎಚ್. ಅನ್ನದಾನಯ್ಯ ಅವರಿಂದ ಪ್ರಕಟವಾಗಿದ್ದರೆ, ಬೋಳಬಸವನದು ಇದೇ ಮೊದಲಬಾರಿಗೆ ಪ್ರಕಟಿಸಿದುದಾಗಿದೆ. ಈ ಎರಡೂ ಕೃತಿಗಳನ್ನು ಡಾ. ಕಲಬುರ್ಗಿ ಅವರು ಕನ್ನಡ ಅಧ್ಯಯನಪೀಠದ ನೂತನ ಹಸ್ತಪ್ರತಿಗಳನ್ನು ಬಳಸಿಕೊಂಡು ಮತ್ತೊಮ್ಮೆ ಶಾಸ್ತ್ರೀಯವಾಗಿ ಪರಿಷ್ಕರಿಸಿದ್ದಾರೆ. ಪ್ರಸ್ತಾವನೆಯಲ್ಲಿ ವಚನಸಾಹಿತ್ಯದ ಸ್ವರೂಪ, ಸೃಜನ-ಸಂಪಾದನಸಾಹಿತ್ಯ ಪರಂಪರೆ, ಸಂಪಾದನ ವಿಧಾನ, ಪ್ರಸ್ತುತ ಬಸವಸ್ತೋತ್ರದ ವಚನಗಳು ಕೃತಿ ಸಂಕಲನಕಾರರ ಜೀವನ-ಕಾಲ-ಕೃತಿಗಳು, ಸಂಪಾದನೆಗೆ ಬಳಸಿಕೊಂಡ ಹಸ್ತಪ್ರತಿಗಳ ಕುರಿತು ವಿವರವಾಗಿ ಬರೆದಿದ್ದಾರೆ. ಅನುಬಂಧದಲ್ಲಿ ವಚನಗಳ ಅಕಾರಾದಿಯನ್ನು ಜೋಡಿಸಿದ್ದಾರೆ. ಮೂಲದಲ್ಲಿ ಇಲ್ಲದ ವಚನಕಾರರ ಹೆಸರುಗಳನ್ನು ವಚನಗಳ ತಲೆಯ ಮೇಲೆ ಹಾಕಿದ್ದಾರೆ. ಇಲ್ಲಿ ನಾವು ಮೂಲದಲ್ಲಿ ಉಳಿದ ಅಕ್ಷರದೋಷ, ವಚನಕಾರರ ಹೆಸರಿನಲ್ಲಾದ ವ್ಯತ್ಯಾಸವನ್ನು ಸರಿಪಡಿಸಿ, ಉಳಿದಂತೆ ಯಥಾಸ್ಥಿತಿಯನ್ನು ಕಾಯ್ದುಕೊಂಡಿದ್ದೇವೆ. ಈ ಸಂಪುಟ ಸಿದ್ಧಪಡಿಸುವಲ್ಲಿ ವಿಶೇಷವಾಗಿ ನೆರವಾದ ಡಾ. ಹನುಮಂತ ಮೇಲಿನಮನಿ ಅವರಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಅಚ್ಚು ಮಾಡಿಕೊಟ್ಟ ಶ್ರೀ ಬಸವರಾಜ ಪಾಟೀಲ(ಹೆಬ್ಬಾಳ) ಅವರಿಗೆ ವಂದನೆಗಳು.

❖❖

*

ಪರಿವಿಡಿ

ಸಮಗ್ರ ವಚನಸಾಹಿತ್ಯ ಜನಪ್ರಿಯ ಆವೃತ್ತಿ : ಸಂಪುಟ - ೧

ಬಸವಣ್ಣನವರ ವಚನಸಂಪುಟ

ಸಂಪಾದಕ

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

೧೯೯೩

*

ಪ್ರಸ್ತಾವನೆ

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ನೆಲದ ಮೇಲೆ, ಪ್ರಥಮ ಸಮಾಜೋಧಾರ್ಮಿಕ ಆಂದೋಲನವೊಂದು ಹನ್ನೆರಡನೆಯ ಶತಮಾನದಲ್ಲಿ ಜರುಗಿತು. ಈ ಆಂದೋಲನದ ನಾಯಕವ್ಯಕ್ತಿ ಬಸವಣ್ಣ.

ಬಸವಣ್ಣ ಬಾಳಿದ್ದು ಕನ್ನಡ ನಾಡಿನಲ್ಲಿ. ಬರೆದದ್ದು ಕನ್ನಡ ಭಾಷೆಯಲ್ಲಿ. ಈ ಪರಿಮಿತಿ ಕಾರಣವಾಗಿ ಇವನಿಗೆ ನ್ಯಾಯವಾಗಿ ಸಿಗಬೇಕಾದ ಜಾಗತಿಕ ಪ್ರಸಿದ್ಧಿ ಇನ್ನೂ ಸಿಕ್ಕಿಲ್ಲವಾದರೂ. ಇವನಷ್ಟು ಸಾಹಿತ್ಯ, ಕನ್ನಡದಲ್ಲಿ ಯಾರನ್ನೂ ಕುರಿತು ಹುಟ್ಟಿಲ್ಲ; ಇವನಷ್ಟು ಪ್ರಭಾವವನ್ನು ಕರ್ನಾಟಕದ ಮೇಲೆ ಯಾವ ಧಾರ್ಮಿಕ ಮಹಾಪುರುಷನೂ ಬೀರಿಲ್ಲ.

ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದುಕೊಡುವವರೆಂದರೆ ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಿಕೊಂಡ ಮಹಾಪುರುಷರು; ಮತ್ತು ತಮ್ಮ ಪರಿಸರವನ್ನು ಉದಾತ್ತೀಕರಿಸುವ ಯುಗಪುರುಷರು. ಈ ಎರಡನ್ನೂ ಸಾಧಿಸುವ ಮೂಲಕ ಬಸವಣ್ಣ ಕೇವಲ ಮಹಾಪುರುಷನಾಗಿ ಉಳಿಯದೆ, ಯುಗಪುರುಷನಾಗಿಯೂ ಬೆಳೆದಿದ್ದಾನೆ. ಸಾಮಾನ್ಯವಾಗಿ ಯುಗಪುರುಷರು ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ–ಹೀಗೆ ಜೀವನದ ಯಾವುದೋ ಒಂದು ಕ್ಷೇತ್ರಕ್ಕೆ ಹೊಸ ತಿರುವು ತಂದುಕೊಡುತ್ತಾರೆ. ಬಸವಣ್ಣ ಇಂಥ ಎಲ್ಲ ಕ್ಷೇತ್ರಗಳಿಗೂ ಹೊಸ ತಿರುವು ಕೊಟ್ಟ ಕಾರಣ, ಅವನು ಒಂದು ಕ್ಷೇತ್ರದ ಯುಗಪುರುಷನೆನಿಸದೆ, ಜೀವನದ ಎಲ್ಲ ಕ್ಷೇತ್ರಗಳ 'ಯುಗಪುರುಷ'ನೆನಿಸಿದ್ದಾನೆ. ಹೀಗಾಗಿ ಅವನನ್ನು ಜಗತ್ತು ಕಂಡ ಒಬ್ಬ ಅಪರೂಪದ 'ಸಮಗ್ರ ಯುಗಪುರುಷ'ನೆಂದು ಗುರುತಿಸಲಾಗುತ್ತಿದೆ.

ಬಸವಪೂರ್ವಯುಗವೆಂಬುದು ಕರ್ನಾಟಕದ ಇತಿಹಾಸದಲ್ಲಿ ಪತನ ವೈಭವದ ಕಾಲವಾಗಿದ್ದಿತು. ಅಂದು ರಾಜಸತ್ತೆ, ಮತಸತ್ತೆ, ಪುರುಷಸತ್ತೆಗಳು ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿದ್ದವು. ಇವುಗಳಲ್ಲಿ "ರಾಜಸತ್ತೆ"ಯ ಪೋಷಣೆಗಾಗಿ ಯುದ್ಧದಲ್ಲಿ ತೊಡಗುವುದು, ದುಡಿದು ಸುಂಕ ತೆರುವುದು ಅಂದಿನ ಪ್ರಜೆಗಳ ಸ್ಥಿತಿಯಾಗಿದ್ದಿತು. "ಮತಸತ್ತೆ"ಯ ಹೆಸರಿನಲ್ಲಿ ಶಿಷ್ಟಪದ ಮತ್ತು ಜಾನಪದ ಧರ್ಮಗಳ ಮುಖಂಡರು ಭಕ್ತರನ್ನು ಶೋಷಿಸುತ್ತಿದ್ದರು. ಇದೇ ರೀತಿ "ಪುರುಷಸತ್ತೆ"

ಸ್ತ್ರೀವರ್ಗವನ್ನು ತುಳಿಯುತ್ತಲಿದ್ದಿತು. ಹೀಗಾಗಿ ಸಮಾಜದಲ್ಲಿ ರಾಜವರ್ಗ, ಪ್ರಜಾವರ್ಗ, ಪುರೋಹಿತವರ್ಗ, ಭಕ್ತವರ್ಗ, ಪುರುಷವರ್ಗ, ಸ್ತ್ರೀವರ್ಗಗಳೆಂಬ ಸೀಳು ತಲೆದೋರಿ, ಒಂದು ಇನ್ನೊಂದನ್ನು ಶೋಷಿಸುವಲ್ಲಿ ಜೀವನ ವ್ಯವಸ್ಥೆಯ ಸಮತೋಲನ ತಪ್ಪಿ ಹೋಗಿದ್ದಿತು. ಈ ಅನ್ಯಾಯದ ಗರ್ಭಸೀಳಿ ಹುಟ್ಟಿಕೊಂಡು, ಸಾಮಾಜಿಕ ಸಮತೋಲನಕ್ಕಾಗಿ ಹೋರಾಡಿದವ ಬಸವಣ್ಣ.

ಬಾಗೆವಾಡಿ, ಬಸವಣ್ಣನ ಜನ್ಮಗ್ರಾಮ. ತಂದೆ ಮಾದರಸ, ತಾಯಿ ಮಾದಲಾಂಬಿಕೆ, ಬಹುಶಃ ಈ ಕುಟುಂಬ ಮಂಡಗೆ ಗ್ರಾಮದಿಂದ ಬಾಗೆವಾಡಿಗೆ ಬಂದಿದ್ದಿತು. ಅರ್ಜುನವಾಡ ಶಾಸನದ ಪ್ರಕಾರ ತಂದೆ ಮಾದಿರಾಜ 'ತರ್ದವಾಡಿ ಮಧ್ಯಗ್ರಾಮ'ವಾದ ಈ ಬಾಗೆವಾಡಿಯ 'ಪುರವರಾಧೀಶ್ವರ', ತಾಯಿ ಮಾದಲಾಂಬಿಕೆಯು ದಂಡನಾಯಕ ಬಲದೇವನ ಸೋದರಿ. ಇಂಥ ಪ್ರತಿಷ್ಠಿತ ಹಿನ್ನೆಲೆ ಬಸವಣ್ಣನದಾಗಿದ್ದಿತು.

ಬಸವಣ್ಣ ಹುಟ್ಟುವ ಹೊತ್ತಿಗೆ ಕರ್ನಾಟಕದ ಧಾರ್ಮಿಕ ಕ್ಷೇತ್ರವನ್ನು ಅಗ್ರಹಾರ ಸಂಸ್ಕೃತಿ, ದೇವಾಲಯ ಸಂಸ್ಕೃತಿಗಳು ಅಳುತ್ತಲಿದ್ದವು. ಅಗ್ರಹಾರ ಸಂಸ್ಕೃತಿಯು ಮೂಲತಃ ಧಾರ್ಮಿಕವಾಗಿ ಕರ್ಮನಿಷ್ಠ. ಸಾಮಾಜಿಕವಾಗಿ ವರ್ಣಭೇದನಿಷ್ಠವಾದುದು. ಈಗ ದೇವಾಲಯ ಸಂಸ್ಕೃತಿ ಇದೇ ದಾರಿಗೆ ಹೊರಳಿದ್ದರೂ, ಮೂಲತಃ ಅದು. ಧಾರ್ಮಿಕವಾಗಿ ಭಕ್ತಿನಿಷ್ಠ, ಸಾಮಾಜಿಕವಾಗಿ ವರ್ಣಭೇದ ನಿರಾಕರಣನಿಷ್ಠವಾದುದು. ಹೀಗಾಗಿ ಹುಟ್ಟು ಹೋರಾಟಗಾರನಾದ ಬಸವಣ್ಣ ತನ್ನ ಎಳೆಯ ವಯಸ್ಸಿನಲ್ಲಿಯೇ ಸ್ಥಗಿತ ಮೌಲ್ಯದ ಅಗ್ರಹಾರಸಂಸ್ಕೃತಿಯನ್ನು ತೊರೆದು, ಚಲನಶೀಲ ಮೌಲ್ಯದ ದೇವಾಲಯಸಂಸ್ಕೃತಿಗೆ ನೆಲೆಯಾಗಿದ್ದ ಕೂಡಲಸಂಗಮಕ್ಕೆ ಬಂದನು. ಇದು ಅವನ ಜೀವನದಲ್ಲಿ "ಕರ್ಮದಿಂದ ಧರ್ಮಕ್ಕೆ"ದಾಟಿಬಂದ ಕಾಲಘಟ್ಟವಾಗಿದೆ.

ಕೂಡಲಸಂಗಮ ಬಸವಣ್ಣನ ಸಾಧನಾರಂಗ. ಅಲ್ಲಿ ಅಧ್ಯಯನ, ಮೂಲಚಿಂತನೆಗಳ ಮೂಲಕ ಅವನು ತನ್ನ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಂಡನು. 'ಸಂಗಮ' ಅನೇಕ ಅರ್ಥಗಳಲ್ಲಿ ಅವನ ಆಂದೋಲನಕ್ಕೆ ಸಂಕೇತವಾಯಿತು. ವೈಯಕ್ತಿಕ ರಂಗ, ಸಾಮಾಜಿ ರಂಗಗಳಲ್ಲಿ ಪ್ರವಹನಶೀಲತೆಯನ್ನು ಬಯಸುವ ಅವನಿಗೆ, ಕೃಷ್ಣೆ ಮಲಪ್ರಭೆಯರ ಪ್ರವಾಹಪ್ರದೇಶ ಪಾಠವಾಗಿ ಪರಿಣಮಿಸಿತು. ಬಸವಣ್ಣ ತನ್ನ ಅಂಗಗುಣಗಳನ್ನು ನೀಗಿ ಲಿಂಗಗುಣಗಳನ್ನು ಆತ್ಮೀಕರಿಸಿಕೊಂಡು ಹೊಸ ಮನುಷ್ಯನಾಗಿ ಹುಟ್ಟಿದ್ದು, ಬೆಳೆದದ್ದು ಇಲ್ಲಿ. ಹೀಗಾಗಿ ಅವನ ಜೀವನದಲ್ಲಿ ಇದು ವ್ಯಕ್ತಿತ್ವವನ್ನು "ಅಂಗದಿಂದ ಲಿಂಗಕ್ಕೆ" ಪರಿವರ್ತಿಸಿಕೊಂಡ ಕಾಲಘಟ್ಟವಾಗಿದೆ.

ಕೂಡಲಸಂಗಮವನ್ನು ತೊರೆದು ರಾಜಧಾನಿ ಮಂಗಳವಾಡಕ್ಕೆ ಬಂದ ಬಸವಣ್ಣ. ಮಾಂಡಲಿಕನಾದ ಕಲಚುರಿ ಬಿಜ್ಜಳನಲ್ಲಿ ಕರಣಿಕ-ಗಣಕಾಧಿಕಾರಿ ಹುದ್ದೆಗಳನ್ನು ವಹಿಸಿಕೊಂಡನು. ಆಮೇಲೆ ಬಿಜ್ಜಳ ಚಕ್ರವರ್ತಿಯಾಗುವಲ್ಲಿ ಅವನೊಂದಿಗೆ ಕಲ್ಯಾಣಕ್ಕೆ ಬಂದು, ಭಂಡಾರ ಮಂತ್ರಿಯಾದನು. ಈ ಪಟ್ಟಣ ಇವನ ಬದುಕಿನ ಬಹುಮುಖ್ಯ ಕೇಂದ್ರವಾಯಿತು. ಈ ಸಂದರ್ಭದಲ್ಲಿ ಶರಣ ಸಮುದಾಯದ ಸಂಘಟನೆ. ಅನುಭವ ಮಂಟಪದ ಸ್ಥಾಪನೆ, ಸಿದ್ಧಾಂತಗಳ ರಚನೆ ಪ್ರಸಾರ, ವಚನಸಾಹಿತ್ಯ ಸೃಷ್ಟಿ ಇತ್ಯಾದಿ ಬಹುದೊಡ್ಡ ಕಾಣಿಕೆಗಳು ಇವನಿಂದ ಸಂದವು. ಕೂಡಲಸಂಗಮದಲಲಿ ಆತ್ಮಕಲ್ಯಾಣ ಮಾಡಿಕೊಂಡಿದ್ದ ಬಸವಣ್ಣ. ಈಗ ಸಮಾಜ(ಜಂಗಮ) ಕಲ್ಯಾಣ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡನು. ಅವನು "ಲಿಂಗದಿಂದ ಜಂಗಮಕ್ಕೆ" ವಿಸ್ತರಿಸಿಕೊಂಡ ಕಾಲಘಟ್ಟವಿದು.

ಹೀಗೆ ಬಾಗೇವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ, ಕೂಡಲಸಂಗಮದಲ್ಲಿ ಅಂಗದಿಂದ ಲಿಂಗಕ್ಕೆ. ಕಲ್ಯಾಣದಲ್ಲಿ ಲಿಂಗದಿಂದ ಜಂಗಮಕ್ಕೆ ಸಾಗಿಬಂದಿದ್ದಾನೆ, ಬಸವಣ್ಣ. ಇಲ್ಲಿ ಜಂಗಮಸೇವೆಯ ಅಂದರೆ ಸಮಾಜ ಸೇವೆಯ ಅಂಗವಾಗಿ ವರ್ಗಭೇದ, ವರ್ಣಭೇದ, ಲಿಂಗಭೇದ ನಿರಾಕರಣೆಯ ತೀವ್ರಕ್ರಮಗಳನ್ನು ಅವನು ಕೈಗೆತ್ತಿಕೊಂಡನು. ಮೇಲು ವರ್ಣದವರು ಮೇಳು ವರ್ಗದವರಾಗಿರುವುದನ್ನು, ಕೆಳವರ್ಣದವರು ಕೆಳವರ್ಗದವರಾಗಿರುವುದನ್ನು ಅಂದಿನ ಸಮಾಜ ಸಹಿಸುತ್ತಿದ್ದಿತು. ಮೇಲು ವರ್ಣದವರು ಕೆಳವರ್ಗದವರಾದರೂ, ಮೇಲುವರ್ಣ ಕಾರಣವಾಗಿ ಸಮಾಜದಲ್ಲಿ ಅವರದು ಮೇಲು ವರ್ಗವಾಗಿರುತ್ತಿದ್ದಿತು. ಇದನ್ನೂ ಸಮಾಜ ಸಹಿಸುತ್ತಿದ್ದಿತು. ಮೇಲು ವರ್ಣದವರು ಕೆಳವರ್ಗವಾಗಿರುತ್ತಿದ್ದಿತು. ಇದನ್ನೂ ಸಮಾಜ ಸಹಿಸುತ್ತಿದ್ದಿತು. ಆದರೆ ಕೆಳವರ್ಣದವರು ಮೇಲು ವರ್ಗದವರಾಗುವ ಪ್ರಗತಿಪರ ನಿಲವು ಬಸವಣ್ಣನದಾಗಿದ್ದಿತು. ಈ ಪ್ರಗತಿಪರ ನಿಲವನ್ನು ಪ್ರತಿಭಟಿಸುವ ರೀತಿಯಲ್ಲಿ ಅಗ್ರಹಾರ ಸಂಸ್ಕೃತಿ. ದೇವಾಲಯ ಸಂಸ್ಕೃತಿ ಮತ್ತು ರಾಜಸತ್ತಾ ಸಂಸ್ಕೃತಿಗಳು ಒಟ್ಟಾಗಿ ನಿಂತು, ಅವನ ಈ ಆಂದೋಲನವನ್ನು ಹತ್ತಿಕ್ಕಿದವು. ಸತ್ಯವನ್ನು ಎತ್ತಿ ಹಿಡಿದ ಶರಣರು ದಮನಕ್ಕೆ ಗುರಿಯಾದರು. ಹುತಾತ್ಮರಾದರು. ಬಸವಣ್ಣ ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಬಂದು ಐಕ್ಯನಾದ.

* * *

ತಾನೊಬ್ಬನೇ ಅಲ್ಲದೆ ಹೆಂಡಿರಾದ ಗಂಗಾಂಬಿಕೆ, ನೀಲಾಂಬಿಕೆ ತಂಗಿ ನಾಗಲಾಂಬಿಕೆ. ತಂಗಿಯ ಮಗ ಚೆನ್ನಬಸವಣ್ಣ –ಹೀಗೆ ಇಡೀ ಕುಟುಂಬವನ್ನೇ ಆಂದೋಲನದ ಭಾಗವಾಗಿಸಿದ ಬಸವಣ್ಣ. ಸಮಾಜದ ವಿವಿಧ ಸ್ತರಗಳಿಂದ ಬಂದ ಜನಸಮುದಾಯವನ್ನೂ ಭಾಗವಾಗಿಸಿ, ಅದಕ್ಕೆ ಬಹುದೊಡ್ಡ ಸಾಮೂಹಿಕ ಸ್ವರೂಪ ಕೊಟ್ಟನು. ಅದನ್ನು ಪ್ರಾಚೀನ ಭಾರತದ ಒಂದು ಅರ್ಥಪೂರ್ಣ ಜನಪರ ಆಂದೋಲನವಾಗಿಸಿದನು.

ಭಾರತವು ವರ್ಗಭೇದ, ವರ್ಣಭೇದ, ಲಿಂಗಭೇದ–ಹೀಗೆ 'ಭೇದಸಂಸ್ಕೃತಿ' ಯ ರಾಷ್ಟ್ರವಾಗಿದೆ. ಭೇಸಂಸ್ಕೃತಿಯ ಸಮಾಜದಲ್ಲಿ ಆತ್ಮಕಲ್ಯಾಣದ 'ಪ್ರಯೋಗ'ಗಳು ಜರುಗಬಹುದೇ ಹೊರತು, ಸಮಾಜಕಲ್ಯಾಣದ 'ಆಂದೋಲನ'ಗಳು ಜರುಗಲಾರವು. ಶರಣರು ಮಾತ್ರ ಈ ಎರಡೂ ಬಗೆಯ ಕಲ್ಯಾಣದ ವಿಯಷವಾಗಿ ವ್ಯಕ್ತಪಡಿಸಿದ ವಿಚಾರಗಳು ಹೀಗಿವೆ:

ವ್ಯಕ್ತಿ 'ಅಂಗ'ಭಾವವನ್ನು ನೀಗಿ 'ಲಿಂಗಭಾವವನ್ನು ಅಳವಡಿಸಿಕೊಳ್ಳಬೇಕೆಂಬುದು ಶರಣಸಿದ್ಧಾಂತದ ಕೇಂದ್ರ ಆಶಯ. ಇದಕ್ಕಾಗಿ ವ್ಯಕ್ತಿ ಅನುಸರಿಸಬೇಕಾದುದು ಷಟ್‌ಸ್ಥಲ ಮಾರ್ಗವನ್ನು. ಇಲ್ಲಿ ಅಂಗನಾಗಿರುವ ವ್ಯಕ್ತಿ ತನ್ನ ಆತ್ಮಸ್ವರೂಪವಾಗಿರುವ ಇಷ್ಟಲಿಂಗವನ್ನು ಸಾಧನವಾಗಿ ಹಿಡಿದುಕೊಂಡು ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ 'ಭಾವ'ಗಳನ್ನು ಮೈಗೂಡಿಸಿಕೊಳ್ಳುತತ್ತ, ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಿತಿಗಳನ್ನು ಪಡೆದು ಲಿಂಗವಾಗುವುದು. ಈ ಷಟ್‌ಸ್ಥಲ ಮಾರ್ಗದ ಗುರಿ. ಇದನ್ನೇ 'ಲಿಂಗವಿಡಿದು ಲಿಂಗಸಿದ್ಧಿ' ಎನ್ನುತ್ತಾರೆ ಶರಣರು. ಹೀಗೆ ಲಿಂಗವ್ಯಕ್ತಿತ್ವವನ್ನು ಪಡೆದ ಶರಣರು ತನ್ನ ಜೀವನದ ಸಕಲ ವ್ಯಾಪಾರವನ್ನು ಲಿಂಗಭಾವದಿಂದ ಅನುಭವಿಸುತ್ತಾನೆ.

ಭಾರತೀಯ ಸಿದ್ಧಾಂತಗಳು ಪ್ರಾಣವನ್ನು ಲಿಂಗಮಾಡಿಕೊಳ್ಳುವ 'ಪ್ರಾಣಲಿಂಗಿ' ಪಾತಳಿಗೆ ನಿಂತುಬಿಟ್ಟರೆ, ವೀರಶೈವ ಸಿದ್ಧಾಂತ ಇನ್ನೂ ಮುಂದೆ ಹೋಗಿ ಸಮಾಜವನ್ನೂ ಲಿಂಗವಾಗಿಸುವ 'ಶರಣ' ಪಾತಳಿಯನ್ನು ಹೇಳುತ್ತದೆ. ಹಸನಾದ 'ವ್ಯಕ್ತಿಜೀವನ'ವಷ್ಟೇ ಮುಖ್ಯವಾದುದು. ಅವನ ಬೆಳವಣಿಗೆಗೆ ಬೇಕಾಗುವ ಹಸನಾದ 'ಸಮಾಜವ್ಯವಸ್ಥೆ'ಯೆಂಬುದು ಶರಣರ ವಿಚಾರವಾಗಿದೆ. ಇಲ್ಲದಿದ್ದರೆ ಸ್ನಾನಮಾಡಿ ಕೆಸರಿನಲ್ಲಿ ವ್ಯವಹರಿಸಿದಂತಾಗುತ್ತದೆ. ಮಾಡಿದ ಸ್ನಾನ ವ್ಯರ್ಥವಾಗುತ್ತದೆ. ಹೀಗಾಗಿ ವ್ಯಕ್ತಿತ್ವದ ಶುದ್ಧೀಕರಣದಷ್ಟೇ ಸಮಾಜದ ಶುದ್ಧೀಕರಣವೂ ಮುಖ್ಯವೆಂದು ಶರಣರು ಹೇಳುತ್ತಾರೆ.

ವ್ಯಕ್ತಿತ್ವದ ಒಳಪದರಿನಲ್ಲಿ ವಿಕಾರಗಳಿರುವಂತೆ ಸಮಾಜದ ಒಳರಚನೆಯಲ್ಲಿಯೂ ಸಭ್ಯತೆಯ ಸೋಗಿನಲ್ಲಿ ವಿಕೃತ ಆಚರಣೆಗಳು ನಿರ್ಮಾಣವಾಗಿರುತ್ತವೆ. ಇದರಿಂದಾಗಿ ಸಮಾಜದ ಜೀವನವು ಅಶುದ್ಧವಾಗುತ್ತದೆ. ಭಾರತದಲ್ಲಿ ಇದರ ಶುದ್ಧೀಕರಣದ ಕಡೆಗೆ ಬಹುಶಃ ಬೌದ್ಧಧರ್ಮವನ್ನು ಬಿಟ್ಟರೆ, ವೀರಶೈವೇತರ ಯಾವುದೇ ಧರ್ಮಗಳು ಮೊದಲಿನಿಂದಲೂ ಗಮನಕೊಡಲಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ತತ್ವಚಿಂತನೆ ಪ್ರಾರಂಭವಾದುದು ಸಮಾದಲ್ಲಲ್ಲ; ಅಡವಿಯಲ್ಲಿ. ಆಶ್ರಮದಲ್ಲಿ ಅಲ್ಲಿಯ ಮುನಿಗಳಿಗೆ 'ವ್ಯಕ್ತಿಗತ' ಸಮಸ್ಯೆಗಳನ್ನು ಅಂದರೆ ತಮ್ಮೊಳಗೆ ಮಾನಸಿಕ ವಿಕಾರಗಳನ್ನು ದೂರಗೊಳಿಸಿಕೊಳ್ಳುವುದೇ ಮುಖ್ಯವಾಗಿದ್ದಿತು. ಕಾಲಕ್ರಮದಲ್ಲಿ ಅರಣ್ಯಜೀವನಕ್ಕೆ ಬದಲು ಗ್ರಾಮಜೀವನ ಅಸ್ತಿತ್ವಕ್ಕೆ ಬಂದು, ವ್ಯಕ್ತಿಗತ ಸಮಸ್ಯೆಗಳೊಂದಿಗೆ ಸಮಾಜಗತ ಸಮಸ್ಯೆಗಳು ಉದ್ಭವಿಸಿದರೂ, ಭಾರತದಲ್ಲಿ ಹಳೆಯ 'ವ್ಯಕ್ತಿಪರ ಚಿಂತನ' ಕ್ರಮವೇ ಮುನ್ನಡೆದು. 'ಸಮಾಜಪದ ಚಿಂತನ'ಕ್ರಮ ಉಪೇಕ್ಷಿತವಾಯಿತು. ಹೆಚ್ಚಿನದಾಗಿ ಕಾಲಕಾಲಕ್ಕೆ ಸ್ಮೃತಿಕಾರರು ಹುಟ್ಟಿಬಂದು ಸಮಾಜದ ಬಗ್ಗೆ ಭೇದನೀತಿಗಳನ್ನು ರೂಪಿಸಿ, ಅದನ್ನು ಹೋಳು ಹೋಳು ಮಾಡಿದರು. ಇದರಿಂದ ಭಾರತೀಯರು 'ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು' ಎಂಬ ಪರಿಸ್ಥಿತಿ ನಿರ್ಮಾಣವಾಯಿತು. ಈ ಸಂದರ್ಭದಲ್ಲಿ ಶರಣರು ಸಬಲ ಸಮಾಜಕ್ಕಾಗಿ ಬುದ್ಧನಿಗಿಂತ ಹೆಚ್ಚು ವೈಜ್ಞಾನಿಕವಾಗಿ ವಿಚಾರಿಸಿ ವ್ಯಕ್ತಿ ಕಲ್ಯಾಣದೊಂದಿಗೆ ಸಮಾಜಕಲ್ಯಾಣಕ್ಕಾಗಿಯೂ ಶ್ರಮಿಸಿದರು. ಈ ಉಭಯ ಕಲ್ಯಾಣಗಳನ್ನು 'ಲಿಂಗವ್ಯಸನ, ಜಂಗಮಪ್ರೇಮ'ವೆಂದು ಬಸವಣ್ಣನವರು ಕರೆದಿದ್ದಾರೆ. "ಸೋಹಂ ಎಂದೆನಿಸದೆ, ದಾಸೋಹಂ ಎಂದೆನಿಸಯ್ಯಾ" ಎಂದೂ ಹೇಳಿ, ಜಂಗಮ ದಾಸೋಹತತ್ವಕ್ಕೆ ಅವರು ಮಾದರಿಯೆನಿಸಿದ್ದಾರೆ.

ಹೀಗೆ ಪ್ರಾಚೀನ ಭಾರತೀಯ ತತ್ವಸಿದ್ಧಾಂತಗಳು ವ್ಯಕ್ತಿಶುದ್ಧಿಯ ಬಗೆಗೆ ಒತ್ತು ಕೊಟ್ಟು ಸಮಾಜಶುದ್ಧಿಯನ್ನು ಉಪೇಕ್ಷಿಸಿದರೆ, ಆಧುನಿಕ ಸಿದ್ಧಾಂತಗಳು ಸಮಾಜ ಶುದ್ಧಿಯ ಕಡೆಗೆ ಒತ್ತುಕೊಟ್ಟು ವ್ಯಕ್ತಿಶುದ್ಧಿಯನ್ನು ಉಪೇಕ್ಷಿಸುತ್ತವೆ. ಬಸವಸಿದ್ಧಾಂತ ಮಾತ್ರ ವ್ಯಕ್ತಿ ಶುದ್ಧಿಯಲ್ಲಿ ಬಿಚ್ಚಿಕೊಂಡು ಸಮಾಜಶುದ್ಧಿಯಲ್ಲಿ ವಿಸ್ತಾರಗೊಳ್ಳುತ್ತದೆ.

ಸಮಾಜ ಶುದ್ಧವಾಗುವುದೆಂದರೆ ಸಮಾಜದಲ್ಲಿ ಸಮಾನತೆಯನ್ನು ತರುವುದು. ಈ ಸಾಮಾಜಿಕ ಸಮಾನತೆಗೆ ಮೂಲವಾದುದು 'ಆರ್ಥಿಕ ಸಮಾನತೆ'ಯೆಂಬುದನ್ನು ಅರಿತಿದ್ದ ಬಸವಣ್ಣ. ಅರ್ಥಮಂತ್ರ (ಈುಟಿಚಿಟಿಛಿಜ ಒಟಟಿಜಿಜಡಿ) ಆಗಿದ್ದುದು ಒಂದು ಯೋಗಾಯೋಗ. ಈವರೆಗೆ ರಾಜ್ಯದ ಭಂಡಾರವೆಂದರೆ ರಾಜನ ಭಂಡಾರವೆಂದೇ ಭಾವಿಸಲಾಗಿದ್ದಿತು. ಜಂಗಮರಿಗೆ (ಪ್ರಜೆಗಳಿಗೆ) ಭಂಡಾರ

ವಿನಿಯೋಗಿಸುತ್ತಿದ್ದುದನ್ನು ಆಕ್ಷೇಪಿಸಿದ ಬಿಜ್ಜಳನಿಗೆ ಉತ್ತರ ಕೊಡುತ್ತ, "ತಮ್ಮೊಡನೆಯಂ ತಾವೆ ಕೊಂಡರ್" ಎಂದು ಹರಿಹರನ ಬಸವಣ್ಣ ನುಡಿಯುವುದನ್ನು ನೋಡಿದರೆ, ಭಂಡಾರದ ಒಡೆಯ ರಾಜನಲ್ಲ, ಪ್ರಜೆಗಳು – ಎಂದು ಅವನು ನಂಬಿದ್ದನೆಂದು ಸ್ಪಷ್ಟವಾಗುತ್ತದೆ. ಗುರುವಿಗೆ ತನುದಾಸೋಹ, ಲಿಂಗಕ್ಕೆ ಮನದಾಸೋಹಗಳಂತೆ 'ಜಂಗಮಕ್ಕೆ ಧನದಾಸೋಹ; ನಡೆಸಬೇಕೆಂಬುದು ಶರಣ ಸಿದ್ಧಾಂತ. ಇದರಿಂದ ಬಸವಣ್ಣನ ಸಾಮಾಜಿಕ ಸಿದ್ಧಾಂತವು ಮಾರ್ಕ್ಸ್‌ನಂತೆ ಧನದ ಅಂದರೆ ಅರ್ಥದ ಸಮಾನತೆಯ ಮೇಲೆ ನಿತಿದ್ದಿತೆನಿಸುತ್ತದೆ. ಬಿಜ್ಜಳ ಮತ್ತು ಬಸವಣ್ಣನವರಲ್ಲಿ ಉದ್ಭವಿಸಿದ ಘರ್ಷಣೆಯ ಮೂಲ ಬೀಜ. ಇವರಿಬ್ಬರ ಈ ಆರ್ಥಿಕ ಸಮಾನತೆ ಪರ–ವಿರೋಧಿ ನೀತಿಯೆನಿಸುತ್ತದೆ. ಬಿಜ್ಜಳನ ರಾಜಸತ್ತೆಯ ಸಂವಿಧಾನ, ಬಸವಣ್ಣನ ಪ್ರಜಾಸತ್ತೆಯ ಸಂವಿಧಾನಗಳು ವಿರುದ್ಧಮುಖಿಯಾಗಿ ಬೆಳೆಯಲೂ ಈ ಅರ್ಥಮೂಲಕಾರಣವಾಯಿತು.

ಬಸವಣ್ಣನ ಈ ಅರ್ಥತತ್ವಕ್ಕೆ ಎರಡು ಮಗ್ಗಲುಗಳುಂಟು. ಒಂದು ಕಾಯಕ (ಶ್ರಮ), ಇನ್ನೊಂದು ದಾಸೋಹ (ವಿತರಣೆ), ಕಾಯಕಮಾಧ್ಯಮದಿಂದ ಗಳಿಸಬೇಕು. ದಾಸೋಹಮಾಧ್ಯಮದಿಂದ ಬಳಸಬೇಕು–ಎಂಬ ಸೂತ್ರದ ಆದರ್ಶದಲ್ಲಿ 'ಕಲ್ಯಾಣರಾಜ್ಯ' ಕಟ್ಟುವುದು ಮಂತ್ರಿ ಬಸವಣ್ಣನ ಧ್ಯೇಯವಾಗಿದ್ದಿತು. ಭಾರತೀಯ ಪರಂಪರೆಯಲ್ಲಿ ಧರ್ಮವೀರನೆನಿಸುವ ಬಸವಣ್ಣ. ಅದನ್ನೂ ಮೀರಿದ ಮಹಾಪುರುಷನೆಂದು ಈ ಎಲ್ಲ ಚಿಂತನೆಗಳು ವ್ಯಕ್ತಪಡಿಸುತ್ತವೆ. ಅವನು ಈ ಚಿಂತನೆಗಳಿಗೆ ಸಮರ್ಥ ವಾಹಕವಾಗಿ ಬಳಸಿದ್ದು ವಚನಗಳನ್ನು.

ಶರಣರು ಭಾವನೆಗಳನ್ನು ಕಲಾತ್ಮಕಗೊಳಿಸಲು ಹೊರಟ ಕವಿಗಳಲ್ಲ: ಬದುಕನ್ನು ಕಲಾತ್ಮಕಗೊಳಿಸಲು ಹೋರಾಡಿದ ಸಂತರು. ಈ ಉತ್ಕಟ ಹೋರಾಟದ ಉಪನಿಷ್ಪತ್ತಿಯಾಗಿ ವಚನಸಾಹಿತ್ಯ ನಿರ್ಮಾಣವಾಯಿತು. ಹೀಗೆ ನಿರ್ಮಾಣ ಮಾಡುವಾಗ 'ನಿನಗೆ ಕೇಡಿಲ್ಲವಾಗಿ ಅನು ಒಲಿದಂತೆ ಹಾಡುವೆ' ಎಂಬ ಕಾವ್ಯಧೋರಣೆ ಬಸವಣ್ಣನವರ ಕಣ್ಣ ಮುಂದಿದ್ದಿತು. "ನಿನಗೆ ಕೇಡಿಲ್ಲವಾಗಿ ಹಾಡುವೆ' ಎಂಬ ಕಾವ್ಯಧೋರಣೆ ಬಸವಣ್ಣನವರ ಕಣ್ಣ ಮುಂದಿದ್ದಿತು. 'ನಿನಗೆ ಕೇಡಿಲ್ಲವಾಗಿ ಹಾಡುವೆ' ಎಂಬಲ್ಲಿ ಸಾಮಾಜಿಕ Responsibility, 'ಆನು ಒಲಿದಂತೆ ಹಾಡುವೆ' ಎಂಬಲ್ಲಿ ವೈಯಕ್ತಿಕ Freedom. ಇವು ಕವಿಗಿರಬೇಕೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಒಬ್ಬ ಬರಹಗಾರನಾಗಿ ಬಸವಣ್ಣ ಏಕಕಾಲಕ್ಕೆ ಈ ಉಭಯ ಹೊಣೆಗಳನ್ನು ಸರಿಯಾಗಿ ನಿರ್ವಹಿಸಿದ್ದಾನೆ.

ಒಂದು ಸಾಹಿತ್ಯಕೃತಿಯ ಅಧ್ಯಯನವೆಂಬುದು ಅಲ್ಲಿ ಹುದುಗಿರುವ ವ್ಯಕ್ತಿಶೋಧ. ಸಮಾಜಶೋಧ, ಮೌಲ್ಯಾದರ್ಶಶೋಧ ಮತ್ತು ಸೌಂದರ್ಯಶೋಧವಾಗಿದೆ. ಈ ನಾಲ್ಕೂ ನೆಲೆಗಳ ಅಧ್ಯಯನಕ್ಕೆ ವಸ್ತುವಾಗುವ ಶಕ್ತಿ, ಬಸವಣ್ಣನವರ ವಚನಗಳಲ್ಲಿದೆ.

ಈಗಾಗಲೇ ಎಲ್ಲರೂ ಗುರುತಿಸಿದಂತೆ ಅವನ ವಚನಗಳಲ್ಲಿ 'ವ್ಯಕ್ತಿಶೋಧ' ಅಂದರೆ ಆತ್ಮವಿಮರ್ಶೆ ಪ್ರಧಾನವಾಗಿದೆ. ನಾಟಕದ ಪಾತ್ರವೊಂದು ತನ್ನ ನೋವು, ವಿಷಾದ, ಪ್ರೀತಿ, ನಿಷ್ಠೆ, ಕರುಣೆ, ಸಿಟ್ಟುಗಳನ್ನು First person narrative ಶೈಲಿಯಲ್ಲಿ ತೋಡಿಕೊಳ್ಳುವಂತೆ, ಬಸವಣ್ಣ ತನ್ನ ವ್ಯಕ್ತಿತ್ವದ ಒಳಗನ್ನು ತಲಸ್ಪರ್ಶಿಯಾಗಿ ತೋಡಿಕೊಂಡಿದ್ದಾನೆ. ತಿಳಿನೀರಿನಲ್ಲಿ ಎಳೆಮೀನಿನಂತೆ ಹರಿದಾಡುವ ಅವನ ಮನಸ್ಸಿನ ಅನೇಕ ಬಗೆಗಳು ಇಲ್ಲಿ ಕಾಣಿಸುತ್ತವೆ.

'ಸಮಾಜವಿಮರ್ಶೆ' ಬಸವಣ್ಣನವರ ವಚನಗಳ ಇನ್ನೊಂದು ಮುಖವಾಗಿದೆ. ಅನ್ಯಾಯವನ್ನು ಪ್ರತಿಭಟಿಸುವ, ನ್ಯಾಯವನ್ನು ಪ್ರತಿಪಾದಿಸುವ ಅವನದು ರಚನಾತ್ಮಕ ವಿಮರ್ಶೆಯಾಗಿದ್ದು, ಅಲ್ಲಿ ಒಬ್ಬ ಸಮಾಜವಿಜ್ಞಾನಿಯ ವೈಜ್ಞಾನಿಕ ದೃಷ್ಟಿ ಎದ್ದುಕಾಣುತ್ತದೆ. ಕೆಲವೊಮ್ಮೆ ಅನ್ಯಾಯವನ್ನು ಸಾಮಾನ್ಯೀಕರಿಸಿ ಮಾತನಾಡದೆ 'ಅನೀ ಬಿಜ್ಜಳಂಗೆ ಅಂಜುವೆನೆ ಅಯ್ಯಾ' ಎಂದು ವ್ಯಕ್ತಿಯನ್ನು ಬೆರಳುಮಾಡಿ ಆಡುವುದು. 'ಬಿಜ್ಜಳನ ಭಂಡಾರವೆನಗೇಕಯ್ಯಾ' ಎಂದು ತಮ್ಮ ಮೇಲಿನ ವ್ಯಕ್ತಿಗತ ಆರೋಪವನ್ನು ನಿರಾಕರಿಸುವುದು. 'ಚಳುವಳಿಭಾಷೆ'ಯಂತೆ ಕೇಳಿಸುತ್ತವೆ.

ಇದರ ಜೊತೆಗೆ ದಯವೇ ಧರ್ಮದ ಮೂಲ, ಸತ್ಯವ ನುಡಿವುದೇ ಸ್ವರ್ಗ-ಮೊದಲಾದ ಮೌಲ್ಯಾದರ್ಶಗಳಂತೂ ಹೆಜ್ಜೆ ಹೆಜ್ಜೆಗೂ ಕಾಣಿಸುತ್ತವೆ.

ಹೀಗೆ ಅವನ ಆತ್ಮವಿಮರ್ಶೆಯ ವಚನಗಳು ಆಧುನಿಕ ನವ್ಯಕಾವ್ಯವನ್ನು, ಸಮಾಜ ವಿಮರ್ಶೆಯ ವಚನಗಳು ಬಂಡಾಯಕಾವ್ಯವನ್ನು ನೆನಪಿಸುತ್ತವೆ. ಮೌಲ್ಯಾದರ್ಶದ ವಚನಗಳು ಭಾವಗೀತೆಗಳಂತೆ ಕಾಣುತ್ತವೆ. ಇಂಥ ಅಭಿವ್ಯಕ್ತಿಗಳಿಂದಾಗಿ ಬಸವಣ್ಣ ಏಕಕಾಲಕ್ಕೆ ವ್ಯಕ್ತಿಯಾಗಿ, ಸಮಾಜದ ಸದಸ್ಯನಾಗಿ ಲೋಕದ ಮಾನವನಾಗಿ ನಮ್ಮ ಕಣ್ಣಮುಂದೆ ಬರುತ್ತಾನೆ.

ಈ ಎಲ್ಲ ಚಿಂತನೆಗಳ ಹಿಂದೆ 'ಸ್ಥಾವರಕ್ಕಳಿವುಂಟು. ಜಂಗಮಕ್ಕಳಿವಿಲ್ಲ' ಎಂಬ ಸಿದ್ಧಾಂತ ಸದಾ ಸ್ಪಂದಿಸುತ್ತಿರುತ್ತದೆ. ಈ ತತ್ವದ ಮೇರೆಗೆ ಬಸವಣ್ಣನವರ ವಚನ, 'ಆಶಯ'ದಲ್ಲಿಯಂತೆ 'ಆಕೃತಿ'ಯಲ್ಲಿಯೂ ಜಂಗಮತ್ವವನ್ನು ಪಡೆಯಿತು. ಹೀಗಾಗಿ ಅವರ ವಚನಗಳದು ತುಂಬಾ ಸರಳ ಶಿಲ್ಪ. ಸರಳವೆಂದರೂ ಅಲ್ಲಿ ಸಂಕೀರ್ಣತೆಯಿದೆ. ವಾಚ್ಯವೆಂದರೂ ಅಲ್ಲಿ ಧ್ವನಿಯಿದೆ. ಏನು ಹೇಳಬೇಕೆಂಬ 'ಆಶಯ' ಉತ್ಕಟವಾದಾಗ ಹೇಗೆ ಹೇಳಬೇಕೆಂಬ 'ಆಕೃತಿ' ತಾನಾಗಿಯೇ ಅಚ್ಚುಕಟ್ಟುತನ ಪಡೆಯುತ್ತದೆ. ಈ ಆಕೃತಿ ಸೌಂದರ್ಯಕ್ಕೆ ಮಾದರಿಯಾಗಿದೆ. ಬಸವಣ್ಣನವರ ಬರವಣಿಗೆ.

ಸಾಹಿತ್ಯದ ಮಾಧ್ಯಮ ಭಾಷೆ. ಸಾಮಾನ್ಯವಾಗಿ ನಮ್ಮ ಕವಿಗಳು ಕನ್ನಡ ಭಾಷೆಯನ್ನು ಕುರಿತು ದೇಸಿ, ಮಾರ್ಗ ಇತ್ಯಾದಿಯಾಗಿ ಆಲೋಚಿಸಿದರು. ಆದರೆ ಬಸವಾದಿಪ್ರಮಥರು ಕೇವಲ ಕನ್ನಡ ಭಾಷೆಯನ್ನಲ್ಲ. ಭಾಷೆಯನ್ನೇ ಕುರಿತು ಆಲೋಚಿಸಿದರು. 'ಲಿಂಗವಿಲ್ಲದ ಶಬ್ದ ಸೂತಕ ; ಕೇಳಲಾಗದು' ಎಂದು ಭವಿಯಾಗಿರುವ ಭಾಷೆಯೂ ಭಕ್ತನಾಗಬೇಕೆನ್ನುತ್ತಾರೆ; ಅಂದರೆ ಮಾತಿಗೆ ಅಂಟಿರುವ ರಾಜಸ್ತುತಿ ಮೊದಲಾದ ಮಾಲಿನ್ಯ ದೂರವಾಗಬೇಕೆನ್ನುತ್ತಾರೆ. ಇದರಿಂದಾಗಿ ಮೂಲತಃ ಭಾಷೆಯ ದುರ್ಬಳಕೆ ತಪ್ಪಿತು. ಕನ್ನಡ ಭಾಷೆಯ ಪರಿಣಾಮ ರಮ್ಯತೆ-ಉಪಯುಕ್ತತೆಗಳೂ ವರ್ಧಿಸಿದವು. ಕನ್ನಡ ಭಾಷೆಗೆ ಒದಗಿಬಂದ ಈ ಸಹಜ ಸಿದ್ಧಿಯಿಂದಾಗಿ 'ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು' ಎಂಬುದಕ್ಕೆ ವಚನಗಳು ನಿದರ್ಶನವಾಗಿ ನಿಂತವು.

ಪರಿಷ್ಕರಣ

ಪ್ರಾಚೀನ ಕಾಲದಲ್ಲಿ ವಚನಸಾಹಿತ್ಯ ಸೃಜನ ಮತ್ತು ಸಂಪಾದನವೆಂಬ ಎರಡು ರೀತಿಗಳಲ್ಲಿ ಪ್ರಕಟವಾಗಿದೆ. ಇಂದು ನಡೆಯುತ್ತಲಿರುವುದು ಪರಿಷ್ಕರಣವೆಂಬ ಮೂರನೆಯ ರೀತಿ. ಹನ್ನೆರಡೆಯ ಶತಮಾನದಲ್ಲಿ ಪ್ರಕಟವಾದುದು ಸೃಜನ. ಈ ಸೃಜನವನ್ನು ಬಳಸಿ ಹದಿನೈದನೆಯ ಶತಮಾನದಲ್ಲಿ ಸಂಯೋಜಿಸಲ್ಪಟ್ಟುದು ಸಂಪಾದನ. ಈ ಸೈಜನಸಾಹಿತ್ಯದ ಪಾಠಾಂತರ, ಸಂಪಾದಸಾಹಿತ್ಯದ

ಪಾಠಾಂತರ ಮತ್ತು ಸೃಜನವನ್ನು ಸಂಪಾದನೆಗೊಳಿಸುವಲ್ಲಿ ಉದ್ಭವಿಸಿದ ಪಾಠಾಂತರವೆಂಬ ಮೂರು ಬಗೆಯ ಪಾಠಾಂತರಗಳಿಗೆ ತುತ್ತಾಗುತ್ತ ಬಂದ ವಚನ ಹಸ್ತಪ್ರತಿಗಳು ನಮಗೆ ಸಿಗುತ್ತವೆ. ವಚನ ಪರಿಷ್ಕರಣವೆಂಬುದು ವೈಜ್ಞಾನಿಕ ವಿಧಾನಗಳ ಮೂಲಕ ಇಂಥ 'ಪ್ರತಿ'ಯನ್ನು 'ಕೃತಿ'ಯನ್ನಾಗಿಸುವ ಕ್ರಿಯೆಯಾಗಿದೆ.

'ಸಮಗ್ರ ವಚನಸಾಹಿತ್ಯದ ಜನಪ್ರಿಯ ಅವೃತ್ತಿ ಪ್ರಕಟಣೆಯೋಜನೆ'ಯ ಸಂಪಾದಕ ಸಮಿತಿಯ ಮಾರ್ಗದರ್ಶನದಲ್ಲಿ ಗ್ರಂಥಸಂಪಾದನಶಾಸ್ತ್ರದ ಆದರ್ಶದಲ್ಲಿ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಇದು ಜನಪ್ರಿಯ ಆವೃತ್ತಿಯಾದರೂ ವಿದ್ವಜ್ಜನಪ್ರಿಯ ಆವೃತ್ತಿಯೂ ಆಗಬೇಕೆಂಬ ಆದರ್ಶವನ್ನು ಕಣ್ಣಮುಂದೆ ಇಟ್ಟುಕೊಂಡು ಅರವತ್ತೆಂಟು ಆಕರಗಳಿಂದ ವಚನಗಳನ್ನು ಸಂಗ್ರಹಿಸಿ, ಈ ಕೆಲಸ ಮಾಡಿದ್ದೇವೆ. (ಅನುಬಂಧ ನೋಡಿ).

ಇಲ್ಲಿ ಷಟ್‌ಸ್ಥಲದ ವಚನ ಮತ್ತು ಹೆಚ್ಚಿನ ವಚನಗಳನ್ನು ಕ್ರಮವಾಗಿ ಕಾಂಡ; ಒಂದು. ಕಾಂಡ: ಎರಡು ಹೆಸರುಗಳಿಂದ ಪ್ರತ್ಯೇಕವಾಗಿಯೇ ಸಂಪಾದಿಸಿಕೊಡಲಾಗಿದೆ. ಒಂದನೆಯ ಕಾಂಡದಲ್ಲಿ ೯೬೦. ಎರಡನೆಯ ಕಾಂಡದಲ್ಲಿ ೪೫೪ ವಚನಗಳು ಹೀಗೆ ಒಟ್ಟು ೧೪೧೪ ವಚನಗಳು ಇಲ್ಲಿವೆ. ಈ ಎರಡೂ ಭಾಗಗಳ ಸ್ವರೂಪ, ಪರಿಷ್ಕರಣ ವಿವರ ಹೀಗಿದೆ.

ಕಾಂಡ : ಒಂದು–ಷಟ್‌ಸ್ಥಲ ವಚನಗಳು

ಬಸವಣ್ಣನವರ ವಚನಗಳು ಷಟ್‌ಸ್ಥಲ ಕಟ್ಟನ್ನು ಯಾರು ಸಂಯೋಜಿಸಿದರೆಂಬುದು ಇಂದಿಗೂ ಒಂದು ಸಮಸ್ಯೆ. ಹೀಗಿದ್ದೂ ಈ ಕಾರ್ಯವನ್ನು ಪೂರೈಸಿದವನು ಕನಕಪುರಾಧೀಶ್ವರನೆಂದು ಚಿತ್ರದುರ್ಗದ ಶ್ರೀಮುರುಘರಾಜೇಂದ್ರ ಮಠದ "ಬಸವಣ್ಣನವರ ಷಟ್‌ಸ್ಥಲ ವಚನ" ಕಟ್ಟನ್ನು (ನಂಬರ್ ೬೯೩) ಆಧರಿಸಿ ಹೇಳಬಹುದಾಗಿದೆ.[೧] ಈ ವರೆಗೆ ಷಟ್‌ಸ್ಥಲ ವಚನ ಕಟ್ಟು ಹೀಗೆ ಪ್ರಕಟವಾಗಿದೆ:

೧. ಬಸವಣ್ಣನವರ ವಚನಗಳು–ಮರಿಶಂಕರದ್ಯಾವರು(೧೮೮೯)[೨]

೨. ಶ್ರೀ ಬಸವೇಶ್ವರ ವಚನಗಳು–ಫ ಗು.ಹಳಕಟ್ಟಿ(೧೯೨೬)

೩. ಬಸವಣ್ಣನವರ ಷಟ್‌ಸ್ಥಳದ ವಚನಗಳು–ಶಿ.ಶಿ.ಬಸವನಾಳ(೧೯೫೧)

೪. ಭಕ್ತಿಭಂಡಾರಿ ಬಸವಣ್ಣನವರ ವಚನಗಳು–ಆರ್.ಸಿ.ಹಿರೇಮಠ(೧೯೬೮)

೫. ಬಸವಣ್ಣನವರ ಟೀಕಿನ ವಚನಗಳು–ಎಂ.ಎಂ.ಕಲಬುರ್ಗಿ(೧೯೮೧)

೬. ಬಸವಣ್ಣನವರ ಷಟ್‌ಸ್ಥಲದ ವಚನಗಳು–ಎಲ್.ಬಸವರಾಜು(೧೯೯೦)

೭. ಬಸವಣ್ಣನವರ ವಚನ ಸಂಪುಟ–ಎಂ.ಎಂ.ಕಲಬುರ್ಗಿ(೧೯೯೩)

---

೧. ಈ ವಿಷಯವನ್ನು ನನ್ನ ಗಮನಕ್ಕೆ ತಂದವರು ಶ್ರೀ ಎಸ್. ಶಿವಣ್ಣ ಅವರು.

೨. ಇದರ ಪ್ರಥಮ ಆವೃತ್ತಿಯ ಪ್ರಕಟಣೆ ೧೮೮೬ ಎಂದು ಡಾ. ಬಿ.ನಂಜುಂಡಸ್ವಾಮಿ ಹೇಳುತ್ತಾರೆ.(ಬಸವಪಥ೧೫–೫)

ಇಲ್ಲಿಯ ಮೊದಲ ಕಾಂಡದಲ್ಲಿರುವ ಷಟ್‌ಸ್ಥಲ ವಚನಗಳಿಗಾಗಿ ಎಲ್ಲ ದೃಷ್ಟಿಯಿಂದಲೂ ಉತ್ತಮವಾಗಿರುವ ಶಕಟರೇಫೆ ಬಳಸಿರುವ, ತನ್ನಾತ್ಮ ತನಗೆ ಹಗೆಯಾದ ಮತ್ತೆ ಬಿನ್ನಾಣವುಂಟೆ? ಕಾಡಿಸಿತು. ನಾಚಿಕ್ಕೆ, ಅರಸಾಡದಿರಿಂ–ಮೊದಲಾದ ಅಪೂರ್ವ ಪಾಠಗಳನ್ನೊಳಗೊಂಡ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ತಾಳೆಗರಿ ಹಸ್ತಪ್ರತಿ (೫೧)ಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಈ ಷಟ್‌ಸ್ಥಲ ವಚನಗಳು ಮರಿಶಂಕರದ್ಯಾವರ ಆವೃತ್ತಿಯಲ್ಲಿ ೯೬೩. ಫ. ಗು. ಹಳಕಟ್ಟಿ ಆವೃತ್ತಿಯಲ್ಲಿ ೯೨೬. ಬಸವನಾಳ ಆವೃತ್ತಿಯಲ್ಲಿ ೯೫೮+೩. ಆರ್. ಸಿ. ಹಿರೇಮಠ ಆವೃತ್ತಿಯಲ್ಲಿ ೯೫೯, ಎಂ. ಎಂ. ಕಲಬುರ್ಗಿ ಅವರ ಟೀಕಿನ ವಚನ ಆವೃತ್ತಿಯಲ್ಲಿ ೯೬೧, ಎಲ್. ಬಸವರಾಜು ಆವೃತ್ತಿಯಲ್ಲಿ ೯೬೧ ಇದ್ದರೆ,[3] ಇಲ್ಲಿ ನಾವು ಆಧಾರವಾಗಿ ಇಟ್ಟುಕೊಂಡಿರುವ ತಾಳೆಪ್ರತಿ (೫೧)ಯಲ್ಲಿ ೯೬೦ ವಚನಗಳಿವೆ. ಈ ವ್ಯತ್ಯಾಸದ ಕಾರಣ ಸ್ವರೂಪ ಹೀಗಿದೆ:

೧. ಹಳಕಟ್ಟಿ ಅವರ ಆವೃತ್ತಿಯಲ್ಲಿ ವಚನಸಂಖ್ಯೆ ಬಹಳಷ್ಟು ಕಡಿಮೆಯಿದೆ. ಬಹುಶಃ ಸಂಪಾದನ ಪ್ರಸಂಗದಲ್ಲಿ ಕಣ್ತಪ್ಪಿ ಕೆಲವು ವಚನಗಳು ಹೊರಗೆ ಉಳಿದುಕೊಂಡಿರಬಹುದು. ಇಲ್ಲವೆ ಅವರು ಬಳಸಿರುವ ಹಸ್ತಪ್ರತಿಯೇ ಹೀಗೆ ಇರಬಹುದು. "ಜಂಗಮವ ನಂಬದೆ ಬೇರೆ ನಂಬೆನು.......' ಎಂಬ ಹೊಸ ವಚನವೊಂದು (ಪುಟ ೬೦) ಇಲ್ಲಿದೆ. ಕೃತಕವಾಗಿರುವ ಇದನ್ನು ನಾವು ಕೈಬಿಟ್ಟಿದ್ದೇವೆ.

೨. ಕೆಲವು ಹಸ್ತ ಪ್ರತಿಗಳಲ್ಲಿ ಮಾತ್ರ "ರುದ್ರಾಕ್ಷಿಸ್ಥಲ" ಹೆಸರಿನ ಕೆಳಗೆ ೩ ವಚನಗಳು ಹೆಚ್ಚಿಗಿವೆ. ನಾವು ಬಳಸಿದ ಷಟ್‌ಸ್ಥಲ ವಚನಪ್ರತಿ ೫೧ರಲ್ಲಿ ಈ ಮೂರು ವಚನಗಳು ಇಲ್ಲವಾಗಿ, ಅನ್ಯ ಆಕರಗಳಿಂದ ಎತ್ತಿಕೊಂಡು ಇವುಗಳನ್ನು 'ಹೆಚ್ಚಿನ ವಚನಗಳು' ಕಾಂಡದಲ್ಲಿ ಸೇರಿಸಿದ್ದೇವೆ.

೩. ಭಕ್ತನ ಪ್ರಸಾದಿಸ್ಥಲದ ೪ನೆಯ ವಚನ (೪೬೨) ಪ್ರಸಾದಿಯ ಪ್ರಸಾದಿಸ್ಥಲದ ಮೊದಲನೆಯ ವಚನವಾಗಿ (೭೭೮) ಮತ್ತೆ ಬಂದಿದೆ. ಇದೇ ರೀತಿ ಭಕ್ತನ ಪ್ರಸಾದಿಸ್ಥಲದ ೧೬ನೆಯ ವಚನ (೪೭೪) ಪ್ರಾಣಲಿಂಗಿಯ ಪ್ರಸಾದಿ ಸ್ಥಲದ ಮೊದಲನೆಯ ವಚನವಾಗಿ (೮೩೪) ಮತ್ತೆ ಬಂದಿದೆ. ಇವುಗಳನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ.

೪. ಕೆಲವು ಪ್ರತಿಗಳಲ್ಲಿ ಐಕ್ಯಸ್ಥಲದ "ಅಷ್ಟತನುಮೂರ್ತಿ........" (೯೫೭) ಎಂದು ಆರಂಭವಾಗುವ ವಚನ ಕಂಡುಬರುವುದಿಲ್ಲ.

೫. ನಾವು ಬಳಸಿದ ತಾಳೆಪ್ರತಿಯಲ್ಲಿ "ಎತ್ತು ತೊತ್ತಾಗಿ..........." (೨೬೭) ಎಂಬುದು ಹೊಸ ವಚನವಾಗಿದೆ. ಡಾ. ಎಲ್. ಬಸವರಾಜು ಅವರ ಆವೃತ್ತಿಯಲ್ಲಿ ಈ ವಚನವಲ್ಲದೆ 'ಕದ್ದ ಕಳ್ಳನ...' (೮೭) ಎಂಬುದು ಹೊಸ ವಚನವಾಗಿದೆ. ಈ ೮೭ನೆಯ ವಚನವನ್ನು ನಾವು ಹೆಚ್ಚಿನ ವಚನ ವಿಭಾಗದಲ್ಲಿ ಸ್ವೀಕರಿಸಿದ್ದೇವೆ.

ಈ ವಿವರಗಳನ್ನು ಬಿಟ್ಟರೆ "ಷಟ್‌ಸ್ಥಲ ವಚನ" ಕಾಂಡದಲ್ಲಿ ವಚನಸಂಖ್ಯೆ ಮತ್ತು ಪುನರುಕ್ತಿಗಳ ವಿಷಯವಾಗಿ ಬೇರೆ ಸಮಸ್ಯೆಗಳಿಲ್ಲವೆಂದೇ ಹೇಳಬೇಕು. ಇಲ್ಲಿರುವುದು ವಚನಗಳ ಪಾಠಸಮಸ್ಯೆ.

---

೩. ಎಲ್. ಬಸವರಾಜು ಆವೃತ್ತಿಯಲ್ಲಿ ವಚನ ಸಂಖ್ಯೆ ೧೭೬ರ ತರುವಾಯ ಕಣ್ತಪ್ಪಿ ವಚನ ಸಂಖ್ಯೆ ೧೭೭ ಅಚ್ಚಾಗಿದೆ. ಕಾರಣ ಇವರ ಒಟ್ಟು ವಚನ ಸಂಖ್ಯೆ ೯೬೧ ಅಲ್ಲ. ೯೬೦ ಎಂದು ಇಟ್ಟುಕೊಳ್ಳಬೇಕು.

ಹೀಗಾಗಿ ಅನೇಕ ಕಡೆಗಳಲ್ಲಿ ಉತ್ತಮ ಪಾಠಗಳನ್ನು ಶೋಧಿಸಿ, ಯೋಜಿಸಿ ಈ ಆವೃತ್ತಿಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಿದ್ದೇವೆ. ಉದಾ:

೧. ಬಲ್ಲಿದರೊಡನೆ ಬವರವಾದಡೆ ಗೆಲಲುಂಟು ಸೋಲಲುಂಟು. ಕಳ್ಳನೊಡನೆ ಭಾಷೆ ಪೂರಾಯವೇ ಅಯ್ಯಾ ?> .... [ಕಳನೊಳಗೆ] ಭಾಷೆ ಪೂರಾಯ [ವ]ಯ್ಯಾ (೧೫೦).

ಪರಾಕ್ರಮಿಗಳೊಡನೆ ಯುದ್ಧ ಜರುಗಿದರೆ ಗೆದೆಯಬಹುದು, ಸೋಲಬಹುದು. ಕಾಳಗದ ಕಣದಲ್ಲಿ ಪ್ರತಿಜ್ಞೆ, ಸಾರ್ಥಕ್ಯ ಪಡೆಯುತ್ತದೆ ಎಂಬುದೇ ಇಲ್ಲಿಯ ಸರಿಯಾದ ಅರ್ಥ.

೨. ದೃಷ್ಟಿಯಾರೆ ಶರಣೆಂದಡೆ . ದೃಷ್ಟಿ[ವಾರಿ] ಶರಣೆಂದಡೆ (೧೪೦)

ಶಿವಲಿಂಗದೇವನ ದೃಷ್ಟಿಯಾರೆ ನೋಡಿದವನ>ದೃಷ್ಟಿ[ವಾರಿ] ನೋಡದವನ (೧೫೭)

ದೃಷ್ಟಿವಾರಿ–ಎವೆ ಪಿಳುಕಿಸದೆ ಶಿವಲಿಂಗವನ್ನು ನೋಡುತ್ತ ಕುಳಿತುಕೊಳ್ಳುವ ಒಂದು ವ್ರತ. ಈ ವ್ರತವನ್ನು ಹಿನ್ನೆಲೆಯಾಗಿಟ್ಟುಕೊಂಡು ಬಸವಣ್ಣ ಈ ವಚನಗಳನ್ನು ಬರೆದಿರುವುದರಿಂದ 'ದೃಷ್ಟಿವಾರಿ'ಯೆಂಬುದೇ ಇಲ್ಲಿಯ ನಿಜಪಾಠ.

೩. ಆದ್ಯರ ವಚನ ಪರುಷ ಕಂಡಣ್ಣಾ, ಸದಾಶಿವನೆಂಬ ಲಿಂಗವ ನಂಬುವುದು>.....

ಸದಾಶಿವನೆಂಬ ಲಿಂಗ[ವು], ನಂಬುವುದು (೧೭೧)

ಉದ್ದಕ್ಕೂ ಆದ್ಯರ ವಚನದ ಮಹತ್ವವನ್ನು ಹೇಳುವ ಈ ರಚನೆಯ ಮಧ್ಯದಲ್ಲಿ 'ಸದಾಶಿವನೆಂಬ ಲಿಂಗವನ್ನು ನಂಬಬೇಕು' ಎಂಬ ಹೇಳಿಕೆ ಹೊಂದಿಕೊಳ್ಳುವುದಿಲ್ಲ. ನಾವು ಮಾಡಿದ ಪರಿಷ್ಕರಣದಿಂದ 'ಸದಾಶಿವನೆಂಬ ಲಿಂಗವೇ ಆಗಿರುವ ಆದ್ಯರ ವಚನವನ್ನು ನಂಬಬೇಕು' ಎಂಬ ಅರ್ಥ ಹೊರಟು, ಇಡೀ ರಚನೆಗೆ ಅರ್ಥದೃಷ್ಟಿಯಿಂದ ಏಕಮುಖತೆ ಪ್ರಾಪ್ತವಾಗುತ್ತದೆ.

೪. ನಿಮ್ಮ ಮೈಸಿರಿ ಹಾರಿ ಹೋಹುದೆ?>ನಿ[ಮ್ಮೈ]ಸಿರಿ ಹಾರಿ ಹೋಗುದೇ?(೨೪೧). ಇಲ್ಲಿ ನಿಮ್ಮ ಐಸಿರಿ ಅಂದರೆ ಐಶ್ವರ್ಯ ಹಾರಿಹೋದುದೆ? ಎಂಬುದು ಸರಿಯಾದ ಅರ್ಥ ನೀಡುತ್ತದೆ.

೫. ಸೋಂಕಿನಲ್ಲಿ ಸುಖ, ಸರ್ವಾಂಗ ಕಲಿಗಳು>ಸೋಂಕಿನಲ್ಲಿ [ಶುಚಿ]. ಸರ್ವಾಂಗ ಕಲಿಗಳು(೩೨೬)

ಶೌರ್ಯ ಮತ್ತು ಶುಚಿತ್ವಗಳು ವ್ಯಕ್ತಿನಾಣ್ಯದ ಎರಡು ಮುಖಗಳೆಂಬುದು ಪ್ರಾಚೀನರು ನಂಬಿದ ಮೌಲ್ಯ. ಇದನ್ನು ನೆನೆದರೆ ನಾವು ಯೋಜಿಸಿರುವ ಪಾಠದ ಔಚಿತ್ಯ ಸ್ಪಷ್ಟವಾಗುತ್ತದೆ.

೬. ಪರಸ್ತ್ರೀ ಪರಧನವೆಂಬೀ ಜೂಜಿಂಗಂಜುವೆ>ಪರಸ್ತ್ರೀ ಪರಧನವೆಂಬೀ ಜೂ[ಬಿಂ]ಗಂಜುವೆ(೪೪೭)

ಜೂಬು=ಯೂಪ, ಯಜ್ಞದಲ್ಲಿ ವಧೆಗಾಗಿ ಪ್ರಾಣಿಗಳನ್ನು ಕಟ್ಟುತ್ತಿದ್ದ ಕಂಬ.

೭. ತಿಂಬೇರ ಮೈಲಗೆ ಮೇಳವಾಡುತ್ತಿದ್ದ ಕಾಣಾ>[ಪಿಂ]ಬೇರ ಮೈ[ಲುಗ] ಮೇಳವಾಡುತ್ತಿದ್ದ ಕಾಣಾ(೫೭೬)

ಮಹಾರಾಷ್ಟ್ರದ ಪ್ರೇಮಪುರದ ಹಳೆಯ ಹೆಸರು ಪಿಂಬೇರ. ಈ ಗ್ರಾಮದ ದೇವತೆ ಮೈಲುಗ(ಮೈಲಾರ). ಈತನನ್ನು ಈ ವಚನ ಉಲ್ಲೇಖಿಸುತ್ತದೆ.

೮. ಅಲ್ಲಿಯೂ ಮೇಲ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿಯೂ ಮೇಳ>ಅಲ್ಲಿಯೂ ಮೇಳ. ಇಲ್ಲಿಯೂ ಮೇಳ ಚೌಡೇಶ್ವರಿಯಲ್ಲಿಯೂ ಮೇಳವೇ? (೬೪೦)

ಶರಣರ ಸತಿಗೆ ಆಸೆ ಮಾಡುವುದೇ? ಅವಳಲ್ಲಿಯೂ ಸ್ನೇಹ. ಇವಳಲ್ಲಿಯೂ ಸ್ನೇಹ. ಉಗ್ರದೇವತೆಯಾದ ಚೌಡೇಶ್ವರಿಯಲ್ಲಿಯೂ ಸ್ನೇಹವೇ? ಎಂಬ ಸಮಂಜಸ ಅರ್ಥ ಹೊಸಪಾಠದಿಂದ ವ್ಯಕ್ತವಾಗುತ್ತದೆ.

ಇಂಥ ಇನ್ನೂ ಅನೇಕ ಯೋಗ್ಯಪಾಠಗಳನ್ನು ನಾವು ಯೋಜಿಸಿದ್ದು, ಅವುಗಳನ್ನು ಈ ಷಟ್‌ಸ್ಥಲ ಭಾಗದಲ್ಲಿ ಕಾಣಬಹುದು. ಹೀಗಿದ್ದೂ ಕೆಲವು ಸಂದೇಹಗಳು ಸಹಜವಾಗಿಯೇ ಅಲ್ಲಲ್ಲಿ ಉಳಿದುಕೊಂಡಿವೆ.

ಕಾಂಡ : ಎರಡು–ಹೆಚ್ಚಿನ ವಚನಗಳು

'ಹೆಚ್ಚಿನ ವಚನಗಳು' ಭಾಗದಲ್ಲಿ ವಚನಗಳನ್ನು ಅಕಾರಾದಿಯಾಗಿ ಜೋಡಿಸಲಾಗಿದೆ. ಮೊದಲನೆಯ ಕಾಂಡದಲ್ಲಿಯಂತೆ ಪಾಠಾಂತರದ ಜೊತೆಗೆ ಪ್ರಕ್ಷಿಪ್ತತೆ, ಪುನರುಕ್ತಿ, ಮುದ್ರಿಕೆಯ ಪಲ್ಲಟ, ಎರಡು ವಚನ ಒಂದಾದುದು–ಇತ್ಯಾದಿ ಹೆಚ್ಚಿನ ಸಮಸ್ಯೆಗಳು ಇಲ್ಲಿವೆ.

ಕರ್ನಾಟಕ ವಿಶ್ವವಿದ್ಯಾಲಯದ ಆವೃತ್ತಿಯಲ್ಲಿ ಕಾಂಡ–೧ ಮತ್ತು ಕಾಂಡ–೨ ಸೇರಿ ಒಟ್ಟು ೧೩೯೩ ವಚನಗಳಿವೆ. ಅಲ್ಲಿಯ ಎರಡನೆಯ ಕಾಂಡದಿಂದ ಮೂವತ್ತು ವಚನಗಳನ್ನು ಹೀಗೆ ಕೈಬಿಡಲಾಗಿದೆ.

೧. ಮುಕ್ತಿಕಂಠಾಭರಣ ಕೃತಿಯಲ್ಲಿ ಮಾತ್ರ ಕಂಡುಬರುವ ಕಾರಣ ಪ್ರಕ್ಷಿಪ್ತವಾಗಿರಬಹುದಾದ ಕ. ವಿ. ಆವೃತ್ತಿಯ ಹತ್ತೊಂಬತ್ತು ವಚನಗಳನ್ನು (೯೭೩, ೧೦೧೬, ೧೦೨೨, ೧೧೦೫, ೧೧೦೭, ೧೧೦೮, ೧೧೪೩, ೧೧೪೪, ೧೧೫೮, ೧೧೬೩, ೧೧೬೬, ೧೨೧೨, ೧೨೧೩, ೧೨೪೧, ೧೨೫೩, ೧೩೧೭, ೧೩೫೬, ೧೩೫೭, ೧೩೭೭) ಕೈಬಿಡಲಾಗಿದೆ.

೨. ವಿಸ್ತಾರ, ಸಂಕೋಚ, ಲೋಪ, ಆಗಮ, ಆದೇಶ, ಪಲ್ಲಟ ರೂಪದ ಭಿನ್ನಪಾಠಗಳಿಂದಾಗಿ ಕ. ವಿ. ಆವೃತ್ತಿಯಲ್ಲಿ ಕಾಂಡ ೧ರ ಎಂಟು ವಚನಗಳು ವ್ಯತ್ಯ ಸ್ವರೂಪದಿಂದ ಕಾಂಡ ೨ರಲ್ಲಿ ಹೀಗೆ ಪುನರುಕ್ತಗೊಂಡಿವೆ:

ಬಿದಿರಲಂದಣವಕ್ಕು(೨೨೧)–ಬೆಟ್ಟದ ಬಿದಿರೇ ನೀನು(೧೦೯೮)

ಮನೆ ನೋಡ ಬಡವರು (೩೨೫)–ಮನೆ ನೋಡ ಬಡವರು(೧೧೫೭)

ಶ್ರೀ ವಿಭೂತಿ ರುದ್ರಾಕ್ಷಿ (೪೫೧)–ಶ್ರೀ ರುದ್ರಾಕ್ಷಿಯ ಧರಿಸಿ(೧೦೨೭)

ಎಮ್ಮವರು ಅಧಿಕರು (೬೦೨)–ಅಧಿಕರು ಪಾಕವ ಮಾಡುವ(೧೧೧೧)

ದೇವನೊಬ್ಬ ನಾಮ ಹಲವು (೬೧೩)–ಲಿಂಗವೊಂದೇ ನಾಮಂಗಳು(೧೧೭೯)

ಹರಬೀಜವಾದಡೆ (೬೬೮)–ಹೇಡಿಬಿರಿದ ಕಟ್ಟಿದಡೆ(೧೧೧೮)

ಉಂಬ ಬಟ್ಟಲು ಬೇರೆ (೮೬೦)–ದರ್ಪಣವು ಬೇರೆ ಕಂಚಲ್ಲ(೧೩೭೯)

ಲಿಂಗಾರ್ಚನೆ ಮಾಡುವ ಮಹಿಮ (೯೩೩)–ಮಜ್ಜನಕ್ಕೆರೆವ ಮಹಿಮೆ(೧೦೫೫)

ಹೀಗೆ ಕ. ವಿ. ಆವೃತ್ತಿಯ ಎಂಟು ವಚನಗಳನ್ನು ಕೈಬಿಟ್ಟಿದ್ದೇವೆ.

೩. ಎರಡು ವಚನಗಳು ಹಸ್ತಪ್ರತಿಗಳಲ್ಲಿ 'ಕೂಡಲ ಚೆನ್ನಸಂಗಮದೇವಾ' ಮುದ್ರಿಕೆಯಿಂದಲೇ ಹೆಚ್ಚುಸಲ ಕಂಡುಬರುವುದರಿಂದ, ವಿಷಯವೂ ಚೆನ್ನಬಸವಣ್ಣನ ಆಶಯಕ್ಕೆ ಅನುಗುಣವಾಗಿರುವುದರಿಂದ, ಕ. ವಿ. ಆವೃತ್ತಿಯ ಇವೆರಡನ್ನೂ(೧೧೦೨, ೧೨೨೩) ಕೈಬಿಡಲಾಗಿದೆ.

೪. ಅಲ್ಲಮನ ವಚನದ (ಕ. ವಿ. ೧೩೨೦) ಪೂರ್ವಾರ್ಧದಲ್ಲಿ ಬಸವಣ್ಣನ ವಚನದ ಉತ್ತರಾರ್ಧ (ಕ. ವಿ. ೧೧೯೮) ಸೇರಿಕೊಂಡು, ಸೃಷ್ಟಿಯಾಗಿರುವ ಬಸವಣ್ಣನವರ ಒಂದು ವಚನ(ಕ. ವಿ. ೧೨೫೯) ವನ್ನು ಕೈಬಿಡಲಾಗಿದೆ.

ಹೀಗೆ ಒಟ್ಟು ೩೦ (೧೯+೮+೨+೧) ವಚನಗಳನ್ನು ಕೈಬಿಟ್ಟರೆ ಕರ್ನಾಟಕ ವಿಶ್ವವಿದ್ಯಾಲಯದ ಆವೃತ್ತಿಯಲ್ಲಿ ವಚನ ಸಂಖ್ಯೆಯು ೧೪೯೩ ರಿಂದ ೧೪೬೩ಕ್ಕೆ ಇಳಿಯುತ್ತದೆ. ಪ್ರಸ್ತುತ ಸಂಪುಟದ ಒಟ್ಟು ವಚನ ೧೪೧೪ರಲ್ಲಿ ಈ ೧೩೬೩ ವಚನಗಳನ್ನು ಕಳೆದರೆ ಉಳಿಯುವ ೫೧ ವಚನಗಳು ನಮ್ಮ ಈ ದ್ವಿತೀಯ ಆವೃತ್ತಿಯ ಮೂಲಕ ಪ್ರಥಮಬಾರಿಗೆ ಬೆಳಕು ಕಾಣುತ್ತವೆ ಎಂದು ಹೇಳಬೇಕು.

ಈ ಎರಡನೆಯ ಕಾಂಡದಲ್ಲಿಯೂ ಪಾಠ ಸಮಸ್ಯೆ ತುಂಬಾ ಜಟಿಲವಾಗಿದೆ. ಉದಾ:

೧. ಆಕಾಶವ ಮೀರುವ ತರುಗಿರಿಗಳುಂಟೆ?
ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೇ ಮಾಟ
ಕೂಡಲಸಂಗನ ಕೂಡುವ ಕೂಟ (೧೨೫೯)

ಕರ್ನಾಟಕ ವಿಶ್ವವಿದ್ಯಾಲಯದ ಆವೃತ್ತಿಯಲ್ಲಿ ಈ ವಚನವಿದೆ. ಸೂಕ್ಷ್ಮವಾಗಿ ನೋಡಿದರೆ ಇಲ್ಲಿಯ ಒಂದನೆಯ ಚರಣ ಮತ್ತು ಆ ತರುವಾಯದ ಚರಣಗಳಲ್ಲಿ ಅರ್ಥದ ಹೊಂದಿಕೆಯಿಲ್ಲವೆಂದು ಸ್ಪಷ್ಟವಾಗುತ್ತವೆ. ನಿಜಸ್ಥಿತಿಯೆಂದರೆ ಇಲ್ಲಿಯ ಪೂರ್ವಾರ್ಧ ಅಲ್ಲಮನದು. ಉತ್ತರಾರ್ಧ ಬಸವಣ್ಣನದು. ಅವು ಹೀಗಿವೆ.

ಆಕಾಶವ ಮೀರುವ ತರುಗಿರಿಗಳುಂಟೆ?
ನಿರಾಕಾರವ ಮೀರುವ ಆಕಾರವುಂಟೆ?
ಗುಹೇಶ್ವರಲಿಂಗವ ಮೀರುವ ಒಡೆತನವುಂಟೇ?
ಸಂಗನಬಸವಣ್ಣ.(ಕ. ವಿ. ೧೩೨೦)

ಸತಿಪುರುಷರಿಬ್ಬರೂ ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೇ ಮಾಟ.
ಕೂಡಲಸಂಗಮದೇವನ ಕೂಡುವ ಕೂಟ.(ಕ. ವಿ. ೧೧೯೮)

೨. ಹುತ್ತವ ಕಂಡಲ್ಲಿ ಹಾವಾಗಿ, ನೀರ ಕಂಡಲ್ಲಿ ಹೊಳೆಯಾದವನ ಮೆಚ್ಚುವನೇ>...[ಒಳ್ಳೆ]ಯಾದವನ ಮೆಚ್ಚುವನೇ? (೧೪೧೧)

ಒಳ್ಳೆ–ನೀರಹಾವು. ಈ ಅರ್ಥ ಇಲ್ಲಿ ತುಂಬಾ ಸಮಂಜಸವೆನಿಸುತ್ತದೆ. ಇದು ಒಳ್ಳೆ>ಹೊಳ್ಳೆ>ಹೊಳೆ ಹೀಗೆ ಬದಲಾಗುತ್ತ ಬಂದಂತಿದೆ.

ಇಂಥ ಅನೇಕ ಸಮಸ್ಯೆಗಳನ್ನು ಪರಿಹರಿಸಿಕೊಂಡು, ಶ್ರಮಶ್ರದ್ಧೆಗಳಿಂದ ಈ ದ್ವಿತೀಯ ಕಾಂಡವನ್ನು ಸಂಪಾದಿಸಿದ್ದೇವೆ. ಹೀಗಿದ್ದೂ ಉಳಿದುಕೊಂಡಿರಬಹುದಾದ ಕೊರತೆಗಳನ್ನು ಮಹಾಜನರು ಮನ್ನಿಸುವರೆಂದು ಆಶಿಸುತ್ತೇವೆ.

ಕೃತಜ್ಞತೆ

ಶಿವಶರಣರು ಎಂದಾಕ್ಷಣ ಬಸವಣ್ಣನವರು ನೆನಪಾಗುತ್ತಾರೆ. ವಚನ ಸಾಹಿತ್ಯವೆಂದಾಕ್ಷಣ ಬಸವಣ್ಣನವರ ವಚನಗಳು ನೆನಪಾಗುತ್ತವೆ. ಹೀಗೆ ವಚನಸಾಹಿತ್ಯದ ಕೆನೆಯ ಕೆನೆಯಾಗಿರುವ ಬಸವಣ್ಣನವರ ಷಟ್‌ಸ್ಥಲ ವಚನಗಳನ್ನು ಈ ಮೊದಲು ಸಂಪಾದಿಸಿದ ಶ್ರೀ ಬ. ಮರಿಶಂಕರದ್ಯಾವರು (೧೮೮೯)[೪] ಡಾ. ಫ. ಗು. ಹಳಕಟ್ಟಿ (೧೯೨೬), ಶ್ರೀ ಎಸ್. ಎಸ್. ಬಸವನಾಳ (೧೯೫೧). ಡಾ. ಆರ್. ಸಿ. ಹಿರೇಮಠ (೧೯೬೮), ಡಾ. ಎಲ್. ಬಸವರಾಜು (೧೯೯೦) ಅವರಿಗೂ. ಬಿಡಿಬಿಡಿಯಾಗಿ ಸಂಕಲನಗಳನ್ನು, ವಚನಗಳನ್ನು ಪ್ರಕಟಿಸಿದ ಅನೇಕ ಜನ ವಿದ್ವಾಂಸರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಸಂಪಾದನ ಸಮಿತಿಯ ಮೌಲಿಕ ಮಾರ್ಗದರ್ಶನ, ಕರ್ನಾಟಕ ವಿಶ್ವವಿದ್ಯಾಲಯದ ನೆರವು–ಸಹಕಾರಗಳಿಗೆ ಋಣಿಯಾಗಿದ್ದೇವೆ.

"ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಗೆ ಉದಾರ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೂ, ಅನೇಕ ಬಗೆಗಳಲ್ಲಿ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಡಳಿತವರ್ಗಕ್ಕೂ ನಮ್ಮ ಧನ್ಯವಾದಗಳು ಸಲ್ಲುತ್ತದೆ.

ಪರಿಷ್ಕೃತ ಆವೃತ್ತಿ

ಒಂದನೆಯ ಕಾಂಡ, ಎರಡನೆಯ ಕಾಂಡಗಳ ವಚನಗಳನ್ನು ಪಾಠದೃಷ್ಟಿಯಿಂದ ಇನ್ನೊಮ್ಮೆ ಪರಿಷ್ಕರಿಸಲಾಗಿದೆ. ಎರಡನೆಯ ಕಾಂಡದಲ್ಲಿಯ ಪುನರುಕ್ತ ವಚನಗಳನ್ನು ಕೈಬಿಟ್ಟು, ಹೊಸ ವಚನಗಳನ್ನು ಸೇರಿಸಲಾಗಿದೆ. ಈ ಕಾರ್ಯದಲ್ಲಿ ನೆರವಾದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರನ್ನೂ, ಬೆಂಗಳೂರಿನ ಶ್ರೀ. ಎಸ್. ಶಿವಣ್ಣ ಅವರನ್ನೂ ಪ್ರೀತಿಯಿಂದ ನೆನೆಯುತ್ತೇವೆ.

ಧಾರವಾಡ. –ಎಂ. ಎಂ. ಕಲಬುರ್ಗಿ

❖❖

---

೪. ಇದರ ಪ್ರಥಮ ಆವೃತ್ತಿ ೧೮೮೬ ಎಂದು ಶ್ರೀ ಬಿ. ನಂಜುಂಡಸ್ವಾಮಿ ಹೇಳುತ್ತಾರೆ(ಬಸವಪಥ ೧೫–೫).

*

ಪರಿವಿಡಿ

ಕಾಂಡ : ಒಂದು

ಷಟ್‌ಸ್ಥಲ ವಚನಗಳು

ಕಾಂಡ : ಎರಡು

❖❖

ಕಾಂಡ : ಒಂದು

ಷಟ್‌ಸ್ಥಲ ವಚನಗಳು

ಭಕ್ತಸ್ಥಲ

ಪಿಂಡಸ್ಥಲ

೧

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು,
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು,
ನನೆಯೊಳಗಣ ಪರಿಮಳದಂತಿದ್ದಿತ್ತು,
ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು. ॥೧॥

ಪಿಂಡಜ್ಞಾನಸ್ಥಲ

೨

ಕಾಳಿಯ ಕಂಕಾಳದಿಂದ ಮುನ್ನ,
ತ್ರಿಪುರಸಂಹಾರದಿಂದ ಮುನ್ನ,
ಹರಿ ವಿರಿಂಚಿಗಳಿಂದ ಮುನ್ನ,
ಉಮೆಯ ಕಲ್ಯಾಣದಿಂದ ಮುನ್ನ,
ಮುನ್ನ ಮುನ್ನ ಮುನ್ನ–
ಅಂದಿಂಗೆಳೆಯ ನೀನು, ಹಳೆಯ ನಾನು
ಮಹಾದಾನಿ ಕೂಡಲಸಂಗಮದೇವಾ. ॥೨॥

೩

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ಆಕಾರವಾಗಿರ್ದಲ್ಲಿ

ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ,
ಅಯ್ಯಾ, ನೀನೆನ್ನ ಭವವ ಕೊಂದೆಹೆನೆಂದು
ಜಂಗಮಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ
ಕೂಡಲಸಂಗಮದೇವಾ. ॥೩॥

೪

ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ.
ಪ್ರಥಮಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮ್ಮ ಭೃತ್ಯನ ಮಾಡಿ ಎನ್ನನ್ನಿರಿಸಿಕೊಂಡಿರ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ
ಸ್ಕಂದನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ.
ಮೂರನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ.
ನಾಲ್ಕನೆಯ ಭವಾಂತರದಲ್ಲಿ
ಮನೋಹರನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು

ಸರ್ವಕಾಲಸಂಹಾರವ ಮಾಡಿಸುತ್ತಿರ್ದಿರಯ್ಯಾ.
ಆರನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಏಳನೆಯ ಭವಾಂತರದಲ್ಲಿ
ಬಸವದಣ್ಣಾಯಕನೆಂಬ ಗಣೇಶ್ವರನ ಮಾಡಿ,
ಹೆಸರಿಟ್ಟು ಕರೆದು
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಇದು ಕಾರಣ ಕೂಡಲಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ. ॥೪॥

೫

ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆದು ಸುಖಿಯಾಗಿ ಆನು ಬದುಕಿದೆಯ್ಯಾ,
ಅದೇನು ಕಾರಣ ತಂದೆಯೆಂದರಿದೆನಯ್ಯಾ,
ಎನ್ನ ಕಾರಣ ತಂದೆಯೆಂದರಿದೆನಯ್ಯಾ,
ಅರಿದರಿದು, ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆರೆದೆನಯ್ಯಾ,
ಕೂಡಲಸಂಗಮದೇವಾ. ॥೫॥

೬

ಕರಿ ಘನ: ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ.
ಗಿರಿ ಘನ: ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ.
ತಮಂಧ ಘನ: ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ.
ಮರಹು ಘನ: ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?
ಬಾರದಯ್ಯಾ. ಕೂಡಲಸಂಗಮದೇವಾ. ॥೬॥

ಸಂಸಾರಹೇಯಸ್ಥಲ

೭

ಭವಬಂಧನ ಭವಪಾಶವಾದ ಕಾರಣವೇನಯ್ಯಾ
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಜರೆದೆನಾಗಿ.
ಅರಿದಡೀ ಸಂಸಾರವ ಹೊದ್ದಲೀವೆನೆ,
ಕೂಡಲಸಂಗಮದೇವಾ ॥೭॥

೮

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ,
ಸಂಸಾರಸಾಗರ ಉರದುದ್ದವೆ ಹೇಳಾ!
ಸಂಸಾರಸಾಗರ ಕೊರಳುದ್ದವೆ ಹೇಳಾ!
ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ!
ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ
ಕೂಡಲಸಂಗಮದೇವಾ ನಾನೇವೆನೇವೆನಯ್ಯಾ! ॥೮॥

೯

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ,
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ.
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು,
ಇನ್ನೆಂದಿಂಗೆ ಮೋಕ್ಷವಹುದೊ
ಕೂಡಲಸಂಗಮದೇವಾ. ॥೯॥

೧೦

ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ ಎನ್ನ ಸಂಸಾರ,
ಕೆಡೆವನ್ನಕ್ಕ ಮಾಣದು,
ಹೆರರ ಬಾಧಿಸುವುದನು ತನು ಕೆಡೆವನ್ನಕ್ಕ ಮಾಣದು,
ಹೆರರ ಛಿದ್ರಿಸುವುದನು ಮನ ಕೆಡೆವನ್ನಕ್ಕ ಮಾಣದು.
ಅಕಟಕಟಾ, ಸಂಸಾರಕ್ಕೆ ಆಸತ್ತೆ ಕೂಡಲಸಂಗಮದೇವಾ. ॥೧೦॥

೧೧

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ ಎನಗಾಯಿತ್ತಯ್ಯಾ,
ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ.
ಕರ್ತುವೆ ಕೂಡಲಸಂಗದೇವಾ,
ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ. ॥೧೧॥

೧೨

ಶೂಲದ ಮೇಲಣ ವಿಭೋಗವೇನಾದಡೇನೊ?
ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ !
ತನ್ನಾತ್ಮ ತನಗೆ ಹಗೆಯಾದ ಮತ್ತೆ
ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ. ॥೧೨॥

೧೩

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ,
ಎನ್ನುವನು ಕಾಯಯ್ಯಾ, ಕಾಯಯ್ಯಾ. ಹುರುಳಿಲ್ಲ! ಹುರುಳಿಲ್ಲ!
ಕೂಡಲಸಂಗಮದೇವಾ, ಶಿವಧೋ! ಶಿವಧೋ! ॥೧೩॥

೧೪

ನಾನೊಂದ ನೆನೆದಡೆ ತಾನೊಂದ ನೆನೆವುದು,
ನಾನಿತ್ತಲೆಳೆದಡೆ ತಾನತ್ತಲೆಳೆವುದು.
ತಾ ಬೇರೆ ಎನ್ನನಳಲಿಸಿ ಕಾಡಿತ್ತು,
ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು.
ಕೂಡಲಸಂಗನ ಕೂಡಿಹೆನೆಂದಡೆ
ತಾನೆನ್ನ ಮುಂದುಗೆಡಿಸಿತ್ತು ಮಾಯೆ. ॥೧೪॥

೧೫

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ,

ಇದಾವಾವ ಪರಿಯಲ್ಲಿ ಕಾಡಿಹಿತು ಮಾಯೆ.
ಈ ಮಾಯೆಯ ಕಳೆವಡೆ ಎನ್ನಳವಲ್ಲ, ನೀವೆ ಬಲ್ಲಿರಿ ಕೂಡಲಸಂಗಮದೇವಾ! ॥೧೫॥

೧೬

ಕೊಡೆವಿಡಿಯೆ, ಕುದುರೆಯ ದೃಢವುಳ್ಳ ರಾವುತನೇರೆ,
ಕೊಡೆ ಕೋಟಿ, ಶೂರರು ಹನ್ನಿಬ್ಬರಯ್ಯಾ!
ಚಂದ್ರಕಾಂತದ ಗಿರಿಯ ಬಂದು ಗಜ ಮೂದಲಿಸೆ
ಅರಿದು ಕೊಲುವೊಡೆ ರಿಪುಗಳ ಕಲಿತನವ ನೋಡಾ!
ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತೆ ಆಯಿತ್ತು ಕೂಡಲಸಂಗಮದೇವಾ,
ನಿನ್ನ ಹೆಸರಿಲ್ಲದ ಹೆಸರು! ॥೧೬॥

೧೭

ಇಂದಿಂಗೆಂತು ನಾಳಿಂಗೆಂತು ಎಂದು–
ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ!
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ,
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ.
ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ,
ಕೂಡಲಸಂಗಮದೇವಾ. ॥೧೭॥

೧೮

ದಿಟ ಪುಟ ಭಕುತಿಸಂಪುಟ ನೆಲೆಗೊಳ್ಳದಾಗಿ
ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ,
ಟೀವಕ ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ,
ಕೂಡಲಸಂಗಮದೇವಯ್ಯಾ,
ಹೊನ್ನು ಹೆಣ್ಣು ಮಣ್ಣು ತೋರಿ! ॥೧೮॥

೧೯

ಆಸತ್ತೆ ಅಲಸಿದೆನೆಂದಡೆ ಮಾಣದು,
ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು,

ಏವೇನೇವೆನೆಂದಡೆ ಮಾಣದು,
ಕಾಯದ, ಕರ್ಮದ ಫಲಭೋಗವು!
ಕೂಡಲಸಂಗನ ಶರಣರು ಬಂದು
ಹೋ ಹೋ, ಅಂಜದಿರೆಂದಡಾನು ಬದುಕುವೆನು. ॥೧೯॥

೨೦

ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದ
ಆನು ಮುಂದುಗೆಟ್ಟೆನಯ್ಯಾ, ಆನು ಹೊರಳಿ ಬೀಳುತ್ತಿದ್ದೆನಯ್ಯಾ!
'ಓಂ ನಮಃ ಶಿವಾಯ, ಎಂಬ ಮಂತ್ರವ
ಜಪಿಸುತ್ತಿದ್ದೆನಯ್ಯಾ, ಕೂಡಲಸಂಗಮದೇವಾ. ॥೨೦॥

೨೧

ಅರಿಯದೆ ಜನನಿಯ ಜಠರದಲ್ಲಿ ಬಾರದ ಭವಂಗಳ ಬರಿಸಿದೆ ತಂದೆ,
ಹುಟ್ಟಿತ್ತೆ ತಪ್ಪಾಯಿತ್ತೆ, ಎಲೆ ಲಿಂಗವೆ?
ಮುನ್ನ ಹುಟ್ಟಿದುದಕ್ಕೆ ಕೃಪೆಯ ಮಾಡು ಲಿಂಗವೆ!
ಇನ್ನು ಹುಟ್ಟಿದಡೆ ಕೂಡಲಸಂಗಮದೇವಾ, ನಿಮ್ಮಾಣೆ. ॥೨೧॥

೨೨

ಎಂದೊ, ಸಂಸಾರದ ದಂದುಗ ಹಿಂಗುವುದು?
ಎಂದೊ, ಮನದಲ್ಲಿ ಪರಿಣಾಮವಹುದೆನಗೆಂದೋ, ಎಂದೋ?
ಕೂಡಲಸಂಗಮದೇವಾ,
ಇನ್ನೆಂದೋ ಪರಮಸಂತೋಷದಲ್ಲಿಹುದೆನಗೆಂದೋ? ॥೨೨॥

೨೩

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದಡಿಲ್ಲ ಕಂಡಯ್ಯಾ.
ತಾಳಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣು ನೊಂದುದಯ್ಯಾ.

ಕೂಡಲಸಂಗಮದೇವಾ ಕೇಳಯ್ಯಾ,
ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ! ॥೨೩॥

೨೪

ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ
ಇನ್ನು ಬಯಸಿದಡುಂಟೆ?
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದಡುಂಟೆ,
ಕೂಡಲಸಂಗಮದೇವರಲ್ಲಿ ಮುನ್ನ ವರವ ಹಡೆಯದನ್ನಕ್ಕ? ॥೨೪॥

೨೫

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,
ಚಂದ್ರ ಕುಂದೆ, ಕುಂದುವುದಯ್ಯಾ.
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ ಅಯ್ಯಾ?
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ, ಅಯ್ಯಾ?
ಆರಿಗಾರೂ ಇಲ್ಲ, ಕೆಟ್ಟಂಗೆ ಕೆಳೆಯಿಲ್ಲ,
ಜಗದ ನಂಟ ನೀನೆ,
ಅಯ್ಯಾ, ಕೂಡಲಸಂಗಮದೇವಯ್ಯಾ! ॥೨೫॥

೨೬

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ! ॥೨೬॥

೨೭

ಎನ್ನ ಗುಣ ಅವಗುಣವ ಸಂಪಾದಿಸುವೆ ಅಯ್ಯಾ!
ಸರಿಯೆ, ಅಪ್ರತಿಮಹಿಮಾ, ನಿಮಗಾನು ಪ್ರತಿಯೆ?
ಕೂಡಲಸಂಗಮದೇವಾ ನೀವು ಮಾಡಲಾನಾದೆನು. ॥೨೭॥

೨೮

ಬೆದಕದಿರು ಬೆದಕದಿರು, ಬೆದಕಿದಡೆ ಹುರುಳಿಲ್ಲ,
ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ?
ನಿಮ್ಮ ಉತ್ತಮಿಕೆಯ ಪೂರೈಸುವುದು
ಕೂಡಲಸಂಗಮದೇವಾ. ॥೨೮॥

೨೯

ಎನ್ನ ಚಿತ್ತವು ಅತ್ತಿಯ ಹಣ್ಣು, ನೋಡಯ್ಯಾ,
ವಿಚಾರಿಸಿದಡೆ ಏನೂ ಹುರುಳಿಲ್ಲಯ್ಯಾ.
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹುಮಾಡಿ ನೀವಿರಿಸಿದಿರಿ,
ಕೂಡಲಸಂಗಮದೇವಾ. ॥೨೯॥

೩೦

ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ,
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ.
ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲಸಂಗಮದೇವನೊಳಗಿಪ್ಪನಯ್ಯಾ. ॥೩೦॥

೩೧

ಮುಂಗೈಯ ಕಂಕಣಕ್ಕೆ ಕನ್ನಡಿಯ ತೋರುವಂತೆ
ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ.
ನಾಯಿಗೆ ನಾರಿವಾಣವಕ್ಕುವುದೆ ಕೂಡಲಸಂಗಮದೇವಾ? ॥೩೧॥

೩೨

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು,
ನಿಂದಲ್ಲಿ ನಿಲಲೀಯದೆನ್ನ ಮನವು,
ಹೊಂದಿದಲ್ಲಿ ಹೊಂದಲೀಯದೆನ್ನ ಮನವು!
ಕೂಡಲಸಂಗಮದೇವಾ
ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು, ನಿಮ್ಮ ಧರ್ಮ. ॥೩೨॥

೩೩

ಮರನನೇರಿದ ಮರ್ಕಟನಂತೆ
ಹಲವು ಕೊಂಬೆಗೆ ಹಾಯುತ್ತಲಿದ್ದೇನೆ,
ಬೆಂದ ಮನವ ನಾನೆಂತು ನಂಬುವೆನಯ್ಯಾ? ಎಂತು ನಚ್ಚುವೆನಯ್ಯಾ?
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ
ಹೋಗಲೀಯದಯ್ಯಾ. ॥೩೩॥

೩೪

ಅಂದಣವನೇರಿದ ಸೊಣಗನಂತೆ
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು.
ಸುಡು, ಸುಡು, ಮನವಿದು ವಿಷಯಕ್ಕೆ ಹರಿವುದು,
ಮೃಡ ನಿಮ್ಮನನುದಿನ ನೆನೆಯಲೀಯದು.
ಎನ್ನೊಡೆಯ ಕೂಡಲಸಂಗಮದೇವಾ
ನಿಮ್ಮ ಚರಣವ ನೆನೆವಂತೆ ಕರುಣಿಸು–
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ. ॥೩೪॥

೩೫

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ.
ಸಂಸಾರಸಂಗವ ಬಿಡದು ನೋಡೆನ್ನ ಮನವು.
ಈ ನಾಯಿತನವ ಮಾಣಿಸು–
ಕೂಡಲಸಂಗಮದೇವಯ್ಯಾ, ನಿಮ್ಮ ಧರ್ಮ. ॥೩೫॥

೩೬

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ,
ಎನ್ನ ಬಿಡು, ತನ್ನ ಬಿಡು ಎಂಬುದು ಕಾಯವಿಕಾರ,
ಎನ್ನ ಬಿಡು, ತನ್ನ ಬಿಡು, ಎಂಬುದು ಮನೋವಿಕಾರ.
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನ್ನೈದುಗೆ, ಕೂಡಲಸಂಗಮದೇವಾ. ॥೩೬॥

೩೭

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ :
ಮುಂದೆ ಲಿಂಗವ ಕಂಡೆಹೆನೆಂಬುದು ಹುಸಿ ನೋಡಾ.
ಬೆಂದ ಕರಣಾದಿಗಳು ಒಂದೆ ಪಥವನರಿಯಲೀಯವು,
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ
ಎನ್ನ ತಂದೆ ಕೂಡಲಸಂಗಮದೇವಾ,
ನಿಮ್ಮ ಶರಣರ ಬಳಿವಿಡಿದಡೆ ಎನ್ನ ದಂದುಗ ಹಿಂಗುವುದು. ॥೩೭॥

೩೮

ತನ್ನ ವಿಚಾರಿಸಲೊಲ್ಲದು,
ಇದಿರ ವಿಚಾರಿಸಹೋಹುದೀ ಮನವು.
ಏನ ಮಾಡುವೆನೀ ಮನವನು,
ಎಂತು ಮಾಡುವೆನೀ ಮನವನು.
ಕೂಡಲಸಂಗಮದೇವನ ಶರಣರ
ನಚ್ಚದ ಮಚ್ಚದ ಬೆಂದ ಮನವನು. ॥೩೮॥

೩೯

ತನ್ನಿಚ್ಛೆಯ ನುಡಿದಡೆ ಮೆಚ್ಚುವುದೀ ಮನವು,
ಇದಿರಿಚ್ಛೆಯ ನುಡಿದಡೆ ಮೆಚ್ಚದೀ ಮನವು.
ಕೂಡಲಸಂಗನ ಶರಣರ ನಚ್ಚದ ಮಚ್ಚದ ಮನವ ಕಿಚ್ಚಿನೊಳಗಿಕ್ಕು .॥೩೯॥

೪೦

ಸುಡಲೀ ಮನವೆನ್ನನುಡುಹನ ಮಾಡಿತ್ತು,
ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು.
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ
ಕಡುಗೂರ್ಪ ಮಡದಿ ತಾ ಮುಟ್ಟಲಮ್ಮಳು,
ಒಡಲನುರಿಕೊಂಬುದು, ಒಡವೆಯನರಸ ಕೊಂಬ.
ಕಡುಗೂರ್ಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ.
ಮುನ್ನ ಮಾಡಿದುದು ತನ್ನ ಬೆನ್ನ ಬಿಡದನ್ನಕ್ಕ,
ಇನ್ನು ಮಾಡಿದರಳವೆ ಕೂಡಲಸಂಗಮದೇವಾ? ॥೪೦॥

೪೧

ವಚನದ ಹುಸಿ ನುಸುಳೆಂತು ಮಾಬುದೆನ್ನ?
ಮನದ ಮರ್ಕಟತನವೆಂತು ಮಾಬುದೆನ್ನ?
ಹೃದಯದ ಕಲ್ಮಷವೆಂತು ಮಾಬುದೆನ್ನ?
ಕಾಯವಿಕಾರಕ್ಕೆ ತರಿಸಲುವೋದೆನು?
ಎನಗಿದು ವಿಧಿಯೇ, ಕೂಡಲಸಂಗಮದೇವಾ? ॥೪೧॥

೪೨

ಅಂಗದ [ಮಾ]ಟವು ಸಿಂಗದ ಗಾತ್ರವು,
ಹಿಂಗದು ಮನದಲ್ಲಿ ನಾನಾ ವಿಕಾರವು.
ಬಂದೆಹೆನೆಂದರಿಯಲಿಲ್ಲಾಗಿ, ಸಂದೇಹ ಬಿಡದಾಗಿ,
ಮುಂದುಗಾಣದು ಲೋಕ,
ಬೆಂದ ಮಾಯಕ್ಕಂಜಿ ನಿಮ್ಮ ಮರೆವೊಕ್ಕೆ,
ಕೂಡಲಸಂಗಮದೇವಾ. ॥೪೨॥

೪೩

ವಿಕಳನಾದೆನು ಪಂಚೇಂದ್ರಿಯ ಸಪ್ತಧಾತುವಿನಿಂದ,
ಮತಿಗೆಟ್ಟೆನು ಮನದ ವಿಕಾರದಿಂದ,
ಧೃತಿಗೆಟ್ಟೆನು ಕಾಮವಿಕಾರದಿಂದ,
ಶರಣುವೊಕ್ಕೆನು ಕೂಡಲಸಂಗಮದೇವಯ್ಯಾ. ॥೪೩॥

೪೪

ಮುನಿದೆಯಾದಡೆ ಒಮ್ಮೆ ಜರೆದಡೆ ಸಾಲದೆ?
ಅಕಟಕಟಾ, ಮದನಂಗೆ ಮಾರುಗೊಡುವರೆ?
ಹಗೆಗೆ ಮಾರುಗೊಟ್ಟು ನಿನ್ನವರನೊಪ್ಪಿಸುವರೆ?
ಕೂಡಲಸಂಗಮದೇವಾ. ॥೪೪॥

೪೫

ಆನು ಒಬ್ಬನು, ಸುಡುವರೈವರು,
ಮೇಲೆ ಕಿಚ್ಚು ಘನ, ನಿಲಲುಬಾರದು.
ಕಾಡ ಬಸವನ ಹುಲಿ ಕೊಂಡೊಯ್ದಡೆ
ಆರೈಯಲಾಗದೆ ಕೂಡಲಸಂಗಮದೇವಾ? ॥೪೫॥

೪೬

ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ–
ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ.
ಅದೇಕೆಂದಡೆ, ನಿನ್ನತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ, ಭಕ್ತರ ಮಾಡು
ಕೂಡಲಸಂಗಮದೇವಾ. ॥೪೬॥

೪೭

ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ?
ಎಂತು ಶಿವಾಚಾರವೆನಗೆ ವೇದ್ಯವಪ್ಪುದೋ ಅಯ್ಯಾ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ ಕಟ್ಟುವಡೆದೆನು.
ಹಸಿವು, ತೃಷೆ, ವ್ಯಸನದಿಂದ ಕುದಿಯುತ್ತಿದ್ದೇನೆ.
ಪಂಚೇಂದ್ರಿಯ, ಸಪ್ತಧಾತು ಹರಿಹಂಚುಮಾಡಿ ಕಾಡಿಹವಯ್ಯಾ,
ಅಯ್ಯಾ, ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ
ಕೂಡಲಸಂಗಮದೇವಾ, ನಾನೇವೆನೇವೆನಯ್ಯಾ. ॥೪೭॥

೪೮

ಕಾಯವಿಕಾರ ಕಾಡಿಹುದಯ್ಯಾ,
ಮನೋವಿಕಾರ ಕೂಡಿಹುದಯ್ಯಾ.
ಇಂದ್ರಿಯ ವಿಕಾರ ಸುಳಿವುದಯ್ಯಾ!
ಸುಳುವಿನೊಳಗೆ ಸುಳಿವುತ್ತಲಿದ್ದೇನೆ, ಸಿಲುಕಿಸದಿರಯ್ಯಾ!
ಅನ್ಯ ಚಿತ್ತದಲ್ಲಿರಿಸದಿರಯ್ಯಾ, ನಿಮ್ಮ ಚಿತ್ತದಲ್ಲಿರಿಸಯ್ಯಾ.
ಅನುಪಮಸುಖಸಾರಾಯ ಶರಣರಲ್ಲಿ-
ಕೂಡಲಸಂಗಮದೇವಯ್ಯಾ,
ಇದನೆ ಬೇಡುವೆನಯ್ಯಾ. ॥೪೮॥

೪೯

ಬಂದ ಯೋನಿಯನರಿದು ಸಲಹೆನ್ನ ತಂದೆ.
ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು,
ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು,
ಎನ್ನ ತಂದೆ ಕೂಡಲಸಂಗಮದೇವಾ, ಮಾಣಿಸು ನಿಮ್ಮ ಧರ್ಮ. ॥೪೯॥

೫೦

ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು.
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ,
ಲಿಂಗತಂದೆ ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ. ॥೫೦॥

೫೧

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ.
ಪಶುವೇನ ಬಲ್ಲುದು ಹಸುರೆಂದೆಳೆಸುವುದು.
ವಿಷಯರಹಿತನ ಮಾಡಿ,
ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬ ಉದಕವನೆರೆದು,
ನೋಡಿ ಸಲಹಯ್ಯಾ, ಕೂಡಲಸಂಗಮದೇವಾ. ॥೫೧॥

೫೨

ಕೆಸರಲ್ಲಿ ಬಿದ್ದ ಪಶುವಿನಂತೆ
ಆನು ದೆಸೆದೆಸೆಗೆ ಬಾಯ ಬಿಡುತ್ತಿದ್ದೇನೆ, ಅಯ್ಯಾ.
ಆರೈವವರಿಲ್ಲ, ಅಕಟಕಟ!
ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ. ॥೫೨॥

೫೩

ಬಡಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವ ಹೋದೆಹೆ, ಹೋದೆಹೆನಯ್ಯಾ.
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ.
ಪಶುವಾನು, ಪಶುಪತಿ ನೀನು,
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯಾ ನಿಮ್ಮ ಬಯ್ಯದಂತೆ ಮಾಡು,
ಕೂಡಲಸಂಗಮದೇವಾ. ॥೫೩॥

೫೪

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೆ ಅಂಬೆ' ಎಂದು ಕರೆವುತ್ತಲಿದ್ದೇನೆ,
'ಅಂಬೆ ಅಂಬೆ' ಎಂದು ಒರಲುತ್ತಲಿದ್ದೇನೆ,
ಕೂಡಲಸಂಗಮದೇವ 'ಬಾಳು ಬಾಳೆ'ಂಬನ್ನಕ್ಕ. ॥೫೪॥

೫೫

ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಿದ್ದೇನಯ್ಯಾ.
ನೀವಲ್ಲದೆ ಮತ್ತಾರು ಎನ್ನನರಿವರಿಲ್ಲ ನೋಡಯ್ಯಾ.
ಕೂಡಲಸಂಗಮದೇವಾ ನೀನಲ್ಲದೊಳಕೊಂಬವರಿಲ್ಲಯ್ಯಾ. ॥೫೫॥

೫೬

ಅಯ್ಯಾ, ಅಯ್ಯಾ, ಎಂದು ಕರೆವುತ್ತಲಿದ್ದೇನೆ.
ಅಯ್ಯಾ, ಅಯ್ಯಾ, ಎಂದು ಒರಲುತ್ತಲಿದ್ದೇನೆ.

ಓ ಎನ್ನಲಾಗದೆ ಅಯ್ಯಾ?
ಆಗಳೂ ನಿಮ್ಮ ಕರೆವುತ್ತಲಿದ್ದೇನೆ. ಮೋನವೇ
ಕೂಡಲಸಂಗಮದೇವಾ. ॥೫೬॥

೫೭

ನೀ ಹುಟ್ಟಿಸಿದಲ್ಲಿ ಹುಟ್ಟಿ,
ನೀ ಕೊಂದಲ್ಲಿ ಸಾಯದೆ, ಎನ್ನ ವಶವೆ ಅಯ್ಯಾ?
ನೀವಿರಿಸಿದಲ್ಲಿ ಇರದೆ, ಎನ್ನ ವಶವೆ ಅಯ್ಯಾ?
ಅಕಟಕಟಾ, ಎನ್ನವನೆನ್ನವನೆನ್ನಯ್ಯಾ
ಕೂಡಲಸಂಗಮದೇವಯ್ಯಾ. ॥೫೭॥

೫೮

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ,
ಶಿವ ಶಿವಾ ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು,
ಕೂಡಲಸಂಗಮದೇವಾ. ॥೫೮॥

೫೯

ಅತ್ತಲಿತ್ತ ಹೋಗದಂತೆ, ಹೆಳವನ ಮಾಡಯ್ಯಾ ತಂದೆ,
ಸುತ್ತಿ ಸುಳಿದು ನೋಡದಂತೆ, ಅಂಧಕನ ಮಾಡಯ್ಯಾ ತಂದೆ,
ಮತ್ತೊಂದ ಕೇಳದಂತೆ, ಕಿವುಡನ ಮಾಡಯ್ಯಾ ತಂದೆ,
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲಸಂಗಮದೇವಾ. ॥೫೯॥

೬೦

ಎನ್ನ ವಾಮ–ಕ್ಷೇಮ ನಿಮ್ಮದಯ್ಯಾ,
ಎನ್ನ ಹಾನಿ–ವೃದ್ಧಿ ನಿಮ್ಮದಯ್ಯಾ,
ಎನ್ನ ಮಾನಾಪಮಾನವೂ ನಿಮ್ಮದಯ್ಯಾ,
ಬಳ್ಳಿಗೆ ಕಾಯಿ ದಿಮ್ಮಿತ್ತೆ,
ಕೂಡಲಸಂಗಮದೇವಾ. ॥೬೦॥

೬೧

ಸಟೆಯಿಲ್ಲದಂತೆ, ಪ್ರಪಂಚವಿಲ್ಲದಂತೆ, ವೈಶಿಕವಿಲ್ಲದಂತೆ,
ನಡೆಸಯ್ಯಾ ಲಿಂಗತಂದೆ.
ಒಂದು ನಿಮಿಷವಾದಡೆಯೂ
ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ.
ಬೇರೆ ಮತ್ತೆ ಅನ್ಯವ ತೋರದಿರಯ್ಯಾ.
ಹೊಲಬುಗೆಟ್ಟೆನಯ್ಯಾ, ಕೂಡಲಸಂಗಮದೇವಾ. ॥೬೧॥

೬೨

ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ. ॥೬೨॥

೬೩

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟಡೆ
ನಿಮ್ಮ ನಗುವರಯ್ಯಾ.
ಶಿವಬಟ್ಟೆಯಲೆನ್ನನು ಇರಿಸಯ್ಯಾ ಹರನೆ,
ಹೊಲಬುಗೆಟ್ಟೆನು, ಬಟ್ಟೆಯ ತೋರಯ್ಯಾ.
ಹುಯ್ಯಲಿಟ್ಟೆನು, ಗಣಂಗಳು ಕೇಳಿರಯ್ಯಾ.
ಕೂಡಲಸಂಗಮದೇವಯ್ಯ ಎನ್ನ ಕಾಡಿಹನಯ್ಯಾ. ॥೬೩॥

೬೪

ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ,
ಅಕಟಕಟಾ ಶಿವ ನಿನಗಿನಿತು ಕೃಪೆಯಿಲ್ಲ,
ಏಕೆ ಹುಟ್ಟಿಸಿದೆ, ಇಹಲೋಕ ದುಃಖಿಯ?
ಪರಲೋಕ ದೂರನ ಏಕೆ ಹುಟ್ಟಿಸಿದೆ?
ಕೂಡಲಸಂಗಮದೇವಾ ಕೇಳಯ್ಯಾ,
ಎನಗಾಗಿ ಮತ್ತೊಂದು ತರುಮರನಿರಲಿಲ್ಲವೆ? ॥೬೪॥

೬೫

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ,
ಅರಳಂಬಿನಲೆಚ್ಚ ಕಾಮನನುರುಹಿದೆ.
ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ
ಬೇಡನ ಕೈಲಾಸಕೊಯ್ದೆಯಯ್ಯಾ,
ಎನ್ನನೇತಕೊಲ್ಲೆ ಕೂಡಲಸಂಗಮದೇವಾ? ॥೬೫॥

೬೬

ನೀನೊಲಿದಡೆ ಕೊರಡು ಕೊನರುವುದಯ್ಯಾ,
ನೀನೊಲಿದಡೆ ಬರಡು ಹಯನಹುದಯ್ಯಾ,
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ,
ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ. ॥೬೬॥

೬೭

ಮೇರುಗುಣವನರಸುವುದೆ ಕಾಗೆಯಲ್ಲಿ?
ಪರುಷಗುಣವನರಸುವುದೆ ಕಬ್ಬುನದಲ್ಲಿ?
ಸಾಧುಗುಣವನರಸುವುದೆ ಅವಗುಣಿಯಲ್ಲಿ?
ಚಂದನಗುಣವನರಸುವುದೆ ತರುಗಳಲ್ಲಿ?
ಸರ್ವಗುಣಸಂಪನ್ನ ಲಿಂಗವೆ, ನೀನೆನ್ನಲ್ಲಿ?
ಅವಗುಣವನರಸುವರೆ ಕೂಡಲಸಂಗಮದೇವಾ? ॥೬೭॥

೬೮

ಭವಭವದಲ್ಲಿ ಎನ್ನ ಮನವು ಸಿಲುಕದೆ?
ಭವಭವದಲ್ಲಿ ಎನ್ನ ಮನವು ಕಟ್ಟದೆ?
ಭವಸಾಗರದಲ್ಲಿ ಮುಳುಗದೆ?
ಭವರಾಟಳದೊಳು ತುಂಬದೆ? ಕೆಡಹದೆ?
ಭವವಿರಹಿತ ನೀನು, ಅವಧಾರು ಕರುಣಿಸು ಕೂಡಲಸಂಗಮದೇವಾ. ॥೬೮॥

೧೯

ಆಸೆಯೆಂಬ ಪಾಶದಲ್ಲಿ ಭವಬಂಧನವಾಗಿರ್ದೆನಯ್ಯಾ,
ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲಯ್ಯಾ!
ಕರುಣಾಕರ, ಅಭಯಕರ, ವರದ, ನೀ ಕರುಣಿಸಯ್ಯಾ.
ಸಂಸಾರಬಂಧನವನು ಮಾಣಿಸಿ, ಎನಗೆ ಕೃಪೆಯ ಮಾಡಿ,
ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು,
ಭಕ್ತಜನಮನೋವಲ್ಲಭ
ಕೂಡಲಸಂಗಮದೇವಾ. ॥೧೯॥

ಗುರುಕರುಣಸ್ಥಲ

೨೦

ಮಡಕೆಯ ಮಾಡುವಡೆ ಮಣ್ಣೆ ಮೊದಲು,
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು,
ಶಿವಪಥವನರಿವಡೆ ಗುರುಪಥವೆ ಮೊದಲು,
ಕೂಡಲಸಂಗಮದೇವರನರಿವಡೆ ಶರಣರ ಸಂಗವೆ ಮೊದಲು. ॥೨೦॥

೨೧

ನೋಡಿ ನೋಡಿ ಮಾಡುವ ನೇಮ ಸಲ್ಲವು, ಸಲ್ಲವು.
ತನುವುದ್ದೇಶ, ಮನವುದ್ದೇಶವಾಗಿ
ಮಾಡುವ ನೇಮ ಸಲ್ಲವು, ಸಲ್ಲವು.
ಗುರುಪಥವ ಮೀರಿ ಮಾಡುವ ನೇಮ ಸಲ್ಲವು, ಸಲ್ಲವು.
ಕೂಡಲಸಂಗಮದೇವಯ್ಯಾ
ಇವು ನಿಮ್ಮ ನಿಜದೊಳಗೆ ನಿಲ್ಲವು, ನಿಲ್ಲವು. ॥೨೧॥

೨೨

ಗುರುವಚನವಲ್ಲದೆ ಲಿಂಗವೆಂದೆನಿಸದು,
ಗುರುವಚನವಲ್ಲದೆ ಜಂಗಮವೆಂದೆನಿಸದು,
ಗುರುವಚನವಲ್ಲದೆ ನಿತ್ಯವೆಂದೆನಿಸದು,

ಗುರುವಚನವಲ್ಲದೆ ನೇಮವೆಂದೆನಿಸದು.
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ,
ನಮ್ಮ ಕೂಡಲಸಂಗಮದೇವ? ॥೭೨॥

ವಿಭೂತಿಸ್ಥಲ

೭೩
ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ.
ಕಹಿ ಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೆ ಮೂರು ದಿವಸಕ್ಕಯ್ಯಾ?
ಹಲವು ಕಾಲ ಕೊಂದ ಸೂನೆಗಾರನ ಕತ್ತಿಯಾದಡೇನು
ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ?
ಲಲಾಟದಲ್ಲಿ ವಿಭೂತಿ ಬರೆಯಲಿಕೆ ಪಾಪ ಪಲ್ಲಟವಾಗದೆ
ಕೂಡಲಸಂಗಮದೇವಾ? ॥೭೩॥

೭೪
ನೀರಿಂಗೆ ನೈದಿಲೆಯೆ ಶೃಂಗಾರ, ಸಮುದ್ರಕ್ಕೆ ತೆರೆಯೆ ಶೃಂಗಾರ,
ನಾರಿಗೆ ಗುಣವೆ ಶೃಂಗಾರ, ಗಗನಕ್ಕೆ ಚಂದ್ರಮನೆ ಶೃಂಗಾರ,
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೆ ಶೃಂಗಾರ. ॥೭೪॥

ಪಂಚಾಕ್ಷರಿಸ್ಥಲ

೭೫
ಕರಿಯಂಜುವುದು ಅಂಕುಶಕ್ಕಯ್ಯಾ,
ಗಿರಿಯಂಜುವುದು ಕುಲಿಶಕ್ಕಯ್ಯಾ,
ತಮಂಧವಂಜುವುದು ಜ್ಯೋತಿಗಯ್ಯಾ,
ಕಾನನವಂಜುವುದು ಬೇಗೆಗಯ್ಯಾ,
ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ ॥೭೫॥

೭೬

ಜಪತಪ ನಿತ್ಯನೇಮವೆನಗುಪದೇಶ,
ನಿಮ್ಮ ನಾಮವೆನಗೆ ಮಂತ್ರ, ಶಿವನಾಮವೆನಗೆ ತಂತ್ರ,
ಕೂಡಲಸಂಗಮದೇವಯ್ಯಾ ನಿಮ್ಮ ನಾಮವೆನಗೆ ಕಾಮಧೇನು. ॥೭೬॥

೭೭

ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ!
ಓಂ ನಮಃ ಶಿವಾಯ, ಎಂಬುದೇ ಮಂತ್ರ,
ಓಂ ನಮಃ ಶಿವಾಯ ಎಂಬುದೇ ತಂತ್ರ,
ನಮ್ಮ ಕೂಡಲಸಂಗಮದೇವರ ನೆನೆವುದೆ ಮಂತ್ರ. ॥೭೭॥

೭೮

ವಶ್ಯವ ಬಲ್ಲೆವೆಂದೆಂಬಿರಯ್ಯಾ,
ಬುದ್ಧಿಯನರಿಯದ ಮನುಜರು ಕೇಳಿರಯ್ಯಾ.
ವಶ್ಯವಾವುದೆಂದರಿಯದೆ ಮರುಳುಗೊಂಬಿರಿ,
ಎಲೆ ಗಾವಿಲ ಮನುಜರಿರಾ.
'ಓಂ ನಮಃ ಶಿವಾಯ', ಎಂಬ ಮಂತ್ರ ಸರ್ವಜನವಶ್ಯ
ಕೂಡಲಸಂಗಮದೇವಾ. ॥೭೮॥

೭೯

ಭವಬಂಧನ ದುರಿತಂಗಳ ಗೆಲುವಡೆ
'ಓಂ ನಮಃ ಶಿವಾಯ' ಶರಣೆಂದಡೆ ಸಾಲದೆ
ಹರ ಹರ ಶಂಕರ, ಶಿವ ಶಿವ ಶಂಕರ,
ಜಯ ಜಯ ಶಂಕರ ಶರಣೆನುತ್ತಿದ್ದೇನೆ.
ಎನ್ನ ಪಾತಕ ಪರಿಹಾರ,
ಕೂಡಲಸಂಗಮದೇವಾ ಶರಣೆನುತ್ತಿದ್ದೇನೆ. ॥೭೯॥

೮೦

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ,
'ಓಂ ನಮಃ ಶಿವಾಯ, ಓಂ ನಮಃ ಶಿವಾಯ'
ಎನಗಿದೆ ಮಂತ್ರ, ಎನಗಿದೇ ಜಪ.
ಕೂಡಲಸಂಗಮದೇವಾ ನೀನೆ ಬಲ್ಲೆ, ಎಲೆ ಲಿಂಗವೆ. ॥೮೦॥

೮೧

'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀರಲಮ್ಮದೆ ನಿಂದವು ವೇದ,
'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀರಲಮ್ಮದೆ ನಿಂದವು ಶಾಸ್ತ್ರ,
'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀರಲಮ್ಮದೆ ನಿಂದವು ತರ್ಕ.
ಭಯಂಕರ ಭ್ರಮೆಗೊಂಡಿತ್ತು ಮಂತ್ರ-ತಂತ್ರ,
ಶಿವನಂತುವನರಿಯದೆ ಚಿಂತಿಸುತ್ತಿದ್ದಿತ್ತು ಲೋಕ,
ಕೂಡಲಸಂಗಮದೇವ ಶ್ವಪಚನ ಬೆರೆದಡೆ
ಜಾತಿಭೇದವ ಮಾಡಲಮ್ಮವು. ॥೮೧॥

೮೨

ಬಿಳಿಯ ಕರಿಕೆ, ಕಣಿಗಿಲೆಲೆಯ,
ತೊರೆಯ ತಡಿಯ ಮಳಲ ತಂದು,
ಗೌರಿಯ ನೋನುವ ಬನ್ನಿರೆ.
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು-
ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು. ॥೮೨॥

೮೩

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ,
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ,

ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ,
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ. ॥೮೩॥

ಲಿಂಗಧಾರಣಸ್ಥಲ

೮೪

ಪಾತಕ ಶತಕೋಟಿಯನೊರಸಲು
ಸಾಲದೆ ಒಂದು ಶಿವನ ನಾಮ?
ಸಾಲದೆ ಒಂದು ಹರನ ನಾಮ?
ಕೂಡಲಸಂಗಮದೇವಾ
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ. ॥೮೪॥

೮೫

ಲಿಂಗದ ಉಂಡಿಗೆಯ ಪಶುವಾನಯ್ಯಾ,
ವೇಷಧಾರಿಯಾನು, ಉದರಪೋಷಕ ನಾನಯ್ಯಾ,
ಕೂಡಲಸಂಗನ ಶರಣರ ಧರ್ಮದ ಕವಿಲೆಯಾನು. ॥೮೫॥

೮೬

'ನಮಃ ಶಿವಾಯ, ನಮಃ ಶಿವಾಯ, ನಮಃ ಶಿವಾಯ'
ಶರಣೆಂದಿತ್ತು ಲಲಾಟಲಿಖಿತ,
ಬರೆದ ಬಳಿಕ ಪಲ್ಲಟವ ಮಾಡಬಾರದು.
ಎನ್ನ ಉರದ ಉಂಡಿಗೆ, ಶಿರದ ಅಕ್ಷರ
ಕೂಡಲಸಂಗಯ್ಯಾ ಶರಣೆಂದಿತ್ತು. ॥೮೬॥

೮೭

ಅಡ್ಡ ವಿಭೂತಿಯಿಲ್ಲದವರ ಮುಖಹೊಲ್ಲ, ನೋಡಲಾಗದು.
ಲಿಂಗದೇವನಿಲ್ಲದ ಠಾವು ನರವಿಂಧ್ಯ, ಹೊಗಲಾಗದು.
ದೇವಭಕ್ತರಿಲ್ಲದೂರು ಸಿನೆ ಹಾಳು,
ಕೂಡಲಸಂಗಮದೇವಾ. ॥೮೭॥

೮೮

ಅಡ್ಡ ತ್ರಿಪುಂಡ್ರದ, ಮಣಿಮಕುಟವೇಷದ
ಶರಣರ ಕಂಡಡೆ ನಂಬುವುದೆನ್ನ ಮನವು,
ನಚ್ಚುವುದೆನ್ನ ಮನವು, ಸಂದೇಹವಿಲ್ಲದೆ.
ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ. ॥೮೮॥

ತಾಮಸನಿರಸನಸ್ಥಲ

೮೯

ಆರಾಧ್ಯ ಪ್ರಾಣಲಿಂಗವೆಂದರಿದು,
ಪೂರ್ವಗುಣವಳಿದು ಪುನರ್ಜಾತನಾದ ಬಳಿಕ,
ಸಂಸಾರಬಂಧುಗಳೆನ್ನವರೆಂದಡೆ
ನುಂಟಭಕ್ತಿ ನಾಯಕನರಕ–
ಇಂತೆಂದುದು ಕೂಡಲಸಂಗನ ವಚನ ॥೮೯॥

೯೦

ತಾಳೆಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ
ಅದ ಹಾಲಹರವಿಯೆನ್ನರು,
ಸುರೆಯ ಹರವಿಯೆಂಬರು.
ಈ ಭಾವನಿಂದೆಯ ಮಾಣಿಸಾ
ಕೂಡಲಸಂಗಮದೇವಾ. ॥೯೦॥

೯೧

ಸುಪಥಮಂತ್ರದುಪದೇಶವ ಕಲಿತು, ಯುಕ್ತಿಗೆಟ್ಟು ನಡೆವಿರಯ್ಯಾ,
ತತ್ತ್ವಮಸಿ ಎಂಬುದನರಿದು ಕತ್ತಲೆಗೆ ಓಡುವಿರಯ್ಯಾ.
ವೇದವಿಪ್ರರ ವಿಚಾರಿಸಿ ನೋಡಲು,
ಉಪದೇಶಪರೀಕ್ಷೆ ನರಕವೆಂದುದು
ಕೂಡಲಸಂಗನ ವಚನಸೂಚನೆ. ॥೯೧॥

೯೨

ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟಡೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ದೀಕ್ಷೆಯ ಕೊಟ್ಟಡೆ
ಭಕ್ತಿಯೆಂತಹುದು? ಮುನ್ನಿನಂತೆ.
ಕೂಡಲಸಂಗಯ್ಯಾ ಮನಹೀನನ ಮೀಸಲ ಕಾಯ್ದಿರಿಸಿದಂತೆ. ॥೯೨॥

೯೩

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ
ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣಾ,
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ
ನಿಚ್ಚ ಕೆಸರಹುದಲ್ಲದೆ ಅದರಚ್ಚಿಗ ಬಿಡದಣ್ಣಾ.
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ? ॥೯೩॥

೯೪

ಕಬ್ಬುನದ ಕೋಡಗವ ಪರುಷ ಮುಟ್ಟಲು,
ಹೊನ್ನಾದಡೇನು ಮತ್ತೇನಾದಡೇನು
ತನ್ನ ಮುನ್ನಿನ ರೂಹ ಬಿಡದನ್ನಕ್ಕ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರುಗಳಯ್ಯಾ. ॥೯೪॥

೯೫

ತನುವಿನಲೊಂದಿಟ್ಟು ಮನದಲೆರಡಿಟ್ಟಡೆ,
ಬಲ್ಲನೊಲ್ಲನಯ್ಯಾ, ಲಿಂಗವು ಬಲ್ಲನೊಲ್ಲನಯ್ಯಾ.
ಪರಚಿಂತೆಯನೊಲ್ಲನೊಲ್ಲ ಕೂಡಲಸಂಗಮದೇವ. ॥೯೫॥

೯೬

ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು,

ಅವರು ಶಿವಪಥಕ್ಕೆ ಸಲ್ಲರು ಸಲ್ಲರಯ್ಯಾ.
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವ. ॥೯೬॥

೯೭

ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ!
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ!
ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನದೊಳಗೆ [ಮನದೊ]ಡೆಯನಿದ್ದಾನೊ, ಇಲ್ಲವೊ!
ಇಲ್ಲ, ಕೂಡಲಸಂಗಮದೇವಾ. ॥೯೭॥

೯೮

ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?
ಕೋಡಗ ಬಲ್ಲುದೆ ಸೆಳೆಮಂಚದ ಸುಖವ?
ಕಾಗೆ ನಂದನವನದೊಳಗಿದ್ದಡೇನು,
ಕೋಗಿಲೆಯಾಗಬಲ್ಲುದೆ ಹೇಳಾ?
ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು,
ಕಳಹಂಸಿಯಾಗಬಲ್ಲುದೆ?
ಕೂಡಲಸಂಗನ ಶರಣನ
ಸನ್ನಿಧಿಯಲ್ಲಿ ಮಾನವನಿದ್ದಡೇನು ಶಿವಭಕ್ತನಾಗಬಲ್ಲನೆ? ॥೯೮॥

೯೯

ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು,
ನೆನೆದು ಮೃದುವಾಗಬಲ್ಲುದೆ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು, ಕೂಡಲಸಂಗಮದೇವಾ. ॥೯೯॥

೧೦೦
ಸಂತವಿದ್ದ ಮನೆಗೆ ಕೊಂತವ ತಂದಂತೆ
ಇದನೆಂತು ಸಂತೈಸುವೆನು?
ಸಂತೆಯ ಗುಡಿಲ ಸೂಳೆಗೆ ಕೊಂತವಳವಡುವುದೆ?
ಕೂಡಲಸಂಗಮದೇವರ ಮಹತ್ತು ಆರಿಗೂ ಅಳವಡದು. ॥೧೦೦॥

೧೦೧
ಕೂಸುಳ್ಳ ಸೂಳೆ ಧನದಾಸೆಗೊತ್ತೆಯ ಕೊಂಡಡೆ
ಕೂಸಿಂಗಲ್ಲ, ಬೊಜಗಂಗಲ್ಲ.
ಕೂಸನೊಮ್ಮೆ ಸಂತವಿಡುವಳು, ಬೊಜಗನನೊಮ್ಮೆ ನೆರೆವಳು.
ಧನದಾಸೆ ಬಿಡದು ಕೂಡಲಸಂಗಮದೇವಾ. ॥೧೦೧॥

೧೦೨
ಎರದೆಲೆಯಂತೆ ಒಳಗೊಂದು ಹೊರಗೊಂದಾದಡೆ ಮೆಚ್ಚುವನೆ?
ಬಾರದ ಭವಂಗಳ ಬರಿಸುವನಲ್ಲದೆ ಮೆಚ್ಚುವನೆ?
ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ?
ಉಡುವಿನ ನಾಲಗೆಯಂತೆ ಎರಡಾದಡೆ
ಕೂಡಲಸಂಗಯ್ಯ ಮೆಚ್ಚುವನೆ? ॥೧೦೨॥

೧೦೩
ಭಕ್ತರ ಕಂಡಡೆ ಬೋಳರಪ್ಪಿರಯ್ಯಾ,
ಸವಣರ ಕಂಡಡೆ ಬತ್ತಲೆಯಪ್ಪಿರಯ್ಯಾ,
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ,
ಅವರವರ ಕಂಡಡೆ ಅವರವರಂತೆ
ಸೂಳೆಗೆ ಹುಟ್ಟಿದವರ ತೋರದಿರಯ್ಯಾ.
ಕೂಡಲಸಂಗಯ್ಯನ ಪೂಜಿಸಿ, ಅನ್ಯದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ. ॥೧೦೩॥

೧೦೪

ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ-ಪ್ರಸಾದ,
ಹೆಂಡತಿ ಕೊಂಬುದು ಸುರೆ-ಮಾಂಸ.
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ. ॥೧೦೪॥

೧೦೫

ಹಾವಡಿಗನು ಮೂಕೊರತಿಯು: ತನ್ನ ಕೈಯಲ್ಲಿ ಹಾವು,
ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಡಿಗನ ಕಂಡು,
ಶಕುನ ಹೊಲ್ಲೆಂಬ ಚದುರನ ನೋಡಾ.
ತನ್ನ ಸತಿ ಮೂಕೊರತಿ, ತನ್ನ ಕೈಯಲ್ಲಿ ಹಾವು,
ತಾನು ಮೂಕೊರೆಯ.
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ. ॥೧೦೫॥

೧೦೬

ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು,
ಕಂಗಳಿಚ್ಛೆಗೆ ಪರವಧುವ ನೆರೆವರು.
ಲಿಂಗಲಾಂಛನಧಾರಿಯಾದಲ್ಲಿ ಫಲವೇನು
ಲಿಂಗಪಥವ ತಪ್ಪಿ ನಡೆವವರು?
ಜಂಗಮಮುಖದಿಂದ ನಿಂದೆ ಬಂದಡೆ
ಕೊಂಡ ಮಾರಿಂಗೆ ಹೋಹುದು ತಪ್ಪದು
ಕೂಡಲಸಂಗಮದೇವಾ. ॥೧೦೬॥

೧೦೭

ಶಿವಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ,
ತನ್ನ ಅಂಗದ ಮೇಲೆ ಲಿಂಗವಿರುತಿರಲು,
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ,

ಅನ್ಯರ ವಚನವ ಕೊಂಡಾಡಲು, ಕರ್ಮ ಬಿಡದು, ಭವಬಂಧನ!
ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು!
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರಿಗೆ
ಮಳಲ ಗೋಡೆಯನಿಕ್ಕಿ, ನೀರಲ್ಲಿ ತೊಳೆದಂತಾಯಿತ್ತಯ್ಯಾ. ॥೧೦೭॥

೧೦೮

ಅರ್ಥರೇಖೆಯಿದ್ದು ಫಲವೇನು,
ಆಯುಷ್ಯರೇಖೆ ಇಲ್ಲದನ್ನಕ್ಕರ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ. ॥೧೦೮॥

೧೦೯

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ,
ಇದ್ದಡೇನೊ ಶಿವ ಶಿವಾ ಹೋದಡೇನೊ.
ಕೂಡಲಸಂಗಮದೇವಯ್ಯಾ
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ. ॥೧೦೯॥

೧೧೦

ಅವಳ ವಚನ ಬೆಲ್ಲದಂತೆ,
ಹೃದಯದಲಿಪ್ಪುದು ನಂಜು ಕಂಡಯ್ಯಾ.
ಕಂಗಳಲೊಬ್ಬನ ಕರೆವಳು,
ಮನದಲೊಬ್ಬನ ನೆರೆವಳು.
ಕೂಡಲಸಂಗಮದೇವ ಕೇಳಯ್ಯಾ,
ಮಾನಿಸಗಳ್ಳಿಯ ನಂಬದಿರಯ್ಯಾ. ॥೧೧೦॥

೧೧೧

ಹಾದರಕ್ಕೆ ಹೋದಡೆ, ಕಳ್ಳದಮ್ಮವಾಯಿತ್ತು;
ಹಾಳು ಗೋಡೆಗೆ ಹೋದಡೆ, ಚೇಳೂರಿತ್ತು;
ಅಬ್ಬರವ ಕೇಳಿ ತಳವಾರ ಉಟ್ಟ ಸೀರೆಯ ಸುಲಿದ;
ನಾಚಿ ಹೋದಡೆ ಮನೆಯ ಗಂಡ ಬೆನ್ನ ಬಾರನೆತ್ತಿದ,
ಅರಸು ಕೂಡಲಸಂಗಮದೇವ ದಂಡವ ಕೊಂಡ. ॥೧೧೧॥

೧೧೨

ಗರಿ ತೋರೆ ಗಂಡರೆಂಬವರ ಕಾಣೆ,
ನಿರಿ ಸೋಂಕೆ ಮುನಿ[ಯ]ಲ್ಲ ನೋಡಯ್ಯಾ.
ನಂಟುತನವೇನವನ? ಬಂಟತನವೇನವನ?
ಹುಲ್ಲುಕಿಚ್ಚು, ಹೊಲೆಯನ ಮೇಳಾಪ–
ಅಲ್ಲಿ ಹುರುಳಿಲ್ಲ, ಕೂಡಲಸಂಗಮದೇವಾ. ॥೧೧೨॥

೧೧೩

ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ?
ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ,
ಕೋಲು ಬಳಲುವುದೆ?
ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ?
ಕೂಡಲಸಂಗಮದೇವಾ, ಅರಸರಿಯದ ಬಿಟ್ಟಿಯೋ. ॥೧೧೩॥

ಭಕ್ತನ ಜ್ಞಾನಿಸ್ಥಲ

೧೧೪

ಒಲೆಯ ಬೂದಿಯ ಬಿಲಿಯಲು ಬೇಡ,
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ?
ಒಂದನಾಡಹೋಗಿ ಒಂಬತ್ತನಾಡುವ
ಡಂಬಕರ ಮೆಚ್ಚ ಕೂಡಲಸಂಗಯ್ಯ. ॥೧೧೪॥

೧೧೫

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ,
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದಡೆ ಒಡನೆ ನುಡಿವನು, ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ,
ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವ. ॥೧೧೫॥

೧೧೬

ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು,
ನಂಬಿ ಕರೆದಡೋ ಎನ್ನನೆ ಶಿವನು?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ. ॥೧೧೬॥

೧೧೭

ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ? ॥೧೧೭॥

೧೧೮

ಕಾಮವೇಕೊ, ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೊ, ಶರಣವೇದ್ಯನೆನಿಸುವಂಗೆ?
ಲೋಭವೇಕೊ, ಭಕ್ತಿಯ ಲಾಭವ ಬಯಸುವಂಗೆ?
ಮೋಹವೇಕೊ ಪ್ರಸಾದವೇದ್ಯನೆನಿಸುವಂಗೆ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೊ?
ಹದುಳಿಗರಾದಲ್ಲಿಪ್ಪ ಕೂಡಲಸಂಗಮದೇವ. ॥೧೧೮॥

೧೧೯

ಸಾರ: ಸಜ್ಜನರ ಸಂಗವ ಮಾಡುವುದು,
ದೂರ: ದುರ್ಜನರ ಸಂಗ ಬೇಡವಯ್ಯಾ.
ಆವ ಹಾವಾದಡೇನು? ವಿಷವೊಂದೆ,
ಅಂತವರ ಸಂಗ ಬೇಡವಯ್ಯಾ.
ಅಂತರಂಗ ಶುದ್ಧವಿಲ್ಲದವರ ಸಂಗವು
ಸಿಂಗಿ, ಕಾಳಕೂಟ ವಿಷವೊ, ಕೂಡಲಸಂಗಯ್ಯಾ. ॥೧೧೯॥

೧೨೦

ಹಸಿದು ಎಕ್ಕೆಯ ಕಾಯ ಮೆಲಬಹುದೆ?
ನೀರಡಿಸಿ ವಿಷವ ಕುಡಿಯಬಹುದೆ?
ಸುಣ್ಣದ, ತುಯ್ಯಲ[ದ] ಬಣ್ಣವೊಂದೆ ಎಂದಡೆ
ನಂಟುತನಕ್ಕೆ ಉಣಬಹುದೆ?
ಲಿಂಗಸಾರಾಯ ಸಜ್ಜನರಲ್ಲದವರ
ಕೂಡಲಸಂಗಮದೇವರೆಂತೊಲಿವ? ॥೧೨೦॥

೧೨೧

ಎಲವದ ಮರ ಹೂತು ಫಲವಾದ ತೆರನಂತೆ;
ಸಿರಿಯಾದಡೇನು, ಶಿವಭಕ್ತಿಯಿಲ್ಲದನ್ನಕ್ಕ?
ಫಲವಾದಡೇನು ಹೇಳಾ, ಹಾವುಮೆಕ್ಕೆಯ ಕಾಯಿ?
ಕುಲವಿಲ್ಲದ ರೂಹು ಎಲ್ಲಿದ್ದಡೇನು?
ಬಚ್ಚಲ ನೀರು ತಿಳಿದಲ್ಲಿ ಫಲವೇನು?
ಅವಗುಣಿಗಳನು ಮೆಚ್ಚ ಕೂಡಲಸಂಗಮದೇವ. ॥೧೨೧॥

೧೨೨

ಬಚ್ಚಲ ನೀರು ತಿಳಿದಡೇನು?
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು?
ಆಕಾಶದ ಮಾವಿನ ಫಲವೆಂದಡೇನು?
ಕೊಯ್ಯಲಿಲ್ಲ, ಮೆಲ್ಲಲಿಲ್ಲ?

ಕೂಡಲಸಂಗನ ಶರಣರ ಅನುಭಾವವಿಲ್ಲದವ
ಎಲ್ಲಿದ್ದಡೇನು? ಎಂತಾದಡೇನು? ॥೧೨೨॥

೧೨೩

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.
ಜಗವೆಲ್ಲವ ಕಾಬ ಕಣ್ಣು,
ತನ್ನ ಕೊಂಬ ಕೊಲ್ಲೆಯ ಕಾಣಲರಿಯದು.
ಇದಿರ ಗುಣವ ಬಲ್ಲೆವೆಂಬರು,
ತಮ್ಮ ಗುಣವನರಿಯರು,
ಕೂಡಲಸಂಗಮದೇವಾ. ॥೧೨೩॥

೧೨೪

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ. ॥೧೨೪॥

೧೨೫

ಏತ ತಲೆವಾಗಿದಡೇನು,
ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈಮುಗಿದಡೇನು,
ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದಡೇನು,
ಲಿಂಗವೇದಿಯಾಗಬಲ್ಲುದೆ?
ಕೂಡಲಸಂಗನ ಶರಣರು ಬಂದ ಬರವ,
ನಿಂದ ನಿಲವ ಅನಂಗಸಂಗಿಗಳೆತ್ತ ಬಲ್ಲರು? ॥೧೨೫॥

೧೨೬

ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ:
ಆ ಪೂಜೆಯು, ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ, ಚಿತ್ರದ ಕಬ್ಬು ಕಾಣಿರಣ್ಣಾ,
ಅಪ್ಪಿದಡೆ ಸುಖವಿಲ್ಲ, ಮೆಲಿದಡೆ ರುಚಿಯಿಲ್ಲ.
ಕೂಡಲಸಂಗಮದೇವಾ, ನಿಜವಿಲ್ಲದವನ ಭಕ್ತಿ. ॥೧೨೬॥

೧೨೭

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ ಅಯ್ಯಾ?
ಹೂ ಬಾಡಿದಲ್ಲಿ ಪರಿಮಳವನರಸುವರೆ ಅಯ್ಯಾ?
ಎನ್ನ ತಂದೆ ಕೂಡಲಸಂಗಮದೇವಾ
ತೊರೆ ಇಳಿದಡೆ ಅಂಬಿಗಂಗೇನುಂಟು? ॥೧೨೭॥

೧೨೮

ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು,
ಪುಣ್ಯದ ಪದವಿಯ ಬಯಸಿದಡೆ ಭವಮಾಲೆಯ ಬರವು ತಪ್ಪದು.
ಬೇಡಲು ಹುಟ್ಟಿದ ಪ್ರಾಣಿಗೆ, ಬೇಡಲು ವಿಧಿಯೆ?
ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ?
ಲಿಂಗ–ಉದಯ, ಶರಣ–ವಿಸ್ತಾರವು ಬಯಸಿದಡೊಳವೆ
ಕೂಡಲಸಂಗಮದೇವಾ, ನಿಮ್ಮಲ್ಲಿ ? ॥೧೨೮॥

೧೨೯

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು.
ಕೊಂದಹರೆಂಬುದನರಿಯದೆ ಬೆಂದ ಒಡಲ ಹೊರೆವುತ್ತಲದೆ.
ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು.
ಕೊಂದವರುಳಿವರೆ ಕೂಡಲಸಂಗಮದೇವಾ? ॥೧೨೯॥

೧೩೦

ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕ್ಕೆ ಆಸೆಮಾಡುವಂತೆ,
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು
ಮೇಲೇಸು ಕಾಲ ಬದುಕುವನೊ?
ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವರ
ಕೂಡಲಸಂಗಮದೇವಯ್ಯನೊಲ್ಲ, ಕಾಣಿರಣ್ಣಾ. ॥೧೩೦॥

೧೩೧

ಆರತವಡಗದು, ಕ್ರೋಧ ತೊಲಗದು.
ಕ್ರೂರ ಕುಭಾಷೆ, ಕುಹಕ ಬಿಡದನ್ನಕ್ಕ
ನೀನೆತ್ತಲು ಶಿವನೆತ್ತಲು ಹೋಗತ್ತ ಮರುಳೆ.
ಭವರೋಗವೆಂಬ ತಿಮಿರ ತಿಳಿಯದನ್ನಕ್ಕ
ಕೂಡಲಸಂಗಯ್ಯನೆತ್ತ, ನೀನೆತ್ತ ಮರುಳೆ. ॥೧೩೧॥

೧೩೨

ಹಾವು ತಿಂದವರ ನುಡಿಸಬಹುದು,
ಗರ ಹೊಡೆದವರ ನುಡಿಸಬಹುದು,
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ.
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯಾ,
ಕೂಡಲಸಂಗಮದೇವಾ. ॥೧೩೨॥

೧೩೩

ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ,
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ,
ಕೂಡಲಸಂಗನ ಶರಣರಲ್ಲಿ
ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ. ॥೧೩೩॥

೧೩೪

ಸಾರ, ಸಜ್ಜನರ ಸಂಗ ಲೇಸು ಕಂಡಯ್ಯಾ,
ದೂರ, ದುರ್ಜನರ ಸಂಗವದು ಭಂಗವಯ್ಯಾ.
ಸಂಗವೆರಡುಂಟು: ಒಂದ ಬಿಡು, ಒಂದ ಹಿಡಿ,
ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ. ॥೧೩೪॥

೧೩೫

ಹೊಲೆಯ ಹೊಲಬಿಗನಾದಡೆ,
ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ.
ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ.
ಹೊಲಬುಗೆಡಬೇಡ, ಶಿವ ಶರಣೆನ್ನಿರಯ್ಯಾ.
ನಮ್ಮ ಕೂಡಲಸಂಗನ ಮಹಾಮನೆಯಲು
ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ. ॥೧೩೫॥

೧೩೬

ದೂಷಕನವನೊಬ್ಬ ದೇಶವ ಕೊಟ್ಟಡೆ,
ಆಸೆಮಾಡಿ ಅವನ ಹೊರೆಯಲಿರಬೇಡ.
ಮಾದಾರ ಶಿವಭಕ್ತನಾದಡೆ,
ಆತನ ಹೊರೆಯಲು ಭೃತ್ಯನಾಗಿಪ್ಪುದು ಕರ ಲೇಸಯ್ಯಾ,
ತೊತ್ತಾಗಿಪ್ಪುದು ಕರ ಲೇಸಯ್ಯಾ.
ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟು,
ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ. ॥೧೩೬॥

೧೩೭

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು ನೋಡಾ,
ಲಿಂಗ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು ನೋಡಾ,
ಕೂಡಲಸಂಗನ ಶರಣರು ಅನ್ಯವನರಿಯರಾಗಿ. ॥೧೩೭॥

೧೩೮

ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ?
ಲಿಂಗದೇವನ ಪೂಜಿಸಿ ಕುಲವನರಸುವರೆ, ಅಯ್ಯಾ?
ಕೂಡಲಸಂಗಮದೇವ 'ಭಕ್ತಕಾಯ ಮಮಕಾಯ'ವೆಂದನಾಗಿ. ॥೧೩೮॥

೧೩೯

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತಲೋಕ!
ಶಿವಲೋಕ, ಶಿವಾಚಾರವಯ್ಯಾ.
ಶಿವಭಕ್ತನಿದ್ದ ಠಾವೆ ದೇವಲೋಕ,
ಭಕ್ತನಂಗಳವೆ ವಾರಣಾಸಿ, ಕಾಯವೆ ಕೈಲಾಸ,
ಇದು ಸತ್ಯ, ಕೂಡಲಸಂಗಮದೇವಾ. ॥೧೩೯॥

೧೪೦

ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು ದೃಷ್ಟಿವಾರಿ ಶರಣೆಂದಡೆ,
ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ.
ಮುಟ್ಟಿ ಚರಣಕ್ಕೆರಗಿದಡೆ ತನು[ವ]ಪ್ಪಿದಂತೆ,
ಅಹುದು ಪರುಷ ಮುಟ್ಟಿದಂತೆ.
ಕರ್ತೃ ಕೂಡಲಸಂಗನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ. ॥೧೪೦॥

೧೪೧

ಆರಾರ ಸಂಗವೇನೇನ ಮಾಡದಯ್ಯಾ?
ಕೀಡೆ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ
ಬೇವು, ಬೊಬ್ಬುಲಿ, ತರಿಯ ಗಂಧಂಗಳಾಗವೆ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ? ॥೧೪೧॥

೧೪೨

ಎಂತಹವನಾದಡೇನು, ಲಿಂಗವ ಮುಟ್ಟದವನೆ ಕೀಳುಜಾತಿ.
ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ,
ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ.
ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ. ॥೧೪೨॥

೧೪೩

ಓದಿದಡೇನು, ಕೇಳಿದಡೇನು, ಶಿವಪಥವನರಿಯದನ್ನಕ್ಕ?
ಓದಿತ್ತು ಕಾಣಿರೋ ಶುಕನು, ಶಿವಜ್ಞಾನವನರಿಯದನ್ನಕ್ಕ.
ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು
ಕೂಡಲಸಂಗಮದೇವಾ. ॥೧೪೩॥

೧೪೪

ಹಾವಿನ ಡೊಂಕು ಹುತ್ತಕ್ಕೆ ಸಸಿನ,
ನದಿಯ ಡೊಂಕುಸಮುದ್ರಕ್ಕೆಸಸಿನ,
ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ. ॥೧೪೪॥

೧೪೫

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು,
ಭಕ್ತದೇಹಿಕ ದೇವ ಅನಿಮಿಷನಾಗಿ!
ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು. ॥೧೪೫॥

೧೪೬

ಭಕ್ತಿ ಎಂತಹದಯ್ಯಾ?
ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ?
ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ?
ನಮ್ಮ ಬಲ್ಲಾಳ ಮಾಡಿದಂತಹದಯ್ಯಾ.

ಭಕ್ತಿ ಎಂತಹದಯ್ಯಾ?
ಕೂಡಲಸಂಗಮದೇವಾ,
ನೀ ಬಾಣನ ಬಾಗಿಲ ಕಾದಂತಹದಯ್ಯಾ. ॥೧೪೬॥

೧೪೭

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ,
ಬಲ್ಲಾಳನ ವಧುವಿನೊಡನೆ ಸರಸವನಾಡಿದಂದಿಂದ ಭಯ ಕಾಣಿರಣ್ಣಾ,
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ.
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ.
ಅಘಟಿತಘಟಿತರು, ವಿಪರೀತಚರಿತ್ರರು–
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ. ॥೧೪೭॥

೧೪೮

ದೇವನೊಳ್ಳಿದನೆಂದು ಮುಯ್ಯಾನಲು ಬೇಡ,
ತರಕಟಗಾಡಿದನೊಳ್ಳಿದನೆ?
ಅಳಿಸುವ ನಗಿಸುವನೊಳ್ಳಿದನೆ?
ಬೆಚ್ಚದೆ ಬೆದರದೆ ತೊತ್ತುತನವ ಮಾಡಲು,
ತನ್ನನೀವ ಕೂಡಲಸಂಗಮದೇವ. ॥೧೪೮॥

೧೪೯

ನೆರೆ ನಂಬೋ ನೆರೆ ನಂಬೋ,
ಧರಧುರವಿಲ್ಲದೆ ಸಾಮವೇದಿಗಳಂತೆ,
ನೆರೆ ನಂಬೋ ನೆರೆ ನಂಬೋ,
ದಾಸ–ದುಗ್ಗಳೆಯಂತೆ,
ನೆರೆ ನಂಬೋ ನೆರೆ ನಂಬೋ,
ಸಿರಿಯಾಳ–ಚಂಗಳೆಯಂತೆ,
ನೆರೆ ನಂಬೋ ನೆರೆ ನಂಬೋ,
ಸಿಂಧು–ಬಲ್ಲಾಳನಂತೆ,
ನೆರೆ ನಂಬಿದೆಯಾದಡೆ ತನ್ನನೀವ
ಕೂಡಲಸಂಗಮದೇವ. ॥೧೪೯॥

೧೫೦

ಬಲ್ಲಿದರೊಡನೆ ಬವರವಾದಡೆ ಗೆಲಲುಂಟು, ಸೋಲಲುಂಟು,
ಕ[ಳ]ನೊಳಗೆ ಭಾಷೆ ಪೂರಾಯವಯ್ಯಾ.
ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ
ಧನ ಸವೆದು ಬಡವನಾದಡೆ
ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು. ॥೧೫೦॥

೧೫೧

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು
ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗವು ಕೆಡುವುದು.
ಕೂಡಲಸಂಗಮದೇವಯ್ಯಾ,
ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾಗರೆ? ॥೧೫೧॥

೧೫೨

ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು, ನೋಡಿರೆ!
ಅವ್ವಾ ಚಂಗಳೆ, ನೀನಿದ್ದೇಳು ಕೇರಿಯವರು
ಲಿಂಗದ ನೋಂಪಿಯ ನೋಂತರೆ? ಹೇಳಾ.
ಕೂಡಲಸಂಗಮದೇವಂಗೆ
ಚೀಲಾಳನೆಂಬ ಬಾಯಿನವನಿಕ್ಕಿದರೆ? ಹೇಳಾ. ॥೧೫೨॥

೧೫೩

ಗೀತವ ಬಲ್ಲಾತ ಜಾಣನಲ್ಲ, ಮಾತ ಬಲ್ಲಾತ ಜಾಣನಲ್ಲ.
ಜಾಣನು ಜಾಣನು, ಆತ ಜಾಣನು.
ಲಿಂಗವ ನೆರೆ ನಂಬಿದಾತ ಜಾಣನು,
ಜಂಗಮಕ್ಕೆ ಸವೆಸುವಾತ ಆತ ಜಾಣನು,
ಜವನ ಬಾಯಲು ಬಾಲವ ಕೊಯ್ದುಹೋದಾತ ಆತ ಜಾಣನು,
ನಮ್ಮ ಕೂಡಲಸಂಗನ ಶರಣರನು. ॥೧೫೩॥

೧೫೪

ಲೇಸೆನಿಸಿಕೊಂಡು ಅಯ್ದು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ನಾಲ್ಕು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಮೂರು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಎರಡು ದಿವಸ ಬದುಕಿದಡೇನು?
'ಜೀವಿತಂ ಶಿವಭಕ್ತಾನಾಂ ವರಂ ಪಂಚ ದಿನಾನಿ ಚ
ನಾಜಕಲ್ಪಸಹಸ್ರಾಣಿ ಭಕ್ತಿಹೀನಸ್ಯ ಶಾಂಕರಿ'
ಎಂದುದಾಗಿ ಕೂಡಲಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿವಸ ಬದುಕಿದಡೇನೊ! ॥೧೫೪॥

೧೫೫

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ,
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು
ಕೂಡಲಸಂಗಮದೇವಾ.। ।೧೫೫॥

೧೫೬

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು–
ಸಗಣಕ್ಕೆ ಸಾಸಿರ ಹುಳು, ಹುಟ್ಟವೆ, ದೇವಾ?
ಕಾಡ ಮೃಗವೊಂದಾಗಿರಲಾಗದೆ, ದೇವಾ?
ಊರ ಮೃಗವೊಂದಾಗಿರಲಾಗದೆ, ಹರನೆ?
ನಮ್ಮ ಕೂಡಲಸಂಗನ ಶರಣರಿಲ್ಲದ ಊರು, ದೇಶ–
ವನವಾಸ, ನರವಿಂಧ್ಯ ಕಾಣಿರಣ್ಣಾ. ॥೧೫೬॥

೧೫೭

ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿವಾರಿ ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?

ಕರ್ತುರ್ ಕೂಡಲಸಂಗಾ,
ನಿಮ್ಮ ತೊತ್ತುಗೆಲಸ ಮಾಡದವನ ಸಂಸಾರವೇನವನ? ॥೧೫೭॥

೧೫೮

ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ,
ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ.
ಮೊಲನಿಂದ ಕರಕಷ್ಟ ನರನ ಬಾಳುವೆ,
ಸಲೆ ನಂಬೊ ನಮ್ಮ ಕೂಡಲಸಂಗಮದೇವನ. ॥೧೫೮॥

೧೫೯

ಉತುಪತಿ: ಶುಕ್ಲ–ಶೋಣಿತದಿಂದಾದ ಲಜ್ಜೆ ಸಾಲದೆ?
ಮತ್ತೆ ದುರಿತಂಗಳ ಹೆರುವ ಹೇಗತನವೇಕಯ್ಯಾ?
ಮೃತ್ಯುವಿನ ಬಾಯಿಗೆ ಒಳಗಾಗಲೇಕೆ?
ಒತ್ತೊತ್ತೆಯ ಜನನವ ಗೆಲುವಡೆ ಕರ್ತನ ಪೂಜಿಸು
ನಮ್ಮ ಕೂಡಲಸಂಗಮದೇವನ. ॥೧೫೯॥

೧೬೦

ಮನವೆ ಸರ್ಪ, ತನುವೆ ಹೇಳಿಗೆ:
ಹಾವಿನೊಡತಣ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದರಿಯೆ.
ಇನ್ನಾವಾಗ ತಿಂದಹುದೆಂದರಿಯೆ.
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ
ಅದೆ ಗಾರುಡ, ಕೂಡಲಸಂಗಮದೇವಾ. ॥೧೬೦॥

೧೬೧

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ,
ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,

ಮುಪ್ಪಿಂದೊಪ್ಪವಳಿಯದ ಮುನ್ನ,
ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವನ. ॥೧೬೧॥

೧೬೨
ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟುಕೊಟ್ಟು
ರಕ್ಷಿತವ ಮಾಡುವ ಭರವ ನೋಡಾ.
ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ
ಬದುಕೋ, ಕಾಯ ನಿಶ್ಚೈಸದೆ. ॥೧೬೨॥

೧೬೩
ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ,
ಎಂದೆಂದೂ ಅಳಿಯೆನೆಂದು
ಗುಡಿಗಟ್ಟಿದೆಯಲ್ಲಾ, ನಿನ್ನ ಮನದಲ್ಲಿ.
ಮಾಯಾಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ
ಕೂಡಲಸಂಗಮದೇವನಲ್ಲದೆ? ॥೧೬೩॥

೧೬೪
ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ. ಇದ ನಚ್ಚಿ ಕೆಡಬೇಡ.
ಸಿರಿಯೆಂಬುದ ಮರೆದು ಪೂಜಿಸು
ನಮ್ಮ ಕೂಡಲಸಂಗಮದೇವನ. ॥೧೬೪॥

೧೬೫
ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಳ, ಬೆಳುದಿಂಗಳು, ಸಿರಿ ಸ್ಥಿರವಲ್ಲ. ಕೇಡಿಲ್ಲದ ಪದವಿ
ಕೂಡಲಸಂಗಮದೇವಯ್ಯನ ಮರೆಯದೆ ಪೂಜಿಸು. ॥೧೬೫॥

೧೬೬
ಎಂತಕ್ಕೆ ಎಂತಕ್ಕೆ
ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು ಓ!

ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣು ಓ!
ಮರಳಿ ಭವಕ್ಕೆ ಬಾಹೆ, ಬಾರದಿಹೆ.
ಕರ್ತು ಕೂಡಲಸಂಗಂಗೆ ಶರಣೆನ್ನು ಓ! ॥೧೬೬॥

೧೬೭

ಶಕುನವೆಂದೆಂಬೆ, ಅವಶಕುನವೆಂದೆಂಬೆ.
ನಿಮ್ಮವರು ಅಳಲಿಕೆ ಅಂದೇಕೆ ಬಂದೆ?
ನಿಮ್ಮವರು ಅಳಲಿಕೆ ಇಂದೇಕೆ ಹೋದೆ?
ನೀ ಹೋಹಾಗಳಕ್ಕೆ! ಬಾಹಾಗಳಕ್ಕೆ!
ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ. ॥೧೬೭॥

೧೬೮

ನಿಮಿಷದ ನಿಮಿಷಂ ಭೋ,
ಕ್ಷಣದೊಳಗರ್ಧಂ ಭೋ,
ಕಣ್ಣುಮುಚ್ಚಿ ಬಿಚ್ಚುವಿನಿಸು ಬೇಗಂ ಭೋ,
ಸಂಸಾರದಾಗುಂ ಭೋ,
ಸಂಸಾರದ ಹೋಗುಂ ಭೋ,
ಸಂಸಾರಂ ಭೋ :
ಕೂಡಲಸಂಗಮದೇವ ಮಾಡಿದ
ಮಾಯಂ ಭೋ, ಅಭ್ರಚ್ಛಾಯಂ ಭೋ. ॥೧೬೮॥

೧೬೯

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು.
ಹರಿದು ಹೆದ್ದೊರೆಯು, ಕೆರೆ ತುಂಬಿದಂತಯ್ಯಾ,
ನೆರೆಯದ ವಸ್ತು ನೆರೆವುದು ನೋಡಯ್ಯಾ,
ಅರಸು ಪರಿವಾರ ಕೈವಾರ ನೋಡಯ್ಯಾ.
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯ ಕಲ್ಲುಕೊಂಡಂತೆ,
ಕೂಡಲಸಂಗಮದೇವಾ. ॥೧೬೯॥

೧೭೦

ಹೊಯ್ದಡೆ ಹೊಯ್ಗಳು ಕೈಯ ಮೇಲೆ,
ಬೈದಡೆ ಬೈಗಳು ಕೈಯ ಮೇಲೆ.
ಹಿಂದಣ ಜನನವೇನಾದಡಾಗಲಿ,
ಇಂದಿನ ಭೋಗವು ಕೈಯಮೇಲೆ.
ಕೂಡಲಸಂಗಮದೇವಯ್ಯಾ ನಿಮ್ಮ ಪೂಜಿಸಿದ ಫಲ ಕೈಯ ಮೇಲೆ. ॥೧೭೦॥

೧೭೧

ಆದ್ಯರ ವಚನ ಪರುಷ ಕಂಡಣ್ಣಾ;
ಸದಾಶಿವನೆಂಬ ಲಿಂಗ[ವು] ನಂಬುವುದು,
ನಂಬಲೊಡನೆ ನೀ ವಿಜಯಿ ಕಂಡಣ್ಣಾ.
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲಸಂಗನ ಶರಣರ ವಚನ ಬೇವ ಸವಿದಂತೆ. ॥೧೭೧॥

೧೭೨

ಹೊತ್ತಾರೆ ಎದ್ದು, ಅಗ್ಘವಣಿ ಪತ್ರೆಯ ತಂದು,
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ. ॥೧೭೨॥

೧೭೩

ಅಚ್ಚಿಗವೇಕಯ್ಯಾ ಸಂಸಾರದೊಡನೆ?
ನಿಚ್ಚನಿಚ್ಚ ಶಿವರಾತ್ರಿಯ ಮಾಡುವುದು,
ಬೇಗ ಬೇಗ ಅರ್ಚನೆ–ಪೂಜನೆಯ ಮಾಡುವುದು,
ಕೂಡಲಸಂಗನ ಕೂಡುವುದು. ॥೧೭೩॥

೧೭೪

ಅಂದು ಇಂದು ಮತ್ತೊಂದೆನಬೇಡ,
ದಿನವಿಂದೇ 'ಶಿವಶರಣೆಂ'ಬವಂಗೆ,

ದಿನವಿಂದೇ 'ಹರಶರಣೆಂ'ಬವಂಗೆ,
ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ. ॥೧೭೪॥

೧೭೫

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು,
ಮಾಡಿದ ಪೂಜೆಯ ನೋಡುವುದಯ್ಯಾ.
ಶಿವತತ್ವಗೀತವ ಪಾಡುವುದು,
ಶಿವನ ಮುಂದೆ ನಲಿದಾಡುವುದಯ್ಯಾ.
ಭಕ್ತಿಸಂಭಾಷಣೆಯ ಮಾಡುವುದು,
ನಮ್ಮ ಕೂಡಲಸಂಗನ ಕೂಡುವುದು. ॥೧೭೫॥

೧೭೬

ಆಳಿಗೊಂಡಹರೆಂದು ಅಂಜಲದೇಕೆ?
ನಾಸ್ತಿಕವಾಡಿಹರೆಂದು ನಾಚಲದೇಕೆ?
ಆರಾದಡಾಗಲಿ ಶ್ರೀಮಹಾದೇವಂಗೆ ಶರಣೆನ್ನಿ.
ಏನೂ ಅರಿಯೆನೆಂದು ಮೋನಗೊಂಡಿರಬೇಡ.
ಕೂಡಲಸಂಗಮದೇವರ ಮುಂದೆ ದಂದಣ ದತ್ತಣಯೆನ್ನಿ ॥೧೭೬॥

೧೭೭

ಸುಪ್ರಭಾತ ಸಮಯದಲ್ಲಿ ಅ
ರ್ತಿಯಲ್ಲಿ ಲಿಂಗವ ನೆನೆದಡೆ,
ತಪ್ಪುವುವು ಅಪಮೃತ್ಯು,
ಕಾಲಕರ್ಮಂಗಳಯ್ಯಾ.
ದೇವಪೂಜೆಯ ಮಾಟ,
ದುರಿತಬಂಧನದೋಟ.
ಶಂಭು ನಿಮ್ಮಯ ನೋಟ, ಹಿಂಗದ ಕಣ್ಬೇಟ.
ಸದಾ ಸನ್ನಿಹಿತನಾಗಿ ಶರಣೆಂಬುದು, ನಂಬುವುದು.
ಜಂಗಮಾರ್ಚನೆಯ ಮಾಟ,
ಕೂಡಲಸಂಗನ ಕೂಟ. ॥೧೭೭॥

೧೭೮

ಅಂಕ ಕಳನೇರಿ ಕೈಮರೆದಿರ್ದಡೆ
ಮಾರಂಕ ಬಂದಿರಿವುದ ಮಾಬನೆ?
ನಿಮ್ಮ ನೆನಹ ಮನ ಮರೆದಿರ್ದಡೆ
ಮಾಯೆ ತನುವನಂಡಲೆವುದ ಮಾಬುದೆ?
ಕೂಡಲಸಂಗಯ್ಯನ ನೆನೆದಡೆ,
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ. ॥೧೭೮॥

೧೭೯

ಆಡಿಹರಯ್ಯಾ ಹಾಡಿಹರಯ್ಯಾ ಮನಬಂದ ಪರಿಯಲಿ,
ಶಿವಶರಣರ ಮುಂದೆ ಆಡಿಹರಯ್ಯಾ ಹಾಡಿಹರಯ್ಯಾ.
ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತನೀವ,
ನಮ್ಮ ಕೂಡಲಸಂಗಮದೇವ. ॥೧೭೯॥

೧೮೦

ಹೊಲಬುಗೊಂಡರಸಬೇಡ, ಬಿಲಿತು ತರಬೇಡ,
ಒಲಿದೊಮ್ಮೆ ಶಿವಶರಣೆನ್ನಿರಯ್ಯಾ.
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ,
ಕೂಡಲಸಂಗಮದೇವ ಭಕ್ತಿಲಂಪಟನಾಗಿ. ॥೧೮೦॥

೧೮೧

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ.
ನಾದವ ಮಾಡಿದ ರಾವಳಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ,
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ. ॥೧೮೧॥

೧೮೨

ಹಸಿವಾದಡುಂಬುದನು,
ಸತಿಯ ಸಂಭೋಗವನು
ಆನಾಗಿ ನೀ ಮಾಡೆಂಬವರುಂಟೆ?
ಮಾಡುವುದು, ಮಾಡುವುದು ಮನಮುಟ್ಟಿ,
ಮಾಡುವುದು, ಮಾಡುವುದು ತನುಮುಟ್ಟಿ,
ತನುಮುಟ್ಟಿ ಮನಮುಟ್ಟದಿರ್ದಡೆ
ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ. ॥೧೮೨॥

೧೮೩

ತನ್ನಾಶ್ರಯದ ರತಿಸುಖವನು,
ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತಬಲ್ಲರು,
ಕೂಡಲಸಂಗಮದೇವಾ? ॥೧೮೩॥

೧೮೪

ಬಂಡಿ ತುಂಬ ಪತ್ರೆಯ ತಂದು ಕಂಡ ಕಂಡಲ್ಲಿ ಮಜ್ಜನಕ್ಕೆರೆವಿರಿ.
ತಾಪತ್ರಯವ ಕಳೆವರು ಪೂಜಿಸಿ,
ತಾಪತ್ರಯವ ಲಿಂಗನೊಲ್ಲ.
ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ? ॥೧೮೪॥

೧೮೫

ಭಕ್ತನಾಗಿ ಲಿಂಗ ಜಂಗಮವ ಪೂಜಿಸಬೇಕು.
ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ?
ಸ್ವಾಮಿಭೃತ್ಯಸಂಬಂಧವು ಎಂತಯ್ಯಾ ಪೂರೈಸುವುದು?
ಕೂಡಲಸಂಗಮದೇವಾ, ಕಣ್ಣಕಟ್ಟಿ ಕನ್ನಡಿಯ ತೋರುವಂತೆ! ॥೧೮೫॥

೧೮೬

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋರಿರಯ್ಯಾ.
ಅಂಜಲುಬೇಡ ಕಂಡಾ,
ಮನದಲ್ಲಿ ಸಂದೇಹವ ಮಾಡದಿರಾ.
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ
ತೋರುವ ಕೂಡಲಸಂಗಯ್ಯ. ॥೧೮೬॥

೧೮೭

ಕನ್ನಡಿಯ ನೋಡುವ ಅಣ್ಣಗಳಿರಾ,
ಜಂಗಮವ ನೋಡಿರೆ,
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ.
'ಸ್ಥಾವರ ಜಂಗಮ ಒಂದೆ' ಎಂದುದು ಕೂಡಲಸಂಗನ ವಚನ. ॥೧೮೭॥

೧೮೮

ಗೀತವ ಹಾಡಿದಡೇನು?
ಶಾಸ್ತ್ರ-ಪುರಾಣವ ಕೇಳಿದಡೇನು?
ವೇದವೇದಾಂತವನೋದಿದಡೇನು?
ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು
ಎಲ್ಲರಲ್ಲಿ [ಪ್ರಾ]ಜ್ಞರಾದಡೇನು?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ. ॥೧೮೮॥

೧೮೯

ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇಬೇಕು,
ದಕ್ಕ ನುಂಗಿದಂತೆ ಬೆರೆತುಕೊಂಡಿರಬೇಡ.
ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದಡೆ,
ಬೇಡಿದ ಪದವಿಯನೀವ ಕೂಡಲಸಂಗಮದೇವ. ॥೧೮೯॥

೧೯೦

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು,
ವರ್ಮವನರಿಯದ ಮಾಟ ಸಯಿದಾನದ ಕೇಡು.

ಬಂದ ಸಮಯೋಚಿತವನರಿಯದಿದ್ದಡೆ
ನಿಂದಿರಲೊಲ್ಲ ಕೂಡಲಸಂಗಮದೇವ. ॥೧೯೦॥

೧೯೧

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ?
ನಮ್ಮ ಶರಣರಿಗುರಿ[ಯ]ರಗಾಗಿ ಕರಗದನ್ನಕ್ಕ,
ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ.
ಕೂಡಲಸಂಗಮದೇವಾ,
ಬರಿಯ ಮಾತಿನ ಮಾಲೆಯಲೇನಹುದು? ॥೧೯೧॥

೧೯೨

ಲಾಂಛನ ಹೊರಗೆ ಬಂದಿರಲು,
ಒಳಗೆ ಲಿಂಗಾರ್ಚನೆಯೆಂತಯ್ಯಾ?
ಮುಖದಲ್ಲಿ ಕಟ್ಟಿದ ಕನ್ನಡಿ,
ಮೂಗಿನ ಮೇಲಣ ಕತ್ತಿ!
ಸಮಯಾಚಾರವೆಂತುಟಯ್ಯಾ?
ಕೂಡಲಸಂಗಮದೇವಯ್ಯಾ. ॥೧೯೨॥

೧೯೩

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ;
ಅದು ಬೇಡದು, ಬೆಸಗೊಳ್ಳದು,
ತಂದೊಮ್ಮೆ ನೀಡಬಹುದು.
ಕಾಡುವ ಬೇಡುವ ಜಂಗಮ ಬಂದಡೆ,
ನೀಡಲುಬಾರದು ಕೂಡಲಸಂಗಮದೇವಾ. ॥೧೯೩॥

೧೯೪

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.
ಉಂಬ ಜಂಗಮ ಬಂದಡೆ ನಡೆಯೆಂಬರು,

ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ ॥೧೯೪॥

೧೯೫

ನಾಗಂಗೆ ಹೊಸತನಿಕ್ಕಿಹೆವೆಂಬರು,
ನಾಗ ಬಂದಡೆ ಕೋಲ [ತ]ಳೆದುಕೊಂಬರು.
ಆಗದಯ್ಯಾ, ಜಂಗಮಲಿಂಗವೆಂಬ ಶಬ್ದವಾಗದಯ್ಯಾ,
ಕೂಡಲಸಂಗಮದೇವನಲ್ಲಿ ಸಿಂಧುಬಲ್ಲಾಳಂಗಲ್ಲದೆ ಆಗದಯ್ಯಾ ॥೧೯೫॥

೧೯೬

ಎರೆದಡೆ ನನೆಯದು, ಮರೆದಡೆ ಬಾಡದು,
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ.
ಕೂಡಲಸಂಗಮದೇವಾ, ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು. ॥೧೯೬॥

೧೯೭

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ,
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ,
ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ.
'ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ತು ಜಂಗಮಃ
ಅಹಂ ತುಷ್ಟೋಽಸ್ಮ್ಯುಮಾದೇವಿ ಉಭಯೋರ್ಲಿಂಗಜಂಗಮಾತ್'
ಇದು ಕಾರಣ ಕೂಡಲಸಂಗಮದೇವರಲ್ಲಿ
ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿ. ॥೧೯೭॥

೧೯೮

ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು, ಕಳ್ಳನಾಣ್ಯವ ಸಲಲೀಯರಯ್ಯಾ.
ಭಕ್ತಿಯೆಂಬ ಭಂಡಕ್ಕೆ ಜಂಗಮವೆ ಸುಂಕಿಗ
ಕೂಡಲಸಂಗಮದೇವಾ. ॥೧೯೮॥

೧೯೯

ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲಾ ಕೇಳಿರಣ್ಣಾ:
ಹಾಗದ ಕೆರಹ ಹೊರಗೆ ಕಳೆದು,
ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ.
ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು.
ಕೂಡಸಂಗನ ಶರಣರಿಗೆ ಸವೆಸಲೇಬೇಕು. ॥೧೯೯॥

೨೦೦

ಉಂಡುದು ಬಂದಿತ್ತೆಂಬ ಸಂದೇಹಿ ಮಾನವ ನೀ ಕೇಳಾ:
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ,
ಉಂಡುದು ಆಗಳೆ ಅಪೇಯವಾಯಿತ್ತು.
ಆ ಉಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಆನು ಮರುಗುವೆನಯ್ಯಾ, ಕೂಡಲಸಂಗಮದೇವಯ್ಯಾ. ॥೨೦೦॥

೨೦೧

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ;
ಆಯುಷ್ಯ ತೀರಿ ಪ್ರಳಯ ಬಂದಡೆ ಆ ಅರ್ಥವನುಂಬುವರಿಲ್ಲ.
ನೆಲನನಗೆದು ಮಡುಗದಿರಾ, ನೆಲ ನುಂಗಿದಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದಡೆ, ಆ ಮಡದಿಯ ಕೃತಕ ಬೇರೆ;
ನಿನ್ನ ಒಡಲು ಕೆಡೆಯಲು ಮತ್ತೊಬ್ಬನಲ್ಲಿಗೆ ಅಡಕದೆ ಮಾಬಳೆ?
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ,
ಕೂಡಲಸಂಗನ ಶರಣರಿಗೆ ಒಡನೆ ಸವೆಸುವುದು. ॥೨೦೧॥

೨೦೨

ತನು ಮನ ಧನವ ಹಿಂದಿಕ್ಕಿಕೊಂಡು,
ಮಾತಿನ ಬಣಬೆಯ ಮುಂದಿಟ್ಟುಕೊಂಡು,
ಒಳಲೊಟ್ಟೆಯ ನುಡಿವವರು ನೀವೆಲ್ಲರೂ ಕೇಳಿರೆ.

ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ
ಗುರಿಯ ತಾಗಬಲ್ಲುದೆ?
ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ್ಕ
ಕೂಡಲಸಂಗಮದೇವನೆಂತೊಲಿವನಯ್ಯಾ? ॥೨೦೨॥

೨೦೩

ತನು–ಮನ–ಧನವೆಂಬ ಮೂರು ಕತ್ತಿಯಿವೆ,
ಸಲೆ ಮೂಗಿನ ಮೇಲೆ ಅಯ್ಯಾ,
ಲಿಂಗ ಜಂಗಮಕ್ಕೆ ಮಾಡಿಹೆನೆಂಬವಂಗೆ.
ಇದು ಕಾರಣ, ಕೂಡಲಸಂಗನ ಶರಣರಿಗೆ ಅಂಜಲೇಬೇಕು. ॥೨೦೩॥

೨೦೪

ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು,
ತನುಮನಧನವ ಸವೆಸಲೇಬೇಕು.
ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು. ॥೨೦೪॥

೨೦೫

ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ,
ಹಲವು ಪರಿಯಲಿ ವಿಭೂತಿಯ ಹೂಸಿ,
ಗಣಾಡಂಬರದ ನಡುವೆ ನಲಿನಲಿದಾಡಿ,
ಉಂಡು, ತಂಬುಲಗೊಂಡು ಹೋಹುದಲ್ಲ.
ತನು ಮನ ಧನವ ಸಮರ್ಪಿಸದವರ
ಕೂಡಸಂಗಮದೇವರೆಂತೊಲಿವ? ॥೨೦೫॥

೨೦೬

ತನುವ ಕೊಟ್ಟು ಗುರುವನೊಲಿಸಬೇಕು,
ಮನವ ಕೊಟ್ಟು ಲಿಂಗವನೊಲಿಸಬೇಕು,
ಧನವ ಕೊಟ್ಟು ಜಂಗಮವನೊಲಿಸಬೇಕು.
ಈ ತ್ರಿವಿಧವ ಹೊರಗು ಮಾಡಿ,

ಹರೆಯ ಹೊಯಿಸಿ,
ಕುರುಹ ಪೂಜಿಸುವ ಗೊರವರ ಮೆಚ್ಚ
ಕೂಡಲಸಂಗಮದೇವ. ॥೨೦೬॥

೨೦೭

ಆಡಿದಡೇನು, ಹಾಡಿದಡೇನು, ಓದಿದಡೇನು,
ತ್ರಿವಿಧದಾಸೋಹವಿಲ್ಲದನ್ನಕ್ಕರ?
ಆಡದೆ ನವಿಲು, ಹಾಡದೆ ತಂತಿ, ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ. ॥೨೦೭॥

೨೦೮

ಶಾಸ್ತ್ರಘನವೆಂಬೆನೆ?
ಕರ್ಮವ ಭಜಿಸುತ್ತಿದೆ.
ವೇದ ಘನವೆಂಬೆನೆ?
ಪ್ರಾಣಿವಧೆಯ ಹೇಳುತ್ತಿದೆ.
ಸ್ಮೃತಿ ಘನವೆಂಬೆನೆ?
ಮುಂದಿಟ್ಟು ಅರಸುತ್ತಿದೆ.
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧದಾಸೋಹದಲಲ್ಲದೆ ಕಾಣಬಾರದು
ಕೂಡಲಸಂಗಮದೇವನ. ॥೨೦೮॥

೨೦೯

ವೇದದಂತುಟಲ್ಲ, ಶಾಸ್ತ್ರದಂತುಟಲ್ಲ.
ಗೀತಮಾತಿನಂತುಟಲ್ಲ ಕೇಳಿಯ್ಯಾ.
ಮಾತಿನ ಮಾತಿನ ಕವುಳುಗೋಲ ಶ್ರವದಲ್ಲಿ ಸತ್ತವರೊಳರೆ ಅಯ್ಯಾ?
ದಿಟದಲಗಿನ ಕಾಳೆಗವಿತ್ತಲಿದ್ದುದೆ
ಕೂಡಲಸಂಗನ ಶರಣರು ಬಂದಲ್ಲಿ. ॥೨೦೯॥

೨೧೦

ಮಾತಿನ ಮಾತಿನಲಪ್ಪುದೆ ಭಕ್ತಿ?
ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ ಅಪ್ಪುದೆ ಭಕ್ತಿ?
ಕೂಡಲಸಂಗಮದೇವನೆಲುದೋರೆ ಸರಸವಾಡುವನು:
ಸೈರಿಸದನ್ನಕ್ಕ ಅಪ್ಪುದೆ ಭಕ್ತಿ? ॥೨೧೦॥

೨೧೧

ಹಾವಸೆಗಲ್ಲ ಮೆಟ್ಟಿ ಹರಿದು,
ಗೊತ್ತ ಮುಟ್ಟಬಾರದಯ್ಯಾ,
ನುಡಿದಂತೆ ನಡೆಯಲು ಬಾರದಯ್ಯಾ.
ಕೂಡಲಸಂಗನ ಶರಣರ ಭಕ್ತಿ,
ಬಾಳ ಬಾಯಧಾರೆ. ॥೨೧೧॥

೨೧೨

ಭಕ್ತಿಯೆಂಬುದ ಮಾಡಬಾರದು,
ಕರಗಸದಂತೆ ಹೋಗುತ್ತ ಕೊರೆವುದು, ಬರುತ್ತ ಕೊಯ್ವುದು.
ಘಟಸರ್ಪನಲ್ಲಿ ಕೈದುಡುಕಿದಡೆ ಹಿಡಿವುದ ಮಾಬುದೆ
ಕೂಡಲಸಂಗಮದೇವಾ? ॥೨೧೨॥

೨೧೩

ಹಲವುಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು
ಒಂದು ಮಿಡುಕುರಲ್ಲಿ ಬೇವಂತೆ,
ಸಲೆ ನೆಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ
ಒಂದನಾಯತದಿಂದ ಕೆಡುವುದು.
[ಸು]ಧರ್ಮದಲ್ಲಿ ಗಳಿಸಿದ ಪಿತನ ಧನವ
ಅಧರ್ಮದಲ್ಲಿ ಕೆಡಿಸುವ ಸುತನಂತೆ–
ಶಿವನ ಸೊಮ್ಮ ಶಿವಂಗೆ ಮಾಡದೆ, ಅನ್ಯಕ್ಕೆ ಮಾಡಿದಡೆ,
ತನ್ನ ಭಕ್ತಿ ತನ್ನನೆ ಕೆಡಿಸುವುದು ಕೂಡಲಸಂಗಮದೇವಾ! ॥೨೧೩॥

೨೧೪

ನಚ್ಚಿದೆನೆಂದಡೆ ಮಚ್ಚಿದೆನೆಂದಡೆ,
ಸಲೆ ಮಾರುವೋದೆನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು.
ಮನವನಲ್ಲಾಡಿಸಿ ನೋಡುವೆ ನೀನು.
ಧನವನಲ್ಲಾಡಿಸಿ ನೋಡುವೆ ನೀನು.
ಇವಕ್ಕಂಜದಿದ್ದಡೆ ಭಕ್ತಿಕಂಪಿತ [ನೀನು] ಕೂಡಲಸಂಗಮದೇವಾ. ॥೨೧೪॥

೨೧೫

ಕವುಳುಗೋಲ ಹಿಡಿದು ಶ್ರವವ ಮಾಡಬಹುದಲ್ಲದೆ
ಕಳನೇರಿ ಕಾದುವುದರಿದು ನೋಡಾ.
ಬಣ್ಣವಿಟ್ಟು ನುಡಿದಲ್ಲಿ ಫಲವೇನು?
ಚಿನ್ನಗೆಯ್ಯುವನ್ನಾಡುವವನಂತೆ.
ಬಂದ ಸಮಯವನರಿತು, ಇದ್ದುದ ವಂಚಿಸದಿದ್ದಡೆ
ಕೂಡಸಂಗಮದೇವನೊಲಿದು ಸಲಹುವ. ॥೨೧೫॥

೨೧೬

ಧನಕ್ಕೆ ಮನವನೊಡ್ಡಿದಡೇನು?
ಮನಕ್ಕೆ ಧನವನೊಡ್ಡಿದಡೇನು?
ತನು, ಮನ, ಧನವ ಮೀರಿ ಮಾತಾಡಬಲ್ಲಡೆ
ಆತ ನಿಸ್ಸೀಮನು, ಆತ ನಿಜೈಕ್ಯನು.
ತನು ಮನ ಧನವನುವಾದಡೆ,
ಕೂಡಲಸಂಗಮದೇವನೊಲಿವ. ॥೨೧೬॥

೨೧೭

ಅರ್ಥ ಪ್ರಾಣ ಅಭಿಮಾನದಲ್ಲಿ ವಂಚನೆಯಿಲ್ಲದಿಹುದೆ ಭಕ್ತಿ,
ಹೆಚ್ಚು ಕುಂದಿಲ್ಲದಿಹುದೆ ಸಮಯಾಚಾರ,
ಜಂಗಮವೆ ಲಿಂಗವೆಂಬುದಕ್ಕೆ ಏನು ಗುಣ?
ಮನದ ಲಂಪಟತನ ಹಿಂಗದಾಗಿ.

ಒಡೆಯರ ಬರವಿಂಗೆ ಕುನ್ನಿ ಬಾಲವ ಬಡಿದಡೆ
ವೆಚ್ಚವೇನು ಹತ್ತುವುದು ಕೂಡಲಸಂಗಮದೇವಾ? ॥೨೧೭॥

೨೧೮

ಹಸಿದು ಬಂದ ಗಂಡಂಗೆ ಉಣಲಿಕ್ಕದೆ,
ಬಡವಾದನೆಂದು ಮರುಗುವ ಸತಿಯ ಸ್ನೇಹದಂತೆ
ಬಂದುದನರಿಯಳು, ಇದ್ದುದ ಸವಿಸಳು.
ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ
ಕೂಡಲಸಂಗಮದೇವಾ. ॥೨೧೮॥

೨೧೯

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು,
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರ ಕಠಿಣವಾಯಿತ್ತು.
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು,
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು.
ಇದು ಕಾರಣ
ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ. ॥೨೧೯॥

೨೨೦

ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ :
ಮೊದಲದಿನ ಹಣೆಮುಟ್ಟಿ, ಮರುದಿನ ಕೈಮುಟ್ಟಿ,
ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ.
ಹಿಡಿದುದ ಬಿಡದಿದ್ದಡೆ ಕಡೆಗೆ ಚಾಚುವ,
ಅಲ್ಲದಿದ್ದಡೆ ನಡುನೀರಲದ್ದುವ ನಮ್ಮ ಕೂಡಲಸಂಗಮದೇವ. ॥೨೨೦॥

೨೨೧

ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗೂಡಾರವಕ್ಕು,
ಬಿದಿರಲ್ಲಿ ಸಕಲಸಂಪದವೆಲ್ಲವು,
ಬಿದಿರದವರ ಮೆಚ್ಚ ಕೂಡಲಸಂಗಮದೇವ. ॥೨೨೧॥

೨೨೨

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ.
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದಪುರಾತರಿಗೆ ಇಲ್ಲೆಂಬ,
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ,
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಕೂಡಲಸಂಗಮದೇವಾ? ॥೨೨೨॥

೨೨೩

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ,
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ.
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ. ॥೨೨೩॥

೨೨೪

ಬಲಿಯ ಭೂಮಿ, ಕರ್ಣನ ಕವಚ, ಖಚರನ ಆಸ್ಥಿ,
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ,
'ಶಿವಭಕ್ತಿಮತಿಕ್ರಮ್ಯ ಯದ್ದಾನಂ ಚ ವಿಧೀಯತೇ
ನಿಷ್ಫಲಂ ತು ಭವೇದ್ದಾನಂ ರೌರವಂ ನರಕಂ ವ್ರಜೇತ್,
ಇಂತೆಂದುದಾಗಿ, ಕೂಡಲಸಂಗನ ಶರಣರನರಿಯದೆ
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ. ॥೨೨೪॥

೨೨೫

ಹತ್ತು ಮತ್ತರ ಭೂಮಿ, ಬತ್ತದ ಹಯನು, ನಂದಾದೀವಿಗೆಯ
ನಡೆಸಿಹೆವೆಂಬವರ ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ,
ಜರಾಯುಜವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೊ?

ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು ಎಂಬವನ ಬಾಯಲ್ಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಬನೆ ಕೂಡಲಸಂಗಮದೇವ? ॥೨೨೫॥

೨೨೬

ಅನವರತ ಮಾಡಿಹೆನೆಂದು ಉಪ್ಪರ ಗುಡಿಯ ಕಟ್ಟಿ ಮಾಡುವ
ಭಕ್ತನ ಮನೆಯದು ಲಂದಣಗಿತ್ತಿಯ ಮನೆ.
ಸರ್ವಜೀವದಯಾಪಾರಿಯೆಂದು ಭೂತದಯಕಿಕ್ಕುವನ ಮನೆ
ಸಯಿದಾನದ ಕೇಡು.
ಸೂಳೆಯ ಮಗ ಮಾಳವ ಮಾಡಿದಡೆ
ತಾಯ ಹೆಸರಾಯಿತ್ತು, ತಂದೆಯ ಹೆಸರಿಲ್ಲ
ಕೂಡಲಸಂಗಮದೇವಾ. ॥೨೨೬॥

೨೨೭

ಕಾಲಾಗ್ನಿರುದ್ರನ ಮೇಳಾಪವನರಿಯದವರು
ಕಾಳುಬೇಳೆನುತಿಪ್ಪರಯ್ಯಾ.
ಕಾನನದಡವಿಯಲ್ಲಿ ಕಿಚ್ಚು [ಬೇ]ಳುವೆಯಾಗಿ
ಮಿಕ್ಕಡೊರಲುವ ಬಳ್ಳುವಿನಂತೆ ಇಪ್ಪರಯ್ಯಾ,
ಮನುಜರು ನರವಿಂಧ್ಯದೊಳಗೆ.
ತತ್ಕಾಲಪ್ರೇಮವನರಿಯದೆ ವಿಭವಕ್ಕೆ ಮಾಡಿದ ಭಕ್ತಿ
ಇರುಳು ಸತ್ತಿಗೆಯ ಹಿಡಿಯಿಸಿಕೊಂಬಂತೆ ಕೂಡಲಸಂಗಮದೇವಾ. ॥೨೨೭॥

೨೨೮

ಹರ[ಹಿ] ಮಾಡುವುದು ಹರ[ವಿ]ಕೆಯ ಕೇಡು,
ನೆರಹಿ ಮಾಡುವುದು ಡಂಬಿನ ಭಕ್ತಿ.
ಹರ[ಹ]ಬೇಡ, ನೆರಹಬೇಡ
ಬಂದ ಬರವನರಿತು ಮಾಡಬಲ್ಲಡೆ ಕೂಡಿಕೊಂಡಿಪ್ಪ
ನಮ್ಮ ಕೂಡಲಸಂಗಮದೇವ. ॥೨೨೮॥

೨೨೯

ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ,
ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ.
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ.
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ, ಕಡಬಡ್ಡಿಯ ಕೊಡಲಾಗದು. ॥೨೨೯॥

೨೩೦

ಓಡಲಾರದ ಮೃಗವು ಸೊಣಗಂಗೆ ಮಾಂಸವನೀವಂತೆ
ಮಾಡಲಾಗದು ಭಕ್ತನು, ಕೊಳಲಾಗದು ಜಂಗಮ,
ಹಿರಿಯರು ನರಮಾಂಸವ ಭುಂಜಿಸುವರೆ?
ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತನು,
ಮಾಡಿಸಿಕೊಳ್ಳಬೇಕು ಜಂಗಮ,
ಕೂಡಲಸಂಗಮದೇವಾ. ॥೨೩೦॥

೨೩೧

ಬಂದುದ ಕೈಕೊಳ್ಳಬಲ್ಲಡೆ ನೇಮ,
ಇದ್ದುದ ವಂಚನೆಯ ಮಾಡದಿದ್ದಡೆ ನೇಮ.
ನಡೆದು ತಪ್ಪದಿದ್ದಡೆ ಅದು ನೇಮ,
ನುಡಿದು ಹುಸಿಯದಿದ್ದಡೆ ಅದು ಮುನ್ನವೆ ನೇಮ.
ನಮ್ಮ ಕೂಡಲಸಂಗನ ಶರಣರು ಬಂದಡೆ
ಒಡೆಯರಿಗೊಡವೆಯನೊಪ್ಪಿಸುವುದೆ ನೇಮ. ॥೨೩೧॥

೨೩೨

ಹಾಲ ನೇಮ, ಹಾಲ ಕೆನೆಯ ನೇಮ,
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ,

ಬೆಣ್ಣೆಯ ನೇಮ, ಬೆಲ್ಲದ ನೇಮ,
ಅಂಬಲಿಯ ನೇಮದವರನಾರನೂ ಕಾಣೆ.
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ. ॥೨೩೨॥

೨೩೩

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ,
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ.
ಮಾಡುವ ನೀಡುವ ನಿಜಗುಣವುಳ್ಳಡೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ. ॥೨೩೩॥

೨೩೪

ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ,
ಏಡಿಸಿ ಕಾಡಿತ್ತು ಶಿವನ ಡಂಗುರ,
ಮಾಡಿದೆನೆನ್ನದಿರಾ ಲಿಂಗಕ್ಕೆ,
ಮಾಡಿದೆನೆನ್ನದಿರಾ ಜಂಗಮಕ್ಕೆ,
ಮಾಡಿದೆನೆಂಬುದು ಮನದಲಿಲ್ಲದಿದ್ದಡೆ,
ಬೇಡಿತ್ತನೀವನು ಕೂಡಲಸಂಗಮದೇವ. ॥೨೩೪॥

೨೩೫

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ. ॥೨೩೫॥

೨೩೬

ಕೆಡೆ ನಡೆಯದೆ, ಕೆಡೆ ನುಡಿಯದೆ,
ಅನ್ಯರ ಪ್ರತಿಪಾದಿಸದಿದ್ದಡೆ

ಏನ ಮಾಡನಯ್ಯಾ ಲಿಂಗವು?
ಏನ ಕೊಡನಯ್ಯಾ?
ತಾನು ಏನ ಬೇಡಿದುದನೀವನಾಗಿ,
ನಂಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ,
ಕೂಡಲಸಂಗಮದೇವಾ. ॥೨೩೬॥

೨೩೭
ಸ್ವಾಮಿಭೃತ್ಯಸಂಬಂಧಕ್ಕೆ ಆವುದು ಪಥವೆಂದಡೆ:
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲಸಂಗಮದೇವ. ॥೨೩೭॥

೨೩೮
ಸತ್ಯವುಳ್ಳ ಭಂಡವ ತುಂಬುವುದಯ್ಯಾ.
ಸುಯಿಧಾನವಯ್ಯಾ, ಸುಯಿಧಾನವಯ್ಯಾ, ಮನ ಧಾರೆವಟ್ಟಲು.
ಕೂಡಲಸಂಗನ ಶರಣರು ಹಿಡಿಯದ ಭಂಡವನು
ಆರಾದಡಾಗಲಿ ಹೋಗಲೀಯರಯ್ಯಾ. ॥೨೩೮॥

೨೩೯
ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ!
ಸತ್ಯವ ನುಡಿವುದೇ ದೇವಲೋಕ,
ಮಿಥ್ಯವ ನುಡಿವುದೇ ಮರ್ತ್ಯಲೋಕ.
ಆಚಾರವೆ ಸ್ವರ್ಗ, ಅನಾಚಾರವೆ ನರಕ.
ಕೂಡಲಸಂಗಮದೇವಾ, ನೀವೆ ಪ್ರಮಾಣು. ॥೨೩೯॥

೨೪೦
ಪುಣ್ಯಪಾಪಂಗಳೆಂಬವು ತಮ್ಮ ಇಷ್ಟ ಕಂಡಿರೆ,
'ಅಯ್ಯಾ ಎಂದಡೆ ಸ್ವರ್ಗ, 'ಎಲವೊ ಎಂದಡೆ ನರಕ.'
ದೇವಾ, ಭಕ್ತಾ, ಜಯಾ, ಜೀ[ಯಾ] ಎಂಬ ನುಡಿಯೊಳಗೆ
ಕೈಲಾಸವೈದುವುದೆ ಕೂಡಲಸಂಗಮದೇವಾ. ॥೨೪೦॥

೨೪೧

ಏನಿ ಬಂದಿರಿ, ಹದುಳಿದ್ದಿರೆ ಎಂದಡೆ
ನಿ[ಮ್ಮ]ಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ? ॥೨೪೧॥

೨೪೨

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು ನುಡಿವುದು ಶಿವಭಕ್ತರೊಡನೆ.
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
'ಪರಿಹಾಸವಿಹೀನಸ್ಯ ಪುಂಸೋ ಜನ್ಮ ನಿರರ್ಥಕಮ್
ಗುರುಣಾಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ'
ನಮ್ಮ ಕೂಡಲಸಂಗನ ಶರಣರೊಡನೆ
ಮನದೆರೆದು ಮಾತನಾಡುವುದಯ್ಯಾ. ॥೨೪೨॥

೨೪೩

ಭಕ್ತಿಯೆಂಬ ನಿಧಾನವ ಸಾಧಿಸುವಡೆ
ಶಿವಪ್ರೇಮವೆಂಬ ಅಂಜನವನೆಚ್ಚಿಕೊಂಬುದು,
ಭಕ್ತನಾದವಂಗೆ ಇದೇ ಪಥವಾಗಿರಬೇಕು.
ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ. ॥೨೪೩॥

೨೪೪

ಕಂಡ ಭಕ್ತರಿಗೆ ಕೈಮುಗಿಯುವಾತನೆ ಭಕ್ತ,
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ,
ಸದುವಿನಯವೆ ಸದಾಶಿವನ ಒಲುಮೆಯಯ್ಯಾ.
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ. ॥೨೪೪॥

೨೪೫

ಇತ್ತ ಬಾರಯ್ಯಾ, ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು,
ಮತ್ತೆ ಕೆಲಕ್ಕೆ ಸಾರ್ದು,
ಶರಣೆಂದು ಹಸ್ತ ಬಾಯನೆ ಮುಚ್ಚಿ,
ಕಿರಿದಾಗಿ ಭೃತ್ಯಾಚಾರವ ನುಡಿದು,
ವಿನಯವದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ,
ಕೂಡಲಸಂಗಮದೇವ ಪ್ರಮಥರ ಮುಂದೆ. ॥೨೪೫॥

೨೪೬

ಭಕ್ತ ಭಕ್ತನ ಮನೆಗೆ ಬಂದಡೆ,
ಭೃತ್ಯಾಚಾರವ ಮಾಡಬೇಕು.
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ ಹಿಂದೆಮಾಡಿದಭಕ್ತಿಗೆಹಾನಿ.
ಲಕ್ಕಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ. ॥೨೪೬॥

೨೪೭

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ.
ದಯವೇ ಧರ್ಮದ ಮೂಲವಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ. ॥೨೪೭॥

೨೪೮

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು.
ಮನದ ಕೋಪ ತನ್ನ ಅರಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ. ॥೨೪೮॥

೨೪೯

ಅರ್ಥಕ್ಕೆ ತಪ್ಪಿದಡೇನು?
ಪ್ರಾಣಕ್ಕೆ ತಪ್ಪಿದಡೇನು?
ಅಭಿಮಾನಕ್ಕೆ ತಪ್ಪಿದಡೇನು?
ಶರಣರು ಶರಣರಲ್ಲಿ ಗುಣವನರಸುವರೆ?
ಕೂಡಲಸಂಗನ ಶರಣರು ನೊಂದು ಸೈರಿಸಬೇಕು. ॥೨೪೯॥

ಭಕ್ತನ ಭಕ್ತಸ್ಥಲ

೨೫೦

ಕಾಣದ ಠಾವಿನಲಿ ಜರೆದರೆಂದಡೆ ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ?
ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ!
ಎನ್ನ ಮನದ ತದ್ ದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಲಸಂಗಮದೇವಾ. ॥೨೫೦॥

೨೫೧

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ,
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವನಿಕ್ಕಿ ನೋಡಯ್ಯಾ,
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು
ಕೂಡಲಸಂಗಮದೇವಾ. ॥೨೫೧॥

೨೫೨

ವೇದಾದಿ ನಾಮ ನಿರ್ನಾಮ ಮಹತ್ತ್ವಂ ಮಮರೂಪಕಮ್
ಗುರೂಕ್ತಮಂತ್ರಮಾರ್ಗೇಣ ಜಾತಮಿಷ್ಟಂ ತು ಶಾಂಕರಿ'
ಎಂದುದಾಗಿ, ವಚನಪಾತಕವೆನ್ನ, ವಚನದೋಷಂಗಳೆನ್ನ,
ಕಾಡಿ ಕಾಡಿ ಕೆಡಿಸಿಹವೆನ್ನ!
ಕೂಡಲಸಂಗಮದೇವಾ 'ಅಹಂ' ಎಂಬ ಅಹಂಕಾರವೆನ್ನ. ॥೨೫೨॥

೨೫೩

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ,
[ಬಿ]ಬ್ಬನೆ ಬಿರಿವೆ ನಾನು, ಕೆಚ್ಚು ಬೆಳೆಯಿತ್ತಯ್ಯಾ.
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ,
ಬೆಳುಗಾರದಂತೆ ಮಾಡು ಕೂಡಲಸಂಗಮದೇವಾ. ॥೨೫೩॥

೨೫೪

ನಡೆಯೆ ಕಂಡಾ ನಂಬಿ, ನುಡಿಯೆಲ್ಲಾ ಉಪಚಾರ!
ಮಿಗಿಲೊಂದು ಮಾತು ಬಂದಡೆ ಸೈರಿಸಲಾರೆನು.
ತುಯ್ಯಲಾದಡೆ ಉಂಬೆ, ಹುಯ್ಯಲಾದಡೆ ಓಡುವೆ,
ಆಳು ಬೇಡಿದಡೆ ಆಳ್ದನೇನನೀಯನಯ್ಯಾ.
ಆಳಾಗಿ ಹೊಕ್ಕು ಅರಸಾಗಿ ನಡೆದಡೆ,
ಆಳಿಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ. ॥೨೫೪॥

೨೫೫

ಇರಿಸಿಕೊಂಡು ಭಕ್ತರಾದರೆಮ್ಮವರು,
ತರಿಸಿಕೊಂಡು ಭಕ್ತರಾದರೆಮ್ಮವರು,
ಕೊರೆಸಿಕೊಂಡು ಭಕ್ತರಾದರೆಮ್ಮವರು,
ಜರಿಸಿಕೊಂಡು ಭಕ್ತರಾದರೆಮ್ಮವರು.
ಕೂಡಲಸಂಗನ ಶರಣರಿಗೆ ಮುಳಿಸ ತಾಳಿ
ಎನ್ನ ಭಕ್ತಿ ಅರೆಯಾಯಿತ್ತು. ॥೨೫೫॥

೨೫೬

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ!
ಕುಂದು-ಹೆಚ್ಚ ನುಡಿವೆ.
ಒಂದು ಮಾತಿನ ಗೆಲ್ಲಸೋಲಕ್ಕೆ ಹಿಡಿದು ಹೋರುವೆ,
ಕೂಡಲಸಂಗನ ಶರಣರ ಎನ್ನಾಳ್ದರೆಂಬೆ. ॥೨೫೬॥

೨೫೭

ಇಲ್ಲವೆಯ ಮೇಲೆ ಕಂಚೊಡೆದಂತೆ ಬಡ ಮನವೆನ್ನ ಕಾಡಿಹಿತಯ್ಯಾ,
ಮತಿಯಿಲ್ಲದ ಮರುಳ ನಾನಯ್ಯಾ,
ಭಕ್ತಿಯಿಲ್ಲದ ಬಡವ ನಾನು. ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ,
ಎನಗೆ ನೀ ಕರುಣಿಸು ಕೂಡಲಸಂಗಮದೇವಾ. ॥೨೫೭॥

೨೫೮

ಲಿಂಗವ ನಚ್ಚದೀ ಮನವು,
ಜಂಗಮವ ನಂಬದೀ ಮನವು,
ಕೂಪರ ಕಂಡಡೆ ಒಲ್ಲದೀ ಮನವು.
ಈ ಮನದ ಭ್ರಮೆಯನೆಲ್ಲವ ಮರೆಸಿ,
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು
ಕೂಡಲಸಂಗಮದೇವಾ. ॥೨೫೮॥

೨೫೯

ಅಶನ ಕುಂದದು, ವ್ಯಸನ ಮಾಣದು,
ಆರತವಡಗದು, ಬೆವಹಾರ ಮಾಣದು.
ಮಜ್ಜನಕ್ಕೆರೆವೆನಯ್ಯಾ: ಕಾಯವಿಕಾರಿಯಾನು.
ಮಜ್ಜನಕ್ಕೆರೆವೆನಯ್ಯಾ: ಜೀವವಿಕಾರಿಯಾನು.
ಮಜ್ಜನಕ್ಕೆರೆವೆನಯ್ಯಾ: ಶರಣನಲ್ಲ, ಲಿಂಗೈಕ್ಯನಲ್ಲ.
ಕೂಡಲಸಂಗಮದೇವರಲ್ಲಿ ಅಂತರಬೆಂತರ ನಾನಯ್ಯಾ. ॥೨೫೯॥

೨೬೦

ಕುದುರನೇಸು ತೊಳೆದಡೆಯೂ ಕೆಸರು ಮಾಬುದೆ?
ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯಾ.
ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ ಎನ್ನ ಮನ.
ಕೂಡಲಸಂಗಮದೇವಾ,
ನಿಮಗೆ ಶರಣೆಂದು ಶುದ್ಧ ಕಾಣಯ್ಯಾ. ॥೨೬೦॥

೨೬೧

ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯಾ.
ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ?
ಹಿಂದಣ ಜನ್ಮದ ಚಿಹ್ನೆ ಬಿಡದನ್ನಕ್ಕ ನಿಮ್ಮ ಪೂಜಿಸಿ ಏವೆನಯ್ಯಾ?
ಎನ್ನ ಮನದ ಅವಗುಣವ ಕಳೆದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಸಂಗಮದೇವಾ. ॥೨೬೧॥

೨೬೨

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ, ಎನ್ನ.
ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ,
'ಅವಶ್ಯಮನುಭೋಕ್ತವ್ಯಂ' ಎಂದೆನಿಸದಿರಯ್ಯಾ
ಕೂಡಲಸಂಗಮದೇವಾ, ಸೆರಗೊಡ್ಡಿ ಬೇಡುವೆನು. ॥೨೬೨॥

೨೬೩

ಧೃತಿಗೆಟ್ಟು ಅನ್ಯರ ಬೇಡದಂತೆ,
ಮತಿಗೆಟ್ಟು ಪರರುವ ಹೊಗಳದಂತೆ,
ಪರಸತಿಯರ ರತಿಗೆ ಮನ ಹಾರದಂತೆ,
ಶಿವಪಥವೊಲ್ಲದವರೊಡನಾಡದಂತೆ,
ಅನ್ಯಜಾತಿಯ ಸಂಗವ ಮಾಡದಂತೆ,
ಎನ್ನ ಪ್ರತಿಪಾಲಿಸು,
ಕೂಡಲಸಂಗಮದೇವಾ. ॥೨೬೩॥

೨೬೪

ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ,
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸಯ್ಯಾ, ಕೂಡಲಸಂಗಮದೇವಾ. ॥೨೬೪॥

೨೬೫

ಮತಿಮಂದನಾಗಿ ಗತಿಯ ಕಾಣದೆ ಇದ್ದೆನಯ್ಯಾ :
ಹುಟ್ಟುಗುರುಡನ ಕೈಯ ಕೋಲ ಕೊಟ್ಟು ನಡೆಸುವಂತೆ
ನಡೆಸಯ್ಯಾ ಎನ್ನ.
ನಿಮ್ಮ ಅಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮಚ್ಚಿಸು,
ಕೂಡಲಸಂಗಮದೇವಾ. ॥೨೬೫॥

೨೬೬

ಕಾಣದುದನೆಲ್ಲವ ಕಾಣಲಾರೆನಯ್ಯಾ,
ಕೇಳದುದನೆಲ್ಲವ ಕೇಳಲಾರೆನಯ್ಯಾ.
ದ್ರೋಹವಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ.
ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರನೊಲ್ಲನಯ್ಯಾ
ಕೂಡಲಸಂಗಮದೇವ. ॥೨೬೬॥

೨೬೭

ಎತ್ತು ತೊತ್ತಾಗಿ, ಭೃತ್ಯನಾಗಿ ಎಂದಿಪ್ಪೆನಯ್ಯಾ.
ನಿಮ್ಮವರ ಮನೆಯಲು ಕೂಡಲಸಂಗಮದೇವಾ,
ಲಿಂಗಜಂಗಮದ ಲೆಂಗಿಯಾಗಿ. ॥೨೬೭॥

೨೬೮

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಮೊಗೆಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದಾರಿದ್ರಂಗೆ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನ ಹುಳುವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡಡೆ ಹೋಲಬಹುದೆ?
ಎನ್ನೊಡೆಯ ಕೂಡಲಸಂಗನ ಶರಣರನು
ಪುಣ್ಯವಿಲ್ಲದೆ ಕಾಣಬಹುದೆ? ॥೨೬೮॥

೨೬೯
ಎಂತಕ್ಕೆ ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು,
ಇಂತಾಗಿ ನೀವೆನ್ನನಾರೆಂದರಿಯಿರಿ?
ನಂಬಲರಿಯೆ, ನಂಬಿಸಲರಿಯೆ. ಒಲಿಯಲರಿಯೆ,
ಒಲಿಸಲರಿಯೆ. 'ಯಥಾ ಭಾವಸ್ತಥಾ ಲಿಂಗಂ ಸತ್ಯಂ ಸತ್ಯಂ ನ ಸಂಶಯಃ
ಯಥಾ ಭಕ್ತಿಸ್ತಥಾ ಸಿದ್ಧಿಃ ಸತ್ಯಂ ಸತ್ಯಂ ನ ಸಂಶಯಃ'
ಎಂದುದಾಗಿ, ಕೂಡಲಸಂಗಮದೇವಾ, ಕೇಳಯ್ಯಾ
ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯಾ. ॥೨೬೯॥

೨೭೦
ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತೆ ಆನಿದ್ದೇನಯ್ಯಾ.
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ ನಿಮ್ಮ ಒಲವಿಲ್ಲದಂತೆ ಆನಿದ್ದೇನಯ್ಯಾ.
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ,
ನೀನೊಲಿದಂತೆ ಸಲಹಯ್ಯಾ,
ಕೂಡಲಸಂಗಮದೇವಾ. ॥೨೭೦॥

೨೭೧
ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ,
ನಿಮ್ಮ ನೆನೆಯಲು ತೆರಹಿಲ್ಲಯ್ಯಾ.
ಎಂತೋ ಲಿಂಗ ತಂದೆ, ಎಂತಯ್ಯಾ ಎನ್ನ ಪೂರ್ವಲಿಖಿತ?
ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ,
ನೀ ಕರುಣಿಸು, ಕೂಡಲಸಂಗಮದೇವಾ. ॥೨೭೧॥

೨೭೨
ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ, ಭಕ್ತಿ.
ಕಾಮವೆಂಬ ಅಗ್ನಿಗೆ ಮುರಿದಿಕ್ಕಿತ್ತೆನ್ನ, ಭಕ್ತಿ.
ಉದರಕ್ಕೆ ಕುದಿಕುದಿದು ಮುಂದುಗೆಡಿಸಿತ್ತೆನ್ನ, ಭಕ್ತಿ.

ಇದಿರನಾಶ್ರಯಿಸಲು ಹೋಯಿತ್ತೆನ್ನ, ಭಕ್ತಿ.
ಹೆಣಮೂಳನು ನಾನು ಕೂಡಲಸಂಗಮದೇವಾ,
ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿತ್ತೆನ್ನ, ಭಕ್ತಿ. ॥೨೭೨॥

೨೭೩

ಏನಿದ್ದಡೇನಿದ್ದಡೊಲ್ಲದು ನಿಮ್ಮನುಭಾವಕ್ಕೆನ್ನ ಮನವು.
ಡಂಬಕನೆಂಬವ ನಾನು ಕಂಡಯ್ಯಾ,
ಕೂಡಲಸಂಗಮದೇವರ ಪೂಜಿಸಿ ಮಾನವರಾಸೆ ಬಿಡದಾಗಿ. ॥೨೭೩॥

೨೭೪

ಬೆಲ್ಲವ ತಿಂದ ಕೋಡಗದಂತೆ ಸಿಹಿಯ ನೆನೆಯದಿರಾ, ಮನವೆ,
ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೆ.
ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೆ.
ಕೂಡಲಸಂಗನ ಶರಣರ ಕಂಡು
ಲಿಂಗವೆಂದೆ ನಂಬು, ಮನವೆ. ॥೨೭೪॥

೨೭೫

ಒಡೆಯರ ಕಂಡಡೆ ಕಳ್ಳನಾಗದಿರಾ, ಮನವೆ.
ಭವದ ಬಾರಿಯ ತಪ್ಪಿಸಿಕೊಂಬಡೆ
ನೀನು ನಿಯತನಾಗಿ, ಭಯಭರಿತನಾಗಿ,
ಅಹಂಕಾರಿಯಾಗದೆ ಶರಣೆನ್ನು, ಮನವೆ.
ಕೂಡಲಸಂಗನ ಶರಣರಲ್ಲಿ ಭಕ್ತಿಯ ನೋನುವಡೆ
ಕಿಂಕಿಲನಾಗಿ ಬದುಕು, ಮನವೆ. ॥೨೭೫॥

೨೭೬

ಕೋಟ್ಯನುಕೋಟಿ ಜಪವ ಮಾಡಿ ಕೋಟಲೆಗೊಳ್ಳಲದೇಕೆ ಮನವೆ?
ಕಿಂಚಿತು ಗೀತವೊಂದನಂತಕೋಟಿ ಜಪ.
ಜಪವೆಂಬುದೇಕೆ ಮನವೆ? ಕೂಡಲಸಂಗನ ಶರಣರ ಕಂಡು,
ಆಡಿ ಹಾಡಿ ಬದುಕು ಮನವೆ. ॥೨೭೬॥

೨೭೭
ಮನವೆ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ, ಮನವೆ!
ಲಿಂಗವ ನಂಬು ಕಂಡಾ, ಮನವೆ!
ಜಂಗಮವ ನಂಬು ಕಂಡಾ, ಮನವೆ!
ಕೂಡಲಸಂಗಮದೇವರ ಬಿಡದೆ ಬೆಂಬತ್ತು ಕಂಡಾ, ಮನವೆ! ॥೨೭೭॥

೨೭೮
ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ,
ಬರಿದೆ ಧೃತಿಗೆಡಬೇಡ ಮನವೆ!
ಆರನಾದಡೆಯೂ ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೆ!
ಕೂಡಲಸಂಗಮದೇವ[ನ]ಲ್ಲದೆ,
ಆರ ಬೇಡಿದಡಿಲ್ಲ ಮನವೆ! ॥೨೭೮॥

೨೭೯
ಆಡಿ ಅಳುಪದಿರಾ,
ಲೇಸಮಾಡಿ ಮರುಗದಿರಾ, ಎಲೆ ಮನವೆ.
ಕೂಡಿ ತಪ್ಪದಿರಾ,
ಬೇಡಿದವರಿಗಿಲ್ಲೆನ್ನದಿರು ಕಂಡಾ.
ನಾಡ ಮಾತು ಬೇಡ, ಸೆರಗೊಡ್ಡಿ ಬೇಡು
ಕೂಡಲಸಂಗನ ಶರಣರ. ॥೨೭೯॥

೨೮೦
ಹೃದಯ ಕತ್ತರಿ, ತುದಿನಾಲಗೆ ಬೆಲ್ಲೇಂ ಭೋ!
ಆಡಿಹೆನು ಏಂ ಭೋ, ಹಾಡಿಹೆನು ಏಂ ಭೋ!
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನು ಏಂ ಭೋ!
ಆನು ಎನ್ನಂತೆ, ಮನ ಮನದಂತೆ,
ಕೂಡಲಸಂಗಮದೇವ ತಾನು ತನ್ನಂತೆ! ॥೨೮೦॥

೨೮೧

ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು,
ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯಾ.
ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ
ಆಯಿತ್ತಯ್ಯಾ ಎನ್ನ ಮತಿ,
ಕೂಡಲಸಂಗಮದೇವಾ. ॥೨೮೧॥

೨೮೨

ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ.
ಮನದ ತಾಮಸ ಬಿಡದು, ಮನದ ಕಪಟ ಬಿಡದು,
ಶಿವಶರಣೆಂಬುದು ಅಳವಡದಯ್ಯಾ.
ಎನ್ನ ಮನದಲ್ಲಿ ಎರಡುಳ್ಳನ್ನಕ್ಕ
ಕೂಡಲಸಂಗಮದೇವನೆಂತೊಲಿವ ॥೨೮೨॥

೨೮೩

ಮಜ್ಜನಕ್ಕೆರೆವೆನಲ್ಲದಾನು, ಸಜ್ಜನವೆನ್ನಲ್ಲಿಲ್ಲಯ್ಯಾ!
ಎನ್ನಲ್ಲೇನನರಸುವೆ?
ನಂಬಿಯೂ ನಂಬದ ಡಂಬಕ ನಾನಯ್ಯಾ,
ಹಾವ ತೋರಿ ಹವಿಯ ಬೇಡುವಂತೆ–
ಕೂಡಲಸಂಗಮದೇವಾ. ॥೨೮೩॥

೨೮೪

ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ?
ಕೈಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯಾ.
ಮನಮುಟ್ಟಿ ಪೂಜಿಸುವಡೆ, ಎನ್ನ ಮನ ಶುದ್ಧವಲ್ಲಯ್ಯಾ.
ಭಾವ ಶುದ್ಧವಾದಡೆ, ಕೂಡಲಸಂಗಯ್ಯನು
ಇತ್ತ ಬಾಯೆಂದೆತ್ತಿಕೊಳ್ಳನೇಕಯ್ಯಾ? ॥೨೮೪॥

೨೮೫

ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ, ಫಲವೇನು?
ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ.
ಛಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ,
ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ
ತನು ಭಕ್ತನಾಯಿತ್ತು, ಎನ್ನ ಮನ ಭವಿ
ಕೂಡಲಸಂಗಮದೇವಾ. ॥೨೮೫॥

೨೮೬

ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಕುಲವುಂಟೆ?
ಪ್ರಸಾದದಲ್ಲಿ ಅರುಚಿಯುಂಟೆ?
ಈ ತ್ರಿವಿಧದಲ್ಲಿ ಭಾವಭೇದವನರಸುವೆನು,
ಕೂಡಲಸಂಗಮದೇವಾ, ಧಾ[ರೆ]ವಟ್ಟಲೆನ್ನ ಭಕ್ತಿ ॥೨೮೬॥

೨೮೭

ಲೌಕಿಕರ ಕಂಡು ಆಡುವೆ ಹಾಡುವೆ.
ತಾರ್ಕಿಕರಕಂಡು ಆಡುವೆ ಹಾಡುವೆ.
ಸಹಜಗುಣವೆನ್ನಲಿಲ್ಲಯ್ಯಾ, ನಿಜಭಕ್ತಿಯೆನಗಿಲ್ಲ, ತಂದೆ.
ಏಕೋಭಾವ ಎನಗುಳ್ಳಡೆ, ಏಕೆ ನೀ ಕರುಣಿಸೆ
ಕೂಡಲಸಂಗಮದೇವಾ? ॥೨೮೭॥

೨೮೮

ಓತಿ ಬೇಲಿವರಿವಂತೆ ಎನ್ನ ಮನವಯ್ಯಾ,
ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು,
ಬಾವುಲ ಬಾಳುವೆಯಂತೆನ್ನ ಮನವು.
ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ
ನಾನಿಲ್ಲದ ಭಕ್ತಿಯ ಬಯಸಿದಡುಂಟೆ
ಕೂಡಲಸಂಗಮದೇವಾ? ॥೨೮೮॥

೨೮೯

ಸತ್ಯಸಂಬಂಧ ಸಯವಾದ ಭೃತ್ಯಾಚಾರವೆನಗಿಲ್ಲವಯ್ಯಾ.
ಅನುದಿನ ನಿಮ್ಮ ನೆನೆಯಲು ಭಕ್ತಿಯಿಲ್ಲವಯ್ಯಾ ಎನಗೆ.
ಕೂಡಲಸಂಗಮದೇವಾ, ಕರುಣಿ,
ಕೃಪೆಯ ಮಾಡಯ್ಯಾ. ॥೨೮೯॥

೨೯೦

ಶಬ್ದಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ.
ತೊಡಹದ ಕೆಲಸದ ಬಣ್ಣದಂತೆ
ಕಡಿಹಕ್ಕೆ ಒರೆಗೆ ಬಾರದು, ನೋಡಾ.
ಎನ್ನ ಮನದಲೊಂದು, ಹೃದಯದಲೊಂದು,
ವಚನದಲೊಂದು ನೋಡಾ.
ಕೂಡಲಸಂಗಮದೇವಾ,
ಆನು ಭಕ್ತನೆಂಬ ಹುಸಿಯ ಮಸಕವನೇನ ಬಣ್ಣಿಸುವೆನಯ್ಯಾ? ॥೨೯೦॥

೨೯೧

ಹಾಲ ತೊರೆಗೆ ಬೆಲ್ಲದ ಕೆಸರು,
ಸಕ್ಕರೆಯ ಮಳಲು,
ತವರಾಜದ ನೊರೆ ತೆರೆಯಂತೆ
ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ
ಉಪ್ಪನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ. ॥೨೯೧॥

೨೯೨

ಜನ್ಮ ಹೊಲ್ಲೆಂಬೆನೆ, ಜನ್ಮವ ಬಿಡಲಹೆನು.
ಭಕ್ತರೊಲವ ಪಡೆವೆನೆ,
ಭಕ್ತಿಯ ಪಥವನರಿವೆನು.
ಲಿಂಗವೆಂದು ಬಲ್ಲೆನೆ,

ಜಂಗಮವೆಂದು ಕಾಬೆನು.
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ,
ಕೈಲಾಸವ ಕಾಣಬಲ್ಲೆನು.
ಎನ್ನಲ್ಲಿ ನಡೆಯಿಲ್ಲಾಗಿ,
ನಾನು ಭಕ್ತನೆಂತಹೆನಯ್ಯಾ,
ಕೂಡಲಸಂಗಮದೇವಾ. ॥೨೯೨॥

೨೯೩
ಉಡುವಿನ ಭಾವದಲ್ಲಿ ಹಡೆದರೆಮ್ಮವರು,
ಊಸರವಳ್ಳಿಯಂತೆ ಎನ್ನ ಇರವು,
ಬಾವುಲ ಬಾಳುವೆಯ ತೆರನಂತೆ!
ಹೊತ್ತಾರೆ ಎದ್ದ ಕುರುಡಂಗೆ
ಅಗುಸೆಯಲ್ಲಿ ಅಸ್ತಮಾನವಾದಂತೆ–
ಆನು ಭಕ್ತಿಯ ಬಯಸಿದಡಹುದೆ
ಕೂಡಲಸಂಗಮದೇವಾ. ॥೨೯೩॥

೨೯೪
ಬಸುರ ಬಾಳುವೆಗೆ,
ನಿಮ್ಮಲ್ಲಿ ಮಸಿಯ ಹೂಸಿ
ನೇರಿಲಹಣ್ಣ ಮಾರುವಂತೆ,
ಕಾಲ ಸಾಲ ದಾರಿದ್ರ್ಯಕ್ಕಂಜಿ
ನಿಮ್ಮ ಮರೆಹೊಕ್ಕೆನಯ್ಯಾ.
ಆವುದ ಹುಸಿಯೆಂಬೆ?
ಆವುದ ಕಿರಿದೆಂಬೆ?
ಇದ ನೀನೆ ಬಲ್ಲೆಯಯ್ಯಾ,
ಕೂಡಲಸಂಗಮದೇವಾ,
ನಾನು ಉದರಪೋಷಕನಯ್ಯಾ. ॥೨೯೪॥

೨೯೫

ಮೂಗ ಕಂಡ ಕನಸಿನಂತಾಯಿತೆನ್ನ ಭಕ್ತಿ;
ಗುಣವ ಹೇಳಬಾರದಾರಿಗೆಯೂ,
ಕೇಳಲೆಂತೂ ಬಾರದು.
ಎನ್ನ ಹೇಗತನವ ಮಾಣಿಸು,
ಕೂಡಲಸಂಗಮದೇವಾ. ॥೨೯೫॥

೨೯೬

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯಾ.
ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯಾ.
ಕೂಡಲಸಂಗನ ಶರಣರ ಸಂಗದಿಂದ ಅರಿದಡೆ
ನಾನು ಬದುಕುವೆನಯ್ಯಾ. ॥೨೯೬॥

೨೯೭

ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು,
ನಿಮ್ಮವರೊಲಿಯದನ್ನಕ್ಕ?
ಶಿವ ಶಿವ, ಮಹಾದೇವಾ,
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ,
ಕೂಡಲಸಂಗಮದೇವಾ. ॥೨೯೭॥

೨೯೮

ಮುನ್ನೂರರುವತ್ತು ದಿನ ಶ್ರವವ ಮಾಡಿ,
ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ.
ಎನಿಸು ಕಾಲ ಲಿಂಗಾರ್ಚನೆಯ ಮಾಡಿ,
ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ?
ಕೊಡನ ತುಂಬಿದ ಹಾಲ ಕೆಡಹಿ,
ಉಡುಗಲೆನ್ನಳವೆ,
ಕೂಡಲಸಂಗಮದೇವಾ? ॥೨೯೮॥

೨೯೯

ಶಬ್ದಸುಖಕ್ಕೆ ಮಚ್ಚಿ, ಮಾತಿಂಗೆ ಮಾತನೆ ಕೊಟ್ಟು, ಕೆಟ್ಟೆನಯ್ಯಾ!
ಅನುಭಾವ ಅಕ್ಕವೆಯಾಗದೆ, ಬಿಬ್ಬನೆ ಬಿರಿದೆನಯ್ಯಾ!
ಅಮೃತದ ಕೊಡನ ತುಂಬಿ, ಒಡೆಯ ಹೊಯ್ದು, ಅರಸಲುಂಟೇ?
ಸ್ವಾಮಿಭೃತ್ಯಸಂಬಂಧವೇ ಎನ್ನ ಭಕ್ತಿ,
ಪ್ರತ್ಯುತ್ತರ ನಾಯಕನರಕ ಕೂಡಲಸಂಗಮದೇವಾ. ॥೨೯೯॥

೩೦೦

ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ,
ಕಾದಿ ಗೆಲಿಸಯ್ಯಾಎನ್ನನು.
ಕಾದಿ ಗೆಲಿಸಯ್ಯಾ ಕೂಡಲಸಂಗಮದೇವಯ್ಯಾ,
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ. ॥೩೦೦॥

೩೦೧

ಹೇಡಿ ಬಿರಿದ ಕಟ್ಟಿದಂತೆ ಆಯಿತೆನ್ನ ವೇಷ:
ಕಾದಬೇಕು, ಕಾದುವಡೆ ಮನವಿಲ್ಲ–
ಆಗಳೆ ಹೋಯಿತ್ತು ಬಿರಿದು,
ಹಗರಣಿಗನಂತೆ ನಗೆಗೆಡೆಯಾತ್ತು.
ಮಾರಂಕ ಜಂಗಮ ಮನೆಗೆ ಬಂದಡೆ
ಕಾಣದಂತಡ್ಡ ಮುಸುಡಿಟ್ಟಡೆ
ಕೂಡಲಸಂಗಮದೇವ ಜಾಣ,
ಹಲುದೋರೆ ಮೂಗ ಕೊಯ್ವ. ॥೩೦೧॥

೩೦೨

ಅಚ್ಚ ಶರಣರು ನಿಮ್ಮ ನಿಚ್ಚ ನೆನೆವರು,
ಬಚ್ಚಬರಿಯ ಮಾತನಾಡುವೆನು.
ಒಪ್ಪಚ್ಚಿ ಅರೆಭಕ್ತಿ, ನೆನೆಯಲೀಯದು ನಿಮ್ಮ.
ಮೆಚ್ಚರು ನಿಮ್ಮವರು ಎನ್ನನು
ಕೂಡಲಸಂಗಮದೇವಾ. ॥೩೦೨॥

೩೦೩

ಆಡುವುದಳವಟ್ಟಿತ್ತು,
ಹಾಡುವುದಳವಟ್ಟಿತ್ತು,
ಅರ್ಚನೆಯಳವಟ್ಟಿತ್ತು,
ಪೂಜನೆಯಳವಟ್ಟಿತ್ತು,
ನಿತ್ಯಲಿಂಗಾರ್ಚನೆ ಮುನ್ನವೆಯಳವಟ್ಟಿತ್ತು.
ಕೂಡಲಸಂಗನ ಶರಣರು ಬಂದಡೆ,
ಏಗುವುದು, ಏ ಬೆಸನೆಂಬುದು ಒಪ್ಪಚ್ಚಿ ಅಳವಡದು. ॥೩೦೩॥

೩೦೪

ಒಡೆಯರಿಗೆ ಒಡವೆಯನೊಪ್ಪಿಸಲಾರದೆ
ಮೊರೆಯಿಡುವ ಮನವ ನಾನೇನೆಂಬೆ?
ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ ವೇದನೆಯಹುದೆನಗೆ.
ಕೊಯ್ದ ಮೂಗಿಂಗೆ ಕನ್ನಡಿಯ ತೋರುವಂತಪ್ಪ
ವೇದನೆಯಹುದೆನಗೆ.
ಬೆಂದ ಹುಣ್ಣ ಕಂಬಿಯಲ್ಲಿ
ಕೀಸುವಂತಪ್ಪ ವೇದನೆಯಹುದೆನಗೆ.
ಕೂಡಲಸಂಗಮದೇ[ವಾ]
ನೀ ಮಾಡಿ ನೋಡುವ ಹಗರಣವ
ನಾ ಮಾಡಿಹೆನೆಂದಡೆ,
ಮನಕ್ಕೆ ಮನ ನಾಚದೆ ಅಯ್ಯಾ? ॥೩೦೪॥

೩೦೫

ಹೊರಿಸಿಕೊಂಡು ಹೋದ ನಾಯಿ,
ಮೊಲನನೇನ ಹಿಡಿವುದಯ್ಯಾ?
ಇರಿಯದ ವೀರ,
ಇಲ್ಲದ ಸೊಬಗುವ ಹೇಳುವುದೆ ನಾಚಿಕೆ.
ಆನು ಭಕ್ತನೆಂತೆಂಬೆನಯ್ಯಾ,
ಕೂಡಲಸಂಗಮದೇವಾ. ॥೩೦೫॥

೩೦೬

ಎನ್ನ ಭಕ್ತನೆಂದೆಂಬರು:
ಎನ್ನ ಹೊರಹಂಚೆ,
ಒಳಬೊಳ್ಳೆತನವನರಿಯರಾಗಿ.
ಎನ್ನ ಮಾನಾಪಮಾನವೂ ಶರಣರಲ್ಲಿ,
ಜಾತಿವಿಜಾತಿಯೂ ಶರಣರಲ್ಲಿ,
ತನುಮನಧನ[ವೂ] ಶರಣರಲ್ಲಿ.
ವಂಚನೆಯುಳ್ಳ ಡಂಭಕ ನಾನು.
ತಲೆಯೊಡೆಯಂಗೆ ಕಣ್ಣ ಬೈಚಿಡುವೆ
ಕೂಡಲಸಂಗಮದೇವಾ. ॥೩೦೬॥

೩೦೭

ನೋಡುವರುಳ್ಳಡೆ ಮಾಡುವೆ ದೇಹಾರವ.
ಎನಗೊಂದು ನಿಜವಿಲ್ಲ,
ಎನಗೊಂದು ನಿಷ್ಪತ್ತಿಯಿಲ್ಲ.
ಲಿಂಗವ ತೋರಿ ಉದರವ ಹೊರೆವ ಭಂಗಗಾರ ನಾನು
ಕೂಡಲಸಂಗಮದೇವಾ. ॥೩೦೭॥

೩೦೮

ಭಕ್ತಿ ಎಳ್ಳನಿತಿಲ್ಲ,
ಯುಕ್ತಿಶೂನ್ಯನಯ್ಯಾ ನಾನು.
ತನುವಂಚಕ, ಮನವಂಚಕ,
ಧನವಂಚಕ ನಾನಯ್ಯಾ.
ಕೂಡಲಸಂಗಮದೇವಾ,
ಒಳಲೊಟ್ಟೆ ಎನ್ನ ಮಾತು. ॥೩೦೮॥

೩೦೯

ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ,
ಮತ್ತೆಯೂ ವಂಚನೆ ಮಾಣದಯ್ಯಾ.

ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ,
ಮತ್ತೆಯೂ ವಂಚನೆ ಮಾಣದಯ್ಯಾ.
ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ
ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ. ॥೩೦೯॥

೩೧೦

ಊರ ಸೀರೆಗೆ ಅಸಗ ಬಡಿಹಡೆದಂತೆ
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ಮರುಳಾದೆ,
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ,
ಕೂಡಲಸಂಗಮದೇವಾ. ॥೩೧೦॥

೩೧೧

ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ,
ಮತ್ತೆಯೂ ಆಸೆ ಬಿಡದನ್ನಕ್ಕ ಭಕ್ತನೆಂತಪ್ಪೆನಯ್ಯಾ?
ಶರಣನೆಂತೆನಿಸುವೆನಯ್ಯಾ,
ಕೂಡಲಸಂಗನ ಶರಣರ ಸಕಲರತಿಗೆ ಸಲ್ಲದನ್ನಕ್ಕ? ॥೩೧೧॥

೩೧೨

ನಿಮ್ಮ ಭಕ್ತಿಯಲ್ಲಿ ಧರಧುರನೆಂಬೆ.
ದಿಟಕ್ಕೆ ಬಂದಡೆ ಅಡ್ಡ ಮುಖವನಿಕ್ಕುವೆ–
ಗರುಡಂಗೆ ಘಟಸರ್ಪನ ತೋರುವಂತೆ!
ಶಿವಶರಣೆಂದಡೆ ಕಿವಿ ಕೇಳದಂತಿಹೆನು,
ಮನಕ್ಕೆ ಮನವೇ ಸಾಕ್ಷಿಯಯ್ಯಾ,
ಕೂಡಲಸಂಗಮದೇವಾ. ॥೩೧೨॥

೩೧೩

ಆದ್ಯರ ವಚನ ಪರುಷವೆಂಬೆನು,
ಆ ಪರುಷವೆನಗೆಂತು ದೊರೆಕೊಂಬುದಯ್ಯಾ?
ತನು ಮನ ಧನವ ವಿವರಿಸಿ ನುಡಿವೆ,

ಸೋಂಕಿಂಗೆ ಸೈರಿಸಲಾರೆ,
ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯಾ,
ಕೂಡಲಸಂಗಮದೇವಾ. ॥೩೧೩॥

೩೧೪

ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆದೆನಯ್ಯಾ.
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ[ಯ]ಲ್ಲ.
ಹಡಿಕೆಗೆ ಮಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ? ॥೩೧೪॥

೩೧೫

ಒಲಿದ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವಾ,
ತಪ್ಪೆನ್ನದು, ತಪ್ಪೆನ್ನದು!
ತನು ಮನ ಧನದಲ್ಲಿ ಮಾಟಕೂಟವೆಂದರಿಯದ
ತಪ್ಪೆನ್ನದು, ತಪ್ಪೆನ್ನದು!
ಕಡೆಲ್ಲದ ಹುಸಿ ಎನ್ನದು,
ಕೂಡಲಸಂಗಮದೇವಾ. ॥೩೧೫॥

೩೧೬

ಕಾಣುತ್ತ ಕಡೆಗಣಿಸಿ, ಕೆಡಿಸಿ,
ಅರಸುವ ಮತಿಭ್ರಷ್ಟ ನಾನು ಲಿಂಗಯ್ಯಾ.
ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ.
ತನು ಮನ ಧನವ ನಿವೇದಿಸಿದವರ ಮನೆಯ ಮಗ ನಾನಯ್ಯಾ,
ಕೂಡಲಸಂಗಮದೇವಾ. ॥೩೧೬॥

೩೧೭

ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಕುವರೆ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ?
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ?
ಕೂಡಲಸಂಗಯ್ಯ ಕಾಡುವ ಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೆ? ॥೩೧೭॥

೩೧೮

ಸೋಲಬಲ್ಲರು ಅವರು, ಗೆಲಲರಿಯರಯ್ಯಾ.
ತನು ಮನ ಧನದಲ್ಲಿ ವಂಚನೆಯನರಿಯರಯ್ಯಾ,
ದಾಸ ಸಿರಿಯಾಳನವರು.
ಕೂಡಲಸಂಗನ ಶರಣರು ಉಪಚಾರವನರಿಯರಯ್ಯಾ. ॥೩೧೮॥

೩೧೯

ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ
ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲು ಬಾರದು.
ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು,
ಲಿಂಗಮುಖದಲುದಯವಾದ ಶರಣಂಗಲ್ಲದೆ ಅಯ್ಯಾ.
ಕೂಡಲಸಂಗನ ಶರಣರ ಭಕ್ತಿಭಂಡಾರವು
ಎನಗೆಂತು ಸಾಧ್ಯವಪ್ಪುದು? ಹೇಳೆನ್ನ ತಂದೆ. ॥೩೧೯॥

೩೨೦

ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ?
ಉಂಡು ಉಟ್ಟು, ಕೊಟ್ಟಡೆ ಮುಯ್ಯಿಗೆ ಮುಯ್ಯೆನಿಸಿತ್ತು,
ಎನಗೆ ಕೊಟ್ಟಡೆ ಧರ್ಮವೆನಿಸಿತ್ತು,
ಕೂಡಲಸಂಗಮದೇವಾ. ॥೩೨೦॥

೩೨೧

ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ.
ಸಿರಿಯಾಳ ತನ್ನ ಮಗನನಿತ್ತು ಪ್ರಾಣಪ್ರಸಾದವ ಪಡೆದ.
ಬಲ್ಲಾಳದೇವ ತನ್ನ ವಧುವನಿತ್ತು ಸಮತೆಪ್ರಸಾದವ ಪಡೆದ.
ಇವರೆಲ್ಲರೂ ತಮತಮಗೆ ಮಾಡಿ ಹಡೆದರು ಸಮ್ಯಕ್‌ಪದವಿಯನು.
ನಾನೇನನೂ ಅರಿಯದ ಭಕ್ತಿಯ ಬಡವಂಗೆ ಕರುಣಿಸು
ಕೂಡಲಸಂಗಮದೇವಾ. ॥೩೨೧॥

೩೨೨

ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯಾ,
ಒಮ್ಮಿಂಗೆ ಕರುಣಿಸಯ್ಯಾ.
ಇದನರಿದು ಇನ್ನು ತಪ್ಪಿದೆನಾದಡೆ
ನೀವು ಮಾಡಿತ್ತೆ ಸಲುವುದು,
ಕೂಡಲಸಂಗಮದೇವಾ. ॥೩೨೨॥

೩೨೩

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ,
ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೆ ದಿಬ್ಯ.
ಕೂಡಲಸಂಗಮದೇವಯ್ಯಾ,
ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣ ಸಾಕ್ಷಿ. ॥೩೨೩॥

೩೨೪

ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯಾ.
ಬಡವನೆಂದೆನ್ನ ಕಾಡದಿರಯ್ಯಾ.
ಎನಗೆ ಒಡೆಯರುಂಟು ಕೂಡಲಸಂಗನ ಶರಣರು. ॥೩೨೪॥

೩೨೫

ಭಕ್ತಿವಿಶೇಷವ ಮಾಡುವಡೆ ಹತ್ತು ಬೆರಳುಂಟು,
ಹಾಸಿ ದುಡಿವಡೆ ತನಗುಂಟು, ತನ್ನ ಪ್ರಮಥರಿಗುಂಟು.
ಮಾರಿತಂದೆಗಳಂತೆ ಎನಗೇಕಹುದಯ್ಯಾ?
ರತ್ನದ ಸಂಕಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ,
ಶಿವಧೋ ಶಿವಧೋ! ॥೩೨೫॥

೩೨೬

ಮನೆ ನೋಡಾ ಬಡವರು: ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ: ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ: ಬಂದ ತತ್ಕಾಲಕೆ ಉಂಟು,
ಕೂಡಲಸಂಗನ ಶರಣರು ಸ್ವತಂತ್ರಧೀರರು. ॥೩೨೬॥

೩೨೭

ತತ್ವವನರಿದೆಹೆನೆಂದು ಮೃತ್ಯುವ ಕರೆಕೊಂಡೆನಯ್ಯಾ.
ನಾನೆತ್ತ ಬಲ್ಲೆ ನಿಮ್ಮ ಶರನರಂತುವನು?
ನಾನೆತ್ತ ಬಲ್ಲೆ ನಿಮ್ಮ ಪ್ರಮಥರಂತುವನು?
ಸರ್ವಾಪರಾಧಿ ನಾನು.
ಎನ್ನ ಮನದ ಕೊನೆಯ ಸೂತಕ ಹಿಂಗದು,
ಕೂಡಲಸಂಗಮದೇವಾ. ॥೩೨೭॥

೩೨೮

ಆ ಮಿಹಿಲಾಳು ಭೋಜ ದೇವುಲಾಳು.
ಆನು ಸೂಳೆ, ನಮ್ಮಕ್ಕ ಸೂಳೆ.
ಬೆಳ್ಳಿಗೆಯಾವಿನ ಕರುವೆಂದಡೆ ಬಳ್ಳವಾಲ ಕರೆವುದೆ?
ಕೂಡಲಸಂಗನ ಶರಣರ ಮುಂದೆ ನಾನು ಕಾದಿಹೆ, ಬಾ ಬಿಸಿಲೆ. ॥೩೨೮॥

೩೨೯

ಆನೆಯೂ ಆ ದಾರಿಯಲ್ಲಿ ಹೋಯಿತ್ತೆಂದಡೆ,
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲಿಬಹುದೆ?
ಜಂಗಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ
ಹೇಳಾ, ಕೂಡಲಸಂಗಮದೇವವಾ? ॥೩೨೯॥

೩೩೦

ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ
ಆ ಕರಿಯಾಗಲರಿವುದೆ?
ಭೂನಾಗನಾಕೃತಿಯನು ವ್ಯಾಳೇಶನ
ಹೋಲಿಸಿದಡೆ ವ್ಯಾಳೇಶನಾಗಲರಿವುದೆ?
ನಾನು ಭಕ್ತನಾದಡೇನಯ್ಯಾ,
ನಮ್ಮ ಕೂಡಲಸಂಗಮದೇವನ
ಸದ್ಭಕ್ತರ ಹೋಲಲರಿವೆನೆ? ॥೩೩೦॥

೩೩೧

ಮೋಟನ ಮೌಳಿ, ಮೂಕೊರತಿಯ ಶೃಂಗಾರ,
ಬೇಟ ಕುರುಡಂಗೆ ನಗೆಗೆಡೆಯಾಯಿತ್ತು.
ನಮ್ಮ ಕೂಡಲಸಂಗನ ಶರಣರ ಮುಂದೆ
ನಾನು ಭಕ್ತನೆಂಬ ನಾಚಿಕ್ಕೆ ಸಾಲದೆ? ॥೩೩೧॥

೩೩೨

ಮೂಗಿಲ್ಲದ ಮುಖಕ್ಕೆ ಶೃಂಗಾರವೆ?
ವಿಕೃತವೇಷಧಾರಿಯಾನು, ಭಂಡನು! ಲಜ್ಜೆಭಂಡನು!
ಕೂಡಲಸಂಗನ ಶರಣರಲ್ಲಿ
ಹಾವ ತೋರಿ ಹವಿಯ ಬೇಡುವಂತೆ. ॥೩೩೨॥

೩೩೩

ಮಾವಿನ ಕಾಯೊಳಗೆ ಒಂದು ಎಕ್ಕೆಯ ಕಾಯಿ ನಾನಯ್ಯಾ.
ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ.
ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ? ॥೩೩೩॥

೩೩೪

ಮರದ ನೆಳಲಲಿದ್ದು ತನ್ನ ನೆಳಲನರಸಬಹುದೆ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ!
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ!
ಆನು ಭಕ್ತನೆಂಬ ನುಡಿ ಸುಡದೆ, ಕೂಡಲಸಂಗಮದೇವಾ. ॥೩೩೪॥

೩೩೫

ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ.
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಲಸಂಗಮದೇವಾ, ಎನಗಿದೇ ದಿಬ್ಯ. ॥೩೩೫॥

೩೩೬

ಆನು ಭಕ್ತನಲ್ಲಯ್ಯಾ,
ಆನು ವೇಷಧಾರಿಯಯ್ಯಾ.
ಕಾಟುಗ, ಕೇತುಗ, ಪೋಲುಗ ಎಂಬುದು ಎನ್ನ ಹೆಸರು.
ಕೂಡಲಸಂಗಮದೇವಾ
ನಿಮ್ಮ ಶರಣರ ಮನೆಯ ಮಗ ನಾನಯ್ಯಾ. ॥೩೩೬॥

೩೩೭

ಡಂಬೂ ಡಳುಹೂ ಎನ್ನದಯ್ಯಾ,
ಡಂಬಕನೆಂಬವ ನಾನಯ್ಯಾ.
ನಿಮ್ಮ ನಂಬಿದ ಶರಣರ [ನಂಬದ] ಡಿಂಗರಿಗ ನಾನು,
ಕೂಡಲಸಂಗಮದೇವಾ. ॥೩೩೭॥

೩೩೮

ಚೆನ್ನಚೇರಮನ ಬಂಟ ನಾನಯ್ಯಾ,
ಎನ್ನ ಚಾಗುಬೊಲ್ಲನಕಾವಗೋವನೆಂಬರು.
ಕೂಡಲಸಂಗನ ಶರಣರೊಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು. ॥೩೩೮॥

೩೩೯

ಕಾಲಲೊದೆದು ಬಡಿದು ಜಡಿವರಯ್ಯಾ,
ಭಕ್ತಿಯೆಯ್ದದೆಂದೆನ್ನ.
ಜರೆವರಯ್ಯಾ, ನುಡಿವರಯ್ಯಾ,
ಕೂಡಲಸಂಗನ ಶರಣರೊಡೆಯರಾಗಿ. ॥೩೩೯॥

೩೪೦

ನಡೆವರಯ್ಯಾ ಒಡೆಯರು ತನು-ಮನ-ಧನದ ಮೇಲೆ
ನುಡಿವರಯ್ಯಾ ಒಂದು ನಿಮಿಷ ಬಾರದಿರ್ದಡೆ,
ಜರೆವರಯ್ಯಾ ಒಡೆಯರು ಮನಬಂದ ಪರಿಯಲು.

ಶಿವಾ ಶಿವಾ! ಅಣಿವರಯ್ಯಾ ಮಂಡೆಯನೂರಿ.
ಪ್ರಾಣದ ಒಡೆಯರಯ್ಯಾ,
ಕೂಡಲಸಂಗಮದೇವಾ, ನಿಮ್ಮ ಶರಣರು. ॥೩೪೦॥

೩೪೧

ಅರ್ಥ ಪ್ರಾಣ ಅಭಿಮಾನಕ್ಕೆ ಒಡೆಯರು ಸದ್‌ಭಕ್ತರಲ್ಲದೆ,
ಎನಗಾರೂ ಇಲ್ಲಯ್ಯಾ.
'ಭೃತ್ಯಾಪರಾಧಃ ಸ್ವಾಮಿನೋ ದಂಡಃ'
ಕೂಡಲಸಂಗಮದೇವಾ, ನೀವೇ ಪ್ರಮಾಣು. ॥೩೪೧॥

೩೪೨

ಅರ್ಚಿಸಲರಿಯೆ, ಪೂಜಿಸಲರಿಯೆ,
ನಿಚ್ಚ ಶಿವರಾತ್ರಿಯ ನಾಮಾಡಲರಿಯೆ.
ಕಪ್ಪಡಿವೇಷದಿಂದಾನು ಬಂದಾಡುವೆ, ಕಪ್ಪಡಿವೇಷದಿಂದ.
ಈಶ ನಾ ನಿಮ್ಮ ದಾಸರ ದಾಸಿಯ ದಾಸನಯ್ಯಾ,
ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ,
ಕೂಡಲಸಂಗಮದೇವಾ
ನಿಮ್ಮ ಲಾಂಛನ ಧರಿಸಿಪ್ಪ ಉದರಪೋಷಕ ನಾನಯ್ಯಾ. ॥೩೪೨॥

೩೪೩

ಅಪ್ಪನು ಡೋಹರ ಕಕ್ಕಯ್ಯನಾಗಿ,
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕೆನೆ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್‌ಗುಣವ ನಾನು ಅರಿವೆನಯ್ಯಾ.
ಕಷ್ಟಜಾತಿ ಜನ್ಮದಲಿ ಜನಿಯಿಸಿದೆ ಎನ್ನ,
ಎನಗಿದು ವಿಧಿಯೆ ಕೂಡಲಸಂಗಮದೇವಾ. ॥೩೪೩॥

೩೪೪

ಉತ್ತಮಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,

ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯ ಶಿವದಾನವನೆರೆಯ ನೋಡಯ್ಯಾ,
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ,
ಕೂಡಲಸಂಗಮದೇವಾ, ಶಿವಧೋ ಶಿವಧೋ! ॥೩೪೪॥

೩೪೫

ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದಡೆ
ಕೂಡಲಸಂಗಯ್ಯ ನಗುವನಯ್ಯಾ. ॥೩೪೫॥

೩೪೬

ಚೆನ್ನಯ್ಯನ ಮನೆಯ ದಾಸನ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು,
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು,
ಕೂಡಲಸಂಗಮದೇವ ಸಾಕ್ಷಿಯಾಗಿ. ॥೩೪೬॥

೩೪೭

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ ಅಯ್ಯಾ, ಅಯ್ಯಾ, ಎನಲಾರೆ.
ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮಗ ನಾನು.
ಕೂಡಲಸಂಗನ ಮಹಾಮನೆಯಲಿ
ಧರ್ಮಸಂತಾನಿ ಭಂಡಾರಿ ಬಸವಣ್ಣನು. ॥೩೪೭॥

೩೪೮

ಹರನು ಮೂಲಿಗನಾಗಿ, ಪುರಾತರೊಳಗಾಗಿ,
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯಾ.
ಕಳೆದ ಹೊಲೆಯನೆಮ್ಮಯ್ಯ, ಜಾತಿಸೂತಕ.
ಮಾದಾರನ ಮಗ ನಾನಯ್ಯಾ.
ಪನ್ನಗಭೂಷಣ ಕೂಡಲಸಂಗಯ್ಯಾ,
ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ. ॥೩೪೮॥

೩೪೯

ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ,
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ,
ಎನ್ನನೇತಕ್ಕರಿಯರಿ? ಕೂಡಲಸಂಗಯ್ಯಾ. ॥೩೪೯॥

೩೫೦

ಭಕ್ತಿಯಿಲ್ಲದ ಬಡವ ನಾನಯ್ಯಾ:
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ.
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ. ॥೩೫೦॥

೩೫೧

ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹಾರ ಕಕ್ಕಯ್ಯ,
ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ.
ಕೂಡಲಸಂಗಮದೇವಾ,
ನಿಮ್ಮ ಶರಣರೊಲಿದೆನ್ನ ಸಲಹುವರಾಗಿ. ॥೩೫೧॥

೩೫೨

ಎಮ್ಮ ತಾಯಿ ನಿಂಬಿಯವ್ವೆ ನೀರನೆರೆದುಂಬಳು,
ಎಮ್ಮಯ್ಯ ಚೆನ್ನಯ್ಯ ರಾಯಕಂಪಣವ ಹೊರುವ.
ಎಮಗೆ ಆರೂ ಇಲ್ಲವೆಂಬಿರಿ,
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು.
ಎಮಗೆ ಆರೂ ಇಲ್ಲವೆಂಬಿರಿ,
ಎಮ್ಮ ಅಜ್ಜರ ಅಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಕೂಡಲಸಂಗಮದೇವಾ. ॥೩೫೨॥

೩೫೩

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು.
ಬಾಣನವ ನಾನು, ಮಯೂರನವ ನಾನು,
ಕಾಳಿದಾಸನವ ನಾನು.
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚೆನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲಸಂಗಯ್ಯಾ. ॥೩೫೩॥

೩೫೪

ಅಯ್ಯಾ, ನಿಮ್ಮ ವಂಶಾವಳಿಯಲು
ಒಬ್ಬ ತೊತ್ತಿನ ಮಗ ಹುಟ್ಟಿದ.
ಆತನ ತೊತ್ತಿನ ಮಗ ನಾನಯ್ಯಾ,
ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ,
ಎನ್ನ ತೊತ್ತುತನಕ್ಕೆ ಕೇಡಿಲ್ಲ. ॥೩೫೪॥

೩೫೫

ಕೈಯ ಬೋಹರಿಗೆ, ಮಂಡೆಯ ಮೇಲೆ ಸಿಂಬೆ,
ಸಿಂಬಕನ ಮನೆಯ ಮಗ ನಾನಯ್ಯಾ.
ಕೂಡಲಸಂಗಮದೇವರ ಮಂಚದ ಕೋಡೇರಿ ಬಂದ
ತೊತ್ತಿನ ಮಗ ನಾನಯ್ಯಾ. ॥೩೫೫॥

೩೫೬

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ,
ಭಕ್ತರ ಮನೆಯ ತೊತ್ತಾಗಿಪ್ಪುದು ಕರ ಲೇಸಯ್ಯಾ.
'ತಾರೌ ಅಗ್ಘವಣಿ, ನೀಡೌ ಪತ್ರೆಯ,
ಲಿಂಗಕ್ಕೆ ಬೋನವ ಹಿಡಿಯೌ' ಎಂಬರು.
'ಕೂಡಲಸಂಗನ ಮಹಾಮನೆಯಲ್ಲು
ಒಕ್ಕುದನುಣ್ಣೌ ತೊತ್ತೇ' ಎಂಬರು. ॥೩೫೬॥

೩೫೭

ಆನು ನಿಮ್ಮ ಶರಣರಿಗೆ,
ಮಂಡೆಯ ಬೋಳಿಸಿಕೊಂಡು
ಗಂಡುದೊತ್ತಾದೆನಯ್ಯಾ.
ಕೂಡಲಸಂಗಮದೇವಯ್ಯಾ, ನಿಮ್ಮ ಶರಣರಿಗೆ. ॥೩೫೭॥

೩೫೮

ಅನುದಿನ ಮನಮುಟ್ಟಿ ಧನ್ಯನಯ್ಯಾ,
ದಮ್ಮಯ್ಯಾ! ದಮ್ಮಯ್ಯಾ!
ನಿಮ್ಮ ಧರ್ಮದ ಕವಿಲೆಯಾನಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರ ಮನೆಯ ಮಗ ನಾನಯ್ಯಾ. ॥೩೫೮॥

೩೫೯

ಕಾಮವ ತೊರೆದಾತ, ಹೇಮವ ಜರೆದಾತ,
ಭಾನುವಿನ ಉದಯಕ್ಕೆ ಒಳಗಾಗದ ಶರಣನು.
ಆಗಳೂ ನಿಮ್ಮ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು,
ಮಹಾದಾನಿ ಕೂಡಲಸಂಗಮದೇವಾ. ॥೩೫೯॥

೩೬೦

ಮೇಲಾಗಲೊಲ್ಲೆನು ಕೀಳಾಗಲಲ್ಲದೆ,
ಕೀಳಿಂಗಲ್ಲದೆ ಹಯನು ಕರೆವುದೆ?

ಮೇಲಾಗಿ ನರಕದಲೋಲಾಡಲಾರೆನು.
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ ಕೂಡಲಸಂಗಮದೇವಾ. ॥೩೬೦॥

೩೬೧

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ.
ನಾನು ಮತ್ತಾವ ಪದವಿಯನೊಲ್ಲೆನಯ್ಯಾ.
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ. ॥೩೬೧॥

೩೬೨

ಕಾಗೆ ವಿಷ್ಟಿಸುವ ಹೊನ್ನಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ.
ಅಯ್ಯಾ, ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ.
'ಕರ್ಮಾವಲಂಬಿನಃ ಕೇಚಿತ್ ಕೇಚಿತ್ ಜ್ಞಾನಾವಲಂಬಿನಃ
ವಯಂ ತು ಶಿವಭಕ್ತಾನಾಂ ಪಾದರಕ್ಷಾವಲಂಬಿನಃ',
ಕೂಡಲಸಂಗಮದೇವಾ,
ನಿಮ್ಮ ಸೆರಗೊಡ್ಡಿ ಬೇಡುವಿದೊಂದೇ ವರವ ಕರುಣಿಸಯ್ಯಾ. ॥೩೬೨॥

೩೬೩

ಆವಾವ ಭಾವದಲ್ಲಿ ಮಾಡಿ ಕೂಡಿಹೆನೆಂಬವರ
ಬಾಗಿಲ ತೋರಯ್ಯಾ.
ತನುವನೊಪ್ಪಿಸಿದವರ, ಮನವನೊಪ್ಪಿಸಿದವರ,
ಧನವನೊಪ್ಪಿಸಿದವರ ಬಾಗಿಲ ತೋರಯ್ಯಾ.
ಇವೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆಂಬವರ
ಕೆರಹ ಹೊತ್ತಿರಿಸೆನ್ನನು,
ಕೂಡಲಸಂಗಮದೇವಾ. ॥೩೬೩॥

೩೬೪

ಆಯತ, ಸ್ವಾಯತದನುಭಾವವ ನಾನೆತ್ತ ಬಲ್ಲೆನು?
ಲಿಂಗ ಜಂಗಮಕ್ಕೆ ಮಾಡಿ ನೀಡುವ
ಅಚ್ಚ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ. ಇದು ಕಾರಣ
ಕೂಡಲಸಂಗನ ಶರಣರ[ನ]ಲ್ಲದೆ ಅನ್ಯವನರಿಯೆನಾಗಿ. ॥೩೬೪॥

೩೬೫

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ,
ಅಂಬುಜಕೆ ಭಾನುವಿನ ಉದಯದ ಚಿಂತೆ,
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ,
ಎನಗೆ ನಮ್ಮ ಕೂಡಲಸಂಗನ ಶರಣರ ನೆನೆವುದೆ ಚಿಂತೆ. ॥೩೬೫॥

೩೬೬

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ,
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು.
ಬಯಸುತ್ತಿರ್ದೆನಯ್ಯ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು, ಕೂಡಲಸಂಗಮದೇವಾ. ॥೩೬೬॥

೩೬೭

ಸೂರ್ಯನ ಉದಯ ತಾವರೆಗೆ ಜೀವಾಳ,
ಚಂದ್ರಮನುದಯ ನೆಯ್ದಿಲೆಗೆ ಜೀವಾಳ.
ಕೂಪರ ಠಾವಿನಲ್ಲಿ ಕೂಟ ಜೀವಾಳವಯ್ಯಾ,
ಒಲಿದ ಠಾವಿನಲ್ಲಿ ನೋಟ ಜೀವಾಳವಯ್ಯಾ.
ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ. ॥೩೬೭॥

೩೬೮

ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ,
ಗಣತಿಂಥಿಣಿಯೊಳಗಿರಿಸೆನ್ನ ಲಿಂಗವೆ.

ಶಿವ ಶಿವಾ, ಕೂಡಲಸಂಗಮದೇವಾ,
ಸೆರಗೊಡ್ಡಿ ಬೇಡುವೆನು. ॥೩೬೮॥

೩೬೯

ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು.
ಶಿವಧೋ ಶಿವಧೋ! ಕಂಗಳಶ್ರುಗಳಲ್ಲಿ ಮುಂದುಗಾಣೆನು.
ಲಿಂಗಸಂಗಿಗಳನಗಲಿ ಆನೆಂತು ಬದುಕುವೆ,
ಕೂಡಲಸಂಗಮದೇವಾ? ॥೩೬೯॥

೩೭೦

ಜಜ್ಜನೆ ಜರಿದೆನು, ಜಜ್ಜನೆ ಜರಿದೆನು,
ಜಜ್ಜನೆ ಜರಿದೆನು ನೋಡಯ್ಯಾ,
ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು,
ಬಿಬ್ಬನೆ ಬಿರಿದೆನು ನೋಡಯ್ಯಾ.
ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು,
ನಾನೊಬ್ಬನೆ ಉಳಿದೆ ನೋಡಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರನಗಲಿದ ಕಾರಣ. ॥೩೭೦॥

೩೭೧

ಕಂಡರೆ ಮನೋಹರವಯ್ಯಾ,
ಕಾಣದಿದ್ದರೆ ಅವಸ್ಥೆ ನೋಡಯ್ಯಾ.
ಹಗಲಿರುಳಹುದು, ಇರುಳು ಹಗಲಹುದು.
ಎಂತಯ್ಯಾ ಆಳವಾಡಿ ಕಳೆವೆನು?
ಒಂದು ಜುಗ ಮೇಲೆ ಕೆಡೆದಂತೆ ಇಹುದು.
ಕೂಡಲಸಂಗನ ಶರಣರನಗಲುವ ದಾವತಿಯಿಂದ
ಮರಣವೇ ಲೇಸು ಕಂಡಯ್ಯಾ. ॥೩೭೧॥

೩೭೨

ಅಂಗೈ ತಿಂದುದೆನ್ನ, ಕಂಗಳು ಕೆತ್ತಿಹವಯ್ಯಾ,
ಬಂದಹರಯ್ಯಾ ಪುರಾತರೆನ್ನ ಮನೆಗೆ,
ಬಂದಹರಯ್ಯಾ ಶರಣರೆನ್ನ ಮನೆಗೆ.
ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದರೆ,
ಲಿಂಗಾರ್ಚನೆಯ ಮಾಡಿಸುವೆ,
ಕೂಡಲಸಂಗಮದೇವಯ್ಯಾ, ನಿಮ್ಮ ಮುಂದೆ. ॥೩೭೨॥

೩೭೩

ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು, ಕಂಡಾ ಲಿಂಗವೆ,
ಪರಮಸುಖವ ಕೊಡು, ಕಂಡಾ ಲಿಂಗವೆ.
ಕೂಡಲಸಂಗಮದೇವಾ,
ಇದೇ ವರವ ನಿಮ್ಮಲ್ಲಿ ಬೇಡುವೆ. ॥೩೭೩॥

೩೭೪

ಮನೆದೈವ, ಕುಲದೈವ ಎನಗೆ ನಿಮ್ಮವರಯ್ಯಾ.
ತನು ಮೀಸಲು, ಮನ ಮೀಸಲು,
ನಯನ ಮೀಸಲು ಎನ್ನ,
ಕೂಡಲಸಂಗಮದೇವಾ, ನಿಮ್ಮ ಶರಣರಿಗೆ. ॥೩೭೪॥

೩೭೫

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೆನೆಲಗವ್ವಾ,
ತರಗೆಲೆ ಗಿರಿಕೆಂದಡೆ ಹೊರಗನಾಲಿಸುವೆ;
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ
ಕೂಡಲಸಂಗಮದೇವನ ಶರಣರು ಬಂದು,
ಬಾಗಿಲ ಮುಂದೆ ನಿಂದು
'ಶಿವಾ' ಎಂದಡೆ, ಸಂತೋಷಪಟ್ಟೆನೆಲಗವ್ವಾ ॥೩೭೫॥

೩೭೬

ಅಡವಿಯಲೊಬ್ಬಕಡುನೀರಡಿಸಿ,
ಎಡೆಯಲ್ಲಿನೀರಕಂಡಂತಾಯಿತ್ತಯ್ಯಾ.
ಕುರುಡ ಕಣ್ಣ ಪಡೆದಂತೆ,
ಬಡವ ನಿಧಾನವ ಕಂಡಂತಾಯಿತ್ತಯ್ಯಾ.
ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ. ॥೩೭೬॥

೩೭೭

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು
ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ 'ಉಘೇ, ಚಾಂಗು ಭಲಾ' ಎಂದೆಂಬೆ.
ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ. ॥೩೭೭॥

೩೭೮

ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯಾ, ಎನ್ನ ಭಕ್ತಿ.
ಆನಂದದಿಂದ ನಲಿನಲಿದಾಡುವೆ.
ಆನಂದದಿಂದ ಕುಣಿಕುಣಿದಾಡುವೆ.
ಕೂಡಲಸಂಗನ ಶರಣರು ಬಂದಡೆ,
ಉಬ್ಬಿ, ಕೊಬ್ಬಿ, ಹರುಷದಲೋಲಾಡುವೆ. ॥೩೭೮॥

೩೭೯

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ,
ಕೂಡಲಸಂಗಮದೇವರ ಭಕ್ತಗಿದು ಚಿಹ್ನವೆ?
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ. ॥೩೭೯॥

೩೮೦

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು,
ಅರಸರಿಯದ ಬಿಟ್ಟಿಯ ಮಾಡುವೆನು.
ಎನ್ನ ತಾಗಿದ ಸುಖವ
ಜಂಗಮಕ್ಕರ್ಪಿಸಲರಿಯದ ಉಪಚಾರಿಯಾನು.
ಸ್ಥಾವರ ಜಂಗಮವನರಿಯದ ಪೂಜಕ ನಾನು.
ಮತ್ತೆ ನಾಚದೇ ಕೂಡಲಸಂಗಮದೇವಯ್ಯಾ,
ಜಂಗಮವೆನ್ನ ಪ್ರಾಣಲಿಂಗವೆಂಬೆನು. ॥೩೮೦॥

೩೮೧

ಆವಗೆಯಲೊದಗಿದ ಕರ್ಪಿನಂತೆ,
ಅಮೃತದೊಳಗಿರ್ದ ಸರ್ಪನ ತನುವಿನಂತೆ,
ಇರ್ದೆನಯ್ಯಾ, ಹೊರಗೆ ನುಂಪಾಗಿ.
ಸಿಂಹಕ್ಕೊಲಿದ ಮದಕರಿಯಂತೆ
ಆನು ಜಂಗಮಕ್ಕೊಲಿದೆನಯ್ಯಾ,
ಕೂಡಲಸಂಗಮದೇವಾ. ॥೩೮೧॥

೩೮೨

ಸ್ಥಾವರ ಜಂಗಮ ಒಂದೆಯೆಂದು ಇದಿರ ನುಡಿದು ನಾನೆಡಹುತಿಪ್ಪೆ.
ಸಹಜನಲ್ಲಯ್ಯಾ, ಆನು ಸಮ್ಯಕ್ಕನಲ್ಲಯ್ಯಾ.
ಆನುಭಯಲಿಂಗಸಂಗಿಯೆಂಬೆನು,
ಈ ನುಡಿ ಸುಡದಿಹುದೆ,
ಕೂಡಲಸಂಗಮದೇವಾ? ॥೩೮೨॥

೩೮೩

ಮಸಿಯನೇಸುಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ?
ಕರ್ಮಸ್ಥಿತಿ ಬೆನ್ನ ಬಿಡದು.
ಅನಂತಕೋಟಿ ಸನ್ಮಾನವ ಮಾಡಿದರೇನು?
ನಿಮಿಷದ ಉದಾಸೀನ ಕೆಡಿಸಿತ್ತು.

ಕೂಡಲಸಂಗಮದೇವಾ
ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯಾ. ॥೩೮೩॥

೩೮೪
ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ.
ಉಪ್ಪ ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ.
ಕೂಡಲಸಂಗಮದೇವಾ,
ಆನು ಮಾಡಿದೆನೆಂಬ ಕಿಚ್ಚು ಸಾಲದೆ? ॥೩೮೪॥

೩೮೫
ಅಷ್ಟವಿಧಾರ್ಚನೆ ಷೋಡಶೋಪಚಾರವ
ಮಾಡುವ ಹಮ್ಮಿನಲ್ಲಿ ಬೆಂದೆನಯ್ಯಾ.
ಲಿಂಗವೆಂದರಿಯದೆ, ಜಂಗಮವೆಂದರಿಯದೆ,
ಪ್ರಸಾದವೆಂದರಿಯದೆ ಆನು ಬೆಂದೆನಯ್ಯಾ.
ಕೂಡಲಸಂಗಮದೇವಾ,
ಆನು ಮಾಡುವುದೆಲ್ಲವೂ ಉಪಚಾರವಯ್ಯಾ. ॥೩೮೫॥

೩೮೬
ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ.
ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು,
ನಾನೇನು ಪಾಪವ ಮಾಡಿದೆನೊ.
ಬೆಳೆಯದ ಮುನ್ನವೆ ಕೊಯ್ವರೆ ಹೇಳಯ್ಯಾ.
ಇರಿಯದ ವೀರ, ಇಲ್ಲದ ಸೊಬಗು!
ಎಲ್ಲಾ ಒಡೆಯರೂ ಏರಿಸಿ ನುಡಿವರು,
ಎನಗಿದು ವಿಧಿಯೆ, ಕೂಡಲಸಂಗಮದೇವಾ. ॥೩೮೬॥

೩೮೭
ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ,
ಎನ್ನ ಹೊಗಳತೆ ಎನ್ನನಿಮ್ಮೈಗೊಂಡಿತ್ತಲ್ಲಾ–

ಅಯ್ಯೋ ನೊಂದೆನು, ಸೈರಿಸಲಾರೆನು!
ಅಯ್ಯಾ, ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲಾ-
ಅಯ್ಯೋ ನೊಂದೆನು, ಸೈರಿಸಲಾರೆನು.
ಕೂಡಲಸಂಗಮದೇವಾ, ನೀನೆನಗೆ ಒಳ್ಳಿದನಾದಡೆ
ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ! ॥೩೮೭॥

೩೮೮

ಎನ್ನವರೆನಗೊಲಿದು ಹೊನ್ನಶೂಲವನಿಕ್ಕಿದರಯ್ಯಾ.
ಅಹಂಕಾರಪೂರಾಯ ಗಾಯದಲ್ಲಿ ಆನೆಂತು ಬದುಕುವೆನೆಂತು ಜೀವಿಸುವೆ?
ಜಂಗಮವಾಗಿ ಬಂದು ಜರೆದು, ಶೂಲವನಿಳುಹಿ,
ಪ್ರಸಾದದ ಮದ್ದನಿಕ್ಕಿ, ಸಲಹು ಕೂಡಲಸಂಗಮದೇವಾ. ॥೩೮೮॥

೩೮೯

ಎಡದ ಕೈಯಲು ಹಾಲ ಬಟ್ಟಲು,
ಬಲದ ಕೈಯಲು ಓಜುಗಟ್ಟಿಗೆ,
ಆವಾಗ ಬಂದಾನೆಮ್ಮಯ್ಯ,
ಬಡಿದು ಹಾಲ ಕುಡಿಸುವ ತಂದೆ.
'ದಂಡಕ್ಷೀರದ್ವಯಂ ಹಸ್ತೇ ಜಂಗಮೋ ಭಕ್ತಿಮಂದಿರಮ್
ಅತಿಭಕ್ತ್ಯಾ ಲಿಂಗತುಷ್ಟಿರಪಹಾಸ್ಯಾದ್ಯಮದಂಡನಮ್'
ಎಂದುದಾಗಿ, ಕೂಡಲಸಂಗಮದೇವಯ್ಯ ತಾನೆ
ಭಕ್ತಿಯ ಪಥವ ತೋರುವ ತಂದೆ. ॥೩೮೯॥

೩೯೦

ಎನ್ನ ಆಪತ್ತು, ಸುಖ-ದುಃಖವನಿನ್ನಾರಿಗೆ ಹೇಳುವೆ?
ಶರಣಸ್ಥಲದವರಿಗೆ ಹೇಳಿದಡೆ ಮಚ್ಚರ!
ಸವತಿ-ಸಕ್ಕರೆ, ಬೇವು-ಬೆಲ್ಲ ಉಂಟೆ? ಇನ್ನಾರಿಗೆ ಹೇಳುವೆ?
ಕೂಡಲಸಂಗಮದೇವಾ, ಜಂಗಮವಾಗಿ ಬಂದು
ಎನ್ನ ಮನದ ಸೂತಕವ ಕಳೆಯಾ. ॥೩೯೦॥

೩೯೧

ನಾನಾಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೆ, ಅಯ್ಯಾ?
ಉಭಯಕುಳಕ್ಕಲ್ಲದೆ ತೆರಳದು.
ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರೆ ಬಂದು ಎತ್ತುವಂತೆ,
ಎನ್ನನಾರು ಜನ್ಮಕ್ಕೆ ತಂದು ಅಘೋರನರಕದಲ್ಲಿಕ್ಕಿದುದ ನಾನು ಬಲ್ಲೆ.
ಕೂಡಲಸಂಗಮದೇವಾ ನಿಮ್ಮ ಹಂಗೇನು? ಹರಿಯೇನು?
ಉಭಯ ಲಿಂಗ ಜಂಗಮದ ಮೊರೆಹೊಕ್ಕು ಬದುಕಿದೆನು. ॥೩೯೧॥

೩೯೨

ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ಮೀನಜ, ರೋಮಜ ಮಹಾಮುನಿಗಳ ಲಯವ ಮಾಡುವುದ ನಾ ಬಲ್ಲೆನಾಗಿ.
ಅಯ್ಯಾ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ನವಕೋಟಿಬ್ರಹ್ಮರಿಗೆ ಪ್ರಳಯವ ಮಾಡುವುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ದಶಕೋಟಿ ನಾರಾಯಣರಿಗೆ ಮರಣವ ಮಾಡುವುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ಅನಂತಕೋಟಿರುದ್ರರಿಗೆ ಲಯವ ಮಾಡುವುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ಎನ್ನನೇಳು ಭವಕ್ಕೆ ತಂದಲ್ಲಿ,
ಆನುಭಯ ಲಿಂಗ ಜಂಗಮದ ಮೊರೆಹೊಕ್ಕು
ಭವಂ ನಾಸ್ತಿಯಾಗಿ ಬದುಕಿದೆನಯ್ಯಾ, ಕೂಡಲಸಂಗಮದೇವಾ. ॥೩೯೨॥

೩೯೩

ಲಿಂಗದರ್ಶನ ಕರಮುಟ್ಟಿ, ಜಂಗಮದರ್ಶನ ಶಿರಮುಟ್ಟಿ,
ಆವುದ ಘನವೆಂಬೆ? ಆವುದ ಕಿರಿದೆಂಬೆ?
ತಾಳಸಂಪುಟಕ್ಕೆ ಬಾರದ ಘನವ ಅರ್ಪಿಸ ಹೋದಡೆ,
ಅರ್ಪಣ ಮುನ್ನವೆ ಇಲ್ಲ, ಗಮನ ನಿರ್ಗಮನವಾಯಿತ್ತು.
ಈ ಉಭಯ ಭೇದವನರಿಯರಾಗಿ,
ಜಂಗಮವೇ ಲಿಂಗ ಕೂಡಲಸಂಮುಗದೇವಾ. ॥೩೯೩॥

೩೯೪

ಶಿವಭಕ್ತರೆ ಅಧಿಕರು ನೋಡಯ್ಯಾ.
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ.
ಈ ದ್ವಿವಿಧವನೊಂದೆ ಎಂದು ನಂಬಿದೆ,
ಕೂಡಲಸಂಗಮದೇವಾ. ॥೩೯೪॥

೩೯೫

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ,
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ,
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ,
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ–
ಈ ನಾಲ್ಕು ಮೂಲಸ್ಥಾನ.
ನಾನಾ ಸ್ಥಾನವ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲಸಂಗಮದೇವಾ. ॥೩೯೫॥

೩೯೬

ಭಕ್ತದೇಹಿಕನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ,
ಆಳ್ದನು ಬರಲಾಳು ಮಂಚದ ಮೇಲಿಪ್ಪುದು ಗುಣವೇ ಹೇಳಾ?
ಕೂಡಲಸಂಗಮದೇವಾ,
ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ. ॥೩೯೬॥

೩೯೭

ಜಂಗಮದ ಸನ್ನಿಧಿಯಲ್ಲಿ ವಾಹನವನೇರಲಮ್ಮೆ :
ಏರಿದರೆ ಭವ ಹಿಂಗದು.
ಏನು ಕಾರಣ? ಮುಂದೆ ಸೂಲವನೇರುವ ಪ್ರಾಪ್ತಿಯುಂಟಾದ ಕಾರಣ,
ಜಂಗಮ ಬರಲಾಸನದಲ್ಲಿ ಇರಲಮ್ಮೆ :
ಇದ್ದರೆ ಭವ ಹಿಂಗದು.
ಏನು ಕಾರಣ? ಮುಂದೆ ಕಾಯ್ದ ಇಟ್ಟಿಗೆಯ ಮೇಲೆ

ಕುಳ್ಳಿರುವ ಪ್ರಾಪ್ತಿಯುಂಟಾದ ಕಾರಣ.
ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆನು :
ನಿಂದಡೆ ಭವ ಹಿಂಗದಾಗಿ.
ಏನು ಕಾರಣ? ಮುಂದೆ ಹೆಡಗುಡಿಯ ಕಟ್ಟಿ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ.
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ.
ನಿಮ್ಮವರ ಸುಳುಹು ನೀವೆಂದೇ ಭಾವಿಸಿ,
ತೊತ್ತು-ಭೃತ್ಯನಾಗಿಪ್ಪೆನಯ್ಯಾ,
ಕೂಡಲಸಂಗಮದೇವಾ. ॥೩೯೭॥

೩೯೮

ಜಂಗಮವಿರಹಿತ ಲಿಂಗಾರ್ಚನೆ :
ಓಡ ಬಿಲಲೆರೆದ ಜಲದಂತೆ.
ಜಂಗಮಸನ್ನಿಹಿತ ಲಿಂಗಾರ್ಚನೆ :
ಇದೆ ಭಕ್ತಿಗೆ ಪಥವಯ್ಯಾ.
ಜಂಗಮಪ್ರಸಾದಭೋಗೋಪಭೋಗವು :
ಎನಗಿದೇ ಲಿಂಗಾರ್ಚನೆ.
ಬೇರೆ ಮತ್ತೊಂದನರಿದೆನಾದಡೆ,
ಕೂಡಲಸಂಗಮದೇವ ನರಕದಲ್ಲಿಕ್ಕುವ. ॥೩೯೮॥

೩೯೯

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ?
ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ?
ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ?
ರೂಢೀಶ್ವರನ ಭೇದಿಸಬಹುದೆ? ಒಡಲಿಲ್ಲ[ದೆ].
ನಿರಾಳಕರ್ತೃ ಕೂಡಲಸಂಗಮದೇವ
ಜಂಗಮಮುಖವಾದನಾಗಿ ಮತ್ತೊಂದನರಿಯೆನಯ್ಯಾ. ॥೩೯೯॥

೪೦೦

ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತಿಪ್ಪನಾ ಭಕ್ತನು.
ಮಾಡಿದಡೆ ಮಾಡಲಿ, ಮಾಡಿದಡೆ ತಪ್ಪೇನು?
ಆ ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈದುಡುಕಿದಡೆ
ಅದು ಪ್ರಸಾದವಲ್ಲ, ಕಿಲ್ಬಿಷ.
ಆ ಸಮಯೋಚಿತದಲ್ಲಿ ಬಂದ ಜಂಗಮದ ಶಬ್ದವ ಕೇಳಿ
ಪ್ರಸಾದಕ್ಕೆ ಕೈದೆಗೆದಡೆ, ಅದು ಲಿಂಗಕ್ಕೆ ಬೋನ.
ಇದು ಕಾರಣ, ಕೂಡಲಸಂಗಮದೇವಾ,
ಇಂತಪ್ಪ ಸದಾಚಾರಿಗಳನೆನಗೆ ತೋರಾ. ॥೪೦೦॥

೪೦೧

ಉತ್ತಮ ಮಧ್ಯಮ ಕನಿಷ್ಠವೆಂದು,
ಬಂದ ಜಂಗಮವನೆಂದೆನಾದಡೆ
ನೊಂದೆನಯ್ಯಾ, ಬೆಂದೆಯಯ್ಯಾ,
ಎನ್ನ ಕಿಚ್ಚು ಎನ್ನ ಸುಟ್ಟಿತ್ತು.
ಸುಖಿಜಂಗಮ, ಸಾಮಾನ್ಯಜಂಗಮ ಉಂಟೆ,
ಕೂಡಲಸಂಗಮದೇವಾ? ॥೪೦೧॥

೪೦೨

ಲಾಂಛನವ ಕಂಡು ನಂಬುವೆ,
ಅವರಂತರಂಗವ ನೀನೇ ಬಲ್ಲೆ.
ತೊತ್ತಿಂಗೆ ತೊತ್ತುಗೆಲಸವಲ್ಲದೆ,
ಅರಸರ ಸುದ್ದಿ ಎಮಗೇಕಯ್ಯಾ?
ರತ್ನಮೌಕ್ತಿಕದಚ್ಚು,
ಕೂಡಲಸಂಗಮದೇವಾ ನಿಮ್ಮ ಶರಣರು. ॥೪೦೨॥

೪೦೩

ಆರಾರ ಮನದಲ್ಲಿ ಏನೇನಿಹುದೆಂದರಿಯೆ.
ಒಳ್ಳಿಹರೆಂದೆನಲಮ್ಮೆ,

ಹೊಲ್ಲಹರೆಂದೆನಲಮ್ಮೆ,
ಶಿವಭಕ್ತರಾದ ಕಾರಣ.
ಜಂಗಮವೆ ಲಿಂಗ ಕೂಡಲಸಂಗಮದೇವಾ. ॥೪೦೩॥

೪೦೪

ಸಂಗಸಹಿತ ಶರಣರು ಬಂದರೆ
ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು.
ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು?
ಅಂಗಲಿಂಗ ಸನ್ನಿಹಿತವಾಗಿ ಬಂದಡೆ, ಸಂಗ ನೀನೆಂದು,
ಮತ್ತೆ ಮನದಲ್ಲಿ ಸಂದೇಹ ಹೊಳೆದಡೆ
ಬೆಂದೆನಲ್ಲಾ ನಾನು,
ಕೂಡಲಸಂಗಮದೇವಾ. ॥೪೦೪॥

೪೦೫

ಕೆಂಡದಲ್ಲಿಟ್ಟಡೆ ಮೆಯ್ ಬೆಂದುದೆಂಬರು.
ಕೊಂಡಿಟ್ಟವನ ಕೈ ಮುನ್ನವೆ ಬೆಂದುದು.
ನೊಂದೆ, ನಾನು ನೊಂದೆನಯ್ಯಾ.
ಬೆಂದೆ, ನಾನು ಬೆಂದೆನಯ್ಯಾ.
ಕೂಡಲಸಂಗನ ಶರಣರ ಕಂಡು ಕಾಣದಂತಿದ್ದಡೆ
ನಾನು ಅಂದೇ ಬೆಂದೆನಯ್ಯಾ. ॥೪೦೫॥

೪೦೬

ಎಡದ ಕೈಯಲು ನಿಗಳವನಿಕ್ಕಿ
ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ?
ಪ್ರಾಣವೊಂದಾಗಿ ದೇಹ ಬೇರಿಲ್ಲ.
ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದಡೆ
ಬೆಂದೆನಯ್ಯಾ ನಾನು,
ಕೂಡಲಸಂಗಮದೇವಾ. ॥೪೦೬॥

೪೦೭

ತನುವ ನೋಯಿಸಿ, ಮನವ ಬಳಲಿಸಿ,
ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೆ?
ಕೂಡಲಸಂಗಮದೇವಾ,
ಶಿವಭಕ್ತರ ನೋವೇ ಅದು ಲಿಂಗದ ನೋವು.। ।೪೦೭॥

೪೦೮

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ.
ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದಡೆ
ನಿಮಗಾನು ದ್ರೋಹಿಯಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ. ॥೪೦೮॥

೪೦೯

ನಡೆಯಲರಿಯದೆ, ನುಡಿಯಲರಿಯದೆ
ಲಿಂಗವ ಪೂಜಿಸಿ ಫಲವೇನು! ಫಲವೇನು!
ಅವರ ದುಃಖವೆನ್ನ ದುಃಖ, ಅವರ ಸುಖವೆನ್ನ ಸುಖ.
ಕೂಡಲಸಂಗನ ಶರಣರ ಮನನೊಂದಡೆ
ಆನು ಬೆಂದೆನಯ್ಯಾ. ॥೪೦೯॥

೪೧೦

ಬಂಜೆ ಬೇನೆಯನರಿಯದಂತೆ ಒಬ್ಬರೊಂದ ನುಡಿವಿರಿ, ಕೇಳಿರಯ್ಯಾ.
ಎನಗೆ ಆಯುಷ್ಯ ಭವಿಷ್ಯ, ಎನ್ನ ಭಕ್ತರು.
ಎನಗೆ ಆಯುಷ್ಯ ಭವಿಷ್ಯ, ಎನ್ನ ಪ್ರಮಥರು ಕಂಡಯ್ಯಾ.
ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯಾ. ॥೪೧೦॥

೪೧೧

ಬೇರೂರಲಿದ್ದು ಬಂದ ಜಂಗಮವೆ ಲಿಂಗವೆಂದು,
ಮನೆಯಲಿದ್ದ ಜಂಗಮವನುದಾಸೀನವ ಮಾಡಿದಡೆ

ನಾನು ಬೆಂದೆನಯ್ಯಾ. ಆನು ಬೆಂದ ಬೇಗೆಯನರಿಯೆ, ಕಾಣಾ
ಕೂಡಲಸಂಗಮದೇವಾ. ॥೪೧೧॥

೪೧೨

ಉಟ್ಟು-ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು,
ಕಂತೆ-ಬೊಂತೆಯ ಜಂಗಮ ಬಂದಡೆ ಹೀನವೆಂದು
ಕಂಡೆನಾದಡೆ ಪಂಚಮಹಾಪಾತಕ.
ಇದು ಕಾರಣ, ಅನ್ನ-ವಸ್ತ್ರ-ಧನ ಮಾಟದಲ್ಲಿ
ಎರಡಾಗಿ ಕಂಡೆನಾದಡೆ ನರಕದಲ್ಲಿಕ್ಕುವ
ಕೂಡಲಸಂಗಮದೇವ. ॥೪೧೨॥

೪೧೩

ಅಡ್ಡದೊಡ್ಡ ನಾನಲ್ಲಯ್ಯಾ, ದೊಡ್ಡ ಬಸಿರು ಎನಗಿಲ್ಲಯ್ಯಾ,
ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ.
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿ ಅರಸಿ
ಬೋಧಿಸಲು, ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ,
ದೊಡ್ಡತನವೆನಗಿಲ್ಲಯ್ಯಾ, ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ.
ಅನಾಥ ನಾನಯ್ಯಾ, ಕೂಡಲಸಂಗಮದೇವಾ. ॥೪೧೩॥

೪೧೪

ಕುದುರೆ-ಸತ್ತಿಗೆಯವರ ಕಂಡಡೆ ಹೊರಳಿಬಿದ್ದು ಕಾಲಹಿಡಿವರು,
ಬಡಭಕ್ತರು ಬಂದಡೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು.
ಎನ್ನೊಡೆಯ ಕೂಡಲಸಂಗಯ್ಯನವರ
ತಡೆಗೆಡಹಿ ಮೂಗ ಕೊಯ್ಯದೆ ಮಾಬನೆ? ॥೪೧೪॥

೪೧೫

ದೂರದಿಂದ ಬಂದ ಜಂಗಮವನಯ್ಯಗಳೆಂದು,
ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯಾ.
ಸಾರಿದ್ದವರು, ದೂರಿದ್ದವರೆಂದು ಬೇರೆ ಮಾಡಿ ಕಂಡಡೆ,

ಕೂಡಲಸಂಗಮದೇವ
ಸಿಂಗಾರದ ಮೂಗ ಕೊಯ್ಯದೆ ಮಾಬನೆ? ॥೪೧೫॥

೪೧೬

ಹಿಡಿವೆಡೆಯನೆ ಕಾಸಿ, ಹಿಡಿವ ಕೈಬೆಂದು
ಮಿಡುಮಿಡನೆ ಮಿಡುಕುವ ಮರುಳ ಮಾನವನೇ
ಬಡವನೆಂದೆನಬೇಡ ಲಾಂಛನಧಾರಿಯನು,
ಕಡು ಸ್ನೇಹದಿಂದವರ ಪೂಜೆಮಾಡುವುದು.
ನಿಜವಡಗಿದ ರೂಪು, ನಿರ್ವಯಲಸ್ಥಾನ,
ನಡೆಲಿಂಗ ಜಂಗಮ ಕೂಡಲಸಂಗಮದೇವಾ. ॥೪೧೬॥

೪೧೭

ಹಾಲ ಕಂದಲು, ತುಪ್ಪದ ಮಡಕೆಯ ಬೋಡು ಮುಕ್ಕೆನಬೇಡ.
ಹಾಲು ಸಿಹಿ, ತುಪ್ಪ ಕಮ್ಮನೆ: ಲಿಂಗಕ್ಕೆ ಬೋನ.
ಕೂಡಲಸಂಗನ ಶರಣರ
ಅಂಗಹೀನರೆಂದಡೆ ನಾಯಕನರಕ. ॥೪೧೭॥

೪೧೮

ಆಚಾರವರಿಯಿರಿ, ವಿಚಾರವರಿಯಿರಿ.
ಜಂಗಮಸ್ಥಲ ಲಿಂಗ ಕಾಣಿರಯ್ಯಾ.
ಜಾತಿಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ.
ನುಡಿದಂತೆ ನಡೆಯದಿದ್ದಡೆ ಕೂಡಲಸಂಗಯ್ಯ ಮೆಚ್ಚ ಕಾಣಿರಯ್ಯಾ ॥೪೧೮॥

೪೧೯

ಸ್ಥಾವರಭಕ್ತಂಗೆ ಸೀಮೆಯಲ್ಲದೆ
ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು?
ಅಂಬುಧಿಗೆ ಸೀಮೆಯಲ್ಲದೆ
ಹರಿವ ನದಿಗೆ ಸೀಮೆಯೆಲ್ಲಿಯದು?
ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೆ
ಕೂಡಲಸಂಗಮದೇವಾ? ॥೪೧೯॥

೪೨೦

ಎತ್ತಿಕೊಳ್ಳಲೇಕೆ, ಮತ್ತಿಳುಹಲೇಕಯ್ಯಾ?
ಧರಧುರ ಭಕ್ತಿಯ ಮಾಡಲೇಕಯ್ಯಾ?
ನಿಂದಿಸಲೇಕೆ? ಸ್ತುತಿಯಿಸಲೇಕೆ?
ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲ್ಲಿ
ಮೆಟ್ಟಿ ಹುಡಿಹೊಯ್ಯದೆ ಮಾಬನೆ ಕೂಡಲಸಂಗಮದೇವ? ॥೪೨೦॥

೪೨೧

ಮರಕ್ಕೆ ಬೇರು ಬಾಯಿಯೆಂದು ತಳಕ್ಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ.
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳ ಪದಾರ್ಥವನೀವನು.
ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ. ॥೪೨೧॥

೪೨೨

ಆರಾಧನೆಯ ಮಾಡಿದಡೆ ಅಮೃತದ ಬೆಳಸು,
ವಿರೋಧಿಸಿದಡೆ ವಿಷದ ಬೆಳಸು,
ಇದು ಕಾರಣ, ಜಂಗಮಕ್ಕೆ ಅಂಜಲೇಬೇಕು.
ಸ್ಥಾವರ ಜಂಗಮ ಒಂದೆಂದರಿದಡೆ
ಕೂಡಲಸಂಗಮದೇವ ಶರಣಸನ್ನಿಹಿತ. ॥೪೨೨॥

೪೨೩

ಹೊಸತಿಲ ಪೂಜೆಸಿ ಹೊಡವಂಟು ಹೋದ
ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ.
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು
ಉದಾಸೀನವ ಮಾಡಿದಡೆ,
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ!
ಕೂಡಲಸಂಗಮದೇವ ಅಘೋರನರಕದಲ್ಲಿಕ್ಕುವ. ॥೪೨೩॥

೪೨೪

ಲಿಂಗವ ಪೂಜೆಯ ಮಾಡಿ,
ಜಂಗಮವ ಕಂಡು ಉದಾಸೀನವ ಮಾಡಿದಡೆ,
ಆ ಲಿಂಗಪೂಜಕರಿಗೆ ಮಾಡಿದ,
ಶಿವದೂತರ ದಂಡವೆಂಬುದು.
ಲೋಕದ ಕರ್ಮಿಗಳಿಗೆ ಮಾಡಿದ,
ಯಮದೂತರ ದಂಡವೆಂಬುದು
ಇದು ಕಾರಣ, ಲಿಂಗ ಜಂಗಮವನೊಂದೆಂದರಿಯದವರ
ಎನಗೆ ತೋರದಿರಯ್ಯಾ, ಕೂಡಲಸಂಗಮದೇವಾ. ॥೪೨೪॥

೪೨೫

ಜಂಗಮನಿಂದೆಯ ಮಾಡಿ,
ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೊರಿ
ಶಿವಾ ಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು.
ಗುರುವಿನ ಗುರು ಜಂಗಮ–
ಇಂತೆಂದುದು ಕೂಡಲಸಂಗನ ವಚನ. ॥೪೨೫॥

೪೨೬

ಅರಸನ ಕಂಡು ತನ್ನ ಪುರುಷನ ಮರೆದಡೆ
ಮರನನೇರಿ ಕಯ್ಯ ಬಿಟ್ಟಂತಾಯಿತ್ತಯ್ಯಾ.
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ!
ನಮ್ಮ ಕೂಡಲಸಂಗಮದೇವಯ್ಯ
ಜಂಗಮ ಮುಖಲಿಂಗವಾದ ಕಾರಣ. ॥೪೨೬॥

೪೨೭

ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ,
ಹಿಂಗಿತ್ತು ಶಿವಲೋಕ ಇನ್ನೆಲ್ಲಿಯದಯ್ಯಾ.
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ,
ಸಮಯೋಚಿತವನರಿಯದೆ ಉದರವ ಹೊರೆವವರ
ನರಕದಲ್ಲಿಕ್ಕದೆ ಮಾಬನೆ ಕೂಡಲಸಂಗಮದೇವ? ॥೪೨೭॥

೪೨೮

ಲಿಂಗದಲ್ಲಿ ದಿಟವನರಸುವಡೆ ಜಂಗಮವ ನೆರೆ ನಂಬುವುದು.
ನಡೆಲಿಂಗ, ನುಡಿಲಿಂಗ,
ಮುಖಲಿಂಗವೆಂದೆ ನಂಬೋ!
'ಯತ್ರ ಮಾಹೇಶ್ವರಸ್ತತ್ರ ಸನ್ನಿಹಿತಃ'
ಅಧರ ತಾಗಿದ ರುಚಿಯನುದರ ತಾಗಿದ ಸುಖವ
ಉಂಬ ಉಡುವ ಕೂಡಲಸಂಗಮದೇವ, ಜಂಗಮಮುಖದಲ್ಲಿ. ॥೪೨೮॥

೪೨೯

ಜಂಗಮದ ಮನ-ಭಾವದಲ್ಲಿ ಭಕ್ತನೆ ಭೃತ್ಯನೆಂದು,
ಭಕ್ತನ ಮನ-ಭಾವದಲ್ಲಿ ಜಂಗಮವೆ ಕರ್ತನೆಂದು ಇದ್ದ ಬಳಿಕ,
ಬಂದಿತ್ತು-ಬಾರದು,
ಇದ್ದತ್ತು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು.
ಹೋಯಿತ್ತೆಂಬ ಗುಣವುಳ್ಳನ್ನಕ್ಕ ನಿಮಗೆ ದೂರ,
ನಿಮ್ಮವರಿಗೆ ಮುನ್ನವೆ ದೂರ, ಶಿವಾಚಾರಕ್ಕಲ್ಲಿಂದತ್ತ ದೂರ.
ಜಂಗಮದ ಹರಿದ ಹರಿವು,
ಜಂಗಮದ ನಿಂದ ನಿಲವು,
ಜಂಗಮದ ಗಳಗರ್ಜನೆ,
ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ
ನೀನಂದೆ ಮೂಗ ಕೊಯ್ ಕೂಡಲಸಂಗಮದೇವಾ. ॥೪೨೯॥

೪೩೦

ನಯನದಾಹಾರವ ಜಂಗಮವ ನೋಡಿಸುವೆನು,
ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು,
ಘ್ರಾಣದಾಹಾರವ ಜಂಗಮವ ವಾಸಿಸುವೆನು,
ಜಿಹ್ವೆಯಾಹಾರವ ಜಂಗಮವನೂಡಿಸುವೆನು,
ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು,
ಅಧಿಕ ಪ್ರೇಮ ಪರಿಣಾ[ಮ]ವ ಮಾಡುವೆನು,
ಸಕಲಪದಾರ್ಥಂಗಳ ನೀಡುವೆನು,
ಕೂಡಲಸಂಗಾ ನಿಮ್ಮ ಶರಣರಿಗೆ ॥೪೩೦॥

೪೩೧

ಎಂಬತ್ತುನಾಲ್ಕುಲಕ್ಷ ಮುಖದೊಳಗೊಂದೆ ಮುಖವಾಗಿ
ಕಾಡಿ ನೋಡೆನ್ನನು, ಬೇಡಿ ನೋಡೆನ್ನನು,
ಬೇಡದಿದ್ದಡೆ, ಅಯ್ಯಾ, ನಿಮಗೆ ಪ್ರಮಥರಾಣೆ.
ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು
ಕೂಡಲಸಂಗಮದೇವಾ. ॥೪೩೧॥

೪೩೨

ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ,
ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ,
ಬಡವಾದೆನಯ್ಯಾ ಎನ್ನ ತನು ಮನ ಧನವ ಬೇಡುವರಿಲ್ಲದೆ.
ಕಾಡುವ ಬೇಡುವ ಶರಣರ ತಂದು
ಕಾಡಿಸು ಬೇಡಿಸು ಕೂಡಲಸಂಗಮದೇವಾ. ॥೪೩೨॥

೪೩೩

ವೇಷ ಅವಿಚಾರದಲ್ಲಿ ನಡೆಯಿತ್ತೆಂದು
ಆಸುರದಲ್ಲಿ ಬಗುಳುವ ಕುನ್ನಿ, ನೀ ಕೇಳಾ :
ಹರಿಯನೆ ದಾಸನ ವಸ್ತ್ರವ?
ಉಣ್ಣನೆ ಚೆನ್ನಯ್ಯನ ಸಂಗಾತ?
ಪರವಧುವ ಕೊಳ್ಳನೆ ಸಿಂಧುಬಲ್ಲಾಳನ?
ಬೇಡನೆ ಸಿರಿಯಾಳನ ಮಗನ?
ನಡೆವುದು ನುಡಿವುದು ಅವಿಚಾರವೆಂದು,
ಭಾವ ವಿಭಾವವೆಂದು ಕಂಡೆನಾದಡೆ ತಪ್ಪೆನ್ನದು,
ಮೂಗ ಕೊಯಿ, ಕೂಡಲಸಂಗಮದೇವಾ. ॥೪೩೩॥

೪೩೪

ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ
ಸಂಗಾ, ನಿಮ್ಮ ತೊತ್ತುತನಕ್ಕೆ ದೂರವಯ್ಯಾ.

ಕದ್ದು ತಿಂದಡೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ.
ಜಂಗಮ ಮನೆಗೆ ಬಂದಲ್ಲಿ ಓಸರಿಸಿದಡೆ
ಹಿಡಿದು ಮೂಗ ಕೊಯ್ಯಯ್ಯಾ ಕೂಡಲಸಂಗಮದೇವಾ. ॥೪೩೪॥

೪೩೫

ದೇವನಿಂತಹನೆಂದು ತೋರಿಯೆ ಕೊಡುವೆನು ಗಣಂಗಳಿಗೆ;
ಬಲ್ಲಾಳನ ವಧುವ ಬೇಡಿದಾತನೀ ದೇವ.
ದೇವನಿಂತಹನೆಂದು ತೋರಿಯೆ ಕೊಡುವೆನು ಗಣಂಗಳಿಗೆ;
ದಾಸನ ವಸ್ತ್ರವ ಬೇಡಿದಾತನೀ ದೇವ.
ದೇವನಿಂತಹನೆಂದು ತೋರಿಯೆ ಕೊಡುವೆನು ಗಣಂಗಳಿಗೆ;
ಸಿರಿಯಾಳನ ಮಗನ ಬೇಡಿದಾತನೀ ದೇವ.
ಕೂಡಲಸಂಗಮದೇವ ಜಂಗಮಮುಖಲಿಂಗವಾಗಿ
ಕಾಡಿ ನೋಡುವ, ಬೇಡಿ ನೋಡುವ. ॥೪೩೫॥

೪೩೬

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮಪ್ರಮಥರಾಣೆ.
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ. ॥೪೩೬॥

೪೩೭

ಆಲುತ್ತಲು ಹರೆಯ ಹೊಯಿಸಿ,
ಅಂಕವ ಮಾಡಿದೆನೆಲ್ಲರ ಕಂಡು.
ಆನು ಬೇಡೆಂದಡೆ ಮಾಣೆ,
ಕಲಿತನ ಮಾಡಿದೆನೆಲ್ಲರ ಕಂಡು.
ಅಲ್ಲಿ ಹೋಯಿತ್ತು ಗಳೆಯೆಂದಡೆ
ಆಸೆ ಮಾಡೆನು, ಕೂಡಲಸಂಗಮದೇವಾ. ॥೪೩೭॥

೪೩೮

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ. ॥೪೩೮॥

೪೩೯

ಆವನೇವನಾದಡೇನು ಹೇಮವಿಲ್ಲದಂಗೈಸಬಹುದೆ?
ಕೊಡಲಿಲ್ಲೆಂಬುದರಿಂದ ಸಾಯಲುಬಹುದು, ಸೈರಿಸಬಾರದು.
ಬೇಡುವವರ ನೋಡಿ ನೋಡಿ,
ಈಯಲಿಲ್ಲದ ಜೀವನವದೇಕೆ ಕೂಡಲಸಂಗಮದೇವಾ? ॥೪೩೯॥

೪೪೦

ಹರಗಣಪಜ್ತೆಯ ನಡುವೆ ಕುಳ್ಳಿರ್ದು
ನಾನು ಒಡೆತನದ ನಾಯಿತೇಜವ ಹೊತ್ತುಕೊಂಡು,
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದವೂ ಮಿಗಿಲಾಗಿ ಇಕ್ಕಲು, ತೆಗೆದಿರಿಸಿದೆನು.
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು.
ಕರುಣಿ ಚನ್ನಬಸವಣ್ಣಾ, ಮರೆದು ಕೊಂಡೆನಾದಡೆ,
ಒಡೆಯ ಕೂಡಲಸಂಗಯ್ಯ ಕೆಡಹಿ ನರಕದಲ್ಲಿಕ್ಕುವ. ॥೪೪೦॥

೪೪೧

ಭಕ್ತಿ ಸುಭಾಷೆಯ ನುಡಿಯ ನುಡಿವೆ,
ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ.
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ.
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು,
ಕೂಡಲಸಂಗಮದೇವಾ. ॥೪೪೧॥

೪೪೨

ಓಡುವಾತ ಲೆಂಕನಲ್ಲ,
ಬೇಡುವಾತ ಭಕ್ತನಲ್ಲ.
ಓಡಲಾಗದು ಲೆಂಕನು,
ಬೇಡಲಾಗದು ಭಕ್ತನು.
ಓಡೆನಯ್ಯಾ, ಬೇಡೆನಯ್ಯಾ,
ಕೂಡಲಸಂಗಮದೇವಾ. ॥೪೪೨॥

೪೪೩

ಚಂದ್ರನ ಶೈತ್ಯದಲು ಬೆಳೆವ ಕಾಯಕ್ಕೆ
ಬೆಳುದಿಂಗಳ ಬಯಸುವ ಹಂಗೇಕಯ್ಯಾ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ?
ಕೂಡಲಸಂಗನ ಶರಣರು ಬಂದು
ತಮ್ಮವನೆಂದಡೆ ಸಾಲದೆ ಅಯ್ಯಾ ॥೪೪೩॥

೪೪೪

ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ.
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವರೆಂಬೆ.
ಬಲ್ಲಾಳನ ವಧುವ ಬೇಡದ ಮುನ್ನ
ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂಬೆ.
ದೇಹಿ ನೀನು, ವ್ಯಾಪಾರಿಗಳು ನಮ್ಮವರು.
ಬೇಡು, ಕೂಡಲಸಂಗಮದೇವಾ, ಎಮ್ಮವರ ಕೈಯಲು. ॥೪೪೪॥

೪೪೫

ಎಲ್ಲರೂ ವೀರರು,
ಎಲ್ಲರೂ ಧೀರರು,
ಎಲ್ಲರೂ ಮಹಿಮರು,

ಎಲ್ಲರೂ ಪ್ರಮಥರು.
ಕಾಳಗದ ಮುಖದಲ್ಲಿ ಕಾಣಬಾರದು,
ಓಡುವ ಮುಖದಲ್ಲಿ ಕಾಣಬಹುದು.
ನಮ್ಮ ಕೂಡಲಸಂಗನ ಶರಣರು ಧೀರರು,
ಉಳಿದವರೆಲ್ಲರೂ ಅಧೀರರು. ॥೪೪೫॥

೪೪೬

ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಪರವಧುವನು ಮಹಾದೇವಿಯೆಂಬೆ
ಕೂಡಲಸಂಗಮದೇವಾ. ॥೪೪೬॥

೪೪೭

ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ,
ಒಂದಕ್ಕಂಜುವೆ, ಒಂದಕ್ಕಳುಕುವೆ,
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ.
ಮುನ್ನಂಜದ ರಾವಳನೇವಿಧಿಯಾದ!
ಅಂಜುವೆನಯ್ಯಾ,
ಕೂಡಲಸಂಗಮದೇವಾ. ॥೪೪೭॥

೪೪೮

ಒಂದಕ್ಕೊಂಬತ್ತ ನುಡಿದು, ಕಣ್ಣ ಕೆಚ್ಚನೆ ಮಾಡಿ, ಗಂಡುಗೆದರಿ
ಮುಡುಹಿಕ್ಕಿ ಕೆ[ಲೆ]ವರ ಕಂಡಡಂಜುವೆ, ಓಸರಿಸುವೆ!
ಓಡಿದೆನೆಂಬ ಭಂಗವಾದಡಾಗಲಿ.
ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ. ॥೪೪೮॥

೪೪೯

ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ,
ನಂಟರು ಬಂದಡೆ ಸಮಯವಿಲ್ಲೆನ್ನಿ. ಅಂದೇಕೆ ಬಾರರು?
ನೀರಿಂಗೆ ನೇಣಿಂಗೆ ಹೊರಗಾದಂದು,
ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ,
ಕೂಡಲಸಂಗಮದೇವಾ? ॥೪೪೯॥

೪೫೦

ಒಡೆಯರಾಡುವ ಮಾತ ಕಡೆ ಪರಿಯಂತರ ಕೇಳಿ,
ಇದಿರುವೋಗಿ ಕಿಂಕರನಾಗಿ ನಡುಗುತ್ತ ಬಿನ್ನಹಮಾಡುವ
ಸದ್ಭಕ್ತನ ತೋರಯ್ಯಾ.
ಒಡೆಯರಾಡುವ ಮಾತ ಕಂಡು, ಕರೆದಲ್ಲಿ ಕೆಡೆಮೆಟ್ಟಿ
ಬಾಯಿ ಘನವೆಂದು ಆಡುವನ ತೋರದಿರಯ್ಯಾ,
ಅವನ ಸಂಗದಲ್ಲಿರಿಸದಿರಯ್ಯಾ,
ಅವನ ಸಹಪಙ್ತಿಯಲ್ಲಿ ಕುಳ್ಳಿರಿಸದಿರಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮ ಬೇಡುವುದೊಂದೆ ವರವು. ॥೪೫೦॥

೪೫೧

ಬಡಹಾರುವನೇಸು ಭಕ್ತನಾದಡೆಯೂ
ನೇಣಿನ ಹಂಗ ಬಿಡ!
ಮಾಲಗಾರನೇಸು ಭಕ್ತನಾದಡೆಯೂ
ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗನೇಸು ಭಕ್ತನಾದಡೆಯೂ
ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರನೇಸು ಭಕ್ತನಾದಡೆಯೂ
ಕಾಳಿಕಾದೇವಿಯ ಹಂಗ ಬಿಡ!

ನಾನಾ ಹಂಗಿನವನಲ್ಲ,
ನಿಮ್ಮ ಶರಣರ ಹಂಗಿನವನಯ್ಯಾ
ಕೂಡಲಸಂಗಮದೇವಾ. ॥೪೫೧॥

೪೫೨

ಶ್ರೀವಿಭೂತಿ ರುದ್ರಾಕ್ಷಿಯಿದ್ದವರ ಲಿಂಗವೆಂಬೆ,
ಇಲ್ಲದವರ ಭವಿಯೆಂಬೆ.
ಕೂಡಲಸಂಗಮದೇವಾ,
ಸದುಭಕ್ತರ ನೀನೆಂಬೆ. ॥೪೫೨॥

೪೫೩

ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ. ॥೪೫೩॥

೪೫೪

ಲಿಂಗಾಂಗಿಗಳಲ್ಲದವರ,
ಶರಣಸಂಗವಿಲ್ಲದವರ ಕಂಡಡೆ ನಾಚುವೆ.
ಅವರ ನುಡಿ ಎನಗೆ ಸಮನಿಸದಯ್ಯಾ
ಕೂಡಲಸಂಗಮದೇವಾ,
ನೀನು ಅಲ್ಲಿ ಇಲ್ಲದ ಕಾರಣ. ॥೪೫೪॥

೪೫೫

ಶ್ರೀವಿಭೂತಿಯ ಹೂಸದವರ,
ಶ್ರೀರುದ್ರಾಕ್ಷಿಯ ಧರಿಸದವರ,
ನಿತ್ಯಲಿಂಗಾರ್ಚನೆಯ ಮಾಡದವರ,

ಜಂಗಮವೇ ಲಿಂಗವೆಂದರಿಯದವರ,
ಸದ್ಭಕ್ತರ ಸಂಗದಲ್ಲಿರದವರ ತೋರದಿರು.
ಕೂಡಲಸಂಗಮದೇವಾ, ಸೆರಗೊಡ್ಡಿ ಬೇಡುವೆನು. ॥೪೫೫॥

೪೫೬

ಕೂಪವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ,
ಕೂರದವರಿಗೆ ಹೇಳಿ ನಾನೇವೆನು ಶಿವನೆ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರೆನ್ನ ಸುಖ–ದುಃಖವನು.
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ,
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು. ॥೪೫೬॥

೪೫೭

ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ,
ಕೊಡು ದೇವ, ಎನ್ನ ಕೈಯಲೊಂದು ಕರಿಕೆಯನು.
'ಮೃಡದೇವಾ ಶರಣೆ'ಂದು ಭಿಕ್ಷಕ್ಕೆ ಹೋದಡೆ
ಅಲ್ಲಿ, 'ನಡೆ ದೇವಾ' ಎಂದೆನಿಸು
ಕೂಡಲಸಂಗಮದೇವಾ. ॥೪೫೭॥

೪೫೮

ಭವಿವಿರಹಿತ ಭಕ್ತನಾದ ಬಳಿಕ,
ಭಕ್ತಿಭಾಜನದಲ್ಲಿ ಮಾಡಿ ಭವಿಗಿಕ್ಕಲಾಗದಯ್ಯಾ.
ಯುಕ್ತಿಶೂನ್ಯರಿಗೆ ಮುಂದೆ ಪ್ರಸಾದ ದೂರ, ಮುಕ್ತಿಯಿಲ್ಲ.
ಮುಂದೆ ನಾಯ ಬಸುರಲ್ಲಿ ಬಪ್ಪುದು ತಪ್ಪದು ಪೃಥ್ವಿಯೊಳಗೆ.
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದೆ
ಅನಾಚಾರಿಗಳಿಗೆಲ್ಲಿಯದೊ? ॥೪೫೮॥

೪೫೯

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ತನುಮನಧನವಲಸದಂತೆ ಮಾಡಯ್ಯಾ,
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ,
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ,
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ,
ಪರಿಣಾಮಿಸುವಂತೆ ಮಾಡು
ಕೂಡಲಸಂಗಮದೇವಾ. ॥೪೫೯॥

೪೬೦

ಹಾರುವ ಹಾರುವನಪ್ಪೆ ನಾನು,
ಸದ್ಭಕ್ತರೆನ್ನವರೆನ್ನವರೆಂದು.
ಹಾರು[ವೆ] ಹಾರು[ವೆ]ನವ್ವಾ ನಾನು,
ಶರಣರು ಎನ್ನವರೆನ್ನವರೆನ್ನವರೆಂದು.
ಕೂಡಲಸಂಗನ ಶರಣರು ಒಕ್ಕುದನಿಕ್ಕಿ ಸಲಹುವರೆಂದು. ॥೪೬೦॥

೪೬೧

ಒಕ್ಕುದ ಮಿಕ್ಕುದನುಂಡು ಕಿವಿವಿಡಿದಾಡುವೆ.
ಶರಣರ ಮನೆಯ ಲೆಂಗಿಯ ಡಿಂಗರಿಗ ನಾನು,
ಕೂಡಲಸಂಗನ ಶರಣರ ಮನೆಯ ಭಕ್ತಿಯ ಮರುಳ ನಾನು. ॥೪೬೧॥

೪೬೨

ಗುರು ಲಿಂಗ ಜಂಗಮದಿಂದ
ಪಾದೋದಕ ಪ್ರಸಾದವಾಯಿತ್ತು.
ಆ ಭಾವವೆ ಮಹಾಪ್ರಸಾದವಾಗಿ
ಎನಗೆ ಬೇರೆ ಪ್ರಸಾದವೆಂಬುದಿಲ್ಲ
ಕೂಡಲಸಂಗಮದೇವಾ. ॥೪೬೨॥

೪೬೩

ಅಹುದೆಂದರಿಯೆ, ಆಗದೆಂದರಿಯೆ,
ಆದಿಪಥವ ತೋರಲರಿಯೆ,
ಸತ್ಯವನರಿಯೆ, ಸಹಜವನರಿಯೆ,
ಸಜ್ಜನ ಶುದ್ಧವ ಮುನ್ನರಿಯೆ.
ನಿಮ್ಮ ಶರಣರ ಒಕ್ಕುದನುಂಡಿಪ್ಪೆ
ಕೂಡಲಸಂಗಮದೇವಾ. ॥೪೬೩॥

೪೬೪

ಆವನಾದಡೇನು ಶ್ರೀಮಹಾದೇವನ ನೆನೆವನ
ಬಾಯ ತಂಬುಲವ ಮೆಲುವೆ,
ಬೀಳುಡೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲಸಂಗಮದೇವಾ. ॥೪೬೪॥

೪೬೫

ಒಂದುವನರಿಯದ ಸಂದೇಹಿ ನಾನಯ್ಯಾ,
ನಂಬುಗೆಯಿಲ್ಲದ ಡಂಬಕ ನಾನಯ್ಯಾ,
ನಿಮ್ಮ ನಂಬಿದ ಶರಣರ ಡಿಂಗರಿಗ ನಾನು,
ಕೂಡಲಸಂಗಮದೇವಾ. ॥೪೬೫॥

೪೬೬

ಬಿಡದೆ ಬಾಗಿಲ ಎಂಜಲ ಕಾಯ್ದಿಪ್ಪೆನು, ಕಿಂಕರನು.
ಕಿಂಕರರ ಮನೆಯಲ್ಲಿ ಕಿಂಕಿಲವನು ಆನು ಹಾರುತ್ತಿಪ್ಪೆನು,
ನಮ್ಮ ಕೂಡಲಸಂಗನ ಶರಣರ
ಒಕ್ಕುದ ಮಿಕ್ಕುದನುಂಬ ಕಿಂಕರ ನಾನು. ॥೪೬೬॥

೪೬೭

ತೊತ್ತಿಂಗೇಕೆ ಲಕ್ಷಣ? ಬಂಟಂಗೇಕೆ ಆಚಾರ?
ಆಗಮವೇಕೆ ಡಿಂಗರಿಗಂಗೆ?

ಒಕ್ಕುದನುಂಬುವಂಗಯ್ಯಾ,
ಕೂಡಲಸಂಗಮದೇವಾ
ನಿಮ್ಮ ನಂಬುವುದಾಚಾರವಯ್ಯಾ. ॥೪೬೭॥

೪೬೮

ತೊತ್ತಿಂಗೆ ಲಕ್ಷಣವೇಕಯ್ಯಾ?
ಅವರೊಕ್ಕುದನುಂಡು ಮಿಕ್ಕುದ ಕಾಯ್ದಿಪ್ಪುದು.
ಸಾರೆ ಹೊರಸೇಕೆ? ಅವಳಿಗೆ ಮಾರುತ್ತರವೇಕೆ?
ಕೂಡಲಸಂಗನ ಶರಣರೊಡನೆ
ಇದಿರುತ್ತರವೇಕೆ ಸಿಂಬಕಂಗೆ? ॥೪೬೮॥

೪೬೯

ಪಾದೋದಕವ ಕೊಂಬೆ, ಪ್ರಸಾದವ ಕೊಂಬೆ,
ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ.
ರಾತ್ರಿಯಲೊತ್ತೆಯ ಕೊಂಬ ಪಾತಕ ಸೂಳೆಯಂತೆ,
ಬರಿ ಮಾತಿಂಗೊಲಿವನೆ ನಮ್ಮ ಕೂಡಲಸಂಗಮದೇವ? ॥೪೬೯॥

೪೭೦

ಪಾತಕ ಮಹಾಪಾತಕವ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ,
ಅವರೊಕ್ಕ ಪ್ರಸಾದವನಾಯ್ದುಂಡಡೆ,
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ,
ಒಮ್ಮೆ ಬೇಡಿಕೊಂಡುಂಡಡೆ!
'ಪಾತಕೇಷು ಮನಃಪ್ರಾಪ್ತೇ ಶಿವಭಕ್ತಗೃಹಂ ವ್ರಜೇತ್
ಯಾಚಯೇದನ್ನಮಮೃತಂ ತದಲಾಭೇ ಜಲಂ ಪಿಬೇತ್'
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು. ॥೪೭೦॥

೪೭೧

ನಾನು ಹೊತ್ತ ಹುಳ್ಳಿಯನಂಬಲಿಗೆ ಕೊಂಬುವರಿಲ್ಲ ನೋಡಯ್ಯಾ.
ಆನು ನಿಮ್ಮ ಶರಣರ ಒಕ್ಕುದನುಂಡು ಬದುಕುವೆನಯ್ಯಾ.

ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು
ಕೂಡಲಸಂಗಮದೇವಾ. ॥೪೭೧॥

೪೭೨
ಭವಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯಾ.
ಅವರುಂಡು ಮಿಕ್ಕುದ ಉಡುಗಿ,
ಒಕ್ಕ ಪ್ರಸಾದವನಾಯ್ದುಕೊಂಬ ಮರುಳ ನಾನಯ್ಯಾ.
ನಮ್ಮ ಕೂಡಲಸಂಗನ ಶರಣರ ರಿಣವ ನಾ ಹಿಂಗಲಾರೆ. ॥೪೭೨॥

೪೭೩
ದಾಸಿಯ ವರ್ಗದಲ್ಲಿಪ್ಪೆನು,
ಶಿವಶರಣರ ಮನೆಯಲ್ಲಿ.
ಅವರೊಕ್ಕುದನುಂಡು,
ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ
ಕಾಲ ಮುಟ್ಟಲಮ್ಮನು,
ಕಲ್ಪಿತ ತೊಡೆಯಿತ್ತು.
ಭವಬಂಧನ ಹಿಂಗಿತ್ತು,
ಕರ್ಮ ನಿರ್ಮಳವಾಗಿತ್ತು.
ಅವರ ತೊತ್ತಿನ ತೊತ್ತಿನ ಪಡಿದೊತ್ತಿನ ಮಗನೆಂದು
ಕೂಡಲಸಂಗಮದೇವನು 'ಇತ್ತ ಬಾ' ಎಂದು ಎತ್ತಿಕೊಂಡನು. ॥೪೭೩॥

೪೭೪
ಜನ್ಮ ಜನ್ಮಕ್ಕೆ ಹೋಗಲೀಯದೆ,
'ಸೋಽಹಂ' ಎಂದೆನಿಸದೆ 'ದಾಸೋಽಹಂ' ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ
ಕೂಡಲಸಂಗಮದೇವಾ. ॥೪೭೪॥

೪೭೫
ಕರ್ತರು ನಿಮ್ಮ ಗಣಂಗಳು
ಎನ್ನ ತೊತ್ತುಮಾಡಿ ಸಲಹಿದ ಸುಖವು

ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ,
ಸಾಯುಜ್ಯದಂತುಟಲ್ಲ.
ಕೇಳಯ್ಯಾ, ಕೂಡಲಸಂಗನ ಶರಣರು
ತಮ್ಮ ಒಕ್ಕುದನಿಕ್ಕಿ ಸಲಹಿದ ಸುಖವು. ॥೪೭೫॥

ಭಕ್ತನ ಪ್ರಾಣಲಿಂಗಿಸ್ಥಲ

೪೭೬

ತೊತ್ತಿಂಗೆ ಬಲ್ಲಹನೊಲಿದಡೆ
ಪದವಿಯ ಮಾಡದೆ ಮಾಬನೆ?
ಜೇಡರ ದಾಸಯ್ಯಂಗೊಲಿದಾತ
ಮತ್ತೊಬ್ಬ ದೇವನೆ, ಅಯ್ಯಾ?
ಮಾದಾರ ಚೆನ್ನಯ್ಯಂಗೆ,
ಡೋಹರ ಕಕ್ಕಯ್ಯಂಗೆ,
ತೆಲುಗು ಜೊಮ್ಮಯ್ಯಂಗೆ ಒಲಿದಾತ ಎ
ುತ್ತೊಬ್ಬ ದೇವನೆ, ಅಯ್ಯಾ?
ಎನ್ನ ಮನದ ಪಂಚೇಂದ್ರಿಯ [ಅವನತ್ತ]ಲಾದಡೆ
ತನ್ನತ್ತ ಮಾಡುವ ಕೂಡಲಸಂಗಮದೇವಯ್ಯ. ॥೪೭೬॥

೪೭೭

ಹೊರಗೆ ಹೂಸಿ ಏವೆನಯ್ಯಾ,
ಒಳಗೆ ಶುದ್ಧವಿಲ್ಲದನ್ನಕ್ಕ?
ಮಣಿಯ ಕಟ್ಟಿ ಏವೆನಯ್ಯಾ,
ಮನ ಮುಟ್ಟದನ್ನಕ್ಕ?
ನೂರನೋದಿ ಏವೆನಯ್ಯಾ,
ನಮ್ಮ ಕೂಡಸಂಗಮದೇವರ ಮನಮುಟ್ಟದನ್ನಕ್ಕ? ॥೪೭೭॥

೪೭೮

ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನ,
ಎಂತಯ್ಯಾ ಎನಗಿನ್ನಾವುದು ಗತಿ?

ಎಂತಯ್ಯಾ ಎನಗಿನ್ನಾವುದು ಮತಿ?
ಎಂತಯ್ಯಾ ಹರಹರಾ, ಕೂಡಲಸಂಗಮದೇವಾ
ಮನವ ಸಂತೈಸೆನ್ನ. ॥೪೭೮॥

೪೭೯

ಅಷ್ಟದಳ ಕಮಲವ ಸುತ್ತುವ ಜೀವಾತ್ಮನ
ಮೆಟ್ಟಿದ ದಳವನರಿಯದೆ,
ಆನು ಭಕ್ತನೆಂತೆಂಬೆ? ಆನು ಶರಣನೆಂತೆಂಬೆ?
ಆನು ಲಿಂಗೈಕ್ಯನೆಂತೆಂಬೆ?
ಕೂಡಲಸಂಗಮದೇವಾ
ಎನ್ನ ಮನವು ಸಮಾಧಾನವಾಗದನ್ನಕ್ಕ? ॥೪೭೯॥

೪೮೦

ನಾ ನಿಮ್ಮ ನೆನೆವೆನು, ನೀವೆನ್ನನರಿಯಿರಿ.
ನಾ ನಿಮ್ಮನೋಲೈಸುವೆನು, ನೀವೆನ್ನ ಕಾಣಿರಿ.
ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ?
ಕೂಡಲಸಂಗಮದೇವಾ,
ಎನಗೆ ನೀವೆ ಪ್ರಾಣ, ಗತಿ–ಮತಿ, ನೋಡಯ್ಯಾ. ॥೪೮೦॥

೪೮೧

ತಂದೆ ನೀನು–ತಾಯಿ ನೀನು,
ಬಂಧು ನೀನು–ಬಳಗ ನೀನು.
ನೀನಲ್ಲದೆ ಮತ್ತಾರೂ ಇಲ್ಲಯ್ಯಾ,
ಕೂಡಲಸಂಗಮದೇವಾ,
ಹಾಲಲದ್ದು, ನೀರಲದ್ದು. ॥೪೮೧॥

೪೮೨

ಎನ್ನ ಆಪತ್ತು–ಸುಖ–ದುಃಖ ನೀನೆ ಕಂಡಯ್ಯಾ,
ಮತ್ತಾರೂ ಇಲ್ಲ, ಹರಹರಾ, ನೀನೆ ಕಂಡಯ್ಯಾ,

ಎನ್ನ ಮಾತಾಪಿತನು ನೀನೆ ಕಂಡಯ್ಯಾ.
ಕೂಡಸಂಗಮದೇವಾ. ॥೪೮೨॥

೪೮೩

ಎನ್ನ ಜನ್ಮವ ತೊಡೆದ ನೀ ಧರ್ಮಿ,
ಎನ್ನ ಜನ್ಮವನತಿಗಳೆದ ನೀ ಧರ್ಮಿ.
ಎನ್ನ ಭವಬಂಧನವ ನಿಃಕರಿಸಿದೆಯಾಗಿ,
ಶಿವನೇ ಗತಿಯೆಂದು ನಂಬಿದೆನಯ್ಯಾ.
ಎನ್ನ ಅಷ್ಟಮದಂಗಳ ಸುಟ್ಟುರುಹಿದೆಯಾಗಿ,
ಕಟ್ಟುಗ್ರದಿಂದ ನಿಮ್ಮ ಶ್ರೀಚರಣವ ಕಂಡೆ.
ಭಕ್ತಪ್ರತಿಪಾಲಕಾ, ನಿಮ್ಮ ನಂಬಿದೆ,
ಕರುಣಿಸು ಕೂಡಲಸಂಗಮದೇವಾ. ॥೪೮೩॥

೪೮೪

ಭವರೋಗವೈದ್ಯನೆಂದು ನಾ ನಿಮ್ಮ ಮರೆಹೊಕ್ಕೆ,
ಭಕ್ತಿದಾಯಕ ನೀನು, ಕರುಣಿಸು ಲಿಂಗತಂದೆ.
ಜಯ ಜಯ ಶ್ರೀ ಮಹಾದೇವ,
ಜಯ ಜಯ ಶ್ರೀ ಮಹಾದೇವ,
ಜಯ ಜಯ ಶ್ರೀ ಮಹಾದೇವ ಎನ್ನುತ್ತಿದ್ದಿತೆನ್ನ ಮನವು.
ಕೂಡಲಸಂಗಮದೇವಂಗೆ ಶರಣೆಂದಿತ್ತೆನ್ನ ಮನವು. ॥೪೮೪॥

ಭಕ್ತನ ಶರಣಸ್ಥಲ

೪೮೫

ಅಂಗಯ್ಯ ಒಳಗಣ ಲಿಂಗವ ನೋಡುತ್ತ,
ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ!
ನೋಟವೆ ಪ್ರಾಣವಾಗಿ ಎಂದಿಪ್ಪೆನೊ!
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ!
ಎನ್ನ ಅಂಗವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗ ಲಿಂಗಾಯೆನುತ್ತ. ॥೪೮೫॥

೪೮೬

ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ,
ನಾಲಗೆ ನಲಿನಲಿದೋಲಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯಾ, ಎನಗೆನ್ನ ತಂದೆ.
ಬಿರಿಮುಗುಳಂದದಿ ಎನ್ನ ಹೃದಯ
ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ,
ಕೂಡಲಸಂಗಯ್ಯಾ. ॥೪೮೬॥

೪೮೭

ಆಡಿ ಕಾಲು ದಣಿಯವು,
ನೋಡಿ ಕಣ್ಣು ದಣಿಯವು,
ಹಾಡಿ ನಾಲಗೆ ದಣಿಯದು, ಇನ್ನೇವೆನಿನ್ನೇವೆ.
ನಾ ನಿಮ್ಮ ಕೈಯಾರೆ ಪೂಜಿಸಿ ಮನದಣಿಯದಿನ್ನೇವೆನಿನ್ನೇವೆ.
ಕೂಡಲಸಂಗಮದೇವಾ ಕೇಳಯ್ಯಾ,
ನಿಮ್ಮ ಉದರವ ಬಗಿದಾನು ಹೊಗುವ ಭರವೆನಗೆ. ॥೪೮೭॥

೪೮೮

ಕಾಯಸಂಗ ನಿಸ್ಸಂಗವಾಗಿ
ಇನ್ನಾವ ಸಂಗವನರಿಯೆನಯ್ಯಾ.
ಮಿಗೆ ಒಲಿದೆನಾಗಿ ಅಗಲಲಾರೆ.
ನಗೆಮೊಗದರಸ, ಅವಧಾರು.
ಕೂಡಲಸಂಗಮದೇವಾ,
ಬಗಿದು ಹೊಗುವೆನು ನಾ ನಿಮ್ಮ ಮನವನು. ॥೪೮೮॥

೪೮೯

ನೋಡಿ ನೋಡಿ ಲಿಂಗಧ್ಯಾನವೆನ್ನ ಮನ:
ರಾಗರಂಜನೆಯ ಉತುಪತಿ ಸ್ಥಿತಿ ಲಯ ನಿನಗೆಂದಾದುವು.
ರಾಗರಂಜನೆಯ ಪೂಜೆ ಎನ್ನ ಮನ!
ಕೂಡಲಸಂಗಮದೇವಾ, ಆಹಾ, ಎನ್ನ ಮನ! ॥೪೮೯॥

೪೯೦

ವಾರವೆಂದರಿಯೆ, ದಿನವೆಂದರಿಯೆ,
ಏನೆಂದರಿಯೆನಯ್ಯಾ.
ಇರುಳೆಂದರಿಯೆ, ಹಗಲೆಂದರಿಯೆ,
ಏನೆಂದರಿಯೆನಯ್ಯಾ.
ನಿಮ್ಮ ಪೂಜಿಸಿ ಎನ್ನುವ ಮರೆದೆ
ಕೂಡಲಸಂಗಮದೇವಾ. ॥೪೯೦॥

೪೯೧

ನಿಮ್ಮ ನೋಟವನಂತಸುಖ,
ನಿಮ್ಮ ಕೂಟ ಪರಮಸುಖ.
ಅವುಟುಕೋಟಿ ರೋಮಂಗಳು
ಕಂಗಳಾಗಿ ನೋಡುತ್ತಿದ್ದೆನು.
ಕೂಡಲಸಂಗಮದೇವಯ್ಯಾ,
ನಿಮ್ಮ ನೋಡಿ ನೋಡಿ
ಮನದಲ್ಲಿ ರತಿಹುಟ್ಟಿ, ನಿಮಿರ್ದವೆನ್ನ ಕಳೆಗಳು. ॥೪೯೧॥

೪೯೨

ವಚನದಲ್ಲಿ ನಾಮಾಮೃತ ತುಂಬಿ,
ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ಕೀರುತಿ ತುಂಬಿ.
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ. ॥೪೯೨॥

೪೯೩

ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ
ಕಡೆಗೋಡಿವರಿದವೆನಗಯ್ಯಾ, ಎನ್ನ ಅಶ್ರುಜಲಂಗಳು!
ಆಲಿಕಲ್ಲ ರೂಪಿನಂತೆ, ಅರಗಿನ ಪುತ್ಥಳಿಯಂತೆ

ತನು ಪುಳಕಿತವಾದ ಬೆಮರ ಬಿಂದುಗಳೆಲ್ಲಾ!
ಕೂಡಲಸಂಗನ ದರ್ಶನಸ್ಪರ್ಶನದಿಂದ
ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ? ॥೪೯೩॥

೪೯೪

ತಾಳಮಾನ ಸರಿಸವನರಿಯೆ,
ಓಜೆ ಬಜಾವಣೆಯ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ,
ಕೂಡಲಸಂಗಮದೇವಾ,
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ. ॥೪೯೪॥

೪೯೫

'ವರಂ ಪ್ರಾಣಪರಿತ್ಯಾಗಶ್ಛೇದನಂ ಶಿರಸೋಽಪಿ ವಾ
ನತ್ವನಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಂ'
ಎಂದುದಾಗಿ, ದೇಹಧರ್ಮ ತನ್ನ ಆದಂತೆ ಆಗಲಿ,
ಕೂಡಲಸಂಗನ ಪೂಜಿಸಿದಲ್ಲದೆ ನಿಲಲಾರೆನು. ॥೪೯೫॥

೪೯೬

ಸುರರು ಕಿನ್ನರರು ಕಿಂಪುರುಷರೆಂಬವರನಾರು ಬಲ್ಲರು
ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯಾ,
ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯಾ.
ಕೂಡಲಸಂಗಮದೇವಾ ಅನ್ಯವೆಂಬುದನರಿಯೆನಯ್ಯಾ. ॥೪೯೬॥

೪೯೭

ಮಂಡೆಯ ಬೋಳಿಸಿಕೊಂಡು
ಗಂಡುದೊತ್ತುವೊಕ್ಕೆನಯ್ಯಾ.
ಲಜ್ಜೆಗೆಟ್ಟಾದಡೂ ಲಿಂಗವನೊಲಿಸುವೆ,
ನಾಣುಗೆಟ್ಟಾದಡೂ ಲಿಂಗವನೊಲಿಸುವೆ,
ಕೆಲದ ಸಂಸಾರಿಗಳು ನಗುತಿರ್ದಡಿರಲಿ,

ಕೂಡಲಸಂಗಮದೇವಾ,
ಶರಣಗತಿವೊಕ್ಕೆನಯ್ಯಾ. ॥೪೯೭॥

೪೯೮

ಎನಗೆ ನಿಮ್ಮ ನೆನಹಾದಾಗ ಉದಯ,
ಎನಗೆ ನಿಮ್ಮ ಮರಹಾದಾಗ ಅಸ್ತಮಾನ.
ಎನಗೆ ನಿಮ್ಮ ನೆನೆಹವೆ ಜೀವನ,
ಎನಗೆ ನಿಮ್ಮ ನೆನಹವೆ ಪ್ರಾಣ, ಕಾಣಾ ತಂದೆ.
ಸ್ವಾಮಿ, ಎನ್ನ ಹೃದಯದಲ್ಲಿ
ನಿಮ್ಮ ಚರಣದುಂಡಿಗೆಯನೊತ್ತಯ್ಯಾ,
ವದನದಲಿ ಷಡಕ್ಷರಿಯ ಬರೆಯಯ್ಯಾ
ಕೂಡಲಸಂಗಮದೇವಾ. ॥೪೯೮॥

೪೯೯

ಎನ್ನ ಕಾಯವ ದಂಡಿಗೆಯ ಮಾಡಯ್ಯಾ,
ಎನ್ನ ಶಿರವ ಸೋರೆಯ ಮಾಡಯ್ಯಾ,
ಎನ್ನ ನರವ ತಂತಿಯ ಮಾಡಯ್ಯಾ,
ಎನ್ನ ಬೆರಳ ಕಡ್ಡಿಯ ಮಾಡಯ್ಯಾ,
ಬತ್ತೀಸ ರಾಗವ ಪಾಡಯ್ಯಾ,
ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ. ॥೪೯೯॥

೫೦೦

ಕುರುಳು ಬೆರಳು ಮುಡುಹು ಮುಂಬಲ್ಲ ಕೊಳ್ಳಾ,
ನಿರಿಯನಿಕ್ಕಿ ದಾಂಟಿದಡೆ ಅಂತೆನ್ನ ನಂಬಾ,
ಪರಪುರುಷರ ಮುಖವ ನೋಡದಂತೆ ಮಾಡಾ,
ಬಳಿಕ ನೀನೆಹಗೆ ಇರಿಸಿದಂತಿರಿಸಾ,
ಎನ್ನ ಉರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ,
ಹರಿಬ್ರಹ್ಮರಿಗೆ ಎರಗದಂತೆ ಬಳಿನೀರನೆರೆಯಾ. ॥೫೦೦॥

೫೦೧

ಕಂಡ ಕನಸು ದಿಟನಾಗಿ
ನಿಧಾನವ ಕಂಡೆನಯ್ಯಾ,
ಬಿಡಲಾರದ ನಿಧಾನವ ಕಂಡೆನಯ್ಯಾ,
ಕೂಡಲಸಂಗಯ್ಯನೆಂಬ
ನಿಧಾನವ ಕಂಡು ಬಿಡಲಾರೆನಯ್ಯಾ. ॥೫೦೧॥

೫೦೨

ಹೊನ್ನ ಹಾವುಗೆಯ ಮೆಟ್ಟಿದವನ!
ಮಿಡಿಮುಟ್ಟಿದ ಕೆಂಜೆಡೆಯವನ!
ಮೈಯಲ್ಲಿ ವಿಭೂತಿಯ ಹೂಸಿದವನ!
ಕರದಲ್ಲಿ ಕಪಾಲವ ಹಿಡಿದವನ!
ಅರ್ಧನಾರಿಯಾದವನ!
ಬಾಣನ ಬಾಗಿಲ ಕಾಯ್ದವನ!
ನಂಬಿಗೆ ಕುಂಟಣಿಯಾದವನ!
ಚೋಳಂಗೆ ಹೊನ್ನಮಳೆಯ ಕರೆದವನ!
ಎನ್ನ ಮನಕ್ಕೆ ಬಂದವನ!
ಸದ್ಭಕ್ತರ ಹೃದಯದಲಿಪ್ಪವನ!
ಮಾಡಿದ ಪೂಜೆಯಲೊಪ್ಪುವನ!
ಕೂಡಲಸಂಗಯ್ಯನೆಂಬವನ!! ॥೫೦೨॥

೫೦೩

ಮನಕ್ಕೆ ಮನೋಹರವಲ್ಲದ ಗಂಡರು
ಮನಕೆ ಬಾರರು, ಕೇಳವ್ವಾ ಕೆಳದೀ.
ಪನ್ನಗಭೂಷಣರಲ್ಲದ ಗಂಡರು
ಇನ್ನೆನಗಾಗದ ಮೋರೆ, ನೋಡವ್ವಾ
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ,
ನಿಮ್ಮಾಣೆಯಯ್ಯಾ, ಕೂಡಲಸಂಗಮದೇವಾ. ॥೫೦೩॥

೫೦೪

ಜಗವೆಲ್ಲಾ ಅರಿಯಲು
ಎನಗೊಬ್ಬ ಗಂಡನುಂಟು,
ಆನು ಮುತ್ತೈದೆ, ಆನು ನಿಟ್ಟೈದೆ.
ಕೂಡಲಸಂಗಮದೇವಯ್ಯನಂತಪ್ಪ
ಎನಗೊಬ್ಬ ಗಂಡನುಂಟು. ॥೫೦೪॥

೫೦೫

ಸಂಸಾರವೆಂಬ ಶ್ವಾನನಟ್ಟಿ,
ಮೀಸಲ ಬೀಸರವ ಮಾಡದಿರಯ್ಯಾ,
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ.
ನೀವಲ್ಲದೆ ಮತ್ತೇನನೂ ಅರಿಯೆನು.
ಕನ್ಯೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು.
ಮನ್ನಿಸು ಕಂಡಾ, ಮಹಾಲಿಂಗವೆ. ಸತಿಯಾನು, ಪತಿ ನೀನಯ್ಯಾ.
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀವೆನ್ನ ಮನವ ಕಾಯ್ದಿಪ್ಪ ಗಂಡನು.
ನಿಮಗೋತ ಮನವನನ್ಯಕ್ಕೆ ಹರಿಸಿದಡೆ
ನಿಮ್ಮ ಅಭಿಮಾನ ಹಾನಿ,
ಕೂಡಲಸಂಗಮದೇವಾ. ॥೫೦೫॥

ಭಕ್ತನ ಐಕ್ಯಸ್ಥಲ

೫೦೬

ನೀನೊಲಿಯಿತ್ತೆ ಪುಣ್ಯ,
ನೀನೊಲ್ಲದುದೆ ಪಾಪ,
ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ.
ನೀನೊಲಿದವನೆ ನಿಮ್ಮನರಿದವನು.
'ಪ್ರಸಾದಾದ್ದೇವತಾಭಕ್ತಿಃ ಪ್ರಸಾದೋ ಭಕ್ತಿಸಂಭವಃ
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ'

ನೀನೊಲಿದವನೆ ಧನ್ಯ,
ಜಗಕ್ಕೆ ಪಾವನ ಕೂಡಲಸಂಗಮದೇವಾ. ॥೫೦೬॥

೫೦೭

ಅಷ್ಟವಿಧಾರ್ಚನೆ ಷೋಡಶೋಪಚಾರವ
ಅಂದಂದಿನ ಕೃತ್ಯವ ಅಂದಂದಿಗೆ ಆನು ಮಾಡಿ ಶುದ್ಧನಯ್ಯಾ.
ಹಂಗು ಹರಿಯಿಲ್ಲದ ಕಾರಣ,
ಕೂಡಲಸಂಗಮದೇವ ನಿಷ್ಫಲದಾಯಕನಾಗಿ
ಆನು ಮಾಡಿ ಶುದ್ಧನಯ್ಯಾ. ॥೫೦೭॥

೫೦೮

'ಮಾಟ ಕೂಟ, ಫಲ ಪ್ರಾಪ್ತಿ' ಎಂಬ ಮಾತ ಕೇಳಲಾಗದು
ಶಿವಾಶಿವಾ! ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು
ಶ್ರೀ ಗುರುಲಿಂಗವು ಕೃಪೆಯ ಮಾಡಿದ ಕಾರಣ.
ಅಲ್ಲಿ ಮಾಡುವವರೂ ಮಾಡಿಸಿಕೊಂಬವರೂ ನೀವೇ
ಕೂಡಲಸಂಗಮದೇವಾ. ॥೫೦೮॥

೫೦೯

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ,
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ,
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ,
ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬೀ ಒಡವೆಯನು
ದಿಟವ ಮಾಡಿ ತೋರಿದರು ಕಾಣಾ,
ಕೂಡಲಸಂಗಮದೇವಾ. ॥೫೦೯॥

೫೧೦

ಭಕ್ತನೆಂತೆಂಬೆನಯ್ಯಾ?
ಭವಿಯ ಸಂಗ ಬಿಡದನ್ನಕ್ಕ.
ಮಾಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀ ಪರಧನದಾಸೆಬಿಡದನ್ನಕ್ಕ.

ಪ್ರಸಾದಿಯೆಂತೆಂಬೆನಯ್ಯಾ ಆಧಿವ್ಯಾಧಿ ನಷ್ಟವಾಗದನ್ನಕ್ಕ.
ಪ್ರಾಣಲಿಂಗಿಯೆಂತೆಂಬೆನಯ್ಯಾ?
ಪ್ರಾಣ ಸ್ವಸ್ಥಿರವಾಗದನ್ನಕ್ಕ.
ಶರಣನೆಂತೆಂಬೆನಯ್ಯಾ?
ಪಂಚೇಂದ್ರಿಯ ನಾಶವಾಗದನ್ನಕ್ಕ.
ಐಕ್ಯನೆಂತೆಂಬೆನಯ್ಯಾ?
ಜನನ ಮರಣ ವಿರಹಿತವಾಗದನ್ನಕ್ಕ.
ಇಂತಪ್ಪ ಭಾಷೆ ವ್ರತ ನೇಮಂಗಳ ನಾನರಿಯೆನಯ್ಯಾ,
ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯಾ.
ನಿಮ್ಮ ಶರಣರ ತೊತ್ತು-ಭೃತ್ಯಾಚಾರವ ಮಾಡುವೆ
ಕೂಡಲಸಂಗಮದೇವಾ. ॥೫೧೦॥

೫೧೧

ಅಭ್ಯಾಸವೆನ್ನ ವರ್ತಿಸಿತ್ತಯ್ಯಾ, ಭಕ್ತಿ ಸಾಧ್ಯವಾಗದು,
ನಾನೇವೆನಯ್ಯಾ?
ಆನು ನಿಮ್ಮ ಮನಂಬೊಗುವನ್ನಕ್ಕ,
ನೀವೆನ್ನ ಮನಂಬೊಗುವನ್ನಕ್ಕ
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ
ಕೂಡಲಸಂಗಮದೇವಾ. ॥೫೧೧॥

೫೧೨

ತನುಸಾರಾಯರ ಮನಸಾರಾಯರ ಜ್ಞಾನಸಾರಾಯರ
ತೋರಯ್ಯಾ, ನಿಮ್ಮ ಧರ್ಮ.
ಭಾವಸಾರಾಯರ ಭಕ್ತಿಸಾರಾಯರ ತೋರಯ್ಯಾ, ನಿಮ್ಮ ಧರ್ಮ.
ಕೂಡಲಸಂಗಮದೇವಯ್ಯಾ ನಿಮ್ಮನರಿಯದ ಅವಗುಣಿಗಳ
ತೋರದಿರಯ್ಯಾ, ನಿಮ್ಮ ಧರ್ಮ. ॥೫೧೨॥

೫೧೩

ಸಂಚಲವಿಲ್ಲದ, ಭಕ್ತಿವಂಚನೆಯಿಲ್ಲದ
ಮಹಾಂತರ ತೋರಾ.

ತನುಶುಚಿ ಮನಶುಚಿಗಳನು ತೋರಾ,
ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸು,
ಕೂಡಲಸಂಗಮದೇವಾ. ॥೫೧೩॥

೫೧೪

ಕಾಯಸಂಗವಳಿದು ಅನುಭಾವಸಂಗದಲುಳಿದವರ ಅಗಲಲಾರೆನು,
ಶಿವಂಗೆ ಮಿಗೆ ಒಲಿದವರನು ನಾನು ಆಗಲಲಾರೆನು ಕಾಣಾ,
ಕೂಡಲಸಂಗಮದೇವಾ. ॥೫೧೪॥

೫೧೫

ಭಕುತಿರತಿಯ ವಿಕಳತೆಯ ಯುಕುತಿಯನೇನ ಬೆಸಗೊಂಬಿರಯ್ಯಾ?
ಕಾಮಿಗುಂಟೆ ಲಜ್ಜೆ ನಾಚಿಕೆ?
ಕಾಮಿಗುಂಟೆ ಮಾನಾಪಮಾನವು?
ಕೂಡಲಸಂಗನ ಶರಣರಿಗೊಲಿದ
ಮರುಳನನೇನ ಬೆಸಗೊಂಬಿರಯ್ಯಾ? ॥೫೧೫॥

೫೧೬

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ.
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ.
ಇದರ ಸಂಗಸುಖದನುಭಾವವನು
ಕೂಡಲಸಂಗಮದೇವ ತಾನೆ ಬಲ್ಲ. ॥೫೧೬॥

೫೧೭

ಸಕ್ಕರೆಯ ಕೊಡನ ತುಂಬಿ
ಹೊರಗೆ ಸವಿದಡೆ ರುಚಿಯುಂಟೆ?
ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ,
ಅಕ್ಕಟಾ ಸಂಸಾರ ವ್ಯಥಾಯ ಹೋಯಿತ್ತಯ್ಯಾ.
ಅದೇತರ ಭಕ್ತಿ? ಅದೇತರ ಯುಕ್ತಿ?
ಕೂಡಿಕೋ, ಕೂಡಲಸಂಗಮದೇವಾ. ॥೫೧೭॥

೫೧೮

ಕಾಳಿದಾಸಂಗೆ ಕಣ್ಣನಿತ್ತೆ,
ಓಹಿಲಯ್ಯನ ನಿಜಪುರಕ್ಕೊಯ್ದೆ,
ನಂಬಿ ಕರೆದಡೋ ಎಂದೆ,
ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ,
ಕೂಡಲಸಂಗಮದೇವಾ ಎನ್ನನೇಕೆ ಒಲ್ಲೆಯಯ್ಯಾ? ॥೫೧೮॥

೫೧೯

ಪರಚಿಂತೆ ಎಮಗೇಕಯ್ಯಾ?
ಎಮ್ಮ ಚಿಂತೆ ಎಮಗೆ ಸಾಲದೆ?
ಕೂಡಲಸಂಗಯ್ಯ ಒಲಿದಾನೊ
ಒಲಿಯನೊ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು. ॥೫೧೯॥

೫೨೦

ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದೆ,
ಮನಮಚ್ಚಿ ಮರುಳಾದೆ ನೋಡವ್ವಾ!
ಕೇಳು, ಕೇಳವ್ವಾ ಕೆಳದಿ,
ಸಖಿಯರಿಲ್ಲದೆ ಸುಖವ ಬಯಸಿದಡೆ
ದೊರಕೊಂಬುದೆ? ಹೇಳಾ.
ಎನ್ನ ಮುನಿಸು ಎನ್ನಲ್ಲೆ ಅಡಗಿತ್ತು,
ಇನ್ನು ಬಾರಯ್ಯಾ,
ಕೂಡಲಸಂಗಯ್ಯಾ. ॥೫೨೦॥

೫೨೧

ಲಜ್ಜೆಗೆಟ್ಟೆನು, ನಾಣುಗೆಟ್ಟೆನು.
ಕುಲಗೆಟ್ಟೆನು, ಛಲಗೆಟ್ಟೆನು.
ಸಂಗಾ, ನಿಮ್ಮ ಪೂಜಿಸಿ ಭವಗೆಟ್ಟೆನು ನಾನಯ್ಯಾ.
ಕೂಡಲಸಂಗಮದೇವಯ್ಯಾ
ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು ನಾನಯ್ಯಾ. ॥೫೨೧॥

೫೨೨

ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು;
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು.
ಎನಗಿನ್ನಾವ ಭವವಿಲ್ಲ ಕಾಣಾ,
ಕೂಡಲಸಂಗಮದೇವಾ. ॥೫೨೨॥

೫೨೩

ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಭಕ್ತಂಗೆ.
ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಜಂಗಮಕ್ಕೆ.
ಆ ಜಂಗಮದ ಕರ್ತೃತ್ವವೆ ಭಕ್ತಂಗೆ ದಾಸೋಹ,
ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ.
ಆ ಭಕ್ತನೊಳಗೆ ಆ ಜಂಗಮವಡಗಿ,
ಆ ಜಂಗಮದೊಳಗೆ ಆ ಭಕ್ತನಡಗಿ,
ಇದನೇನೆಂದು ಹವಣಿಸುವೆನಯ್ಯಾ,
ಎರಡೊಂದಾದ ಘನವ?
ಇದನೇನೆಂದುಪಮಿಸುವೆನಯ್ಯಾ,
ತೆರಹಿಲ್ಲದ ಘನವ?
ಈ ಎರಡಕ್ಕೆ ಭವವಿಲ್ಲೆಂದು ಕೂಡಲಸಂಗಯ್ಯಾ,
ನಿಮ್ಮ ಶ್ರುತಿಗಳು ಹೇಳಿದವಾಗಿ,
ನಿಮ್ಮ ಕರುಣವೆನಗೆ ಆಯಿತ್ತು. ॥೫೨೩॥

೫೨೪

ಹರಿವ ನದಿಯ ತೆರನ ಹೋಲಬಲ್ಲಡೆ ಭಕ್ತಿ,
ಕೂಡೆ ಸಯದಾನವ ನೀಡಬಲ್ಲಡೆ ಭಕ್ತಿ,
ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ
ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ. ॥೫೨೪॥

೫೨೫

ಏನ ಮಾಡುವೆ?
ಎನ್ನ ಪುಣ್ಯದ ಫಲವು!
ಶಾಂತಿಯ ಮಾಡಹೋದಡೆ ಬೇತಾಳನಾಯಿತ್ತು.
ಕೂಡಲಸಂಗಮದೇವರ ಪೂಜಿಸಿಹೆನೆಂದಡೆ
ಭಕ್ತಿಯೆಂಬ ಮೃಗ ಎನ್ನನಟ್ಟಿ ಬಂದು ನುಂಗಿತ್ತಯ್ಯಾ. ॥೫೨೫॥

೫೨೬

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ. ॥೫೨೬॥

❖❖

ಮಾಹೇಶ್ವರಸ್ಥಲ

ಮಾಹೇಶ್ವರನ ಜ್ಞಾನಿಸ್ಥಲ

೫೨೭

ಸ್ವಾಮಿ ನೀನು, ಶಾಶ್ವತ ನೀನು,
ಎತ್ತಿದೆ ಬಿರಿದ ಜಗವೆಲ್ಲರಿಯಲು.
ಮಹಾದೇವ, ಮಹಾದೇವ,
ಇಲ್ಲಿಂದ ಮೇಲೆ ಶಬ್ದವಿಲ್ಲ.
ಪಶುಪತಿ ಜಗಕ್ಕೇಕೋದೇವ,
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ. ॥೧॥

೫೨೮

ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮಮಹಿಮಂಗೆ ಪ್ರತಿಯುಂಟೆ?
'ಸೋಮಃ ಪವತೇ' ಎಂಬ ಶ್ರುತಿಯನರಿತು
'ಶಿವ ಏಕೋ ದೇವಃ ರುದ್ರೋ ನ ದ್ವಿತೀಯಃ'ನೆಂದು ನಂಬುವುದು ಕಾಣಿರಣ್ಣಾ.
ಕೂಡಲಸಂಗಮದೇವನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದ,
ಜಗವೆಲ್ಲರಿಯಲು. ॥೨॥

೫೨೯

ಉಪ್ಪರಗುಡಿ, ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ
ಸಾರುತ್ತೈದಾವೆ, ನೋಡಾ:
ಶ್ರುತಿಗಳೂ ನಾಲ್ಕು ವೇದವೂ ಹುಸಿಯದೆ
'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ,
ಕೂಡಲಸಂಗನಲ್ಲದಿಲ್ಲೆಂದುದು ವೇದ. ॥೩॥

೫೩೦
'ವೇದ ಸ್ವಯಂಭು'ವೆಂಬ ವಾದಿ ಕೇಳೆಲವೋ.
'ಏಕೋ ದೇವೋ ರುದ್ರೋ ನ ದ್ವಿತೀಯಃ'
ಎಂದು ನಂಬುವುದು ಕಾಣಿರಣ್ಣಾ.
'ಚಕಿತಮಭಿಧತ್ತೇ' ಎಂದು ಶ್ರುತಿ ಸಾರುತ್ತೈದಾವೆ.
ಜಗದ ಕರ್ತ ಕೂಡಲಸಂಗಮದೇವನೊಬ್ಬನೆ ಕಾಣಿರಣ್ಣಾ. ॥೪॥

೫೩೧
ಶ್ರುತಿತತಿಯ ಶಿರದ ಮೇಲೆ
'ಅತ್ಯತಿಷ್ಠದ್ದಶಾಂಗುಲ'ನ ನಾನೇನೆಂಬೆನಯ್ಯಾ.
ಘನಕ್ಕೆ ಘನಮಹಿಮನ ಮನಕ್ಕಗೋಚರನ!
'ಅಣೋರಣೀಯಾನ್ ಮಹತೋ ಮಹೀಯಾನ್'
ಮಹಾದಾನಿ ಕೂಡಲಸಂಗಮದೇವ. ॥೫॥

೫೩೨
ಸಕಳ ನಿಷ್ಕಳವ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೇ, ನಿಷ್ಕಳ ನೀನೇ ಕಂಡಯ್ಯಾ.
'ವಿಶ್ವತಶ್ಚಕ್ಷು' ನೀನೇ ದೇವಾ, 'ವಿಶ್ವತೋ ಮುಖ' ನೀನೇ ದೇವಾ,
'ವಿಶ್ವತೋ ಬಾಹು' ನೀನೇ ದೇವಾ,
ಕೂಡಲಸಂಗಮದೇವಾ .॥೬॥

೫೩೩
ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ,
ಸಕಲವಿಸ್ತಾರದ ರೂಹು ನೀನೇ ದೇವಾ,
'ವಿಶ್ವತಶ್ಚಕ್ಷು' ನೀನೆ? ದೇವಾ, 'ವಿಶ್ವತೋ ಮುಖ' ನೀನೇ ದೇವಾ
'ವಿಶ್ವತೋ ಬಾಹು' ನೀನೇ ದೇವಾ,
'ವಿಶ್ವತಃ ಪಾತ್' ನೀನೇ ದೇವಾ,
ಕೂಡಲಸಂಗಮದೇವಾ. ॥೭॥

೫೩೪

ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ
ಅಜಾಂಡ ಹರಿವಿರಂಚಿಗಳು
ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ.
ಕೂಡಲಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ
ಇಚ್ಛಾಮಾತ್ರದಿಂದ ಜಗಜುಗವಯ್ಯಾ. ॥೮॥

೫೩೫

ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ,
ಜಂಘೆಯಲ್ಲಿ ಅಜ ಜನನವೊ!
ಇಂದ್ರ ಪಾದದಲ್ಲಿ ಚಂದ್ರ ಮನದಲ್ಲಿ,
ಚಕ್ಷುವಿನಲ್ಲಿ ಸೂರ್ಯ ಜನನವೊ!
ಮುಖದಲ್ಲಿ ಅಗ್ನಿಯು [ಘ್ರಾ]ಣದಲ್ಲಿ ವಾಯು
ನಾಭಿಯಲ್ಲಿ ಅಂತರಿಕ್ಷವೊ!
ಶಿರದಲುದಯ ತೆತ್ತೀಸಕೋಟಿ ದೇವತೆಗಳು
ಪಾದತಳದಲ್ಲಿ ಭೂಮಿ ಜನನವೊ!
ಶ್ರೋತ್ರದಲ್ಲಿ ದಶದಿಕ್ಕುವೊ!
ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ, ಅಕ್ಷಯನಗಣಿತನು!
ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ.
ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಯ್ಯ! ॥೯॥

೫೩೬

'ವಿಶ್ವಾಧಿಪೋ ರುದ್ರ'ನ ಹೊಗಳುವ ಶ್ರುತಿಗಳು
'ವಿಶ್ವರೂಪಾಯ ವೈ ನಮಃ'
ಪರಮರೂಪನೆ ನಮೋ, ಪರತತ್ವನೇ ನಮೋ,
ಆದಿಯಾರೂಢಭಯಂಕರನೇ ನಮೋ,
ಹರಿಯನು ಹರಿಸಿದನೇ' ಎಂದು ಶ್ರುತಿ ಸಾರುತ್ತಿರಲು,
ಸಂಹಾರಕಾರಣನೇ ನಮೋ, ನಮ್ಮ ಕೂಡಲಸಂಗ
'ಮಹದ್ ಮಹದ್ಭ್ಯೋ ನಮಃ'. ॥೧೦॥

೫೩೭

ಅಯ್ದುದೇ ಬ್ರಹ್ಮನ ಕಪಾಲ ಕರದಲ್ಲಿ,
ಅಯ್ದುದೇ ವಿಷ್ಣುವಿನ ನಯನ ಪಾದದಲ್ಲಿ,
ಅಯ್ದುದೇ ಕಾಮನ ಸುಟ್ಟ ಭಸ್ಮ ಮೈಯ ಮೇಲೆ,
ಮುಖ ಮೂದಲೆಯೇಕಯ್ಯಾ,
ಕೂಡಲಸಂಗಮದೇವಾ? ॥೧೧॥

೫೩೮

ಹರನ ಕೊರಳಲಿಪ್ಪ ಕರೋಟಿಮಾಲೆಯಶಿರದ ಲಿಖಿತವ ಕಂಡು,
ಮರುಳ ತಂಡಗಳು ಓದಿ ನೋಡಲು,
ಇವನಜ ಇವ ಹರಿ ಇವ ಸುರಪತಿ
ಇವ ಧರಣೇಂದ್ರ ಇವನಂತಕನೆಂದು
ಹರುಷದಿಂದ ಸರಸವಾಡಿತ ಕಂಡು,
ಹರ ಮುಕುಳಿತನಾಗಿ ನಕ್ಕ,
ನಮ್ಮ ಕೂಡಲಸಂಗಮದೇವ. ॥೧೨॥

೫೩೯

ಅದುರಿತು ಪಾದಾಘಾತದಿಂದ ಧರೆ,
ಬಿದಿರಿದವು ಮಕುಟ ತಾಗಿ ತಾರಕೆಗಳು,
ಉದುರಿದವು ಕೈ ತಾಗಿ ಲೋಕಂಗಳೆಲ್ಲಾ!
'ಮಹೀಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಮ್
ಪದಂ ವಿಷ್ಣೋರ್ಭ್ರಾಮ್ಯದ್ ಭುಜಪರಿಘರುಗ್ಣಗ್ರಹಗಣಮ್
ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತಜಟಾತಾಡಿತತಟಾ
ಜಗದ್ರಕ್ಷಾಯ್ಯೆ ತ್ವಂ ನಟಸಿ ನನು ವಾಮ್ಯೈವ ವಿಭುತಾ'
ನಮ್ಮ ಕೂಡಲಸಂಗಮದೇವನಿಂದು ನಾಂಟ್ಯವನಾಡೆ. ॥೧೩॥

೫೪೦

ಆರು ಕೋಟಿ ಬ್ರಹ್ಮರುಮಡಿವಲ್ಲಿ
ನಾರಾಯಣಗೊಂದು ದಿನವಾಯಿತ್ತು.

ನಾರಾಯಣರೊಂದು ಕೋಟಿ
ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು.
ರುದ್ರಾವತಾರ ಹಲವಳಿವಲ್ಲಿ
ಕೂಡಲಸಂಗಮದೇವನೇನೆಂದರಿಯ. ॥೧೪॥

೫೪೧

ಯುಗ ಜುಗ ಪ್ರಳಯವಹಂದೂ ಕಾಣೆನಿಂದೂ ಕಾಣೆ!
ಧಗಿಲು ಭುಗಿಲು ಎಂದುರಿವಂದೂ ಕಾಣೆನಿಂದೂ ಕಾಣೆ!
ಕೂಡಲಸಂಗಮದೇವನಲ್ಲದೆ ತಲೆದೋರುವ
ದೈವಂಗಳನಂದೂ ಕಾಣೆನಿಂದೂ ಕಾಣೆ. ॥೧೫॥

೫೪೨

ಒಬ್ಬ ಕೆಂಚ, ಒಬ್ಬ ಕರಿಕ,
ಒಬ್ಬ ಶುದ್ಧಧವಳಿತನೆಂತಯ್ಯಾ ಲಿಂಗವೆ?
ಒಬ್ಬರಿಗೊಬ್ಬರು ಘನವೆಂಬರು, ಅದೆಂತಯ್ಯಾ?
ಒಬ್ಬರಿಗೊಬ್ಬರು ಹಿರಿದೆಂಬರು, ಎಂತಯ್ಯಾ?
ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು,
ಕೂಡಲಸಂಗಂಗಿಲ್ಲ. ॥೧೬॥

೫೪೩

ಹರಿ ಹರನೊಂದೆ ಎಂದಡೆ,
ಸುರಿಯವೆ ಬಾಯಲಿ ಬಾಲಹುಳುಗಳು?
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ,
ಹರಂಗೆ ಪ್ರಳಯ ಉಂಟೆಂಬುದ ಬಲ್ಲಡೆ ನೀವು ಹೇಳಿರೆ?
ಪ್ರಳಯ ಪ್ರಳಯ ಅಂದಂದಿಂಗೆ!
ಹಳೆಯ, ನಮ್ಮ ಕೂಡಲಸಂಗಮದೇವ.! ॥೧೭॥

೫೪೪

ವಿಷ್ಣು ಕರ್ಮಿ ರುದ್ರ, ನಿಷ್ಕರ್ಮಿ:
ಕ್ರಮವನರಿಯದೆ ನುಡಿವಿರೊ!

ವೇದಶ್ರುತಿಗಳ ತಿಳಿಯಲರಿಯದೆ ವಾದಮಾಡುವರೆಲ್ಲ ಕೇಳಿ:
ವಿಷ್ಣು ನಾನಾಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತಿಪ್ಪ,
ರುದ್ರನಾವ ಯೋನಿಯಲ್ಲಿ ಬಂದನೆಂದು ನೀವು ಹೇಳಿರೊ!
'ಓಂ ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ
ಇಂದ್ರಸ್ಯ ಯುಜ್ಯಃ ಸಖಾ
ತದ್ ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ
ದಿವೀವ ಚಕ್ಷುರಾತತಮ್
ತದ್ ವಿಪ್ರಾಸೋ ವಿಪನ್ಯವೋ ಜಾಗೃವಾಂ ಸಃ ಸಮಿಂಧತೇ!
ವಿಷ್ಣೋರ್ಯತ್ಪರಮಂ ಪದಮ್'
ಎಂಬ ಶ್ರುತಿವಚನವ ತಿಳಿಯಿಂ ಭೋ!
ಮರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ;
ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂದತ್ತತ್ತಲೆ,
ಕೂಡಲಸಂಗಮದೇವಾ. ॥೧೮॥

೫೪೫

ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತನಿಂದ್ರ.
ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ.
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು.
ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ.
ಇವರೆಲ್ಲರು ಯೋನಿಜರೆಂಬುದ ತ್ರೈಜಗ ಬಲ್ಲುದು.
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ
ಕೂಡಲಸಂಗಮದೇವಂಗೆ
ಮಾತಾಪಿತರುಗಳುಳ್ಳಡೆ ಹೇಳಿರೊ! ॥೧೯॥

೫೪೬

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ,
ಒಬ್ಬನೆ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!
ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ. ॥೨೦॥

೫೪೭

ಹುಟ್ಟಿಸುವಾತ ಬ್ರಹ್ಮನೆಂಬರು,
ರಕ್ಷಿಸುವಾತ ವಿಷ್ಣುವೆಂಬರು ನೋಡಾ.
ಬ್ರಹ್ಮ ತನ್ನ ಶಿರವನೇತಕ್ಕೆ ಹುಟ್ಟಿಸಲಾರ,
ವಿಷ್ಣು ತನ್ನ ಮಗನನೇತಕ್ಕೆ ರಕ್ಷಿಸಲಾರ.
ದುಷ್ಟನಿಗ್ರಹ ಶಿಷ್ಟಪ್ರತಿಪಾಲಕ
ನಮ್ಮ ಕೂಡಲಸಂಗಮದೇವ. ॥೨೧॥

೫೪೮

ಕೇಶವನಲ್ಲದೆ ಅತಃಪರದೈವವಿಲ್ಲೆಂದು
ವೇದವ್ಯಾಸಮುನಿ ಭಂಗಬಟ್ಟುದನರಿಯಿರೆ!
'ಅಹಂ ಸರ್ವಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ'
ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲಾ!
ಕೂಡಲಸಂಗಮದೇವನು
ದಕ್ಷನ ಯಜ್ಞವ ಕೆಡಿಸಿದುದ ಮರೆದಿರಲ್ಲಾ! ॥೨೨॥

೫೪೯

ನಾರಾಯಣನೆಂಬವನ ಕಾಣೆ,
ಗೀರಾಯಣನೆಂಬವನ ಕಾಣೆ.
ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ.
ವಿಷವಟ್ಟಿ ಸುಡುವಲ್ಲಿ, ವೀರಭದ್ರ ಬಡಿವಲ್ಲಿ
ಕೂಡಲಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರೆಲ್ಲರು. ॥೨೩॥

೫೫೦

ಅಮೃತವ ಕಡೆವಲ್ಲಿ, ವಿಷವಟ್ಟಿ ಸುಡುವಲ್ಲಿ,
ದೇವರೆಂಬವರೆತ್ತ ಹೋದರೇನಿಂ ಭೋ!
ಅಂದೊಮ್ಮೆ ಓಡಿಹೋಗಿ ಆ ಶಿವನ ಮರೆಯ ಹೋಗುವಂದು
ದೇವರೆಂಬವರೆತ್ತ ಹೋದರೇನಿಂ ಭೋ!
ಕೂಡಲಸಂಗಯ್ಯ ದೇವರಿಗೆ ದೇವನು,
ಇವರೆಲ್ಲ ಆಳೆಂಬುದನರಿಯಿರಿಂ ಭೋ! ॥೨೪॥

೫೫೧

ವಿಷ್ಣು ಬಲ್ಲಿದನೆಂಬೆನೆ?
 ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ.
ಬ್ರಹ್ಮ ಬಲ್ಲಿದನೆಂಬೆನೆ?
ಶಿರ ಹೋಗಿ ನಾನಾ ವಿಧಿಯಾದ.
ವೇದ ಬಲ್ಲಿತ್ತೆಂಬೆನೆ?
ನಾನಾಮುಖದಲ್ಲಿ ಸ್ತುತಿಯಿಸಿತ್ತಲ್ಲದೆ
ಲಿಂಗದ ನಿಲುಕಡೆಯ ಕಾಣದು.
ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರೀ.
ಪುರಾಣ ಬಲ್ಲಿತ್ತೆಂಬೆನೆ? ಪೂರ್ವಕ್ರೀ.
ಆಗಮ ಬಲ್ಲಿತ್ತೆಂಬೆನೆ? ವಾಯ ಹೊಂದಿತ್ತು.
ಇದು ಕಾರಣ, ಕೂಡಲಸಂಗಯ್ಯನೆ ನಿತ್ಯ,
ಉಳಿದ ದೈವವೆಲ್ಲ ಅನಿತ್ಯ ಕಾಣಿ ಭೋ. ॥೨೫॥

೫೫೨

ಮರೆಯಲಾಗದೇ ಹರಿಯ? ಮರೆಯಲಾಗದೆ ಬ್ರಹ್ಮನ?
ಮರೆಯಲಾಗದೆ ತೆತ್ತೀಸಕೋಟಿ ದೇವರ್ಕಳ?
ನಮ್ಮ ಕೂಡಲಸಂಗಮದೇವರ ಮರೆಯಲಿಹುದು. ॥೨೬॥

೫೫೩

ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ,
ರಸವ ಹಡೆಯಲುಬಾರದು,
ಮಳಲ ಹೊಸೆದಡೆ ಹೊಸೆದಂತಲ್ಲದೆ,
ಸರವಿಯ ಹಡೆಯಲುಬಾರದು.
ನೀರ ಕಡೆದಡೆ ಕಡೆದಂತಲ್ಲದೆ,
ಬೆಣ್ಣೆಯ ಹಡೆಯಲು ಬಾರದು.
ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯದೈವಕ್ಕೆರಗಿದಡೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಆಯಿತ್ತಯ್ಯಾ. ॥೨೭॥

೫೫೪

ಆಗಳೂ ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು.
ಹೋಗೆಂದಡೆ ಹೋಗವು,
ನಾಯಿಗಿಂದ ಕರಕಷ್ಟ ಕೆಲವು ದೈವಂಗಳು.
ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವವು ಕೂಡಲಸಂಗಮದೇವಾ? ॥೨೮॥

೫೫೫

ಗಾಡಿಗ ಡಿಂಬುಗಂಗೆ
ಚಿಕ್ಕುಮುಟ್ಟಿಗೆ, ಹಸುರಂಬಲಿಮುಟ್ಟಿಗೆ,
ಹುರಿಬುತ್ತಿಯ ಬೇಡಿ,
ಮನುಷ್ಯರ ಪಿಡಿದು ಪೀಡಿಸಿ, ತಮ್ಮ ಬಸುರ್ಗೆ ಕಾಣದೆ,
ಈಡಾಡಿದ ಕೂಳಂಬಲಿಯನಾಯ್ದು ಕುರುಕುವ
ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ, ಎಲವೋ,
ಕೂಡಲಸಂಗಮದೇವರ ನೆರೆ ನಂಬುವುದೆಲವೊ. ॥೨೯॥

೫೫೬

ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ,
ಕೆರೆ ಬಾವಿ ಹೂಗಿಡು ಮರಂಗಳಲ್ಲಿ
ಗ್ರಾಮಮಧ್ಯಂಗಳಲ್ಲಿ, ಜಲಪಥ ಪಟ್ಟಣಪ್ರವೇಶದಲ್ಲಿ,
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣಂತಿ
ಕುಮಾರಿ ಕೊಡಗೂಸು ಎಂಬವರ ಹಿಡಿದುಂಬ, ತಿರಿದುಂಬ,
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರಬೆಂತರ
ಕಾಳಯ್ಯ ಮಾರಯ್ಯ ಮಾಳಯ್ಯ ಕೇತಯ್ಯಗಳೆಂಬ
ನೂರು ಮಡಕೆಗೆ ನಮ್ಮ ಕೂಡಲಸಂಗಮದೇವ
ಶರಣೆಂಬುದೊಂದೆ ದಡಿಸಾಲದೆ? ॥೩೦॥

೫೫೭

ಅರಗು ತಿಂದು ಕರಗುವ ದೈವವನೆಂತು
ಸರಿಯೆಂಬೆನಯ್ಯಾ?
ಉರಿಯ ಕಂಡಡೆ ಮುರುಟುವ ದೈವವನೆಂತು
ಸರಿಯೆಂಬೆನಯ್ಯಾ?
ಅವಸರ ಬಂದಡೆ ಮಾರುವ ದೈವವನೆಂತು
ಸರಿಯೆಂಬೆನಯ್ಯಾ?
ಅಂಜಿಕೆಯಾದಡೆ ಹೂಳುವ ದೈವವನೆಂತು
ಸರಿಯೆಂಬೆನಯ್ಯಾ?
ಸಹಜಭಾವ ನಿಜೈಕ್ಯ
ಕೂಡಲಸಂಗಮದೇವನೊಬ್ಬನೆ ದೇವ. ॥೩೧॥

೫೫೮

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು,
ಸಾಲಬಟ್ಟಡೆ ಮಾರಿಕೊಂಬರಯ್ಯಾ,
ಸಾಲಬಟ್ಟಡೆ ಅವರನೊತ್ತೆಯಿಟ್ಟುಕೊಂಡುಂಬರಯ್ಯಾ.
ಮಾರುವೋಗನೊತ್ತೆಯೋಗ ನಮ್ಮ ಕೂಡಲಸಂಗಮದೇವ. ॥೩೨॥

೫೫೯

ಉಣಲುಡಲು ಮಾರಿಯಲ್ಲದೆ,
ಕೊಲಲು ಕಾಯಲು ಮಾರಿಯೆ?
ತನ್ನ ಮಗನ ಜವನೊಯ್ದಲ್ಲಿ
ಅಂದೆತ್ತ ಹೋದಳು ಮಾರಿಕವ್ವೆ?
ಈವಡೆ ಕಾವಡೆ ನಮ್ಮ ಕೂಡಲಸಂಗಯ್ಯನಲ್ಲದೆ
ಮತ್ತೊಂದು ದೈವವಿಲ್ಲ. ॥೩೩॥

೫೬೦

ಮೊರನ ಗೋಟಿಲಿ ಬಪ್ಪ ಕಿರುಕುಳದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು.

ಕುರಿ ಸತ್ತು ಕಾವುದೆ ಹರ ಮುಳಿದವರ?
ಕುರಿ ಬೇಡ, ಮರಿ ಬೇಡ,
ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು
ನಮ್ಮ ಕೂಡಲಸಂಗಮದೇವನ. ॥೩೪॥

೫೬೧

ಬನ್ನಿರೇ ಅಕ್ಕಗಳು, ಹೋಗಿರೇ ಆಲದ ಮರಕ್ಕೆ.
ಕಚ್ಚುವುವೇ ನಿಮ್ಮ ಚಿಪ್ಪಿನ ಹಲ್ಲುಗಳು.
ಬೆಚ್ಚಿಸುವುವೇ ನಿಮ್ಮ ಬಚ್ಚಣಿಯ ರೂಹುಗಳು.
ನಮ್ಮ ಕೂಡಲಸಂಗಮದೇವನಲ್ಲದೆ
ಪರದೈವಂಗಳು ಮನಕ್ಕೆ ಬಂದುವೆ ಬಿಕ್ಕನೆ ಬಿರಿವ ದೈವಂಗಳು? ॥೩೫॥

೫೬೨

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೊ!
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ!
ದೈವ ದೈವವೆಂದು ಕಾಲಿಡಲಿಂಬಿಲ್ಲ,
ದೈವನೊಬ್ಬನೆ ಕೂಡಲಸಂಗಮದೇವ. ॥೩೬॥

೫೬೩

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ನಂಟರಲ್ಲಿ,
ಜೀವವಿಲ್ಲದ ದೇಹದಲ್ಲಿ ಫಲವೇನೊ?
ಆಳ್ದನೊಲ್ಲದಾಳಿನಲ್ಲಿ, ಸಿರಿ ತೊಲಗಿದರಸಿನಲ್ಲಿ,
ವರವಿಲ್ಲದ ದೈವದಲ್ಲಿ ಫಲವೇನೋ?
ಕಳಿದ ಹೂವಿನಲ್ಲಿ ಕಂಪ,
ನುಳಿದ ಸೂಳೆಯಲ್ಲಿ ಹೆಂಪ,
ಕೊಳಚೆಯ ನೀರಿನಲ್ಲಿ ತಂಪನರಸುವಿರಿ ಮರುಳೆ.
ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ_
ಪರಮ ಕಾರಣಿಕ ನಮ್ಮ ಕೂಡಲಸಂಗಮದೇವ. ॥೩೭॥

೫೬೪

ಲಿಂಗಶಿವಾಲಯದ ಮುಂದೆ ಸಿಂಹ ಶೂದ್ರಿಕನಲ್ಲದಿಲ್ಲ,
ನಂದಿಕೇಶ್ವರ ಭೃಂಗಿನಾಂಟ್ಯ ನಮ್ಮ ಲಿಂಗನ ಮುಂದೆ,
ಇದಕ್ಕೆ ದಿಷ್ವದೀವಿಗೆ ನಮ್ಮ ಲಿಂಗನ ಮುಂದೆ.
ಅನ್ಯದೈವವೆಂಬುದ ತೋರಿಯೂ ಕಾಣಬಾರದು.
ನೊಸಲಕಣ್ಣ ಅಭವನೊಬ್ಬನೆ ದೈವ ಕೂಡಲಸಂಗಮದೇವ. ॥೩೮॥

೫೬೫

ಗುಡಿಯೊಳಗಿರ್ದು ಗುಡಿಯ ನೇಣ ಕೊಯಿದಡೆ,
ಗುಡಿಯ ದಡಿ ಬಿದ್ದು ಹಲ್ಲು ಹೋಹುದು, ನೋಡಾ.
ಪೊಡವಿಗೀಶ್ವರನ ಗರ್ಭಾವಾಸದೊಳಗಿರ್ದು ನುಡಿವರು
ಮತ್ತೊಂದು ದೈವವುಂಟೆಂದು.
ತುಡುಗುಣಿ ನಾಯನು ಪಿಡಿತಂದು ಸಾಕಿದಡೆ
ತನ್ನೊಡೆಯಂಗೆ ಬಗಳುವಂತೆ ಕಾಣಾ,
ಕೂಡಲಸಂಗಮದೇವಾ. ॥೩೯॥

೫೬೬

ಅಸಮಾಕ್ಷಲಿಂಗಕ್ಕೆ ಅನ್ಯದೈವವ ಸರಿಯೆಂಬವನ ಬಾಯಲ್ಲಿ
ಮಸೆದ ಕೂರಲಗನಿಕ್ಕದೆ ಮಾಬನೆ?
ಹುಸಿಯಾಗಿ ನುಡಿವವನ ನಾಯಾಗಿ ಬಗುಳಿಸನೆ?
ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ?
ಗುರುಲಘುವೆನ್ನದವರ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಬನೆ?
ಪರಸ್ತ್ರೀಗಳುಪಿದವರ ಗಾಣದಲಿಕ್ಕಿ ಹಿಳಿಯನೆ?
ಪರಧನಕ್ಕಳುಪಿದವರ ಹಿಡಿ ಖಂಡವ ಕೊಯ್ಯನೆ?
ಎಲೆ ಕೂಡಲಸಂಗಮದೇವಾ,
ನಿಮ್ಮ ಹೇಳಿದ ಹೇಳಿಕೆಯಿಂದ
ಪಿಂಬೇರ ಮೈಲುಗ] ಮೇಳವಾಡುತ ಇದ್ದ ಕಾಣಾ, ತ್ರೈಜಗದೊಳಗೆ ॥೪೦॥

೫೬೭

ಶಿವಮಯ ವಿಷ್ಣುವಲ್ಲ, ವಿಷ್ಣುಮಯ ಶಿವನಲ್ಲ,
ನುಡಿಯದಿರಿಂ ಭೋ!
ನಾರಾಯಣ ಹರನಲ್ಲ ನುಡಿಯದಿರಿಂ ಭೋ!
ಶಿವನು ವಿಷ್ಣುವಲ್ಲ ನುಡಿಯದಿರಿಂ ಭೋ!
ನಮ್ಮ ಕೂಡಲಸಂಗಯ್ಯನನರಿಯದ ಸೂನೆಗಾರರೆಲ್ಲ
ನುಡಿಯದಿರಿಂ ಭೋ! ||೪೧||

೫೬೮

ಅವಲಕ್ಷಣ ನಾಯನುಡಿಯ ನಾಲಗೆಯ ಸಡಗರ
ಡೊವಿಗೆ ಮೃತ್ಯುವಿನ ನುಡಿಗೊಳಗಾಯಿತ್ತು.
ಬೇಡವೋ ಪರವಾದಿ ಗಳುಹದಿರು.
ಬೇಡವೊ ದೂಷಕ ಬಗುಳದಿರು.
ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೆ?
ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು, ಕಾಣಾ.
ನಮ್ಮ ಕೂಡಲಸಂಗನ ಶರಣರನವರಿವರೆಂದಡೆ
ಕುಂಭಿಪಾತಕ ನಾಯಕನರಕ ತಪ್ಪದು ಕಾಣಾ. ||೪೨||

೫೬೯

ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ,
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,
ಮೈಲಾರನ ಪೂಜಿಸಿ ನಾಯಾಗಿ ಬಗಳುವುದ ಕಂಡೆ,
ನಮ್ಮ ಕೂಡಲಸಂಗನ ಪೂಜಿಸಿ ದೇವಾ,
ಭಕ್ತರೆನಿಸಿಕೊಂಬುದ ಕಂಡೆ. ||೪೩||

೫೭೦

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮಮುನಿಗೆ ಗೋವೇಧೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ

ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿದಲೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುರಿಯಾದನು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೇವಾ, ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲಸಂಗನ ಶರಣರು
ಕೈಲಾಸವಾಸಿಗಳಾದರು. ॥೪೪॥

೫೭೧

ಆದಿಪುರಾಣ ಅಸುರರಿಗೆ ಮಾರಿ,
ವೇದಪುರಾಣ ಹೋತಿಂಗೆ ಮಾರಿ,
ರಾಮಪುರಾಣ ರಕ್ಕಸರಿಗೆ ಮಾರಿ,
ಭಾರತಪುರಾಣ ಗೋತ್ರಕ್ಕೆ ಮಾರಿ.
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು,
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ
ಕೂಡಲಸಂಗಮದೇವಾ. ॥೪೫॥

೫೭೨

ನಿಮ್ಮ ವಚನವೆನ್ನ ಪುಣ್ಯವೆಂಬುದು.
ಹುಸಿಯಾಯಿತ್ತು ನೋಡಾ ಶಾಸ್ತ್ರದ ವಚನ:
ಹೋತಿಂಗೆ ಮಾರಿ,
ಎಂತು ನಂಬುವೆನಯ್ಯಾ?
ನಾನು ಕೊಲ್ಲೆನು, ನೇಣು ಕೊಂದಿತೆಂಬ
ಸೂನೆಗಾರರನೇನೆಂಬೆ
ಕೂಡಲಸಂಗಮದೇವಾ. ॥೪೬॥

೫೭೩

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು, ಕಂಡಾ!
ವೇದವನೋದಿದವರ ಮುಂದೆ ಅಳು, ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು, ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ. ॥೪೭॥

೫೭೪

ದಕ್ಷಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲ
ನೆರೆದು ಬಂದ ಬಾಯ ನೋಡಾ.
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ.
ಉಣ್ಣದೆ ಊಡದೆ ಹೊಗೆಯ ಕೈಯಲಿ ಸತ್ತ ಅಣ್ಣಗಳ ಕೇಡನೋಡಾ
ಕೂಡಲಸಂಗಮದೇವಾ. ॥೪೮॥

೫೭೫

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ!
ಕೂಡಲಸಂಗಮದೇವಯ್ಯಾ,
ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ
ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ. ॥೪೯॥

೫೭೬

ಹೊಲೆಯೊಳಗೆ ಹುಟ್ಟಿ ಕುಲವನರಸುವೆ,
ಎಲವೊ, ಮಾಂತಂಗಿಯ ಮಗ ನೀನು.
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ.
ಶಾಸ್ತ್ರವೆಂಬುದು ಹೋತಿಂಗೆ ಮಾರಿ,
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು

ಕರ್ಮವಿರಹಿತರು ಶರಣಸನ್ನಿಹಿತರು,
ಅನುಪಮಚಾರಿತ್ರರು.
ಅವರಿಗೆ ತೋರಲು ಪ್ರತಿಯಿಲ್ಲವೋ. ॥೫೦॥

೫೭೭

ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೆ?
ಹಗಲುಗಾಣದ ಗೂಗೆ ಇರುಳಾಯಿತ್ತೆಂದಡೆ,
ಜಗಕ್ಕೆ ಇರುಳಪ್ಪುದೆ ಮರುಳೆ?
ಹೋಮದ ನೆವದಲ್ಲಿ ಹೋತನು ಕೊಂದು ತಿಂಬ ಗೆಲುವುದೇನು
ಅನಾಮಿಕರೊಡನಾಡಿ ಕೂಡಲಸಂಗಮದೇವಾ. ॥೫೧॥

೫೭೮

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲಿದ್ದು
ಮೂಗ ಹಿಡಿದು ಧ್ಯಾನಮಾಡುವರಯ್ಯಾ.
ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ-
[ತ]ಮ್ಮ ಕೈಯಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲಸಂಗನನರಿಯದೆ ಮೊರೆಯಿಡುವಂತೆ. ॥೫೨॥

೫೭೯

ಮಾಣದೆ ಅರಳೆಯ ತಿಟ್ಟನೆ ತಿರುಗುವ ಗಾಣದೆತ್ತಿನಂತೆ,
ಪೂರ್ವಲಿಖಿತ ಮುಂದುಗಾಣಲೀಯದು.
ನೀವೆಲ್ಲ ವಾಯಕ್ಕೆ ಕೆಡಬೇಡ,
ಮಾಣದೆ ಪೂಜಿಸು ಲಿಂಗವ.
ಹೆರರ ಗೋಣ ಕೊಯ್ದೆನೆಂದು ಮಂತ್ರವನೋದುವ
ನೇಣುಗಾರರ ಮೆಚ್ಚ ಕೂಡಲಸಂಗಮದೇವ. ॥೫೩॥

೫೮೦
ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿಸುತ್ತುವರಯ್ಯಾ.
ಬತ್ತುವ ಜಲವ, ಒಣಗುವ ಮರನಮೆಚ್ಚಿದವರು
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ. ॥೫೪॥

೫೮೧
ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ,
ಇರುಳು ಹಗಲಿನ ನಿದ್ರೆ ಸಾಲದೆ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ ಚೋದ್ಯವಲ್ಲವೆ ಹೇಳಾ.
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರನಾನೇನೆಂಬೆ,
ಕೂಡಲಸಂಗಮದೇವಾ? ॥೫೫॥

೫೮೨
ಬ್ರಹ್ಮಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತ್ವವಡೆದು,
ತಮ್ಮ ವಚನಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು–
ತಮ್ಮ ದೈವವ ಬಿಡುವುದಾವುದುಚಿತ?
ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣನಿತ್ತು ಹಡೆದನು
ಶಿವಭಕ್ತಿಯಿಂದ.
ಕಷ್ಟಜಾತಿ ಜೀವಿಗಳಿಗೆ ಮಟ್ಟಿ ಎಂತು ಬಂದತ್ತೊ!
ಮುಟ್ಟರೊಂದುವನು ಮೂವಿಧಿಬಟ್ಟರೊ!
ಹುಸಿವನೆ ಹೊಲೆಯನೆಂದು ವಚನವುಂಟು ಲೋಕದಲ್ಲಿ.
ಹುಸಿದಜನ ಶಿರ ಹೋಯಿತ್ತಾದಿಯಲ್ಲಿ,
ಎಸವೋದ ಕಿರುಪಶುವನುಸುರಲೀಯದೆ
ವಿ[ದಾರಿ]ಸಿ ತಿಂಬ ಜನ್ನ ಅದಾವ ಫಲವೋ.
ದಕ್ಷ ಯಾಗವ ಮಾಡಿ ನಿಕ್ಷೇತ್ರ ನೆರೆದುದಕಟಕಟಾ,
ಕೇಳಿಯೂ ಏಕೆ ಮಾಣಿರೊ?
ಮಮಕರ್ತ ಕೂಡಲಸಂಗನ ಶರಣರು ಅಕ್ಷಯರಧಿಕರು,
ವಿಪ್ರರು ಕೀಳು ಜಗವೆಲ್ಲರಿಯಲು! ॥೫೬॥

೫೮೩

ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು
ಆರೊ ಮಾಡಿದ ಪಾಪಕ್ಕೆ ತಾನೆ ಕೈಯಾನುವವನು.
ಸರಿಯೆ ದೇವಭಕ್ತಂಗಿವನು? ಸರಿಯೆ ಲಿಂಗಭಕ್ತಂಗಿವನು?
ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು
ಹೊನ್ನ ಕಪಿಲೆಯ, ರಾವಣಶಾಖದ, ಉಚ್ಛಿಷ್ಟದ ಹಾಲಿನಿಂದ
ಕೂಳನಟ್ಟುಂಬುವರನೇನೆಂಬೆ ಕೂಡಲಸಂಗಮದೇವಾ. ॥೫೭॥

೫೮೪

ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನರಿಯದೆ
ಉದಮದ ಸೊಕ್ಕಿ ತಲೆಗೇರಿತ್ತೆ, ಅಯ್ಯಾ?
'ಜೀವೋ ಜೀವೇನ ಭಕ್ಷ್ಯತೇ,
ಕರ್ಮಕರ್ಮದಲಿಪ್ಪೆಯಯ್ಯಾ.
ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ
ಘೋಳಿಡಲಿ ಘೋಳಿಡಲಿ ತಂದಿಕ್ಕಿತ್ತೆ ವೇದ?
ಶಾಸ್ತ್ರಂಗಳು ಮೂರುತಿಗೊಂಡಲ್ಲಿ
ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೆ ಅಯ್ಯಾ?
ನಮ್ಮ ಕೂಡಲಸಂಗಮದೇವನನರಿಯದ ಕಾರಣ
ನಾಯಕನರಕದಲ್ಲಿಕ್ಕಿತ್ತಯ್ಯಾ. ॥೫೮॥

೫೮೫

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು
ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರ, ಬೀದಿಯ ಧೂಳ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ.
ಕೂಡಲಸಂಗಮದೇವಾ,
ವಂದನೆಯ ಮರೆದು ನಿಂದಿಸುತ್ತಿದ್ದರು. ॥೫೯॥

೫೮೬

ವೇದವನೋದಿದ ವಿಪ್ರರು
ಹೊನಲಲ್ಲಿ ಹೋದ ಕೇಡ ನೋಡಿರೇ!
'ಭರ್ಗೋ ದೇವಸ್ಯ ಧೀಮಹಿ' ಎಂಬರು,
ಒಬ್ಬರಿಗಾಗಿ ವಿಚಾರವಿಲ್ಲ,
ನೋಡಿರೇಕೂಡಲಸಂಗಮದೇವಾ. ॥೬೦॥

೫೮೭

ಎನಿಸನೋದಿದಡೇನು!
ಎನಿಸ ಕೇಳಿದಡೇನು!
ಚತುರ್ವೇದಪಾಠ ತೀವ್ರವಾದಡೇನು!
ಲಿಂಗಾರ್ಚನೆ ಹೀನನಾದಡೆ, ಶಿವಶಿವಾ!
ಬ್ರಾಹ್ಮಣನೆಂಬೆನೆ? ಎನಲಾಗದು.
'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ
ಶ್ರುತೇನ ಶ್ರೋತ್ರಿಯಶ್ಚೈವ ಬ್ರಹ್ಮಣಾ ಚರತಿ ಬ್ರಾಹ್ಮಣಃ' ಎಂದುದಾಗಿ
ಬ್ರಹ್ಮನಾಸ್ತಿ ಶ್ವಪಚರಧಮರೆಂದುದಾಗಿ,
ಇದು ಕಾರಣ ಕೂಡಲಸಂಗಮದೇವಾ
'ವೇದಭಾರಭರಾಕ್ರಾಂತಃ ಸ ವೈ ಬ್ರಾಹ್ಮಣ ಗರ್ದಭ ಇವ' ಎಂಬೆನು. ॥೬೧॥

೫೮೮

ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು!
ನಿಮಗೆರಗದ ಕಾರಣ ಕೊರಳಲ್ಲಿ ನೇಣು!
ಹಿಂಡಲೇಕೋ? ತೊಳೆಯಲೇಕೋ?
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ?
ಕೂಡಲಸಂಗನ ಶರಣರಲ್ಲಿ
ಡೋಹರ ಕಕ್ಕಯ್ಯನಾವ ತೊರೆಯಲಿ ಮಿಂದ? ॥೬೨।

೫೭೯

ವ್ಯಾಸ ಬೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು.
ಕುಲವನರಸದಿರಿಂ ಭೋ!
ಕುಲದಿಂದ ಮುನ್ನೇನಾದಿರಿಂ ಭೋ!
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭುವನರಿಯದೆ ನಾವಿದ, ಕಾಣಿಭೋ!
ನಮ್ಮ ಕೂಡಲಸಂಗನ ವಚನವಿಂತೆಂದುದು:
ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ! ॥೬೩॥

೫೮೦

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲ–ಬಿಂದುವಿನ ವ್ಯವಹಾರ ಒಂದೇ,
ಆಶೆಯಾಮಿಷರೋಷಹರುಷ ವಿಷಯಾದಿಗಳೆಲ್ಲ ಒಂದೇ.
ಏನನೋದಿ, ಏನ ಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
'ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಮ್
ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಮ್'ಎಂದುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ.
ಕರ್ಣದಲ್ಲಿ ಜನಿಸಿದರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ,
ಲಿಂಗಸ್ಥಲವನರಿದವನೆ ಕುಲಜನು. ॥೬೪॥

೫೮೧

ಕೊಲುವನೇ ಮಾದಿಗ,
ಹೊಲಸು ತಿಂಬವನೇ ಹೊಲೆಯ.
ಕುಲವೇನೊ ಅವದಿರ ಕುಲವೇನೊ!
ಸಕಲಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು. ॥೬೫॥

೫೯೨

ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ.
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು.
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ,
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ' ಎಂಬ
ಕರ್ಮಿಗಳನೇನೆಂಬೆ, ಕೂಡಲಸಂಗಮದೇವಾ. ॥೬೬॥

೫೯೩

'ನಾನು ಭಕ್ತ, ನಾನು ಪ್ರಸಾದಿ' ಎಂದು ವಿಪ್ರಕರ್ಮವ ಮಾಡುವ ಕರ್ಮೀ:
ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೈಯಲು
ವಿಪ್ರನ ಕಾಲ ತೊಳೆವಡೆ
ಲಿಂಗೋದಕ ಹೃದಯದಲ್ಲಿ,
ವಿಪ್ರನ ಕಾಲ ತೊಳೆದ ನೀರು ಮಂಡೆಯ ಮೇಲೆ!
'ಶ್ರುತ್ಯುತ್ಕಟದುರಾಚಾರೀ ಯಜ್ಞಕೂಪಸಘಾತಕಃ
ಉದ್ರೇಕೇಣ ಕೃತೇ ಶಾಂತೇ ವಿಪ್ರರೂಪೇಣ ರಾಕ್ಷಸಃ'
ಇದು ಕಾರಣ ಕೂಡಲಸಂಗಮದೇವಾ,
ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು. ॥೬೭॥

೫೯೪

ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ?
ಕರ್ಪುರದ ಮರನ ತರಿದು ಕಳ್ಳಿಗೆ ಬೇಲಿಯನಿಕ್ಕುವರೆ?
ಶ್ರೀಗಂಧದ ಮರನ ತರಿದು ಬೇವಿಂಗೆ ಅಡೆಯನಿಕ್ಕುವರೆ?
ನಮ್ಮ ಕೂಡಲಸಂಗನ ಶರಣರಿಗಲ್ಲದೆ ಬೇರೆ ಇಚ್ಛಾಭೋಜನವನಿಕ್ಕಿದಡೆ
ಕಿಚ್ಚಿನೊಳಗೆ ಉಚ್ಚೆಯ ಹೊಯಿದು ಹವಿಯ ಬೇಳ್ದಂತಾಯಿತ್ತು. ॥೬೮॥

೫೯೫

ಜಾತಿವಿಡಿದು ಸೂತಕವನರಸುವೆ,
ಜ್ಯೋತಿವಿಡಿದು ಕತ್ತಲೆಯ ನರಸುವೆ!

ಇದೇಕೊ ಮರುಳುಮಾನವಾ,
ಜಾತಿಯಲ್ಲಿ ಅಧಿಕನೆಂಬೆ!
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನೊ
'ಭಕ್ತನೆ ಶಿಖಾಮಣಿ' ಎಂದುದು ವಚನ.
ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು,
ಕೆಡಬೇಡ ಮಾನವಾ. ॥೬೯॥

೫೯೬

ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯದಲಿ ಸನ್ಮಾನವ ಮಾಡೆನೆ?
ನೆಲನನುಗ್ಘಡಿಸಿ ಉಘೇ ಚಾಂಗು ಭಲಾ ಎಂದು!
ಕುಲಕಧಿಕ ಹಾರುವಂಗೆ ಸಿದ್ಧಿಗೆ ಎಯಿಸಲೆ!
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ.
ಎಲೆ ಎಲೆ ಕೂಡಲಸಂಗಮದೇವಾ,
ನಿಮ್ಮ ನಂಬದವ ಹೊಲೆಯ. ॥೭೦॥

೫೯೭

ಕುರಿವಿಂಡು ಕಬ್ಬಿನ ಉಲಿವ ತೋಟವ ಹೊಕ್ಕು-
ತೆರನನರಿಯದೆ ತನಿರಸದ,
ಹೊರಗಣ ಎಲೆಯನೆ ಮೆಲಿದುವು!
ನಿಮ್ಮ ಅರಿವ ಮದಕರಿಯಲ್ಲದೆ
ಕುರಿ ಬಲ್ಲುದೆ ಕೂಡಲಸಂಗಮದೇವಾ? ॥೭೧॥

೫೯೮

ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ
ಪ್ರಣವಮಂತ್ರಾರ್ಥವನೋದಿ ಮಂತ್ರಾರ್ಥವನರಿಯರು.
'ಪ್ರಣವ ಓಂ ನಮಃ ಶಿವಾಯ, ಪ್ರಣವ ಓಂ ನಮಃ ಶಿವಾಯ,
ಪ್ರಣವ ಓಂ ನಮಃ ಶಿವಾಯ' ಎಂದುವು ಶ್ರುತಿಗಳೆಲ್ಲ.
'ಪ್ರಣವ ಓಂ ಭರ್ಗೋ ದೇವ' ಎಂದುವು ಶ್ರುತಿಗಳೆಲ್ಲ.
ಕೂಡಲಸಂಗಯ್ಯನನರಿಯದ ದ್ವಿಜರೆಲ್ಲ ಭ್ರಮಿತರು. ॥೭೨॥

೫೯೯
ವೇದವನೋದಿದಡೇನು?
ಶಾಸ್ತ್ರವ ಕೇಳಿದಡೇನಯ್ಯಾ?
ಜಪವ ಮಾಡಿದಡೇನು?
ತಪವ ಮಾಡಿದಡೇನಯ್ಯಾ?
ಏನ ಮಾಡಿದಡೇನು?
ನಮ್ಮ ಕೂಡಲಸಂಗಯ್ಯನ ಮನ ಮುಟ್ಟದನ್ನಕ್ಕ. ॥೭೩॥

೬೦೦
ನೀವು ಹಿರಿಯರೆಂಬಿರಿ, ಕರ್ಮಿಗಳು, ನೀವು ಕೇಳಿರಿ,
ನಿಮ್ಮ ವೇದಶಾಸ್ತ್ರಂಗಳು ಆರ ಹೊಗಳುತ್ತಿದ್ದಾವು?
'ಓಂ ದ್ಯಾವಾ ಭೂಮೀ ಜನಯನ್ ದೇವ ಏಕಃ'
ಎಂದು ಶ್ರುತಿ ಸ್ಮೃತಿಗಳು ಸಾರುತ್ತಿದ್ದಾವು.
'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬುದು ಹುಸಿ,
'ವರ್ಣಾನಾಂ ಗುರುಃ' ನಮ್ಮ ಕೂಡಲಸಂಗನ ಶರಣರು. ॥೭೪॥

೬೦೧
ನಿಜಭಾವ ಲಕ್ಷ್ಮಿ ಸರಸ್ವತಿ ಒಲಿದಡೆ ಕುಲವನರಸಲದೇಕೆ?
ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವೇಕೆಯೊ?
ಕಾಮಧೇನು ಮನೆಯಲಿರಲು ಬೇರೆ ಹಯನನರಸಲೇಕೆ?
ಮೋಹವುಳ್ಳ ಠಾವಿನಲ್ಲಿ ಲಜ್ಜೆಯನರಸಲೇಕೆಯೊ?
ಮಹಾದಾನಿ ಕೂಡಲಸಂಗಯ್ಯನೊಲಿದು
ಮಾದಾರ ಚೆನ್ನಯ್ಯನ ಮನೆಯಲುಂಡ.
ವೇದವನೋದಿದವರು ಲಿಂಗವನೊಲಿಸಿ ತೋರಿರೋ. ॥೭೫॥

೬೦೨
ಆದ್ಯರಿಗಲ್ಲದೆ ವೇದ್ಯವಾಗದು;
ಮಾಣಿ ಭೋ, ಮಾಣಿ ಭೋ!
ಶಿವಭಕ್ತನೇ ಕುಲಜ,

'ಕೈವರ್ತಗರ್ಭಸಂಭೂತ ಮಾರ್ಕಂಡೇಯಮಹಾಮುನಿಃ
ತಪಸಾ ಜಾಯತೇ ವಿಪ್ರಕುಲಂ ಜಾತಿರ್ನ ವಿದ್ಯತೇ'
ಜಾತನಲ್ಲ ಅಜಾತನಲ್ಲ,
ಕೂಡಲಸಂಗನ ಶರಣರು ನಿಸ್ಸೀಮರಯ್ಯಾ. ॥೭೬॥

೬೦೩

ಎಮ್ಮವರು ಅಧಿಕರು,
ಎಲ್ಲರಿಂದವೂ ಅಧಿಕರು;
ಪಾಕವ ಮಾಡುವ ಭಾಂಡ ಸೊಣಗನ ಡೊವಿಗೆಯಯ್ಯಾ!
ಕೆರಹಿನಲ್ಲಿ ಮುಚ್ಚುವುದು ಆವ ಆಗಮವಯ್ಯಾ?
ಕೂಡಲಸಂಗಮದೇವಾ, ನಿಮ್ಮ ವಚನವಿಂತೆಂದುದು
'ಭವಿ ನೋಡಿದ ಓಗರ ಲಿಂಗಾರ್ಪಿತವಾಗದೆ'ಂದೂ. ॥೭೭॥

೬೦೪

ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು;
ಸರಿಯಲ್ಲ, ನೋಡಾ.
ಕೂಡಲಸಂಗಮದೇವಾ, ನಿಮ್ಮ ಶರಣರ ಚಮ್ಮಾವುಗೆಗೆ! ॥೭೮॥

೬೦೫

ದೇವಾ, ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು,
ದೇವಾ, ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು,
ದೇವಾ, ನಿಮ್ಮಡಿಗೆರಗಿದ ಮಡಿವಾಳ ಮಾಚಯ್ಯನಿಮ್ಮಡಿಯಾದ.
ನೀನೊಲಿದ ಕುಲಕೆ, ನೀನೊಲ್ಲದ ಹೊಲೆಗೆ ಮೇರೆಯುಂಟೆ ದೇವಾ?
'ಶ್ವಪಚೋಽಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇ ರತಃ
ಲಿಂಗಾರ್ಚನವಿಹೀನೋಽಪಿ ಬ್ರಾಹ್ಮಣಃ ಶ್ವಪಚಾಧಮಃ' ಎಂದುದಾಗಿ,
ಜಾತಿ-ವಿಜಾತಿಯಾದಡೇನು ಅಜಾತಂಗೆ ಶರಣೆಂದೆನ್ನದವನು?
ಆತನೇ ಹೊಲೆಯ, ಕೂಡಲಸಂಗಮದೇವಾ. ॥೭೯॥

೭೦೬

ಚತುರ್ವೇದಿಯಾದಡೇನು! ಲಿಂಗವಿಲ್ಲದವನೆ ಹೊಲೆಯ!
ಶ್ವಪಚನಾದಡೇನು ಲಿಂಗವಿದ್ದವನೆ ವಾರಣಾಸಿ!
ಆತನ ನುಡಿಗಡಣ ಲೇಸು, ಆತ ಜಗಕ್ಕೆ ಪಾವನ,
ಆತನ ಪ್ರಸಾದವೆನಗೆ ಅಮೃತಸೇವನೆ.
'ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತಃ ಶ್ವಪಚೋಽಪಿ ವಾ
ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾಹ್ಯಹಂ' ಎಂದುದಾಗಿ
ಕೂಡಲಸಂಗಮದೇವರನರಿದು ಪೂಜಿಸಿದಾತ
ಷಡುದರುಶನಕ್ಕಧಿಕ, ಜಗಕ್ಕೆ ಪಾವನ ನೋಡಾ. ॥೮೦॥

೭೦೭

ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು;
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು.
ಲಿಂಗಸಂಬಂಧವಿಲ್ಲದವರ ನುಡಿ
ಕೂಡಲಸಂಗನ ಶರಣರಿಗೆ ಸಮನಿಸದು. ॥೮೧॥

೭೦೮

ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ ಅಯ್ಯಾ?
ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು,
'ಚಾಂಡಾಲವಾಟಿಕಾಯಾಂ ವಾ ಶಿವಭಕ್ತಃ ಸ್ಥಿತೋ ಯದಿ
ತತ್‌ಶ್ರೇಣಿಃ ಶಿವಲೋಕಸ್ಯ ತದ್ ಗೃಹಂ ಶಿವಮಂದಿರಮ್'ಎಂದುದಾಗಿ,
ಲೋಕದ ಡಂಬಕರ ಮಾತು ಬೇಡ, ಕೂಡಲಸಂಗನಿದ್ದುದೇ ಕೈಲಾಸ. ॥೮೨॥

೭೦೯

ಲಿಂಗವಿಲ್ಲದೆ ನಡೆವವರ,
ಲಿಂಗವಿಲ್ಲದೆ ನುಡಿವವರ,
ಲಿಂಗವಿಲ್ಲದೆ ಉಗುಳ ನುಂಗಿದಡೆ ಅಂದಂದಿಗೆ ಕಿಲ್ಬಿಷವಯ್ಯಾ–
ಏನೆಂಬೆನೇನೆಂಬೆನಯ್ಯಾ.
ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ, ಮುಟ್ಟಲಾಗದು.

ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ, ಕೇಳಲಾಗದು.
ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ
ಕೂಡಲಸಂಗಮದೇವಾ. ॥೮೩॥

೬೧೦

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ-ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ-ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥವನರಿದಂಗೆ
ಹೋಮ-ನೇಮ-ಜಪ-ತಪದಿಂದ ವೆಗ್ಗಳ,
ಕೂಡಲಸಂಗಮದೇವಾ,
ನಿಮ್ಮ ಮಾಣದೆ ನೆನೆವಂಗೆ. ॥೮೪॥

೬೧೧

ಅಶ್ವಮೇಧಯಾಗವಂತಿರಲಿ, [ಹೋ]
ಅಜಪೆ ಉಪದೇಶ ಸಮಾಧಿಯಂತಿರಲಿ, ಹೋ!
ಗಾಯತ್ರಿಯ ಜಪವಂತಿರಲಿ, ಹೋ!
ಜನಮೋಹನ ಮಂತ್ರವಂತಿರಲಿ, ಹೋ!
ಕೂಡಲಸಂಗನ ಶರಣರ ನುಡಿಗಡಣ ಎಲ್ಲಕ್ಕಧಿಕ ನೋಡಾ. ॥೮೫॥

೬೧೨

ವೇದಶಾಸ್ತ್ರದವರ ಹಿರಿಯರೆನ್ನೆ,
ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ,
ಇವರು ಹಿರಿಯರುಗಳೇ? ಯಾಗನಟ್ಟುವಿಗಪಾಣರು.
ಇವರಿಂದಧಿಕವ ಸಾಧಿಸುವರೇನು ಕಿರಿಯರೆ?
ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ,
ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ
ಸಾಧಿಸುವುದು. ॥೮೬॥

೭೧೩
ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ
ನಂದಿಮುಖವಿಲ್ಲದೆ ಮತ್ತೇನನೂ ಮಾಡಲಾಗದು.
ವಿಭೂತಿ[ಯಿ]ಲ್ಲದೆ ಮತ್ತೇನನೂ ಮಾಡಲಾಗದು.
'ಭರ್ಗೋ ದೇವಃ' ಎಂಬ ಮಂತ್ರ[ವಿ]ಲ್ಲದೆ ಮತ್ತೇನನೂ ಮಾಡಲಾಗದು.
ನಿಮ್ಮಿಂದ ಕುಲಜರಾಗಿ ಮತ್ತೆ ಅನ್ಯದೈವಕ್ಕೆರಗುವ
ಜಗದನ್ಯಾಯಿಗಳನೇನೆಂಬೆ, ಕೂಡಲಸಂಗಮದೇವಾ! ॥೮೭॥

೭೧೪
ದೇವನೊಬ್ಬ, ನಾಮ ಹಲವು,
ಪರಮ ಪತಿವ್ರತೆಗೆ ಗಂಡನೊಬ್ಬ.
ಮತ್ತೊಂದಕ್ಕೆರಗಿದಡೆ ಕಿವಿ-ಮೂಗ ಕೊಯ್ವನು.
ಹಲವು ದೈವದ ಎಂಜಲ ತಿಂಬವರನೇನೆಂಬೆ,
ಕೂಡಲಸಂಗಮದೇವಾ! ॥೮೮॥

೭೧೫
ಕರ್ತಾರನ ಪೂಜಿಸಿ ಕುಚಿತ ದೈವಕ್ಕೆರಗುವವ
ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ.
ಭಕ್ತರೆಂತೆಂಬೆ, ಭೃತ್ಯರೆಂತೆಂಬೆ, ಶರಣರೆಂತೆಂಬೆನವರ?
ಎರಡುಳ್ಳ ಪ್ರಪಂಚಿಗಳ ಮೆಚ್ಚ
ಕೂಡಲಸಂಗಮದೇವ. ॥೮೯॥

೭೧೬
ಕಂಡಕಂಡವರೆಲ್ಲ ಗಂಡನೆಂದೆಂಬ
ದುಂಡೆಯನವಳ ಸಜ್ಜ[ನೆ] ಎಂದೆನ್ನಬಹುದೆ?
ಲಿಂಗಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ
ನಮ್ಮ ಕೂಡಲಸಂಗಮದೇವನು
ಆ ಭಂಡರಿಗೆ ಮಾಡಿದ ಹುಳುಗೊಂಡವ! ॥೯೦॥

೬೧೭

ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ,
ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ.
ಬೇಡ ಬೇಡ, ಅನ್ಯದೈವದ ಸಂಗ ಹೊಲ್ಲ!
ಬೇಡ ಬೇಡ, ಪರದೈವದ ಸಂಗ ಹೊಲ್ಲ!
ಬೇಡ ಬೇಡ, ಅನ್ಯದೈವವೆಂಬುದು ಹಾದರ ಕಾಣಿರೋ,
ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ವ ಕಾಣಿರೊ. ॥೯೧॥

೬೧೮

ಊಡುವ ಉಡಿಸುವ ಗಂಡನಿದ್ದಂತೆ
ಜೋಡೆ, ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು.
ಕೂಡಲಸಂಗಮದೇವನು
ಸಿಂಗಾರದ ಮೂಗ ಬಣ್ಣಿಸಿ, ಹಲುದೋರೆ ಕೊಯ್ವ. ॥೯೨॥

೬೧೯

ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ?
ತಪ್ಪಿತ್ತು ಗಣಪದವಿ, ಲಿಂಗಕ್ಕೆ ದೂರ.
ಒಬ್ಬರಿಗಾಳಾಗಿ, ಒಬ್ಬರನೋಲೈಸುವ
ನಿರ್ಬುದ್ಧಿಮನುಜರನೇನೆಂಬೆ, ಕೂಡಲಸಂಗಮದೇವಾ! ॥೯೩॥

೬೨೦

ಎಲವೋ, ಎಲವೋ ಪಾಪಕರ್ಮವ ಮಾಡಿದವನೇ,
ಎಲವೋ ಎಲವೋ ಬ್ರಹ್ಮೇತಿಯ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ.
ಒಮ್ಮೆ ಶರಣೆಂದಡೆ ಪಾಪಕರ್ಮ ಓಡುವವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು.
ಒಬ್ಬಗೆ ಶರಣೆನ್ನು,
ನಮ್ಮ ಕೂಡಲಸಂಗಮದೇವಂಗೆ. ॥೯೪॥

೬೨೧

ಹಲವು ಕೊಂಬಿಂಗೆ ಹಾಯಲುಬೇಡ,
ಬರುಕಾಯಕ್ಕೆ ನೀಡಲುಬೇಡ,
ಲೋಗರಿಗೆ ಕೊಟ್ಟು ಭ್ರಮಿತನಾಗಿರಬೇಡ.
ಆಚಾರವೆಂಬುದು ಹಾವಸೆಗಲ್ಲು,
ಭಾವತಪ್ಪಿದ ಬಳಿಕ ಏಗ್ಯೆದಡಾಗದು.
ಅಂಜದಿರು, ಅಳುಕದಿರು, ಪರದೈವಕ್ಕೆರಗದಿರು,
ಕೂಡಲಸಂಗಯ್ಯನ ಕೈಯಲು ಈಸುವುದೆನ್ನ ಭಾರ. ॥೯೫॥

೬೨೨

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು,
ಉದ್ಧರಿಸುವನೊಬ್ಬ, ಶಿವಶರಣ ಸಾಲದೆ?
ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ಬೇಡಿದ,
ಕೊಟ್ಟ ಬಲಿ ಬಂಧನಕ್ಕೆ ಸಿಕ್ಕಿದ.
ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ,
ಕೊಟ್ಟ ದಾಸ ತವನಿಧಿಯ ಪಡೆದ.
ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ,
ಕೊಟ್ಟ ಕರ್ಣ ಕಳದಲ್ಲಿ ಮಡಿದ.
ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ,
ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯಪುರ ಕೈಲಾಸಕ್ಕೊಯ್ದ.
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ,
ಕೊಟ್ಟ ನಾಗಾರ್ಜುನನ ಶಿರಹೋಯಿತ್ತು.
ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳನ ವಧುವ ಬೇಡಿದ,
ಕೊಟ್ಟ ಸಿಂಧುಬಲ್ಲಾಳ ಸ್ವಯಲಿಂಗವಾದ.
ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು;
ಕೊಡಿರೇ, ನಮ್ಮ ಕೂಡಲಸಂಗನ ಶರಣರಿಗೆ. ॥೯೬॥

೬೨೩

ಎಚ್ಚು ಬಾಲಿಯ ಕೊಂದ, ಕಟ್ಟಿದನು ಶರಧಿಯನು,
ಹತ್ತು ತಲೆಯ ರಾವಳನ ಒಂದೆ ಅಂಬಿನಲ್ಲಿ ಮಡಿಹಿದ,

ಛಲದಿ ಲಂಕಾದ್ವೀಪವ ನೆಲವಣ್ಣ ಮಾಡಿದ,
ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ ರಾಮನ ತೋರಾ.
ಮಾಯದ ಸಂಸಾರವ ನಚ್ಚಿ, ಕೆಟ್ಟು ಬರುದೊರೆವೊಗಬೇಡ.
ಕರ್ತು ಕೂಡಲಸಂಗಂಗೆ ಶರಣೆನ್ನಿರಯ್ಯಾ. ॥೯೭॥

೭೨೪

ವಿಪ್ರರ ಕರೆದು 'ನೃಪರುಗಳು ಇಪ್ಪರೆ
ತಮ್ಮ ಶಿಶುವಿನೊಡನೆ'ಂದು ಬೆಸಗೊಂಡಡೆ,
'ಇಪ್ಪರು, ಇಪ್ಪರು, ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೆ?'
ಎಂದು ಕಣ್ಣ ಕಾಣದೆ ಹೇಳಿದರು, ಅಣ್ಣಗಳು, ಕರ್ಮದ ಬಟ್ಟೆಯನು.
ಅಂತೆಂದ ಮಾತ ಶಿಶು ಕೇಳಿ,
ಕೆಟ್ಟೋಡಿ ಬಂದು, ಲಿಂಗದ ಹೊಟ್ಟೆಯ ಹೊಗಲು,
ಅಟ್ಟಿಬಂದು ಖಂಡೆಯವ [ತ]ಳೆದುಕೊಂಡು ಮಂಡೆಯನೊಡೆಯಲು,
ಮಂಡೆ ಒಡೆದು ಭೂಮಂಡಲವರಿಯೆ ನಾಲ್ಕು ಪುರವಾಗಲು,
ಘಟಸರ್ಪನ ತುಡುಕೆ ನಾಗನಾಥನಾಗಿ,
ಇಪ್ಪತ್ತೇಳು ಬಸದಿಯನೊಡೆಯನೆ?
ಆಗಳಂತೆ ಎನ್ನ ಮಾಡಿದ ಕರ್ಮ ನಿಮ್ಮ ಕೈಯಲು ಕೆಡಿಸುವರು.
ಮುನ್ನೊಬ್ಬ ಕೆಡಿಸಿಹನೆಂದು ಬಂದು ಒಂದು ತುತ್ತನಿಟ್ಟು
ಮರಳಿ ಕೈಯಿಡ ಹೋದಡೆ ತುತ್ತು ಹುಳುಗುಪ್ಪೆಯಾಗದೆ?
ಶಿವಧರ್ಮವ ಕೆಡಿಸಿದವನು ಅಧರ್ಮಕ್ಕಿಳಿವನು.
ಕೂಡಲಸಂಗಮದೇವ ಸಾಕ್ಷಿಯಾಗಿ
ಮಕರಭೋಜನವಾಗನೆ ವಿನಾಶಕ್ತಿರಾಯನು. ॥೯೮॥

೭೨೫

ಅರಸು ವಿಚಾರ, ಸಿರಿಯು, ಶೃಂಗಾರ, ಸ್ಥಿರವಲ್ಲ ಮಾನವಾ.
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ.
ಒಬ್ಬ ಜಂಗಮದ ಅಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು,
ಸಂದಿತ್ತು, ಕೂಡಲಸಂಗಮದೇವಾ ನಿಮ್ಮ ಕವಳಿಗೆಗೆ. ॥೯೯॥

೭೨೬

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದಡೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ಕೂಡಲಸಂಗಮದೇವಾ. ॥೧೦೦॥

೭೨೭

ಕರ್ತನನರಿಯದವನು ವಿಪ್ರನಾದಡೇನು?
ಚತುರ್ವೇದಿಯಾದಡೇನು?
ಭುಕ್ತಿಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯಾ!
ಭವಿಮಾಡಿದ ಪಾಕವ ತಂದು,
ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು.
ಕೂಡಲಸಂಗನ ಶರಣರ ಒಕ್ಕುದ ಕೊಂಡು
ಅನ್ಯವನಾಚರಿಸಿದಡೆ ತಪ್ಪದು
ಸೂಕರ ಶುಚಿರ್ಭೂತತೆಯ ಪ್ರಾಣಿಯಂತೆ. ॥೧೦೧॥

೭೨೮

ಉಂಬಲ್ಲಿ [ಊ]ಡುವಲ್ಲಿ ಕ್ರೀಯಳಿಯಿತ್ತೆಂಬರು,
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು,
ಎಂತಯ್ಯಾ ಅವರ ಭಕ್ತರೆಂತೆಂಬೆ?
ಎಂತಯ್ಯಾ ಅವರ ಯುಕ್ತರೆಂತೆಂಬೆ?
ಕೂಡಲಸಂಗಮದೇವಾ ಕೇಳಯ್ಯಾ,
ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯಾ. ॥೧೦೨॥

೭೨೯

ಭಕ್ತರನಲ್ಲದೆ ಒಲ್ಲೆವೆಂದೆಂಬಿರಿ,
ಭಕ್ತರಿಗಲ್ಲದೆ ಕೈಯಾನೆವೆಂಬಿರಿ,
ಇದೇನ ಮಾಡುವಿರಿ? ಇದೆಲ್ಲಿಗೊಯ್ಯುವಿರಿ?

ಪಾವನವಾದುದನು ಲಿಂಗಕ್ಕೆ ಮಾಡುವುದೆ ಆಚಾರ.
ವಿಷಯಕ್ಕೆ ಇಕ್ಕಿ, ಅಸುಗತಿಗಿಳಿಯದಿರಿ,
ಕೂಡಲಸಂಗನಶರಣರ ಒಡವೆಯ. ॥೧೦೩॥

೬೩೦
ಮಾರಿ ಮಸಣಿಯೆಂಬವು ಬೇರಿಲ್ಲ ಕಾಣಿರೋ.
ಮಾರಿಯೆಂಬುದೇನು?
ಕಂಗಳು ತಪ್ಪಿ ನೋಡಿದಡೆ ಮಾರಿ,
ನಾಲಗೆ ತಪ್ಪಿ ನುಡಿದಡೆ ಮಾರಿ,
ನಮ್ಮ ಕೂಡಲಸಂಗಮದೇವರ ನೆನಹ ಮರೆದಡೆ ಮಾರಿ. ॥೧೦೪॥

೬೩೧
ಆಯುಧವಿಕ್ಕಿದವಂಗೆ ವೀರದ ಮಾತೇಕೆ?
ಲಿಂಗವು ಅಂತರಿಸಿದವಂಗೆ ಒಳುನುಡಿ ಏಕೆ?
ಐದೆ ಅಣಚಿಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ?
ಸತ್ಯವಿಲ್ಲದವಂಗೆ ನಿತ್ಯನೇಮವೇಕೆ?
ಕರ್ತಾರ, ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ?
ಕೂಡಲಸಂಗಮದೇವಯ್ಯಾ,
ನೀವಿಲ್ಲದವಂಗೆ ಶಿವಾಚಾರದ ಮಾತೇಕೆ? ॥೧೦೫॥

೬೩೨
ಇರುಳೆಂದೇನೋ ಕುರುಡಂಗೆ, ಹಗಲೆಂದೇನೋ ಕುರುಡಂಗೆ!
ತಾಳವ ಬಾರಿಸಿದಡೇನೋ, ಪಂಚಮಹಾಶಬುದವ
ಬಾರಿಸಿದಡೇನೋ ಕಿವುಡಂಗೆ!
ಕೂಡಲಸಂಗಮದೇವಯ್ಯನ ಪಥವಿನ್ನಾವುದೆಂದರಿಯದವಂಗೆ! ॥೧೦೬॥

೬೩೩
ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ?
ಸುಂಡಿಲು ಮುರಿಯಲು ಗಜವೇನು ಬಾತೆ?

ಸಂಗ್ರಾಮದಲ್ಲಿ ವೀರನುಳಿಯೆ ಕಲಿತನವೇನು ಬಾತೆ?
ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ?
ಕೂಡಲಸಂಗಮದೇವಾ. ॥೧೦೭॥

೬೩೪

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೂ ಅಳವಡವು ನೋಡಾ.
ಬಲ್ಲೆನಾಗಿ ಒಲ್ಲೆನು ಅವರ, ಸಲ್ಲರು ಶಿವಪಥಕ್ಕೆ.
ಒಳ್ಳಿಹ ಮೈಲಾರನ ಸಿಂಗಾರದಂತೆ,
ವೇಶಿಯ ಬಾಯ ಎಂಜಲನುಂಬ ದಾಸಿಯ ಸಂಸಾರದಂತೆ,
ಕೂಡಲಸಂಗನ ಶರಣರನರಿಯದೆ ಉಳಿದ ಭಂಗಿತರ. ॥೧೦೮॥

೬೩೫

ಗೀಜಗನ ಗೂಡು, ಕೋಡಗದಣಲ ಸಂಚ,
ಬಾದುಮನ ಮದುವೆ, ಬಾವಲ ಬಿದ್ದಿನಂತೆ,
ಜೂಜುಗಾರನ ಮಾತು, ಬೀದಿಯ ಗುಂಡನ ಸೊಬಗು
ಓಡಿನೊಳಗಗೆಯ ಹೊಯ್ದಂತೆ ಕಾಣಿರೋ.
ಶಿವನಾದಿ ಅಂತುವನರಿಯದವನ ಭಕ್ತಿ
ಸುಖಶೋಧನೆಗೆ ಮದ್ದ ಕೊಂಡಂತೆ,
ಕೂಡಲಸಂಗಮದೇವಾ. ॥೧೦೯॥

೬೩೬

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ
ಕುಚಿತರ ಸಂಗ, ಸುಸಂಗಿಗೆ ಸಂಗಡವಿಲ್ಲ!
ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೆ,
ಕೂಡಲಸಂಗಮದೇವಾ? ॥೧೧೦॥

೬೩೭

ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ?
ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?

ದರಿದ್ರನು ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ?
ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ?
ಮುನ್ನಿನ ಪುರಾತರ ನೆನೆದು ಧನ್ಯನಾದೆಹೆನೆಂಬ
ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವಾ? ॥೧೧೧॥

೬೩೮

ಆನೆಯನೇರಿಕೊಂಡು ಹೋದಿರೇ ನೀವು,
ಕುದುರೆಯನೇರಿಕೊಂಡು ಹೋದಿರೇ ನೀವು,
ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೇ ಅಣ್ಣಾ!
ಸತ್ಯದ ನಿಲವನರಿಯದೆ ಹೋದಿರಲ್ಲಾ,
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ!
ಅಹಂಕಾರವೆಂಬ ಸದಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಕೂಡಲಸಂಗಮದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ! ॥೧೧೨॥

೬೩೯

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು,
ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು.
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯವರು?
ಸತಿಪತಿರತಿಸುಖಭೋಗೋಪಭೋಗವ, ವಿಳಾಸವ
ಬಿಟ್ಟನೆ ಸಿಂಧುಬಲ್ಲಾಳನು?
ನಿಮ್ಮ ಮುಟ್ಟಿ ಪರಧನ-ಪರಸತಿಯರಿಗೆಳಸಿದಡೆ
ನಿಮ್ಮಾಚಾರಕ್ಕೆ ದೂರ, ಕೂಡಲಸಂಗಮದೇವಾ. ॥೧೧೩॥

೬೪೦

ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ.
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ,

ಚೌಡೇಶ್ವರಿಯಲ್ಲಿಯೂ ಮೇಳವೇ?
ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲಸಂಗಮದೇವ. ॥೧೧೪॥

೬೪೧

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದಡೆ,
ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ.
ಕಾಣಿರಣ್ಣಾ! ಒಡೆಯನರಸಿಯ ಸರಸಬೇಡ.
ಕೂಳ ಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ.
ಕೂಡಲಸಂಗಮದೇವ ಕರ ಸಿತಗನಯ್ಯಾ. ॥೧೧೫॥

೬೪೨

ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ ಕಾಣಿರೋ.
ತಗರ ಬೆನ್ನಲಿ ಹರಿವ ಸೊಣಗನಂತೆ, ಬೇಡ ಕಾಣಿರೋ.
ಒಂದಾಸೆಗೆ ಸಾಸಿರ ವರುಷ ನರಕದಲದ್ದುವ
ಕೂಡಲಸಂಗಮದೇವ. ॥೧೧೬॥

೬೪೩

ತೊರೆಯ ಮೀವ ಅಣ್ಣಗಳಿರಾ,
ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂ ಭೋ, ತೊರೆಯಿಂ ಭೋ
ಪರನಾರಿಯರ ಸಂಗವ ತೊರೆಯಿಂ ಭೋ!
ಪರಧನದಾಮಿಷವ ತೊರೆಯಿಂ ಭೋ!
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು,
ಕೂಡಲಸಂಗಮದೇವಾ. ॥೧೧೬॥

೬೪೪

ಸತ್ಯ ಶೌಚ ನಿತ್ಯನೇಮವ ತಪ್ಪದೆ ಮಾಡಬಲ್ಲಡೆ ಅದು ಲೇಸು.
ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿರ್ದಲ್ಲಿ ಫಲವೇನು?

'ಚಿತ್ತಮಂತರ್ಗತಂ ದುಷ್ಟಂ ತೀರ್ಥಸ್ನಾನಾನ್ನ ಶುಧ್ಯತಿ
ಶತಶೋऽಪಿ ಜುಲೈರ್ಧೌತಂ ಸುರಾಭಾಂಡಮಿವಾऽಶುಚಿಃ'
ಆಗಡವ ಮಾಡಿ ಮಾಗುಡವ ಮಿಂದಡೆ,
ತಾ [ಕೂ]ಡಬಲ್ಲನೆ ಕೂಡಲಸಂಗಮದೇವ? ॥೧೧೮॥

೬೪೫

ಕುಳ್ಳಿರ್ದು ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ;
ಬೆಳ್ಳೆ ಎತ್ತಿನ ಮರೆಯಲಿರ್ದು ಹುಲ್ಲೆಗಂಬ ತೊಡುವಂತೆ.
ಕಳ್ಳ ಹಾದರಿಗರ ಕೈಯಲು ಪೂಜೆಯ ಕೊಳ್ಳ
ನಮ್ಮ ಕೂಡಲಸಂಗಮದೇವ. ॥೧೧೯॥

೬೪೬

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ.
ನುಡಿಯಲೂ ಬಾರದು, ನಡೆಯಲೂ ಬಾರದು,
ಲಿಂಗದೇವನೆ ದಿಬ್ಯವೊ ಅಯ್ಯಾ.
ಬಡವನ ಕೋಪವು ಅವುಡಿಗೆ ಮೃತ್ಯುವಾದಂತೆ
ಕಡೆಗೆ ದಾಂಟದು ಕಾಣಾ,
ಕೂಡಲಸಂಗಮದೇವಾ. ॥೧೨೦॥

೬೪೭

ತನು ಶುಚಿಯಿಲ್ಲದವನ ದೇಹಾರವೇಕೆ?
ದೇವರು ಕೊಡನೆಂಬ ಭ್ರಾಂತದೇಕೆ?
ಮನಕ್ಕೆ ಮನವೆ ಸಾಕ್ಷಿ, ಸಾಲದೆ ಲಿಂಗ ತಂದೆ?
ಹೇಂಗೆ ಮನ ಹಾಂಗೆ ಘನ ತಪ್ಪದು,
ಕೂಡಲಸಂಗಮದೇವಾ. ॥೧೨೧॥

೬೪೮

ಶರಣ, ನಿಚ್ಚನಿಚ್ಚ ಪೂಜಿಸುವಂಗೆ ಇದಕ್ಕಿದೆ ದೃಷ್ಟದೀವಿಗೆ–
ಪಾದೋದಕ: ಕೋಶಪಾನವಲ್ಲದೆ ಏನೂ [ಅ]ಲ್ಲವಯ್ಯಾ.

ಮಜ್ಜನಕ್ಕೆರೆವುದು ಲಿಂಗಃ ಕರಸ್ಥಲದಿಬ್ಯ.
ಗುರುವಚನಃ ಭಾಷಾಪತ್ರ ಶಿವಕರದಲ್ಲಿ.
ಸತ್ಯದಿಂದ ನಡೆವಂಗೆ ನಿತ್ಯನೇಮವಾಗಿ ಸಲಿಸುವನಲ್ಲದೆ
ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ.
ಲಿಂಗವ ಪೂಜಿಸಿ ಮರಳಿ ಅನ್ಯಾಯಕ್ಕೆರಗಿದಡೆ
ಕೂಡಲಸಂಗಮದೇವನವರ ಹಲ್ಲ ಕಳೆವ. ॥೧೨೨॥

೬೪೯

ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ?
ನಾರಿವಾಣವಕ್ಕುದೆ ನಾಯಿಗೆ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಭಕಂಗೆ? ॥೧೨೩॥

೬೫೦

ಕೋಪಿ ಮಜ್ಜನಕ್ಕೆರೆದಡೆ ರಕ್ತದ ಧಾರೆ,
ಪಾಪಿ ಹೂವನೇರಿಸಿದಡೆ ಮಸೆದಡ್ಡಾಯುಧದ ಗಾಯ.
ಕೂಪವರನಾರನೂ ಕಾಣೆನು ಮಾದಾರ ಚೆನ್ನಯ್ಯನಲ್ಲದೆ,
ಕೂಪವರನಾರನೂ ಕಾಣೆನು ಡೋಹರ ಕಕ್ಕಯ್ಯನಲ್ಲದೆ,
ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯ.
ನಿನ್ನಾಪತ್ತಿಗರಿವರಯ್ಯಾ, ಕೂಡಲಸಂಗಯ್ಯಾ. ॥೧೨೪॥

೬೫೧

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ,
ಅವರಾರಾಧನೆ ದಂಡ.
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನು ಒಲ್ಲ
ಕೂಡಲಸಂಗಮದೇವ, ಭೂಮಿಭಾರಕರ. ॥೧೨೫॥

೬೫೨

ನೂರನೋದಿ ನೂರ ಕೇಳಿ ಏನು?
ಆಸೆ ಬಿಡದು, ರೋಷ ಪರಿಯದು.

ಮಜ್ಜನಕ್ಕೆರೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ [ಡಂ]ಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ. ॥೧೨೬॥

೬೫೩

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.
ಲಿಂಗವಂತನು ಲಿಂಗವಂತಂಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವರ ಮೆಚ್ಚ ಕೂಡಲಸಂಗಮದೇವ. ॥೧೨೭॥

೬೫೪

ಗುರು ಉಪದೇಶ ಮಂತ್ರವೈದ್ಯ,
ಜಂಗಮ ಉಪದೇಶ ಶಸ್ತ್ರವೈದ್ಯ ನೋಡಾ,
ಭವರೋಗವ ಕಳೆವ ಪರಿಯ ನೋಡಾ.
ಕೂಡಲಸಂಗನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ. ॥೧೨೮॥

೬೫೫

ಕೇಳಿರೆ ಕೇಳಿರೆ ಹಿರಿಯರು,
ಗುರುವಿನ ಉಪದೇಶವನು;?
ಒಂದು ಗೀಜಗನ ಉಪದೇಶದಿಂದ
ಪೌಲಸ್ತ್ಯನಂದು ಹಡೆಯನೆ ದಶಮುಖನ?
ಶಿರವ ಹರಿದಿಕ್ಕೆ, ಪರಮನಿದ್ದೆಡೆಯು ಕಾಣದೇನಿಳೆಯಲ್ಲಿ?
ಕರುಳ ತಂತಿಯ ಉಪದೇಶದಿಂದ
ಅಸುರನಂದು ಹಡೆಯನೆ ಸುರಪದವ?
ತರುಣಿ ಹರಿಣಿಯ ಹಿತೋಪದೇಶದಿಂದ ಗತಿಮುಕ್ತಿಯ ಪಡೆದು
ಬಟ್ಟೆಯ ಹತ್ತನೆ ವಿನಾಶಕ್ತಿರಾಯನು?

ರಂಭೆಯ ಉಪದೇಶದಿಂದ
ಶಂಭುವಿನೋಲಗದಲ್ಲಿ ಕುಳ್ಳಿರನೆ ಶ್ವೇತನು?
ನಮ್ಮ ಕೂಡಲಸಂಗನ ಶರಣರ ಉಪದೇಶವ ಕೇಳಿದವರಿಗೆ
ದುರಿತ ಪಾಪಂಗಳು ಬಿಟ್ಟುಹೋಗಿ,
ಮನ ನಿರುತರಾಗಿಪ್ಪರಾ ಲಿಂಗದಲ್ಲಿ. ॥೧೨೯॥

೬೫೬

ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ
ಆಚಾರ ಶಿವಚಾರ ತಮತಮಗೆ ಸೂರೆಯೆ?
ಕೂಡಲಸಂಗಮದೇವನ ಪೂಜಿಸಿದವಂಗಲ್ಲದೆ. ॥೧೩೦॥

೬೫೭

ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು.
ನಂಬಿ ನಂಬದಿದ್ದಡೆ ಸಂದೇಹಿ, ನೋಡಾ.
ಕಟ್ಟಿದಡೇನು, ಮುಟ್ಟಿದಡೇನು,
ಹೂಸಿದಡೇನು ಮನಮುಟ್ಟದನ್ನಕ್ಕ?
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು,
ಕೂಡಲಸಂಗಮದೇವ ಒಲಿದಂಗಲ್ಲದೆ. ॥೧೩೧॥

೬೫೮

ಅವರ ನಡೆಯೊಂದು ನುಡಿಯೊಂದಾದಡೆ
ಶಿವಾಚಾರಕ್ಕವರು ಸಲ್ಲರಯ್ಯಾ!
ಬಲ್ಲನು, ಸಾತ್ವಿಕರಲ್ಲದವರನೊಲ್ಲನು.
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು.
ಪ್ರಪಂಚಿಯ ಮನವನೊಲ್ಲನು ಕೂಡಲಸಂಗಮದೇವನು. ॥೧೩೨॥

೬೫೯

ನಿಧಾನವನರಸಿಹೆನೆಂದು ಹೋದಡೆ,
ವಿಘ್ನಬಪ್ಪುದು ಮಾಬುದೆ?

ಸದಾಶಿವನೆಂದಡೆ, ಬೆದರಟ್ಟಿ ಸುಡುವುದು ಮಾಬುದೆ?
ಹದುಳಿಗನಾಗಿ ಉಳಿದಡೆ ಪದವನೀವ ಕಾಣಾ
ಕೂಡಲಸಂಗಮದೇವ. ॥೧೩೩॥

೬೬೦

ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ,
ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ಹೊಲ್ಲ!
ಮುಂದೆ ಪಥಕ್ಕೆ ಸಲ್ಲರು.
ಆದಿಯಿಂದ ಬಂದ ವಚನವೆಂದು
ಶರಣರ ಕೂಡೆ ಸರಸವಾಡಿದಡೆ,
ನಗುತಲಿರಿದುಕೊಂಡಡೆ ಅಲಗು ನೆಡದಿಹುದೆ
ಕೂಡಲಸಂಗಮದೇವಾ? ॥೧೩೪॥

೬೬೧

ಅರಗಿನ ಪುತ್ಥಳಿಯನುರಿಯ ನಾಲಗೆ ಹೊಯಿದು
ಮಾತಾಡುವ ಸರಸ ಬೇಡ!
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚಲ್ಲವಾಡಿದಡೆ ಹಲ್ಲು ಹೋಹುದು!
ಕೂಡಲಸಂಗನ ಶರಣರೊಡನೆ ಸರಸವಾಡಿದಡೆ
ಅದು ವಿರಸ ಕಾಣಿರಯ್ಯಾ. ॥೧೩೫॥

೬೬೨

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ,
ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲನಾಡುವಂತೆ,
ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದಡೆ
ಸುಣ್ಣಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ. ॥೧೩೬॥

೬೬೩

ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದು ಮಾಬುದೆ?
ಕಲ್ಲ ಗುಗ್ಗರಿಯ ಮೆಲಿದಡೆ ಹಲ್ಲು ಹೋಹುದು ಮಾಬುದೆ?
ಶರಣರೊಡನೆ ಸರಸವಾಡಿದಡೆ ನರಕ ತಪ್ಪದು ಕಾಣಾ
ಕೂಡಲಸಂಗಮದೇವಾ. ॥೧೩೭॥

೬೬೪

ಕೋಣನ ಹೇರಿಂಗೆ ಕುನ್ನಿ ಬಸುಕುತ್ತಬಡುವಂತೆ
ತಾವೂ ನಂಬರು, ನಂಬುವರನೂ ನಂಬಲೀಯರು,
ತಾವೂ ಮಾಡರು, ಮಾಡುವರನೂ ಮಾಡಲೀಯರು.
ಮಾಡುವ ಭಕ್ತರ ಕಂಡು ಸೈರಿಸಲಾರದವರ,
ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವ. ॥೧೩೮॥

೬೬೫

ಚೇಳಿಂಗೆ ಬಸುರಾಯಿತ್ತೆ ಕಡೆ! ಬಾಳೆಗೆ ಫಲವಾಯಿತ್ತೆ ಕಡೆ!
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದಡೆ ಅದೇ ಕಡೆ
ಕೂಡಲಸಂಗಮದೇವಾ. ॥೧೩೯॥

೬೬೬

ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗುಣಬಾರದು,
ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು.
ಅಳಿಮನದಾಸೆಯವರ ಮೂಗ ಹಲುದೋರೆ ಕೊಯ್ವ
ಕೂಡಲಸಂಗಮದೇವ. ॥೧೪೦॥

೬೬೭

ಅರ್ಥ ಪ್ರಾಣ ಅಭಿಮಾನ ನಿಮ್ಮದೆಂಬಿರಿ,
ಒತ್ತಿ ನೋಡಿದಡೆ ಮುಟ್ಟಲೀಯಿರಿ.
ಮುಟ್ಟೆ ಬಂದಲ್ಲಿ ಕಠಾರಿಯ ಕಾಳಗವ ನೀವಾಡಿಸುವಿರಲ್ಲದೆ

ಲಿಂಗಜಂಗಮವಂತನಾಗಬಾರದು.
ಕೂಡಲಸಂಗಮದೇವಾ,
ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯಾ? ॥೧೪೧॥

೬೬೮

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು.
ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು,
ಶಬ್ದಲೊಟ್ಟೆಯತನದಲ್ಲಿ ಎಂತಪ್ಪುದಯ್ಯಾ ಭಕ್ತಿ?
ಪಾಪಿಯ ಕೂಸನೆತ್ತಿದಂತೆ.
ಕೂಡಲಸಂಗಮದೇವರ ಭಕ್ತಿ ಅಳಿಮನದವರಿಗೆ ಅಳವಡದಯ್ಯಾ. ॥೧೪೨॥

೬೬೯

ಹರಬೀಜವಾದಡೆ ಹಂದೆ ತಾನಪ್ಪನೆ?
ಒರೆಗಟ್ಟಿ ಇರಿಯದವರ ಲೋಕ ಮೆಚ್ಚುವುದೆ?
ಉಟ್ಟ ಚಲ್ಲಣ ಕೈಯ ಪಟ್ಟೆಯವಿಡಿದು,
ಗರುಡಿಯ ಕಟ್ಟಿ ಶ್ರವವ ಮಾಡುವಂತೆ
ತನ್ನ ತಪ್ಪಿಸಿಕೊಂಡಡೆ ಶಿವ ಮೆಚ್ಚುವನೆ?
ಅರಿಯದವರಿಗೆ ಒಳ್ಳೆ ಹೆಡೆಯನೆತ್ತಿಯಾಡುವಂತೆ
ಬೊಳ್ಳೆಗನ ಭಕ್ತಿ ಕೂಡಲಸಂಗಮದೇವಾ. ॥೧೪೩॥

೬೭೦

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?
ಭಾಷೆ ತಪ್ಪಿದ ಬಳಿಕ ದೇವಾ, ಬಲ್ಲಿದ ಭಕ್ತನೇನ ಮಾಡುವನಯ್ಯಾ?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯನು ಹಾರಿದಡೆ
ಮೀಸಲನು ಸೊಣಗ ಮುಟ್ಟಿದಂತೆ ಕೂಡಲಸಂಗಮದೇವಾ. ॥೧೪೪॥

೬೭೧

ಶರಣ ಸಂಬಂಧವನರಿದ ಬಳಿಕ ಮರಳಿ ಭವಿಯ ಬೆರಸಲಾಗದು.
ಬ್ರಹ್ಮೇತಿ ಭ್ರೂಣಹತ್ಯ ವೈತರಣಿ ದುರ್ಗತಿ

ಪಂಚಮಹಾಪಾತಕದಿಂದಧಿಕ ನೋಡಾ.
ಅಳುಪಿ ಭವಿಯೊಡನುಂಡಡೆ ಭಕ್ತನಲ್ಲ
ಕೂಡಲಸಂಗಮದೇವಾ. ॥೧೪೫॥

೬೭೨

ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯಾ;
ವೀರನಾದಡೆ ವೈರಿಗಳು ಮೆಚ್ಚಬೇಕು,
ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು,
ಭಕ್ತನಾದಡೆ ಜಂಗಮವೆ ಮೆಚ್ಚಬೇಕು.
ಈ ನುಡಿಯೊಳಗೆ ತನ್ನ ಬಗೆಯಿರೆ
ಬೇಡಿದ ಪದವಿಯನೀವ ಕೂಡಲಸಂಗಮದೇವ. ॥೧೪೬॥

೬೭೩

ಕಲಿತನ ತನಗುಳ್ಳಡೆ ಸೂಜಿ ಬಾಳು ಮೊದಲಾಗಿ ಕಾದಲೆಬೇಕು.
ಶರಣಪಥ ತನಗುಳ್ಳಡೆ ಶಿವಭಕ್ತರ ಮನೆಯಲ್ಲಿ ಶಿವರಸವ
ಪಂಚಾಮೃತವ ಮಾಡಿಕೊಳ್ಳಬೇಕು.
ಭ್ರಾಂತುವಿಡಿದು ಲಿಂಗಕ್ಕೋಗರವನರಸುವ
ಪಾತಕರ ಮೆಚ್ಚ ಕೂಡಲಸಂಗಮದೇವ. ॥೧೪೭॥

೬೭೪

ಕಟ್ಟಿ ಬಿಡುವನೆ ಶರಣನು? ಬಿಟ್ಟು ಹಿಡಿವನೆ ಶರಣನು?
ನಡೆದು ತಪ್ಪುವನೆ ಶರಣನು? ನುಡಿದು ಹುಸಿವನೆ ಶರಣನು?
ಸಜ್ಜನಿಕೆ ತಪ್ಪಿದಡೆ, ಕೂಡಲಸಂಗಯ್ಯ
ಮೂಗ ಹಲುದೋರೆ ಕೊಯ್ವ. ॥೧೪೮॥

೬೭೫

ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾ[ಡೆ]–ಪೂರ್ವಾಶ್ರಯವ ಕಳೆದು,
ಹೊಂದುವಲ್ಲಿ ಭವಿಯಾಗಿ ಹೋಹರ ಮುಟ್ಟಲಾಗದು.
ಅವನ ಮುಟ್ಟಿದವ ಮುನ್ನವೆ ವ್ರತಗೇಡಿ.

ಅವನ ಶ್ರಾದ್ಧಕಾಲವೆ ಶ್ವಾನಮಾಂಸ,
ಕ್ರಿಯಾಕಾಲವೆ ಕ್ರಿಮಿಗಳು, ತದ್ದಿನವೆ ಮದ್ಯಮಾಂಸ.
ಇದು ಕಾರಣ, ಕೂಡಲಸಂಗಮದೇವಾ,
ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕನರಕ. ॥೧೪೯॥

೬೭೬

ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ,
ಎಡೆಯಲಾದ ಒಂದು ಉಡುಗೆಯನುಟ್ಟು,
ಸಡಿಲಿದಡೆ ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ
ದಿಟವಾಯಿತ್ತು ಲೌಕಿಕದಲ್ಲಿ.
ಹಡೆದ ಗುರುಕರುಣವ,
ಒಡನೆ ಹುಟ್ಟಿದ ನೇಮವನು ಬಿಡದಿರೆಲವೊ.
ಬಿಟ್ಟಡೆ ಕಷ್ಟ, ಕೂಡಲಸಂಗಮದೇವನಡಸಿ
ಕೆಡಹುವ ನಾಯಕನರಕದಲ್ಲಿ. ॥೧೫೦॥

೬೭೭

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ,
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ,
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ,
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ,
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ,
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ. ॥೧೫೧॥

೬೭೮

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ.
ಕೊಲುವೆನೆಂಬ ಭಾಷೆ ದೇವನದು,
ಗೆಲುವೆನೆಂಬ ಭಾಷೆ ಭಕ್ತನದು.
ಸತ್ಯವೆಂಬ ಕೂರಲಗನೆ ತಳೆದುಕೊಂಡು

ಸದ್ಭಕ್ತರು ಗೆದ್ದರು ಕಾಣಾ,
ಕೂಡಲಸಂಗಮದೇವಾ. ॥೧೫೨॥

೭೭೯

ಮುನ್ನಿನ ಕಲಿ ವೀರಧೀರರು ಕಾದಿದ ರಣಗಳನು
ಪರಿಪರಿಯಲಿ ಬಣ್ಣಿಸಿ ಹೇಳಲುಬಹುದಲ್ಲದೆ,
ಆ ದಳವಿದಿರಾದಲ್ಲಿ ಬಿರಿದ ಪಚಾರಿಸಿ,
ಕಾದಿ ತೋರಲುಬಾರದು.
ಮುನ್ನಿನ ಪುರುಷಬ್ರತಿಯರು ಒಲಿಸಿದ ಆಯತವ
ಪರಿಪರಿಯಲು ಬಣ್ಣಿಸಲು ಬಹುದಲ್ಲದೆ,
ಪುರುಷನಿರ್ವಾಣಕ್ಕುರಿವಗ್ನಿಯ
ಬಂದು ಹೊಕ್ಕು ತೋರಲುಬಾರದು.
ಮುನ್ನಿನ ಪುರಾತನರೆಲ್ಲರು ತನುಮನಧನವನ್ನಿತ್ತು
ಮಾಡಿ, ನೀಡಿ ಲಿಂಗವ ಕೂಡಿದ ಪರಿಗಳನು
ಅನುಭವದಲರ್ಥೈಸಿ ಹೇಳಬಹುದಲ್ಲದೆ,
ಮಾಡಿ, ನೀಡಿ ತೋರಲುಬಾರದು.
ಇಂತೀ ಅರೆಬಿರಿದಿನ ಬಂಟರು,
ಪುರುಷಬ್ರತಿಯರು, ಪುರಾತನರು
ಬರಿಯ ಮಾತನಾಡಿ ಹೊರಗೆ ಮೆರೆವರಲ್ಲಾ!
ಪರೀಕ್ಷೆಯುಂಟಾಗಿಯಿದ್ದಡೆ ಒಳಗಣವರ ಹೆಸರ ಹಿಡಿದು
ಪರಿಪರಿಯಲು ಹೊಗಳುವರು.
ಶರೀರಮರ್ಥಪ್ರಾಣ ಗುರುಲಿಂಗಜಂಗಮಕ್ಕೆ
ಪರೀಕ್ಷೆಯುಂಟಾಗಿಯೆ
'ಆತ ಮಹೇಶ್ವರ ಪುರಾತವಳಿ'ಯೆಂಬ
ಪರಮಬಂಧುಗಳಾತನ ನೆನೆನೆನೆದು ಬದುಕುವರು.
ಇಂತೀ ಅನುಭಾವದಲೋದಿ, ಅಕ್ಷರಾಭ್ಯಾಸವ ಸಾಧಿಸಿ
ತರ್ಕಿಸಿ ನಿಂದಿಸಲಾಗದು,
ಕೂಡಲಸಂಗನ ಶರಣರಿಗಲ್ಲದನುಭಾವವಿಲ್ಲ. ॥೧೫೩॥

೬೮೦

ಕಬ್ಬಿನ ಹಣಿದವನಾಡುವರಲ್ಲದೆ,
ಕಾಯದ ಹಣಿದವನಾಡುವರೆ?
ಮೇಲೊಡ್ಡವಾಯಿತ್ತೆಂದು ಕೂಡಲಸಂಗಮದೇವಾ,
ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ. ॥೧೫೪॥

೬೮೧

ಅರ್ಥ ಪ್ರಾಣ ಅಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ;
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ,
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ,
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊರಗಣ ಮಾತು,
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ. ॥೧೫೫॥

೬೮೨

ಒಂದು ಮಾತೆನ್ನಬಹುದೆ ಶಬ್ದಸಾರಾಯವನು?
ಒಂದು ಮಾತೆನ್ನಬಹುದೆ ಶರಣ ಸಂಬಂಧವನು?
ಕೂಡಲಸಂಗಮದೇವರು
ನಂಬಿಗೆ ಓ ಎಂದುದನೊಂದು ಮಾತೆನ್ನಬಹುದೆ? ॥೧೫೬॥

೬೮೩

ಭಕ್ತರೇ ಸಮರ್ಥರು,
ಅಸಮರ್ಥರೆಂದೆನಲುಂಟೆ?
ಚೆನ್ನನೆತ್ತ, ಚೋಳನೆತ್ತ!
ಚೆನ್ನನೊಡನುಂಡ ಶಿವ ಆಹಾ! ಅಯ್ಯಾ!
ಚೆನ್ನ, ಚೋಳನ ಮನೆಯ ಕಂಪಣಿಗನಯ್ಯಾ!
ಕೂಡಲಸಂಗಮದೇವ ಭಕ್ತಿಲಂಪಟನಯ್ಯಾ! ॥೧೫೭॥

೬೮೪

ನಿಸ್ಸೀಮ ಗುಗ್ಗುಳವನಿಕ್ಕಿದವನೊಬ್ಬ ಶರಣ,
'ಉಘೇ ಚಾಂಗು ಭಲಾ' ಎಂಬ ಹೊಗೆ ಗಗನವ ತೀವೆ.
ಓಹಿಲನ ಮೆರೆದ ಸೌರಾಷ್ಟ್ರಮಂಡಲದಲ್ಲಿ,
ಕೂಡಲಸಂಗಮದೇವ ಭಕ್ತಿವತ್ಸಲನಾಗಿ. ॥೧೫೮॥

೬೮೫

ಲಿಂಗವಶದಿಂದ ಬಂದ ನಡೆಗಳು,
ಲಿಂಗವಶದಿಂದ ಬಂದ ನುಡಿಗಳು,
ಲಿಂಗವಂತರು ತಾವು ಅಂಜಲದೇಕೆ?
ಲಿಂಗವಿರಿಸಿದಂತಿಪ್ಪುದಲ್ಲದೆ,
ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ. ॥೧೫೯॥

೬೮೬

ಶಿವಭಕ್ತನಾಗಿ ತನ್ನ ಹಿಡಿದೆಹೆನೆಂದು ಹೋದಡೆ;
ನುಗ್ಗು ಮಾಡುವ, ನುಸಿಯ ಮಾಡುವ,
ಮಣ್ಣ ಮಾಡುವ, ಮಸಿಯ ಮಾಡುವ.
ಕೂಡಲಸಂಗಮದೇವರ ನೆರೆ ನಂಬಿದನಾದಡೆ;
ಕಡೆಗೆ ತನ್ನಂತೆ ಮಾಡುವ. ॥೧೬೦॥

೬೮೭

ಅರೆವನಯ್ಯಾ ಸಣ್ಣವಹನ್ನಕ್ಕ,
ಒರೆವನಯ್ಯಾ ಬಣ್ಣಗಾಬನಕ್ಕ.
ಅರೆದಡೆ ಸಣ್ಣವಾಗಿ, ಒರೆದಡೆ ಬಣ್ಣವಾದಡೆ
ಕೂಡಲಸಂಗಮದೇವನೊಲಿದು ಸಲಹುವನು. ॥೧೬೧॥

೬೮೮

ಅಂಜಿದಡೆ ಮಾಣದು, ಅಳುಕಿದಡೆ ಮಾಣದು,
ವಜ್ರಪಂಜರದೊಳಗಿದ್ದಡೆ ಮಾಣದು,

ತಪ್ಪದುವೋ ಲಲಾಟಲಿಖಿತ.
ಕಕ್ಕುಲತೆಗೆ ಬಂದಡೆ ಆಗದು ನೋಡಾ.
ಧೃತಿಗೆಟ್ಟು, ಮನ ಧಾತುಗೆಟ್ಟಡೆ ಅಪ್ಪುದು ತಪ್ಪದು,
ಕೂಡಲಸಂಗಮದೇವಾ. ॥೧೬೨॥

೬೮೯
ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ
ತಪ್ಪದು ನೋಡಯ್ಯಾ.
ಎನಗಿನ್ನೆಂತೊ, ಎನಗಿನ್ನೆಂತೊ,
ಎನಗಿನ್ನೆಂತೆಂದೆನಬೇಡಯ್ಯಾ.
'ನಾಽಭುಕ್ತಂ ಕ್ಷೀಯತೇ ಕರ್ಮ' ಎಂಬ ಶ್ರುತಿ ತಪ್ಪದು,
ಕೂಡಲಸಂಗಮದೇವಾ. ॥೧೬೩॥

೬೯೦
ಆಯುಷ್ಯ ತೀರಿದಲ್ಲದೆ ಮರಣವಿಲ್ಲ,
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ.
ಅಂಜಲದೇಕೋ ಲೋಕ ವಿಗುರ್ಬಣೆಗೆ.
ಅಂಜಲದೇಕೋ,
ಕೂಡಲಸಂಗಮದೇವಾ ನಿಮ್ಮಾಳಾಗಿ. ॥೧೬೪॥

೬೯೧
ಮನಕ್ಕೆ ಮನ ಒಂದಾಗಿ,
ಧನಕ್ಕೆ ಧನ ಒಂದಾಗಿ
ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು.
ಪ್ರಾಣಕ್ಕೆ ಪ್ರಾಣ ಒಂದಾಗಿ,
ಶುಭಸೂಚನೆ ಒಂದಾಗಿರದ
ನಚ್ಚು ಮಚ್ಚು ಪಾರವೈದುವುದೆ?
ಶಿರ ಹರಿದಡೇನು, ಕರುಳು ಕುಪ್ಪಳಿಸಿದಡೇನು?
ಇಂತಪ್ಪ ಸಮಸ್ತವಸ್ತುವೆಲ್ಲವೂ ಹೋದಡೇನು?

ಚಿತ್ತ ಮನ ಬುದ್ಧಿ ಒಂದಾದ ಮಚ್ಚು, ಬಿಚ್ಚಿ ಬೇರಾಗದಿದ್ದಡೆ
ಮೆಚ್ಚುವ ನಮ್ಮ ಕೂಡಲಸಂಗಮದೇವ. ॥೧೬೫॥

ಮಾಹೇಶ್ವರನ ಮಾಹೇಶ್ವರಸ್ಥಲ

೬೯೨

ಎನಿಸೆನಿಸೆಂದಡೆ ನಾ ಧೃತಿಗೆಡೆನಯ್ಯಾ.
ಎಲುದೋರಿದಡೆ, ನರ ಹರಿದಡೆ, ಕರುಳು ಕುಪ್ಪಳಿಸಿದಡೆ
ನಾ ಧೃತಿಗೆಡೆನಯ್ಯಾ. ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದಡೆ
ನಾಲಗೆ ಕೂಡಲಸಂಗಾ ಶರಣೆನುತ್ತಿದ್ದಿತ್ತಯ್ಯಾ. ॥೧೬೬॥

೬೯೩

ಒಣಗಿಸಿ ಎನ್ನ ಘಣಘಣಲನೆ ಮಾಡಿದಡೆಯೂ,
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುವ ಮಾಣೆ, ಮಾಣೆ.
ಶರಣೆಂಬುದ ಮಾಣೆ, ಮಾಣೆ.
ಕೂಡಲಸಂಗಮದೇವಯ್ಯಾ, ಎನ್ನ ಹೆಣನ ಮೇಲೆ
ಕಂಚಿಟ್ಟುಂಡಡೆಯೂ ಮಾಣೆ, ಮಾಣೆ. ॥೧೬೭॥

೬೯೪

ಜಾಗ್ರಸ್ವಪ್ನಸುಷುಪ್ತಿಯಲ್ಲಿ
ಮತ್ತೊಂದ ನೆನೆದಡೆ ತಲೆದಂಡ, ತಲೆದಂಡ!
ಹುಸಿಯಾದಡೆ, ದೇವಾ ತಲೆದಂಡ, ತಲೆದಂಡ!
ಕೂಡಲಸಂಗಮದೇವಾ,
ನೀವಲ್ಲದೆ ಅನ್ಯವ ನೆನೆದಡೆ ತಲೆದಂಡ, ತಲೆದಂಡ! ॥೧೬೮॥

೬೯೫

ಸುಖ ಬಂದಡೆ ಪುಣ್ಯದ ಫಲವೆನ್ನೆನು,
ದುಃಖ ಬಂದಡೆ ಪಾಪದ ಫಲವೆನ್ನೆನು.
ನೀ ಮಾಡಿದಡಾಯಿತ್ತೆಂದೆನ್ನೆನು,

ಕರ್ಮಕೆ ಕರ್ತುವೆ ಕಡೆಯೆಂದೆನ್ನೆನು,
ಉದಾಸೀನವಿಡಿದು ಶರಣೆನ್ನೆನು.
ಕೂಡಲಸಂಗಮದೇವಾ,
ನೀ ಮಾಡಿದುಪದೇಶವು ಎನಗೀ ಪರಿಯಲ್ಲಿ–
ಸಂಸಾರವ ಸವೆಯೆ ಬಳಸುವೆನು. ॥೧೬೯॥

೬೯೬

ಕಾಯದ ಕಳವಳಕ್ಕಂಜಿ, 'ಕಾಯಯ್ಯಾ' ಎನ್ನೆನು,
ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು.
'ಯದ್ ಭಾವಂ ತದ್ ಭವತಿ' ಉರಿ ಬರಲಿ, ಸಿರಿ ಬರಲಿ
ಬೇಕು ಬೇಡೆನ್ನೆನಯ್ಯಾ.
ಆ ನಿಮ್ಮ ಹಾರೆನು, ಮಾನವರ ಬೇಡೆನು.
ಆಣೆ ನಿಮ್ಮಾಣೆ, ಕೂಡಲಸಂಗಮದೇವಾ. ॥೧೭೦॥

೬೯೭

ನಾಳೆ ಬಪ್ಪುದು ನಮಗಿಂದೆ ಬರಲಿ,
ಇಂದು ಬಪ್ಪುದು ನಮಗೀಗಲೆ ಬರಲಿ,
ಇದಕಾರಂಜುವರು, ಇದಕಾರಳುಕುವರು?
'ಜಾತಸ್ಯ ಮರಣಂ ಧ್ರುವಮ್' ಎಂದುದಾಗಿ
ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವಡೆ
ಹರಿಬ್ರಹ್ಮಾದಿಗಳಿಗಳವಲ್ಲ. ॥೧೭೧॥

೬೯೮

ಕಳಹೋದಡೆ ಕನ್ನದುಳಿಯ ಹಿಡಿವೆ,
ಬಂದಿವಿಡಿದಡೆ ನಿಮ್ಮಿಂದ ಮುಂದೆ ನಡೆವೆ.
ಮನಭೀತಿ ಮನಶಂಕೆಗೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪುರಾತನರಾಣೆ.
ಆಳ್ದರ ನಡೆ ಸದಾಚಾರವೆನ್ನದಿರ್ದಡೆ,
ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ,
ಕೂಡಲಸಂಗಮದೇವಾ. ॥೧೭೨॥

೧೯೯

ಜೋಳವಾಳಿಯಾನಲ್ಲ,
ವೇಳೆವಾಳಿಯವ ನಾನಯ್ಯಾ.
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ.
ಕೇಳು, ಕೂಡಲಸಂಗಮದೇವಾ,
ಮರಣವೆ ಮಹಾನವಮಿ. ॥೧೭೩॥

೨೦೦

ಕರ್ಮವೆಂಬ ಅಂಕದೊಡನೆ ತೊಡರಿದೆ.
ಬಿನ್ನಪ ಅವಧಾರು! ನಿಮ್ಮಾಳಿನ ಭಾಷೆಯ;
ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ.
ಕರೆದಡೋಸರಿಸಿದಡೆ ನಿಮ್ಮಾಳಲ್ಲ.
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ,
ಕೂಡಲಸಂಗಮದೇವಾ. ॥೧೭೪॥

೨೦೧

ಕಟ್ಟಿದೆನೊರೆಯ, ಬಿಟ್ಟೆ ಜನ್ನಿಗೆಯರ,
ಮುಟ್ಟಿ ಬಂದಿರಿದಡೆ ಓಸರಿಸುವನಲ್ಲ. ಓಡದಿರು ಓಡದಿರು,
ನಿಮ್ಮ ಶರಣರ ಮನೆಯ ಬಿರಿದಿನ ಅಂಕಕಾರ.
ಓಡದಿರು, ಓಡದಿರು, ಎಲೆ ಎಲೆ ದೇವಾ,
ಎಲೆ ಎಲೆ ಸ್ವಾಮಿ, ಎಲೆ ಎಲೆ ಹಂದೆ
ಕೂಡಲಸಂಗಮದೇವಾ. ॥೧೭೫॥

೨೦೨

ಗರುಡಿಯ ಕಟ್ಟಿ, ಅರುವತ್ತುನಾಲ್ಕು ಕೋಲ ಅಭ್ಯಾಸವ ಮಾಡಿದೆನಯ್ಯಾ.
ಇರಿವ ಘಾಯ, ಕಂಡೆಯ ಭೇದವಿನ್ನೂ ತಿಳಿಯದು.
ಪ್ರತಿಗರುಡಿಕಾರ ಬಿರಿದ ಪಾಡಿಂಗೊದಗಲು,
ವೀರಪ[ಟ್ಟವ] ಕಟ್ಟಿ, ತಿಗುರನೇರಿಸಿಕೊಂಡು,

ಗುರು ಕಳನನೇರಿ, ಕಠಾರಿಯ ಕೊಂಡಲ್ಲಿ
'ಹೋಯಿತ್ತು ಗಳೆ' ಎಂದಡೆ
ಎನ್ನ ನಿನ್ನಲ್ಲಿ ನೋಡು, ಕೂಡಲಸಂಗಮದೇವಾ. ॥೧೭೬॥

೭೦೩

ಶರಣರೊಡನೆ ಶ್ರವವ ಮಾಡಿ, ಮಾರುಗೋಲ ಬಿಡುವೆನಯ್ಯಾ.
ತಾಗಲಿ, ತಪ್ಪಲಿ ಗೆಲವೆನ್ನದೆಂಬೆನಯ್ಯಾ.
ಕಳನಿಂದ ಕಡೆಗಳಕ್ಕೆ ಓಡುವೆ, ಕೂಡಲಸಂಗಯ್ಯಾ. ॥೧೭೭॥

೭೦೪

ಎಲೆ ಗಂಡುಗೂಸೆ ನೀ ಕೇಳಾ,
ನಿನಗೊಬ್ಬಗೆಂದುಟ್ಟೆ ಗಂಡುಡಿಗೆಯನು.
ಮತ್ತೊಮ್ಮೆ ಆನು ಗಂಡಪ್ಪೆನಯ್ಯಾ,
ಮತ್ತೊಮ್ಮೆ ಆನು ಹೆಣ್ಣಪ್ಪೆನಯ್ಯಾ.
ಕೂಡಲಸಂಗಮದೇವಾ,
ನಿಮ್ಮಡಿಗೆ ವೀರನಪ್ಪೆ, ನಿಮ್ಮ ಶರಣರಿಗೆ ವಧುವಪ್ಪೆ. ॥೧೭೮॥

ಮಾಹೇಶ್ವರನ ಭಕ್ತಸ್ಥಲ

೭೦೫

ಕಟ್ಟುವೆನುಪ್ಪರಗುಡಿಯ ಜಗವರಿಯೆ:
ಮಾಡುವೆನೆನ್ನ ಕಾಯ ಕೆಡೆವನ್ನಕ್ಕ,
ಬೇಡುವುದೆನ್ನ ತನುಮನಧನವ.
ಬೇಡಲಾರದ ಹಂದೇ, ನೀ ಕೇಳಾ,
ಈ ಬಿರಿದು ಸಂದಿತ್ತು, ಕೂಡಲಸಂಗಮದೇವಾ. ॥೧೭೯॥

೭೦೬

ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದಡೆ
ಲಕ್ಷಸಂಖ್ಯೆಯ ಹಿರಣ್ಯವ ತಂದು ಸಂತೋಷಪಡಿಸುವಂತೆ,

ಕಾಳೆಗಮುಖವಾವುದೆಂದರಿಯದ ಹಂದೆ ನೃಪಂಗೆ
ಒಬ್ಬ ಕ್ಷತ್ರಿಯನಹ ಕುಮಾರ ಹುಟ್ಟಿ, ಕಿಗ್ಗಡಲ ರಕ್ತದ ಹೊನಲಲ್ಲಿ
ಕಡಿದು ಮುಳುಗಾಡುವ ಕೊಳುಗುಳವ ಕಂಡು ಪರಿಣಾಮಿಸುವಂತೆ
ಆನು ಪರಿಣಾಮಿಸುವೆನಯ್ಯಾ, ಕೂಡಲಸಂಗಮದೇವಾ
ನೀವು ಬಂದೆನ್ನ ಬೇಡಿದಡೆ. ॥೧೮೦॥

೨೦೭

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ,
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿವುತ್ತಿರಲಿ,
ಮುಟ್ಟುವ ಸ್ತ್ರೀಯ ಕಣ್ಣಮುಂದೆ
ಅಭಿಮಾನಂಗೊಂಡು ನೆರೆವುತ್ತಿರಲಿ,
ಇಂತೀ ತ್ರಿವಿಧವೂ ಹೊರಗಣವು.
ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡವ ಕೊಯ್ಯಲಿ,
ಇಕ್ಕುವ ಶೂಲ ಪ್ರಾಪ್ತಿಸಲಿ,
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ.
ಮತ್ತೆಯೂ ಲಿಂಗಾರಾಧನೆಯ ಮಾಡುವೆ,
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ.
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ
ನೀನಂದೆ ಮೂಗ ಕೊಯಿ, ಕೂಡಲಸಂಗಮದೇವಾ. ॥೧೮೧॥

೨೦೮

ತನುವ ಬೇಡಿದಡೀವೆ, ಮನವ ಬೇಡಿದಡೀವೆ,
ಧನವ ಬೇಡಿದಡೀವೆ, ಬೇಡು, ಬೇಡೆಲೆ ಹಂದೆ.
ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ,
ಕೂಡಲಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪೆ,
ನಿಮ್ಮ ಪುರಾತರ ಮನೆಯಲ್ಲಿ. ॥೧೮೨॥

೨೦೯

ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು,

ನಾನು ಪರಸೇವೆಯ ಮಾಡುವೆನಯ್ಯಾ, ಜಂಗಮದಾಸೋಹಕ್ಕೆಂದು.
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು,
ನಿಮ್ಮ ಸೊಮ್ಮಿಂಗೆ ಸಲಿಸುವೆನು.
ನಿಮ್ಮಾಣೆ ಕೂಡಲಸಂಗಮದೇವಾ. ॥೧೮೩॥

೨೧೦

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ,
ಎನ್ನ ಒಡಲಿಂಗೆ, ಎನ್ನ ಒಡವೆಗೆಂದು ಎನ್ನ ಮಡದಿ-ಮಕ್ಕಳಿಗೆಂದು,
ಕುದಿದೆನಾದಡೆ ಎನ್ನ ಮನಕ್ಕೆ ಮನವೆ ಸಾಕ್ಷಿ.
'ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಮ್'
ಎಂಬ ಶ್ರುತಿಯ ಬಸವಣ್ಣನೋದುವನು,
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ.
ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ
ತಲೆದಂಡ ಕೂಡಲಸಂಗಮದೇವಾ! ॥೧೮೪॥

೨೧೧

ದೇವ, ದೇವಾ ಬಿನ್ನಹ ಅವಧಾರು:
ವಿಪ್ರ ಮೊದಲು, ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲನೊಂದೆ ಎಂಬೆ.
ಹಾರುವ ಮೊದಲು, ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೆ ಎಂಬೆ.

ಹೀಂಗೆಂದು ನಂಬುವುದೆನ್ನ ಮನ.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ
ಹಲುದೋರೆ ಮೂಗ ಕೊಯಿ,
ಕೂಡಲಸಂಗಮದೇವಾ. ॥೧೮೫॥

೭೧೨
ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ,
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು,
ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ.
ಕೂಡಲಸಂಗಮದೇವಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ॥೧೮೬॥

೭೧೩
ಆದಿಯಲಾಗಲಿ, ವೇದದಲಾಗಲಿ,
ಶಾಸ್ತ್ರದಲಾಗಲಿ, ಸಮಯದಲಾಗಲಿ ಎನ್ನವರೆನ್ನೆನು, ಎನ್ನವರೆನ್ನೆನು.
ಎನ್ನವರೆಂದಡೆ ಸಂಗಾ ನಿಮ್ಮಲ್ಲಿಗೆ ದೂರ.
ಎನ್ನವರೆಂದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಕೂಡಲಸಂಗಾ ನಿಮ್ಮಾಣೆ. ॥೧೮೭॥

೭೧೪
ಅಣ್ಣ, ತಮ್ಮ, ಹೆತ್ತಯ್ಯ ಗೋತ್ರವಾದಡೇನು?
ಲಿಂಗಸಾಹಿತ್ಯರಲ್ಲದವರ ಎನ್ನವರೆನ್ನೆನಯ್ಯಾ.
ನಂಟುಭಕ್ತಿ ನಾಯಕನರಕ, ಕೂಡಲಸಂಗಮದೇವಾ. ॥೧೮೮॥

೭೧೫
ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹುಗುವಂತೆ,
ನೀನಿಲ್ಲದವರ ಮನೆಯ ಹೊಗೆನು, ಸಂಗಯ್ಯಾ,
ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯಾ
ನೀನಿದ್ದವನೆ ಕುಲಜನು. ॥೧೮೯॥

೭೧೬

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ.
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ,
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ. ॥೯೦॥

೭೧೭

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವ,
ಆಗಮದ ಮೂಗ ಕೊಯಿವೆ, ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ. ॥೯೧॥

೭೧೮

ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು.
ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?
'ಶಿವಧರ್ಮಕುಲೇಜಾತಃ ಪುನರ್ಜನ್ಮ ವಿವರ್ಜಿತಃ
ಉಮಾ ಮಾತಾ ಪಿತಾ ರುದ್ರಃ ಐಶ್ವರಂ ಕುಲಮೇವ ಚ' ಎಂದುದಾಗಿ,
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ.
ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನು. ॥೯೨॥

೭೧೯

ಕಳ್ಳ, ಬಂದಿಕಾರ, ಹಾವಾಡಿಗ, ಹಾದರಿಗ,
ಬಂಟನೋಲೆಯಕಾರನೆಂದೆನಾದಡೆ,
ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿದ್ದಡೆ ಅದೇ ದ್ರೋಹ.
ನಡೆನುಡಿ ಹುಸಿಯುಂಟಾದಡೆ,
ಕೂಡಲಸಂಗನ ತೋರಿದ ಚೆನ್ನಬಸವಣ್ಣನಾಣೆ. ॥೯೩॥

೭೨೦

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ,
ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು
ಅವರ ಲಿಂಗವೆಂಬೆ, ಸಂಗನೆಂಬೆ,
ಕೂಡಲಸಂಗಮದೇವಾ,
ಅವರ ಮುಖಲಿಂಗಿಗಳೆಂಬೆ. ॥೧೯೪॥

೭೨೧

ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ.
ಮೋಟನಂತಪ್ಪ ಗಂಡ ನೋಡೆನಗೆ–
ಮರಗಾಲಲಟ್ಟಟ್ಟಿ ಸದೆದ ನೋಡಯ್ಯಾ.
ಇಂದೆನ್ನ ಒಕ್ಕತನ ಹೋದಡೆ ಹೋಗಲಿ
ಮರಗಾಲ ಬಿಟ್ಟಡೆ, ಸಂಗಾ ನಿಮ್ಮಾಣೆ. ॥೧೯೫॥

೭೨೨

ತನುವ ಬಂದು ಅಲೆವರಯ್ಯಾ ಎನ್ನ,
ಮನವ ಬಂದು ನೋಡುವರಯ್ಯಾ ಎನ್ನ,
ಧನವ ಬಂದು ಸೂರೆಗೊಂಬರಯ್ಯಾ ಜಂಗಮವನವರತ.
ಕೂಡಲಸಂಗಮದೇವಾ,
ನಿಮ್ಮ ಬಯ್ಕೆಯ ಭಂಡಾರಕ್ಕೆ ನಾನು ಶುದ್ಧನಯ್ಯಾ. ॥೧೯೬॥

೭೨೩

ಒಡೆಯರೊಡವೆಯ ಕೊಂಡಡೆ ಕಳ್ಳಂಗಳಲಾಯಿತ್ತೆಂಬ
ಗಾದೆ ಎನಗಿಲ್ಲಯ್ಯಾ.
ಇಂದೆನ್ನ ವಧುವ, ನಾಳೆನ್ನ ಧನವ,
ನಾಡಿದ್ದೆನ್ನ ತನುವ ಬೇಡರೇಕಯ್ಯಾ?
ಕೂಡಲಸಂಗಮದೇವಾ, ಆನು ಮಾಡಿದುದಲ್ಲದೆ
ಬಯಸಿದ ಬಯಕೆ ಸಲುವುದೆ ಅಯ್ಯಾ.? ॥೧೯೭॥

೭೨೪

ಕಲಿ ಕರುಳ ತಕ್ಕೈಸಿ ಹರಿಯಬಲ್ಲನಲ್ಲದೆ,
ಸಾಯ ಕಾದಿಸುವಡೆ, ಎಡೆಗೋಲನಿಕ್ಕುವಡೆ,
ದಾತಾರನಾಧೀನವಲ್ಲ[ವೆ?].
ಕೂಡಲಸಂಗಮದೇವಾ ನೀ ಮಾಡಿದಂತಹುದಯ್ಯಾ,
ತನುಮನಧನದಲ್ಲಿ ವಂಚನೆಯ
ಆನು ಬಯಸಿದಡೆಂತಹುದಯ್ಯಾ? ॥೧೯೮॥

೭೨೫

ಬಾಲಾಭ್ಯಾಸವ ಮಾಡಹೋದಡೆ ಎನ್ನ ಸುರಗಿ ಎನ್ನ ನಟ್ಟಿತ್ತು,
ಎಂತಯ್ಯಾ ಕಲಿಯೊಡನೆ ಶ್ರವವ ಮಾಡುವೆನು
ರಾಯ ರಾಜಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು.
ಸರಸದ ಮೇಲೆ ಹಿಡಿಯ ಹೋದಡೆ?
ಚದುರಂಗದ ಮೇಲೆ ಮಸೆಯ ತೋರಿದ ಕೂಡಲಸಂಗಮದೇವ. ॥೧೯೯॥

೭೨೬

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು,
ಶಿವಚಿತ್ತವೆಂಬ ಕೂರಲಗ ಕೊಂಡು,
ಶರಣಾರ್ಥಿಯೆಂಬ ಶ್ರವಗಲಿತಡೆ,
ಆಳುತನಕ್ಕೆ ದೆಸೆಯಪ್ಪೆ ನೋಡಾ.
ಮಾರಂಕ ಜಂಗಮ ಮನೆಗೆ ಬಂದಲ್ಲಿ ಇದಿರೆತ್ತಿ ನಡೆವುದು,
ಕೂಡಲಸಂಗಮದೇವನನೊಲಿಸುವಡಿದು ಚಿಹ್ನ! ॥೨೦೦॥

೭೨೭

ಅಟ್ಟಟ್ಟಿಕೆಯ ಮಾತನಾಡಲದೇಕೋ?
ಮುಟ್ಟಿ ಬಂದುದಕ್ಕಂಜಲದೇಕೋ?
ಕಾದಿದಲ್ಲದೆ ಮಾಣೆನು, ಓಡಿದಡೆ ಭಂಗ ಹಿಂಗದಾಗಿ,
ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ. ॥೨೦೧॥

೭೨೮

ಲಿಂಗಕ್ಕಲ್ಲದೆ ಮಾಡೆನೀ ಮನವನು,
ಜಂಗಮಕ್ಕಲ್ಲದೆಮಾಡೆನೀ ಧನವನು,
ಪ್ರಸಾದಕ್ಕಲ್ಲದೆ ಮಾಡೆನೀ ತನುವನು,
ಲಿಂಗಜಂಗಮಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ.
ಅನರ್ಪಿತವಾದಡೆ ತಪ್ಪೆನ್ನದು,
ಮೂಗ ಕೊಯಿ, ಕೂಡಲಸಂಗಮದೇವಾ. ॥೨೦೨॥

ಮಾಹೇಶ್ವರನ ಪ್ರಸಾದಿಸ್ಥಲ

೭೨೯

ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯಾ?
ಲೆಂಕ ಕಂಡಾ, ಪ್ರಾಣದಾಸೆ ಮತ್ತೇಕಯ್ಯಾ?
ಭಕ್ತ ಕಂಡಾ, ತನುಮನಧನದಾಸೆ ಮತ್ತೇಕಯ್ಯಾ?
ನಿಮ್ಮ ಅಂಕೆಗೆ ಝುಂಕೆಗೆ ಶಂಕಿತನಾದಡೆ
ಎನ್ನ ಲೆಂಕತನಕ್ಕೆ ಹಾನಿ, ಕೂಡಲಸಂಗಮದೇವಾ. ॥೨೦೩॥

೭೩೦

ನೀವಿರಿಸಿದ ಮನದಲ್ಲಿ ನಾನಂಜೆನಯ್ಯಾ,
ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ.
ನೀವಿರಿಸಿದ ಧನದಲ್ಲಿ ನಾನಂಜೆನಯ್ಯಾ,
ಧನವು ಸತಿಸುತಮಾತಾಪಿತರಿಗೆ ಸವೆಯದಾಗಿ.
ನೀವಿರಿಸಿದ ತನುವಿನಲ್ಲಿ ನಾನಂಜೆನಯ್ಯಾ,
ತನುವು ಸರ್ವಾರ್ಪಿತದಲ್ಲಿ ನಿಯತಪ್ರಸಾದಭೋಗಿಯಾಗಿ.
ಇದು ಕಾರಣ, ವೀರಧೀರಸಮಗ್ರನಾಗಿ
ನಿಮಗಾನಂಜೆ, ಕೂಡಲಸಂಗಮದೇವಾ. ॥೨೦೪॥

೭೩೧

ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ ಮನವೆರಡಾದಡೆ ಆಣೆ, ನಿಮ್ಮಾಣೆ.
ಮಾಡುವ ನೇಮಕ್ಕೆ ಛಲವಿಲ್ಲದಿದ್ದಡೆ ಆಣೆ, ನಿಮ್ಮಾಣೆ.

ಕೂಡಲಸಂಗಮದೇವ ಎನ್ನ ಮನವ ನೋಡಲೆಂದಟ್ಟಿದಡೆ
ಪ್ರಸಾದವಲ್ಲದೆ ಕೊಂಡೆನಾದಡೆ ಆಣೆ, ನಿಮ್ಮಾಣೆ! ॥೨೦೫॥

೭೩೨

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೋ!
ದೇವಾ ನೀನೊಲಿದವನ, ಸ್ವಾಮೀ ನೀ ಹಿಡಿದವನ ಕುಲವೇನೋ!
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ,
ನಿಮ್ಮಿಂದಧಿಕ ಕೂಡಲಸಂಗಮದೇವಾ. ॥೨೦೬॥

೭೩೩

ಹುಟ್ಟಿದ ಮಕ್ಕಳೆಲ್ಲ ಅರ್ಥ ಪ್ರಾಣ ಅಭಿಮಾನಕ್ಕೆ
ಒಡೆಯರಾದ ಪರಿಯ ನೋಡಾ.
ಅಟ್ಟ ಅಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ!
ಕೂಡಲಸಂಗಮದೇವಯ್ಯಾ, ನಿಮಗೆಂದಟ್ಟಡಿಗೆಯ
ನೀಡ ಕಲಿಸಿದಾತ ಕೆಂಬಾವಿಯ ಭೋಗಯ್ಯ. ॥೨೦೭॥

೭೩೪

ಅಂಗದ ಮೇಲಣ ಲಿಂಗ ಹಿಂಗಿ ಬಂದ ಸುಖವನಾರಿಗರ್ಪಿಸುವೆ?
ಹಿಂಗಲಾಗದು, ಭಕ್ತಿಪಥಕ್ಕೆ ಸಲ್ಲದಾಗಿ,
ಹಿಂಗಲಾಗದು, ಶರಣಪಥಕ್ಕೆ ಸಲ್ಲದಾಗಿ,
ಕೂಡಲಸಂಗಮದೇವರ ಹಿಂಗಿ ನುಂಗಿದುಗುಳು ಕಿಲ್ಬಿಷ. ॥೨೦೮॥

೭೩೫

ಬತ್ತೀಸಾಯುಧದಲಿ ಅಭ್ಯಾಸವ ಮಾಡಿದಡೇನು,
ಹಗೆಯ ಕೊಲುವಡೆ, ಒಂದಲಗು ಸಾಲದೆ?
ಲಿಂಗವ ಗೆಲುವಡೆ, 'ಶರಣಸತಿ ಲಿಂಗಪತಿ', ಯೆಂಬಲಗು ಸಾಲದೆ
ಎನಗೆ ನಿನಗೆ ಜಂಗಮಪ್ರಸಾದವೆಂಬ ಅಲಗು ಸಾಲದೆ
ಕೂಡಲಸಂಗಮದೇವಾ? ॥೨೦೯॥

ಮಾಹೇಶ್ವರನ ಪ್ರಾಣಲಿಂಗಿಸ್ಥಲ

೭೩೬

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ,
ಒಲ್ಲೆನಯ್ಯಾ ಪರಸತಿಯರ ಸಂಗವ,
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ.
ಬಳ್ಳದ ಬಾಯಂತೆ ಒಂದೆ ಮನ ಮಾಡಿ
ನಿಲ್ಲೆಂದು ನಿಲಿಸಯ್ಯಾ, ಕೂಡಲಸಂಗಮದೇವಾ. ॥೨೧೦॥

೭೩೭

ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ?
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ.
ಆನೀ ಬಿಜ್ಜಳಂಗಜುವೆನೆ ಅಯ್ಯಾ?
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ. ॥೨೧೧॥

೭೩೮

ಬಂದೆಹೆನೆಂದು ಬಾರದೆ ಇದ್ದಡೆ,
ಬಟ್ಟೆಗಳ ನೋಡುತ್ತಿದ್ದೇನಯ್ಯಾ.
ಇನ್ನಾರನಟ್ಟುವೆ, ಇನ್ನಾರನಟ್ಟುವೆ,
ಇನ್ನಾರ ಪಾದವ ಹಿಡಿವೆನಯ್ಯಾ,
ಕೂಡಲಸಂಗನ ಶರಣರು ಬಾರದಿದ್ದಡೆ
ಅಟ್ಟುವೆನೆನ್ನ ಪ್ರಾಣವನು. ॥೨೧೨॥

ಮಾಹೇಶ್ವರನ ಶರಣಸ್ಥಲ

೭೩೯

ಅರಸರು ಮಂಚಕ್ಕೆ ಬರಿಸಿ, ಎನ್ನ ಬೆರಸಿದ ಬಳಿಕ
ಆನು ಅಂಜುವಳೇ? ಆನು ಸಿರಿಯಕ್ಕನೇ.

ಪರುಷ ಮುಟ್ಟಿದ ಬಳಿಕ ಲೋಹವೇ?
ಕೂಡಲಸಂಗಮದೇವ ಎನ್ನನೊಲ್ಲದಡಾನು ಬದುಕುವೆನೆ? ॥೨೧೩॥

೭೪೦

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಬಿಡೆ, ಮಾಣೆ, ಗರುವತನವೆ?
ದಾಸನ ವಸ್ತ್ರವ ಸೀಳುವುದೊಂದು ಗರುವತನವೆ?
ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ?
ಬಲ್ಲಾಳನ ವಧುವ ಬೇಡುವುದೊಂದು ಗರುವತನವೆ?
ಕೋಡಗವ ಹುಲ್ಲಲಿ ಮುಸುಕಿದಂತೆ
ಕೂಡಲಸಂಗಮದೇವಾ, ನಿನ್ನ ಪರಿ. ॥೨೧೪॥

೭೪೧

ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ, ಕಾಡಿದೆ.
ಚೋಳನ ಮನೆಯಲು ಉಣಲೊಲ್ಲದೆ,
ಚೆನ್ನನ ಮನೆಯಲುಂಡೆ.
ಒಬ್ಬರಿಗೊಂದು ಪರಿಯ ಮಾಡಿದೆ,
ಕೂಡಲಸಂಗಮದೇವಾ. ॥೨೧೫॥

೭೪೨

ಒಬ್ಬನ ಮನೆಯಲುಂಡು ಹೊತ್ತುಗಳೆದೆ,
ಒಬ್ಬನ ಮನೆಯಲುಡಲೊಂದ ಗಳಿಸಿದೆ,
ಗರ್ವ ಬೇಡ ಬೇಡ ನಿನಗೆ.
ಚೆನ್ನಯ್ಯನ ಮನೆಯಲಂಬಲಿಯನುಂಡು ಬದುಕಿದೆ.
ಗರ್ವ ಬೇಡ ಬೇಡ.
ಕೂಡಲಸಂಗಯ್ಯಾ, ಸಿರಿಯಾಳನಿಂದ ಮಾನಿಸಲೋಕಗಂಡೆ. ॥೨೧೬॥

೭೪೩

ಹರಿಯಜ ಮುನಿಗಳೆಲ್ಲರು,
ನಿಚ್ಚ ನಿಮ್ಮ ಬಾಗಿಲ ಕಾಯ್ದಿಹರು,

ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ?
ಡಿಂಗರಿಗನ ಮನೆಗೆ ಅಂಗಜಾಹವಕ್ಕೆ ಹೋಗಿ ಇದ್ದವರೊಳರೆ
ಕೂಡಲಸಂಗಮದೇವಾ? ॥೨೧೭॥

೭೪೪

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ,
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ. ॥೨೧೮॥

೭೪೫

ಗೋತ್ರನಾಮವ ಬೆಸಗೊಂಡಡೆ
ಮಾತು ನೂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ ನೆಲನ ಬರೆವುತ್ತಿದ್ದಿರಿದೇನಯ್ಯಾ?
ಗೋತ್ರನಾಮ, ಮಾದಾರ ಚೆನ್ನಯ್ಯ,
ಡೋಹರ ಕಕ್ಕಯ್ಯನೆಂಬುದೇನು, ಕೂಡಲಸಂಗಯ್ಯಾ? ॥೨೧೯॥

೭೪೬

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತೆ ಇಪ್ಪರು, ಭೂಷಣರಾಗಿ!
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು
ಕೂಡಲಸಂಗಮದೇವಾ, ನಿಮ್ಮ ಶರಣರು. ॥೨೨೦॥

೭೪೭

ಶಿವಲೋಕಕ್ಕೆ ಸರಿಬೇರೆಲೋಕವಿಲ್ಲ,
ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ.

ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ;
ಕೂಡಲಸಂಗಯ್ಯನೊಬ್ಬನೆ ದೈವವೆಂದು. ॥೨೨೧॥

೭೪೮

'ಈಶ್ವರಸದ್ಭಾವೇ ಕಿಂ ಪ್ರಮಾಣಮ್'
ಎಂಬ ಮೀಮಾಂಸಕನ ಮೂಗಿನ ಕೊನೆಯನು
'ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರುತ ವಿಶ್ವತಃ ಪಾತ್
ಸಂಬಾಹುಭ್ಯಾಂ ಧಮತಿ ಸಂ ಪತತ್ರೈಃ
ದ್ಯಾವಾಭೂಮೀ ಜನಯನ್ ದೇವ ಏಕಃ'
ಎಂಬ ಸುರಗಿಯಲ್ಲಿ ಅರೆದು,
ವೈಶೇಷಿಕವೆಂಬ ಇಟ್ಟಿಗೆಯಲೊರಸಿ,
ಕೂಡಲಸಂಗಯ್ಯನೆಂಬ ಕನ್ನಡಿಯ ತೋರುವೆನು. ॥೨೨೨॥

೭೪೯

ಪಂಚಬ್ರಹ್ಮವ ಕೆಡಿಸಿತ್ತು, ಪ್ರಣವಮಂತ್ರವನೀಡಾಡಿತ್ತಲ್ಲಾ.
ಕರ್ಮಂಗಳನೆ ಕಳೆಯಿತ್ತು, ಕ್ರೀಗಳನೆ ಮೀರಿತ್ತಲ್ಲಾ.
ಆಗಮದ ಹಲ್ಲನೆ ಕಳೆಯಿತ್ತು, ಕೂಡಲಸಂಗಯ್ಯನ ಭಕ್ತಿಗಜಹೋ!॥೨೨೩॥

೭೫೦

ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ!
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ. ॥೨೨೪॥

೭೫೧

ಚಿಕ್ಕ ಒಂದು ಹೊತ್ತಗೆ, ಬೆನಕನ ಕರಡಗೆಯಯ್ಯಾ,
ನೀ ಡುಂಡುಚಿ ಗೊರವನಯ್ಯಾ,

ಪುಣ್ಯವೇನಾದಡಾಗಲಿ ಡಕ್ಕೆಯ ಮೇಲೆ ಅಕ್ಕಿಯ ತಳಿದೆನು.
ನಮ್ಮ ಕೂಡಲಸಂಗಮದೇವನಲ್ಲದೆ
ಅನ್ಯದೈವ ಉಂಟೆನ್ನದಿರು ಕಂಡಾ! ॥೨೨೫॥

೭೫೨

ನೀನಲ್ಲದನ್ಯದೈವವುಂಟೆಂಬವನ ಬಾಯ,
ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ.
ಎನ್ನ ಕೋಪವಡಗದಯ್ಯಾ.
ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವಾ. ॥೨೨೬॥

೭೫೩

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ.
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ?
ನಮಗೆ ನಮ್ಮ ಕೂಡಲಸಂಗನುಳ್ಳನ್ನಕ್ಕ. ॥೨೨೭॥

೭೫೪

ನ್ಯಾಯನಿಷ್ಠುರಿ: ದಾಕ್ಷಿಣ್ಯಪರ ನಾನಲ್ಲ,
ಲೋಕವಿರೋಧಿ:ಶರಣನಾರಿಗಂಜುವನಲ್ಲ,
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ. ॥೨೨೮॥

೭೫೫

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ.
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗನುಳ್ಳನ್ನಕ? ॥೨೨೯॥

೭೫೬

ಹೋಗಬಿಟ್ಟು, ಮರಳಿ ಹಿಂದೆ ನೋಡಿ,
ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ
ಅದೆ ಪರದ್ವಾರ ನಾಯಕನರಕ, ತಪ್ಪದು.
ಅನ್ಯವಧುವೆಂಬುದು ನಿಮ್ಮ ರಾಣಿವಾಸ,
ಇದೇ ದಿಬ್ಯ ಕೂಡಲಸಂಗಮದೇವಾ. ॥೨೩೦॥

೭೫೭

ಕಂಡುದಕ್ಕೆಳಸೆನೆನ್ನ ಮನದಲ್ಲಿ, ನೋಡಿ ಸೋಲೆನೆನ್ನ ಕಂಗಳಲ್ಲಿ,
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ.
ಕೂಡಲಸಂಗಮದೇವಾ, ನಿಮ್ಮ ಶರಣನ ಪರಿ ಇಂತುಟಯ್ಯಾ .೨೩೧॥

೭೫೮

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ.
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ
ಕೂಡಲಸಂಗಮದೇವಾ, ನೀ ಸಾಕ್ಷಿಯಾಗಿ ಛೀ ಎಂಬೆನು. ॥೨೩೨॥

೭೫೯

ಮಾಡುವ ನೀಡುವ ಭಕ್ತನ ಕಂಡಡೆ ನಿಧಿ ನಿಧಾನವ ಕಂಡಂತಾಯಿತ್ತು,
ಪಾದೋದಕ ಪ್ರಸಾದಜೀವಿಯ ಕಂಡಡೆ ಹೋದ ಪ್ರಾಣ ಬಂದಂತಾಯಿತ್ತು.
ಅನ್ಯರ ಮನೆಗೆ ಹೋಗಿ, ತನ್ನ ಉದರವ ಹೊರೆಯದ ಅಚ್ಚ ಶರಣರ ಕಂಡಡೆ
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು. ॥೨೩೩॥

೭೬೦

ಗುರುಭಕ್ತಿಯ ಮಾಡಬಹುದಲ್ಲದೆ,
ಲಿಂಗಭಕ್ತಿಯ ಮಾಡಬಾರದು.
ಲಿಂಗಭಕ್ತಿಯ ಮಾಡಬಹುದಲ್ಲದೆ, ಜಂಗಮಭಕ್ತಿಯ ಮಾಡಬಾರದು.
ಜಂಗಮಭಕ್ತಿಯ ಮಾಡಬಹುದಲ್ಲದೆ,
ಸಮಯಭಕ್ತಿಯ ಮಾಡಬಾರದು.
ಸಮಯಭಕ್ತಿಯ ಮಾಡಬಹುದಲ್ಲದೆ, ಸಮಯ ಸಂತೋಷವ ಮಾಡಬಾರದು.

ಇವೆಲ್ಲವನು ಮಾಡಬಹುದಲ್ಲದೆ,
ತನ್ನ ತಾನರಿಯಬಾರದು!
ತನ್ನ ತಾನರಿದೆಹೆನೆಂಬ ಅಹಂಕಾರವುಳ್ಳಡೆ ನಿಮ್ಮವರಿಗೆ ದೂರ.
ಎಲೆ ದೇವಾ, ಅನ್ಯಕ್ಕೆ ಆಸೆ ಮಾಡಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವಾ. ॥೨೩೪॥

೭೬೧

ದಾಸನಂತೆ ತವನಿಧಿಯ ಬೇಡುವನಲ್ಲ,
ಚೋಳನಂತೆ ಹೊನ್ನಮಳೆಯ ಕರೆಸೆಂಬವನಲ್ಲ,
ಅಂಜದಿರು ಅಂಜದಿರು ಅವರಂದದವ ನಾನಲ್ಲ.
ಎನ್ನ ತಂದೆ, ಕೂಡಲಸಂಗಮದೇವಾ,
ಸದ್ಭಕ್ತಿಯನೆ ಕರುಣಿಸೆನಗೆ. ॥೨೩೫॥

೭೬೨

ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸದರ್ಥರು,
ಲಿಂಗದ ಸೊಮ್ಮು ಸಂಬಂಧವರಿತ ಸ್ವಾಮಿಭೃತ್ಯರೆಲ್ಲರೂ
ನಿಮ್ಮ ಬೇಡೆನಂಜದಿರಿ.
ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು.
ಇದು ಕಾರಣ, ಕೂಡಲಸಂಗಮದೇವರ ಲೋಕವ
ಹಂಚಿಕೊಳ್ಳಿ ನಿಮನಿಮಗೆ. ॥೨೩೬॥

ಮಾಹೇಶ್ವರನ ಐಕ್ಯಸ್ಥಲ

೭೬೩

ಅಂದಂದಿನ ಹೊದ್ದಿಗೆಯ ಬಿಂದುಮಾತ್ರದಲಾದ
ಅಂದವ ಕೆಡಿಸಲರಿಯದ ಅಂಧಕರ ನೋಡಾ.
ಸಮರಸವಿಲ್ಲದೆ ನೆರಹಿ ಮಾಡಿ, ಭಕ್ತರಾದೆವೆಂಬವರನೇನೆಂಬೆ?
ಆಚಾರವಂಚಕರ ಎನಗೆ ತೋರದಿರು
ಕೂಡಲಸಂಗಮದೇವಾ, ನಿಮ್ಮ ಧರ್ಮ! ॥೨೩೭॥

೭೬೪

ಕಲಿಯ ಕೈಯ ಕೈದುವಿನಂತಿರಬೇಕಯ್ಯಾ,
ಎಲುದೋರೆ ಸರಸವಾಡಿದಡೆ ಸೈರಿಸಬೇಕಯ್ಯಾ,
ರಣದಲ್ಲಿ ತಲೆ ಹರಿದು ನೆಲಕ್ಕೆ ಬಿದ್ದು
ಬೊಬ್ಬಿಡಲದಕ್ಕೆ ಒಲಿವ ಕೂಡಲಸಂಗಮದೇವ. ॥೨೩೮॥

೭೬೫

ಆಸೆ ರೋಷ ಹರುಷಾದಿಗಳೆಂಬ
ಕರಣೇಂದ್ರಿಯಂಗಳೆಂಬವ ಮುಟ್ಟಲೀಯದೆ,
ಆಚಾರವ ಶಿವಾಚಾರವ ಮಾಡುವೆ,
ಭಯಭಕ್ತಿಯಿಂದ ತೋರುವೆ.
ಮನದಲ್ಲಿ ವಂಚನೆಯಿಲ್ಲದೆ, ಭಾವಶುದ್ಧಪೂಜೆಯ ಮಾಡುವೆ.
ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವಾ. ॥೨೩೯॥

೭೬೬

ಪೂರ್ವಬೀಜ ವಾಯುಪ್ರಾಣಿಯಲ್ಲ,
ಲಿಂಗಪ್ರಾಣಿಯಾ ಶರಣನು.
ಏಕೋಗ್ರಾಹಿ ಭಾವಭೇದವಿಲ್ಲವಾಗಿ ಮನಃಪ್ರವೇಶಿಯಾ ಶರಣನು.
ನಿಮ್ಮುವ ಪೂಜಿಸಿ ತನುಧರ್ಮವ ಮರೆದು
ನಿಮ್ಮ ಪ್ರತಿಬಿಂಬದಂತಿಪ್ಪ
ಕೂಡಲಸಂಗಮದೇವಾ, ನಿಮ್ಮ ಶರಣನು. ॥೨೪೦॥

❖❖

ಪ್ರಸಾದಿಸ್ಥಲ

ಪ್ರಸಾದಿಯ ಜ್ಞಾನಿಸ್ಥಲ

೭೬೭

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ,
ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯಾ,
ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯಾ.
ಹಸಿವಾಯಿತ್ತೆಂದುಅರ್ಪಿತವ ಮಾಡಲಿಲ್ಲ,
ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ,
ಇದು ಕಾರಣ ಕೂಡಲಸಂಗಮದೇವನ ಪೂಜಿಸಿ,
ಪ್ರಸಾದವ ಹಡೆವರೊಬ್ಬರೂ ಇಲ್ಲ. ॥೧॥

೭೬೮

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?
ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ,
ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ
ಆಚಾರದ್ರೋಹ ಪ್ರಸಾದದ್ರೋಹ.
ಇಂತೀ ಪಂಚಮಹಾಪಾತಕಂಗಳು
ಭಕ್ತಂಗಲ್ಲದೆ ಭವಿಗೆಲ್ಲಿಯದೊ?
ಗುರುವಿದು, ಲಿಂಗವಿದು, ಜಂಗಮವಿದು
ಆಚಾರವಿದು, ಪ್ರಸಾದವಿದೆಂದರಿಯದಿದ್ದಡೆ
ಕುಂಭಿಪಾತಕ ನಾಯಕನರಕ ಕೂಡಲಸಂಗಮದೇವಾ. ॥೨॥

೭೬೯

ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ.
ಅಡಗ ಮಚ್ಚಿ ಸೊಣಗನೆಂಜಲ ತಿಂಬುದೀ ಲೋಕ.
ಲಿಂಗವ ಮಚ್ಚಿ ಜಂಗಮಪ್ರಸಾದವ ಕೊಂಬವರ
ನೋಡಿ ನಗುವವರ ಕುಂಭಿಪಾತಕ ನಾಯಕ ನರಕದಲ್ಲಿಕ್ಕುವ
ಕೂಡಲಸಂಗಮದೇವ. ॥೩॥

೭೭೦

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ.
ನಿಷ್ಕಳಂಕ ನಿಜೈಕ್ಯ ತ್ರಿವಿಧನಿರ್ಣಯ,
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ. ॥೪॥

೭೭೧

ಬಾರದು ಬಾರದು, ಭಕ್ತಂಗೆ ಪರಧನ ಪರಸತಿ,
ಬಾರದು ಬಾರದು, ವಿಷಯಿಗೆ ಪಶುಪತಿಬ್ರತವು,
ಬಾರದು ಬಾರದು, ಭವಭಾರಿಗೆ
ಕೂಡಲಸಂಗಮದೇವನ ಒಕ್ಕುದ ಕೊಳಬಾರದು. ॥೫॥

೭೭೨

ಹುತ್ತದ ಮೇಲಣ ರಜ್ಜು ಮುಟ್ಟಿದಡೆ
ಸಾವರು ಶಂಕಿತರಾದವರು,
ಸರ್ಪದಷ್ಟವಾದಡೆಯೂ ಸಾಯರು ನಿಶ್ಯಂಕಿತರಾದವರು.
ಕೂಡಲಸಂಗಮದೇವಯ್ಯಾ,
ಶಂಕಿತಂಗೆ ಪ್ರಸಾದ ಸಿಂಗಿ, ಕಾಳಕೂಟವಿಷವು. ॥೬॥

೭೭೩

ನಂಬಿದಡೆ ಪ್ರಸಾದ; ನಂಬದಿದ್ದಡೆ ವಿಷವು.
ತುಡುಕಬಾರದು ನೋಡಾ, ಲಿಂಗನ ಪ್ರಸಾದ,
ಕೂಡಲಸಂಗನ ಪ್ರಸಾದ ಸಿಂಗಿ, ಕಾಳಕೂಟ ವಿಷವು. ॥೭॥

೭೭೪

ಪಂಡಿತನಾಗಲಿ, ಮೂರ್ಖನಾಗಲಿ
ಸಂಚಿತಕರ್ಮ ಉಂಡಲ್ಲದೆ ಮಾಣದು,
ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ ನೋಡಾ.
ತಾನಾವಾವ ಲೋಕದೊಳಗಿದ್ದಡೆಯೂ ಬಿಡದು,
ಕರ್ಮಫಲಗೂಡಿ ಕೂಡಲಸಂಗಮದೇವಂಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ. ॥೮॥

೭೭೫

ಒಲ್ಲೆನೆಂಬುದು ವೈರಾಗ್ಯ,
ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದಡೇನು?
ತನ್ನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ.
ಕೂಡಲಸಂಗಮದೇವರನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು. ॥೯॥

೭೭೬

ಒಪ್ಪವ ನುಡಿವಿರಯ್ಯಾ ತುಪ್ಪವ ತೊಡೆದಂತೆ,
ಶರಣ ತನ್ನ ಮರೆವನೆ ಬಿನ್ನಾಣಿಯಂತೆ?
ಕೂಡಲಸಂಗನ ಪ್ರಸಾದದಿಂದ
ಬದುಕುವನಲ್ಲದೆತನ್ನ ಮರೆವನೆ? ॥೧೦॥

೭೭೭
ಅರ್ಪಿತ ಅರ್ಪಿತವೆಂದೆನುತ್ತಿಹಿರಿ,
ಗುರುವಿಂಗೆ ಕೊಡುವುದು ಅರ್ಪಿತವೆ?
ಸವಿಸವಿದು ಕೊಡಬೇಕಲ್ಲದೆ.
ಅರ್ಪಿತ ಅರ್ಪಿತವೆಂದೆನುತ್ತಿಹಿರಿ,
ಲಿಂಗಕ್ಕೆ ಕೊಡುವುದು ಅರ್ಪಿತವೆ?
ಸವಿಸವಿದು ಕೊಡಬೇಕಲ್ಲದೆ.
ಅರ್ಪಿತ ಅರ್ಪಿತವೆನುತ್ತಿಹರೆಲ್ಲರು
ಅರ್ಪಿತಮುಖವನರಿಯರು ನೋಡಾ.
ಜಂಗಮಕ್ಕೆ ನೀಡಿ ಜಂಗಮಪ್ರಸಾದವ ಕೊಂಡಡೆ
ನಿನಗರ್ಪಿತ ಕಾಣಾ, ಕೂಡಲಸಂಗಮದೇವಾ. ॥೧೧॥

ಪ್ರಸಾದಿಯ ಪ್ರಸಾದಿಸ್ಥಲ

೭೭೮
ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು.
ಆ ಭಾವವೇ ಮಹಾನುಭಾವವಾಗಿ,
ಎನಗೆ ಮತ್ತೆ ಬೇರೆ ಪ್ರಸಾದವೆಂಬುದಿಲ್ಲ,
ಕೂಡಲಸಂಗಮದೇವಾ. ॥೧೨॥

೭೭೯
ದಾಸೋಹವೆಂಬ ಸೋಹೆಗೊಂಡು ಹೋಗಿ,
ಗುರುವ ಕಂಡೆ, ಲಿಂಗವ ಕಂಡೆ,
ಜಂಗಮವ ಕಂಡೆ, ಪ್ರಸಾದವ ಕಂಡೆ.
ಇಂತೀ ಚತುರ್ವಿಧಸಂಪನ್ನನಾದೆ ಕಾಣಾ,
ಕೂಡಲಸಂಗಮದೇವಾ. ॥೧೩॥

ಪ್ರಸಾದಿಯ ಭಕ್ತಸ್ಥಲ

೭೮೦

ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ.
ಶ್ರೀಗುರುಪಾದವ ಹಿಡಿದು ಪಾವನನಾದೆನಯ್ಯಾ.
ಪಾದೋದಕ ಪ್ರಸಾದದಿಂದ ಭವಗೆಟ್ಟೆನು,
ಕೂಡಲಸಂಗಮದೇವಾ. ॥೧೪॥

೭೮೧

ಕಿವಿಯ ಸೂತಕ ಹೋಯಿತ್ತು,
ಸದ್ಗುರುವಿನ ವಚನದಿಂದ,
ಕಂಗಳ ಸೂತಕ ಹೋಯಿತ್ತು,
ಸದ್ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು,
ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು.
ನಿಮ್ಮ ಒಕ್ಕುದ ಕೊಂಡೆನಾಗಿ.
ನಾನಾ ಸೂತಕ ಹೋಯಿತ್ತು,
ನಿಮ್ಮ ಶರಣರ ಅನುಭಾವಿಯಾಗಿ.
ಕೂಡಲಸಂಗಮದೇವಾ ಕೇಳಯ್ಯಾ
ಎನ್ನ ಮನದ ಸೂತಕ ಹೋಯಿತ್ತು,
ನೀವಲ್ಲದಿಲ್ಲೆಂದರಿದೆನಾಗಿ. ॥೧೫॥

೭೮೨

ಲಿಂಗಪ್ರಸಾದಿಗಳಲ್ಲದವರ ಸಂಗ ಭಂಗವೆಂದುದು ಗುರುವಚನ.
ಲಿಂಗಪ್ರಸಾದಿಗಳಲ್ಲದವರ ಸಂಗ
ಪಂಚಮಹಾಪಾತಕವೆಂದುದು ಲಿಂಗವಚನ.
'ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಮ್'

ಇಂತೆಂದುದಾಗಿ ಕೂಡಲಸಂಗಮದೇವಾ,
ನಿಮ್ಮ ಶರಣರಿಗೆ ಶರಣೆಂದು ಶುದ್ಧನಯ್ಯಾ. ॥೧೬॥

೭೮೩

ಸಯದಾನವ ತಂದು ನೀಡುವೆನಲ್ಲದೆ ಸಂಬಂಧಿ ನಾನಲ್ಲಯ್ಯಾ.
ಕರ್ತಂಗೆ ಭೃತ್ಯಾಚಾರವ ಮಾಡಿ ಒಕ್ಕುದ ಕೊಂಡಿಪ್ಪೆನಯ್ಯಾ.
ಭೋಗಾದಿಭೋಗವ ಸಮವಾಗಿ ಭೋಗಿಸಲು
ಅಘೋರನರಕದಲ್ಲಿಕ್ಕುವ ಕೂಡಲಸಂಗಮದೇವ. ॥೧೭॥

೭೮೪

ಶುದ್ಧವ ಗುರುವಿಂಗೆ ಕೊಟ್ಟು,
ಶುದ್ಧವಾಯಿತ್ತೆಂಬೆನಯ್ಯಾ,
ಸಿದ್ಧವ ಲಿಂಗಕ್ಕೆ ಕೊಟ್ಟು, ಸಿದ್ಧವಾಯಿತ್ತೆಂಬೆನಯ್ಯಾ,
ಪ್ರಸಿದ್ಧವ ಜಂಗಮಕ್ಕೆ ಕೊಟ್ಟು,
ಪ್ರಸಿದ್ಧವಾಯಿತ್ತೆಂಬೆನಯ್ಯಾ.
ಗುರುಲಿಂಗಜಂಗಮವ
ಏಕತ್ರಯವಾಗಿ ಕಾಣಲರಿಯದಿದ್ದಡೆ
ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತೈದಾವೆ.
ತನುಮನಧನವ ನಿವೇದಿಸಲರಿಯೆನಾಗಿ
ಕೂಡಲಸಂಗಮದೇವ,
ಒಲಿ ಎಂದಡೆಂತೊಲಿವ? ॥೧೮॥

ಪ್ರಸಾದಿಯ ಮಾಹೇಶ್ವರಸ್ಥಲ

೭೮೫

ಒಡಲ ಕಳವಳಕ್ಕೆ, ಬಾಯ ಸವಿಗೆ,
ಬಯಸಿ ಉಂಡೆನಾದಡೆ ನಿಮ್ಮ ತೊತ್ತಿನ ಮಗನಲ್ಲ.
ಬೇಡೆ, ಬೇಡೆ, ನಿಮ್ಮ ನಂಬಿದ ಸದ್ಭಕ್ತರ.
ಅವರೊಕ್ಕುದನುಂಬೆನೆಂದಂತೆ ನಡೆವೆ.

ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ
ಹಿಡಿದೆನಾದಡೆ ನಿಮ್ಮ ಪಾದದಾಣೆ. ॥೧೯॥

೭೮೬

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ ಕೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದಡೆ
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ.
ಲಿಂಗಾರ್ಪಿತವಲ್ಲದೆ ಹಲ್ಲುಕಡ್ಡಿಯ ಕೊಂಡಡೆ
ಬಲ್ಲೆ, ಮುಂದೆ ಭವ ಘೋರನರಕವೆಂಬುದ.
ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು.
ಅಳವರಿಯದೆ ನುಡಿದೆನು.
ಕಡೆ ಮುಟ್ಟೆ ಸಲಿಸದಿದ್ದಡೆ ತಲೆದಂಡ, ತಲೆದಂಡ,
ಕೂಡಲಸಂಗಮದೇವಾ. ॥೨೦॥

ಪ್ರಸಾದಿಯ ಪ್ರಾಣಲಿಂಗಿಸ್ಥಲ

೭೮೭

ಮೌನದಲುಂಬುದು ಆಚಾರವಲ್ಲ.
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ 'ಶಿವಶರಣೆ'ನುತ್ತಿರಬೇಕು.
ಕರಣವೃತ್ತಿಗಳಡಗುವವು,
ಕೂಡಲಸಂಗನ ನೆನೆವುತ್ತವುಂಡಡೆ. ॥೨೧॥

೭೮೮

ಕಾಯದ ಕರಣದ ಕೈಯಲು ಪದಾರ್ಥವ ಹಿಡಿವಲ್ಲಿ
ನಿಮಗೆ ಕೊಡುವ ಭರದ ಭೀತಿಯಿಂದ ಆನರಿಯದಿಪ್ಪೆನಾಗಿ,
ಎನ್ನ ನೀನರಿದು ಸಲಹುತ್ತಿಯಯ್ಯಾ,
ಕೂಡಲಸಂಗಮದೇವಾ. ॥೨೨॥

೭೯

ಆಳಿಕಾರನೆನಗೊಬ್ಬ ಮಗ ಹುಟ್ಟಿದನೆಂದು
ಆಳಿಕೆಯ ಕೆಡಲೀಸದೆ ನಡೆಸುವ ನಮ್ಮಯ್ಯ.
ಪಂಚಭೂತಕಾಯವ ಭವಿಯೆಂದೆನಿಸಲೀಯದೆ
ಪ್ರಸಾದಕಾಯವ ಮಾಡಿ ಸಲಹುವ ನಮ್ಮಯ್ಯ.
ಆಳಿ ಸವೆವಲ್ಲಿ ಅವಧಾನಿಯಾಗಿದ್ದಡೆ
ಆಳ್ದನು ನಮ್ಮ ಕೂಡಲಸಂಗಮದೇವ. ॥೨೩॥

೮೦

ಶಿವಾಚಾರವೆಂಬುದೊಂದು ಬಾಳಬಾಯ ಧಾರೆ;
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು,
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು.
ಬಿಚ್ಚಿ ಬೇರಾದಡೆ ಮೆಚ್ಚ ನಮ್ಮ ಕೂಡಲಸಂಗಮದೇವ. ॥೨೪॥

ಪ್ರಸಾದಿಯ ಶರಣಸ್ಥಲ

೮೧

ತ್ರಿವಿಧಪ್ರಸಾದವೆಂದೆಂಬರು,
ಅದೆಂತಹುದೋ?
ಶುದ್ಧಪ್ರಸಾದ ಗುರುವಿನದು,
ಸಿದ್ಧಪ್ರಸಾದ ಲಿಂಗದದು,
ಪ್ರಸಿದ್ಧಪ್ರಸಾದ ಜಂಗಮದದು.
ಇಂತೀ ತ್ರಿವಿಧ ಒಂದಾದವರ ತೋರಾ
ಕೂಡಲಸಂಗಮದೇವಾ. ॥೨೫॥

೮೨

ಆವಾವ ಭಾವದಲ್ಲಿ ಶಿವನ ನಂಬಿದ ಶರಣರು
ಎಂತಿದ್ದಡೇನಯ್ಯಾ?
ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು

ಎಂತಿದ್ದಡೇನಯ್ಯಾ?
ಸುಚರಿತ್ರರು ಎಂತಿದ್ದಡೇನಯ್ಯಾ?
ಅವಲೋಹವ ಕಳೆವ ಪರುಷ
ಎಂತಿದ್ದಡೇನಯ್ಯಾ?
ಕೂಡಲಸಂಗನ ಶರಣರು
ರಸದ ವಾರಿಧಿಗಳು ಎಂತಿದ್ದಡೇನಯ್ಯಾ? ॥೨೬॥

೭೯೩

ಉರೆ ತಾಗಿದ ಮೃಗವು ಒಂದಡಿಯನಿಡುವುದೆ?
ತನುವ ತಾಗಿದ ಸುಖವು ಅಗಲುವುದೆ?
ಕೂಡಲಸಂಗನ ಶರಣರ ಅನುಭಾವವರಿದವರ
ಮರಳಿ ಮರ್ತ್ಯರೆಂದೆನಬಹುದೆ? ॥೨೭॥

೭೯೪

ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತ್ತು.
ನಿಮ್ಮ ಶ್ರೀಪಾದದಿಂದ ಭವಗೆಟ್ಟೆ ನೋಡಯ್ಯಾ!
ಮನಪರುಷ, ದೃಷ್ಟಿಪರುಷ,
ಭಾವಪರುಷ ನಿಮ್ಮ ಗಣಂಗಳು.
ಕೂಡಲಸಂಗಮದೇವಾ,
ನಿಮ್ಮ ಶರಣರ ಅನುಭಾವದಿಂದ ಸುಖಿಯಾದೆನು. ॥೨೮॥

ಪ್ರಸಾದಿಯ ಐಕ್ಯಸ್ಥಲ

೭೯೫

ನಡೆ ಚೆನ್ನ, ನುಡಿ ಚೆನ್ನ,
ಎಲ್ಲಿ ನೋಡಿದಡಲ್ಲಿ ಚೆನ್ನ,
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ.
ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು
ಕೂಡಲಸಂಗಮದೇವಂಗೆ ಬೇಕೆಂದು
ಕೈದೆಗೆದ ನಮ್ಮ ಚೆನ್ನ. ॥೨೯॥

೭೯೬

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ,
ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ,
ಪ್ರಸಾದವಿಕಾರಿಗೆ ಮನೋವಿಕಾರವೆಂಬುದಿಲ್ಲ.
ಇಂತೀ ತ್ರಿವಿಧ ಗುಣವನರಿದಾತನು
ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವಾ. ॥೩೦॥

ಪ್ರಾಣಲಿಂಗಿಸ್ಥಲ

ಪ್ರಾಣಲಿಂಗಿಯ ಜ್ಞಾನಿಸ್ಥಲ

೭೯೭

ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ,
ಲಿಂಗವಿರಹಿತನಾಗಿ ನಡೆವ ಪರಿಯೆಂತೊ?
ಲಿಂಗವಿರಹಿತನಾಗಿ ನುಡಿವ ಪರಿಯೆಂತೊ?
ಪಂಚೇಂದ್ರಿಯ ಸುಖವನು
ಲಿಂಗವಿರಹಿತನಾಗಿ ಭುಂಜಿಸಲಾಗದು,
ಲಿಂಗವಿರಹಿತವಾಗಿ ಉಗುಳ ನುಂಗಲಾಗದು,
ಇಂತೆಂದುದು ಕೂಡಲಸಂಗನ ವಚನ. ॥೧॥

೭೯೮

ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು
ಮುಟ್ಟುವ ತೆರನನರಿಯದನ್ನಕ್ಕ?
ಕಟ್ಟಿದಡೇನು, ಬಿಟ್ಟಡೇನು ಮನವು ಲಿಂಗದಲ್ಲಿ ಮುಟ್ಟದನ್ನಕ್ಕ?
ಮಾತಿನಲೆ ಒಲಿಸಿ ಮಹತ್ತಪ್ಪ ಲಿಂಗವ ಕಂಡೆಹೆನೆಂಬ
ಪಾತಕರ ಮೆಚ್ಚ, ನಮ್ಮ ಕೂಡಲಸಂಗಮದೇವ. ॥೨॥

೭೯೯

ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ
ಜ್ಞಾನತ್ರಯಂಗಳೇನಾದುವು?
ಕೂಡಲಸಂಗಮದೇವಾ
ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ. ॥೩॥

೮೦೦

ಗುರು ತೋರಿದ ಲಿಂಗವು ಮನಸ್ಥಲವಾಗಿರಲು
ಪವನಭೇದದಿಂದ ಅರಿದೆಹೆನೆಂದಡೆ, ಅದೇ ದ್ರೋಹ.
ಇಡಾ ಪಿಂಗಳಾ ಸುಷುಮ್ನಾನಾಳವಿಡಿದು ಅರಿದೆಹೆನೆಂದಡೆ
ಕೂಡಲಸಂಗಮದೇವ ಮೂಗಕೊಯ್ಯದೆ ಮಾಬನೆ? ॥೪॥

೮೦೧

ಕಬ್ಬುನ ಪರುಷವೇಧಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದೊಡಾ ಪೂಜೆಯದೇಕೊ? ॥೫॥

೮೦೨

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೊ?
ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು.
ಅಹಂಕಾರರಹಿತವಾದಲ್ಲಿ ಸನ್ನಿಹಿತ ಕಾಣಾ,
ಕೂಡಲಸಂಗಮದೇವ. ॥೬॥

೮೦೩

ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲಸಂಗಮದೇವನೆಂತೊಲಿವನಯ್ಯಾ? ॥೭॥

೮೦೪

ಮನದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ.

ಆದಿವಿಡಿದು ಬಂದಾತನೆ ಭಕ್ತ,
ಆದಿವಿಡಿದು ಬಂದಾತನೆ ಜಂಗಮ.
ಆದಿ ಗುರು, ಅನಾದಿ ಶಿಷ್ಯ.
ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ
ಕೂಡಲಸಂಗಮದೇವಾ. ॥೮॥

೮೦೫

ಅರಿದರಿದರಿದು! ಸಮಗಾಣಿಸಬಾರದು,
ತ್ರಾಸಿನ ಕಟ್ಟಳೆಯಂತಿನಿತಿನಿತು ವೆಗ್ಗಳವಾದಡೆ
ಈಶ್ವರನು ಒಡೆಯಿಕ್ಕದೆ ಮಾಣುವನೆ?
ಪಾತ್ರ ಅಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು?
ಜೀವ ಜೀವಾತ್ಮವ ಸರಿಯೆಂದು ಕಂಡಡೆ ಸಮವೇದಿಸದಿಪ್ಪನೆ ಶಿವನು?
ತನ್ನ ಮನದಲ್ಲಿ 'ಯತ್ರ ಜೀವಃ ತತ್ರ ಶಿವ'ನೆಂದು
ಸರ್ವಜೀವದಯಾಪಾರಿಯಾದಡೆ,
ಕೂಡಲಸಂಗಮದೇವನು
ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ? ॥೯॥

೮೦೬

ಸ್ಥಾವರ ಜಂಗಮವೆಂಬ ಉಭಯ ಪಕ್ಷ ಒಂದೆ,
ಆವ ಮುಖದಲಿ ಬಂದಡೂ ತೃಪ್ತಿಯೊಂದೆ,
ಕೂಡಲಸಂಗಮದೇವರ ಆಪ್ಯಾಯನವೊಂದೆ. ॥೧೦॥

೮೦೭

ಮುತ್ತು ಉದಕದಲಾಗದು,
ಉದಕ ಮುತ್ತಿನಲಾಗದು,
ತತ್ತ್ವಘಟಿಸಿದ ಸುಮುಹೂರ್ತದಲಲ್ಲದೆ,
ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ.
ಕರ್ತೃ ಕೂಡಲಸಂಗಮದೇವರ ಒಲವಿನ ದಯದ
ಚಿತ್ತವಿಡಿದಂಗಲ್ಲದೆ, ಶಿವತತ್ತ್ವ ಸಾಹಿತ್ಯವಾಗದು. ॥೧೧॥

೮೦೮

ಕಾಯದ ಗಡಣ ಕೆಲಬರಿಗುಂಟು,
ಜೀವದ ಗಡಣ ಕೆಲಬರಿಗುಂಟು,
ಭಾವದ ಗಡಣ ಕೆಲಬರಿಗುಂಟು,
ವಚನದ ಗಡಣ ಕೆಲಬರಿಗುಂಟು.
ಪ್ರಾಣಲಿಂಗದ ಗಡಣ ಆರಿಗೂ ಇಲ್ಲ,
ಕೂಡಲಸಂಗನ ಶರಣರೊಳಗೆ
ತಂಗಟೂರಮಾರಯ್ಯಂಗಲ್ಲದೆ. ॥೧೨॥

೮೦೯

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ
ಶೈತ್ಯವ ತೋರುವ ಪರಿಯೆಂತೋ?
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ
ಉಷ್ಣವ ತೋರುವ ಪರಿಯೆಂತೋ?
ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ
ಕೂಡಲಸಂಗಯ್ಯನನರಿವ ಪರಿಯೆಂತೋ? ॥೧೩॥

೮೧೦

ಮುನ್ನೂರ ಅರುವತ್ತು ನಕ್ಷತ್ರಕ್ಕೆ
ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು?
ಅದು ಸ್ವಾತಿಗಲ್ಲದೆ ಬಾಯ್ದೆರೆಯದು ಕೇಳು, ಕೇಳು ತಂದೆ.
ಎಲ್ಲವಕ್ಕೆ ಬಾಯ ಬಿಟ್ಟಡೆ ತಾನೆಲ್ಲಿಯ ಮುತ್ತಪ್ಪುದು?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು
ಕರಣಾದಿ ಗುಣಂಗಳ ಮರೆದರು,
ಇದು ಕಾರಣ,
ಕೂಡಲಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ. ॥೧೪॥

ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ

೮೧೧

ಮೈಗೆ ಕಾಹ ಹೇಳುವರಲ್ಲದೆ,
ಮನಕ್ಕೆ ಕಾಹ ಹೇಳುವರೆ?
ಅಣಕದ ಮಿಂಡನ ಹೊಸ ಪರಿಯ ನೋಡಾ!
ಕೂಡಲಸಂಗಮದೇವನೆನ್ನ ಮನವ ನಂಬದೆ
ತನ್ನಲ್ಲಿದ್ದ ಲೇಸ ಕಾಹ ಹೇಳಿದನು. ॥೧೫॥

೮೧೨

ಮನವಂಚನೆಯೆ ಅನ್ಯಲಿಂಗಾರ್ಚನೆ.
ಅದು ನಿಜವಲ್ಲ ನಿಜವಲ್ಲ,
ಕೂಡಲಸಂಗಮದೇವನು
ಮನದಂತರ್ಯಾಮಿ ತಾನಾಗಿ. ॥೧೬॥

೮೧೩

ಸರ್ಪನ ಸಂಯೋಗ,
ಜ್ಯೋತಿ ಪತಂಗನ ಬೆಸನದಂತೆ;
ಮನದ ಮದವರಿಯದೆ ನಿಮ್ಮ ಕೃಪೆಯಿಂದೆ ನಿಮ್ಮ ನೆನೆವೆ.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪೆಯಯ್ಯಾ,
ಕೂಡಲಸಂಗಮದೇವಾ, ನೀನೆನ್ನ ಪ್ರಾಣನಾಥನಾಗಿ. ॥೧೭॥

೮೧೪

ಪೃಥ್ವಿ, ಅಪ್ಪು, ತೇಜ, ವಾಯು,
ಆಕಾಶ ನಿರಂಜನದೇವಾ,
ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ
ಕಾಣಲಾರಿಗೆಯೂ ಬಾರದಯ್ಯಾ.
ಜ್ಞಾನಜ್ಯೋತಿಧ್ಯಾನದಿಂದ ನಾಳಶುದ್ಧದ್ವಾರವಾಗಿ
ಆರಾಧಿಸಿ ಕಂಡೆ, ನಮ್ಮ ಕೂಡಲಸಂಗಮದೇವನ. ॥೧೮॥

೮೧೫

ಪಶ್ಚಿಮಪದ್ಮಾಸನದಲ್ಲಿ ಕುಳ್ಳಿತ್ತು ನಿಟ್ಟೆಲುವ ಮುರಿದು
ತುಟಿ ಮಿಡುಕದೆ ಅಟ್ಟೆಯಾಡಿತ್ತಲ್ಲಾ!
ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕ[ಟ್ಟೆ] ಗುಡಿಯ,
ಕೂಡಲಸಂಗಮದೇವ ಹಿಡಿವಡೆದ. ॥೧೯॥

೮೧೬

ಸುನಾದ ಬಿಂದು ಪ್ರಣವಮಂತ್ರದಗ್ರದ ಕೊನೆಯಲ್ಲೈದುವುದೆ:
ಸೋऽಹಂ ಸೋऽಹಂ ಎಂದೆನ್ನುತ್ತಿದ್ದಿತ್ತು.
ಕೋऽಹಂ ಎಂಬುದ ಕಳೆದು ಬ್ರಹ್ಮರಂಧ್ರದೊಳಗೆ,
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ'
ಇಂತೆಂದುದಾಗಿ,
ಕೂಡಲಸಂಗಮದೇವನಲ್ಲದೆ ಮತ್ತಾರೂ ಇಲ್ಲ. ॥೨೦॥

೮೧೭

ಬೆಳಗಿನೊಳಗಣ ಬೆಳಗು ಮಹಾಬೆಳಗು!
ಶಿವ ಶಿವಾ! ಪರಮಾಶ್ರಯವೆ ತಾನಾಗಿ
ಶತಪತ್ರಕಮಳಕರ್ಣಿಕಾಮಧ್ಯದಲ್ಲಿ
ಸ್ವತಃ ಸಿದ್ಧನಾಗಿಪ್ಪ, ನಮ್ಮ ಕೂಡಲಸಂಗಮದೇವ. ॥೨೧॥

೮೧೮

ಆಚಾರ ಶಿವಾಚಾರವೆಂದರಿಯದ ಕಾರಣ,
ಷಡುದರುಶನಂಗಳೆಲ್ಲಾ ತಮತಮಗೆ ಶರಣೆನುತ್ತಿದ್ದುವು.
ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲಾ,
ಶರಣು ಶರಣೆನುತ್ತಿದ್ದುವು.
ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ
ಬಹಿರಂಗದಲ್ಲಿ ವರ್ತಿಸುವವರಿಗೆ ಎಲ್ಲಿಯದೊ? ॥೨೨॥

೬೯೯

ತಮತಮಗೆಲ್ಲ ನೊಸಲಕಣ್ಣವರು,
ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲ ಖಟ್ವಾಂಗಕಪಾಲತ್ರಿಶೂಲಧರರು.
ದೇವರಾರು ಭಕ್ತರಾರು ಹೇಳಿರಯ್ಯಾ!
ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು,
ಎನ್ನ ಬಚ್ಚಬರಿಯ ಬಸವನೆನಿಸಯ್ಯಾ. ॥೨೩॥

೬೨೦

ಗುರುವಿನಲ್ಲಿ ಸದಾಚಾರ:
ಲಿಂಗದಲನುದಿನ ವೇಳೆ.
ಜಂಗಮದಲ್ಲನುಭಾವ ಸಮಯಾಚಾರ:
ಲಿಂಗದಲನುದಿನ ವೇಳೆ.
ಈ ಉಭಯಾಚಾರದಿಂದ
ತಿಳಿದ ತಿಳಿವು ಲಿಂಗದಲ್ಲಿ ಅನುದಿನ ವೇಳೆ.
ಬೇರೆ ತೋರಲಿಲ್ಲ.
ಲಿಂಗಜಂಗಮದಲ್ಲಿ ಲೀಯವಾದಾಚಾರ ಸಮಯಾಚಾರ.
ಇದು ಕಾರಣ ಕೂಡಲಸಂಗಮದೇವಾ,
ಲಿಂಗದಲನುದಿನ ವೇಳೆ. ॥೨೪॥

೬೨೧

ಉಳ್ಳವರು ಶಿವಾಲಯ ಮಾಡಿಹರು,
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರ ಹೊನ್ನಕಲಶವಯ್ಯಾ.
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ॥೨೫॥

೮೨೨

ಅಷ್ಟದಳಕಮಳಾತ್ಮದೊಳಗೆ
ನೆಟ್ಟನೆ ಮನಃಪ್ರೇರಕನೆಂದು ನಂಬಿದೆ,
ಮತ್ತೊಂದನರಿಯದೆ,
ನಿತ್ಯಸ್ವತಂತ್ರನು ನೀನೆ,
ದೃಷ್ಟಲಿಂಗ ಜಂಗಮ ಒಂದೆ ಎಂದು ಇಪ್ಪೆನು,
ಪ್ರಭುವೆ ಕೂಡಲಸಂಗಮದೇವಾ. ॥೨೬॥

೮೨೩

ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ?
ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲಸಂಗಮದೇವಾ. ॥೨೭॥

೮೨೪

ಗುರು ಮುನಿದಡೆ ಒಂದು ದಿನ ತಾಳುವೆ,
ಲಿಂಗ ಮುನಿದಡೆ ದಿನವರೆ ತಾಳುವೆ.
ಜಂಗಮ ಮುನಿದಡೆ ಕ್ಷಣಮಾತ್ರ ತಾಳಿದೆನಾದಡೆ,
ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ. ॥೨೮॥

೮೨೫

ಅರಸು ಮುನಿದಡೆ ನಾಡೊಳಗಿರಬಾರದಯ್ಯಾ,
ಗಂಡ ಮುನಿದಡೆ ಮನೆಯೊಳಗೆ ಇರಬಾರದಯ್ಯಾ.
ಕೂಡಲಸಂಗಮದೇವಾ
ಜಂಗಮ ಮುನಿದಡೆ ನಾನೆಂತು ಬದುಕುವೆ.? ॥೨೯॥

೮೨೬

ರಚ್ಚೆಯ ನೆರವಿಗೆ ನಾಣುನುಡಿ ಇಲ್ಲದಿಹುದೆ?
ಅದರಂತೆನಬಹುದೆ ಸಜ್ಜನ ಸ್ತ್ರೀಯ?
ಅದರಂತೆನಬಹುದೆ ಭಕ್ತಿರತಿಯ?
ಕರುಳಕಲೆ ಪ್ರಕಟಿತವುಂಟೆ,
ಕೂಡಲಸಂಗಮದೇವಾ. ॥೩೦॥

೮೨೭

ಭೂತ ಒಲಿದು ಆತ್ಮನ ಸೋಂಕಿದ ಬಳಿಕ
ಭೂತದ ಗುಣವಲ್ಲದೆ ಆತ್ಮನ ಗುಣವುಂಟೆ?
ಗುರುಕಾರುಣ್ಯವಾಗಿ ಹಸ್ತಮಸ್ತಕಸಂಯೋಗವಾದ ಬಳಿಕ
ಗುರುಲಿಂಗಜಂಗಮವೆ ಗತಿಯಾಗಿ ಇದ್ದೆ,
ಕೂಡಲಸಂಗಮದೇವಾ. ॥೩೧॥

೮೨೮

ಹಸಿವು, ತೃಷೆ, ನಿದ್ರೆ, ವಿಷಯಂಗಳ ಮರೆದೆ,
ನೀವು ಕಾರಣ!
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳ ಮರೆದೆ,
ನೀವು ಕಾರಣ!
ಪಂಚೇಂದ್ರಿಯ, ಸಪ್ತಧಾತು,
ಅಷ್ಟಮದಂಗಳ ಮರೆದೆ.
ನೀವು ಕಾರಣ!
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಆಪ್ಯಾಯನವಾದಡೆ
ಎನಗೆ ತೃಪ್ತಿಯಾಯಿತ್ತು. ॥೩೨॥

೮೨೯

ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ,
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ,

ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ,
ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ
ಎನಗೆ ಬೇರೆ ವಿಚಾರವುಂಟೆ,
ಕೂಡಲಸಂಗಮದೇವಾ? ॥೩೩॥

ಪ್ರಾಣಲಿಂಗಿಯ ಮಾಹೇಶ್ವರಸ್ಥಲ

೮೩೦

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!
ಅರಸಾಡದಿರಿಂ ಭೋ, ನಿಮ್ಮ ಧರ್ಮ!
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ,
ಕೂಡಲಸಂಗಮದೇವ ಏಕೋಭಾವ. ॥೩೪॥

೮೩೧

ಅರ್ಥ ಪ್ರಾಣ ಅಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ, ಆದಿಶಕ್ತಿಯ ಮಗ ವಿಷ್ಣು,
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ.
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಎನ್ನ ಮನದೊಡೆಯ ಮಹಾದೇವಾ,
ನಿಮ್ಮ ಮನವ ನಿಮಗೊಪ್ಪಿಸಿ ಶುದ್ಧ ನಾನು ಕಾಣಾ,
ಕೂಡಲಸಂಗಮದೇವಾ. ॥೩೫॥

೮೩೨

ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯಾ,
ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ.
ಎಲೆ ದೇವಾ, ಮನೆಯ ತೊತ್ತು ಅಲಸಿದಡೆ
ಒಡತಿ ಮಾಡಿಕೊಂಬಂತೆ,
ನಿನಗೆ ನೀ ಮಾಡಿಕೊ,
ಕೂಡಲಸಂಗಮದೇವಾ. ॥೩೬॥

೮೩೩

ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ ಪೂಜಿಸಲರಿಯದ
ಕಾರಣ ಬಹುಜನ್ಮಕ್ಕೆ ತಂದು ಇಕ್ಕಿದೆಯಯ್ಯಾ ಎನ್ನನು.
ಎನಗೆ ಗುರುಪಥವ ತೋರಿದವರಾರು?
ಲಿಂಗಪಥವ ತೋರಿದವರಾರು?
ಜಂಗಮಪಥವ ತೋರಿದವರಾರು?
ಪಾದೋದಕ ಪ್ರಸಾದಪಥವ ತೋರಿದವರಾರು?
ತೋರುವ ಮನವೆ ನೀವೆಂದರಿತೆ.
ಎನಗಿನ್ನಾವ ಭವವಿಲ್ಲ, ಕೂಡಲಸಂಗಮದೇವಾ. ॥೩೭॥

ಪ್ರಾಣಲಿಂಗಿಯ ಪ್ರಸಾದಿಸ್ಥಲ

೮೩೪

ಜನ್ಮ ಜನ್ಮಕ್ಕೆ ಹೋಗಲೀಯದೆ,
'ಸೋಽಹಂ' ಎಂದೆನಿಸದೆ 'ದಾಸೋಽಹಂ' ಎಂದೆನಿಸಯ್ಯಾ.
ಲಿಂಗಜಂಗಮಪ್ರಸಾದದ ನಿಲವ ತೋರಿ ಬದುಕಿಸಯ್ಯಾ,
ಕೂಡಲಸಂಗಮದೇವಾ, ನಿಮ್ಮ ಧರ್ಮ ॥೩೮॥

೮೩೫

ಆಶೆಯಾಮಿಷ ತಾಮಸದಿಂದ ಭವಬಂಧನವಾದುದನರಿಯಾ!
ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ!
ಓಂ ನಮಃ ಶಿವಾಯ, ಶರಣೆಂಬುದ ಬಿಡದೆ ನೆನೆ ಮನವೆ!
'ಮಹತಃ ಶಿವಲಿಂಗಸ್ಯ ಮಹತೋ ಜಂಗಮಸ್ಯ ಚ
ತತ್ ಪ್ರಸಾದೋ ಮಹಾದೇವ ಮಹದ್ಭಿರಿದಮೀರಿತಮ್'
ಕೂಡಲಸಂಗಮದೇವನ ಪ್ರಸಾದಸಾನ್ನಿಧ್ಯದಿಂದ
ಭವಜನ್ಮಕರ್ಮ ಪಂಚಭೂತಪೂರ್ವನಾಸ್ತಿ. ॥೩೯॥

೮೩೬

ಬೆಟ್ಟಕ್ಕೆ ಬೆಳ್ಳಾರ ಸುತ್ತಿತಯ್ಯಾ,
ಪಾಪದ ಬಲೆಯ ತಂದು ಮುಂದೆ ಒಡ್ಡಿದಿರಯ್ಯಾ,
ಬೇಟೆಗಾರನು ಮೃಗವನಟ್ಟಿ ಬರಲು
ಮೃಗವು ಗೋರಿಗೊಳಗಾಗದಯ್ಯಾ.
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲಸಂಗಮದೇವಂಗೆ ಓಗರವಾಯಿತ್ತು. ॥೪೦॥

೮೩೭

ಪರಿಯಾಣವೆ ಭಾಜನವೆಂಬರು;
ಪರಿಯಾಣ ಭಾಜನವಲ್ಲ,
ಲಿಂಗಕ್ಕೆ ತನ್ನ ಮನವೆ ಭಾಜನ.
ಪ್ರಾಣವನು ಬೀಸರವೋಗಲೀಯದೆ ಮೀಸಲಾಗರ್ಪಿಸಬಲ್ಲಡೆ
ಕೂಡಿಕೊಂಡಿಪ್ಪ, ನಮ್ಮ ಕೂಡಲಸಂಗಮದೇವ. ॥೪೧॥

೮೩೮

ಆತ್ಮ ಲಿಂಗ, ಪರಮಾತ್ಮ ಜಂಗಮ,
ತನು ಮಧ್ಯೆ ಪ್ರಸಾದವಾಯಿತ್ತು,
ನಿಶ್ಚಿಂತ ನಿವಾಸವಾಯಿತ್ತು.
ಕೂಡಲಸಂಗನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು. ॥೪೨॥

೮೩೯

ಲೋಹ ಪರುಷವ ಮುಟ್ಟುವುದಲ್ಲದೆ
ಪರುಷ ಪರುಷವ ಮುಟ್ಟುವುದೆ ಅಯ್ಯಾ?
ಅಂಗವಿಡಿದಂಗೆ ಲಿಂಗವುಂಟಲ್ಲದೆ,
ಲಿಂಗವಿಡಿದಂಗೆ ಲಿಂಗವುಂಟೆ?
'ಅಣೋರಣೀಯಾನ್ ಮಹತೋ ಮಹೀಯಾನ್'
ಹಿರಿದಕ್ಕೆ ಹಿರಿದು, ಕಿರಿದಿಂಗೆ ಕಿರಿದು,

ವಾಙ್ಮನಕ್ಕಗೋಚರ
ಕೂಡಲಸಂಗಮದೇವಾ
ಸ್ವರೂಪ ಪ್ರಸಾದ, ನಿರೂಪ ಲಿಂಗೈಕ್ಯ. ॥೪೩॥

೮೪೦

ಜಂಗಮವೆ ಲಿಂಗವೆನಗೆ, ಜಂಗಮವೆ ಪ್ರಾಣವೆನಗೆ.
ಕೂಡಲಸಂಗಮದೇವಯ್ಯಾ,
ಎನಗೆಯೂ ನಿನಗೆಯೂ ಜಂಗಮಪ್ರಸಾದವೆ ಪ್ರಾಣ. ॥೪೪॥

೮೪೧

ಅಯ್ಯಾ! ನೀನೆಂದಡೆ ಏನೆಂಬೆನು?
ನಿನ್ನ ಹಂಗೇನು ಹರಿಯೇನು?
ನಿನ್ನ ಮುಖದಲ್ಲಿ ಒಂದಗುಳು ಸವೆಯದು.
ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು.
ಜಂಗಮವೆ ಲಿಂಗವೆಂದು ಒಕ್ಕುದ ಕೊಂಡಡೆ
ಎನ್ನ ಭವಂ ನಾಸ್ತಿಯಾಯಿತ್ತು, ಕೂಡಲಸಂಗಮದೇವಾ. ॥೪೫॥

೮೪೨

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
ಕೂಡಲಸಂಗನ ಶರಣರ ಅನುಭಾವದ ಬಲದಿಂದ
ಎನ್ನ ಭವದ ಕೇಡು ನೋಡಯ್ಯಾ. ॥೪೬॥

೮೪೩

ಆದ್ಯರ ವಚನ ಆದ್ಯರಿಗಾಯಿತ್ತು,
ವೇದ್ಯರಿಗಲ್ಲದೆ ಸಾಧ್ಯವಾಗದು.
ಕೂಡಲಸಂಗಮದೇವಾ
ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು. ॥೪೭॥

೭೪೪

ಅಸಂಬಂಧ ಸಂಬಂಧವಾಯಿತ್ತು,
ಲಿಂಗಸಾರಾಯರ ಸನುಮತದಿಂದ.
ಉತ್ತಮ ಮಧ್ಯಮವ ಕೆಡಿಸಿತ್ತು,
ಏಕೋ ಸತಿಪತಿಗುಣದಿಂದ,
ಗರುವರ ಗರುವತನ ಕೂಡಲಸಂಗಯ್ಯನ
ಅನುಭಾವದಿಂದ. ॥೪೮॥

ಪ್ರಾಣಲಿಂಗಿಯ ಶರಣಸ್ಥಲ

೭೪೫

ಶರಣಸನ್ನಿಹಿತ ಐಕ್ಯವಹಲ್ಲಿ
ಹರಿಬ್ರಹ್ಮಾದಿಗಳು ಮೊದಲಾದ
ತೆತ್ತೀಸಾದಿ ದೇವರ್ಕಳುಘೇ ಉಘೇ ಎನ್ನುತ್ತಿರಲು
ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ಎಂದಡೆ;
ಅಂಗದ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ, ಒಲ್ಲೆನಯ್ಯಾ.
ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿಯ ಸ್ಥಾನ,
ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ, ಹಿಂದು ಸೂರ್ಯನ ಸ್ಥಾನ,
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ.
ಹೃದಯಮಧ್ಯದ ಅಂತರಾಳದ ಏಕಪೀಠದ ಸಿಂಹಾಸನವ
ತೆರಪ ಕೊಡು ಕೂಡಲಸಂಗಮದೇವಾ. ॥೪೯॥

೭೪೬

ನೀನೊಲಿದಡೆ ಒಲಿ, ಒಲಿಯದಿದ್ದಡೆ ಸಮವೇದಿಸಿಕೊಳ್ಳಯ್ಯಾ,
ಲಿಂಗದ ಬೆಳಗನೊಳಕೊಂಡು ಸಮವೇದಿಸಿಕೊಳ್ಳಯ್ಯಾ.
ಕೂಡಲಸಂಗಮದೇವನಲ್ಲಿ ತದ್ಗತನಾದೆನಯ್ಯಾ. ॥೫೦॥

೮೪೭

ಮಾಡುವರಿಲ್ಲ, ನೀ ಮಾಡದೆ ನಿಲ ಸಾಲೆ.
ಬೇಡುವರಿಲ್ಲ, ನೀ ಬೇಡದೆ ನಿಲ ಸಾಲೆ.
ಕೂಡುವರಿಲ್ಲ, ನೀ ಕೂಡದೆ ನಿಲ ಸಾಲೆ.
ಕೂಡಲಸಂಗಮದೇವ
ತಾನು ತಾನಾಗಿ ನೀ ನೋಡದೆ ನಿಲ ಸಾಲೆ. ॥೫೧॥

೮೪೮

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ.
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು.
ನಮ್ಮ ಕೂಡಲಸಂಗಮದೇವರ
ಮುಟ್ಟಿ ನೆರೆವ ಸುಖವ ನಾನೇನೆಂಬೆ. ॥೫೨॥

೮೪೯

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೆ ಅಯ್ಯಾ?
ಮಾಲೆಗಾರನ ಕೇಳಿ ನನೆಯರಳುವುದೆ?
ಆಗಮವನಿದಿರಿಂಗೆ ತೋರುವುದು ಆಚಾರವೆ ಅಯ್ಯಾ?
ನಮ್ಮ ಕೂಡಲಸಂಗನ
ಕೂಡಿದ ಕೂಟದ ಕರುಳ ಕಲೆಯನಿದಿರಿಂಗೆ
ತೋರುವುದು ಆಚಾರವೆ ಅಯ್ಯಾ. ॥೫೩॥

ಪ್ರಾಣಲಿಂಗಿಯ ಐಕ್ಯಸ್ಥಲ

೮೫೦

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ
ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ,
ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ . ॥೫೪॥

೮೫೧

ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು.
ಲಿಂಗದ ಬೆಳಗು ಒಳಕೊಂಡುದಾಗಿ ಏನೆಂದರಿಯೆನು.
ಕೂಡಲಸಂಗಮದೇವನ ಧ್ಯಾನದಿಂದ ಏನೆಂದರಿಯೆನು. ॥೫೫॥

೮೫೨

ಕಾಯವೆಂಬ ಘಟಕ್ಕೆ ಚೈತನ್ಯವೆ ಸಯದಾನ,
ಸಮತೆ ಎಂಬ ಜಲ, ಕರಣಾದಿಗಳೆ ಶ್ರವಣ.
ಜ್ಞಾನವೆಂಬ ಅಗ್ನಿಯನಿಕ್ಕಿ
ಮತಿಯೆಂಬ ಸಟ್ಟುಕದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ ಪರಿಣಾಮದೋಗರವ ನೀಡಿದಡೆ
ಕೂಡಲಸಂಗಮದೇವಂಗಾರೋಗಣೆಯಾಯಿತ್ತು. ॥೫೬॥

೮೫೩

ಕಂಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ,
ಮಹಂತ ಕೂಡಲಸಂಗಮದೇವನ. ॥೫೭॥

೮೫೪

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯಕ್ಷೇತ್ರ,
ಅಡಿಗಡಿಗೆ ನಿಧಿಯು ನಿಧಾನ ನೋಡಯ್ಯಾ!
ಆತನ ಇರವೆ ವಾರಣಾಸಿ, ಅವಿಮುಕ್ತಿ ಕ್ಷೇತ್ರ,
ಕೂಡಲಸಂಗನ ಶರಣ ಸ್ವತಂತ್ರನಾಗಿ. ॥೫೮॥

❖❖

ಶರಣಸ್ಥಲ

ಶರಣನ ಜ್ಞಾನಿಸ್ಥಲ

೮೫೫

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ,
ಇದಾವಂಗಳವಡುವುದಯ್ಯಾ?
ನಿಧಾನ ತಪ್ಪಿಬಂದಡೆ ಒಲ್ಲೆನೆಂಬವರಿಲ್ಲ,
ಪ್ರಮಾದವಶ ಬಂದಡೆ ಹುಸಿಯೆನೆಂಬವರಿಲ್ಲ,
ನಿರಾಶೆ, ನಿರ್ಭಯ ಕೂಡಲಸಂಗಮದೇವಾ
ನೀನೊಲಿದ ಶರಣಂಗಲ್ಲದಿಲ್ಲ. ||೧||

೮೫೬

ಶರಣಸನ್ಮತವಪ್ಪ ನಿಜಗುಣಭರಿತನಪ್ಪಡೆ,
ಸತ್ವ ರಜ ತಮ ಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಯದೊ?
ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ,
ಅರಿಷಡ್ವರ್ಗ ದಶವಾಯು ಬೆರೆಸಿಪ್ಪ
ಕಳಂಕವಪ್ಪ ತನುವ ಬಿಡದನ್ನಕ್ಕ, ಸಂಸಾರ ಮಾದಲ್ಲದೆ
ಶರಣಸಜ್ಜನಿಕೆ, ಸಮಯಾಚಾರ, ನಿಜವ್ರತವು
ದುರಾಚಾರಿಗಳಿಗಳವಡದು,
ನಮ್ಮ ಕೂಡಲಸಂಗನ ಶರಣರಿಗಲ್ಲದೆ. ||೨||

೮೫೭

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ;
ಕೊಲುವುದು ತ್ರೈಜಗವೆಲ್ಲವ, ತನಗೆ ಬೇರೆ ಪ್ರಳಯವಿಲ್ಲ.

ನಾಕಡಿಯನೈದೂದು, ಲೋಕದ ಕಡೆಯನೆ ಕಾಬುದು,
ಸೂಕ್ಷ್ಮಪಥದಲ್ಲಿ ನಡೆವುದು,
ತನಗೆ ಬೇರೆ ಒಡಲಿಲ್ಲ.
ಅಹಮೆಂಬ ಗಾರುಡಿಗನ ನುಂಗಿತ್ತು
ಕೂಡಲಸಂಗನ ಶರಣರಲ್ಲದುಳಿದವರ. ॥೩॥

೮೫೮

ಆದಿತ್ಯ ಸೋಮರು ಆಗಿ ಹೋಗುತ್ತ ಇದ್ದಾರು.
ಬ್ರಹ್ಮ ಪ್ರಳಯಕ್ಕೊಳಗಾದ,
ಹರಿಯ ಸಿಂಹಾಸನವಡಗಿತ್ತು.
ಅತೋ ನಾಸ್ತಿ, ಇತೋ ನಾಸ್ತಿ.
ರೋಮಜರೆಂಬವರು ಸಿಟ್ಟುಗುಟ್ಟಿ ತರುಮರನಡಿಯಲ್ಲಿದ್ದರು.
ಮಾರ್ಕಂಡೇಯಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ
ಲಿಂಗದ ನಿಜವನರಿಯನು.
ಇದು ಕಾರಣ ಕೂಡಲಸಂಗಮದೇವಾ,
ನೀವು ಮಾಡಿದ ಬಯಲು ಭಕ್ಷಿಸಿತ್ತು, ಅನಂತ ಹಿರಿಯರನು. ॥೪॥

೮೫೯

ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು
ಶಿವಜ್ಞಾನ, ಶಿವಭಕ್ತಿ,
ಲಿಂಗಸ್ಥಲವಳವಡದು, ಜಂಗಮಸ್ಥಲವಳವಡದು,
ಪಾದೋದಕ ಪ್ರಸಾದಸ್ಥಲವಳವಡದು.
ನರಕದಲ್ಲಿ ಬೀಳುವ ಕರ್ಮಿಗಳಿಗೆ
ಕೂಡಲಸಂಗನ ಶರಣರ ಅನುಭಾವ ನೆಲೆಗೊಳ್ಳದು. ॥೫॥

೮೬೦

ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ,
ಕರಿಯು ಕನ್ನಡಿಯೊಳಗಡಗಿದಂತಯ್ಯಾ!
ಗುಣಿ ಅವಗುಣಿಯೊಡನಾಡಿದಡೆ

ಅದೆ ಆತನ ಕರ್ಮದ ಫಲ ನೋಡಾ!
ಕೂಡಲಸಂಗನ ಶರಣರ ಅನುಭಾವ
ಭವದುಃಖಿಗಳಿಗೆ ವೇದ್ಯವಾಗದಯ್ಯಾ. ॥೬॥

೮೬೧

ಉಂಬ ಬಟ್ಟಲು ಬೇರೆ ಕಂಚಲ್ಲ,
ನೋಡುವ ದರ್ಪಣ ಬೇರೆ ಕಂಚಲ್ಲ,
ಭಾಂಡ ಒಂದೆ ಭಾಜನ ಒಂದೆ,
ಬೆಳಗೆ ಕನ್ನಡಿಯೆನಿಸಿತ್ತಯ್ಯಾ.
ಅರಿದಡೆ ಶರಣ, ಮರೆದಡೆ ಮಾನವ,
ಮರೆಯದೆ ಪೂಜಿಸು ಕೂಡಲಸಂಗನ. ॥೭॥

೮೬೨

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಜೆ ಚಿಪ್ಪು ಕಾಣಬಹುದು.
ವಾರುಧಿ ಮೈದೆಗೆದಡೆ ರತ್ನಮುತ್ತುಗಳ ಕಾಣಬಹುದು.
ಕೂಡಲಸಂಗನ ಶರಣರು ಮನದೆರೆದು ಮಾತನಾಡಿದಡೆ
ಲಿಂಗವ ಕಾಣಬಹುದು. ॥೮॥

೮೬೩

ಪುಣ್ಯಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯಾ?
ಇವನಾರುಂಬರು?
ಕಾಯ ತಾನುಂಬಡೆ ಕಾಯ ತಾ ಮಣ್ಣು,
ಜೀವ ತಾನುಂಬಡೆ ಜೀವ ತಾ ಬಯಲು,
ಈ ಉಭಯನಿರ್ಣಯವ ಕೂಡಲಸಂಗಮದೇವಾ,
ನಿಮ್ಮ ಶರಣ ಬಲ್ಲ. ॥೯॥

೮೬೪

ನಾರುಳಿಯ ಹಣಿದವನಾರಾದಡೆಯೂ ಆಡರೆ?
ನಾರುಳಿದಡೆ ಮುಂದೆ ಅಂಕುರಿತ ಫಲ ತಪ್ಪದು.

ಮಾಡುವನ್ನಕ್ಕ ಫಲದಾಯಕ!
ಮಾಟವರತು ನಿಮ್ಮಲ್ಲಿ ಸಯವಾದಡೆ
ಆತನೆ ಅಚ್ಚ ಶರಣನಯ್ಯಾ,
ಕೂಡಲಸಂಗಮದೇವಾ. ॥೧೦॥

೮೬೫

ಭಕ್ತನ ಮಠವೆಂದು ಜಂಗಮ ನಡೆದು ಬಂದಲ್ಲಿ,
ಆ ಭಕ್ತನು ಕಾಣುತ್ತ, ಆಸನ ತ್ಯಜತೆಯ ಮಾಡುತ್ತ,
ಕೊಂಕುತ್ತ, ಕೈಮುಗಿದು ನಿಂದಿರ್ದು, ಬಾಗಿ ಬಳುಕುತ್ತ,
'ಬಿಜಯಂ ಮಾಡಿ, ದೇವಾ' ಎಂದು ಕರೆದು, ಕುಳ್ಳಿರಿಸಿ,
ಪಾದಾರ್ಚನೆಯಂ ಮಾಡಿ, ಪಾದೋದಕಮಂ ಕೊಂಡು,
ವಿಭೂತಿ–ವೀಳೆಯಮಂ ಕೊಟ್ಟು,
ಕಂಗಳು ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ,
ಬಾಯಿ ತುಂಬಿ ಮಾತಾಡಿ, 'ಏಗೂದು ಏ ಬೆಸನೆ'ಂದು
ತನು ಕರಗಿ ಮನ ಕರಗಿ ನೋಡಿ, ಮಾಡುವುದು ಭಕ್ತಿಸ್ಥಲ.
ಬಡವನಾಗಲಿ, ಬಲ್ಲಿದನಾಗಲಿ, ಇನಿತು ಮುಖ್ಯವಾಗಿ
ಮಾಡಿಸಿಕೊಂಬುದು ಜಂಗಮಸ್ಥಲ.
ಈ ಎರಡೊಂದಾದ
ಘನವನಂತಿಂತೆಂದುಪಮಿಸಬಾರದಂತಿರಲಿ!
ಇನಿತಲ್ಲದೆ ಮಾಡಿದ ಮಾಟ ಭಕ್ತಿಸ್ಥಲಕ್ಕೆ ಸಲ್ಲದು,
ಫಲದಾಯಕ[ವೈ]ಸೆ!
ಇನಿತಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು,
ಉಪಜೀವಿತ[ವೈ]ಸೆ?
ಈ ಎರಡಕ್ಕೆಯೂ ಭವ ಹಿಂಗದು, ಕಾಣಾ,
ಕೂಡಲಸಂಗಮದೇವಾ. ॥೧೧॥

೮೬೬

ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತ್ತು,
[ಜಂಗಮ]ನಿಷ್ಠೆ ತ್ಯಾಗದಲ್ಲಿ ಬೀಯವಾಯಿತ್ತು,

ಪ್ರಸಾದನಿಷ್ಠೆ ಬೆರಕೆಯಲ್ಲಿ ಬೀಯವಾಗಿತ್ತು.
ಒಂದೊಂದರ ನಿಷ್ಠೆ ಅಂದಂದಿಗೆ ಬೀಯವಾಗಿತ್ತು,
ಕೂಡಲಸಂಗಮದೇವನ ಭಕ್ತಿ ತ್ರಿಜಗವನಾಳಿಗೊಂಡಿತ್ತು. ॥೧೨॥

೮೬೭

ತೆರನನರಿವುದು ಅಪೂರ್ವ,
ಅರಿದು ಮರೆವುದು ಅಪೂರ್ವ,
ಕೂಡೆ ಶರಣೆಂಬುದು ಅಪೂರ್ವ.
ಕೂಡಲಸಂಗಮದೇವನ
ಭಕ್ತಿ ಅಭಿಮಾನಿಯ ಜವ್ವನದಂತೆ. ॥೧೩॥

೮೬೮

ಐದು ಮಾನವ ಕುಟ್ಟಿ ಒಂದು ಮಾನವ ಮಾಡು,
ಕಂಡಾ ಮದವಳಿಗೆ!
ಇದು ನಮ್ಮ ಬಾಳುವೆ,
ಮದವಳಿಗೆ!
ಇದು ನಮ್ಮ ವಿಸ್ತಾರ,
ಮದವಳಿಗೆ!
ಮದವಳಿದು ನಿಜವುಳಿದ ಬಳಿಕ ಅದು ಸತ್ಯ ಕಾಣಾ,
ಕೂಡಲಸಂಗಮದೇವಾ. ॥೧೪॥

೮೬೯

ಕುಲಮದವಳಿಯದನ್ನಕ್ಕ ಶರಣನಾಗಲೇಕೆ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ?
ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು.
ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು,
ಕೂಡಲಸಂಗಮದೇವಾ ನಿಮ್ಮ ಶರಣರು. ॥೧೫॥

೮೭೦

ಮಣ್ಣ ಮಡಕೆ ಮಣ್ಣಾಗದು ಕ್ರೀಯಳಿದು,
ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು,
ಹೊನ್ನು ಕಬ್ಬುನವಾಗದು ಕ್ರೀಯಳಿದು,
ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯಳಿದು,
ಕೂಡಲಸಂಗನ ಶರಣನಾಗಿ
ಮರಳಿ ಮಾನವನಾಗ ಕ್ರೀಯಳಿದು. ॥೧೬॥

೮೭೧

ಪೂರ್ವಜನ್ಮನಿವೃತ್ತಿಯಾಗಿ ಗುರುಕರುಣವಿಡಿದಂಗೆ
ಬಂಧನವೆಲ್ಲಿಯದೊ?
ಭವಬಂಧನವೆಲ್ಲಿಯದೊ_
ಸಂಕಲ್ಪ-ವಿಕಲ್ಪವೆಂಬ ಸಂದೇಹ ಕಳೆದುಳಿದಂಗೆ,
ಕೂಡಲಸಂಗಮದೇವರ ತ್ರಿಸಂಧ್ಯಾಕಾಲದಲ್ಲಿ ಮಾಣದೆ ನೆನೆವಂಗೆ! ॥೧೭॥

೮೭೨

ಲಗ್ನವೆಲ್ಲಿಯದೊ,
ವಿಘ್ನವೆಲ್ಲಿಯದೊ, ಸಂಗಯ್ಯಾ?
ದೋಷವೆಲ್ಲಿಯದೊ,
ದುರಿತವೆಲ್ಲಿಯದೊ, ಸಂಗಯ್ಯಾ?
ನಿಮ್ಮ ನೆನೆವಂಗೆ ಭವಕರ್ಮವೆಲ್ಲಿಯದೊ
ಕೂಡಲಸಂಗಯ್ಯಾ? ॥೧೮॥

ಶರಣನ ಶರಣಸ್ಥಲ

೮೭೩

ಶರಣ ನಿದ್ರೆಗೈದಡೆ ಜಪ ಕಾಣಿರೊ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ,
ಶರಣ ನಡೆದುದೆ ಪಾವನ ಕಾಣಿರೊ,

ಶರಣ ನುಡಿದುದೆ ಶಿವತತ್ವ ಕಾಣಿರೊ,
ಕೂಡಲಸಂಗನ ಶರಣನ ಕಾಯವೆ ಕೈಲಾಸ ಕಾಣಿರೊ! ॥೧೯॥

೮೭೪

ಉಪಮಿಸಬಾರದ ಉಪಮಾತೀತರು,
ಕಾಲಕರ್ಮರಹಿತರು, ಭವವಿರಹಿತರು,
ಕೂಡಲಸಂಗಮದೇವಾ, ನಿಮ್ಮ ಶರಣರು. ॥೨೦॥

೮೭೫

ಭವಕ್ಕೆ ಹುಟ್ಟುವನಲ್ಲ, ಸಂದೇಹ ಸೂತಕಿಯಲ್ಲ,
ಆಕಾರ ನಿರಾಕಾರನಲ್ಲ ನೋಡಯ್ಯಾ.
ಕಾಯವಂಚಕನಲ್ಲ, ಜೀವವಂಚಕನಲ್ಲ,
ಶಂಕೆಯಿಲ್ಲದ ಮಹಾಮಹಿಮ ನೋಡಯ್ಯಾ.
ಕೂಡಲಸಂಗನ ಶರಣನುಪಮಾತೀತ, ನೋಡಯ್ಯಾ. ॥೨೧॥

೮೭೬

ಬ್ರಹ್ಮಂಗೆ ವಾಕ್ಪರುಷ,
ವಿಷ್ಣುವಿಂಗೆ ನಯನಪರುಷ,
ರುದ್ರಂಗೆ ಹಸ್ತಪರುಷ,
ನಮ್ಮ ಕೂಡಲಸಂಗನ ಶರಣಂಗೆ ಪಾದವೇ ಪರುಷ! ॥೨೨॥

೮೭೭

ಸಮುದ್ರ ಘನವೆಂಬೆನೆ!
ಧರೆಯ ಮೇಲಡಗಿತ್ತು.
ಧರೆ ಘನವೆಂಬೆನೆ! ನಾಗೇಂದ್ರನ
ಫಣಾಮಣಿಯ ಮೇಲಡಗಿತ್ತು,
ನಾಗೇಂದ್ರನ ಘನವೆಂಬೆನೆ!
ಪಾರ್ವತಿಯ ಕಿರುಕುಣಿಕೆಯ
ಮುದ್ರಿಕೆಯಾಯಿತ್ತು.

ಅಂತಹ ಪಾರ್ವತಿ ಘನವೆಂಬೆನೆ!
ಪರಮೇಶ್ವರನ ಅರ್ಧಾಂಗಿಯಾದಳು,
ಅಂತಹ ಪರಮೇಶ್ವರ ಘನವೆಂಬೆನೆ!
ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು. ॥೨೩॥

೮೭೮

ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ,
ಅನುಭಾವಲಿಂಗವಿಡಿದು ಮಾರ್ಗಕ್ರೀಲಿಂಗಸಿದ್ಧಿ,
ಮಾರ್ಗಕ್ರೀಲಿಂಗವಿಡಿದು ಮೀರಿದ ಕ್ರೀಲಿಂಗಸಿದ್ಧಿ,
ಮೀರಿದ ಕ್ರೀಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ,
ಇದು ಕಾರಣ, ಕೂಡಲಸಂಗಮದೇವಾ ಲಿಂಗವಿಡಿದು ಲಿಂಗಸಿದ್ಧಿ. ॥೨೪॥

೮೭೯

ನೆಲನೊಂದೆ: ಹೊಲಗೇರಿ ಶಿವಾಲಯಕ್ಕೆ,
ಜಲವೊಂದೆ: ಶೌಚಾಚಮನಕ್ಕೆ,
ಕುಲವೊಂದೆ: ತನ್ನ ತಾನರಿದವಂಗೆ,
ಫಲವೊಂದೆ: ಷಡುದರುಶನ ಮುಕ್ತಿಗೆ,
ನಿಲವೊಂದೆ: ಕೂಡಲಸಂಗಮದೇವಾ,
ನಿಮ್ಮನರಿದವಂಗೆ. ॥೨೫॥

ಶರಣನ ಭಕ್ತಸ್ಥಲ

೮೮೦

ಮಧ್ಯಪಿಂಡಂಗಳೆಲ್ಲವೂ
ಶಿವನಿದ್ದೆಡೆಯನರಿಯವು,
ಪೂರ್ವಪಿಂಡಂಗಳೆಲ್ಲವೂ
ಶಿವನಾದ್ಯಂತವನರಿಯವು,
ಕಾಲಪಿಂಡಗಳೆಲ್ಲವೂ

ಶಿವನ ನಿಲುಕಡೆಯನರಿಯದೆ
ಕಾಲಚಕ್ರದೊಳಗಾದವೆಲ್ಲವು.
ಸಂಶಯಪಿಂಡಂಗಳೆಲ್ಲವ ಮರೆದು
ನಿಮ್ಮ ಶರಣರ ಸೇವೆಯಲ್ಲಿರಿಸಯ್ಯಾ,
ಕೂಡಲಸಂಗಮದೇವಾ. ॥೨೬॥

೮೮೧

ಪರಮತತ್ವದ ನಿಜಸಂಯುಕ್ತರ,
ಆನು ನೀನೆಂಬ ಶಬ್ದಸುಖಿಗಳ ತೋರಾ ಎನಗೆ.
ಮಹಾನುಭಾವರ ತೋರಾ ಎನಗೆ.
ಲಿಂಗೈಕ್ಯರ, ಲಿಂಗಸುಖಿಗಳ, ಲಿಂಗಗೂಡಾಗಿಪ್ಪರ,
ಲಿಂಗಾಭಿಮಾನಿಗಳ ತೋರಾ ಎನಗೆ.
ಅಹೋರಾತ್ರಿ ನಿಮ್ಮ ಶರಣರ ಸೇವೆಯಲ್ಲಿರಿಸು
ಕೂಡಲಸಂಗಮದೇವಾ. ॥೨೭॥

೮೮೨

ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ
ಮಹಾನುಭಾವರ ಕಾಣಬಹುದಯ್ಯಾ.
ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು,
ಲಿಂಗವನರಿಯಬಹುದು,
ಜಂಗಮವನರಿಯಬಹುದು,
ಪ್ರಸಾದವನರಿಯಬಹುದು,
ತನ್ನ ತಾನರಿಯಬಹುದು.
ಇದು ಕಾರಣ, ನಿಮ್ಮ ಸಜ್ಜನ ಸದ್ಭಾವಿಗಳ ಸಂಗವನೆ ಕರುಣಿಸು
ಕೂಡಲಸಂಗಮದೇವಾ, ನಿಮ್ಮ ಧರ್ಮ. ॥೨೮॥

೮೮೩

ಮರಮರ ಮಥನದಿಂದ ಅಗ್ನಿ ಹುಟ್ಟಿ
ಆ ಮರನೆಲ್ಲವ ಸುಡದಿಪ್ಪುದೆ?

ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
ಎನ್ನ ತನುಗುಣವೆಲ್ಲವ ಸುಡದಿಪ್ಪುದೆ?
ಇದು ಕಾರಣ, ಮಹಾನುಭಾವರ ತೋರಿಸು
ಕೂಡಲಸಂಗಮದೇವಾ. ॥೨೯॥

೮೮೪

ಅರಿದುದ ಅರಿಯಲೊಲ್ಲದು, ಅದೆಂತಯ್ಯಾ!
ಮರೆದುದ ಮರೆಯಲೊಲ್ಲದು, ಅದೆಂತಯ್ಯಾ!
ಅರಿದು ಮರೆದ ಮನವ ಕೂಡಲಸಂಗಯ್ಯ ಬಲ್ಲ. ॥೩೦॥

೮೮೫

ಮೀಸಲು ಬೀಸರವಾಗದ ಪರಿಯ ನೋಡಾ:
ಕಾಲು ತಾಗಿದ ಅಗ್ಘವಣಿ,
ಕೈಮುಟ್ಟಿದ ಅರ್ಪಿತ,
ಮನಮುಟ್ಟಿದ ಆರೋಗಣೆಯನೆಂತು ಘನವೆಂಬೆನಯ್ಯಾ?
ಬಂದ ಪರಿಯಲಿ ಪರಿಣಾಮಿಸಿ,
ನಿಂದ ಪರಿಯಲಿ ನಿಜಮಾಡಿ,
ಆನೆಂದ ಪರಿಯಲಿ ಕೈಕೋ
ಕೂಡಲಸಂಗಮದೇವಾ. ॥೩೧॥

೮೮೬

ಹಾಲೆಂಜಲು ಪೆ[ಯ್ಯ]ನ,
ಉದಕವೆಂಜಲು ಮತ್ಸ್ಯದ,
ಪುಷ್ಪವೆಂಜಲು ತುಂಬಿಯ,
ಎಂತು ಪೂಜಿಸುವೆ ಶಿವಶಿವಾ,
ಎಂತು ಪೂಜಿಸುವೆ?
ಈ ಎಂಜಲವನತಿಗಳೆವಡೆ ಎನ್ನಳವಲ್ಲ.
ಬಂದುದ ಕೈಕೋ ಕೂಡಲಸಂಗಮದೇವಾ. ॥೩೨॥

೮೮೭

ಶುದ್ಧವಾಯಿತ್ತೆಂಬೆನೆ ಸುಯಿಧಾನಿ ನಾನಲ್ಲ,
ಅನುವಾಯಿತ್ತೆಂಬೆನೆ ಅವಧಾನಿ ನಾನಲ್ಲ,
ಸುಯಿಧಾನ ಅವಧಾನ ಅರ್ಪಿತವ ನಾನರಿಯೆ.
ಇದ್ದ ಪರಿಯಲಿ ನೀಡಿದಡೆ, ಬಂದ ಪರಿಯಲಿ ಕೈಕೋ
ಕೂಡಲಸಂಗಮದೇವಾ. ॥೩೩॥

೮೮೮

ಪಾದಾರ್ಚನೆಯ ಮಾಡುವೆನಯ್ಯಾ,
ಪಾದೋದಕದ ಹಂಗಿಗೆ.
ಶರಣಾರ್ಥಿಯೆಂಬೆನಯ್ಯಾ ಒಕ್ಕುದ ಕೊಂಬ ಹಂಗಿಗೆ.
ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ, ಭಕ್ತಿ.
ಕೂಡಲಸಂಗನ ಶರಣರ ನಿಲವನರಿಯದೆ,
ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯಾ ಎನ್ನ ಭಕ್ತಿ. ॥೩೪॥

೮೮೯

'ಯಸ್ಯ ಕ್ರಿಯಾ ತಸ್ಯ ಭವತಿ' ಎಂದು ಕಟ್ಟಾಚಾರದಲು ಇದ್ದು,
ನಾನು ಅನುಸರಿಸಿಕೊಂಡು ನಡೆವನ್ನಕ್ಕ ಕರ್ಮಕಾಂಡಿಯಲ್ಲ.
ಉತ್ಪತ್ತಿ-ಸ್ಥಿತಿ-ಭೋಗ-ಭುಕ್ತಿ ಕಾಯವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ,
ಪರವು ಸಾಧ್ಯವಾಯಿತ್ತೆಂದು ಕ್ರೀಯೆಲ್ಲವ ಮೀರಿ ನಡೆವೆನು.!
ಪರತತ್ವವನರಿದೆಹೆನೆಂಬನ್ನಕ್ಕ ಜ್ಞಾನಕಾಂಡಿಯಲ್ಲ.
ಇನ್ನು ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡ
ಈ ತ್ರಿವಿಧದಲ್ಲಿ ವಂಚಕನಾದಡೆ ಈಸು ವಿಧದೊಳಗೆ ಅಂಗವಿಲ್ಲ,
ಮೇಲೆ ಸತ್ಪುರುಷರ ಸಂಗವಿಲ್ಲ, ಯುಕ್ತಿಯಿಲ್ಲ, ಭಕ್ತಿಯೆಂತಹುದಯ್ಯಾ?
ಬಲ್ಲವರ ಬೆಸಗೊಂಡಡೆ ಎನ್ನ ಬಿಮ್ಮು ಕೆಟ್ಟಿಹುದೆಂದು
ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ.
ಕೂಡಲಸಂಗಮದೇವಾ, ಎನ್ನ ಗುಣವ ನೋಡದೆ
ಶಿವರಾತ್ರಿಯ ಸಂಕಣ್ಣಗಳಿಗೆ ಕರುಣಿಸಿದಂತೆ
ಎನಗೆ ಕೃಪೆಮಾಡಯ್ಯಾ. ॥೩೫॥

೮೯೦

ಕಳಾಬಿಂದು ವಟಾಮುಖಿಯೆಂಬ ಹೆಂಗೂಸಿನ ಕೈಯಲು
ಜಲಾಕಾರವೆಂಬ ಗಡಿಗೆಯಿದ್ದಿತ್ತು.
ಆ ಗಡಿಗೆಯಲ್ಲಿ ಚೆನ್ನಬಸವಣ್ಣ ನೀರ ತಂದ.
ಮಡಿವಾಳಯ್ಯ ಸಯದಾನವ ತಂದ,
ಇದರ ಒಲೆಯಡಿಯನುರುಹಿ ಕೊಡಾ
ಪ್ರಭುವೆ ಕೂಡಲಸಂಗಮದೇವಾ. ॥೩೬॥

೮೯೧

ದಿಟವ ಮಾಡಿ ಪೂಜಿಸಿದಡೆ ಸಟೆಯ ಮಾಡಿ ಕಳೆವೆ.
ಸಟೆಯ ಮಾಡಿ ಪೂಜಿಸಿದಡೆ ದಿಟವ ಮಾಡಿ ಕಳೆವೆ.
ಏನೆಂಬೆ ಎಂತೆಂಬೆ?
ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ,
ಆನು ಮಾಡಿದ ಭಕ್ತಿ ಎನಗಿಂತಾಯಿತ್ತು
ಕೂಡಲಸಂಗಮದೇವಾ. ॥೩೭॥

೮೯೨

ಎಂಬತ್ತೆಂಟುಪವಾಡವ ಮೆರೆದು ಹಗರಣದ ಚೋಹದಂತಾಯಿತೆನ್ನ ಭಕ್ತಿ.
ತನುವಿನೊಳಗೆ ಮನ ಸಿಲುಕದೆ ಮನದೊಳಗೆ ತನು ಸಿಲುಕದೆ
ತನು ಅಲ್ಲಮನಲ್ಲಿ ಸಿಲುಕಿತ್ತು, ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು.
ನಾನೇತರಲ್ಲಿ ನೆನೆವೆನಯ್ಯಾ,
ಕೂಡಲಸಂಗಮದೇವಾ. ॥೩೮॥

೮೯೩

ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಸಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ.
ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ. ॥೩೯॥

೮೯೪

“ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯಾ”
“ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ
ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ,
ಲಿಂಗ ನೀನೇ ಅಯ್ಯಾ” ಕೂಡಲಸಂಗಮದೇವಾ. ॥೪೦॥

ಶರಣನ ಮಾಹೇಶ್ವರಸ್ಥಲ

೮೯೫

ಪರಮಪ್ರಭುವೇ,
ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದಡೆ
ಆನು ಸೈರಿಸಿದೆನಯ್ಯಾ,
ಕುಲಮದ ಛಲಮದವಿದೇನಯ್ಯಾ!
ದರುಶನಭ್ರಾಂತಿಯಿದೇನಯ್ಯಾ!
ಕ್ರಿಯಾಕರ್ಮಸೂತಕವಿದೇನಯ್ಯಾ!
‘ಯದ್ಯಪಿ ಸ್ಯಾತ್ ತ್ರಿಕಾಲಜ್ಞಃ ತ್ರೈಲೋಕ್ಯಾಕರ್ಷಣಕ್ಷಮಃ
ತಥಾ ಪಿ ಲೌಕಿಕಾಚಾರಂ ಮನಸಾಪಿ ನ ಲಂಘಯೇತ್’
ಇಂತೆಂಬುದ ಮೀರಿದೆನಾಗಿ,
ಲಿಂಗಯ್ಯಾ ನಿಮ್ಮ ನಂಬಿದೆನಯ್ಯಾ.
ಇನ್ನು ಕಲಿಯುಗದಲ್ಲಿ ಬಳಸಿದಡೆ
ಕೂಡಲಸಂಗಮದೇವಾ, ನಿಮ್ಮ ರಾಣಿವಾಸದಾಣೆ. ॥೪೧॥

೮೯೬

ತನುಮನಧನವೆಂಬ ಕನ್ನಡಿ ನೋಡಯ್ಯಾ,
ಎನ್ನದೂ ಅಲ್ಲ, ನಿನ್ನದೂ ಅಲ್ಲ,
ಬರಿಯ ಭ್ರಮೆಯ ಮಾತು.
ಆ ಭ್ರಮೆಗೊಳಗಾಗೆ, ನಿಮ್ಮ ಶ್ರೀಚರಣವ ಬಿಡೆ,
ಕೂಡಲಸಂಗಮದೇವಾ. ॥೪೨॥

೪೯೭

ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣನೈಕ್ಯನು
ಮೆಲ್ಲ ಮೆಲ್ಲನೆ ಆದೆಹೆನೆಂಬನ್ನಬರ ನಾನು ವಜ್ರದೇಹಿಯೆ?
ನಾನೇನು ಅಮೃತವ ಸೇವಿಸಿದೆನೆ?
ಆನು ಮರುಜವಣಿಯ ಕೊಂಡೆನೆ?
ನುಡಿದ ನುಡಿಯೊಳಗೆ ಷಡುಸ್ಥಲ ಬಂದು
ಎನ್ನ ಮನವನಿಂಬುಗೊಳ್ಳದಿದ್ದಡೆ,
ಸುಡುವೆನೀ ತನುವ ಕೂಡಲಸಂಗಮದೇವಾ. ॥೪೩॥

೪೯೮

ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು,
ಛಲಗೆಟ್ಟಡೆ ಕೆಡಬಹುದಲ್ಲದೆ ಭಕ್ತಿಯ ಅನು ಕೆಡಬಾರದು,
ಭಕ್ತಿಯ ಅನು ಕೆಟ್ಟಡೆ ಕೆಡಬಹುದಲ್ಲದೆ ಆಯತ ಕೆಡಬಾರದಯ್ಯಾ,
ಆಯತ ಕೆಟ್ಟಡೆ ಕೆಡಬಹುದಲ್ಲದೆ ಸ್ವಾಯತ ಕೆಡಬಾರದಯ್ಯಾ.
ಎಲೆ ಕೂಡಲಸಂಗಮದೇವಯ್ಯಾ, ಮುನ್ನ ಮುಟ್ಟಿತ್ತೆ ಮುಟ್ಟಿತ್ತು,
ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ. ॥೪೪॥

೪೯೯

ಅಷ್ಟವಿಧಾರ್ಚನೆ ಷೋಡಶೋಪಚಾರವಲ್ಲದೆ
ನಿಮ್ಮ ಮುಟ್ಟಲರಿಯದವರ ಕಂಡಡೆ, ಅಯ್ಯ ಎಂತೆಂಬೆನವರ?
ಆವ ಭಾವದಲ್ಲಿ, ಆವ ಜ್ಞಾನದಲ್ಲಿ, ಆವ ಮುಖದಲ್ಲಿ
ಅರಿವವರದಾರಯ್ಯಾ? ಏನೆಂಬೆ?
ನಿಮ್ಮಲ್ಲಿ ಸಮ್ಯಕ್ಕರಾದ ಸತ್ಯಶರಣರ ಕಂಡು,
ಕೂಡಲಸಂಗಮದೇವಾ, ಅವರನಯ್ಯ ಎಂಬೆನು. ॥೪೫॥

೫೦೦

ಮರನ ಹೂವ ಕೊಯಿದು ಮರಕ್ಕೇರಿಸಿ,
ನದಿಯುದಕವ ನದಿಗರ್ಪಿತವ ಮಾಡಿ,
ಕರುವನಗಲಿಸಿ, ತಾಯ ಮರುಗಿಸಿ ಮೊಲೆವಾಲ ಕರೆದುಣಬೇಡವೋ!

ಕೂಡಲಸಂಗಮದೇವ ಮಾಡಿದ ಮಾಯೆ,
ಹಲಬರ ಬಾಯ ಟೊಣೆದೇ ಹೋಯಿತ್ತು. ॥೪೬॥

೬೦೧

ತಾಪತ್ರಯವೆಂದಡೆ ರೂಪ ಕಾಣುತ್ತ ಕನಲಿದ,
ಕೋಪದಲ್ಲಿ ಶಿವಕಳೆಯಾದ ಕರಡಿಗೆಯನೆ ಮುರಿದ,
ಧೂಪದ ಗುಂಡಿಗೆಯನೊಡೆದ, ದೀಪಾರತಿಯ ನಂದಿಸಿದ,
ಬಹ ಪರಿಯಾಣದೋಗರವ ತುಡುಕಿದ,
ಪಾಪಕರ್ಮಸಂಹರನು ಕೂಡಲಸಂಗಮದೇವಾ, ನಿಮ್ಮ ಶರಣ. ॥೪೭॥

೬೦೨

ಈ ಲೋಕದ ಭೀತರು, ಆ ಲೋಕದ ಕಲಿಗಳು,
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯರೆಲ್ಲರು
ಅಜನಿತಂಗೆ ಸರಿಯೆ?
ಮೂಜಗದಲ್ಲಿ ನಿ[ರು]ತರು ಕೂಡಲಸಂಗನ ಶರಣರು
ತ್ರಿವಿಧವನರಿಯರು. ॥೪೮॥

೬೦೩

ತಾಗು ನಿರೋಧದ, ಆಗುಹೋಗನರಿಯದ
ಶರಣನ ಚರಿತ್ರವ ನೋಡಿ ನೋಡಿ ಬೆರಗಾದೆನಯ್ಯಾ,
ಕೂಡಲಸಂಗಮದೇವಯ್ಯನಲ್ಲಿ ತಾನು ಸುಯಿಧಾನಿಯಾ[ಗೆ]. ॥೪೯॥

೬೦೪

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ,
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ.
ನೀನು ಜಗಕ್ಕೆ ಬಲ್ಲಿದನು,
ಆನು ನಿನಗೆ ಬಲ್ಲಿದನು, ಕಂಡಯ್ಯಾ.
ಕರಿಯು ಕನ್ನಡಿಯೊಳಗಡಗಿದಂತಯ್ಯಾ,
ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ. ॥೫೦॥

೯೦೫

ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ,
ಎನಗೆಯೂ ನಿನಗೆಯೂ ಸಮಯಾಚಾರ ಸರಿ.
ಕೂಡಲಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ. ॥೫೧॥

೯೦೬

ಶುದ್ಧಾತ್ಮ ಪರಮಾತ್ಮರಿಬ್ಬರೂ
ಒಂದು ರತ್ನಕ್ಕೆ ಹೆಣಗಾಟವನಾಡಿಹರು.
ಅವರ ಹೆಣಗಾಟವ ನೋಡಿ ಆ ರತ್ನವ ಸೆಳೆದುಕೊಂಡಡೆ
ಕೂಡಲಸಂಗಮದೇವಂಗಾರೋಗಣೆಯಾಯಿತ್ತು. ॥೫೨॥

೯೦೭

ಆ ರತ್ನ ಪ್ರಸಾದವನಾರಾಧಿಸುತ್ತಿರಲು
ಆ ಪ್ರಸಾದವಲ್ಲಿ ಬೀಳುತ ಆಳುತ್ತಿದ್ದಿತ್ತು, ನೋಡಾ.
ಅದ ಹಲಬರು ನೋಡಿ ನೋಡಿ ಹೋಗುತ್ತಿದ್ದರು.
ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು.
ಇದ ಪದಾರ್ಥವ ಮಾಡಿಕೊಡಯ್ಯಾ
ಕೂಡಲಸಂಗಮದೇವಾ. ॥೫೩॥

೯೦೮

ಎಲ್ಲರ ಗಂಡರು ಬೇಂಟೆಯ ಹೋದರು,
ನೀನೇಕೆ ಹೋಗೆ, ಎಲೆ ಗಂಡನೆ?
ಸತ್ತುದ ತಾರದಿರು, ಕೈಮುಟ್ಟಿ ಕೊಲ್ಲದಿರು.
ಅಡಗಿಲ್ಲದೆ ಮನೆಗೆ ಬಾರದಿರು.
ದೇವರ ಧರ್ಮದಲೊಂದು ಬೇಂಟೆ ದೊರೆಕೊಂಡಡೆ
ಕೂಡಲಸಂಗಮದೇವಂಗರ್ಪಿತ ಮಾಡುವೆ, ಎಲೆ ಗಂಡನೆ. ॥೫೪॥

ಶರಣನ ಪ್ರಾಣಲಿಂಗಿಸ್ಥಲ

೯೦೯

ಕಣ್ಣೊಳಗೆ ಕಣ್ಣಿದ್ದು
ಕಾಣಲೇಕರಿಯರಯ್ಯಾ?
ಕಿವಿಯೊಳಗೆ ಕಿವಿಯಿದ್ದು
ಕೇಳಲೇಕರಿಯರಯ್ಯಾ?
ಘ್ರಾಣದೊಳಗೆ ಘ್ರಾಣವಿದ್ದು
ವಾಸಿಸಲೇಕರಿಯರಯ್ಯಾ?
ಜಿಹ್ವೆಯೊಳಗೆ ಜಿಹ್ವೆಯಿದ್ದು
ರುಚಿಸಲೇಕರಿಯರಯ್ಯಾ?
ಸ್ಪರ್ಶನದೊಳಗೆ ಸ್ಪರ್ಶನವಿದ್ದು
ಮುಟ್ಟಲೇಕರಿಯರಯ್ಯಾ?
ಪ್ರಾಣದೊಳಗೆ ಪ್ರಾಣವಿದ್ದು
ನೆನೆಯಲೇಕರಿಯರಯ್ಯಾ?
ಕಾಯದೊಳಗೆ ಕಾಯವಿದ್ದು
ಬಿಡದು, ಬೇರಾಗದು.
ಕೂಡಲಸಂಗಮದೇವಾ,
ನೀನಿಕ್ಕಿದ ಅಣಕದ ಭೇದವ ಭೇದಿಸಬಾರದಯ್ಯಾ. ॥೫೫॥

೯೧೦

ಗ್ರಹ ಬಂದು ಆವರಿಸಲೊಡನೆ ತನ್ನ ಮರೆಸುವುದು,
ಮತ್ತೊಂದಕ್ಕೆ ಇಂಬುಗೊಡಲೀಯದಯ್ಯಾ.
ಕೂಡಲಸಂಗಮದೇವನ ಅರಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ. ॥೫೬॥

೯೧೧

ಭೂತಿಕನ ಸೀರೆಯ ಸಾತ್ವಿಕ ನೆರೆ ಉಟ್ಟಡೆ
ಭೂತಿಕ ಸಾತ್ವಿಕನಾದ, ಸಾತ್ವಿಕ ಭೂತಿಕನಾದ.

ಈ ಮಾತು ಬಿದ್ದುದು ನೋಡಾ, ರಾಜಬೀದಿಯಲ್ಲಿ.
ಅಯ್ಯಾ, ಭೂತ ಕೆಣಕಿದಡಿಲ್ಲ, ಮಾತ ಮುಚ್ಚಿದಡಿಲ್ಲ
ಓತು ಕೂಡುವ ಅನುವ,
ಕೂಡಲಸಂಗಮದೇವ ತಾನೆ ಬಲ್ಲ. ॥೫೭॥

ಶರಣನ ಐಕ್ಯಸ್ಥಲ

೯೧೨

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ!
ಅಂಗವಿದ್ಯೆಯನೊಲ್ಲ,
ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ,
ಕೈಯ ತೊಳೆದಲ್ಲದೆ ಮುಟ್ಟಲೀಯ,
ಕಾಲ ತೊಳೆದಲ್ಲದೆ ಹೊಂದಲೀಯ.
ಇಂತೀ ಸರ್ವಾಂಗ ತಲೆದೊಳೆದ ಕಾರಣ,
ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ ॥೫೮॥

೯೧೩

ಅಳಿಯನ ಕಂಡಡೆ ನಾಚೆಂಬೆ ಮಗಳೆ,
ಅಳಿಯನ ಕಂಡಡೆ ತೊಲಗೆಂಬೆ ಮಗಳೆ,
ನಾಚುವಡೆ ಮರೆಯಿಲ್ಲ, ತೊಲಗುವಡೆ ಎಡೆಯಿಲ್ಲ.
ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲ್ಲಿಯ ಮೊರೆ ಮಗಳೆ?
ಕೂಡಲಸಂಗಮದೇವಯ್ಯನೆಂಬ ಗಂಡನಾದ ಬಳಿಕ
ಇನ್ನೆಲ್ಲಿಯ ಮೊರೆ ಮಗಳೆ? ॥೫೯॥

೯೧೪

ಸತ್ಯವಿದೆ, ಸಮಾಧಾನವಿದೆ,
ಮನಕ್ಕೆ ಬಾರದಿದೇನಯ್ಯಾ?
ಸರ್ವಸನುಮತವೆಂಬ ಸುಖವಿದೆ,

ಮನಕ್ಕೆ ಸೋಂಕದಿದೇನಯ್ಯಾ?
ಆನೀನೆಂಬುದೊಂದು ಘನವಿದೆ,
ಕೂಡಲಸಂಗಮದೇವಾ, ಭ್ರಮೆಯೋ. ॥೬೦॥

೯೧೫

ಸಿನೆ ಬಂಜೆಯರಿಗೊಬ್ಬ ಮಗ ಹುಟ್ಟಿ,
ಅವನೆನ್ನ ರಿಣಕ್ಕೊಡೆಯನಾದ,
ಅವನೆನ್ನ ಧನಕ್ಕೊಡೆಯನಾದ,
ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ.
ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದಡೆ,
ಇದ್ದನಯ್ಯಾ ಕಾಯ ಮಾತೆಯಾಗಿ, ಜೀವ ಪಿತನಾಗಿ
ನಾನಿರಿಸಿದಂತೆ. ॥೬೧॥

೯೧೬

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ,
ಮಾಟವುಳ್ಳನ್ನಬರ ಜಂಗಮವ ಹಾಡಿದೆ,
ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ.
ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ ಕಾಣಾ,
ಕೂಡಲಸಂಗಮದೇವಾ. ॥೬೨॥

೯೧೭

ಅನಾಯಸದಿಂದ ಮನೆಯ ಮಾಡಿ,
ನಿರಾಯಾಸದಿಂದ ಪರಮಸುಖಿ!
ರೂಪಿಸುವಲ್ಲಿ ರೂಪಾಧಿಕ,
ನೋಡುವಲ್ಲಿ ನೋಟ ಘನ.
ಇಂತಹ ಸಹಜಸಂಗಿಯ ನಿಲವಿನ ಪರಿ;
ಉದಕದೊಳಗಣ ಬಿಂದು ಉದಯರತ್ನದಂತೆ
ಕೂಡಲಸಂಗನ ಶರಣರ ನಿಲವು. ॥೬೩॥

೯೧೮

ಮರುಳುತಲೆ ಹುರುಳುತಲೆ ನೀನೆ ದೇವಾ,
ಹೆಂಗೂಸು ಗಂಡುಗೂಸು ನೀನೇ ದೇವಾ,
ಎಮ್ಮಕ್ಕನ ಗಂಡ ನೀನೇ ದೇವಾ.
ಕೂಡಲಸಂಗಮದೇವಾ,
ಭ್ರಾಂತಳಿದು ಭಾವನಿಂದುದಾಗಿ . ॥೬೪॥

೯೧೯

ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ,
ತೆರಹಿಲ್ಲದ ಸಂಭಾಷಣೆ ಸುಖವು.
ತೆರಹಿಲ್ಲದೆನಂಬಿದೆ, ಸ್ವಾನುಭಾವ ಸುಖವು,
ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ
ಕೂಡಲಸಂಗಮದೇವಾ, ನಿಮ್ಮ ಶರಣಂಗೆ! ॥೬೫॥

❖❖

ಐಕ್ಯಸ್ಥಲ

ಐಕ್ಯನ ಜ್ಞಾನಿಸ್ಥಲ

೯೨೦

ಮೂರರಪ್ಪಾಯನ ಐದು ಬೆಟ್ಟವನಿಂಬುಗೊಂಡು,
ಅಕಟಕಟಾ, ಮಾಡಿ ಕೆಟ್ಟರು. ಮಾಡದೆ ಕೆಟ್ಟರು,
ನೀಡಿ ಕೆಟ್ಟರು, ನೀಡದೆ ಕೆಟ್ಟರು.
ಕೂಡಲಸಂಗಮದೇವನ ಬಸಿರ ಮಧ್ಯದ
ಬಯಲ ಸಮಾಧಿಯಲಿಕ್ಕದೆ ಕೆಟ್ಟರು. ॥೧॥

೯೨೧

ಉಮಾಧಿನಾಥರು ಕೋಟಿ, ಪಂಚವಕ್ತ್ರರು ಕೋಟಿ,
ನಂದಿವಾಹನರೊಂದು ಕೋಟಿ ನೋಡಯ್ಯಾ.
ಸದಾಶಿವರು ಕೋಟಿ, ಗಂಗೆವಾಳುಕ ಸಮಾರುದ್ರರಿವರೆಲ್ಲರು
ಕೂಡಲ ಸಂಗನ ಸಾನ್ನಿಧ್ಯರಲ್ಲದೆ
ಸಮರಸ ವೇದ್ಯರೊಬ್ಬರೂ ಇಲ್ಲ. ॥೨॥

೯೨೨

ರಕ್ಕಸಿಯ ಮನೆಯಲು ಭೋಜನವನುಂಡು
ತೃಪ್ತಿಯಾಯಿತ್ತೆಂದು ಬೆಸಗೊಂಡಡೆ ಹೇಳಿಹೆನು;
ನೀರ ಕೈಯಲು ಕಿಚ್ಚ ಬಯ್ಕೆಯ ಕೊಟ್ಟಂತೆ
ಸಾಯುಜ್ಯಪದವಿಯನವರೆತ್ತ ಬಲ್ಲರು?
ಮಹಾದಾನಿ ಕೂಡಲಸಂಗಮದೇವರ
ಸಮರಸದ ಸುಖವನವರೆತ್ತ ಬಲ್ಲರು? ॥೩॥

೯೨೩

ಬಯಲ ರೂಪ ಮಾಡಬಲ್ಲಾತನೆ ಶರಣನು,
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ?
ಆ ರೂಪ ಬಯಲು ಮಾಡಲರಿಯದಿದ್ದಡೆ
ಎಂತು ಲಿಂಗಾನುಭಾವಿಯೆಂಬೆ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ
ಕೂಡಲಸಂಗಮದೇವಾ? ॥೪॥

೯೨೪

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯ.
ಸತ್ತು ಬೆರಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ
ಕೂಡಲಸಂಗಮದೇವಾ. ॥೫॥

೯೨೫

ಮಾತಿಲ್ಲ ನುಡಿಯಿಲ್ಲ, ಏತಕ್ಕೆ ಮುನಿದಿರಿ?
ಮಾತಾಡಿದಡೆ ಕೆಯ್ಯ ಬೆಳಸೆಂಬುದನರಿಯಿರೆ ಅಯ್ಯಾ?
ಮಾತು ಕೆಟ್ಟಲ್ಲದೆ ತಾನಾಗಬಾರದು.
ಕೂಡಲಸಂಗಮದೇವಯ್ಯಾ ಮಾತಿಂದ ಬರ್ಕು ಭವಭಾರ ಘೋರ. ॥೬॥

೯೨೬

ಏನನಾದಡೆಯೂ ಸಾಧಿಸಬಹುದು,
ಮತ್ತೇನನಾದಡೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು,
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ. ॥೭॥

೯೨೭

ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಬಡೆ ಹೇಳಿಹೆ ಕೇಳಿ ಭೋ:
ಹುಸಿಯ ಸಂಕಲೆಯಾಗಿದ್ದಲ್ಲಿ ಕಾದುಕೊಂಡಿದ್ದನೊಬ್ಬ.

ಕಥೆ ಕನಸ ಮಾಡಿ ಹೇಳುತ್ತಿದ್ದನೊಬ್ಬ.
ಪರಾಪರಕ್ಕೆ ಹೋಗಿ ಪರಮನ ಸುದ್ದಿಯ ಕೊಂಡುಬರುತ್ತಿಪ್ಪನೊಬ್ಬ.
ಅವರಿಬ್ಬರನೂ ಕೆಡೆಮೆಟ್ಟಿ ಹೋಹಾಗ,
ಲೋಕ ನಿರ್ಬುದ್ಧಿಗೊಂಡಿತ್ತು,
ಕೂಡಲಸಂಗಮದೇವಾ. ॥೮॥

೯೨೮

ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವ
ಹಿರಿದು ಕಿರಿದಾದುದನಾರೂ ಅರಿಯರು.
ಪಾಷಾಣಪರೀಕ್ಷೆವಂತನಂತೆ ಗುರುವಿಲ್ಲದವರಂತಿರಲಿ.
ಕೂಡಲಸಂಗಮದೇವಯ್ಯಾ,
ಗುರುವುಳ್ಳವರ ನಿಜವಿಂತುಟು. ॥೯॥

೯೨೯

ಗುರುಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನ;
ಹಿಂದ ಬಿಟ್ಟು ಮುಂದ ಹಿಡಿಯಲೇಬೇಕು.
ಕೂಡಲಸಂಗಮದೇವ ಕೇಳಯ್ಯಾ,
ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು. ॥೧೦॥

೯೩೦

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ? ॥೧೧॥

ಐಕ್ಯನ ಐಕ್ಯಸ್ಥಲ

೯೩೧

ಒಲೆಯಡಿಯನುರುಹಿದಡೆ
ಗೋಳಕನಾಥನ ಕೊರಳ ಸುತ್ತಿತ್ತು,

ಮಹೀತಳನ ಜಡೆ ಸೀಯಿತ್ತು,
ಮರೀಚಕನ ಶಿರ ಬೆಂದಿತ್ತು,
ರುದ್ರನ ಹಾವುಗೆ ಉರಿಯಿತ್ತು,
ದೇವಗಣಂಗಳು ನಿವಾಟವಾದರು,
ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು,
ಕೂಡಲಸಂಗಮದೇವ ಭಸ್ಮಧಾರಿಯಾದ. ॥೧೨॥

೯೩೨

ಆ ಭಸ್ಮ ತಾಗಿ ಬ್ರಹ್ಮ ತನ್ನ ಕಪಾಲವಿಡಿದನು.
ಗಣನಾಥನ ಐವತ್ತೆರಡು ಸರ ಹರಿದು ಬಿದ್ದವು.
ಆ ಭಸ್ಮತಾಗಿ ಅಂಡಜಮುಗ್ಧೆಯ ಮೂರು ಮೊಲೆ ಹರಿದು ಬಿದ್ದವು.
ನಾದಪ್ರಿಯ ನಂದಿಯನೇರಿಕೊಂಡು
ಅತೀತನ ಮೇಲೆ ಆನಂದಸಿಂಹಾಸನವನಿಕ್ಕಿ ಕುಳ್ಳಿತ್ತ,
ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು. ॥೧೩॥

೯೩೩

ನಾನೊಮ್ಮೆ ಬೇಂಟೆಯ ಹೋದಡೆ
ಭಸಿತಕ್ಕಾಹುತಿಯನಿಕ್ಕಿಹೆನೆಂದು
ಸಾಸಿರದೇಳುನೂರು ವರುಷ ಒಬ್ಬ ರಾಜನ ಕೊಂದೆನು.
ಅವನ ಹೆಂಡತಿ ಐವತ್ತೆರಡು ಕಣ್ಣವಳು,
ಅವಳು ತನ್ನ ಹೂಮುಡಿಯ ಬಿಟ್ಟು ಅತ್ತಳು.
ಅವಳ ಬಾಯಲ್ಲಿ ಅಜ ಬಿದ್ದ,
ಕಂಗಳಲ್ಲಿ ಧೂಮಕೇತು ಬಿದ್ದ.
ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು. ॥೧೪॥

೯೩೪

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೈದಾರೆ; ಆನು ದೇವಾ ಹೊರಗಣವನು.
'ಸಂಬೋಳಿ ಸಂಬೋಳಿ' ಎನುತ್ತ ಇಂಬಿನಲ್ಲಿ ಇದೇನೆ.
ಕೂಡಲಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು. ॥೧೫॥

೯೩೫

"ಶಿವಶಿವಾ ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ.
ಸತ್ಯ[ಶುದ್ಧ]ವುಳ್ಳವಂಗೆ ಗುರುವಿಲ್ಲ,
ಸತ್ಯ[ಶುದ್ಧ]ವುಳ್ಳವಂಗೆ ಲಿಂಗವಿಲ್ಲ,
ಸತ್ಯ[ಶುದ್ಧ]ವುಳ್ಳವಂಗೆ ಜಂಗಮವಿಲ್ಲ,
ಸತ್ಯ[ಶುದ್ಧ]ವುಳ್ಳವಂಗೆ ಪ್ರಸಾದವಿಲ್ಲ,
ಸತ್ಯ[ಶುದ್ಧ]ವುಳ್ಳವಂಗೆ ಗಣತ್ವವಿಲ್ಲ ಕೇಳಿರೆ.
ಸತ್ಯಶುದ್ಧ ದೇವರಿಗೆ ಉಪಚಾರವುಂಟು,
ಸತ್ಯಶುದ್ಧ ದೇವರಿಗೆ ಧ್ಯಾನಮೌನ ಅನುಷ್ಠಾನವುಂಟು,
ಸತ್ಯಶುದ್ಧ ಉಪದೇಶಕ್ಕೆ ಜಪ ತಪ
ಸಂಜೆ ಸಮಾಧಿ ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ
ಷೋಡಶೋಪಚಾರವುಂಟು.
ಸತ್ಯಶುದ್ಧ ದೇವರಿಗೆ ಉಪಚಾರವುಂಟಾದ ಕಾರಣ
ಇಂತಪ್ಪ ಸತ್ಯಶುದ್ಧ ಗುರುವಿಂಗೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಲಿಂಗಕ್ಕೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಜಂಗಮಕ್ಕೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯಾನೆ.
ಇವರೆಲ್ಲರು ಬ್ರಹ್ಮನಮಕ್ಕಳು.
ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.
ಆವ ಸಹಜವೂ ಇಲ್ಲದ ಲಿಂಗೈಕ್ಯ ಕಾಣಾ
ಕೂಡಲಸಂಗಮದೇವಾ. ॥೧೬॥

ಐಕ್ಯನ ಭಕ್ತಸ್ಥಲ

೯೩೬

ಭಕ್ತನಾಯಿತ್ತೆ ಭಕ್ತಿದಾಸೋಹ,
ಯುಕ್ತನಾಯಿತ್ತೆ ಯುಕ್ತಿದಾಸೋಹ,
ಐಕ್ಯನಾಯಿತ್ತೆ ಮಮಕಾರ ದಾಸೋಹ,
ಸರ್ವದಲೆ ದಾಸೋಹವೇ ಬೇಕು.
ಈ ದಾಸೋಹದ ಅನುವ ಕೂಡಲಸಂಗಯ್ಯ ತಾನೆ ಬಲ್ಲ. ॥೧೭॥

೯೩೭

ಜಲವ ನುಂಗಿತ್ತಯ್ಯಾ ಎನ್ನ ಕರವು,
ಪತ್ರೆಯ ನುಂಗಿತ್ತಯ್ಯಾ ಎನ್ನ ಶಿಖೆ,
ಎನ್ನಯ ಮಂತ್ರ ಭಿನ್ನವಾಯಿತ್ತು.
ಇಂತೀ ದ್ವಿವಿಧ ಒಂದಾಗದ ಮುನ್ನ
ಕೂಡಲಸಂಗಮದೇವರು ಪೂಜೆಗೊಂಡರು. ॥೧೮॥

೯೩೮

ಎಲ್ಲವ ಬೇಡಿದರೆಮ್ಮವರು,
ಒಂದ ಬೇಡ ಮರೆದರಯ್ಯಾ,
ಮರ್ತ್ಯಲೋಕದ ಗಣಂಗಳು ಒಂದ ಬೇಡ ಮರೆದರು.
ಕೂಡಲಸಂಗಮದೇವಾ,
ಎನ್ನ ಬೇಡ ಮರೆದರು. ॥೧೯॥

೯೩೯

ಭಿತ್ತಿಯಿಲ್ಲದ ಚಿತ್ತಾರದಂತೆ
ಭಕ್ತಿಯಿಲ್ಲದ ಪ್ರಮಥನಾಗಿದ್ದೆನಯ್ಯಾ;
ಸತ್ಯವಿಲ್ಲದ ಶರಣನಾಗಿದ್ದೆನಯ್ಯಾ.
ಗೆರೆಯಿಲ್ಲದ ಕೋಲಲ್ಲಿ ಉದ್ದರೆಯನಿಕ್ಕಿದ
ಭಂಡದ ಹರದನಂತಾದೆನಯ್ಯಾ,
ಕೂಡಲಸಂಗಮದೇವಾ. ॥೨೦॥

೯೪೦

ಆಯತ ಒಂದೆಡೆಯಲ್ಲಿ ತೆರನನರಿಯರಾಗಿ
ನೋಡಬಾರದು, ನೋಡಿ ನುಡಿಸಬಾರದು.
ಅದು, ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ. ॥೨೧॥

ಐಕ್ಯನ ಮಾಹೇಶ್ವರ ಸ್ಥಲ

೯೪೧

ಸತ್ತು ಹುಟ್ಟುವನಲ್ಲ, ಸಂದೇಹ ಸೂತಕಿಯಲ್ಲ.
ಆಕಾರ ನಿರಾಕಾರ ನೋಡಯ್ಯಾ!
ಕಾಯವಂಚಕನಲ್ಲ, ಜೀವವಂಚಕನಲ್ಲ
ನಿರಂತರ ಸಹಜ ನೋಡಯ್ಯಾ!
ಶಂಕೆಯಿಲ್ಲದ ಮಹಿಮನು ನೋಡಯ್ಯಾ,
ಕೂಡಲಸಂಗನ ಶರಣನುಪಮಾತೀತ ನೋಡಯ್ಯಾ. ॥೨೨॥

೯೪೨

ದಶದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯಾ,
'ಲಿಂಗಮಧ್ಯೇ ಜಗತ್ ಸರ್ವಂ' ಎಂಬುದ ನಾನರಿಯೆನಯ್ಯಾ,
ಲಿಂಗಸೋಂಕಿನ ಸುಖದೊಳಗೆ.
ಕೂಡಲಸಂಗಮದೇವಯ್ಯಾ,
ಅಂಬುಧಿಯೊಳಗೆ ಬಿದ್ದಾಲಿಕಲ್ಲಿನಂತೆ
ಭಿನ್ನಭಾವವನರಿಯದೆ 'ಶಿವಶಿವಾ' ಎನುತ್ತಿದ್ದೆ ನಾನು. ॥೨೩॥

ಐಕ್ಯನ ಪ್ರಸಾದಿಸ್ಥಲ

೯೪೩

ಮಿಥ್ಯವನಳಿದುಳಿದ ಸತ್ಯಪ್ರಸಾದಿ,
ರಂಜನವಿಲ್ಲದ ನಿರಂಜನ ಪ್ರಸಾದಿ,
ದುಃಖವನಳಿದ ಘನಾನಂದಪ್ರಸಾದಿ,
ಅನಿತ್ಯವಿಲ್ಲದ ನಿತ್ಯಪ್ರಸಾದಿ,
ಖಂಡಿತವಿಲ್ಲದ ಅಖಂಡಿತಪ್ರಸಾದಿ,
ಕೂಡಲಸಂಗಮದೇವರಲ್ಲಿ ತಾನೆ ಪ್ರಸಾದಿ. ॥೨೪॥

೯೪೪

ಹುಸಿಯಿಂದೆ ಜನಿಸಿದೆನಯ್ಯಾ
ಮರ್ತ್ಯಲೋಕದೊಳಯಿಂಕೆ.
ಹುಸಿಯಿಂದೆ ಲಿಂಗವ ಹೆಸರುಗೊಂಡು ಕರೆದೆನಯ್ಯಾ,
ಅದು ಎನಗೆ ಭಾವವೂ ಅಲ್ಲ,
ನಿರ್ಭಾವವೂ ಅಲ್ಲದೆ ನಿಂದಿತ್ತಯ್ಯಾ.
ಅದರ ಅವಯವಂಗಳೆಲ್ಲವು ಜಂಗಮವಯ್ಯಾ,
ಅದಕ್ಕೆ ಎನ್ನಲ್ಲುಳ್ಳ ಸಯದಾನ ಮಾಡಿ ನೀಡಿದೆನಯ್ಯಾ.
ಆ ಪ್ರಸಾದಕ್ಕೆ ಶರಣೆಂದೆನಯ್ಯಾ,
ಅದು ಸಾರವೂ ಅಲ್ಲ, ನಿಸ್ಸಾರವೂ ಅಲ್ಲ.
ಆ ಪ್ರಸಾದದಲ್ಲಿ ನಾನೇ ತದ್ಗತನಾದೆ ಕಾಣಾ,
ಕೂಡಲಸಂಗಮದೇವಾ. ॥೨೫॥

೯೪೫

ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ
ಪ್ರಸಾದದಲ್ಲಿ ಒದಗಿದ ಪ್ರಸಾದಿಯ ಪರಿಣಾಮದ
ಪರಮಾನಂದವನೇನೆಂದುಪಮಿಸುವೆನಯ್ಯಾ?
ಪರಮಾಶ್ರಯವೇ ತಾನಾಗಿ,
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನೆಂಬ ಮಹಾಪ್ರಸಾದಿ
ಎನ್ನ ವಾಙ್ಮನಕ್ಕಗೋಚರನಾ[ಗೆ], ನಾನೇನೆಂಬೆನಯ್ಯಾ. ॥೨೬॥

ಐಕ್ಯನ ಪ್ರಾಣಲಿಂಗಿಸ್ಥಲ

೯೪೬

ಆಯತವೆಂಬುದು ಭಂಗ,
ಸ್ವಾಯತವೆಂಬುದು ಭವ.
ಆಯತವರಿಯೆ, ಸ್ವಾಯತವರಿಯೆ,
ಭಾವದಲ್ಲಿ ವ್ರತಗೆಟ್ಟುದಾಗಿ.
ಆ ಭಾವದಲ್ಲಿ ಜೀವಸಂಹಾರಿ,
ಕೂಡಲಸಂಗಮದೇವ ಸರ್ವನಿವಾಸಿಯಾಗಿ. ॥೨೭॥

೯೪೭

ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ
ದೇವಲೋಕವೆಂಬುದೇನೋ?
ಮರ್ತ್ಯಲೋಕವೆಂಬುದೇನೋ
ಆವುದರಲ್ಲಿಯೂ ಭೇದವೇನಯ್ಯಾ?
ಕೂಡಲಸಂಗಮದೇವನೊಲಿದ ಬಳಿಕ ಆಲಸ್ಯವುಂಟೆ? ॥೨೮॥

೯೪೮

ಏನೆಂಬೆ, ಏನೆಂಬೆ ಒಂದೆರಡಾದುದ?
ಏನೆಂಬೆ, ಏನೆಂಬೆ ಎರಡೊಂದಾದುದ?
ಏನೆಂಬೆ, ಏನೆಂಬೆ ಅವಿರಳ ಘನವ?
ಮಹಾದಾನಿ ಕೂಡಲಸಂಗಮದೇವಯ್ಯ ತಾನೆ ಬಲ್ಲ. ॥೨೯॥

೯೪೯

ಕುರುಹಿಲ್ಲ ಕುರುಹಿಲ್ಲ ಲಿಂಗವೆಂದೆಂಬಡೆ,
ತೆರಹಿಲ್ಲ ತೆರಹಿಲ್ಲ ಜಂಗಮವೆಂದೆಂಬಡೆ.
ಇದೆ ನೋಡಾ ಶಿವಾಚಾರ,
ಇದೆ ನೋಡಾ ಶಿವದೊಡಕು!
'ಆತ್ಮಾನಾಂ ಪ್ರಕೃತಿಃ ಸ್ವಭಾವ' ಎಂದುದಾಗಿ
ಮುಟ್ಟಬಾರದ ಠಾವ ಮರೆಗೊಂಡಿರ್ಪ
ಮಮಕರ್ತ ಕೂಡಲಸಂಗಮದೇವ. ॥೩೦॥

ಐಕ್ಯನ ಶರಣಸ್ಥಲ

೯೫೦

ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ
ಆದಿಯಾಧಾರದ ಪರಮಾತ್ಮಲಿಂಗದಲ್ಲಿ!
ಆದಿ ಮಧ್ಯ ಅವಸಾನವನರಿಯದ
ಅಗಮ್ಯ ವೇದಾದಿ ಸಕಲಶಾಸ್ತ್ರ ಪ್ರಮಾಣರು
ಅದನಂತಿಂತೆಂದುಪಮಿಸಲಿಲ್ಲ,
ಮಹಾಂತ ಕೂಡಲಸಂಗಮದೇವಾ. ॥೩೧॥

೯೫೧
ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ,
ಲಿಂಗ ಬೇರೆ ರೂಪನಿರೂಪನಲ್ಲ,
ಲಿಂಗ ಬೇರೆ ಕಾಯಸಂಬಂಧಿಯಲ್ಲ,
ಲಿಂಗ ಬೇರೆ ಮಹಾಘನದಿಂದತ್ತತ್ತಲೆ.
ಕೂಡಲಸಂಗಮದೇವರ ನಿಲವು ಆರಿಗೆಯೂ ಅಳವಡದು. ॥೩೨॥

೯೫೨
ಹುತ್ತಕ್ಕೆ ಏಸು ಬಾಯಾದಡೇನು?
ಸರ್ಪನಿಪ್ಪುದು ಒಂದೇ ಸ್ಥಾನ!
ಭಾವ ಭಾವಿಸಿ ಭ್ರಮೆಯಳಿದು ನೋಡಾ;
ಆ ಭಾವ ಭಾವಿಸಲು ನಿರ್ಭಾವ ಕೂಡಲಸಂಗಮದೇವಾ. ॥೩೩॥

೯೫೩
ವೇದ ವೇಧಿಸಲರಿಯದೆ ಅಭೇದ್ಯಲಿಂಗವೆಂದು ನಡನಡುಗಿತ್ತು.
ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತೈದಾವೆ.
ತರ್ಕ ತರ್ಕಿಸಲರಿಯದೆ ಅತರ್ಕ್ಯಲಿಂಗವೆಂದು ಮನಂಗೊಳ್ಳವು.
ಆಗಮ ಗಮಿಸಲರಿಯದೆ ಅಗಮ್ಯಲಿಂಗವೆಂದು ಹೋದವು.
ನರರು ಸುರರು ಅಂತುವ ಕಾಣರು,
ನಮ್ಮ ಕೂಡಲಸಂಗನ ಪ್ರಮಾಣ ಶರಣ ಬಲ್ಲ. ॥೩೪॥

೯೫೪
ವೇದಾತೀತ, ಷಡುವರ್ಣರಹಿತ, ಷಟ್‌ತ್ರಿಂಶತ್ಕಳಾತೀತ,
ವ್ಯೋಮಾತೀತ,
ಕೂಡಲಸಂಗಮದೇವ. ॥೩೫॥

೯೫೫
ವಿಶ್ವಜಿತನು, ದನುಜಿತನು, ಸರ್ವಜಿತನು,
ಸುತ್ರಾಮಜಿತನು, ನೃಜಿತನು,
ಉರ್ವರಾಜಿತನು ಅಶ್ವಜಿತನು, ಗೋಜಿತನು,

ಅರ್ಜಿತನು, ಸ್ವಸಂವೇದ್ಯನು, ವೇದನಾದಾತೀತನು.
ತೂರ್ಯಪರಮಾನಂದ ನಿರವಯ,
ಸೂರ್ಯಕೋಟಿಪ್ರಭೆಯ ಬೆಳಗಿನ
ಸಹಸ್ರಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯ. ॥೩೬॥

೯೫೬

ಸಹಸ್ರಶೀರ್ಷನಾದಿಪುರುಷನು.
ವೇದಪುರುಷನೊಬ್ಬ ಪುರುಷನು.
ತ್ರಿಪಾದ ಊರ್ಧ್ವನೊಬ್ಬ ಪುರುಷನು.
ಉದನ್ಮುಖನೊಬ್ಬ ಪುರುಷನು.
ಉದಯಪುರುಷನೊಬ್ಬ ಪುರುಷನು.
ವಿರಾಟ್ಪುರುಷನೊಬ್ಬ ಪುರುಷನು.
ಆದಿಪುರುಷನೊಬ್ಬ ಪುರುಷನು.
ವಿಯತ್ಪುರುಷನೊಬ್ಬ ಪುರುಷನು.
ತದ್ವಿಯತ್ಪುರುಷಾಪುರುಷರಿಲ್ಲದ ಪ್ರಭೆ ನೋಡಿರೆ,
ವೇದನಾದಾತೀತ ತೂರ್ಯಪರಮಾನಂದ ನಿರವಯ
ಷಟ್‌ತ್ರಿಂಶತ್‌ಪ್ರಭಾಪಟಲಪ್ರಭೆಯ ಬೆಳಗಿದೆ ನೋಡಿರೆ.
ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲಸಂಗಯ್ಯ. ॥೩೭॥

೯೫೭

ಅಷ್ಟತನುಮೂರ್ತಿ ಲಿಂಗವೆಂದೆಂಬರು ಕೇಳಿರಯ್ಯಾ:
ಆದಿಯ ಮಗ ಅತೀತ, ಅತೀತನ ಮಗ ಆಕಾಶ,
ಆಕಾಶನ ಮಗ ವಾಯು, ವಾಯುವಿನ ಮಗ ಅಗ್ನಿ,
ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ,
ಪೃಥ್ವಿಯಿಂದ ಸಕಲ ಜನನವು.
ಮನಸಿನ ಮಗ ಚಂದ್ರ, ನಯನದ ಮಗ ಸೂರ್ಯ,
ದೇಹದ ಮಗನಾತ್ಮ, ಇಂತೀ ಅಷ್ಟತನುವೆಲ್ಲಕ್ಕೆಯು ಉತ್ಪತ್ಯವುಂಟು.
ಉತ್ಪತ್ಯರಹಿತ ಅಯೋನಿಜ ಶೂನ್ಯನಿರಾಳ
ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರಿಲ್ಲ. ॥೩೮॥

೯೫೮

ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ
ಶಬ್ದ ಮುಗ್ಧವಾದುದನೇನೆಂಬೆನಯ್ಯಾ. ॥೩೯॥

೯೫೯

ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ!
ಬೆಳಗಿಂಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೆ ಬಲ್ಲ! ॥೪೦॥

೯೬೦

ಅಂತರಂಗ ಬಹಿರಂಗ
ಆತ್ಮಸಂಗ ಒಂದೆ ಅಯ್ಯಾ!
ನಾದಬಿಂದುಕಳಾತೀತ,
ಆದಿಯಾಧಾರ ನೀನೆ ಅಯ್ಯಾ!
ಆರೂಢದ ಕೂಟದ ಸುಖವ ಕೂಡಲಸಂಗಯ್ಯ ತಾನೆ ಬಲ್ಲ! ॥೪೧॥

❖❖

ಕಾಂಡ : ಎರಡು

ಹೆಚ್ಚಿನ ವಚನಗಳು

೯೬೧

ಅಂಗದ ಮೇಲೆ ಲಿಂಗ ಆಯತವಾಗಿ
ಲಿಂಗಾರ್ಚನೆಯ ಮಾಡಿದಡೆ ಭವ ಹಿಂಗದೆಂದು,
ಪ್ರಾಣದ ಮೇಲೆ ಲಿಂಗ[ಸ್ವಾ]ಯತವ ಮಾಡಿ
ಎನ್ನಂತರಂಗ ಶುದ್ಧವ ಮಾಡಿ೩
ಲಿಂಗೈಕ್ಯದ ಹೊಲಬ ತೋರಿದನಯ್ಯಾ, ಚೆನ್ನಬಸವಣ್ಣನು.
ಕಾಯದ ಕಳವಳವು ದಾಸೋಹದ ಮುಖದಲ್ಲಿ ಅಲ್ಲದೆ ಹರಿಯದೆಂದು
ಜಂಗಮಮುಖಲಿಂಗವಾಗಿ ಬಂದು ಎನ್ನ ಶಿಕ್ಷಿಸಿ ರಕ್ಷಿಸಿ
ಎನ್ನ ಸಂಸಾರದ ಪ್ರಕೃತಿಯ ಹರಿದನಯ್ಯಾ, ಪ್ರಭುದೇವರು.
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಚೆನ್ನಬಸವಣ್ಣನ ಕರುಣದಿಂದಲಾನು ಬದುಕಿದೆನು. ॥೧॥

೯೬೨

ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಸ್ಥಾವರದೈವಕ್ಕೆರಗಲಾಗದು.
ತನ್ನ ಪುರುಷನ ಬಿಟ್ಟು ಅನ್ಯಪುರುಷನ ಸಂಗ ಸಲ್ಲುವುದೇ?
ಕರಸ್ಥಲದ ದೇವನಿದ್ದಂತೆ ಧರೆಯ ಮೇಲಣ ಪ್ರತಿಷ್ಠೆಗೆರಗಿದಡೆ
ನರಕದಲ್ಲಿಕ್ಕುವ ಕೂಡಲಸಂಗಮದೇವ. ॥೨॥

೯೬೩

ಅಂಗದಲಳವಟ್ಟ ಲಿಂಗಕ್ಕೆ ಅಂಗವೆ ಭಾಜನ,
ಪ್ರಾಣದ ಮೇಲಣ ಲಿಂಗಕ್ಕೆ ಮನವೆ ಭಾಜನ.
ಅರಿವಿನ ಮೇಲಣ ಲಿಂಗಕ್ಕೆ ಭಾವವೆ ಭಾಜನ
ಕೂಡಲಸಂಗಮದೇವಯ್ಯಾ,
ಪ್ರಭುದೇವರು ಆರೋಗಣೆಯ ಮಾಡುವಡೆ
ಭಕ್ತಿಪರಿಯಾಣವಲ್ಲದೆ ಬೇರೆ ಭಾಜನವ ಕಾಣೆನು. ॥೩॥

೯೬೪

ಅಂಗದಲ್ಲಿ ಅರ್ಪಿತವಾದ ಸುಖವು ಲಿಂಗದಲ್ಲಿ ಲೀಯವಾಯಿತ್ತೆಂದಡೆ,
ಅಂಗವ ಲಿಂಗದಲ್ಲಿ ಮತ್ತೆ ನಿಕ್ಷೇಪಿಸಿಹೆನೆಂಬ

ಕಾರಣವೇಕಯ್ಯಾ ಶರಣಂಗೆ?
ಪ್ರಾಣನ ಲಿಂಗದಲ್ಲಿ ಸವೆಸಿ ನಿರವಯವಾಗಬಹುದಲ್ಲದೆ
ಕರ್ಮದಿಂದಾದ ಕಾಯವ ಸವೆಸಿ ಸಯವಪ್ಪ ಪರಿ
ಎಂತು ಹೇಳಯ್ಯಾ ಕೂಡಲಸಂಗಮದೇವಾ?
ನಿಮ್ಮ ಶರಣರು ಕಾಯವಿಡಿದಿರ್ದು ನಿರ್ಮಾಯವಾಗಿರ್ಪುದ
ಹೇಳಯ್ಯಾ ನಿಮ್ಮ ಧರ್ಮ. ॥೪॥

೯೬೫

ಅಂಗದಲ್ಲಿ ಲಿಂಗಸಂಗ,
ಲಿಂಗದಲ್ಲಿ ಅಂಗಸಂಗವ ಮಾಡಿಹೆನೆಂದಡೆ,
ಸಂದು ಭೇದವಳಿವ ಪರಿ ಎಂತು ಹೇಳಾ?
ಅಂಗದಲ್ಲಿ ಸಂಗವ ಮಾಡಿಹೆನೆಂದಡೆ,
ಮುಂದುಗೆಡಿಸಿ ಕಾಡುವನು ಶಿವನು.
ಕಾಮವೆಂಬ ಬಯಕೆಯಲ್ಲಿ ಅಳಲಿಸುವ ಬಳಲಿಸುವ ಶಿವನು.
ಲಿಂಗದಲ್ಲಿ ಅಂಗವ ತಂದು ನಿಕ್ಷೇಪಿಸಿಹೆನೆಂದಡೆ,
ಅಂಗದಿಂದ ಅತ್ತತ್ತಲೋಸರಿಸಿ ಓಡುವನಯ್ಯಾ ಶಿವನು.
ಹೆಣ್ಣು ಗಂಡಾದಡೆ ಸಂಗಕ್ಕೆ ಒಲಿವನು ಕೇಳಾ ಶಿವನು.
ಕೂಡಲಸಂಗಮದೇವರ ಬೆರಸುವಡೆ,
ಭಿನ್ನವಿಲ್ಲದೆ ಕಲಿಯಾಗಿರಬೇಕು, ಕೇಳಾ ಅವ್ವಾ. ॥೫॥

೯೬೬

ಅಂಗವಿಕಾರವಳಿದು ಸತಿಯ ಸಂಗವರಿಯ ನೋಡಾ,
ದೇಹಗುಣಂಗಳಿಲ್ಲಾಗಿ ನಿರ್ದೇಹಪ್ರಸಾದಿ ನೋಡಯ್ಯಾ,
ಅಶನವ್ಯಸನಾದಿಗಳೆಲ್ಲವು ಬೆಂದವು ನೋಡಯ್ಯಾ.
ಈ ಎಲ್ಲ ಗುಣಂಗಳಳಿದು ಕೂಡಲಸಂಗಮದೇವರಲ್ಲಿ
ಸಾವಧಾನಿ ಪ್ರಸಾದಿ ಚೆನ್ನಬಸವಣ್ಣನು. ॥೬॥

೯೬೭

ಅಂಗುಲ ಹನ್ನೆರಡು ಕೂಡಲು ಒಂದು ಗೇಣು,
ಗೇಣು ಎರಡು ಕೂಡಲು ಒಂದು ಮೊಳ,

ಮೊಳವೆರಡು ಕೂಡಲು ಒಂದು ಹಸ್ತ,
ಹಸ್ತವೆರಡು ಕೂಡಲು ಒಂದು ಮಾರು,
ಮಾರೆರಡು ಕೂಡಲು ಒಂದು ಜಂಘೆ,
ಜಂಘೆ ಏಳುನೂರೆಪ್ಪತ್ತು ಕೂಡಲು ಒಂದು ಪಾದಚ್ಛಯ,
ಪಾದಚ್ಛಯವೆರಡು ಸಾವಿರದೆಂಟನೂರು ಕೂಡಲು ಒಂದು ಕೂಗಳತೆ,
ಕೂಗಳತೆ ನಾಲ್ಕು ಕೂಡಲು ಒಂದು ಹರದಾರಿ,
ಹರದಾರಿ ನಾಲ್ಕು ಕೂಡಲು ಒಂದು ಯೋಜನ,
ಅಂಥ ಯೋಜನ ನಾಲ್ಕು ಚೌಕಕ್ಕು ಹನ್ನೆರಡು ಹನ್ನೆರಡು ಕೂಡಲು
ಬಳಸಿ ನಾಲ್ವತ್ತೆಂಟು ಯೋಜನ ಪ್ರಮಾಣಿನ ಕಟ್ಟಳೆಯಾಯಿತ್ತು.
ಇಂತಪ್ಪ ಕಟ್ಟಳೆಯಾಗಿದ್ದ
ಕಲ್ಯಾಣದೊಳಗಿರುವ ಗಣಂಗಳೆಲ್ಲರನೂ
ಕೂಡಲಸಂಗಯ್ಯಾ ನಿಮ್ಮೊಳು ಕಂಡು ಸುಖಿಯಾಗಿರ್ದೆನು. ॥೮॥

೯೩೮

ಅಂಜದಿರಂಜದಿರು ಹಂದೆ, ಓಡದಿರು ಓಡದಿರು ಹೇಡಿ,
ಆಳಿನಾಳು ಕೀಳಾಳು ಬಹರೆ
ಹೋಗದಿರು, ಹೋಗದಿರು,
ಕೂಡಲಸಂಗಮದೇವಾ. ॥೯॥

೯೩೯

ಅಂಜದಿರು ಅಳುಕದಿರು, ಕುಂದದಿರು ಕುಸಿಯದಿರು.
ಏನೊ ಎಂತೊ ಎಂದು ಚಿಂತಿಸದಿರು,
ನಿನ್ನ ನಾನೇನುವನೂ ಬೇಡೆ, ಕೂಡಲಸಂಗಮದೇವಾ. ॥೧೦॥

೯೪೦

ಅಂತರಂಗದೊಳಗಿರ್ದ ನಿರವಯಲಿಂಗವನು ಸಾವಯ ಲಿಂಗವ ಮಾಡಿ,
ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದುಕೊಟ್ಟನಾಗಿ,
ಆ ಇಷ್ಟಲಿಂಗವೆ ಅಂತರಂಗವನಾವರಿಸಿ
ಅಂತರಂಗದ ಕರಣಂಗಳೆ ಕಿರಣಂಗಳಾಗಿ

ಬೆಳಗುವ ಚಿದಂಶವೆ ಪ್ರಾಣಲಿಂಗವು,
ಆಮೂಲ ಚೈತನ್ಯವೆಭಾವಲಿಂಗವು.
ಇದನರಿದು, ನೋಡುವ ನೋಟ ಭಾವಪರಿಪೂರ್ಣವಾಗಿ
ತಾನು ತಾನಾದಲ್ಲದೆ, ಇದಿರಿಟ್ಟು ತೋರುವುದಿಲ್ಲವಾಗಿ
ಅಖಂಡ ಪರಿಪೂರ್ಣವಪ್ಪ ನಿಜವು ತಾನೆ, ಕೂಡಲಸಂಗಮದೇವ. ॥೧೧॥

೯೭೧

ಅಂದಾ ತ್ರಿಪುರವನುರುಹಿದಾತ ವೀರ,
ಅಂದಾ ದಕ್ಷನ ಯಾಗವ ಕೆಡಿಸಿದಾತ ವೀರ,
ಕಡುಗಲಿ ನರಸಿಂಹನನುಗಿದಾತ ವೀರ,
ನಮ್ಮ ಹರನ ಲಲಾಟದಲ್ಲಿ ಜನಿಸಿದಾತ ವೀರ,
ನಮ್ಮ ಕೂಡಲಸಂಗನಲ್ಲಿ ಮಡಿವಾಳ ವೀರ. ॥೧೨॥

೯೭೨

ಅಂಧಕಾರವೆಂಬ ಗಹ್ವರದೊಳಗೆ ನಿದ್ರೆಯೆಂಬ ರಾಕ್ಷಸಿ ಗ್ರಹಿಸಿ,
ವೀರರ ನಿಗ್ರಹಿಸಿ ನೀರು ಮಾಡಿ, ಧೀರರ ಧೃತಿಗೆಡಿಸಿ,
ಶಾಪಾನುಗ್ರಹಸಮರ್ಥರ ಸತ್ತಂತಿರಿಸಿ,
ನಿಚ್ಚ ನಿಚ್ಚ ಜೀವನಾಶವ ಮಾಡುತ್ತಿಹಳು ನೋಡಾ,
ಕೂಡಲಸಂಗಮದೇವಾ. ॥೧೩॥

೯೭೩

ಅಜ್ಞಾನದಿಂದ ಹುಟ್ಟಿತ್ತು ಅಹಂ ಮಮತೆ,
ಅಜ್ಞಾನದಿಂದ ಹುಟ್ಟಿತ್ತು ಮನಸ್ಸಂಚಲ,
ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ,
ಅಜ್ಞಾನದಿಂದ ಹುಟ್ಟಿತ್ತು ದೇಹಮೋಹ,
ಅಜ್ಞಾನದಿಂದ ಹುಟ್ಟಿತ್ತು ಅತಿಕಾಂಕ್ಷೆ,
ಅಜ್ಞಾನದಿಂದ ಹುಟ್ಟಿತ್ತು ತ್ರಿವಿಧಮಲ,
ಅಜ್ಞಾನದಿಂದ ಹುಟ್ಟಿತ್ತು ಸಂಸಾರ,
ಅಜ್ಞಾನದಿಂದ ಹುಟ್ಟಿತ್ತು ರಾಗದ್ವೇಷ,

ಅಜ್ಞಾನದಿಂದ ಹುಟ್ಟಿತ್ತು ಸರ್ವಪ್ರಪಂಚು,
ಅಜ್ಞಾನದಿಂದ ಹುಟ್ಟಿತ್ತು ಸರ್ವದುಃಖ,
ಕೂಡಲಸಂಗಮದೇವಾ,
ಈ ಅಜ್ಞಾನಭ್ರಮೆಯ ಕೆಡಿಸಿದಲ್ಲದೆ
ನಿಮ್ಮನೊಡಗೂಡಬಾರದಯ್ಯಾ. ॥೧೫॥

೯೭೪

ಅಜ್ಞಾನ ಹಿಂಗಿತ್ತು, ಅಹಂಕಾರವಡಗಿತ್ತು,
ಅರಿಷಡ್ವರ್ಗಂಗಳು ಹರಿಹಂಚಾದವು,
ಅಷ್ಟಮದಂಗಳು ಪಟ್ಟಪರಿಯಾದವು,
ದಶವಾಯುಗಳು ವಶವರ್ತಿಯಾದವು,
ಇಂದ್ರಿಯಂಗಳು ಬಂಧನವಡೆದವು,
ಮನೋವಿಕಾರ ನಿಂದಿತ್ತು. ಕೂಡಲಸಂಗಮದೇವಾ,
ನಿಮ್ಮಲ್ಲಿ ನಮ್ಮ ಮಹಾದೇವಿಯಕ್ಕಗಳ
ನಿರ್ವಾಣದ ಸಹಜ ನಿಲವ ಕಂಡು,
ನಮೋ ನಮೋ ಎನುತಿರ್ದೆನಯ್ಯಾ, ಪ್ರಭುವೆ. ॥೧೬॥

೯೭೫

ಅದ್ವೈತವ ಅಂತರಂಗದಲ್ಲಿ ಅರಿದು
ಹೊರಗೆ ದಾಸೋಹವ ಮಾಡದಿರ್ದಡೆ
ಎಂತಯ್ಯಾ ಉಭಯ ಸಂದೇಹದಲ್ಲಿ ನಿಜವಪ್ಪುದು?
ನಿಮ್ಮ ಶರಣರ ಮನ ನೊಂದಲ್ಲಿ
ನಾನು ಸೈರಿಸಿಕೊಂಬೆನೆಂತಯ್ಯಾ ಕೂಡಲಸಂಗಮದೇವಾ,
ಹಾವು ಸಾಯದೆ ಕೋಲು ನೋಯದಂತೆ ಮಾಡಾ,
ನಿಮ್ಮ ಧರ್ಮ. ॥೧೭॥

೯೭೬

ಅನುದಿನದಲ್ಲಿ ಮಜ್ಜನಕ್ಕೆರೆದು ನೆನೆದು ಲಿಂಗ ಕರಿಗಟ್ಟಿತ್ತು.
ನೀರನೊಲ್ಲದು, ಬೋನವ ಬೇಡದು, ಕರೆದಡೆ ಓ ಎನ್ನದು.

ಸ್ಥಾವರ ಪೂಜೆ, ಜಂಗಮದ ಉದಾಸೀನ-
ಕೂಡಲಸಂಗಯ್ಯನೊಲ್ಲ ನೋಡಾ. ॥೧೮॥

೯೭೭

ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು,
ಅನುಭಾವವಿಲ್ಲದ ಲಿಂಗ ಸಮರಸಸುಖಕ್ಕೆ ನಿಲುಕದು,
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು,
ಅನುಭಾವವಿಲ್ಲದೆ ಏನನೂ ಅರಿಯಬಾರದು.
ತನ್ನಲ್ಲಿ ತಾ ಸನ್ನಿಹಿತವುಳ್ಳಡೆ ಶಿವಶರಣರ ಸಂಗವೇತಕ್ಕೆನಲುಂಟೆ?
ಕೂಡಲಸಂಗಮದೇವಯ್ಯಾ, ನಿಮ್ಮ ಅನುಭಾವ
ಮಾತಿನ ಮಥನವೆಂದು ನುಡಿಯಬಹುದೆ ಪ್ರಭುವೆ? ॥೧೯॥

೯೭೮

ಅನ್ಯದೈವವ ಬಿಟ್ಟುದಕಾವುದು ಕ್ರಮವೆಂದಡೆ;
ಅನ್ಯದೈವದ ಮಾತನಾಡಲಾಗದು,
ಅನ್ಯದೈವದ ಪೂಜೆಯ ನೋಡಲಾಗದು,
ಸ್ಥಾವರಲಿಂಗಕ್ಕೆರಗಲಾಗದು,
ಆ ಲಿಂಗದ ಪ್ರಸಾದವ ಕೊಳಲಾಗದು,
ಇಷ್ಟು ನಾಸ್ತಿಯಾದಡೆ ಅನ್ಯದೈವವ ಬಿಟ್ಟು ಭಕ್ತನೆನಿಸುವನು.
ಇವರೊಳಗನುಸರಣೆಯ ಮಾಡಿದನಾದಡೆ,
ಕುಂಭೀಪಾಕ ನಾಯಕನರಕದಲ್ಲಿಕ್ಕುವ
ನಮ್ಮ ಕೂಡಲಸಂಗಮದೇವರು. ॥೨೦॥

೯೭೯

ಅನ್ಯವಿಚಾರವ ಮರೆದು ನಿಮ್ಮ ವಿಚಾರವೆಡೆಗೊಂಡಿತ್ತಾಗಿ,
ಪ್ರಾಣದ ನೆಲೆಗೆಟ್ಟಿತ್ತಯ್ಯಾ,
ದಶವಾಯುಗಳ ಸಂಚ ತಪ್ಪಿತ್ತಯ್ಯಾ,
ಕರಣಂಗಳ ಲಿಂಗಕಿರಣಂಗಳು ನುಂಗಿದವಯ್ಯಾ,
ಒಳಗೆ ಕರತಳಾಮಳಕಗೊಂಡೆನಯ್ಯಾ,

ಹೊರಗೆ ಅದೆಂತೆಂದರಿಯದೆ ನೀನೆ ಗತಿಯಾಗಿದ್ದೆ,
ಕೂಡಲಸಂಗಮದೇವಾ. ॥೨೧॥

೯೮೦

ಅಮೂಲ್ಯನಪ್ರಮಾಣನಗೋಚರಲಿಂಗ,
ಆದಿಮಧ್ಯಾವಸಾನಗಳಿಲ್ಲದ ಸ್ವತಂತ್ರಲಿಂಗ,
ನಿತ್ಯನಿರ್ಮಳಲಿಂಗ,
ಅಯೋನಿಸಂಭವ ನಮ್ಮ ಕೂಡಲಸಂಗಮದೇವರು. ॥೨೨॥

೯೮೧

ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾವನವು,
ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಕಾರಣವು,
ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಸಾಧನವು,
ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಸಿದ್ಧಿ,
ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾಪಕ್ಷಯವು.
ಅಯ್ಯಾ ನಿಮ್ಮ ಪಂಚವಕ್ತ್ರಂಗಳೆ ಪಂಚಮುಖದ ರುದ್ರಾಕ್ಷಿಗಳಾದವಾಗಿ,
ಅಯ್ಯಾ ಕೂಡಲಸಂಗಮದೇವಯ್ಯಾ,
ಎನ್ನ ಮುಕ್ತಿಪಥಕ್ಕೆ ಶ್ರೀಮಹಾರುದ್ರಾಕ್ಷಿಯೆ ಸಾಧನವಯ್ಯಾ. ॥೨೩॥

೯೮೨

ಅಯ್ಯಾ, ಎನ್ನ ಕಾಯದಲ್ಲಿ ಮಡಿವಾಳನ ತೋರಿದ,
ಎನ್ನ ಮನದಲ್ಲಿ ತನ್ನ ನಿಲವ ತೋರಿದ,
ಎನ್ನ ಅರಿವಿನಲ್ಲಿ ನಿಮ್ಮ ತೋರಿದ,
ಇಂತೀ ತ್ರಿವಿಧಸ್ವಾಯತವನು ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ತೋರಿದ.
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನ ಕರುಣದಿಂದ
ಮಡಿವಾಳನೆಂಬ ಪರುಷ ಸಾಧ್ಯವಾಯಿತ್ತೆನಗೆ. ॥೨೪॥

೯೮೩

ಅಯ್ಯಾ, ಎನ್ನ ಕೈಯ ದರ್ಪಣ[ಸಂದಿತ್ತು], ಆಸ್ಥಾನದ ಜ್ಯೋತಿ ನಂದಿತ್ತು,
ಸರಸ್ವತಿಯ ಭಂಡಾರ ಸೂರೆಹೋಯಿತ್ತು,
ನಮ್ಮಯ್ಯ ಕಿನ್ನರಿಬೊಮ್ಮಣ್ಣ ಹೋದನು.
ತಾರಾಮಂಡಲದಲ್ಲಿ ಕೇಳಿಸುವ ತಂದೆ ಹೋದನು,
ನಾನೆಲ್ಲಿ ಅರಸುವೆನು.
ಕೂಡಲಸಂಗಮದೇವಯ್ಯ
ತನ್ನಾಳು ಕಿನ್ನರಿಬೊಮ್ಮಣ್ಣನನೊಯ್ದಡೆ ನಾನೆಲ್ಲಿ ಅರಸುವೆನು ॥೨೫॥

೯೮೪

ಅಯ್ಯಾ, ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿದ್ಬೆಳಗ
ಹಸ್ತಮಸ್ತಕ ಸಂಯೋಗದಿಂದೊಂದುಗೂಡಿ
ಮಹಾಬೆಳಗ ಮಾಡಿದಿರಲ್ಲಾ.
ಅಯ್ಯಾ, ಎನ್ನ ಮಸ್ತಕದೊಳಗೊಂದುಗೂಡಿದ ಮಹಾಬೆಳಗ ತಂದು
ಭಾವದೊಳಗಿಂಬಿಟ್ಟಿರಲ್ಲಾ,
ಅಯ್ಯಾ, ಎನ್ನ ಭಾವದೊಳಗೆ ಕೂಡಿದ ಮಹಾಬೆಳಗ ತಂದು
ಮನಸಿನೊಳಗಿಂಬಿಟ್ಟಿರಲ್ಲಾ.
ಅಯ್ಯಾ, ಎನ್ನ ಮನಸಿನೊಳು ಕೂಡಿದ ಮಹಾಬೆಳಗ ತಂದು
ಕಂಗಳೊಳಗಿಂಬಿಟ್ಟಿರಲ್ಲಾ.
ಅಯ್ಯಾ, ಎನ್ನ ಕಂಗಳೊಳು ಕೂಡಿದ ಮಹಾಬೆಳಗ ತಂದು
ಕರಸ್ಥಲದೊಳಗಿಂಬಿಟ್ಟಿರಲ್ಲಾ.
ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆಯುತ್ತಿಪ್ಪ
ಅಖಂಡತೇಜವನೆ ಇಷ್ಟಲಿಂಗವೆಂಬ ದೃಷ್ಟವ ತೋರಿ
ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ.
ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ
ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ,
ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ,
ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ. ॥೨೬॥

೯೮೫

ಅಯ್ಯಾ, ಎಳಗರು ತಾಯನರಸಿ ಬಳಲುವಂತೆ
ನಾ ನಿಮ್ಮನರಸಿ ಬಳಲುತ್ತಿದ್ದೇನೆ.
ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವಾಗಿ ಕಾರುಣ್ಯವ ಮಾಡು.
ಅಯ್ಯಾ, ನೀವೆನ್ನ ಮನಕ್ಕೆ ನೆಲೆವನೆಯಾಗಿ
ಕಾರುಣ್ಯವ ಮಾಡು, ಕಾರುಣ್ಯವ ಮಾಡು.
ನೀನಿನಿತು ಲೇಸನೀಯಯ್ಯಾ,
ಅಂಬೇ ಅಂಬೇ ಕೂಡಲಸಂಗಮದೇವಾ. ॥೨೭॥

೯೮೬

ಅಯ್ಯಾ, ಕೊಟ್ಟ ಲಿಂಗವ ಮರಳಿ ಕೊಂಡು ಬಾ ಎಂದು
ಎನ್ನನಟ್ಟಿದನಯ್ಯಾ ಶಶಿಧರನು ಮರ್ತ್ಯಕ್ಕೆ.
ನಿಮ್ಮ ಮುಖದಿಂದ ಎನ್ನ ಭವ ಹರಿವುದೆಂದು
ಹರಹಿಕೊಂಡಿದ್ದೆನಯ್ಯಾ ದಾಸೋಹವನು.
ನಿಮ್ಮ ಬರವ ಹಾರಿ ಸವೆದವು ಒಂದನಂತ ದಿನಗಳು,
ಇಂದೆನ್ನ ಪುಣ್ಯದ ಫಲದಿಂದ ಎನಗೆ ಗೋಚರವಾದಿರಿ,
ಹಿಂದಣ ಸಂದೇಹ ಸೂತಕ ಹಿಂಗಿತ್ತು.
ಎನ್ನ ಪ್ರಾಣಲಿಂಗವು ನೀವೇ ಆಗಿ,
ಎನ್ನ ಸರ್ವಾಂಗಲಿಂಗದಲ್ಲಿ ಸನ್ನಿಹಿತವಾಗಿ,
ಎನ್ನ ಚಿಂತೆಯ ನಿಶ್ಚಿಂತೆಯ ಮಾಡಾ
ಕೂಡಲಸಂಗಮದೇವ ಪ್ರಭುವೆ. ॥೨೮॥

೯೮೭

ಅಯ್ಯಾ, ನಾನು ದಾಸೋಹವ ಮಾಡುವೆನಲ್ಲದೆ, ಸಮಯವನರಿಯೆ,
ಅಯ್ಯಾ, ನಾನು ಭಕ್ತಿಯ ಮಾಡುವೆನಲ್ಲದೆ, ಭಾವವನರಿಯೆ.
ಸ್ಥಳಕುಳವ ವಿಚಾರಿಸಿದಡೆ, ಎನ್ನಲ್ಲಿ ಏನೂ ಹುರುಳಿಲ್ಲ,
ನಿಮ್ಮ ಶರಣರ ಸೋಂಕಿನಲ್ಲಿ ಶುದ್ಧನಾದೆನು.
ಕೂಡಲಸಂಗಮದೇವರು ಸಾಕ್ಷಿಯಾಗಿ,
ಮಡಿವಾಳ ಮಾಚಿತಂದೆಗಳ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು. ॥೨೯॥

೯೮೮

ಅಯ್ಯಾ, ನಿಮ್ಮ ಮಹಾನುಭಾವಿಗಳ ಸಂಗದಿಂದೆನ್ನ
ತನು ಶುದ್ಧವಾಯಿತ್ತು, ಮನ ಶುದ್ಧವಾಯಿತ್ತು,
ಧನ ಶುದ್ಧವಾಯಿತ್ತು, ಎನ್ನ ಸರ್ವಾಂಗಶುದ್ಧವಾಯಿತ್ತು,
ವಾರಿಕಲ್ಲಪುತ್ಥಳಿಯನಪ್ಪಿಕೊಂಡಂತಾಯಿತ್ತು.
ಕೂಡಲಸಂಗಮದೇವಾ,
ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ
ಎನಗೊದಗಿದ ಘನವನೇನೆಂದುಪಮಿಸುವೆ? ॥೩೦॥

೯೮೯

ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ಪೂರ್ವಾಚಾರಿಯಾದೆನಯ್ಯಾ.
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ವೃಷಭನಾದೆನಯ್ಯಾ.
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು ಸಂಗನಬಸವಣ್ಣನಾಗಿ,
ಗೊಹೇಶ್ವರನ ಶರಣನ ಮಹಾಬಸುರೊಳಗೆ ಕಂದನಾಗಿರ್ದೆ
ಕಾಣಾ, ಕೂಡಲಸಂಗಮದೇವಾ. ॥೩೧॥

೯೯೦

ಅಯ್ಯಾ, ನಿಮ್ಮ ಶರಣರ ಕಂಡ
ಕಡು ಸುಖವನೇನೆಂಬೆನಯ್ಯಾ?
ಅದು ಸಾಲೋಕ್ಯದಂತುಟಲ್ಲ,
ಸಾಮೀಪ್ಯದಂತುಟಲ್ಲ,
ಸಾರೂಪ್ಯದಂತುಟಲ್ಲ, ಸಾಯುಜ್ಯದಂತುಟಲ್ಲ.
ಕೂಡಲಸಂಗಯ್ಯಾ, ನಿಮ್ಮ ಶರಣರ ಚರಣದ
ದರುಶನ ಸ್ಪರುಶನದಿಂದಾನು ಧನ್ಯನಾದೆನು. ॥೩೨॥

೯೯೧

ಅಯ್ಯಾ, ನಿಮ್ಮ ಶರಣರ ಕಂಡರೆ ಕಡು ಸುಖವೆನಗಯ್ಯಾ,
ಕಾಣದಿರೆ ಅವಸ್ಥೆ ನೋಡಯ್ಯಾ.

ತವಕದ ಸ್ನೇಹ ದರುಶನದಲ್ಲಿ ತರಹರವಾಯಿತ್ತು,
ಕೂಡಲಸಂಗಮದೇವಾ,
ನಿಮ್ಮ ಶರಣರ ಶ್ರೀಪಾದವ ಕಂಡು ಧನ್ಯನಾದೆನು. ॥೩೩॥

೯೯೨

ಅಯ್ಯಾ, ನಿಮ್ಮ ಶರಣರ ನಿಲವ
ಸ್ವರ್ಗ ಮರ್ತ್ಯಪಾತಾಳದೊಳಗೆ ಬಲ್ಲವರಿಲ್ಲವಯ್ಯಾ,
ಅಘಟಿತ ಘಟಿತರು, ಅಖಂಡಿತ ಮಹಿಮರು,
ನಿಜದಲ್ಲಿ ನಿರ್ಲೇಪ ಭಾವಕರು. ಕೂಡಲಸಂಗಮದೇವಾ,
ನಿಮ್ಮ ಶರಣರ ನಿಲವನರಿವಡೆ ನಾನೇತರವನಯ್ಯಾ. ॥೩೪॥

೯೯೩

ಅಯ್ಯಾ, ನಿಮ್ಮ ಶರಣರ ಸಂಗವೆನಗೆ ಪರಮಸುಖವಯ್ಯಾ,
ಅಯ್ಯಾ, ನಿಮ್ಮ ಶರಣರ ಅಗಲಿಕೆ ಎನ್ನ ಪ್ರಾಣವಿಯೋಗವಯ್ಯಾ,
ಶಿವಶಿವಾ ಸಂತವಿಡುವೆನು, ಇನ್ನೆಂತಯ್ಯಾ
ಎನಗೇನು ಗತಿ, ಕೂಡಲಸಂಗಮದೇವಾ
ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು. ॥೩೫॥

೯೯೪

ಅಯ್ಯಾ, ನಿಮ್ಮ ಶರಣರ ಸಂಗಸುಖವ
ಏನೆಂದುಪಮಿಸುವೆನಯ್ಯಾ,
ನಿಮ್ಮ ಶರಣರ ಕೂಡೆ ಸಮಗೋಷ್ಠಿಯ
ಮಾಡುವುದನುಪಮಿಸಲಮ್ಮೆನಯ್ಯಾ.
ಕೂಡಲಸಂಗಾ, ನಿಮ್ಮ ಪ್ರಮಥರೆಲ್ಲರೂ
ನೆರೆದ ಗಣತಿಂಥಿಣಿಯೊಳಗೆನ್ನನೇನೆಂದರಿಯದೆ
ಅಗಲದಂತಿರಿಸಯ್ಯಾ, ನಾ ನಿಮ್ಮ ಧರ್ಮದ ಕವಿಲೆ. ॥೩೬॥

೯೯೫

ಅಯ್ಯಾ ನಿಮ್ಮ ಶರಣರು ಪರಮಸುಖಿಗಳಯ್ಯಾ.
ಅಯ್ಯಾ, ನಿಮ್ಮ ಶರಣರು ಕಾಯವೆಂಬ ಕರ್ಮಕ್ಕೆ

ಹೊದ್ದದ ನಿಷ್ಕರ್ಮಿಗಳಯ್ಯಾ,
ಅಯ್ಯಾ, ನಿಮ್ಮ ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳಯ್ಯಾ.
ಕೂಡಲಸಂಗಮದೇವಯ್ಯಾ.
ನಿಮ್ಮ ಶರಣರ ಘನವನೆನಗೆ ಹೇಳಲು, ನಾನು ಕೇಳಲಮ್ಮದೆ
ನಮೋ ನಮೋ ಎನುತಿರ್ದೆನು ಕಾಣಾ, ಪ್ರಭುವೆ. ॥೩೭॥

೯೯೬

ಅಯ್ಯಾ, ನಿಮ್ಮ ಶರಣರು ಬಂದೆನ್ನ ಅಂಗಳದೊಳಗೆ
ರಕ್ಷಿಸಿಹೆವೆಂದಿರಲು, ನಾನು ತೆರಹು-ಮರಹಾಗಿರ್ದು ಕೆಟ್ಟೆನಯ್ಯಾ,
ನಾನು ಕೆಟ್ಟ ಕೇಡಿಂಗೆ ಕಡೆಯಿಲ್ಲವಯ್ಯಾ.
ಕೂಡಲಸಂಗಮದೇವಾ,
ಎನ್ನ ಭಕ್ತಿ ಸಾವಿರ ನೋಂಪಿಯ ನೋಂತು
ಹಾದರದಲ್ಲಿ ಅಳಿದಂತಾಯಿತ್ತಯ್ಯಾ. ॥೩೮॥

೯೯೭

ಅಯ್ಯಾ, ನಿಮ್ಮ ಶರಣರೆನ್ನ ಪಾವನವ ಮಾಡಿ,
ತಿಳುಹಿ ತಮ್ಮಂತೆ ಎನ್ನ ಮಾಡಿದ ಬಳಿಕ,
ನಾನು ಅವರು ಮಾಡಿದಂತಾದೆನಯ್ಯಾ.
ನಾನೊಬ್ಬನು ನಿಮ್ಮ ಶರಣರ ಬಳಿಬಳಿಯವನು.
ಕೂಡಲಸಂಗನ ಶರಣರು ಮೆಚ್ಚಿ ಎನಗೊಲಿದಡೆ
ನಾನು ಬದುಕಿದೆನಲ್ಲದೆ, ಸಮರಸ ಸಂಗಕ್ಕೆ ಸರಿಯೆ
ಹೇಳಾ ಚೆನ್ನಬಸವಣ್ಣಾ. ॥೩೯॥

೯೯೮

ಅಯ್ಯಾ, ನೀ ಒಲಿದಡೆ ತಿರಿವಂತೆ ಮಾಡುವಿರಿ,
ತಿರಿದಡೆ ನೀಡದಂತೆ ಮಾಡುವಿರಿ,
ನೀಡಿದಡೆ ನೆಲಕ್ಕೆ ಬೀಳುವಂತೆ ಮಾಡುವಿರಿ,
ಬಿದ್ದಡೆ ನಾಯಿ ತಿಂಬಂತೆ ಮಾಡುವಿರಿ,
ನಿಮ್ಮ ಧ್ಯಾನದಲಿ ನಾನಿಪ್ಪಂತೆ ಮಾಡುವಿರಿ
ಕೂಡಲಸಂಗಮದೇವಾ. ॥೪೦॥

೯೯೯

ಅಯ್ಯಾ ನೀ ಒಲಿದಡೆ ಹುಚ್ಚನೆಂದೆನಿಸಿ ಕಲ್ಲಲಿಡಿಸಿ,
ಎಲ್ಲರ ಕೈಯ್ಯಲು ಸುಡಿಸಿ,
ನಿನ್ನ ನಚ್ಚಿದವರನ್ನೆಲ್ಲ [ಬ]ಡಿಸು
ಕೂಡಲಸಂಗಮದೇವಾ. ॥೪೧॥

೧೦೦೦

ಅಯ್ಯಾ, ನೀ ಮಾಡಲಾದ ಜಗತ್ತು,
ಅಯ್ಯಾ ನೀ ಮಾಡಲಾದ ಸಂಸಾರ,
ಅಯ್ಯಾ, ನೀ ಮಾಡಲಾದ ಮರವೆ,
ಅಯ್ಯಾ ನೀ ಮಾಡಲಾದ ದುಃಖ,
ಅಯ್ಯಾ, ನೀ ಬಿಡಿಸಿದಡೆ ಬಿಟ್ಟಿತ್ತು ತಾಮಸ.
ಅಯ್ಯಾ ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿನ್ನೇಕೆ
ಕೂಡಲಸಂಗಮದೇವಾ. ॥೪೨॥

೧೦೦೧

ಅಯ್ಯಾ, ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲೆನೆ?
ನಿಮ್ಮ ನಿಲವ ನೋಡಿಹೆನೆಂದಡೆ
ನಿಮ್ಮ ಘನವೆನ್ನ ಮನಕ್ಕೆ ಸಾಧ್ಯವಾಗದ ಕಾರಣ,
ಅಂತಿಂತೆಂದುಪಮಿಸಲಮ್ಮದೆ ಇದ್ದೆ ನೋಡಯ್ಯಾ,
ನಿತ್ಯತೃಪ್ತಮಹಿಮಾ, ನಿಮಗೆಂದಳವಡಿಸಿದ ಪದಾರ್ಥವ
ಸುಚಿತ್ತದಿಂದವಧರಿಸಿ ಸಲಹಯ್ಯಾ ಪ್ರಭುವೆ,
ಕೂಡಲಸಂಗಮದೇವಾ. ॥೪೩॥

೧೦೦೨

ಅಯ್ಯಾ, ಮರದೊಳಗೆ ಅಗ್ನಿ ಇದ್ದಡೇನಯ್ಯಾ,
ಮಥನಿಸಿ ತೋರುವರಿಲ್ಲದನ್ನಕ್ಕರ ಕಾಣಬಹುದೆ?
ಜಗದೊಳಗೆ ಕೂಡೆ ಪರಿಪೂರ್ಣ ಶಿವನೆಂದಡೆ
ಅಂತರಂಗದಲ್ಲಿ ಕಾಣಬಹುದೆ?

ಆದಿ ಲಿಂಗ ಅನಾದಿ ಶರಣನ ಭೇದವ ತಿಳುಹಿ,
ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗವ ಕರಸ್ಥಲಕ್ಕೆ ತಂದು,
ಆ ಕರಸ್ಥಲದ ಲಿಂಗವನೆನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋರಿ,
ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಹರಿಬ ತೋರಿ,
ಮರ್ತ್ಯಲೋಕದೊಳಗೆಲ್ಲಾ ಇಂದು ಮೊದಲಾಗಿ
ಪ್ರಾಣಲಿಂಗದ ಘನವ ಹರಹಿ ಶಿವಭಕ್ತಿಯನುದ್ಧರಿಸಿದನು.
ಕೂಡಲಸಂಗಮದೇವರಲ್ಲಿ,
ಚೆನ್ನಬಸವಣ್ಣನೆನ್ನನಾಗುಮಾಡಿ ಉಳುಹಿದನಾಗಿ
ಇನ್ನು ಮರ್ತ್ಯಲೋಕಕ್ಕೆ ಬಂದಡೆ
ಚೆನ್ನಬಸವಣ್ಣನ ಪಾದದಾಣೆ. ॥೪೪॥

೧೦೦೩

ಅಯ್ಯಾ, ರುದ್ರಾಕ್ಷಿಯಿಂದ ಹರಿದೆನು ಭವಪಾಶಂಗಳ,
ಅಯ್ಯಾ, ರುದ್ರಾಕ್ಷಿಯಿಂದ ಮುರಿದೆನು ತನುಗುಣಾದಿಗಳ,
ಅಯ್ಯಾ, ರುದ್ರಾಕ್ಷಿಯಿಂದ ಒರೆಸಿದೆನು ಮಹಾಮಾಯೆಯ,
ಅಯ್ಯಾ, ರುದ್ರಾಕ್ಷಿಯಿಂದ ಕಳೆದೆನು ಪಂಚಮಹಾಪಾತಕವ.
ಅಯ್ಯಾ ಕೂಡಲಸಂಗಮದೇವಾ,
ಶ್ರೀಮಹಾರುದ್ರಾಕ್ಷಿಯಿಂದ ಗೆಲಿದೆನಯ್ಯಾ
ಸಕಲದುರಿತಂಗಳನು. ॥೪೫॥

೧೦೦೪

ಅಯ್ಯಾ, ಶ್ರೀಮಹಾವಿಭೂತಿಯಿಂದ ಕಂಡೆ
ಆ ನಿಮ್ಮ ದಿವ್ಯ ಬೆಳಗಿನ ಹೊಳಹ, ಈ ಎನ್ನ ಕರಸ್ಥಲದೊಳಗೆ.
ಅಯ್ಯಾ, ಶ್ರೀಮಹಾರುದ್ರಾಕ್ಷಿಯಿಂದ ಕಂಡೆ
ಆ ನಿಮ್ಮ ದಿವ್ಯಮೂರ್ತಿಯ ಗೂಢವ, ಈ ಎನ್ನ ಕರಸ್ಥಲದೊಳಗೆ.
ಅಯ್ಯಾ, ಶ್ರೀಮಹಾಪಂಚಾಕ್ಷರಿಯಿಂದ ಕಂಡೆ
ಆ ನಿಮ್ಮ ದಿವ್ಯವಕ್ತ್ರಂಗಳ, ಈ ಎನ್ನ ಕರಸ್ಥಲದೊಳಗೆ.
ನಾ ಬಯಸುವ ಬಯಕೆ ಕೈಸಾರಿತ್ತಿಂದು
ಕೂಡಲಸಂಗಮದೇವಾ. ॥೪೬॥

೧೦೦೫

ಅಯ್ಯಾ, ಹಿಂದೆಯಾನು ಮಾಡಿದ ಮರಹಿಂದ ಬಂದೆನೀ ಭವದಲ್ಲಿ.
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ,
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಆಡಿ ಹಾಡಿ,
ಆ ದಾಸೋಹವೆಂಬ ಮಹಾಗಣಸಂಕುಳದೊಳೆನ್ನನಿರಿಸಿ,
ನಿಮ್ಮ ಭಕ್ತಿಯ ಘನವ ನೀವೆ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿಸಿ,
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ,
ಮೂವತ್ತಾರು ಕೊಂಡೆಯವ ಗೆಲಿಸಿ,
ಎಂಬತ್ತೆಂಟು ಪವಾಡಂಗಳಂ ಕೊಂಡಾಡಿ,
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ.
ನಿಮ್ಮ ಮಹಾಗಣಂಗಳು ಮೆಚ್ಚೆ, ಎನ್ನ ಸೂತಕವ ತೊಡೆದೆ.
ಪ್ರಭುದೇವರ ಕರುಣದಿಂದ ಪ್ರಾಣಲಿಂಗಸಂಬಂಧ ಸಯವಾಯಿತ್ತು.
ನೀವು ಕಳುಹಿದ ಬೆಸನು ಸಂದಿತ್ತು,
ಉಘೇ, ಇನ್ನು ಕೂಡಿಕೊಳ್ಳಾ ಕೂಡಲಸಂಗಮದೇವಾ. ॥೪೭॥

೧೦೦೬

ಅರತುದಯ್ಯಾ ಅಂಗಗುಣ,
ಒರತುದಯ್ಯಾ ಭಕ್ತಿರಸ,
ಆವರಿಸಿತ್ತಯ್ಯಾ ಲಿಂಗವಂಗವನು,
ಏನೆಂದರಿಯೆನಯ್ಯಾ ಲೋಕಲೌಕಿಕವ.
ಲಿಂಗಭ್ರಾಂತನಾದೆನಯ್ಯಾ ಕೂಡಲಸಂಗಯ್ಯಾ,
ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ. ॥೪೮॥

೧೦೦೭

ಅರಸುವ ಬಳ್ಳಿ ಕಾಲ ತೊಡರಿದಂತಾಯಿತ್ತು,
ಬಯಸುವ ಬಯಕೆ ಕೈಸಾರಿದಂತಾಯಿತ್ತು,
ಹಲವು ದಿವಸಕೆ ನಂಟರ ಕಂಡಂತಾಯಿತ್ತು.
ಅಂದೊಮ್ಮೆ ಅನಿಮಿಷಂಗೆ ಕೋಳುಹೋದ ಲಿಂಗವೆಂದು

ಉಮ್ಮಹದಿಂದ ಮಂಗಳಾರತಿಯ ಬೆಳಗಿ,
ನವರತ್ನದ ಹಾರ ತೋರಣವ ಕಟ್ಟಿ,
ಸಂತೋಷದಿಂದೆನ್ನ ಮನವು ತೊಟ್ಟನೆ ತೊಳಲಿ,
ತಿಟ್ಟನೆ ತಿರು[ಗಿ], ದೃಷ್ಟವ ಕಂಡೆನಯ್ಯಾ.
ಬಿಟ್ಟು ಹಿಂಗಿದವೆನ್ನ ಭವಮಾಲೆಗಳು,
ಗೋಹೇಶ್ವರನ ಶರಣ ಪ್ರಭುದೇವರ ಕರಸ್ಥಲದೊಳಗೆ,
ಕೂಡಲಸಂಗಮದೇವರೆಂಬ ಲಿಂಗವ ಕಂಡೆನಾಗಿ. ॥೪೯॥

೧೦೦೮

ಅರಿದರಿದು ಎನಗಿಂದು ಕಣ್ಗೆ ಮಂಗಳವಾಯಿತ್ತು,
ಒಂದಹುದು ಒಂದಾಗದೆಂಬ ಭ್ರಮೆಯವನಲ್ಲ,
ಬೇಕು ಬೇಡೆಂಬ ಜಂಜಡದವನಲ್ಲ,
ಎಡೆವರಿಯದ ನೋಟ, ನುಡಿಯ ಸಡಗರವರತು
ಎಡೆಯಾಟ ಕೋಟಲೆಯ ಕಳೆಯ ಬಂದನು,
ನೋಡುವರ ಮನದ ಸುಖದ ಸಾಗರನಿಧಿಯನೇನೆಂದುಪಮಿಸುವೆನು.
ಎನ್ನ ಉಭಯಕರ್ಮವ ಕಳೆದು ತನ್ನೊಳಗೆ ಇಂಬಿಟ್ಟುಕೊಳಬಂದನು,
ಕೂಡಲಸಂಗಮದೇವ, ಕೃಪಾಮೂರ್ತಿ. ॥೫೦॥

೧೦೦೯

ಅರಿದಿಹೆನೆಂದಡೆ ಅರಿವಿಂಗಸಾಧ್ಯ,
ನೆನೆದಿಹೆನೆಂದಡೆ ನೆನಹಿಂಗಸಾಧ್ಯ,
ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ,
ವಾಙ್ಮನಕ್ಕಗೋಚರ ಲಿಂಗವನರಿವ ಪರಿಯೆಂತಯ್ಯಾ,
ಗುರು ತೋರದನ್ನಕ್ಕರ?
ಗುರುಶಿಷ್ಯರ ಮಥನದಲ್ಲಿ ಸ್ವಯಂಜ್ಯೋತಿಲಿಂಗವು
ಉದಯವಪ್ಪುದೆಂಬ ಶ್ರುತಿ ಹುಸಿಯೆ?
ಕೂಡಲಸಂಗಮದೇವಾ,
ನಿಮ್ಮ ಮಹಾನುಭಾವರ ಮಥನದಿಂದ
ಎನ್ನಲ್ಲಿ ನಿಜವ ನೆಲೆಗೊಳಿಸಾ, ಪ್ರಭುವೆ. ॥೫೧॥

೧೦೧೦

ಅರಿಯಲಿಲ್ಲದ ಅರಿವು ಅವಗ್ರಹಿಸಿತ್ತಾಗಿ,
ಅರಿಯಲಿಲ್ಲದ ಮರೆಯಲಿಲ್ಲದ ನಿಜವು ನಿಂದಿತ್ತಾಗಿ,
ನಿರ್ನಾಮವಾಯಿತ್ತು, ನಿಃಪತಿಯಾಯಿತ್ತು,
ಅಗಮ್ಯದಲ್ಲಿ ಗಮನ ಕೆಟ್ಟಿತ್ತು, ನಿಂದಲ್ಲಿ ನಿರಾಳವಾಯಿತ್ತು,
ಕೂಡಲಸಂಗಮದೇವರಲ್ಲಿ ಶಬ್ದಮುಗ್ಧವಾಯಿತ್ತು. ॥೫೨॥

೧೦೧೧

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ,
ಅರಿವನ್ನಕ್ಕರ ಹಾಡಿ ಹೊಗಳಿದೆ.
ಅರಿವುಗೆಟ್ಟು ಮರಹು ನಷ್ಟವಾಗಿ,
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ,
ಕೂಡಲಸಂಗಯ್ಯನಲ್ಲಿ ಸರ್ವನಿವಾಸಿಯಾಗಿರ್ದೆನು. ॥೫೩॥

೧೦೧೨

ಅರಿವಿಂದರಿದು ಏನುವ ತಟ್ಟದೆ ಮುಟ್ಟದೆ ಇದ್ದೆನಯ್ಯಾ,
ಅಂತರಂಗ ಸನ್ನಿಹಿತ, ಬಹಿರಂಗ ನಿಶ್ಚಿಂತನಾಗಿದ್ದೆನಯ್ಯಾ.
ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ
ಗುರುಕಾರುಣ್ಯವ ಬಯಸುತ್ತಿದ್ದೆ,
ಕೂಡಲಸಂಗಮದೇವಾ. ॥೫೪॥

೧೦೧೩

ಅರಿವಿಂದಲರಿವೆನೆಂದಡೆ ಅರಿವಿಂಗಸಾಧ್ಯ,
ಅರಿಯದೆ ಅರಿದ ಪರಿ ಎಂತಯ್ಯಾ?
ಭಾವಿಸಿ ಬೆರೆಸುವೆನೆಂದಡೆ ಭಾವ ನಿರ್ಭಾವವೆಂದುದಾಗಿ
ಮತ್ತೆ ಭಾವಿಸಿಯಲ್ಲದೆ ಕಾಣಬಾರದಯ್ಯಾ.
ವಾಙ್ಮನಕ್ಕಗೋಚರವೆಂದಡೆ
ನುಡಿಯಲಿಲ್ಲದೆ ನಡೆ ಸಾಧ್ಯವಹ ಪರಿ ಎಂತು ಹೇಳಯ್ಯಾ?
ಹಲವು ಮಾತಿನ ನಿಲವು ಒಂದೆಂಬ

ನುಡಿಗಡಣದ ನಿಜವ ಬಲ್ಲವರಾರು ಹೇಳಯ್ಯಾ?
ನಿಮ್ಮ ಮಾತೆಂಬ ಪರತತ್ವವೊಂದಲ್ಲದೆ ಎರಡುಂಟೆ?
ಕೂಡಲಸಂಗಮದೇವ ಕಡೆಮುಟ್ಟ ನೋಡುವಡೆ ನುಡಿಗೆಡೆಯಿಲ್ಲ,
ಕೃಪೆಯಿಂದ ಕರುಣವ ಮಾಡಯ್ಯಾ ಪ್ರಭುವೆ. ॥೫೫॥

೧೦೧೪

ಅರಿವಿನ ಆಪ್ಯಾಯನಕ್ಕೆ ಅನುಭಾವವೆ ತೃಪ್ತಿ,
ಅರಿವು ನೆರೆ ಕೂಡಿ, ಆ[ಚಾ]ರವೆ ಪ್ರಾಣವಾಗಿ ವಿಶ್ರಮಿಸಿದ ಬಳಿಕ,
ಶ್ರೀಗುರು ಕೃಪೆಯ ಮಾಡಿದ ಪ್ರಾಣಲಿಂಗದ ಘನವೆಂತೆಂದಡೆ:
ಮತ್ಸ್ಯನುಂಗಿದ ಮಾಣಿಕ್ಯದಂತೆ,
ಮುತ್ತುನುಂಗಿದ ನೀರಿನಂತೆ,
ಕಣ್ಣಾಲಿ ನುಂಗಿದ ನೋಟದಂತೆ,
ಬಯಲನೊಳಕೊಂಡ ಬ್ರಹ್ಮಾಂಡದೊಳಗಿಪ್ಪ
ಸ್ವಯಾನುಭಾವಿಗಳ ಅನುಭಾವವ ತೋರಿ ಬದುಕಿಸಾ,
ಕೂಡಲಸಂಗಮದೇವಾ. ॥೫೬॥

೧೦೧೫

ಅರಿವನರಿತವ ಕೆಡಿಸಿತ್ತು ಬಡತನವೆಂಬ ರಾಹು,
ಉಳ್ಳವನ ಉಳುವೆಯ ಕೆಡಿಸಿತ್ತು ಮೋಹವೆಂಬ ರಾಹು,
ಕಾಬವನ ಕಾಣ್ಕೆಯ ಕೆಡಿಸಿತ್ತು ಕಾಮವೆಂಬ ಕತ್ತಲೆ,
ಎನ್ನ ಮನದ ಭಯಕ್ಕಂಜಿ ನಿಮ್ಮ ಮೊರೆಹೊಕ್ಕೆ
ಕೂಡಲಸಂಗಮದೇವಾ. ॥೫೭॥

೧೦೧೬

ಅರಿವಿಲ್ಲದ ಕಾಯವುಂಟೆ?
ಅರಿವಿಲ್ಲದ ಪ್ರಾಣವುಂಟೆ?
ಅರಿವಿಲ್ಲದ ನಿಲವುಂಟೆ?
ಭಾವವಿಲ್ಲದ ಭಕ್ತಿಯುಂಟೆ?
ಕೂಡಲಸಂಗಮದೇವಾ,

ನೀವು ಪರಿಪೂರ್ಣರಾಗಿಪ್ಪಿರಾಗಿ,
ಅವಗುಣಕ್ಕೆ ತೆರಹಿಲ್ಲ. ॥೫೮॥

೧೦೧೭

ಅರಿವು ಮರವೆಯೊಳಡಗಿ, ಮರವೆ ಅರಿವಿನೊಳಡಗಿ,
ತೆರಹಿಲ್ಲದಿರ್ದನೆಂಬ ಹಮ್ಮಿದೇನೋ, ಹಮ್ಮಿದೇನೋ.
ಬ್ರಹ್ಮಾದ್ ಬ್ರಹ್ಮವ ನುಂಗಿ, ಮತ್ತಾ ಪರಬ್ರಹ್ಮನು ತಾನೆಂದೆಂಬ
ಹಮ್ಮಿದೇನೊ, ಹಮ್ಮಿದೇನೊ.
ಆದಿ ಶೂನ್ಯವು ಶೂನ್ಯ, ಮಧ್ಯ ಶೂನ್ಯವು ಶೂನ್ಯ,
ಅಂತ್ಯ ಶೂನ್ಯವು ಶೂನ್ಯ,
ಶೂನ್ಯವಾದ ಬಳಿಕ ಅಲ್ಲಿಂದತ್ತ ನಿಂದ ನಿಲವನಾರು ಬಲ್ಲರು ಹೇಳಾ?
ಬಯಲು ಚಿತ್ರಿಸಿದ ಚಿತ್ರವನಾ ಬಯಲರಿಯದಂತೆ
ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವು. ॥೫೯॥

೧೦೧೮

ಅರಿವುವಿಡಿದು, ಅರಿವನರಿದು,
ಅರಿವೆ ನೀವೆಂಬ ಭ್ರಾಂತು ಎನಗಿಲ್ಲವಯ್ಯಾ,
ಮರಹುವಿಡಿದು, ಮರಹ ಮರೆದು,
ಮರಹು ನೀವೆಂಬ ಮರಹಿನವ ನಾನಲ್ಲವಯ್ಯಾ.
ದೇಹ ಪ್ರಾಣಂಗಳ ಹಿಂಗಿ, ದೇಹವಿಡಿದು,
ದೇಹ ನಿಮ್ಮದೆಂಬ ಭ್ರಾಂತುಸೂತಕಿ ನಾನಲ್ಲವಯ್ಯಾ.
ನಿಮ್ಮ ಅರಿದ ಅರಿವ ಭಿನ್ನವಿಟ್ಟು ಕಂಡೆನಾದಡೆ
ನಿಮ್ಮಾಣೆ ಕಾಣಾ, ಕೂಡಲಸಂಗಮದೇವಾ. ॥೬೦॥

೧೦೧೯

ಅರ್ಥವುಳ್ಳವರೆಲ್ಲ ಅರಸಿಂಗಂಜುವರಯ್ಯಾ,
ಭಕ್ತಿಯುಳ್ಳವರೆಲ್ಲ ಜಂಗಮಕ್ಕಂಜುವರಯ್ಯಾ,
ಸೂಳೆಗೊಲಿದವರೆಲ್ಲ ಸೂಳೆಯೆಂಜಲು ತಿಂಬರಯ್ಯಾ.
ಮಾಂಸವ ಮಚ್ಚಿದವರೆಲ್ಲ ಸೊಣಗನೆಂಜಲ ತಿಂಬರಯ್ಯಾ.

ಕೂಡಲಸಂಗನ ಶರಣರ ಒಕ್ಕುಮಿಕ್ಕುದ
ಲಿಂಗಕ್ಕೆ ಕೊಟ್ಟುಕೊಂಡು ಯೋಗ್ಯವಾದವರ
ನಮ್ಮ ಚೆನ್ನಬಸವಣ್ಣ ಬಲ್ಲ. ॥೬೧॥

೧೦೨೦

ಅರ್ಪಿತವ ಮಾಡುವ ಅವಧಾನವು,
ಅನ್ಯವ ಸೋಂಕದ ಅವಧಾನವು,
ಅರಿಷಡ್ವರ್ಗಂಗಳ ಮುಟ್ಟಲೀಯದವಧಾನದ ಪರಿಯ ನೋಡಾ,
ಪಂಚಭೂತವೆಂಬ ಭವಿಯ ಕಳೆದು ಪ್ರಸಾದಿಯಾಗಿಪ್ಪ ಪರಿಯ ನೋಡಾ,
ಪಂಚೇಂದ್ರಿಯಂಗಳ ಗುಣವಳಿದು ಪಂಚವಿಂಶತಿತತ್ವದಲ್ಲಿ ಪರಿಣಾಮಿ
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೬೨॥

೧೦೨೧

ಅರ್ಪಿತವೆಂಬೆನೆ?
ದೇವರೊಂದಿಲ್ಲವಾಗಿ, ಅರ್ಪಿಸುವ ಭಕ್ತ ಮುನ್ನವೆ ಇಲ್ಲ.
ಅರ್ಪಿತ ಅನರ್ಪಿತ ನೀನೆ ಎಂಬೆ,
ಕೂಡಲಸಂಗಮದೇವಾ. ॥೬೩॥

೧೦೨೨

ಅರ್ಪಿಸಿದ ಸುಖ ತಪ್ಪದೆ ಇಂಬುಗೊಂಡಿತ್ತಾಗಿ
ಅಲ್ಲಿಯೆ ಅರ್ಪಿತವಾಯಿತ್ತಯ್ಯಾ.
ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದರಿಯೆ,
ಕಾಯಸುಖವೆ ಲಿಂಗಸುಖಕ್ಕೀಡಾಯಿತ್ತು.
ಅಂತಪ್ಪ ಅರ್ಪಿತ ದಷ್ಟ ತಲೆಗೇರಿದಲ್ಲಿ
ನೀ ಮುಂತಾಗಿರ್ದೆ, ಕೂಡಲಸಂಗಮದೇವಾ. ॥೬೪॥

೧೦೨೩

ಅಲ್ಲಾ ಎನಬಾರದು, ಅಹುದೆನಬಾರದು,
ಕೂಡಲಸಂಗನ ಶರಣರ ಸಂಗ
ಕರಗಸದ ಬಾಯಿಧಾರೆಯಂತೆ ಅತಿ ಬಿರಿದಯ್ಯಾ. ॥೬೫॥

೧೦೨೪
ಅಷ್ಟವಿಧಾರ್ಚನೆ ಅರಸರಿಯದ ಬಿಟ್ಟಿ ಕಾಣಿರೇ,
ಸಗುಣ ನಿರ್ಗುಣ ಸ್ಥೂಲ ಸೂಕ್ಷ್ಮ,
ಅವು ನಿಜವನರಿವವೆ? ಅವು ತಮ್ಮ ತಾವರಿಯವು.
ಅವ ಭಿನ್ನವೆಂದರಸಲುಂಟೆ? ಕೂಡಲಸಂಗಮದೇವಾ. ॥೬೬॥

೧೦೨೫
ಅಷ್ಟಷಷ್ಟಿಯಾದವರೆಲ್ಲ ತೀರ್ಥವಾಸಿಗಳಪ್ಪರೆ?
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವರೆಲ್ಲ
ಲಿಂಗಾರ್ಚಕರಪ್ಪರೆ, ಅಯ್ಯಾ?
ವೇಷವ ಹೊತ್ತು ಗ್ರಾಸಕ್ಕೆ ತಿರುಗುವ
ಈ ವೇಷ ದುರಾಚಾರಿಗಳ ಮೆಚ್ಚುವನೆ
ಕೂಡಲಸಂಗಮದೇವ? ॥೬೭॥

೧೦೨೬
ಅಸುರನೈಶ್ವರ್ಯವನೆಣಿಸುವಡೆ,
ಸೀತೆಗೆ ಸರಿಮಿಗಿಲೆನಿಸುವ ಸತಿಯರೆಂಟು ಕೋಟಿ,
ಮತಿವಂತ ಶಿರಃಪ್ರಧಾನರೆಂಟು ಕೋಟಿ,
ಲೆಕ್ಕವಿಲ್ಲದ ದಳವು, ಲಕ್ಷ ಕುಮಾರರು,
ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು,
ಸುರಪತಿಯರೆಲ್ಲರಾನಾತ ಸೆರೆಮಾಡಿ ಆಳಿದ.
ಶಿವನೆ, ನೀನು ಕರುಣಿಸಿದಂತಿರದೆ,
ಪರವಧುವಿನ ಬೇಟವವನ ಪ್ರಾಣ ಕೊಂಡಿತ್ತು.
ಇದನರಿದು ಪರವಧುಗಳಿಗೆಳಸುವರ ಕಂಡು
ಗರುಡನ ಕಂಡ ಸರ್ಪ ಧರೆಗಿಳಿವಂತೆ ಅಡಗಿಪ್ಪೆನಯ್ಯಾ
ಕೂಡಲಸಂಗಮದೇವಾ. ॥೬೮॥

೧೦೨೭
ಅಸ್ತಿ ಭಾತಿಯೆಂಬ ಭಿತ್ತಿಯ ಮೇಲೆ,
ಶ್ರೀ ನಾಮ ರೂಪವೆಂಬ ಚಿತ್ರ ಬರೆಯಿತ್ತು.

ಇಲ್ಲದ ಭಿತ್ತಿಯ ಮೇಲೆ ಉಂಟೆಂಬ ಚಿತ್ರದಂತಿರ್ದಿತ್ತು.
ಅದೆಂತೆಂದಡೆ;
'ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಮ್
ಆದ್ಯತ್ರಯಂ ಬ್ರಹ್ಮರೂಪಂ ಮಾಯಾರೂಪಂ ತತೋದ್ವಯಮ್'
ಎಂದುದಾಗಿ–ಎನಗಿದೇ ಮಾಯೆಯಾಗಿ ಕಾಡಿತ್ತು,
ಕೂಡಲಸಂಗಮದೇವಾ. ॥೬೯॥

೧೦೨೮
ಅಹುದಹುದು; ಕೆರೆಯ ತಪ್ಪಿ ಬಾವಿಯ ಬಿದ್ದಂತೆ,
ಮುಳ್ಳ ಕಳೆದು ದಸಿಯ ಬೆಟ್ಟಿದಂತೆ,
ಬದುಕಿದ ಹಕ್ಕಿಯ ಕಿಚ್ಚಿನೊಳಗಿಕ್ಕುವರೆ,
ಕೂಡಲಸಂಗಮದೇವಾ? ॥೭೦॥

೧೦೨೯
ಅಳವಡಿಸಿದ ಪದಾರ್ಥ ಅರ್ಪಿತಕ್ಕೆ ಸರಿಯಾಯಿತ್ತು,
ಅಳವಡಿಸದ ಮುನ್ನವೆ ಕೈಕೊಳ್ಳುತ್ತೈದಾನೆ ಶಿವನು,
ಸಂದ ಪದಾರ್ಥ ಸಲ್ಲಲಿ.
ಕೂಡಲಸಂಗಮದೇವರ ಆರೋಗಣೆಯ ಅವಸರಕ್ಕೆ
ಸಂಚಿತ ಸಯದಾನವ ತೆಗೆಸಿರೆ, ಸೊಡ್ಡಳ ಬಾಚರಸರೆ. ॥೭೧॥

೧೦೩೦
ಅಳಿವನಲ್ಲ, ಉಳಿವನಲ್ಲ, ಪ್ರಳಯವೆಂಬುದ ಮುನ್ನರಿಯನು,
ಕಳಾಕುಳರಹಿತನು, ಉಭಯಕುಳರಹಿತನು,
ಅರಿವ ಬೈಚಿಟ್ಟು ಮೆರೆವ ಗಮನನಲ್ಲ.
ಕೂಡಲಸಂಗಯ್ಯನೆಂಬ ಶಬ್ದಮುಗ್ಧನ
ಭಾವದ ಬಳಕೆಯಲ್ಲಿ ಗೆಲಬಹುದೆ ಹೇಳಾ. ॥೭೨॥

೧೦೩೧
ಆಗದ ಕಾಲಕ್ಕೆ ಆಗೆಂದಡಾಗದು,
ಆಗಬೇಕೆಂದು ನಾ ಬೆಂಬೀಳೆನಯ್ಯಾ.

ಆಗುಮಾಡುವ ತಂದೆ ನೀನು,
ಆಡಿ ಬಹ ಮಕ್ಕಳಿಗೆ ಊಡುವ ತಾಯಂತೆ ನೋಡಿ
ಸಲಹೆನ್ನ ಕೂಡಲಸಂಗಮದೇವಾ. ॥೭೩॥

೧೦೩೨

ಆಚಾರದ ಸುಖವನಂಗದಲ್ಲಿ ನೆಲೆಗೊಳಿಸಿ ತೋರಿದ,
ಅನುಭಾವದನುವ ಪ್ರಾಣದಲ್ಲಿ ನೆಲೆಗೊಳಿಸಿ ತೋರಿದ,
ಮಹಾಜ್ಞಾನದ ಸುಖವ ಸರ್ವಾಂಗದಲ್ಲಿ ನೆಲೆಗೊಳಿಸಿ ತೋರಿದ.
ಇಂತೀ ತ್ರಿವಿಧಸ್ಥಲನಿರ್ಣಯವನೆನಗೆ ಅರುಹಿದ ಕಾರಣ
ಕೂಡಲಸಂಗಮದೇವಯ್ಯಾ, ಮಡಿವಾಳ ಮಾಚಯ್ಯನ ಪಾದಕ್ಕೆ
ನಮೋ ನಮೋ ಎನ್ನುತ್ತಿರ್ದೆನು. ॥೭೪॥

೧೦೩೩

ಆಚಾರವನಾಚಾರವಾಯಿತ್ತು,
ಸೀಮೆ ನಿಸ್ಸೀಮೆಯಾಯಿತ್ತು,
ಪ್ರಾಣಸಂಚ ತಪ್ಪಿ ಲಿಂಗಸಂಚವಾಯಿತ್ತು,
ಎಲ್ಲಿ ಶಬ್ದವಲ್ಲಿಯೆ ಲಿಂಗಸ್ವಾಯತವಾಯಿತ್ತು,
ಎಲ್ಲಿ ಸೋಂಕು ಅಲ್ಲಿಯೆ ಲಿಂಗಸ್ವಾಯತವಾಯಿತ್ತು,
ಎಲ್ಲಿ ರೂಪವಲ್ಲಿಯೆ ಲಿಂಗಸ್ವಾಯತವಾಯಿತ್ತು,
ಎಲ್ಲಿ ರುಚಿಯಲ್ಲಿಯೆ ಲಿಂಗಸ್ವಾಯತವಾಯಿತ್ತು,
ಎಲ್ಲಿ ಗಂಧವಲ್ಲಿಯೆ ಲಿಂಗಸ್ವಾಯತವಾಯಿತ್ತು,
ಕೂಡಲಸಂಗಮದೇವರ ಕರುಣರಸಾಬ್ಧಿ
ಕಡೆಗೋಡಿವರಿಯಿತ್ತಯ್ಯಾ, ಎನ್ನ ಮೇಲೆ. ॥೭೫॥

೧೦೩೪

ಆತ್ಮನ ನಿಜವನರಿದು
ಪರಮಾತ್ಮ ಲಿಂಗವು ತಾನೆಂದರಿದ ಶರಣಂಗೆ
ಎಂತಿರ್ದಂತೆ ಪೂಜೆ ನೋಡಾ!
ಭೋಗಿಸಿದುದೆಲ್ಲವು ಶಿವಾರ್ಪಿತ,

ಶರಣ ರುಚಿಸಿದುದೆಲ್ಲವು ಪ್ರಸಾದ,
ಶರಣನರಿದುದೆಲ್ಲವು ಪರಬ್ರಹ್ಮ,
ಶರಣ ನುಡಿದುದೆಲ್ಲವು ಪರತತ್ತ್ವ,
ಶರಣ ತಾನೆ ಕೂಡಲಸಂಗಮದೇವ. ॥೭೬॥

೧೦೩೫
ಆತ್ಮನ ಸುಳುಹು ನಿಂದ ಮತ್ತೆ ಕಾಯದ ಅವತಾರವಳಿಯಿತ್ತು.
ನೀನೆಂಬ ಭಾವವರತಲ್ಲಿ, ಕೂಡಲಸಂಗಮದೇವರ ಭಾವ
ಪ್ರಭುದೇವರಲ್ಲಿ ಐಕ್ಯವಾಯಿತ್ತು. ॥೭೭॥

೧೦೩೬
ಆತ್ಮನೆ ಲಿಂಗವೆಂಬರು,
ಆತ್ಮನ ದೇಹರಹಿತವಾಗಿ ಕಾಬವರುಂಟೆ?
ಪ್ರಾಣವೆ ಲಿಂಗವೆಂಬರು,
ಪ್ರಾಣವನು ಕಾಯವ ಬಿಟ್ಟು ಬೇರೆ ಕಾಣಬಹುದೆ?
ಕಂಡೆಹೆನೆಂದಡೆ ಅದು ನಿರವಯ, ನಿರಾಕಾರವಾದುದು,
ಭಾವಕ್ಕೆ ಬಾರದು. ಭಾವಕ್ಕೆ ಬಾರದುದ ಪೂಜಿಸಬಹುದೆ?
ಅದು ಕಾರಣ, ಕಾಯದ ಕರಸ್ಥಲದಲ್ಲಿ ಕ್ರಿಯಾಲಿಂಗವಿಡಿದು ನೋಡಲು
ಪ್ರಾಣ ಆತ್ಮನೆಂಬವು ಬೇರಿಲ್ಲ.ಇದು ಕಾರಣ,
ಇಷ್ಟವ ಬಿಟ್ಟು ಬಟ್ಟಬಯಲೆ ವಸ್ತುವೆಂಬಮಿಟ್ಟಿಯ ಭಂಡರ
ನಮ್ಮ ಕೂಡಲಸಂಗನ ಶರಣರು ಮೆಚ್ಚರು. ॥೭೮॥

೧೦೩೭
ಆದಿ ಅನಾದಿಗಳಿಲ್ಲದಂದು, ಸದಾಶಿವನಿಲ್ಲದಂದು,
ಶಿವನಿಲ್ಲದಂದು, ಏನೆಂಬುದೇನು ತಾನಿಲ್ಲದಂದು,
ಕೂಡಲಸಂಗಯ್ಯ ತನ್ನ ತಾನೇನೆಂದು ಅರಿಯನಂದು. ॥೭೯॥

೧೦೩೮
ಆದಿಪುರುಷನ ಮನವು ಮಹವನಕ್ಕಾಡೆ,
ಮತ್ತಲ್ಲಿಯೆ ಆನಂದದಿಂದ ಆ ನಿರವಯವು ಬೆಸಲಾಯಿತ್ತು.

ಧರೆ, ಅಂಬರ, ವಾರುಧಿ ಸಹಿತ,
ಜಾರೆಯೆಂದಡೆ ಜಗದಲ್ಲಿ ನಿಂದವು ಚೌರಾಸಿಲಕ್ಷ ಜೀವಜಾಲಗಳು.
ಹೋರೆಯೆಂದಡೆ ಆಕಾಶದಲ್ಲಿ ನಿಂದರು
ಗರುಡಗಂಧರ್ವಸಿದ್ಧ ವಿದ್ಯಾಧರದೇವರ್ಕಳು–
ಮೊದಲಾದ ದೇವಸಮೂಹಂಗಳೆಲ್ಲ.
ಕೂಡಲಸಂಗಮದೇವಾ,
ನೀವು ಮನದಲ್ಲಿ ಸಂಕಲ್ಪಿಸಿ ಆಗೆಂದಡೆ ಆದವು. ॥೮೦॥

೧೦೩೯

ಆದಿ ಭಕ್ತ, ಅನಾದಿ ಜಂಗಮ,
ಆದಿ ಶಕ್ತಿ, ಅನಾದಿ ಶಿವನು ನೋಡಾ.
ಎನ್ನ ಆದಿಪಿಂಡಕ್ಕೆ ನೀನೆ ಆಧಾರವಾಗಿ ತೋರಿದಡೆ
[ಎನ್ನ] ಹೃದಯಕಮಲದಲ್ಲಿ ನಿಮ್ಮ ಕಂಡೆನು.
ಆ ಕಾಂಬ ಜ್ಞಾನವೆ ಜಂಗಮ,
ಆ ಜಂಗಮವಿಡಿದಲ್ಲದೆ ಲಿಂಗವ ಕಾಣಬಾರದು.
ಆ ಜಂಗಮವಿಡಿದಲ್ಲದೆ ಗುರುವ ಕಾಣಬಾರದು,
ಆ ಜಂಗಮವಿಡಿದಲ್ಲದೆ ಪ್ರಸಾದವ ಕಾಣಬಾರದು.
ಕಾಯ ಭಕ್ತ, ಪ್ರಾಣ ಜಂಗಮವೆಂಬ ವಚನವ ತಿಳಿಯಲು
ಎನ್ನ ಪ್ರಾಣ ನೀವಲ್ಲದೆ ಮತ್ತಾರು ಹೇಳಯ್ಯಾ?
ಇದು ಕಾರಣ, ನಿಮ್ಮ ಘನವ ಕಿರಿದು ಮಾಡಿ,
ಎನ್ನನೊಂದು ಘನವ ಮಾಡಿ ನುಡಿವಿರಿ,
ಕೂಡಲಸಂಗಮದೇವಾ. ॥೮೧॥

೧೦೪೦

ಆದಿಯನರುಹಿದ, ಅನಾದಿಯ ತೋರಿದ,
ಇಹವ ಕೆಡಿಸಿದ, ಪರವ ನಿಲಿಸಿದ, ಘನವ ತೋರಿದ.
ಮನವ ಸರಿಸವಿಟ್ಟು ಅನುವ ತೋರಿ ಆಯತವ ಮಾಡಿ
ತನುವ ಮರೆಸಿ ಮಹವನರುಪಿದ,
ಹಿಂದಣ ಪೂರ್ವಾಶ್ರಯವ ಹಿಂದುಮಾಡಿ ತೋರಿ,

ಮುಂದಣ ಗತಿಯ ಸಂದೇಹವ ಬಿಡಿಸಿದ.
ಕೂಡಲಸಂಗಮದೇವರಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೮೨॥

೧೦೪೧

ಆದಿಯನಾದಿಯಿಂದತ್ತತ್ತ ಮುನ್ನ
ಲಿಂಗಜಂಗಮವೆಂಬುದನಾರು ಬಲ್ಲವರಿಲ್ಲವೆಂದು,
ಇದರ ಸಕೀಲಸಂಬಂಧವ ತಿಳುಹಲೆಂದು,
ಮರ್ತ್ಯಕ್ಕೆ ಕಳುಹಿದನು ಶಶಿಧರನು.
ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನಲ್ಲದೆ ಮತ್ತಾರನೂ ಕಾಣೆ.
ಶಿಷ್ಯಂಗೆ ಗುರು ಉಪದೇಶವ ಮಾಡಬೇಕಲ್ಲದೆ,
ಗುರುವಿಂಗೆ ಶಿಷ್ಯನನುಗ್ರಹವ ಮಾಡಿದ ಠಾವುಂಟೆ?
ಎನ್ನ ಅರಿವಿನ ಆದಿಗೆ ನೀನೆ ಕರ್ತನೆಂದು ನಾನಿರುತಿರಲು
ನಿನಗೆ ನಾನಿನ್ನು ಅನುಗ್ರಹವ ಮಾಡುವ ಪರಿ ಎಂತಯ್ಯಾ?
ಕೂಡಲಸಂಗಮದೇವರ ಸ್ವರೂಪವೆಂದು ನಿನ್ನ ಕಂಡಿಪ್ಪೆನು
ಕಾಣಾ ಚೆನ್ನಬಸವಣ್ಣಾ. ॥೮೩॥

೧೦೪೨

ಆದಿಯ ಲಿಂಗವ ತಂದಾತನಲ್ಲಯ್ಯನು.
ಅನಾದಿಯ ಲಿಂಗವ ತಂದಾತನಲ್ಲಯ್ಯನು.
ಭಾಪುರೆ ಜಂಗಮವೆ, ನಿರ್ವಯಲಯನವಗ್ರಹಿಸಿದಿರಿ,
ನಿಮಗೋಸುಗ ಮಾಡುವ ಸಯದಾನವನು
ನಡೆಗೆಟ್ಟು ಮಾಡುವೆನು, ನುಡಿಗೆಟ್ಟು ಮಾಡುವೆನು,
ಸರ್ವಕುಳಕ್ಕೆ ನೀನೆಂದು ಅಲ್ಲಯ್ಯನ ಪ್ರಸಾದಕ್ಕೆ ಕೈಯಾನುವೆನು.
ನವಬ್ರಹ್ಮರ ಕೇರಿಯೊಳಗೆ ಅಲ್ಲಯ್ಯನ ಪ್ರಭೆ,
ರುದ್ರಭೂಮಿಯೊಳಗೆ ಅಲ್ಲಯ್ಯನ ಪ್ರಭೆ,
ಬಂದು ನಿಂದ ನಿಲವಿಂಗೆ ಅಲ್ಲಯ್ಯನ ಪ್ರಭೆ.
ಸಯದಾನವಿಲ್ಲದಡೆ ಎನ್ನ ನೀಡುವೆನು
ಕೂಡಲಸಂಗಮದೇವಯ್ಯಾ. ॥೮೪॥

೧೦೪೩

ಆದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ,
ಅನಾದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ,
ಸಾಧ್ಯಾಸಾಧ್ಯವೆಂಬ ಸೂತಕ ಶಬ್ದಕ್ಕತೀತ.
ಆ ಲಿಂಗವೆ ಆಲಿಂಗನವಾಗಿ ಅವಿರಳ ಸಂಪನ್ನನಾದಲ್ಲಿ,
ಭೇದಭಾವವುಂಟೆಂಬೆನೆ? ಅದೆ ಭವಕ್ಕೆ ಬೀಜ.
ಎನ್ನ ಪ್ರಾಣಲಿಂಗ ನೀವೆಂದೆ ಇಪ್ಪೆನಯ್ಯಾ
ಕೂಡಲಸಂಗಮದೇವಾ. ॥೮೫॥

೧೦೪೪

ಆದಿ ಲಿಂಗ, ಅನಾದಿ ಜಂಗಮವು,
ಆ ಜಂಗಮಕ್ಕೆ ಮಾಡಿದಡೆ ಪರಮಾನಂದ ಸುಖವಯ್ಯಾ.
ಗುರುವಿಂಗೆ ಪರಮಗುರು ಜಂಗಮವೆಂದುದು
ಕೂಡಲಸಂಗಯ್ಯನ ವಚನ. ॥೮೬॥

೧೦೪೫

ಆದುದನರಿಯೆ, ಹೋದುದನರಿಯೆ,
ಬಂದುದನರಿಯೆ, ನಿಂದುದನರಿಯೆ,
ಒಳಗನರಿಯೆ, ಹೊರಗನರಿಯೆ,
ಇಹವನರಿಯೆ, ಪರವನರಿಯೆ,
ಭಾವವನರಿಯೆ, ನಿರ್ಭಾವವನರಿಯೆ,
ಶೂನ್ಯವನರಿಯೆ, ನಿಃಶೂನ್ಯವನರಿಯೆ.
ಕೂಡಲಸಂಗಮದೇವಯ್ಯಾ,
ಇವೆಲ್ಲವ ಮಾಡಿ ಕೂಡಿದಾತ ಮಡಿವಾಳ ಬಲ್ಲನಾಗಿ,
ನಾನೇನೆಂದೂ ಅರಿಯೆನಯ್ಯಾ. ॥೮೭॥

೧೦೪೬

ಆನು, ನಿಮ್ಮ ಬಂಟರ ಬಂಟ ನಾನಯ್ಯಾ,
ಆನು, ನಿಮ್ಮ ಲೆಂಕರ ಲೆಂಕ ನಾನಯ್ಯಾ,
ಆನು, ನಿಮ್ಮ ತೊತ್ತಿರ ಪಡುಗವ ತೆಗೆವ ಪಡಿದೊತ್ತಯ್ಯಾ.

ಕೂಡಲಸಂಗನ ಶರಣರಿಗೆಲ್ಲಾ ಸಂಗನಬಸವನ ಬಿನ್ನಪ:
ಕವಳಿಗೆಗೆ ಸಂದಿತ್ತು;
ನಿಮ್ಮ ನಿಜಪದದಲ್ಲಿ ಬೆರಸೆಂದು ಕೃಪೆಮಾಡಿರಯ್ಯಾ. ॥೮೮॥

೧೦೪೭

ಆನು ನಿಮ್ಮಲ್ಲಿ ಪ್ರಪಂಚಿನುಪಚಾರವನರಿಯೆನಯ್ಯಾ.
ನಿಮ್ಮ ಪಾದದಲ್ಲಿ ತದ್ಗತನಾಗಿಪ್ಪೆ,
ಭಕ್ತಿ ಯುಕ್ತಿ ವಿರಕ್ತಿಯ ಉಪಚಾರವನರಿಯೆನು.
ಕೂಡಲಸಂಗಮದೇವಾ,ಭಿನ್ನವಿಲ್ಲದ
ಭೃತ್ಯಾಚಾರಕ್ಕೆ ಬಂದ ಪದಾರ್ಥವ ನೀನೆಂದೆ ಚಿತ್ತೈಸಯ್ಯಾ. ॥೮೯॥

೧೦೪೮

ಆನು ಭಕ್ತನಲ್ಲ, ಆನು ಯುಕ್ತನಲ್ಲ,
ನೀವು ಮಾಡಿದ ಸೂತ್ರದ ಬೊಂಬೆ ನಾನಯ್ಯ.
ಎನಗೆ ಬೇರೆ ಸ್ವತಂತ್ರವುಂಟೆ?
ನೀವೆನ್ನ ಮಾನಾಭಿಮಾನಕ್ಕೊಡೆಯರಾದ ಬಳಿಕ
ಎನ್ನ ತಪ್ಪ ಲೆಕ್ಕಿಸದೆ ಬಿಜಯಂಗೈವುದಯ್ಯಾ,
ಕೂಡಲಸಂಗಮದೇವಾ. ॥೯೦॥

೧೦೪೯

ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ.
ನಡೆದು ತಪ್ಪುವೆ, ನುಡಿದು ತಪ್ಪುವೆ,
ಮಾಡಿ ತಪ್ಪುವೆ, ನೀಡಿ ತಪ್ಪುವೆ,
ಅರಿದು ತಪ್ಪುವೆ, ಮರೆದು ತಪ್ಪುವೆ,
ಎನ್ನ ತಪ್ಪನೊಪ್ಪವಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಕೂಡಲಸಂಗಯ್ಯನೆಂಬ ಗಂಡನೆನ್ನ
ಬೆರಸಬೇಕೆಂದು ಕರೆಯಲಟ್ಟಿದನು,
ಶಿವಶರಣರೆಲ್ಲರಿಗೆ ಶರಣೆಂದು
ಬೀಳ್ಕೊಂಬ ತವಕದಲ್ಲಿದ್ದೆನು. ॥೯೧॥

೧೦೫೦

ಆನೆತ್ತ ಬಲ್ಲೆನಯ್ಯಾ ನಿಮ್ಮ ಭಕ್ತಿಯ ಘನವ?
ಆನೆತ್ತ ಬಲ್ಲೆನಯ್ಯಾ ನಿಮ್ಮ ಶ್ರೀಪಾದವ ನಿಲವ?
ಕಾಯದ ಕಳವಳದ ಮರೆಯಲಿದ್ದವರಲ್ಲಿ ನಂಬುಗೆಯಳವಡುವುದೆ?
ಕೂಡಲಸಂಗಮದೇವಾ,
ಎನ್ನವಗುಣವ ನೋಡದೆ ಕರುಣದಿಂದ
ಭಕ್ತಿಯ ನಿಲವ ತೋರಾ ತಂದೆ. ॥೯೨॥

೧೦೫೧

ಆನೆ, ಭಂಡಾರ, ಲಾಯದ ಕುದುರೆಯ ಬೇಡುವರಿಲ್ಲದೆ
ಬಡವಾದೆನಯ್ಯಾ. ಬೇಡುವುದೇನು ದೇವಾ?
ಮುನ್ನ ಬೇಡಿದೆ ಸಿಂಧುಬಲ್ಲಾಳನ ವಧುವನು,
ಇನ್ನು ಬೇಡದಡೆ, ನಿಗಳವನಿಕ್ಕುವೆ.
ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡ
ಕೂಡಲಸಂಗಮದೇವಾ. ॥೯೩॥

೧೦೫೨

ಆರತವಡಗಿತ್ತೆನ್ನ, ಬಯಕೆ ಸಮನಿಸಿತ್ತೆನ್ನ,
ಸಂಕಲ್ಪ ಸಮನಿಸಿತ್ತೆನ್ನ,
ಸ್ವಯವು ದೊರೆಕೊಂಡಿತ್ತೆನ್ನ.
ನಿಮ್ಮ ನೋಡಿ ಎನ್ನ ಕಂಗೆ ಮಂಗಳಮಯದ ಸುಖಸಂಗವಾಯಿತ್ತು.
ಅಯ್ಯಾ, ಒಳಗು ಹೊರಗು, ಹೊರಗೊಳಗೆಂಬುದ ತಿಳಿದು,
ಪ್ರಭುವಿನ ಕರುಣದಿಂದ ಕೂಡಲಸಂಗಮದೇವರಲ್ಲಿ
ತೆರಹಿಲ್ಲದಿರ್ದೆನು. ॥೯೪॥

೧೦೫೩

ಆರಾರ ಮನೆಗೆ ಹೋದಡೆ ಸಾರೆನ್ನರು, ಸರಕುಮಾಡರು,
ಆರ ಸಾರುವೆನಯ್ಯಾ, ಆರ ಹೊದ್ದುವೆನಯ್ಯಾ.
ಭಕ್ತಿಯಿಲ್ಲ–ಬಡವನೆಂದು ಒಡನೆ ನುಡಿಯರು,

ಆರ ಸಾರುವೆನಯ್ಯಾ
ಕಾರುಣ್ಯಮೂರ್ತಿ, ನೀನಲ್ಲದೆ ಇನ್ನಾರ ಸಾರುವೆನಯ್ಯಾ,
ಕೂಡಲಸಂಗಯ್ಯಾ. ॥೯೫॥

೧೦೫೪

ಆಶೆ ಇಚ್ಛೆಗೆನ್ನ ಗಾಸಿ ಮಾಡದಿರಯ್ಯಾ,
ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ
ಕೂಡಲಸಂಗಮದೇವಾ, ನಿಮ್ಮ ಧರ್ಮ. ॥೯೬॥

೧೦೫೫

ಆಹ್ವಾನವಿಲ್ಲ ಪ್ರಾಣಲಿಂಗವಾಗಿ,
ವಿಸರ್ಜನವಿಲ್ಲ ಲಿಂಗ ನೆಲೆಗೊಂಡಿಪ್ಪುದಾಗಿ.
ಇದು ಕಾರಣ, ಆಹ್ವಾನ ವಿಸರ್ಜನವಿಲ್ಲ, ಶರಣನ ಪರಿ ಬೇರೆ;
ಅಂಗಸಂಗವೆ ಲಿಂಗ, ಲಿಂಗಸಂಗವೆ ಮನ,
ಕೂಡಲಸಂಗನ ಶರಣ ಸುಯಿಧಾನಿ. ॥೯೭॥

೧೦೫೬

ಇಂದ್ರನಾವಾಸ, ಉಪೇಂದ್ರನ ಓಲಗ
ಚಂದ್ರಮೌಳಿಯನರಿಯದೆ ಹೋಯಿತ್ತು,
ಬಂಧಮೋಕ್ಷದ ಭವಬಂಧನ ಬಿಡದನ್ನಕ್ಕರ
ಮತ್ತೊಂದರ ಮುಖ ಜನಿಸಿತಲ್ಲಾ.
ಕೂಡಲಸಂಗಮದೇವಾ,
ಚೆನ್ನಬಸವಣ್ಣನ ಸನ್ನಿಧಿಯಿಂದಲಾನು ಬದುಕಿದೆನು. ॥೯೮॥

೧೦೫೭

ಇದ್ದ ಪರಿ ಇಂತುಟಿದೆ ನೋಡಯ್ಯಾ;
ನಿಂದಡೆ ನೆಳಲಿಲ್ಲ, ನಡೆದಡೆ ಹೆಜ್ಜೆಯಿಲ್ಲ,
ಭೂತಳದೊಳಗೆ ಕಂಡುದಿಲ್ಲ.
ಇಂತಪ್ಪ ಅನಿಯಮದ ಸುಳುಹು,

ಅಹುದಹುದು, ಅರಿದರಿದು
ಜಂಗಮಸ್ಥಲ ಇಂತುಟಲ್ಲದೆ, ಎಂತುಟು ಹೇಳಾ?
ಆಪ್ಯಾಯನದ ಅರಿಕೆಯ ಹೊಲಬ ಕಾಣಬಾರದು,
ಊಡಿಸಿದಡೆ ಉಂಬನೊ ಉಣ್ಣನೊ
ಉಂಬಂಥವರಾದಡೆ ನೀಡುವೆ ಕೂಡಲಸಂಗಮದೇವರಿಗೆ
ಚೆನ್ನಬಸವಣ್ಣಾ, ನೀನಹುದಹುದೆನಲಿಕೆ. ॥೯೯॥

೧೦೩೮

ಇನ್ನೇವೆನಿನ್ನೇವೆ ಕೆಮ್ಮನೆ ಕೆಟ್ಟೆನು,
ಇನ್ನೇವೆನಿನ್ನೇವೆ ಕೆಮ್ಮನೆ ಕೆಟ್ಟೆನು.
ನಿಮ್ಮ ಶರಣರು ಬಂದು ಬಾಗಿಲೊಳಿರಲು,
ದಿಮ್ಮನೆ ಇದಿರೆದ್ದು ವಂದಿಸಲರಿಯದೆ
ಕೆಟ್ಟ ಕೇಡನೇನೆಂದುಪಮಿಸುವೆನು.
ಕೂಡಲಸಂಗಮದೇವಾ,
ನಾನುಭಯಭ್ರಷ್ಟನೆಂಬುದು ಎನಗಿಂದರಿಯಬಂದಿತ್ತು. ॥೧೦೦॥

೧೦೩೯

ಇನ್ನೇವೆನಿನ್ನೇವೆನಯ್ಯಾ,
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು,
ಎನ್ನ ನಿಂದಲ್ಲಿ ನಿಲ್ಲಲೀಯದು,
ಎನ್ನ ಕುಳಿತಲ್ಲಿ ಕುಳ್ಳಿರಲೀಯದು,
ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ. ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ.
ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ.
ಕೂಡಲಸಂಗಮದೇವಾ
ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ,
ಎಂದು ನಿಮ್ಮನೊಡಗೂಡುವೆನಯ್ಯಾ. ॥೧೦೧॥

೧೦೪೦

ಇಷ್ಟಲಿಂಗಕ್ಕರ್ಪಿಸಿ, ಮೃಷ್ಟಾನ್ನವನುಂಡು,
ಇಷ್ಟಾರ್ಥಸಿದ್ಧಿಯ ಪಡೆದೆಹೆವೆಂಬ ಮರಳುಗಳು ನೀವು ಕೇಳಿರೆ;

ಪ್ರಾಣಲಿಂಗಸ್ಥಲ ನಿಮಗೆಲ್ಲಿಯದು?
ಪ್ರಸಾದಸ್ಥಲ ನಿಮಗೆಲ್ಲಿಯದು?
ಓಗರವನುಂಡು ಆಗಾದೆವೆಂದಡೆ,
ಮೂಗಕೊಯ್ಯದೆ ಮಾಣ್ಬನೆ?
ನಮ್ಮ ಕೂಡಲಸಂಗಮದೇವನು ॥೧೦೨॥

೧೦೬೧

ಈ ಕೈಯಲೆ ಸುಖವು, ಈ ಕೈಯಲೆ ದುಃಖವು.
ಏಕಯ್ಯಾ, ನೀ ನಮ್ಮ ಬರಿದೆ ಬಳಲಿಸುವೆ?
ನಾನಾರ ಸೇರುವೆನಯ್ಯಾ ಆರೂ ಇಲ್ಲದ ದೇಸಿಗ ನಾನು,
ಕೂಡಲಸಂಗಮದೇವಾ. ॥೧೦೩॥

೧೦೬೨

ಈರೇಳು ರತ್ನ, ಹದಿನೆಂಟು ಲಕ್ಷಗಜ,
ನಾರಿಯರು ನಾಲ್ಕು ಲಕ್ಷವು ಮೂವತ್ತೆರಡುಸಾವಿರ,
ಮಕ್ಕಳು ಹದಿನಾರು ಲಕ್ಷ,
ಅವರುಗಳೇರುವ ರಥಂಗಳು
ಸೂರ್ಯನ ರಥಕ್ಕೆ ಸರಿಮಿಗಿಲೆನಿಸುವ ರಥಂಗಳು, ಸಾಲದೆ?
ಸಿರಿಗೆ ನೆಲೆಯೆನಿಸುವ ಅಸಂಖ್ಯಾತ ಪುರ,
ಮೂರುವರೆ ಕೋಟಿ ಬಂಧುಗಳು,
ಮೂವತ್ತೆಂಟು ಕೋಟಿ ಜಾತ್ಯಶ್ವ,
ಇಪ್ಪತ್ತೆಂಟು ಕೋಟಿ ಮೈಗಾವಲ ವೀರಭಟರು,
ಛಪ್ಪನ್ನ ದೇಶದ ರಾಯರುಗಳೆಲ್ಲರು ಕಪ್ಪಕಾಣಿಕೆಯಂ ತೆತ್ತು ಬಹರು.
ಕೂಡಲಸಂಗಮದೇವಾ, ನಿಮ್ಮ ಕೃಪೆ ತಪ್ಪಿದಲಿ
ಆ ಸಗರ ಕಾರ್ತವೀರ್ಯರೊಂದು ಕ್ಷಣದಲ್ಲಿ ಮಡಿದರು. ॥೧೦೪॥

೧೦೬೩

ಉದಕದ ಬರವು ವಿಶ್ವಕ್ಕೆ ಹೊಸಪರಿ ಎಂಬಂತೆ
ಮಾಟವ ಮಾಡುವೆನು ಜಂಗಮಕ್ಕೆ,

ನಿರವಯದ ಸುಳುಹು ನಿಬ್ಬೆರಗಿನ ಬರವಿಂಗೆ.
ಕೂಡಲಸಂಗಮದೇವ ಕೇಳಯ್ಯಾ,
ಇಂತಲ್ಲದೆ ನಿಮ್ಮ ನಿಜವನರಿಯಬಾರದೆನಗೆ. ॥೧೦೫॥

೧೦೬

ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ
ಮಾಡುವ ಕರ್ಮಿ ನೀ ಕೇಳಾ:
ಉದಯವೆಂದೇನೊ ಶರಣಂಗೆ,
ಮಧ್ಯಾಹ್ನವೆಂದೇನೊ ಶರಣಂಗೆ,
ಅಸ್ತಮಾನವೆಂದೇನೊ ಶರಣಂಗೆ.
ಮಹಾಮೇರುವಿನ ಮರೆಯಲ್ಲಿರ್ದು
ತಮ್ಮ ನೆಳಲನರಸುವ ಭಾವಭ್ರಮಿತರ ಮೆಚ್ಚ,
ನಮ್ಮ ಕೂಡಲಸಂಗಮದೇವರು. ॥೧೦೬॥

೧೦೭

ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ?
ಬಯಲ ಮರೀಚಿಜಲಕ್ಕೆ ಕೆಸರುಂಟೆ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ?
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ. ॥೧೦೭॥

೧೦೮

ಊರ ಮಾರಿಯ ಮೂಗ ಕೊಯ್ವೆ,
ಆಲದ ಬ್ರಹ್ಮನ ಹಲ್ಲ ಕಳೆವೆ,
ಅಂತರದವ ನಮ್ಮ ಲೆಂಕ ನೋಡಾ,
ಆಕಾಶದವ ನಮ್ಮಾಳು ನೋಡಾ.
ಎಮಗೆ ಕೂಡಲಸಂಗಯ್ಯನುಂಟು,
ಕಟ್ಟು, ಜವನೆಂಬ ತರುವಲಿಗೊರೆಯ. ॥೧೦೮॥

೧೦೬೭

ಊರಿಗೆ ಹೊಸಬರು ಬಂದರೆ
ಪುರದೊಳಗಣ ಶ್ವಾನ ನೋಡಿ ಬಗುಳದೆ ಸುಮ್ಮನೆ ಬಿಡುವುದೆ?
ಊರಿಗೆ ಹೊರಗಾದ ಶರಣರು ಊರುಗಳ ಮಧ್ಯದೊಳಿರಲು
ದೂಷಕರು ದೂಷಿಸದಿಪ್ಪರೇ ಅಯ್ಯ?
ದೂಷಕರ ಧೂಮಕೇತುಗಳು ನಿಮ್ಮ ಶರಣರು,
ಕೂಡಲಸಂಗಮದೇವಾ. ॥೧೦೯॥

೧೦೬೮

ಎಡದ ಪಾದದಲೊದ್ದಡೆ ಬಲದ ಪಾದವ ಹಿಡಿವೆ,
ಬಲದ ಪಾದದಲೊದ್ದಡೆ ಎಡದ ಪಾದವ ಹಿಡಿವೆ,
ತ್ರಾಹಿ ತ್ರಾಹಿ ತಪ್ಪೆನ್ನದು, ಕ್ಷಮೆ ನಿಮ್ಮದು.
ಕೂಡಲಸಂಗಮದೇವಾ, ನಿಮ್ಮ ಕರುಣದ ಕಂದ ನಾನು. ॥೧೧೦॥

೧೦೬೯

ಎಣಿಕೆಗೆ ಬಂದ ಸಯದಾನ ಕ್ಷಣಕ್ಕೆ ಪಾಕವಾಗಲು,
ಗಣನೆಯಿಲ್ಲದೆ ನೀಡುತ್ತಿರಲು,
ತೋರದ ಮುನ್ನವೆ ಅರ್ಪಿತವಾದವು.
ಇಂತು ಎಣಿಸಿ ನೋಡೆಹೆನೆಂದಡೆ ಮನಕೆ ಸಾಧ್ಯವಲ್ಲ,
ಬಯಲು ಬಾಯಿದೆಗೆದಂತೆ ಉಣ್ಣುತ್ತಿದ್ದಾನು,
ಕೂಡಲಸಂಗಮದೇವನು. ॥೧೧೧॥

೧೦೭೦

ಎತ್ತ ನೋಡಿದಡತ್ತ ನಿಮ್ಮ ತೇಜವನೇ ಕಾಬೆನಲ್ಲದೆ,
ಮತ್ತೊಂದ ಕಾಣೆ.
ಎನ್ನ ಚಿತ್ತ ನೋವಲ್ಲಿ ನೊಂದಲ್ಲಿ
ನೆನೆವಲ್ಲಿ ನೀನೇ ಇಪ್ಪೆಯಾಗಿ,
ಬೆಳಗಿರಲು ಕತ್ತಲೆಯುಂಟೆ?
ಕೂಡಲಸಂಗಮದೇವಾ. ॥೧೧೨॥

೧೦೭೧

ಎನಗೆ ಜನನವಾಯಿತ್ತೆಂಬರು ಎನಗೆ ಜನನವಿಲ್ಲವಯ್ಯಾ,
ಎನಗೆ ಮರಣವಾಯಿತ್ತೆಂಬರು ಎನಗೆ ಮರಣವಿಲ್ಲವಯ್ಯಾ.
ಜನನವಾದಡೆ ನಿಮ್ಮ ಪಾದೋದಕ ಪ್ರಸಾದವ ಕೊಂಬೆ,
ಮರಣವಾದಡೆ ನಿಮ್ಮ ಶ್ರೀಚರಣವನೆಯ್ದುವೆ.
ಬಾವನ್ನದ ವೃಕ್ಷವು ಊರೊಳಗಿದ್ದಡೇನು?
ಅಡವಿಯೊಳಗಿದ್ದಡೇನು?
ಪರಿಮಳ ಒಂದೇ, ಕೂಡಲಸಂಗಮದೇವಾ. ॥೧೧೩॥

೧೦೭೨

ಎನಗೆ ನಾನೇ ಹಗೆ ನೋಡಯ್ಯಾ,
ಎನಗೆ ನಾನೇ ಕೆಳೆ ನೋಡಯ್ಯಾ.
ನಿಮ್ಮ ಸದ್ಭಕ್ತರೊಡನೆ ವಿರೋಧಮಾಡಿದಡೆ ಎನ್ನ ಕೊಲುವುದಾಗಿ,
ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ ಎನ್ನ ಕಾಯ್ವುದಾಗಿ.
ಅನ್ಯ ಹಗೆಯೆಲ್ಲಿ? ಕೆಳೆಯೆಲ್ಲಿ?
ಬಾಗಿದ ತಲೆಯ ಮುಗಿದ ಕೈಯಾಗಿರಿಸು,
ಕೂಡಲಸಂಗಮದೇವಾ. ॥೧೧೪॥

೧೦೭೩

ಎನ್ನಂಗದ ಮೇಲಿದ್ದ ಲಿಂಗವ ದಿಟಮಾಡಲರಿಯೆನು,
ಜಂಗಮವೆ ಲಿಂಗವೆಂಬ ಮಾತೆನಗೆ ಕಷ್ಟ.
ಕಲಹ ಕಡುಗೋಪಿ ನಾನಯ್ಯಾ, ದುರಾಚಾರಿ ನಾನು,
ಎನಗೆ ಕರುಣಿಸು ಕೂಡಲಸಂಗಮದೇವಾ. ॥೧೧೫॥

೧೦೭೪

ಎನ್ನಂತರಂಗದೊಳಗೆ ಅರಿವಾಗಿ,
ಎನ್ನ ಬಹಿರಂಗದೊಳಗೆ ಆಚಾರವಾಗಿ ನೀನೆಡೆಗೊಂಡು,
ಎನ್ನ ಮನದೊಳಗೆ ಘನ ನೆನಹಾಗಿ ಮೂರ್ತಿಗೊಂಡು,
ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲವೆಂಬ

ಚತುರ್ವಿಧವನೂ ಎನಗೆ ಸ್ವಾಯತವ ಮಾಡಿ ತೋರಿ,
ಪ್ರಾಣಲಿಂಗವೆಂಬ ಹಾದಿಯ ಸೆರಗ ತೋರಿಸಿ,
ಎಲ್ಲಾ ಅಸಂಖ್ಯಾತರನೂ ಪಾವನವ ಮಾಡಿದಿರಾಗಿ-
ಕೂಡಲಸಂಗಮದೇವಾ,
ನಿಮ್ಮಿಂದ ಸಕಲ ಸನುಮತವ ನಾನರಿದೆನಲ್ಲದೆ,
ಎನ್ನಿಂದ ನೀನಾದೆ ಎಂಬುದ
ನಿಮ್ಮ ಪ್ರಮಥರು ಮೆಚ್ಚರು ನೋಡಯ್ಯಾ. ॥೧೧೬॥

೧೦೭೫

ಎನ್ನಂತರಂಗ ನೀವಯ್ಯಾ,
ಎನ್ನ ಬಹಿರಂಗ ನೀವಯ್ಯಾ,
ಎನ್ನ ಅರಿವು ನೀವಯ್ಯಾ,
ಎನ್ನ ಮರಹು ನೀವಯ್ಯಾ,
ಎನ್ನ ಭಕ್ತಿ ನೀವಯ್ಯಾ,
ಎನ್ನ ಯುಕ್ತಿ ನೀವಯ್ಯಾ,
ಎನ್ನ ಆಲಸ್ಯ ನೀವಯ್ಯಾ,
ಎನ್ನ ಪರವಶ ನೀವಯ್ಯಾ,
ಸಮುದ್ರವ ಹೊಕ್ಕ ಕಾಲುವಳ್ಳದಲ್ಲಿ
ಕೊರತೆಯನರಸುವುದೆ? ಆಸಮುದ್ರವು.
ಎನ್ನ ಲೇಸು ಹೊಲ್ಲೆಹವೆಂಬುದು
ನಿಮ್ಮದೆಂಬುದ ನೀವೆ ಬಲ್ಲಿರಿ,
ಇದಕ್ಕೆ ನಿಮ್ಮ ಪಾದವೆ ಸಾಕ್ಷಿ, ಎನ್ನ ಮನವೆ ಸಾಕ್ಷಿ,
ಕೂಡಲಸಂಗಮದೇವಾ. ॥೧೧೭॥

೧೦೭೬

ಎನ್ನ ಕರಸ್ಥಲದ ಲಿಂಗವ ಅನಿಮಿಷ ಕೊಂಡನು,
ಅನಿಮಿಷನ ಕರಸ್ಥಲದ ಲಿಂಗವ ನೀವು ಕೊಂಡಿರಿ.
ನಿಮ್ಮ ಕರಸ್ಥಲವೆ ಪರಸ್ಥಲವಾಯಿತ್ತು,
ಕುರುಹಳಿದಲ್ಲಿ ಕುರುಹ ಕೊಂಬ ಪರಿ ಎಂತಯ್ಯಾ?

ಕೊಡುವವರು ಕೊಂಬವರೊಳಗೆ ಸಿಲುಕಿದ ಬಳಿಕ
ಕೊಂಬವರು ಕೊಡುವವರೊಳಗೆ ಸಿಲುಕಿದ ಬಳಿಕ,
ಕೂಡಲಸಂಗಮದೇವ ಪ್ರಭುವೆ,
ನಿಮ್ಮ ಕರಸ್ಥಲದ ಲಿಂಗವೆನಗೆ ಸಾಧ್ಯವಹ ಪರಿಯೆಂತಯ್ಯಾ? ॥೧೧೮॥

೧೦೭೭

ಎನ್ನ ಕಾಯಕ್ಕೆ ಕಾಹ ಹೇಳುವರಲ್ಲದೆ,
ಮನಕ್ಕೆ ಕಾಹ ಹೇಳುವರಿಲ್ಲಯ್ಯಾ,
ಅಣಕದ ಮಿಂಡತನಂಗಳ ನೋಡಿ ಕಂಡೆನವ್ವಾ.
ಈತನ ಲೀಲೆಗಂಡಾನು ಬೆರಗಾದೆ.
ಕೂಡಲಸಂಗಮದೇವ ಎನ್ನ ಮನಕ್ಕೆ ಕಾಹ ಹೇಳಿದನವ್ವಾ. ॥೧೧೯॥

೧೦೭೮

ಎನ್ನ ಕಾಯದ ಕತ್ತಲೆಯ ಕಳೆಯಲರಿಯೆನು,
ಎನ್ನ ಜೀವದ ನಿಲವ ಗೆಲಲರಿಯೆನು,
ಎನ್ನ ಭಾವದ ಸೂತಕವ ಕಳೆಯಲರಿಯೆನು.
ನಾನೆಂತು ಬಲ್ಲೆನಯ್ಯಾ?
ನಿಮ್ಮ ಘನಮಹಿಮರ ನಿಲವ.
ಕೂಡಲಸಂಗಮದೇವಾ,ನಿಮ್ಮ ಶರಣ
ಮಡಿವಾಳ ಮಾಚಿತಂದೆಯ ಘನವ ನೀವೆ ಬಲ್ಲಿರಿ. ॥೧೨೦॥

೧೦೭೯

ಎನ್ನ ಕಾಯದ ಕತ್ತಲೆ ಹಿಂಗಿತ್ತು, ಚೆನ್ನಬಸವಣ್ಣಾ ಇಂದಿನಲ್ಲಿ.
ಎನ್ನ ತನುಮನಧನದ ಲೋಭವಳಿದು ತಳವೆಳಗಾಯಿತ್ತು,
ಚೆನ್ನಬಸವಣ್ಣಾ ಇಂದಿನಲ್ಲಿ.
ಎನ್ನನೆಡೆಗೊಂಡ ಅಹಂಕಾರ ನಿರ್ವಯಲಾಯಿತ್ತು
ಚೆನ್ನಬಸವಣ್ಣಾ ಇಂದಿನಲ್ಲಿ.
ಕೂಡಲಸಂಗಮದೇವರ ತೃಪ್ತಿಯ ತೆರನ ನೀನು ತೋರಿದೆಯಾಗಿ
ನಾನು ಬದುಕಿದೆ ಕಾಣಾ, ಚೆನ್ನಬಸವಣ್ಣಾ. ॥೧೨೧॥

೧೦೮೦

ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು,
ಎನ್ನ ಮನದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು,
ಎನ್ನ ಅರಿವಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು.
ಒಳಗು ಹೊರಗು, ಹೊರಗು ಒಳಗೆಂಬ ಭೇದವನರಿಯದೆ ಇದ್ದೆನು.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರು ಎನ್ನ ಪಾವನವ ಮಾಡಿದ ಪರಿಣಾಮವ
ಅಂತಿಂತೆನಲಮ್ಮದೆ ನಮೋ ನಮೋ ಎನುತ್ತಿದ್ದೆನು. ॥೧೨೨॥

೧೦೮೧

ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ,
ಎನ್ನ ಮನವ ನಿರ್ಮಳವ ಮಾಡಿದಾತ ಮಡಿವಾಳ,
ಎನ್ನಂತರಂಗವ ಬೆಳಗಿದಾತ ಮಡಿವಾಳ,
ಎನ್ನ ಬಹಿರಂಗವ ಬಿಡಿಸಿದಾತ ಮಡಿವಾಳ.
ಕೂಡಲಸಂಗಮದೇವಾ,
ಎನ್ನ ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ. ॥೧೨೩॥

೧೦೮೨

ಎನ್ನ ಗಂಡ ಬರಬೇಕೆಂದು,
ಎನ್ನಂತರಂಗವೆಂಬ ಮನೆಯ ತೆರಹು ಮಾಡಿ,
ಅಷ್ಟದಳವೆಂಬ ಓವರಿಯೊಳಗೆ
ನಿಜನಿವಾಸವೆಂಬ ಹಾಸುಗೆಯ ಹಾಸಿ,
ಧ್ಯಾನವೆಂಬ ಮೇಲುಕಟ್ಟಂ ಕಟ್ಟಿ, ಜ್ಞಾನವೆಂಬ ದೀಪವ ಬೆಳಗಿ,
ನಿಷ್ಕ್ರೀಯೆಂಬ ಉಪಕರಣಂಗಳ ಹರಹಿಕೊಂಡು,
ಪಶ್ಚಿಮದ್ವಾರವೆಂಬ ಬಾಗಿಲ ತೆರೆದು,
ಕಂಗಳೆ ಪ್ರಾಣವಾಗಿ ಬರವ ಹಾರುತ್ತಿರ್ದೆನಯ್ಯಾ.
ನಾನು, ಬಾರದಿರ್ದಡೆ ಉಮ್ಮಳಿಸಿಹೆನೆಂದು
ತಾನೆ ಬಂದು ಎನ್ನ ಹೃದಯಸಿಂಹಾಸನದ ಮೇಲೆ
ಮೂರ್ತಗೊಂಡಡೆ ಎನ್ನ ಬಯಕೆ ಸಯವಾಯಿತ್ತು.

ಹಿಂದೆ ಹನ್ನೆರಡು ವರುಷದಲ್ಲಿದ್ದ ಚಿಂತೆಯಿಂದು ನಿಶ್ಚಿಂತೆಯಾಯಿತ್ತು.
ಕೂಡಲಸಂಗಮದೇವರು
ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು. ॥೧೨೪॥

೧೦೮೩

ಎನ್ನ ಗುರು ಪರಮಗುರು ನೀವೆ ಕಂಡಯ್ಯ,
ಎನ್ನ ಗತಿಮತಿ ನೀವೆ ಕಂಡಯ್ಯ,
ಎನ್ನ ಅರಿವಿನ ಜ್ಯೋತಿ ನೀವೆ ಕಂಡಯ್ಯ,
ಎನ್ನಂತರಂಗ ಬಹಿರಂಗದ ಮಹವು ನೀವೆ ಕಂಡಯ್ಯ.
ಕೂಡಲಸಂಗಮದೇವಾ,
ನೀವೆನಗೆ ಗುರು, ನಾ ನಿಮಗೆ ಶಿಷ್ಯನೆಂಬುದನು
ನಿಮ್ಮ ಶರಣ ಸಿದ್ಧರಾಮಯ್ಯದೇವರೆ ಬಲ್ಲರು. ॥೧೨೫॥

೧೦೮೪

ಎನ್ನ ತನುಮನವೆರಡನೂ
ಗುರು ಕಳೆದು ಲಿಂಗದಲಿ ಏಕವ ಮಾಡಿದನಾಗಿ,
ಎನ್ನ ಅಂತರಂಗ ಬಹಿರಂಗವೆರಡೂ ನಿಮ್ಮವು ನೋಡಾ!
ನಿಮ್ಮ ಅಂತರಂಗದೊಳಗೆ ನಿಮ್ಮನೆ ಇಂಬಿಟ್ಟುಕೊಂಬೆ,
ನಿಮ್ಮ ಬಹಿರಂಗದೊಳಗೆ ನಿಮ್ಮನೆ ನೀವಾಗಿ ಪೂಜಿಸುವೆ,
ನಿಮ್ಮ ಅರಿವಿಂದ ನಿಮ್ಮನೆ ಅರಿವೆ ಕಾಣಾ,
ಕೂಡಲಸಂಗಮದೇವಾ. ॥೧೨೬॥

೧೦೮೫

ಎನ್ನ ತನುವಿಂಗೆ ನೀನೊಡೆಯ,
ಎನ್ನ ಮನಕ್ಕೆಯೂ ನೀನೊಡೆಯ,
ಎನ್ನ ಧನಕ್ಕೆಯೂ ನೀನೊಡೆಯನಾದ ಬಳಿಕ
ಎನ್ನರಿವು ನಿನ್ನದು, ಎನ್ನ ಮರಹು ನಿನ್ನದು.
ಕೂಡಲಸಂಗಮದೇವಾ,
'ಭೃತ್ಯಾಪರಾಧಃ ಸ್ವಾಮಿನೋ ದಂಡಃ'
ಎಂಬುದ ವಿಚಾರಿಸಿ ನೋಡಾ ಪ್ರಭುವೆ. ॥೧೨೭॥

೧೦೮೬

ಎನ್ನ ತನುವಿಡಿದವರ ತನುವ ಬೆರೆಸುವೆನು,
ಎನ್ನ ಮನವಿಡಿದವರ ಮನವ ಬೆರೆಸುವೆನು,
ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು.
ಕೂಡಲಸಂಗನ ಶರಣರನು
ಒಡಗೊಂಡು ಬಂದೆನ್ನ ಭವವ ಹರಿವೆನು. ॥೧೨೮॥

೧೦೮೭

ಎನ್ನ ನುಡಿ ಎನಗೆ ನಂಜಾಯಿತ್ತು,
ಎನ್ನ ಅಲಗೆ ಎನ್ನ ಕೊಂದಿತ್ತು.
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ.
ತರಳತನದಲ್ಲಿ ಕೆಟ್ಟೆನಯ್ಯಾ,
ಭಕ್ತಿಯ ಹೊಲಬನರಿಯದೆ ಮರುಳಾದೆನಯ್ಯಾ.
ಆಳು ಮುನಿದಡೆ ಆಳೇ ಕೆಡುವನು,
ಆಳ್ದ ಮುನಿದಡೆ ಆಳೇ ಕೆಡುವನು.
ನೀವು ಮುನಿದಡೆ ನಾನೇ ಕೆಡುವೆನಯ್ಯಾ
ಕೂಡಲಸಂಗಮದೇವಾ. ॥೧೨೯॥

೧೦೮೮

ಎನ್ನನುಭಾವದ ಗಮ್ಯವೆ,
ಎನ್ನರುಹಿನ ವಿಶ್ರಾಮವೆ,
ಎನ್ನ ಭಾವದ ಬಯಕೆಯೆ,
ಎನ್ನ ನಿಜದ ನಿಲವೆ,
ಎನ್ನ ಪರಿಣಾಮದ ಮೇರುವೆ,
ಎನ್ನ ಘನದ ನಿಲವೆ,
ನಿಮ್ಮ ಸುಳುಹು ಎತ್ತಲಡಗಿತ್ತೊ!
ನಿಮ್ಮ ನಾಮ ನಿರ್ನಾಮವಾಯಿತ್ತೆ ಎಲೆ ಪರಮಗುರುವೆ
ಕೂಡಲಸಂಗಯ್ಯನಲ್ಲಿ
ಉರಿಯುಂಡ ಕರ್ಪುರದಂತಾದೆಯಲ್ಲಾ, ಪ್ರಭುವೆ ॥೧೩೦॥

೧೦೮೯

ಎನ್ನ ಭಕ್ತಿ ಎಲವದ ಕಾಯಫಲದಂತೆ ನೋಡಯ್ಯಾ,
ಹೊರಗೆ ಹೆಂಪು, ಒಳಗೆ ಬೂರವಯ್ಯಾ,
ನಿಮ್ಮ ದೇವರೆಂದು ಪೂಜಿಸಿ ಮಾನವರೆಂದು ಮರೆವೆನು.
ಸಗುಣ ನಿರ್ಗುಣವೆರಡೂ ಅಳವಡದ ಸಂದೇಹಿ ನಾನಯ್ಯಾ.
ಕೂಡಲಸಂಗಮದೇವಾ,
ಎನ್ನ ಅಪರಾಧವ ಸೈರಿಸುವಡೆ ನೀವಲ್ಲದೆ ಮತ್ತಾರನೂ ಕಾಣೆ,
ಶರಣಾರ್ಥಿ ಶರಣಾರ್ಥಿ, ಕೃಪೆಯಿಂದ ಕರುಣಿಸಿರಯ್ಯಾ. ॥೧೩೧॥

೧೦೯೦

ಎನ್ನ ಭಕ್ತಿಯ ಶಕ್ತಿಯು ನೀನೆ,
ಎನ್ನ ಯುಕ್ತಿಯ ಶಕ್ತಿಯು ನೀನೆ,
ಎನ್ನ ಮುಕ್ತಿಯ ಶಕ್ತಿಯು ನೀನೆ.
ಎನ್ನ ಮಹಾಘನದ ನಿಲವಿನ ಪ್ರಭೆಯನುಟ್ಟು
ತಳವೆಳಗಾದ ಸ್ವಯಜ್ಞಾನಿ
ಕೂಡಲಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ನಿಲವ
ಮಡಿವಾಳನಿಂದರಿದು ಬದುಕಿದೆನಯ್ಯಾ, ಪ್ರಭುವೆ. ॥೧೩೨॥

೧೦೯೧

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ
ಬೆರಸಿಯಲ್ಲದೆ ಅಗಲಿ ಸೈರಿಸಲಾರೆನಯ್ಯಾ.
ತ್ರಾಹಿ ತ್ರಾಹಿ, ಘನಮಹಿಮಾ,
ನಿಮ್ಮ ಪಾದಾರ್ಚನೆಗೆ
ಎನ್ನ ಪರಮಾನಂದಜಲವ ತುಂಬುವೆನಯ್ಯಾ.
ಪೂಜೆಯ ಮಾಡುವಡೆ ಎನ್ನ ಹೃದಯಕಮಲವನ[ರ್ಪಿ]ಸುವೆ,
ಅರತಿಯಿಂದ ಆರತಿಯನೆತ್ತುವೆ,
ಎನ್ನ ಮಹಾಪ್ರಕಾಶದ ಧೂಪವ ಬೀಸುವೆ,
ಎನ್ನ ಸ್ವಾನುಭಾವದ ಗಂಧವನೀವೆ.
ಈ ತೆರನಲ್ಲದೆ, ಅಷ್ಟವಿಧಾರ್ಚನೆ

ಷೋಡಶೋಪಚಾರವೆಂಬುದಕ್ಕೆ
ಬೇರೆ ತೆರನ ಕಾಣೆನಯ್ಯಾ.
ಕೂಡಲಸಂಗಮದೇವಯ್ಯಾ,
ಪ್ರಭುವೆನ್ನ ಪ್ರಾಣಲಿಂಗವೆಂಬುದು
ಎನಗಿಂದು ಕಾಣಬಂದಿತ್ತು ನೋಡಯ್ಯಾ. ॥೧೩೩॥

೧೮೨

ಎನ್ನ ಮನವೆಂಬ ಮರ್ಕಟನು ತನುವಿಕಾರವೆಂಬ ಅಲ್ಪಸುಖದಾಸೆಗಾಡಿ,
ವೃಥಾ ಭ್ರಮೆಗೊಂಡು, ನಾನಾ ದೆಸೆಗೆ ಲಂಘಿಸಿ
ಅಳಲಿಸಿ ಬಳಲಿಸುತ್ತಿದೆ ನೋಡಾ!
ಕೂಡಲಸಂಗಮದೇವರೆಂಬ ಕಲ್ಪವೃಕ್ಷಕ್ಕೆ ಲಂಘಿಸಿ
ಅಪರಿಮಿತದ ಸುಖವನೈದದು, ನೋಡಾ. ॥೧೩೪॥

೧೮೩

ಎನ್ನಯ್ಯಾ ನಿಮ್ಮನರಸುತ್ತಿದ್ದೇನೆ,
ಎನ್ನಯ್ಯಾ ನಿಮ್ಮನರಸುತ್ತಿದ್ದೇನೆ,
ಎನ್ನಯ್ಯಾ ಕೀಟಧ್ಯಾನದಲ್ಲಿ ನಿಮ್ಮನರಸುತ್ತಿದ್ದೇನೆ.
ಎನ್ನಯ್ಯಾ ಕೂಡಲಸಂಗಮದೇವಾ,
ಭ್ರಮರದ ಲೇಸಿನಂತೆ ಕಾರುಣ್ಯವ ಮಾಡು,
ತಪ್ಪೆನ್ನದು, ತಪ್ಪೆನ್ನದು ಶಿವಧೋ ಶಿವಧೋ. ॥೧೩೫॥

೧೮೪

ಎನ್ನ ವಚನರಚನೆಯ ಮೆಚ್ಚ,
ಅಡಿಗಡಿಗೆನ್ನ ಮನದ ಮೈಲಿಗೆಯ ತೊಳೆದು,
ಹೋದ ಪ್ರಾಣವ ಮರಳಿ ತಂದು ರಕ್ಷಿಸಿದ.
ಕೂಡಲಸಂಗಮದೇವಯ್ಯಾ, ಮಡಿವಾಳಯ್ಯಗಳ ಕರುಣದಿಂದ
ಮರುಳುಶಂಕರದೇವರ ನಿಲವ ಕಂಡು ಬದುಕಿದೆನು
ಕಾಣಾ ಕಿನ್ನರಿ ಬ್ರಹ್ಮಯ್ಯಾ.

೧೯೫

ಎನ್ನ ಶಿರ ನಿಮ್ಮ ಚರಣವೊರಸೊರಸಿ ಬೆರಸಿ ಭೇದವಿಲ್ಲಯ್ಯಾ,
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ,
ನಿಮ್ಮ ಅಂಗುಷ್ಠದ ಮೊನೆಯ ಸೋಂಕಲೊಡನೆ ಹರಿದುದು ನೋಡಯ್ಯ.
ಕೂಡಲಸಂಗಮದೇವಯ್ಯಾ, ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತು. ||೧೩೬||

೧೯೬

ಎಮ್ಮಯ್ಯನ ಬಲ್ಲವರು ಒಮ್ಮೆಯೂ ಅರ್ಪಿಸರು,
ಅವರರ್ಪಿಸುವನ್ನಬರ ಎಮ್ಮಯ್ಯ ಸುಮ್ಮನಿರನು.
ಬೆಂದ ಬಿಸಿಯಾರಿದಡೆ ಪ್ರಾಣೇಶನೊಲ್ಲ,
ಕೂಡಲಸಂಗಮದೇವನುಪಚಾರದರ್ಪಿತವನೋಗಡಿಸುವ .||೧೩೭||

೧೯೭

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು,
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.
ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,
ಉಪಮಿಸಬಲ್ಲವರ ಕಾಣೆನು. ||೧೩೮||

೧೯೮

ಎಲ್ಲರ ಪ್ರಾಣಲಿಂಗ ಒಂದೆ ಕಂಡಯ್ಯಾ,
ಎನ್ನ ಪ್ರಾಣಲಿಂಗ ಬೇರೆ ಕಂಡಯ್ಯಾ.
ಕೂಡಲಸಂಗಮದೇವ ಕೇಳಯ್ಯಾ,
ಜಂಗಮವೆನ್ನ ಪ್ರಾಣಲಿಂಗ ಕಂಡಯ್ಯಾ. ||೧೩೯||

೧೧೯೯

ಏನೆಂದುಪಮಿಸುವೆನಯ್ಯಾ?
ತನ್ನಿಂದ ತಾ ತೋರದೆ,
ಗುರುಮುಖದಿಂದ ತೋರಿದ ತನ್ನ ನಿಲವ, ನಿರುಪಮನು.
ಶಬ್ದಮುಗ್ಧವಾಗಿ, ಇದ್ದೆಡೆಯನಿದಿರಿಂಗೆ ತೋರದೆ
ಇರವೆ ಪರವಾಗಿರ್ದ ಅಜಡನು.
ಇನನುದಯಕಾಲಕ್ಕೆ ಕುಕ್ಕುಟ ಧ್ವನಿದೋರುವಂತೆ
ಘನಮಹಿಮರ ದರ್ಶನದಿಂದ
ಸತ್ಪ್ರಣವವ ತಾನಾಗಿ ನುಡಿದ ಮೂಲಿಗನು,
ಕೂಡಲಸಂಗಮದೇವರಲ್ಲಿ
ಬೆರೆಸಿ ಬೇರಿಲ್ಲದಿಪ್ಪ ಮರುಳಶಂಕರದೇವರ ನಿಲವ
ಪ್ರಭುದೇವರು ಸಿದ್ಧರಾಮಯ್ಯದೇವರು
ಹಡಪದಪ್ಪಣ್ಣನಿಂದ ಕಂಡು ಎನ್ನ ಜನ್ಮ ಸಫಲವಾಯಿತ್ತಯ್ಯಾ. ॥೧೪೦॥

೧೧೦೦

ಏರಂಡದ ಬಿತ್ತಿನಂತೆ, ರಸವಾರಿಯಂತೆ,
ಪಶುವಿನ ಪಿಸಿತದಲ್ಲಿ ತಲೆದೋರುವ ಅಮೃತದಂತೆ,
ಕಾಯವಿಡಿದು ಬಂದಡೆ ನಿನಗಾ ಭಾವವಿಲ್ಲ.
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಅಗಮ್ಯವಾಯಿತ್ತು. ॥೧೪೧॥

೧೧೦೧

ಒಂದೆತ್ತಿಗೈವರು ಗೊಲ್ಲರು,
ಅಯ್ವರಯ್ವರಿಗೆ ಐದೈದಾಗಿ ಐವರಾಳಯ್ಯಾ.
ತಮ್ಮ ತಮ್ಮಿಚ್ಛೆಗೆ ಹರಿಹರಿದಾಡಿ ತಾವು ಕೆಟ್ಟು,
ಎತ್ತನು ಕೆಡಿಸಿದರಯ್ಯಾ.
ಎತ್ತಿನ ಹೊಯ್ಲಿನ್ನಾರಿಗೆ ಹೇಳುವೆ?
ಕೂಡಲಸಂಗಮದೇವಯ್ಯಾ. ॥೧೪೨॥

೧೧೦೨

ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ,
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ.
ಅಯ್ಯಾ, ನಮ್ಮಯ್ಯನ ಕೈನೊಂದಿತು,
ತೆಗೆದು ಕೊಡಾ ಎಲೆ ಚಂಡಾಲಗಿತ್ತಿ,
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲಸಂಗಮದೇವನಲ್ಲದೆ ಆರೂ ಅಲ್ಲ. ॥೧೪೩॥

೧೧೦೩

ಒಡಲಿಲ್ಲದ ಭಕ್ತನ ಪರಿಯ ನೋಡಾ,
ಮನಪ್ರಾಣಮುಕ್ತ ಭವರಹಿತಜಂಗಮದ ಪರಿಯ ನೋಡಾ.
ಸಿಡಿಲ ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೆ?
ಉಭಯ ಒಂದಾದವರ ಕಂಡಡೆ,
ನೀವೆಂಬೆ ಕೂಡಲಸಂಗಮದೇವಾ. ॥೧೪೪॥

೧೧೦೪

ಒಡಲುಗೊಂಡು ಹುಟ್ಟಿದ ಘಟಕ್ಕೆ ಅಷ್ಟೋತ್ತರಶತವ್ಯಾಧಿ.
ಅದಕ್ಕೆ ನಾನಾ ಔಷಧಿಯ ತಂದು ಹೊರೆವರು,
ಆ ಪರಿಯ ನಾನದ ಹೊರೆಯೆನು. ಅದೇನು ಕಾರಣವೆಂದಡೆ :
ಭವರೋಗವೈದ್ಯ, ಭವಹರನೆಂಬ ಬಿರಿದು ನಿಮ್ಮದಾಗಿ.
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಪುರಾತನರ ಪ್ರಸಾದವಲ್ಲದೆ ಕೊಂಡಡೆ ನಿಮ್ಮಾಣೆ. ॥೧೪೫॥

೧೧೦೫

ಒಡೆದ ಹಂಚು ಮರಳಿ ಮಡಕೆಯಾಗಬಲ್ಲುದೆ?
ಕೆಟ್ಟ ವ್ರತಗೇಡಿ ಭಕ್ತನಾಗಬಲ್ಲನೆ?
ಬಾಳೆಗೆ ಫಲವೆ ಕಡೆ, ಚೇಳಿಗೆ ಗರ್ಭವೆ ಕಡೆ.
ಕೂಳು ಮಾರೆಡೆಯುಂಟು, ಸೀರೆ ಮಾರೆಡೆಯುಂಟು,
ಭಕ್ತಿ ಮಾರೆಡೆಯುಂಟೆ, ಕೂಡಲಸಂಗಮದೇವಾ? ॥೧೪೬॥

೧೧೦೬

ಒಡೆಯರುಳ್ಳಾಳಿಂಗೆ ಕೇಡಿಲ್ಲ ಕಾಣಿರೊ!
ಊರೆನ್ನದೆ ಅಡವಿಯೆನ್ನದೆ, ಆಳನರಸಿ ಬಹ [ಆಳ್ದ]ರುಂಟೆ?
ಜೋಳವಾಳಿಂಗೆ ಬಿಜ್ಜಳಂಗೆ ಆಳಾದಡೇನು?
ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲಸಂಗಮದೇವ. ॥೧೪೭॥

೧೧೦೭

ಒತ್ತಿ ಹೊಸೆದ ಕಿಚ್ಚ ನಾ ಮಾಡಿದೆನೆಂದು ಮುಟ್ಟಿ ಹಿಡಿದಡೆ,
ಕೈ ಬೇಯದಿಹುದೆ?
ಎನ್ನಿಂದಾಯಿತ್ತು, ಎನ್ನಿಂದಾಯಿತ್ತು,
ಎನ್ನಿಂದಾಯಿತ್ತು ಎನ್ನದಿರು ಮನವೆ,
ನಾನು ಮಾಡಿದೆನೆನ್ನದಿರು ಮನವೆ.
ಕೂಡಲಸಂಗಮದೇವ ಕೇಳಯ್ಯಾ,
ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು. ॥೧೪೮॥

೧೧೦೮

ಓಡದಿರು, ಓಡದಿರು ನಿನ್ನ ಬೇಡುವಾತ ನಾನಲ್ಲ ಶಿವನೆ,
ನೋಡುವೆನು ಕಣ್ಣ ತುಂಬ,
ಆಡಿ ಪಾಡಿ ನಲಿದಾಡುವೆ.
ಬೇಡೆನ್ನ ಕೂಡೆ ಮಾತಾಡಲಾಗದೆ, ಎಲೆ ಶಿವನೆ.
ಕೂಡಲಸಂಗಮದೇವಾ,
ನೀನಾಡಿಸುವ ಬೊಂಬೆ ನಾನು. ॥೧೪೯॥

೧೧೦೯

ಓದಿನ ಹಿರಿಯರು,
ವೇದದ ಹಿರಿಯರು, ಶಾಸ್ತ್ರದ ಹಿರಿಯರು,
ಪುರಾಣದ ಹಿರಿಯರು, ವೇಷದ ಹಿರಿಯರು,
ಭಾಷೆಯ ಹಿರಿಯರು,
ಇವರೆಲ್ಲರು ತಮ್ಮ ತಮ್ಮನೆ ಮೆರೆದರಲ್ಲದೆ ನಿಮ್ಮ ಮೆರೆದುದಿಲ್ಲ.

ತಮ್ಮ ಮರೆದು ನಿಮ್ಮ ಮೆರೆದಡೆ
ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವರು. ॥೧೫೦॥

೧೧೧೦
ಓದಿಸುವಣ್ಣಗಳೆನ್ನ ಮಾತಾಡ ಕಲಿಸಿದರಲ್ಲದೆ
ಮನಕ್ಕೆ ಮಾತಾಡ ಕಲಿಸಲಿಲ್ಲವಯ್ಯಾ.
ಧನಕ್ಕೆ ಮುನಿವರಲ್ಲದೆ, ಎನ್ನ ಮನಕ್ಕೆ ಮುನಿವರಿಲ್ಲಯ್ಯಾ.
ಧನಕ್ಕೆ ಮುನಿವರಿಗೆ ಮುನಿದು, ಎನ್ನ ಮನಕ್ಕೆ ಮುನಿದ
ಕೂಡಲಸಂಗಮದೇವಾ, ಮಡಿವಾಳ ಮಾಚಯ್ಯನು. ॥೧೫೧॥

೧೧೧೧
ಓಹೋ! ನಾನೊಬ್ಬರಿಗೆಯೂ ಉಪದೇಶವ ಮಾಡಲಮ್ಮೆನು,
ಮುನ್ನಲಾದವರು ತಮ್ಮಿಂದ ತಾವಾದರು,
ಅವರೆಲ್ಲರೂ ನಿಜಲಿಂಗೈಕ್ಯರು,
ನಾನೇನುವ ಮಾಡಿತಿಲ್ಲ,
ತತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು.
ಅಮರಗಣಂಗಳು ಸಾಕ್ಷಿಯಾಗಿ,
ಕೂಡಲಸಂಗಮದೇವರ ಮುಂದೆ
ಭಾಷೆಪ್ರಸಾದವನಿಕ್ಕಲಮ್ಮೆನಯ್ಯಾ, ಚೆನ್ನಬಸವಣ್ಣಾ. ॥೧೫೨॥

೧೧೧೨
ಕಂಗಳಲ್ಲಿ ಕರಸ್ಥಳದ ನೋಟ,
ಅಂಗವಿಕಾರವೆಂಬುದನರಿಯ ನೋಡಾ,
ಮನದ ಕೊನೆಯ ಮೊನೆಯ ಮೇಲಣ ಅನುಭಾವ ಗಮನಗೆಟ್ಟು,
ಭಾವ ನಿರ್ಭಾವವೆಂಬುದನರಿಯ, ನೋಡಾ.
ಕೂಡಲಸಂಗಮದೇವರಲ್ಲಿ
ಪ್ರಭುದೇವರಿಂದಲಾನು ಬದುಕಿದೆನು ಕಾಣಾ, ಚೆನ್ನಬಸವಣ್ಣಾ. ॥೧೫೩॥

೧೧೧೩

ಕಂಗಳಿಲ್ಲದ ನೋಟ, ಲಿಂಗವಿಲ್ಲದ ಮಾಟ, ಜಂಗಮವಿಲ್ಲದೂಟ,
ಪ್ರಸಾದವಿಲ್ಲ[ದ] ಪರ, ಹಿಂಗಿತ್ತು ಶಿವಲೋಕವಿನ್ನೆಲ್ಲಿಯದೊ?
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಹಿಂಗಿತ್ತು ಶಿವಲೋಕವಿನ್ನೆಲ್ಲಿಯದೊ?
ಬಂದ ಸಮಯವನರಿಯದೆ ಉದರವ ಹೊರೆವವರ
ಕೂಗಿಡೆ ನರಕದಲ್ಲಿಕ್ಕನೆ ಕೂಡಲಸಂಗಮದೇವ? ॥೧೩೪॥

೧೧೧೪

ಕಂಗಳೆ ಕರುಳಾಗಿ ಉರವಣಿಸಿ ಬಪ್ಪವನ
ಬರವ ನೋಡಾ, ಇರವ ನೋಡಾ.
ಪರವ ನೋಡಾ, ಇಹಪರವ ನೋಡಾ,
ಇಹಪರವೊಂದಾದ ಘನವ ನೋಡಾ,
ಎಲೆ, ಘನಕ್ಕೆ ಘನವ ನೋಡಾ.
ಕರುವಿಟ್ಟ ರೂಪಿನಂತೆ ಕಂಗಳೆರಡು ಹಳಚದೆ ಭುಗಿಲನೆ ನಡೆತಹ.
ಇಂತಪ್ಪ ಗರುವ ಪ್ರಭುವ ಕಂಡೆವ್ಯೆ ಕೂಡಲಸಂಗಮದೇವಾ. ॥೧೩೫॥

೧೧೧೫

ಕಂಗಳೊಳಗೆ ಕರುಳಿಲ್ಲ,
ಕಾಯದೊಳಗೆ ಮಾಯವಿಲ್ಲ,
ಮನದೊಳಗೆ ಅಹಂಕಾರವಿಲ್ಲ.
ದೇಹವೆಂದರಿಯೆ, ನಿರ್ದೇಹವೆಂದರಿಯೆ,
ಜಂತ್ರದ ಸೂತ್ರದಂತೆ ಇಪ್ಪ ನಿಬ್ಬೆರಗಿನ ಮೂರ್ತಿಯ ನೋಡಾ!
ಲಿಂಗಜಂಗಮದ ಒಕ್ಕುಮಿಕ್ಕ ಪ್ರಸಾದವ ಕೊಂಡು,
ಮಿಕ್ಕು ಮೀರಿ ನಿಂದ ಮಹಾಪ್ರಸಾದಿಯ ನೋಡಾ!
ತನ್ನನರಿದಹರೆಂದು ಜಗದ ಕಣ್ಣಿಂಗೆ ಮಾಯದ ಮಂಜು ಕವಿಸಿ,
ನಿಜಪದದಲ್ಲಿ ತದುಗತನಾದನು.
ಕೂಡಲಸಂಗಮದೇವರಲ್ಲಿ ಮರುಳುಶಂಕರದೇವರ
ನಿಲವ ನೋಡಾ, ಚೆನ್ನಬಸವಣ್ಣಾ. ॥೧೩೬॥

೧೧೧೬

ಕಂಡಡೆ ಕಡು ಸುಖವೆನಗೆ, ಕಾಣದಿರ್ದಡೆ ಅವಸ್ಥೆಯಯ್ಯಾ.
ತವಕದ ಸ್ನೇಹ ದರ್ಶನದಲ್ಲಿ ತರಹರವಾಯಿತ್ತು.
ಕೂಡಲಸಂಗಮದೇವಯ್ಯಾ,
ನಿಮ್ಮ ಶ್ರೀಪಾದವ ಕಂಡು ಧನ್ಯನಾದೆನು. ॥೧೫೭॥

೧೧೧೭

ಕಂಡಮಂಡಗೆ ಬೆಲ್ಲ ದ್ರಾಕ್ಷೆ ಸಕ್ಕರೆ
ಸರಿಭಾಗವಾದ ಹೊಸ ಹೆಸರ ಭಕ್ಷ್ಯ ಪನ್ನಿರ್ಖಂಡುಗ,
ಸುಲಿಗಡಲೆಯ ಕಜ್ಜಾಯ ಹದಿನೆಂಟು ಖಂಡುಗ,
ಅಕಾಲ ಮಾವಿನಹಣ್ಣು ಇಪ್ಪತ್ತುನಾಲ್ಕು ಲಕ್ಷ,
ಕಡೆಯಿಲ್ಲದ ಕದಳೀಫಲ, ಚಾರಬೀಜ ಎಂಬತ್ತು ಖಂಡುಗ,
ತವರಾಜ ಹೆತ್ತುಪ್ಪ, ಹಲಸಿನ ಹಣ್ಣು ಮನ ಮೇರೆ,
ಹಾಲಕೆನೆ ಹದಿನೆಂಟು ಖಂಡುಗ,
ಉತ್ತತ್ತಿ, ಚಿಲುಪಾಲಘಟ್ಟಿ ಕಟ್ಟಣೆಯಿಲ್ಲ.
ಮನವೊಲಿದ ಕಜ್ಜಾಯವನಾರೋಗಣೆಯ ಮಾಡು ದೇವಾ,
ಕೂಡಲಸಂಗಮದೇವಾ. ॥೧೫೮॥

೧೧೧೮

ಕಂಡಹರೆಂದು ಕಣ್ಗೆ ಮರೆಮಾಡಿದ,
ಕೇಳಿಹರೆಂದು ಕಿವಿಗೆ ಮರೆಮಾಡಿದ,
ಮುಟ್ಟಿಹರೆಂದು ಕೈಗೆ ಮರೆಮಾಡಿದ,
ಸೋಂಕಿಹರೆಂದು ತನುವಿಂಗೆ ಮರೆಮಾಡಿದ,
ನೆನೆದಹರೆಂದು ಮನಕ್ಕೆ ಮರೆಮಾಡಿದ,
ಅರಿದಹರೆಂದು ಅಂತರಂಗದಲ್ಲಿ ಮರೆಮಾಡಿದ,
ಪೂಜಿಸಿಹರೆಂದು ಕ್ರೀಗೆ ಮರೆಮಾಡಿದ,
ಕೂಡಲಸಂಗಮದೇವರೊಡನೆ, ಅಹಂಕಾರವ ಮಾಡಿ
ಕೆಟ್ಟ ಕೇಡನೇನೆಂದುಪಮಿಸುವೆನು. ॥೧೫೯॥

೧೧೧೯

ಕಡಿ[ಯಲು] ಕುಳ್ಳಿರಿಸಿದಲ್ಲಿ,
ಕತ್ತಿಯನೆತ್ತಿ ತಲೆಯ ಹೊಡೆ[ಯೆ] ಹೊಡೆ[ಯೆ] ಬದುಕಿದವರುಂಟು,
ಕಡಲ ನಡುವೆ ಹಡಗೊ[ಡೆ]ದು
ಹಲಗೆಯ ಹಿಡಿದು ತಡಿಗೆ ಸೇರಿ ಬದುಕಿದವರುಂಟು,
ಎನ್ನೊಡೆಯ ಕೂಡಲಸಂಗಮದೇವ
ಬರೆದ ಬರಹವ ತೊಡೆಯಬಲ್ಲರೆ
ಹರಿ ಸುರ ಬ್ರಹ್ಮಾದಿಗಳು? ॥೧೬೦॥

೧೧೨೦

ಕತ್ತಲೆಯ ನುಂಗಿದ ದೀಪದ ಬೆಳಗಿನಂತೆ,
ಕರ್ದಮವನೀಂಟಿದ ಸುಜಲದಂತೆ,
ಮಧುರರಸವನರಿದ ಜಿಹ್ವೆಯಂತೆ,
ಎನ್ನ ಕಂಗಳಿಗೆ ದೃಷ್ಟವಾಗಿ, ಮನಕ್ಕೆ ಮನೋಹರವಾಗಿ
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಚಿಹ್ನವಾಯಿತ್ತು. ॥೧೬೧॥

೧೧೨೧

ಕತ್ತ[ಯ] ಕರವೆತ್ತಿ ಕರವೆತ್ತಿ ಕರೆದಡೆ
ಅದೆತ್ತಣ ವಾರ್ತೆಯೆಂದು ಬಲ್ಲುದು?
ಕುಬುದ್ಧಿಯುಳ್ಳವ[ರಿಗೆ] ಸುಬುದ್ಧಿಯ ಹೇಳಿದಡೆ
ಕುಬುದ್ಧಿ ಮಾ[ಣ್ಬು]ದೆ ಕೂಡಲಸಂಗಮದೇವಾ? ॥೧೬೨॥

೧೧೨೨

ಕದ್ದ ಕಳ್ಳನ ಬಿಟ್ಟಮಂಡೆಯ ಹಿಡಿದು,
ಹುಡುಕು ನೀರೊಳಗದ್ದುವಂತೆ ಮುಳುಗಲಾರೆನು, ಹಿಂಡಲಾರೆನು.
ಹಿಂಗಿದೆನಯ್ಯಾ ಎಲ್ಲ ಹಾರುವ ಕುಲವನು,
ಮುಳುಗುವನ ಕೈಯ ಹಿಡಿದೆತ್ತಿದ
ನಮ್ಮ ಕೂಡಲಸಂಗಮದೇವ. ॥೧೬೩॥

೧೧೨೩

ಕಪ್ಪೆಯ ಶಿರದ ಮೇಲೆ ಎಪ್ಪತ್ತೆರಡು ಪುರವ ಕಂಡೆ,
ಆ ಪುರದೊಳಗೊಬ್ಬ ನಾರಿಯ ಕಂಡೆ,
ಆ ನಾರಿಯ ಕೈಯಲ್ಲಿ ನಾರಿವಳ ಸಸಿಯ ಕಂಡೆ.
ಇಂತಪ್ಪ ಬೆಡಗಿನ ಕೀಲ ಬಲ್ಲಾತನೆ
ಪ್ರಾಣಲಿಂಗಸಂಬಂಧಿಯೆಂದೆನಯ್ಯಾ,
ಕೂಡಲಸಂಗಮದೇವಾ. ॥೧೬೪॥

೧೧೨೪

ಕಬ್ಬಿನ ಮೇಲೆ ಜೇನಿಟ್ಟಿತ್ತೆಂಬರು,
ಅವು ಒಂದರ ಸಿಹಿಯನೊಂದರಿಯವು.
ಭಕ್ತ ಜಂಗಮದ ನಡುವೆ ಅರ್ಥ ಪ್ರಾಣ ಅಭಿಮಾನವೆಂಬ ಸಿಗುರು
ಕಾಡಿತ್ತು ಕಾಣಾ, ಕೂಡಲಸಂಗಮದೇವಾ. ॥೧೬೫॥

೧೧೨೫

ಕರಿಗೊರಳು ಮೆರೆವ ಚತುರ್ಭುಜ
ಎಳೆವಾವಿನ ಕುಂಡಲವನಿಕ್ಕಿ,
ಪೊಳೆವ ತ್ರಿಶೂಲ ವೃಷಭವಾಹನದೇವ,
ಉಮೆಯೊಡನೆ ಸಾರ್ದು
ಬೇಡಿದ ವರವೀವನೇ ಕೂಡಲಸಂಗಮದೇವ. ॥೧೬೬॥

೧೧೨೬

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ,
ಸತ್ಯಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು.
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ,
ಕೂಡಲಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು. ॥೧೬೭॥

೧೧೨೭

ಕಲ್ಪಿತವ ಕಳೆದ, ಅಕಲ್ಪಿತವ ತಿಳುಹಿದ,
ಮನವ ಮಾಣಿಸಿ ಘನವ ನೆಲೆಗೊಳಿಸಿದ.

ತನುವ ಕೆಡಿಸಿ, ಅನುವ ಸ್ಥಾಪ್ಯವಮಾಡಿ,
ಅಂತರಂಗದಲ್ಲಿ ಮಹಾಜ್ಞಾನವ ತುಂಬಿದ,
ಬಹಿರಂಗದಲ್ಲಿ ಸದಾಚಾರವ ನೆಲೆಗೊಳಿಸಿದ.
ನಿಮ್ಮ ನಿಲವನೆನಗೆ ಒರೆದೊರೆದು ಹೇಳಿ ತೋರಿಸಿ,
ಎನ್ನ ನಿಮ್ಮ ಶ್ರೀಪಾದಕ್ಕೆ ಯೋಗ್ಯನ ಮಾಡಿದ.
ಕೂಡಲಸಂಗಮದೇವಯ್ಯಾ, ನಿಮ್ಮ ಮಹಾಮನೆಯಲ್ಲಿ
ಮಡಿವಾಳನೂ ನಾನೂ ಕೂಡಿ ಸುಖದಲ್ಲಿ ಇದ್ದೆವಯ್ಯಾ. ॥೧೬೮॥

೧೧೨೮

ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು,
ಹಾಲೊಳಗೆ ತುಪ್ಪವುಂಟು, ಅಂತರಾಮಿಯಲ್ಲಿ ಶಿವನಿಹನು.
ಇದೇನು ಕಾರಣ ಕತ್ತಲೆ? ಕಾಣಬಾರದು,
ತೋರಬಲ್ಲ ಗುರು ಸುಳಿಯನು,
ಕೂಡಲಸಂಗಮದೇವಾ. ॥೧೬೯॥

೧೧೨೯

ಕಾಣಬಾರದ ಘನವ ಕರಸ್ಥಲದಲ್ಲಿ ತೋರಿದ,
ಹೇಳಬಾರದ ಘನವ ಮನಸ್ಥಲದಲ್ಲಿ ತೋರಿದ,
ಉಪಮಿಸಬಾರದ ಘನವ ನಿಮ್ಮ ತೃಪ್ತಿಯ ಮುಖದಲ್ಲಿ ತೋರಿದ.
ಇಂತೀ ತ್ರಿವಿಧವು ಏಕಾರ್ಥವಾಗಿಹ ಭೇದವ
ಚೆನ್ನಬಸವಣ್ಣನು ತೋರಿದನಾಗಿ ಆನು ಬದುಕಿದೆನು ಕಾಣಾ
ಕೂಡಲಸಂಗಮದೇವಾ. ॥೧೭೦॥

೧೧೩೦

ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯಾ,
ಆನಂದದಿಂದ ಆಡುವೆ ಹಾಡುವೆನಯ್ಯಾ,
ಎನ್ನ ಕಣ್ಣ ತುಂಬಿ ನೋಡುವೆ.
ಎನ್ನ ಮನವೊಲಿದು ಭಕ್ತಿಯ ಮಾಡುವೆ.
ಕೂಡಲಸಂಗಯ್ಯಾ ನಿನಗೆ. ॥೧೭೧॥

೧೧೩೧

ಕಾಮದಹನವ ಮಾಡಿದನು, ದಕ್ಷನ ಯಜ್ಞವ ಕೆಡಿಸಿದನು,
ಒಳ್ಳೆಯ ತ್ರಿಪುರವನುರುಹಿದನು, ಹಾಳಾಹಳವನೊಮ್ಮೆ ಧರಿಸಿದನು,
ನಮ್ಮ ಕೂಡಲಸಂಗಮದೇವನು. ॥೧೭೨॥

೧೧೩೨

ಕಾಮ್ಯ ಕಲ್ಪಿತಂಗಳಿಲ್ಲದೆ,
ನಿಮ್ಮಿಂದ ನೀವೆಸ್ವಯಂಭುವಾಗಿದ್ದಿರ[ಲ್ಲಾ],
ನಿಮ್ಮ ಪರಮಾನಂದದ ಪ್ರಭಾಪರಿಣಾಮದಲ್ಲಿ ಒಂದನಂತಕಾಲವಿದ್ದಿರಲ್ಲಾ,
ನಿಮ್ಮಾದ್ಯಂತವ ನೀವೆ ಅರಿವುತಿದ್ದಿರಲ್ಲಾ,
ನಿಮ್ಮ ಸ್ವಭಾವದುದಯವ ನೀವೆ ಬಲ್ಲಿರಿ,
ಕೂಡಲಸಂಗಮದೇವಾ. ॥೧೭೩॥

೧೧೩೩

ಕಾಯದ ಕಪಟವು ಬಿಡದೆನಗಿನ್ನೆಂತಯ್ಯಾ?
ಮಾಯಾಪ್ರಪಂಚಿನ ಬಲೆಯೊಳಗೆ ಸಿಲುಕಿದೆ,
ವಾಯದ ಸಂಭ್ರಮವಧಿಕ ಹಿರಿದೆನಗೆ,
ಇದಾವ ಭಾವದ ಮುಖವೆಂದರಿಯದೆ,
ಜ್ಞಾನಶೂನ್ಯವಾಗಿರ್ದೆನಯ್ಯಾ.
ಅಷ್ಟಮದಂಗಳನು ಸೃಷ್ಟಿಸಿಯಿದ್ದಿರಾಗಿ
ಕಟ್ಟುಗ್ರದಿಂದ ನಿಮ್ಮ ಕಾಣಲೀಯವು.
ಎನ್ನ ತನುವಿನ ಅವಗುಣ, ಮನದ ಮರ್ಕಟತನ ಬಿಡದು,
ನೀನೇ ಗತಿ ಕೂಡಲಸಂಗಮದೇವಾ,
ನಿಮ್ಮ ಶರಣರ ಇರವನರಿಯದೆ ಭವದುಃಖಿಯಾದೆನಯ್ಯಾ. ॥೧೭೪॥

೧೧೩೪

ಕಾಯದ ಕಳವಳದಲ್ಲಿ ಹುಟ್ಟಿ ಲಿಂಗವನರಿಯದಂ[ತವರಿ]ರಲಿ,
ಷಡು ಮಹಾವೇದ ಶಾಸ್ತ್ರಾಗಮಪುರಾಣದರ್ಥವನೋದಿ
ಲಿಂಗ ಉಂಟು, ಇಲ್ಲೆಂಬ ಅಜ್ಞಾನಿಗಳಂತಿರಲಿ.

ಷಡುಶ್ಶೈವರು ಹಂಚಾಗಿ ಹೋದರು.
ಎಂತು ನಿಜಲಿಂಗವಂತಂಗೆ ಸರಿಯೆಂಬೆ?
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು
ಬುದ್ಧಿತಪ್ಪಿ ಕ್ರಮಗೆಟ್ಟು ಹೋದರು,
ಬ್ರಹ್ಮ ನಾನೆಂದು ಶಿರವ ಹೋಗಾಡಿಕೊಂಡನು,
ಬ್ರಹ್ಮಾದಿದೇವತೆಗಳು ಮಹಾಲಿಂಗಕ್ಕೆ ದೂರವಾಗಿ ಹೋದರು.
ಹಮ್ಮಿಲ್ಲದ ಕಾರಣ
ಕೂಡಲಸಂಗನ ಶರಣರು ಜಂಗವಂದ್ಯರಾದರು. ॥೧೭೫॥

೧೧೩೫

ಕಾಯದ ಕುರುಹುವಿಡಿದು ಬಂದೆನೆಂಬ
ಆ ಭಾವದ ಇರವೇತಕ್ಕೆ ನಿಮಗೆ?
ಅಂಬರದ ಚಾಪ ಮುಗಿಲೊಳಗೆ ಹೊಂದಿತ್ತೆ?
ಬೇರೊಂದರಲ್ಲಿ ಸಂದಿತ್ತೆ? ಅದರಂಗದ ಛಾಯೆ.
ಪ್ರಭುದೇವರ ನಿಂದ ಸುಳುಹು ಕೂಡಲಸಂಗಮದೇವರಲ್ಲಿ
ಭಿನ್ನವಿಲ್ಲದೆ ನಿಂದ ಕಾಯದಂ[ದ]. ॥೧೭೬॥

೧೧೩೬

ಕಾಯದ ಕೈಯಲ್ಲಿ ಕರಸ್ಥಲ,
ಪ್ರಾಣದ ಕೈಯಲ್ಲಿ ಜಂಗಮಸ್ಥಲ,
ಈ ಉಭಯಭಾವದ ಶಿವಲಿಂಗಾರ್ಚನೆ
ಪರಮಾನಂದಸುಖಸ್ಥಲ.
ಕಾಯ ಭಕ್ತ, ಪ್ರಾಣ ಜಂಗಮ,
ಆವುದ ಘನವೆಂಬೆನಾವುದ ಕಿರಿದೆಂಬೆ?
ಕೂಡಲಸಂಗನ ಶರಣರು ಬಂದಡೆ ಉಪಚಾರಕ್ಕೆ ಇಂಬಿಲ್ಲ,
ಕರುಣದಿಂದ ಬರಹೇಳಾ, ಅಪ್ಪಣ್ಣಾ. ॥೧೭೭॥

೧೧೩೭

ಕಾಯದ ಲಜ್ಜೆಯ ಕಲ್ಪಿತವ ಕಳೆದು,
ಜೀವದಲಜ್ಜೆಯ ಮೋಹವನಳಿದು,

ಮನದ ಲಜ್ಜೆಯ ನೆನಹ ಸುಟ್ಟು,
ಭಾವದ ಕೂಟಬತ್ತಲೆಯೆಂದರಿದು,
ತವಕದ ಸ್ನೇಹ ವ್ಯವಹಾರಕ್ಕೆ ಹುಗದು.
ಕೂಡಲಸಂಗಮದೇವಯ್ಯಾ,ಎನ್ನ ಹೆತ್ತ ತಾಯಿ
ಮಹದೇವಿಕ್ಕನ ನಿಲವ ನೋಡಯ್ಯಾ ಪ್ರಭುವೆ. ॥೧೭೮॥

೧೧೩೮

ಕಾಲದಿಂದ ಕಡೆಮುಟ್ಟ ಮಾಡಿದ ಲೇಸು
ಒಂದು ದಿನ ಉದಾಸೀನವ ಮಾಡಿದಡೆ
ಅದೆಲ್ಲವು ವ್ಯರ್ಥವಾಗಿ ಹೋಹುದು ಕೇಳಯ್ಯಾ.
ಸಾವಿರ ನೋಂಪಿಯ ನೋಂತು,
ಒಂದು ಬಾರಿ ಹಾದರವನಾಡಿದಡೆ
ಆ ನೋಂಪಿಯೆಲ್ಲವು ನೀರಲ್ಲಿ ನೆರೆದು ಹೋಹಂತೆ ಕೇಳಯ್ಯಾ.
ನಾನು ಎಷ್ಟು ಭಕ್ತಿಯ ಮಾಡಿದಡೇನು,
ನಿಮ್ಮ ಶರಣರ ಮನವೆಳ್ಳನಿತು ನೊಂದಡೆ,
ಎನ್ನ ಭಕ್ತಿಯಭಿಮಾನ ಹೋಯಿತ್ತಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಮುನಿಸನಾವ ಪರಿಯಲ್ಲಿ ತಿಳುಹುವೆ
ಹೇಳಾ, ಎಲೆ ಪ್ರಭುವೆ. ॥೧೭೯॥

೧೧೩೯

ಕಾಲ ಮುಟ್ಟಲಮ್ಮದ ಸಯದಾನ,
ಕಲ್ಪಿತವಿಲ್ಲದ ಸಯದಾನ.
ಅನಂತರತಿ ಎಂಬ ಹೆಂಗೂಸ ಮುಟ್ಟದ ಸಯದಾನ.
ಭಾಳಲೋಚನನೆಂಬ ಜಂಗಮ ಮುಟ್ಟದ ಸಯದಾನ.
ಎಲ್ಲಿಯೂ ಮುಟ್ಟದ ಸಯದಾನವ ನಿಮಗರ್ಪಿಸಿದೆನು
ಆರೋಗಿಸಯ್ಯಾ ಪ್ರಭುವೆ,
ಕೂಡಲಸಂಗಮದೇವಾ. ॥೧೮೦॥

೧೧೪೦

ಕಾಲಲಿ ಕಟ್ಟಿದ ಗುಂಡು,
ಕೊರಳಲಿ ಕಟ್ಟಿದ ಬೆಂಡು,
ತೇಲಲೀಯದು ಗುಂಡು,
ಮುಳುಗಲೀಯದು ಬೆಂಡು,
ಇಂತಪ್ಪ ಸಂಸಾರಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ,
ಕೂಡಲಸಂಗಯ್ಯಾ. ॥೧೮೧॥

೧೧೪೧

ಕಾಲಿಲ್ಲದೆ ನಡೆವನು, ಕೈಯಿಲ್ಲದೆ ಹಿಡಿವನು,
ಕಣ್ಣಿಲ್ಲದೆ ನೋಡುವನು ಸಹಜವಾಗಿ.
ಮೈಯಿಲ್ಲದ ಬಣ್ಣ, ಮಥನವಿಲ್ಲದ ಕೂಟ.
ಸ್ವೈರಗಾಗಿ, ಸಿಡಿಯ ಮೇಲೆ ಒಡಲು ತನ್ನನರಿಯದು,
ಒಡಲ ತಾನರಿಯನು.
ಬಿಡದೆ ಎನ್ನ ಬೆಂಬತ್ತಿ ಬಂದ ಪರಿಯ ನೋಡಾ.
ಜಡವಿಡಿದ ಎನ್ನ ಕಾಯದ ಕಳವಳವ ತಿಳುಹಲೆಂದು,
ಅಡಿಗಡಿಗೆ ಅನುಭಾವವ ತೋರುತ್ತಲಿದ್ದಾನೆ.
ಕುಳಿತ್ತೆಡೆಯಲ್ಲಿ ಕುಂಟ, ನಿಂದಿದ್ದೆಡೆಯಲ್ಲಿ ಹೆಳವ.
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು.
ಮೆಲ್ಲಮೆಲ್ಲನೆ ಒಳಗ[ನ]ರಿದು ತೋರುತ್ತೈದಾನೆ.
ಬಲ್ಲವರೆಲ್ಲಾ ಬದುಕಿಯೆಂದು
ಝಲ್ಲರಿಯ ಮೇಲೊಂದು ಬೆಳುಗೊಡೆಯ ಹಿಡಿದು
ಬಲ್ಲಿದನಾನೆಯ ತಡೆದು ನಿಲ್ಲಿಸಬಲ್ಲನು.
ಕೂಡಲಸಂಗಮದೇವರ ಮಹಾಮನೆಯಲ್ಲಿ
ಪ್ರಭುದೇವರ ಮೊರೆಯ ಹೊಕ್ಕು ಬದುಕಿದೆನು. ॥೧೮೨॥

೧೧೪೨

ಕೀಟಕ ಸೂತ್ರದ ನೂಲಗೂಡಮಾಡಿ ಸುತ್ತಿರ್ಪಂತೆ
ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ?

ರಾಟೆಯಿಲ್ಲ, ಅದಕ್ಕೆ ಹಂಜಿ ಮುನ್ನವೆ ಇಲ್ಲ, ನೂತವರಾರೋ!
ತನ್ನೊಡಲ ನೂಲ ತೆಗೆದು ಪಸರಿಸಿ,
ಅದರೊಳು ಪ್ರೀತಿಯಿಂದೊಲಿದಾಡಿ,
ತುದಿಯಲ್ಲಿ ತನ್ನೊಳಗದು ಮಡಗಿಕೊಂಡಿಪ್ಪಂತೆ,
ತನ್ನಿಂದಾದ ಜಗವ ತನ್ನೊಳಗೈದಿಸಿಕೊಳಬಲ್ಲ
ನಮ್ಮ ಕೂಡಲಸಂಗಮದೇವರು. ॥೧೮೩॥

೧೧೪೩

ಕುಂಡಲಿಗನೊಂದು ಕೀಡೆಯ ತಂದು
ತನ್ನಂತೆ ಮಾಡಿತಲ್ಲಾ, ಎಲೆ ಮಾನವಾ,
ಕೇಳಿ ನಂಬಯ್ಯಾ, ನೋಡಿ ನಂಬಯ್ಯಾ, ಎಲೆ ಮಾನವಾ.
'ತ್ವಚ್ಚಿಂತಯಾ ಮಹಾದೇವ ತ್ವಾಮೇವೈತಿ ನ ಸಂಶಯಃ
ಭ್ರಮದ್‌ಭ್ರಮರಚಿಂತಾಯಾಂ ಕೀಟೋಽಪಿ ಭ್ರಮರಾಯತೇ'
ಕೂಡಲಸಂಗನ ಶರಣರ ಅನುಭಾವ
ಇದರಿಂದ ಕಿರುಕುಳವೆ, ಎಲೆ ಮಾನವಾ ॥೧೮೪॥

೧೧೪೪

ಕುಲವನರಸುವರೆ? ಇದರೊಳು ಛಲವನರಸುವರೆ?
ಹೊಲೆಗೇರಿಯಲೊಂದು ಎಲುವಿನ ಮನೆಗಟ್ಟಿ
ತೊಗಲಹೊದಿಕೆ, ನರವಿನ ಹಂಜರ ಕುಲವನರಸುವರೆ?
ಹೊಲತಿ ಹೊಲೆಯ[ನು] ಹೋಗಿ ಹೊಳೆಯಲ್ಲಿ ಮಿಂದಡೆ
ಹೊಲೆ ಹೋಯಿ[ತ್ತೆ]ಲ್ಲ, ಕುಲ ಹೋಗಲಿಲ್ಲ.
ಕಂಬಳಿಯೊಳಗೆ ಕೂಳಕಟ್ಟಿ ಕೂದಲನರಸುವರೆ?
ಇಂಥ ಡಂಬಕರ ಕೂಡಲಸಂಗಮದೇವರು ಮೆಚ್ಚರಯ್ಯಾ. ॥೧೮೫॥

೧೧೪೫

ಕುಲವ ನೋಡದೆ, ಛಲವ ನೋಡದೆ,
ನಿಲವ ನೋಡದೆ ಕೂಡಿದ ಬಳಿಕ,
ಅಲ್ಲಿ ಹೆಚ್ಚು ಕುಂದನರಸಲುಂಟೆ?

ಮುಂದುವರಿದು ಜಂಗಮಕ್ಕೆ ಭಕ್ತಿಯ ಮಾಡೆಂದು
ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯಾ.
ನೀನು ನಿರಾಕಾರ, ಸಾಕಾರವೆಂಬೆರಡು
ಮೂರ್ತಿಯ ಧರಿಸಿಪ್ಪೆಯಾಗಿ,
ಒಂದ ಜರೆದು ಒಂದ ಹಿಡಿದಿಹೆನೆಂದಡೆ
ಅದೆ ಕೊರತೆ ನೋಡಾ ಪ್ರಭುವೆ, ಕೂಡಲಸಂಗಮದೇವಾ. ॥೧೮೬॥

೧೧೪೬

ಕೃಷಿ ಕೃತ್ಯ ಕಾಯಕದಿಂದಾದೊಡೇನು?
ತನುಮನಬಳಲಿಸಿ ತಂದು ದಾಸೋಹವ
ಮಾಡುವ ಪರಮಸದ್ಭಕ್ತನ ಪಾದವ ತೋರಯ್ಯ ಎನಗೆ.
ಅದೆಂತೆನೆ, ಆತನ ತನು ಶುದ್ಧ
ಆತನ ಮನ ಶುದ್ಧ, ಆತನ ನಡೆ ಶುದ್ಧ
ನುಡಯೆಲ್ಲ ಪಾವನವು.
ಆತಂಗೆ ಉಪದೇಶವ ಮಾಡಿದಾತನೆ ಪರಮಸದ್ಗುರು.
ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ.
ಇಂತಪ್ಪವರ ನಾನು ನೆರೆ ನಂಬಿ,
ನಮೋ ನಮೋ ಎಂಬೆನಯ್ಯಾ ಕೂಡಲಸಂಗಮದೇವಾ. ॥೧೮೭॥

೧೧೪೭

ಕೆದರಿದ ತಲೆಯ, ತೊನೆವ ನಡೆಯ, ಹಣೆಯ ಬುಗುಟಿನ,
ಕರಸ್ಥಲದ ಅನಿಮಿಷದಿಂದ ಬಹಿರಂಗದ[ವಧಾ]ನ ತಪ್ಪಿ,
ಇದಿರುಗೊಯಿಲು ತಾಗಿ ಮುರ್ಬೊಡೆದು, ಕಣ್ಣು ತರಿದು, ಕಿವಿಹರಿದು,
ಜೋಲುವ ರಕ್ತಧಾರೆಯ, ಗಾಳಿಯ ಧೂಳಿಯ ಮಳೆಯ ಜೋರಿನ,
ಬೆನ್ನ ಬಾಸುಳದ, ಎಡಬಲದ ಬರಿಯ ತದ್ದಿನ,
ಮುಳ್ಳುದರಹಿನ, ಕಂಕುಳ ಸೀಳ

ಕಂಡು ನೋಡುವ ಜನರು ಬೆರಗಾಗೆ-
ಪೊರವಾರಿನ ಮರೆಯ ದಿಗಂಬರದ ಬಣಗು ಸುರಿವುತ್ತ,
ಆಪ್ಯಾಯನವರತು, ಬಿದ್ದು ಮೊಳಕಾಲೊಡೆದು,
ಹೊಸ ಹುಣ್ಣಿನ ರಕ್ತದ ಜೋರು ಹರಿದು,
ಮುಂಗಾಲ ಕಣೆ [ಒ]ಳೆದು, ಕಣಕಾಲ ಸಂದು ತಪ್ಪಿ,
ಕಿರುಬೆರಳು ಎಡಹಿ, ಹೆಬ್ಬೊಟ್ಟೊಡೆದ ಗಾಯದ,
ಉರುಗು ಟೊಂಕದ, ಪೆರಚು ಗುಂಟನ ನೋಡಾ ಚೆನ್ನಬಸವಣ್ಣಾ.
ಅತ್ಯಂತ ಮಲಿನ ಕೂಡಲಸಂಗಮದೇವರ ಕುರುಹು ವಿಪರೀತ,
ನೋಡುವಡೆ ಭಯಂಕರವಾಗಿದೆ ನೋಡಯ್ಯಾ. ॥೧೮೮॥

೧೧೪೮

ಕೆರೆಯ ತೂಬಿನಾಪ್ಯಾಯನದಂತೆ,
ಪ್ರಭುದೇವಾ ನಿಮ್ಮ ಆಪ್ಯಾಯನವು.
ಕೆರೆಯ ತೂಂಬ ಬಿಡಲೊಡನೆ ಹಲವು ಕದಳಿಗಳೆಲ್ಲ ತಣಿದವಯ್ಯಾ.
ಪರಿಣಾಮವೆಂಬ ಕೆರೆಗೆ ಪ್ರಭುವೆಂಬ ತೂಬನುಚ್ಚಲು,
ಅಸಂಖ್ಯಾತರೆಂಬ ಕದಳಿಗಳೆಲ್ಲಾ [ತ]ಣಿದವಯ್ಯಾ.
ಕೂಡಲಸಂಗಮದೇವಾ, ನಿಮ್ಮ ಶರಣ ಪ್ರಭುದೇವರು
ಸರ್ವ ಜೀವದಯಾಪಾರಿಗಳೆಂಬುದು
ಇಂದೆನಗೆ ಅರಿಯ ಬಂದಿತಯ್ಯಾ. ॥೧೮೯॥

೧೧೪೯

ಕೆಳಗೇಳು ಲೋಕ, ಮೇಲೇಳು ಲೋಕ-
ಇಂತೀ ಹದಿನಾಲ್ಕು ಲೋಕಕ್ಕೆ ನೀನೊಡೆಯ,
ನಿನಗೆನ್ನ ಪಾಲಕರು ಭಕ್ತರೊಡೆಯರು.
ನಮ್ಮವರಿಂದ ನಿನ್ನ ಸೂತಕ ಹೋಯಿತ್ತಲ್ಲದೆ
ನಿನ್ನಿಂದ ಒಂದು ತೃಣ ಮಡಿಯದು ಕಾಣಾ,
ಕೂಡಲಸಂಗಮದೇವಾ. ॥೧೯೦॥

೧೧೫೦

ಕೈಯಲ್ಲಿ ಮುಟ್ಟಿದ ಪದಾರ್ಥ ಕೈಯೊಳಗೆ ಐಕ್ಯ,
ಕಂಗಳು ತಾಗಿದ ಪದಾರ್ಥ ಕಂಗಳೊಳೈಕ್ಯ,
ನಾಲಗೆ ತಾಗಿದ ಪದಾರ್ಥ ನಾಲಗೆಯೊಳಗೈಕ್ಯ.
ನೀಡುವ ಪರಿಚಾರಕರು ಬೇಸತ್ತರಲ್ಲದೆ
ಆರೋಗಣೆಯ ಮಾಡುವ ದೇವನೆತ್ತಲೆಂದರಿಯನು.
ಬ್ರಹ್ಮಾಂಡವನೊಡಲೊಳಗಡಗಿಸಿಕೊಂಡು ಬಂದ ದೇವಂಗೆ
ಆರೋಗಣೆಯ ಮಾಡಿಸಿಹೆನೆಂಬ ಅಹಂಕಾರದಲ್ಲಿ ಇದ್ದೆನಾಗಿ,
ನಾನು ಕೆಟ್ಟ ಕೇಡನೇನೆಂಬೆನಯ್ಯಾ?
ಕೂಡಲಸಂಗಮದೇವರ ತೃಪ್ತಿಯ ತೆರನ ಬಲ್ಲಡೆ ಹೇಳಾ
ಮಡಿವಾಳ ಮಾಚಯ್ಯ. ॥೧೯೧॥

೧೧೫೧

ಕೈಹಾರ ನೀಡಿದಡೆ ಮನಹಾರ ಕೊಳ್ಳುತ್ತೈದಾನೆ,
ಅಹುದಹುದು, ಸ್ವಾಮಿಯ ಹಸಿವು ಲೋಕಕ್ಕೆ ಹೊಸತು.
ಕೂಡಲಸಂಗಮದೇವ ನೆರೆ ಹಸಿದ, ಮೊರಮೊರದಲ್ಲಿ ನೀಡಿ. ॥೧೯೨॥

೧೧೫೨

ಕೊಂಡುದಿಲ್ಲ ಕೊಟ್ಟುದಿಲ್ಲ, ಲಗ್ಗವಿಲ್ಲ ವಿಲಗ್ಗವಿಲ್ಲ,
ನಮಗೆ ನಿಮಗೆ ಸಂಬಂಧವಿಲ್ಲ,
ನಮಗೆ ನಿಮಗೆ ಭಾವಭೇದವಿಲ್ಲ,
ಕೂಡಲಸಂಗಮದೇವಾ, ಇರು, ಇರದೆ ಮಾಣು. ॥೧೯೩॥

೧೧೫೩

ಕೊಡುವಾತ ಸಂಗ, ಕೊಂಬಾತ ಸಂಗ ಕಾಣಿರೆಲವೊ.
ನರಮಾನವರು ಕೊಡುವರೆಂಬವರ ಬಾಯಲಿ
ಬಾಲಹುಳುಗಳು ಸುರಿಯವೆ?
ಮೂರು ಲೋಕಕ್ಕೆ ನಮ್ಮ ಕೂಡಲಸಂಗಯ್ಯ
ಕೊಡುವ ಕಾಣಿರೆಲವೊ. ॥೧೯೪॥

೧೧೫೪

ಕೋಟಿ ರುದ್ರರು ಮಡಿದರು,
ಅನಂತಕೋಟಿ ಬ್ರಹ್ಮವಿಷ್ಣುಗಳು ಮಡಿದರು,
ನರರು-ಸುರರು-ಗರುಡ ಗಂಧರ್ವರು ಮಡಿದರು.
ಅವರ ಮಡಿಯೊಳಗೆ ತಾನಾಗದೆ,
ತಾನೊಂದು ಹೊಸ ಬಿಳಿದ ಮಡಿಮಾಡಿ
ಎನಗುಡಕೊಟ್ಟು ಎನ್ನ ಬದುಕಿಸಿಕೊಂಡಾತ,
ಮಡಿವಾಳ ಕಾಣಾ,
ಕೂಡಲಸಂಗಮದೇವಾ. ॥೯೫॥

೧೧೫೫

ಕೋಡಗವೇಡಿಸಬೇಡೆಂದಡೆ ಮಾಣದಯ್ಯಾ,
ತೋಡುವ ಹೆಗ್ಗಣ ಮಾಳಿಗೆ ಎಂದಡೆ ಮಾಣದಯ್ಯ,
ಗಾಡಿಗ ದೂಷಕನವರವರನಾಡುವುದೆ ನೇಮ.
ಕೂಡಲಸಂಗಮದೇವಾ, ಇದವರ ಕಾಯಕವಯ್ಯಾ. ॥೯೬॥

೧೧೫೬

ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ
ದೀಕ್ಷೆ, ಉಪದೇಶವ ಕೊಳ್ಳಲಾಗದು.
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು.
ಕ್ರಿಯಾಚಾರವಿಲ್ಲದ ಭೂತಪ್ರಾಣಿಗಳಲ್ಲಿ
ಜಂಗಮವೆಂದು ಪಾದೋದಕ ಪ್ರಸಾದವ ಕೊಳಲಾಗದು.
ಇಂತಪ್ಪ ಆಚಾರವಿಲ್ಲದ, ಅನಾಚಾರವ ಬಳಸುವ ದುರಾಚಾರಿಗಳಲ್ಲಿ
ಉಪದೇಶವ ಹಡೆದು, ಪಾದೋದಕಪ್ರಸಾದವ ಕೊಂಡವಂಗೆ
ಅಘನಾಸ್ತಿಯಾಗದು, ಮುಂದೆ ಅಘೋರ ನರಕ ತಪ್ಪದು
ಕಾಣಾ, ಕೂಡಲಸಂಗಮದೇವಾ. ॥೯೭॥

೧೧೫೭

ಕ್ರಿಯಾಜ್ಞಾನಸಂಬಂಧವೆಂದು ನುಡಿವರು_
ಕ್ರಿಯಾಜ್ಞಾನಸಂಬಂಧವೆಂತಿರ್ಪುದೆಂದರಿಯರು.
ಕ್ರೀಯಲ್ಲಿ ಅಂಗಲಿಂಗಸಂಬಂಧವನರಿಯರು,
ಜ್ಞಾನದಲ್ಲಿ ಲಿಂಗಜಂಗಮಸಂಬಂಧವನರಿಯರು.
ಕ್ರೀಯಲ್ಲಿ ಅರ್ಪಿತಪ್ರಸಾದಸಂಬಂಧವನರಿದು,
ಜ್ಞಾನದಲ್ಲಿ ತೃಪ್ತಿಪರಿಣಾಮವನರಿದು.
ಕ್ರೀಯೊಳಗಿರ್ದು ಜ್ಞಾನಸಂಪನ್ನನಾಗಿರಬಲ್ಲ ಶರಣಂಗೆ
ಕ್ರಿಯೆಯೆ ತನು, ಜ್ಞಾನವೆ ಪ್ರಾಣ.
ತನು ಲಿಂಗವಾಗಿ, ಪ್ರಾಣ ಜಂಗಮವಾಗಿ,
ತನುವ ಸಯಮಾಡಿ, ಪ್ರಾಣವ ಲಿಂಗಜಂಗಮಕ್ಕರ್ಪಿಸಿ,
ನಿರಂತರ ಸಾವಧಾನಿಯಾಗಿರಬಲ್ಲ ಪ್ರಸಾದಿಗಳ
ಎನಗೊಮ್ಮೆ ತೋರಿ ಸಲಹಾ,
ಕೂಡಲಸಂಗಮದೇವಾ. ॥೯೮॥

೧೧೫೮

ಗಾಂಧಾರಿ ಮಾಂಧಾರಿಯೆಂಬ ಅಹೋರಾತ್ರಿಯಲ್ಲಿ
ಲಿಂಗವ ಪೂಜಿಸಬೇಕು.
ಊರ ಕೋಳಿ ಕೂಗದ ಮುನ್ನ,
ಕಾಡ ನವಿಲು ಒದರದ ಮುನ್ನ,
ಲಿಂಗವ ಪೂಜಿಸಬೇಕು.
ಗೋವುಗಳ ಕೊಲುವ ಪಾಪಿಯ ದನಿಯ ಕೇಳದ ಮುನ್ನ,
ತುಂಬಿ ಮುಟ್ಟಿ ಪುಷ್ಪ ನಿರ್ಮಾಲ್ಯವಾಗದ ಮುನ್ನ
ಲಿಂಗವ ಪೂಜಿಸಬೇಕು. ಅದೆಂತೆಂದಡೆ;
'ಯೋ ಲಿಂಗಮರ್ಧರಾತ್ರೌ ತು ಶುಚಿರ್ಭೂತ್ವಾ ಪ್ರಪೂಜಯೇತ್
ಅಗ್ನಿಷ್ಟೋಮಸಹಸ್ರಸ್ಯ ಧರ್ಮಸ್ಯ ಲಭತೇ ಫಲಮ್' ಎಂದುದಾಗಿ,
ತನ್ನೊಡನೆ ಮಲಗಿರ್ದ ಸತಿಯನೆಬ್ಬಿಸದೆ ಶಿವಲಿಂಗಕ್ಕೆರೆವ
ಸದ್ಭಕ್ತನ ಶ್ರೀಪಾದವ ತೋರಿ ಬದುಕಿಸಯ್ಯಾ,
ಕೂಡಲಸಂಗಮದೇವಾ. ॥೯೯॥

೧೧೫೯
ಗಿರಿಯ ಶಿಖರದ ಮೇಲೆ ಕುಳಿತುಕೊಂಡು,
ಜಡೆಯನೇರಿಸಿಕೊಂಡು, ಹುತ್ತೇರಿ ಹಾವು ಸುತ್ತಿರ್ದಡೇನಯ್ಯಾ
ಕೃತಯುಗ ತ್ರೇತಾಯುಗ ದ್ವಾಪರ ಕಲಿಯುಗದೊಡನೊಡನೆ
ಸವೆದ ಪಾಷಾಣ!
ನಮ್ಮ ಕೂಡಲಸಂಗನ ಶರಣರ ಪ್ರಸಾದಜೀವಿಗಳಲ್ಲದವರು
ಏಸು ಕಾಲವಿರ್ದಡೇನು? ಅದರಂತು ಕಾಣಿರಣ್ಣಾ. ॥೨೦೦॥

೧೧೬೦
ಗುರುಕಾರುಣ್ಯವಿಡಿದು ಬಂದ ತನ್ನ ಕರಸ್ಥಲದ ಇಷ್ಟಲಿಂಗದಲ್ಲಿ
ದೃಷ್ಟಿ ನಟ್ಟು, ಭಾವಸಂಪನ್ನನಾಗಿ ನಿಂದು, ನಿಜವನೈದಲರಿಯದೆ
ಪವನಮುಖದಿಂದ ಲಿಂಗವನರಿದೆನೆಂಬುದೆ ದ್ರೋಹ.
ಇಡಾ ಪಿಂಗಳ ಸುಷುಮ್ನಾನಾಳವ ಬಲಿದು
ಲಿಂಗವ ಕಂಡೆಹೆನೆಂಬ ಕ್ರೂರಕರ್ಮಿಗಳನು ಕೂಡಲಸಂಗಯ್ಯ
ಕೆಡಹಿ ಮೂಗಕೊಯ್ವ ಕಾಣಿರೊ. ॥೨೦೧॥

೧೧೬೧
ಗುರುಕಾರುಣ್ಯವೆ ಶಿವಾಚಾರ,
ಗುರುಕಾರುಣ್ಯವೆ ಸದಾಚಾರ,
ಗುರುಕಾರುಣ್ಯವೆ ಪ್ರಸಾದರುಚಿ.
ಮುಂದೆ ಗುರು, ಹಿಂದೆ ಲಿಂಗ ಕೂಡಲಸಂಗಮದೇವಾ. ॥೨೦೨॥

೧೧೬೨
ಗುರು ಮುಂತಾಗಿ ಕೊಂಡುದು ಪ್ರಸಾದವಲ್ಲ,
ಲಿಂಗ ಮುಂತಾಗಿ ಕೊಂಡುದು ಪ್ರಸಾದವಲ್ಲ,
ಜಂಗಮ ಮುಂತಾಗಿ ಕೊಂಡುದು ಪ್ರಸಾದವಲ್ಲ,
ಪ್ರಸಾದ ಮುಂತಾಗಿ ಕೊಂಡುದು ಪ್ರಸಾದವಲ್ಲ.
ಅಂತಪ್ಪ ಪ್ರಸಾದವೆ ಬೇಕು. ಅಂತಪ್ಪ ಪ್ರಸಾದವ ತೋರಿ
ಬದುಕಿಸಯ್ಯಾ, ಕೂಡಲಸಂಗಮದೇವಾ. ॥೨೦೩॥

೧೧೬೩
ಗುರುಲಿಂಗಜಂಗಮದ ಹೆಸರಿನಿಂದ ಕಾಯಕವ ಮಾಡಿ,
ಗುರು ಚರಕೆ ವಂಚಿಸಿ,
ತಾಯಿ ತಂದೆ, ಬಂಧುಬಳಗ, ಹೆಂಡತಿ, ಒಡಹುಟ್ಟಿದವರು
ಎಂದು ಸಮಸ್ತಪದಾರ್ಥವ ಚಾಗೆಯ ಮಾಡುವನೊಬ್ಬ
ಭಕ್ತದ್ರೋಹಿ ನೋಡಾ, ಕೂಡಲಸಂಗಮದೇವಾ. ॥೨೦೪॥

೧೧೬೪
ಗುರುಲಿಂಗಜಂಗಮವ ನಂಬಿ ಕರೆದಡೆ, ಓ ಎಂಬ ಶಿವನು.
ನಂಬದೆ ಕರೆದಡೆ ಓ ಎಂಬನೇ ಶಿವನು?
ನಂಬಲರಿಯರು, ನಚ್ಚಲರಿಯರು ಡಂಭಿನ ಭಕ್ತರು.
ನಂಬದೆ ನಚ್ಚದೆ ಬರಿದೆ ಕರೆದಡೆ ಶಂಭು ಮೌನದಲ್ಲಿಪ್ಪ
ನಮ್ಮ ಕೂಡಲಸಂಗಮದೇವರು. ॥೨೦೫॥

೧೧೬೫
ಗುರುವಚನವ ತನ್ನೊಳಗಿಂಬಿಟ್ಟುಕೊಂಡ
ಪ್ರಸಾದಿಯ ಪ್ರಸಾದಿಯೆಂಬೆ.
ಲಿಂಗವಚನವ ತನ್ನೊಳಗಿಂಬಿಟ್ಟುಕೊಂಡ
ಪ್ರಸಾದಿಯ ಪ್ರಸಾದಿಯೆಂಬೆ.
ಜಂಗಮವಚನವ ತನ್ನೊಳಗಿಂಬಿಟ್ಟುಕೊಂಡ
ಪ್ರಸಾದಿಯ ಪ್ರಸಾದಿಯೆಂಬೆ,
ಪ್ರಸಾದವಚನವ ತನ್ನೊಳಗಿಂಬಿಟ್ಟುಕೊಂಡ
ಪ್ರಸಾದಿಯ ಪ್ರಸಾದಿಯೆಂಬೆ.
ಇಂತೀ ಚತುರ್ವಿಧ ಸಂಪನ್ನ
ಕೂಡಲಸಂಗಯ್ಯನಲ್ಲಿ ಚೆನ್ನಬಸವಣ್ಣನು. ॥೨೦೬॥

೧೧೬೬
ಗುರುವಿಂಗೆ ತನುವ ಕೊಟ್ಟು,
ಲಿಂಗಕ್ಕೆ ಮನವ ಕೊಟ್ಟು,

ಜಂಗಮಕ್ಕೆ ಧನವ ಕೊಟ್ಟು,
ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು ನಾನು ಶುದ್ಧನಾದೆನು
ಕಾಣಾ, ಕೂಡಲಸಂಗಮದೇವಾ. ॥೨೦೭॥

೧೧೬೭

ಗುರುವಿಂಗೆ ನೀನೆ ಕರ್ತ,
ಲಿಂಗಕ್ಕೆ ನೀನೆ ಕರ್ತ,
ಜಂಗಮಕ್ಕೆ ನೀನೆ ಕರ್ತ,
ಪ್ರಸಾದಕ್ಕೆ ನೀನೆ ಕರ್ತ,
ಉಪದೇಶಕ್ಕೆ ನೀನೆ ಕರ್ತ.
ಕೂಡಲಸಂಗಮದೇವರು ಸಾಕ್ಷಿಯಾಗಿ,
ಎನಗೆಯೂ ನೀನೆ ಕರ್ತನಾದ ಕಾರಣ,
ನಾನು ಬೇಕೆನಲಮ್ಮೆ ಬೇಡೆನಲಮ್ಮೆ
ಕಾಣಾ, ಚೆನ್ನಬಸವಣ್ಣಾ. ॥೨೦೮॥

೧೧೬೮

ಗುರುವಿನಲ್ಲಿ ಸ್ವಾಯತ, ಲಿಂಗದಲ್ಲಿ ಸನ್ನಿಹಿತ,
ಜಂಗಮದಲ್ಲಿ ಸದರ್ಥನು, ಪ್ರಸಾದದಲ್ಲಿ ಪರಿಣಾಮಿ.
ಇಂತೀ ಚತುರ್ವಿಧದಲ್ಲಿ ಸನ್ಮತನು,
ಕೂಡಲಸಂಗಯ್ಯನಲ್ಲಿ ಚೆನ್ನಬಸವಣ್ಣನು. ॥೨೦೯॥

೧೧೬೯

ಗುರುವುಪದೇಶವುಳ್ಳವರ ಗುರುವೆಂದೆ ಕಾಬೆನು,
ಲಿಂಗಾಂಗಸಂಗಿಗಳ ನಿಜಲಿಂಗವೆಂದೆ ಕಾಬೆನು,
ಜಂಗಮಾರ್ಚಕರ ಸರ್ವಾಂಗಲಿಂಗಿಗಳೆಂದೆ ಕಾಬೆನು.
ಕೂಡಲಸಂಗಮದೇವರಲ್ಲಿ ಸಹಜಭಕ್ತರ ಕಂಡಡೆ,
ಅವರ ನೀನೆಂದೇ ನಚ್ಚಿ ಮೆಚ್ಚಿ
ಅಚ್ಚೊತ್ತಿದಂತಿಪ್ಪೆನಯ್ಯಾ ಚೆನ್ನಬಸವಣ್ಣಾ. ॥೨೧೦॥

೧೧೭೦

ಗುರು ಸ್ವಾಯತವಾದ ಬಳಿಕ
ಗುರುವ ಮರೆಯಬೇಕಯ್ಯಾ,
ಲಿಂಗ ಸ್ವಾಯತವಾದ ಬಳಿಕ
ಲಿಂಗವ ಮರೆಯಬೇಕಯ್ಯಾ,
ಜಂಗಮ ಸ್ವಾಯತವಾದ ಬಳಿಕ
ಜಂಗಮವ ಮರೆಯಬೇಕಯ್ಯಾ,
ಪ್ರಸಾದ ಸ್ವಾಯತವಾದ ಬಳಿಕ
ಪ್ರಸಾದವ ಮರೆಯಬೇಕಯ್ಯಾ.
ಇಂತೀ ಗುರುಲಿಂಗಜಂಗಮಪ್ರಸಾದದಲ್ಲಿ ಪರಿಣಾಮಿಯಾಗಿ,
ಸಮಯಭಕ್ತಿಯಲ್ಲಿ ಸಂತೋಷಿಯಾಗಿ ಬದುಕಿದೆನು ಕಾಣಾ,
ಕೂಡಲಸಂಗಮದೇವಾ. ॥೨೧೧॥

೧೧೭೧

ಗುರಿಯನೆಚ್ಚವನೇ ಬಿಲ್ಲಾಳು,
ಇರಿದು ರಣದಲ್ಲಿ ತಿ[ರುಗದವ]ನೇ ಮಾಸಾಳು,
ದಾರಿದ್ರ್ಯ[ವ]ನೆ ಪರಿದವನೇ ದಯಾಳು,
ಗುರುಪಾದಭಕ್ತಿಯುಳ್ಳವನದೇ ಬಾಳು,
ಕೂಡಲಸಂಗಮದೇವನ ಶರಣರಾಳು. ॥೨೧೨॥

೧೧೭೨

ಘನಗಂಭೀರವಾರುಧಿಯೊಳಗೆ ತೋರುವ ವೀಚಿಗಳು
ಆ ವಾರುಧಿಯ ಬಿಟ್ಟು ತೋರಬಲ್ಲವೆ?
ತೋರಿದಡೆ ಆ ವಾರುಧಿ ತನ್ನ ತಾ ಜರೆದುಕೊಂಬುದೆ?
ನಿಮ್ಮೊಳಡಗಿದ ಪ್ರಮಥರೆಲ್ಲರ ಗುಣಾದಿಗುಣಂಗಳೆಲ್ಲವನು
ನಿಮ್ಮಡಿಗಳೆತ್ತಲುಂಟೆ?
ಜಗದೊಳಗೆ ಕೂಡಿ ಪರಿಪೂರ್ಣನಾದ ಬಳಿಕ,?

ಇದಿರ ನೋಡಿ ಜರೆದು ನುಡಿವ ಠಾವಾವುದು ಹೇಳಯ್ಯಾ?
ಕೂಡಲಸಂಗಮದೇವಯ್ಯಾ,
ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ
ಭಿನ್ನವ ಮಾಡಲುಂಟೆ? ॥೨೧೩॥

೧೧೭೩

ಘನವನರಿದು ಘನವ ವೇಧಿಸಿ,
ಘನಗುರುವ ತನ್ನೊಳಗೆ ಬೈಚಿಟ್ಟ
ಪರಿಣಾಮಿಯ ನೋಡಾ!
ಗುರುಲಿಂಗಜಂಗಮದಲ್ಲಿ ತನುಮನಧನವ
ವೇಧಿಸುವ ಪರಿಯ ನೋಡಾ!
ಕಾಯಪ್ರಸಾದದಲ್ಲಿ ಸ್ವಾಯತವ
ಮಾಡಿಕೊಂಡಿಪ್ಪ ಪರಿಯ ನೋಡಾ!
ಷಡುಸ್ಥಲದಲ್ಲಿ ಸ್ವಾಯತವಾದ,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೨೧೪॥

೧೧೭೪

ಚಂದ್ರನು ಅಮೃತಕರನಾದಡೇನಯ್ಯಾ,
ಒಳಗಣ ಕಳಂಕಬಿಡದನ್ನಕ್ಕರ?
ಸೂರ್ಯ ಮಹಾಪ್ರಕಾಶನಾದಡೇನಯ್ಯಾ,
ಅಸ್ತಮಾನಕ್ಕೆ ಅಸ್ತಂಗತನೆಂಬ ಹೀನ ಬಿಡದನ್ನಕ್ಕರ?
ಆನು ನಿಮ್ಮ ಕೃಪೆಯ ಹಡೆದು ಫಲವೇನಯ್ಯಾ,
ನಿಮ್ಮ ಶರಣರು ಎನ್ನ ಮೇಲೆ ಮುನಿದು ಹೋದ ಬಳಿಕ?
ಕೂಡಲಸಂಗಮದೇವಯ್ಯಾ, ನಿಮ್ಮ ಶರಣರ ಮನದಲ್ಲಿ
ಎನ್ನ ಮೇಲೆ ಕರುಣ ಹುಟ್ಟಿಬಪ್ಪಂತೆ ಮಾಡಯ್ಯಾ. ॥೨೧೫॥

೧೧೭೫

ಚಂದ್ರಶಿಲೆಯಲ್ಲಿ ಪಾವಕ ಹುಟ್ಟಿ,
ಇಡಾಪಿಂಗಳ ಮಧ್ಯದಲ್ಲಿ ಅನಿಲ ತುಂಬಿ,

ಅರಿದರಿದು! ನಿಮ್ಮ ನೆನೆವ ಪರಿಕರ ಹೊಸತು.
ಅರಿವಡೆ ತಲೆಯಿಲ್ಲ, ಹಿಡಿವಡೆ ಒಡಲಿಲ್ಲ,
ಕೂಡಲಸಂಗಮದೇವಾ,
ನಿಮ್ಮ ಶರಣನ ಪರಿ ಇಂತುಟು, ಅರಿದರಿದು. ॥೨೧೬॥

೧೧೭೬

ಚಿನ್ಮಯ ಚಿತ್ಪ್ರಕಾಶ ಚಿದಾನಂದ ಲಿಂಗವೆ,
ಎನ್ನ ಹೃದಯಕಮಲದಲ್ಲಿ ಬೆಳಗಿ ತೋರುವ ಪರಂಜ್ಯೋತಿ,
ಎನ್ನ ಕರಸ್ಥಲಕ್ಕನುವಾದ ಧರ್ಮಿ,
ಎನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡಿಪ್ಪೆಯಯ್ಯಾ,
ಕೂಡಲಸಂಗಮದೇವಯ್ಯಾ. ॥೨೧೭॥

೧೧೭೭

ಚೆನ್ನಬಸವರಾಜದೇವರೆನ್ನ ಶಿಷ್ಯನಾದನೆಂದಡೆ
ಎನಗಾದ ಘನವೇನಯ್ಯಾ!
ಆದಿಯ ತೋರಿದ ಚೆನ್ನಬಸವನು,
ಅನಾದಿಯ ತೋರಿದ ಚೆನ್ನಬಸವನು,
ಆದಿಯನಾದಿಯಿಂದತ್ತತ್ತಲಾದವರನೆ ತೋರಿದ ಚೆನ್ನಬಸವನು.
ಕೂಡಲಸಂಗಮದೇವಾ, ಚೆನ್ನಬಸವರಾಜದೇವರೆನ್ನ
ಮಾತಾಪಿತರಯ್ಯಾ. ॥೨೧೮॥

೧೧೭೮

ಜಂಗಮಕ್ಕೆ ಮಾಡಿ ಗತಿಯ ಪಡೆದೆಹೆನೆಂಬ
ಬೆವಹಾರದ ಭಕ್ತರು ನೀವು ಕೇಳಿರಯ್ಯಾ.
ಜಂಗಮಕ್ಕೆ ಮಾಡಿ, ಗತಿಯ ಪಡೆದೆಹೆನೆಂಬ,
ಭಕ್ತಿವ್ಯರ್ಥರು ನೀವು ಕೇಳಿರಯ್ಯಾ.
ಅಗ್ನಿಮುಖದಲ್ಲಿ ಪಾಕವಾದ ಸಸಿ ತೆನೆಯಪ್ಪುದೆ?
ಶಶಿಧರಂಗೆ ಮಾಡಿದಡೆ ಫಲವಪ್ಪುದು,
ಆ ಫಲದಾಯಕನೆ ಮರಳಿ ಭವಕ್ಕೆ ಬಹನು.

ಜಂಗಮಕ್ಕೆ ಮಾಡಿದಡೆ ಫಲವಿಲ್ಲ, ಮರಳಿ ಭವವಿಲ್ಲ.
ಕಿಚ್ಚಿನ ಕಣಜದಲ್ಲಿ ಬೀಜವ ತುಂಬಿ
ಬಿತ್ತುವ ದಿನಕ್ಕರಸಿದಡುಂಟೆ?
ಕೂಡಲಸಂಗಮದೇವಾ. ॥೨೧೯॥

೧೧೭೯

ಜಂಗಮವೆ ಜ್ಞಾನರೂಪ,
ಭಕ್ತನೆ ಆಚಾರರೂಪವೆಂಬುದು
ತಪ್ಪದು ನೋಡಯ್ಯಾ.
ನಾನು ನಿಮ್ಮಲ್ಲಿ ಆಚಾರಿಯಾದಡೇನಯ್ಯಾ,
ಜ್ಞಾನವಿಲ್ಲದನ್ನಕ್ಕರ?
ತಲೆಯಿಲ್ಲದ ಮುಂಡದಂತೆ.
ಜ್ಞಾನ ಉದಯವಾಗದ ಮುನ್ನವೆ
ತಲೆದೋರುವ ಆಚಾರವುಂಟೆ ಜಗದೊಳಗೆ?
ಜ್ಞಾನದಿಂದ ಆಚಾರ, ಜ್ಞಾನದಿಂದ ಅನುಭಾವ,
ಜ್ಞಾನದಿಂದ ಪ್ರಸಾದವಲ್ಲದೆ,
ಜ್ಞಾನವನುಳಿದು ತೋರುವ ಘನವ ಕಾಣೆನು.
ಎನ್ನ ಆಚಾರಕ್ಕೆ ನೀನು ಜ್ಞಾನರೂಪಾದ ಕಾರಣ
ಸಂಗನಬಸವಣ್ಣನೆಂಬ ಹೆಸರುವಡೆದೆನು.
ಅನಾದಿ ಪರಶಿವನು ನೀನೆ ಆಗಿ,
ಘನಚೈತನ್ಯಾತ್ಮಕನೆಂಬ ಮಹಾಜ್ಞಾನವು ನೀನೆ ಆದೆಯಲ್ಲದೆ,
ನಾನೆತ್ತ, ಶಿವತತ್ತ್ವವೆತ್ತಯ್ಯಾ?
ಕೂಡಲಸಂಗಮದೇವರು ಸಾಕ್ಷಿಯಾಗಿ,
ನಾನು ಪ್ರಭುದೇವರ ತೊತ್ತಿನ ಮಗನೆಂಬುದ
ಮೂರು ಲೋಕವೆಲ್ಲವೂ ಬಲ್ಲುದು ಕಾಣಾ, ಪ್ರಭುವೆ. ॥೨೨೦॥

೧೧೮೦

ಜಂಗಮವೆ ತನ್ನ ಪ್ರಾಣಲಿಂಗವೆಂದರಿದ ಸದ್ಭಕ್ತಂಗೆ
ಜಂಗಮದ ಪ್ರಸಾದವಿಲ್ಲದೆ ಲಿಂಗಪ್ರಸಾದವ ಕೊಳಲಾಗದು,

ಜಂಗಮದ ಪ್ರಸಾದವು ಲಿಂಗಕ್ಕೆ ಸಲ್ಲದೆಂದು ಶಂಕಿಸಲಾಗದು.
ಅದೆಂತೆಂದಡೆ, ವೀರಾಗಮದಲ್ಲಿ:
'ಜಂಗಮಾದಿಗುರೂಣಾಂ ಚ ಅನಾದಿ ಸ್ವಯಲಿಂಗವತ್
ಆದಿಪ್ರಸಾದವಿರೋಧೇ ಇಷ್ಟೋಚ್ಛಿಷ್ಟಂತು ಕಿಲ್ಬಿಷಮ್' ಎಂದುದಾಗಿ
ಪ್ರಾಣ ಭಾವದಲ್ಲಿ ಸಂಬಂಧವಾಗಿ ಇಷ್ಟಕ್ಕೂ ಸಂದಿತ್ತು.
ಈ ಭೇದವನರಿದು ಜಂಗಮದ ಪ್ರಸಾದವಿಲ್ಲದೆ
ಲಿಂಗದ ಪ್ರಸಾದವ ಕೊಳಲಾಗದು ವೀರಮಾಹೇಶ್ವರರು,
ಕೂಡಲಸಂಗಮದೇವಾ. ॥೨೨೧॥

೧೧೮೧

ಜಂಗಮವೆ ಲಿಂಗವೆಂಬ ಭಾವ ಫಲಿಸಿದಡೆ
ಇಂದಿನ ಪುಣ್ಯಕ್ಕೆಸರಿಯುಂಟೆ?
ಲಿಂಗದ ಒಡಲ ಮನೆಮಾಡಿಪ್ಪ
ಜಂಗಮವೆನ್ನ ಕಣ್ಣಮುಂದೆ ಸುಳಿದಡೆ
ಇಂದೆನ್ನ ಭಾಗ್ಯಕ್ಕೆ ಕಡೆಯಿಲ್ಲ.
ಆ ಜಂಗಮವೆ ದಿಟಕ್ಕೆನ್ನ ಮನೆಗೆ ಬಂದಡೆ
ಸಲುಗೆಯ ವರವ ಹಡೆವೆನು ಕಾಣಾ,
ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣಾ, ನೀನಹುದೆನಲಿಕೆ. ॥೨೨೨॥

೧೧೮೨

ಜಂಗಮಸೇವೆಯೆ ಗುರುಪೂಜೆಯೆಂದರಿದ,
ಜಂಗಮಸೇವೆಯೆ ಲಿಂಗಪೂಜೆಯೆಂದರಿದ,
ಜಂಗಮಸೇವೆಯೆ ತನ್ನಿರವೆಂದರಿದ,
ಜಂಗಮಸೇವೆಯೆ ತನ್ನ ನಿಜವೆಂದರಿದ,
ಜಂಗಮಸೇವೆಯೆ ಸ್ವಯವೆಂದರಿದ,
ಜಂಗಮಸೇವೆಯೆ ನಿತ್ಯಪದವೆಂದರಿದ.
ಇದು ಕಾರಣ, ನಮ್ಮ ಕೂಡಲಸಂಗಮದೇವರಲ್ಲಿ
ಜಂಗಮಪ್ರಾಣಿಯಾದ ಚಂದಯ್ಯನ ಹಳೆ ಮಗನಾಗಿ,

ಆತನ ಶ್ರೀಚರಣಕ್ಕೆ ಶರಣೆಂದು ಶುದ್ಧನು,
ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ? ಪ್ರಭುವೆ ॥೨೨೩॥

೧೧೮೩

ಜಗತ್ತೆಂಬ ಯಂತ್ರದ ಹಾಹೆ ಹೇಂಗೆಂದರಿಯಲು
ಅಜ್ಞಾನವೆಂಬ ತುಷದ ಚೋಹವ ತೊಡಿಸಿ,
ಅಹಂ ಮಮತೆಯೆಂಬ ಸೊಕ್ಕನಿಕ್ಕಿ,
ಬಾರದ ಭವದ ಬಟ್ಟೆಯಲ್ಲಿ ಬರಿಸಿ,
ಕಾಣದ ಕರ್ಮ ದುಃಖವ ಕಾಣಿಸಿ,
ಉಣ್ಣದ ಅಪೇಯವನುಣಿಸಿ,
ಮಾರಾರಿ ವಿನೋದಿಸಿದೆಯಯ್ಯಾ,
ಕೂಡಲಸಂಗಮದೇವಾ. ॥೨೨೪॥

೧೧೮೪

ಜನನವಿಲ್ಲದ ಜನಿತನು ನೀನು ನೋಡಯ್ಯಾ,
ಜನಿಯಿಸಿ ಸಂಸಾರವನರಿಯದ ನಿರ್ವಿಕಾರಿ ನೀನು ನೋಡಯ್ಯಾ,
ಭವಬಂಧನಗಳಿಲ್ಲದ ನಿತ್ಯನಿಜತತ್ವವು ನೀನು ನೋಡಯ್ಯಾ,
ನಿನ್ನ ಚರಣಸೇವೆಯ ಮಾಡಿ, ಎನ್ನ ಭವ ಹರಿಯಲೆಂದಿಪ್ಪೆನಲ್ಲದೆ,
ನಿಮ್ಮ ಘನವೆಂತೆಂದು ಅರಿಯೆ ನೋಡಯ್ಯಾ.
ಕೂಡಲಸಂಗಮದೇವಾ,
ನೀನು ಕೊಂಡಾಡಲಾನು ಪ್ರಾಪ್ತನೆ ಹೇಳಾ ಪ್ರಭುವೆ. ॥೨೨೫॥

೧೧೮೫

ಜಿಹ್ವೆ ಗುರು, ಕಂಗಳು ಲಿಂಗ, ನಾಸಿಕವಾಚಾರ,
ಹಸ್ತ ಜಂಗಮ, ಶ್ರೋತ್ರ ಪ್ರಸಾದ.
ಈ ಪಂಚಾಚಾರಸಂಜ್ಞೆಯನು,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಯೋಗಸಂಜ್ಞೆಯನೆನಗೆ
ನೀ ಕರುಣಿಸಲಾಯಿತ್ತು, ಕೂಡಲಸಂಗಮದೇವಾ. ॥೨೨೬॥

೧೧೮೬

ತನು ದೊರೆಕೊಂಡಡೆ ಮನ ದೊರೆಕೊಳ್ಳದು,
ಮನ ದೊರೆಕೊಂಡಡೆ ತನು ದೊರೆಕೊಳ್ಳದು,
ತನುಮನ ದೊರೆಕೊಂಡಡೆ ಧನ ದೊರೆಕೊಳ್ಳದು,
ತನುಮನಧನ ದೊರೆಕೊಂಡಡೆ ಸತಿಸುತರೆಡೆಯಾಟ ದೊರೆಕೊಳ್ಳದು,
ಸತಿಸುತರೆಡೆಯಾಟ ದೊರೆಕೊಂಡಡೆ
ಜಂಗಮಕ್ಕೆ ಮಾಡುವ ವರ್ಮ ದೊರೆಕೊಳ್ಳದಯ್ಯಾ,
ಕೂಡಲಸಂಗಮದೇವಾ. ॥೨೨೭॥

೧೧೮೭

ತನುಮುಟ್ಟಿದ ಭಕ್ತಿಗೆ ತನುವೆ ಅರ್ಪಿತ,
ಮನಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯಾ,
ಎನ್ನ ತನುಮನವೆರಡು ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯ.
ಅದೆಂತೆಂದಡೆ:
'ದೀರ್ಘದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ
ಶರೀರಮರ್ಥಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್'
ಎಂದುದಾಗಿ, ತ್ರಾಹಿ ತ್ರಾಹಿ ಶರಣಾರ್ಥಿ ಶರಣಾರ್ಥಿ
ನೀವೆ ಬಲ್ಲಿರಿ, ಕೂಡಲಸಂಗಮದೇವಪ್ರಭುವೆ. ॥೨೨೮॥

೧೧೮೮

ತನುವ ಕೊಟ್ಟೆನೆಂದು ನುಡಿದು,
ಗುರುವಚನಕ್ಕೆ ದೂರವಾದೆ,
ಮನವ ಕೊಟ್ಟೆನೆಂದು ನುಡಿದು,
ಲಿಂಗಮುಖಕ್ಕೆ ದೂರವಾದೆ,
ಧನವ ಕೊಟ್ಟೆನೆಂದು ನುಡಿದು,
ಜಂಗಮಮುಖಕ್ಕೆ ದೂರವಾದೆ,
ಕೂಡಲಸಂಗಮದೇವಯ್ಯಾ,
ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ. ॥೨೨೯॥

೧೧೮೯

ತನುವ ಬೇಡಿದಡೀವೆ, ಮನವ ಬೇಡಿದಡೀವೆ,
ಧನವ ಬೇಡಿದಡೀವೆ ನಿಮ್ಮ ಶರಣಂಗೆ.
ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದಡೆ
ಘನಮಹಿಮ, ನಿಮ್ಮ ಪಾದದಾಣೆ.
ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದನರಿದಡೆ
ಕೂಡಲಸಂಗಮದೇವಾ, ಭವ ಘೋರದಲ್ಲಿಕ್ಕಯ್ಯಾ. ॥೨೩೦॥

೧೧೯೦

ತನುವಿಡಿದಿಹುದು ಪ್ರಕೃತಿ,
ಪ್ರಕೃತಿವಿಡಿದಿಹುದು ಪ್ರಾಣ,
ಪ್ರಾಣವಿಡಿದಿಹುದು ಜ್ಞಾನ,
ಜ್ಞಾನವಿಡಿದಿಹುದು ಗುರು.
ಇಂತೀ ಗುರುಲಿಂಗಜಂಗಮಪ್ರಸಾದವ
ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ
ಸಂದೇಹಿ ವ್ರತಗೇಡಿಗಳನೇನೆಂಬೆ?
ಅಂತವರ ಮುಖವ ತೋರದಿರು,
ಕೂಡಲಸಂಗಮದೇವಾ. ॥೨೩೧॥

೧೧೯೧

ತನುವೆಂತಿರ್ದಡೇನಯ್ಯಾ?
ಮನ ನಿರ್ಮಳವಾಗಿರ್ದಡೆ ಸಾಲದೆ.
ಎಂತಿರ್ದಡೇನು ಲಿಂಗಭಕ್ತ,
ಎಂತಿರ್ದಡೇನು ಲಿಂಗಶರಣ,
ಎಂತಿರ್ದಡೇನು ನೋಡಯ್ಯಾ.
ಶಿಶು ನೊಂದಡೆ ತಾಯಿ ನೊಂದಂತೆ
ಕೂಡಲಸಂಗಮದೇವಾ. ॥೨೩೨॥

೧೧೯೨

ತಾನಿಲ್ಲದೆ ತಾ ಮಾಡುವ ಸಹಜನು,
ತಾನಿಲ್ಲದೆ ತಾ ನೀಡುವ ಸಹಜನು,
ತಾ ಬೇರಿಲ್ಲದೆ ಬೆರಸಿಹ ನಿಜಪದದೊಳು.
ಏನೊಂದರ ಹಮ್ಮಿಲ್ಲ[ದ] ಸಹಜ ಸುಜ್ಞಾನಿಯ
ಮಾಟದ ಕೂಟದ ಸ್ಥಲದೊಳು ಕೂಡಿಹ
ಕೂಡಲಸಂಗನನದೇನೆಂದುಪಮಿಸುವೆ! ॥೨೩೩॥

೧೧೯೩

ತಾ ಸವಿದಲ್ಲದೆ ಆ ಸವಿಯ ಲಿಂಗಕ್ಕರ್ಪಿಸಲಾಗದು.
ಅದೇನು ಕಾರಣವೆಂದಡೆ,
ಆ ಲಿಂಗವು ಕಹಿ-ಸಿಹಿಯರಿಯದಾಗಿ. ಇದು ಕಾರಣ,
ಕಹಿ ಎಂದು ಕಳೆದು, ಸಿಹಿ ಎಂದು ಕೊಂಡಡೆ,
ಕೊಂಡುದು ಕಿಲ್ಬಿಷ, ಕೂಡಲಸಂಗಮದೇವಾ. ॥೨೩೪॥

೧೧೯೪

ತಿಂಬ ಗಂದೆಯ ಮೇಲೆ ಉಗುರು ಬಿದ್ದಂತಾಯಿತು,
ಎನ್ನ ಹಿಂದನೆಚ್ಚರಿಸಿ, ಮುಂದಣ ಸ್ಥಿತಿಗತಿಯನರುಹಿ,
ಸಂದೇಹವ ಬಿಡಿಸಿದೆ.
ಎನ್ನ ಕಂದುಕಲೆಯ ಕಳೆವ ತಂದೆ ನೀನಿರುತ್ತಿರಲು,
ಎನಗಿನ್ನಾವ ದಂದುಗವೂ ಇಲ್ಲ ನೋಡಾ.
ಬಂದ ಕಾರ್ಯದ ಹದನಿನ್ನೆಂದು ಸಯವಪ್ಪುದು?
ಕೂಡಲಸಂಗಮದೇವರು ಎನ್ನನಿತ್ತ ಬಾರೆಂಬ
ಕಾಲವ ತಿಳುಹಾ, ಚೆನ್ನಬಸವಣ್ಣಾ. ॥೨೩೫॥

೧೧೯೫

ತಿರುಕರೆನ್ನದಿರಿ ಭೋ! ಎನ್ನ ತಂದೆಗಳನು,
ತಿರುಕರೆನ್ನದಿರಿ ಭೋ! ಎನ್ನ ಬಂಧುಗಳನು,
ತಿರುಕರೆನ್ನದಿರಿ ಭೋ! ಎನ್ನ ದೇವರನು,

ತಿರುಕರೆನ್ನದಿರಿ ಭೋ! ಎನ್ನ ಒಡೆಯರನು.
ದೇಹಿ ಎಂದಡೆ ನಾಸ್ತಿ ಎಂಬವರ
ಬೇಹು ನೋಡಬಂದ ಕಾಣಾ, ಕೂಡಲಸಂಗಮದೇವ. ॥೨೩೬॥

೧೧೯೬

ತೊಂಡಿಲ ಮುಡಿದುಕೊಂಡು,
ತಮ್ಮ ತಮ್ಮ ಗಂಡರ ಹಿಂದುಗೊಂಡು
ನಾಡ ಮಿಂಡರ ನೋಡುತ್ತಲಿ,
ಇಂದುನಮ್ಮಹುಲಿಹೋಯಿತ್ತುಬನ್ನಿರೆ.
ಗಂಡರ ಗಂಡನವ್ವಾ ಕೂಡಲಸಂಗ,
ಕಂಡಡೆ ಮೂಗ ಕೊಯಿವಾ. ॥೨೩೭॥

೧೧೯೭

ತೊತ್ತಿನ ತೊತ್ತಿನ ಮರುದೊತ್ತಿನೊಡನೆ
ಮುನಿವುದು ನಿಮಗೆ ಗುಣವೆ?
ಅಯ್ಯಾ ಅಯ್ಯಾ, ನಿಮ್ಮ ಧರ್ಮದವ ನಾನಯ್ಯಾ.
ಒಮ್ಮಿಂಗೆ ಕೃಪೆ ಮಾಡಿ ಕರುಣಿಸಯ್ಯಾ.
ಕೂಡಲಸಂಗಮದೇವಾ, ಇಲಿಗಂಜಿ ಮನೆ ಸುಡುವರುಂಟೆ? ॥೨೩೮॥

೧೧೯೮

ತೊರೆಯುದಕವ ಕೆರೆಯುಂಡು ತೃಪ್ತವಾಗಲು
ಆ ಕೆರೆಯುದಕವ ಹಲವು ಕೆಲವು
ಸ್ಥಾವರ ಜಂಗಮಗಳುಂಡುತೃಪ್ತಿವಡೆವಂತೆ,
ಪ್ರಭುದೇವರ ತೃಪ್ತಿ ಅಸಂಖ್ಯಾತಮಹಾಗಣಂಗಳೆಲ್ಲಕ್ಕೆ
ತೃಪ್ತಿಯಾಯಿತ್ತು ನೋಡಾ.
ಬಸುರುವೆಂಡತಿ ಉಂಡಲ್ಲಿ ಒಡಲ ಶಿಶು ತೃಪ್ತಿಯಾದಂತೆ,
ಸಚರಾಚರವೆಲ್ಲವು ತೃಪ್ತಿಯಾದವು ನೋಡಾ.
ಕೂಡಲಸಂಗಮದೇವಾ,

ನಿಮ್ಮ ಶರಣ ಪ್ರಭುದೇವರ ಪ್ರಸಾದಮಹಿಮೆಗೆ
ನಮೋ ನಮೋ ಎಂಬೆನು. ॥೨೩೯॥

೧೧೯೯

ತೋರಲಿಲ್ಲದಸಿಂಹಾಸನದ ಮೇಲೆ
ಹೇಳಬಾರದಘನವು ಬಂದೆರಗಿದಡೆ,
ತೋರಿ ಮೆರೆವ ಸಂಗಮನಾಥನು ಎದ್ದು ಹೋದನು.
ನೀಡ ನೀಡ ಸಯದಾನವೆಲ್ಲವೂ ನಿರ್ವಯಲಾಯಿತ್ತು,
ಮಾಡ ಮಾಡ ಸಯದಾನವ ಮರಳಿ ನೋಡಲಿಲ್ಲ.
ಇದನೇನ ಹೇಳುವೆ ಅನಿಯಮ ಚರಿತ್ರವನು!
ಇದೆಂತುಪಮಿಸುವೆನು ವಿಸ್ಮಯವನು!
ಕೂಡಲಸಂಗಮದೇವರ ತೃಪ್ತಿಯ ತೆರನ ಬಲ್ಲಡೆ
ಹೇಳಯ್ಯಾ, ಚೆನ್ನಬಸವಣ್ಣಾ. ॥೨೪೦॥

೧೨೦೦

ತೋರುವನಯ್ಯಾ ಶಿವನು, ಅಡಗುವನಯ್ಯಾ ಶಿವನು.
ಕಂಗಳ ಮುಂದೆ ಕಾಯಗೊಂಡು,
ಮನದ ಮುಂದೆ ಕನಸಾಗಿ ಕಾಡುವನಯ್ಯಾ ಶಿವನು,
ಒಂದೆಡೆಯಲ್ಲಿದ್ದು ಹಲವೆಡೆಯಲ್ಲಿ ತೋರುವನು,
ಹಲವೆಡೆಯಲ್ಲಿದ್ದು ಒಂದೆ ರೂಪಾಗಿಪ್ಪನು.
ಕೂಡಲಸಂಗಮದೇವನು ಚಿನುಮಯನಾಗಿ,
ಎನಗೆ ಅಸಾಧ್ಯವಾದನು. ॥೨೪೧॥

೧೨೦೧

ತ್ರಿವಿಧವನಿತ್ತು, ರೂಹು ಮಾತು ಬಳಿಕುಂಟೆ ಅಯ್ಯಾ?
ತನುವ ಕೊಡೆನಾಗಿ ಇದಿರುತ್ತರವಿದೆ,
ಮನವ ಕೊಡೆನಾಗಿ ಆನೆಂಬಹಂಕಾರವಿದೆ,
ಧನವ ಕೊಡೆನಾಗಿ ಪ್ರಪಂಚಿನ ಬಳಕೆಯಿದೆ.
ಕೂಡಲಸಂಗಮದೇವಯ್ಯಾ, ಎಂತು ಭಕ್ತನಪ್ಪೆನು! ॥೨೪೨॥

೧೨೦೨
ದಶವಿಧಪಾದೋದಕವೆಸಗಿದ[ರೆಸ]ಕ ಎಂತೆಂದಡೆ:
ಗುರುಲಿಂಗಜಂಗಮ ಪಾದೋದಕ ಪ್ರಸಾದ ವಿಭೂತಿ
ರುದ್ರಾಕ್ಷಿ ಪಂಚಾಕ್ಷರಿ ಗಣವ್ರತನೇಮ ಆಚಾರ
ಶೀಲ ಸಂಬಂಧದೊಳಗು ಹೊರಗು
ತ್ರಿವಿಧ ಸಂಪೂರ್ಣವಾದ ಕಾರಣ
ನಿತ್ಯಪಾದೋದಕವೆನಿಸಿತ್ತು ಕೂಡಲಸಂಗಮದೇವಪ್ರಭುವೆ. ॥೨೪೩॥

೧೨೦೩
ದಾಸನಿಗೆ ದೇವರುಂಟಾದರೆ ವರಾಹನ ತಿಂಬನೆ?
ಬ್ರಾಹ್ಮಣಂಗೆ ದೇವರುಂಟಾದರೆ ತೊಳಸಿಯಂ ಬಿತ್ತಿ
ಶರಣೆಂದು ತಲೆಯಂ ಚಿವುಟಿ ತಿಂಬನೆ?
ಮೈಲಾರಂಗೆ ದೇವರುಂಟಾದರೆ
ಕೊರಳಲ್ಲಿ ಕವಡೆಯಂ ಕಟ್ಟಿ ನಾಯಾಗಿ ಬೊಗಳುವನೆ?
ಜೋಗಿಗೆ ದೇವರುಂಟಾದರೆ ಮತ್ಸ್ಯವ ತಿಂಬನೆ?
ಇಂತೀ ತಮ್ಮ ದೇವರ ತಾವೆ ತಿಂಬವರ
ನಮ್ಮ ಶಿವಭಕ್ತರಿಗೆ ಸರಿಯೇಂದವರ
ನಮ್ಮ ಉತ್ತಣ್ಣಗಳ ಎಡದ ಪಾದರಕ್ಷೆಯಲ್ಲಿ
ಹೊಯಿದರು ಕೂಡಲಸಂಗಮದೇವ ॥೨೪೪॥

೧೨೦೪
ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ,
ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ,
ಕೂಡಲಸಂಗಮದೇವಾ. ॥೨೪೫॥

೧೨೦೫
ದೇವ ದೇವ ಮಹಾಪ್ರಸಾದ, ಅವಧರಿಸಯ್ಯಾ ಎನ್ನ ಬಿನ್ನಹವ:
ಅತಳ, ವಿತಳ, ಸುತಳ, ರಸಾತಳ, ತಳಾತಳ,

ಮಹಾತಳ, ಪಾತಾಳಾದಿ ಲೋಕದಿಂದತ್ತತ್ತ ನಿಮ್ಮ ಶ್ರೀಚರಣ.
ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ,
ಜನರ್ಲೋಕ, ತಪೋಲೋಕ,
ಸತ್ಯಲೋಕದಿಂದತ್ತತ್ತ ನಿಮ್ಮ ಉತ್ತಮಾಂಗ,
ತರುವಿನೊಳಗೆ ಅನಲ ಭರಿತನಾಗಿರ್ದು
ಮಥನದಿಂದ ತೋರಿ ಆಹುತಿಗೊಂಬಂತೆ,
ಸರ್ವಕರ್ತೃ ನಿತ್ಯಾನಂದಮಯನೆ, ಭಕ್ತಿಲೀಲಾವಿನೋದನೆ,
ಕೂಡಲಸಂಗಮದೇವಾ,
ಸುಚಿತ್ತದಲ್ಲಿ ಮನಮೀಸಲ
ಬೋನವನಾರೋಗಿಸಯ್ಯಾ. ॥೨೪೬॥

೧೨೦೬

ದೇವ ದೇವ ಮಹಾಪ್ರಸಾದ!
ನಿಮ್ಮಡಿಗಳೆಂದಂತೆಯಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ?
ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ
ಭಿನ್ನಭಾವವುಂಟೆ?
ಚರಿಸಿ ಬಪ್ಪ ಅನಂತ ಸುಳುಹಿನೊಳಗೆ ನೀನೊಬ್ಬನೆ,
ನಿನ್ನೊಳಗೆ ಅನಂತ ಸುಳುಹು ಅಡಗಿದವು.
ನಿಮಗೆ ಮಾಡಿದ ಸಯದಾನವ ನಿಮಗೆ ನೀಡುವೆನು,
ಅವಧರಿಸಬೇಕಯ್ಯಾ, ಕೂಡಲಸಂಗಮದೇವಾ. ॥೨೪೭॥

೧೨೦೭

ದೇವ ದೇವ ಮಹಾಪ್ರಸಾದ!
ನೀವೆಂದಂತೆ ನಿಮ್ಮ ಚರಣದಲ್ಲಿ ಸಂದು ಭೇದವಿಲ್ಲದೆ ಇಪ್ಪೆನಲ್ಲದೆ
ಬೇರೆ ಭಿನ್ನವಾಗಿರ್ದೆನಾದಡೆ ನೀವೆ ಸಾಕ್ಷಿ,
ನಿಮ್ಮ ಶ್ರೀಪಾದವ ಕಂಡೆನ್ನ ಭವಂ ನಾಸ್ತಿಯಾಯಿತ್ತು.
ಕೂಡಲಸಂಗಮದೇವಾ,
ನಿಮ್ಮಿಂದೊಂದಾಶ್ಚರ್ಯವಿಲ್ಲವೆಂದು ಶ್ರುತಿಗಳು ಹೊಗಳುತ್ತಿರಲಾಗಿ
ನೀವು ಕಂಡ ಆಶ್ಚರ್ಯವಾವುದೆನಗೊಮ್ಮೆ ನಿರೂಪಿಸಾ ಪ್ರಭುವೆ. ॥೨೪೮॥

೧೨೦೮
[ದೇ]ವರ ಪಾದಕ್ಕೆ ಸಂದಲ್ಲಿ,
ಆತನ ಶರೀರವ ಸಮಾಧಿಯಲ್ಲಿ ನಿಕ್ಷೇಪವಂ ಮಾಡಿ,
ಲಿಂಗಭಕ್ತರಿಗೆ ವಿಭೂತಿವೀಳೆಯವಂ ಕೊಡುವುದೆ ಸ[ದಾಚಾರ].
ಹೀಂಗಲ್ಲದೆ, ಹೆಣ ಶೃಂಗಾರವ ಮಾಡಿಸಿ, ಹರೆ ಕಹಳೆ ಸಹಿತ
ವಿಮಾನದಲ್ಲಿ ಕೊಂಡುಹೋಗಿ, ಹೂಳಿ,
ಶ್ರಾದ್ಧ ಕೂಳ ಮಾಡು[ವರು] ಸದಾಚಾರಕ್ಕೆ ದೂರವಯ್ಯಾ
ಕೂಡಲಸಂಗಮದೇವಾ. ॥೨೪೯॥

೧೨೦೯
ದೇವರ ದೇವಾ! ಮಲಯಜದಿಂದ ಮೇಲೆ ಮಲಯಜವುಂಟೆ?
ಪರುಷದಿಂದ ಮೇಲೆ ಪರುಷವಾವುದುಂಟೆ?
ಅಯ್ಯಾ, ಅಮೃತಾಹಾರದಿಂದ ಮೇಲೆ ಭೋಜನವಾವುದುಂಟೆ?
ಅಯ್ಯಾ, ನಿಮ್ಮಿಂದೊಂದಾಶ್ಚರ್ಯವ ಕಂಡೆನೆಂಬುದ
ಎನಗೆ ನಿರೂಪಿಸಾ ಕೂಡಲಸಂಗಮದೇವಾ, ಪ್ರಭುವೆ. ॥೨೫೦॥

೧೨೧೦
ದೇಹವೆಂಬೆರಡಕ್ಕರವನು
ಜೀವವೆಂದರಿದೆನಯ್ಯಾ,
ಜೀವವೆಂಬೆರಡಕ್ಕರವನು
ಹಂಸನೆಂಬ ದಳಕ್ಕೆ ವಿಭಾಗಿಸಿದೆನಯ್ಯಾ.
ಹಂಸವೆಂಬೆರಡಕ್ಕರವನು
ಜ್ಞಾನಚಕ್ಷುವಿನ ಭ್ರೂಮಧ್ಯದಲ್ಲಿ ವಿಭಾಗಿಸಿದೆನಯ್ಯಾ.
ಒಂದು ದಳವ ಕರ್ತನ ಮಾಡಿ,ಒಂದು ದಳವ ಭೃತ್ಯನ ಮಾಡಿ
ಈ ಎರಡು ದಳದ ನಡುವಿರ್ಪ ಪರಂಜ್ಯೋತಿಯನು
ತ್ರಿಕೂಟವೆಂದರಿದು ಕೂಡಿದೆನಯ್ಯಾ.
ಇಂತು ಕೂಡಿದಲ್ಲಿ ಪರಿಚರ್ಯವ ಮಾಡುತಿರ್ದೆನಯ್ಯಾ.
ಮೊದಲ ಪರಿಚರ್ಯದಲ್ಲಿ ನಿರ್ಮಳೋದಕವ ತುಂಬಿದೆ,
ಒಂದು ದಳದೊಳಗೆ.
ಎರಡನೆಯ ಪರಿಚರ್ಯದ ಒಂದು ದಳದಲ್ಲಿ

ಆ ಉದಕವ ಗಡಣಿಸುತಿರ್ದೆನಯ್ಯಾ.
ಇರಲಿರಲು ಎರಡು ದಳವು ಅಳಿದು ಜಲ ಮೇರೆದಪ್ಪಲು
ಮನ ಮೇರೆದಪ್ಪಿ ಆರೋಗಿಸಿದೆನಯ್ಯಾ.
ಆರೋಗಿಸಿದ ತೃಪ್ತಿಯ ನೀನೆ ಬಲ್ಲೆ,
ಕೂಡಲಸಂಗಮದೇವಾ. ॥೨೫೧॥

೧೨೧೧

ಧನಮದದಿಂದ, ಸಯದಾನಮದದಿಂದ ಮಾಡಿದೆನೆಂಬುದು
ಕಡೆಮುಟ್ಟದೆ ಹೋಯಿತ್ತು.
ಹಸ್ತಪರುಷದಿಂದ ಮುಟ್ಟಿ ಮಾಡಿದುದೆಲ್ಲವು ಸವೆಯಿತ್ತು.
ದೃಷ್ಟಿಪರುಷದಿಂದ ನೋಡಿ ಮಾಡಿದೆನೆಂಬುದೆಲ್ಲವು ಹೆಚ್ಚಿತ್ತು.
ವಾಕ್ಪರುಷದಿಂದ ನುಡಿದು ಮಾಡಿದುದೆಲ್ಲವು ಅಂತರಿಸಿತ್ತು.
ಮನಪರುಷದಿಂದ ನೆನೆದು ಮಾಡಿದುದೆಲ್ಲವು ನಿಂದಿತ್ತು.
ಭಾವಪರುಷದಿಂದ ಭಾವಿಸಿದ ಪದಾರ್ಥವೆಲ್ಲವು
ನಿರ್ಭಾವದತ್ತ ವೇಧಿಸಲಾಯಿತ್ತು.
ಇಂತೀ ಪಂಚಪರುಷದಿಂದ ಮುಟ್ಟಿ ನೀಡಿದ ಪದಾರ್ಥವೆಲ್ಲವು
ತೋರದ ಮುನ್ನ ಅಮಳೋಕ್ಯವಾದವು.
ಕೂಡಲಸಂಗಮದೇವರ ತೃಪ್ತಿಯನರಿದಿಹೆನೆಂದು ಕೆಟ್ಟೆನು. ॥೨೫೨॥

೧೨೧೨

ಧನ ಸವೆದಡೆ ತನುವನರ್ಪಿಸುವೆನು,
ತನುಸವೆದಡೆ ಮನವನರ್ಪಿಸುವೆನು,
ಮನಸವೆದಡೆ ಭಾವವನರ್ಪಿಸುವೆನು,
ಭಾವಸವೆದಡೆ ನಿರ್ಭಾವವನರ್ಪಿಸುವೆನು.
ಕೂಡಲಸಂಗಮದೇವಯ್ಯಾ, ಚೆನ್ನಬಸವಣ್ಣ ತೆತ್ತಿಗನಾದ ಬಳಿಕ,
ನಾನು ನಿಮ್ಮಲ್ಲಿ ಕೂಡಿಯರ್ಪಿಸಿ ಶುದ್ಧನಪ್ಪೆನಯ್ಯಾ. ॥೨೫೩॥

೧೨೧೩

ಧನ ಹೋಯಿತ್ತೆಂದಡೆ, ಮನಸು ಬೆದರಿದಡೆ,
ಚಿತ್ತ ಹೆದರಿದಡೆ,

ತನು ತೆರಳಿದಡೆ, ಭಾವಓಸರಿಸಿದಡೆ,
ಆಣೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ತನುಮನಧನವನಲ್ಲಾಡಿಸಿ ನೋಡುವ ಒಡೆಯನು ನೀನೆ,
ಹರಣವ ಮೇಲೆತ್ತೊಡೆ ಕಳವಳವೆ,
ಕೂಡಲಸಂಗಮದೇವಾ? ॥೨೫೪॥

೧೨೧೪

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು.
ಆ ಮರಕ್ಕೆ ಕೊಂಬೆರಡು, ಎಲೆ ಮೂರು,
ಮೂವತ್ತಾರು ಪುಷ್ಪ, ಕಾಯಿ ಒಂದೆ,
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ,
ಎಲೆ ಉದುರಿದಡೆ ಹಣ್ಣು ತೊಟ್ಟಬಿಟ್ಟು ಬಿದ್ದಿತ್ತು,
ನಿಜದಲ್ಲಿ ನಿರ್ವಯಲಾದರು.
ಪ್ರಭುವಿನ ಕಾರುಣ್ಯಪ್ರಸಾದವ ನಾನು ಕೊಂಡೆನಾಗಿ,
ಕೂಡಲಸಂಗಮದೇವರು ಇತ್ತ ಬಾರೆಂದು
ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು. ॥೨೫೫॥

೧೨೧೫

ಧರೆ ರಸಾತಳಕ್ಕಿಳಿವಂದು, ಹರಿಬ್ರಹ್ಮಾದಿಗಳಳಿವಂದು,
ಮಹಾದೇವ ಮಹಾದೇವ ಎನುತ್ತಿರ್ದೆನು ಅದೆಂತೆಂದಡೆ:
'ಬ್ರಹ್ಮಾಂಡಾನಾಮಸಂಖ್ಯಾನಾಂ ಬ್ರಹ್ಮವಿಷ್ಣುಮಹಾತ್ಮನಃ
ಯತ್ರೋದಯಂ ಲಯಂ ಯಾಂತಿ ಮಹಾದೇವ ಇತಿ ಸ್ಮೃತಃ'
ಎಂದುದಾಗಿ ಅಗ್ರದ ಕೊನೆಯ ತುದಿಯಿಂದತ್ತತ್ತ
ತತ್ತ್ವಮಸಿಯ ಮೀರಿದ ನಮ್ಮ ಕೂಡಲಸಂಗಮದೇವ. ॥೨೫೬॥

೧೨೧೬

ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೆ ಮುಖ್ಯವಯ್ಯಾ,
ಪೂಜೆಗೆ ನಿಮ್ಮ ಶ್ರೀಪಾದವೆ ಮುಖ್ಯವಯ್ಯಾ.
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ,

ಮುಕ್ತಿಗೆ ನಿಮ್ಮ ಘನಕೃಪೆಯೆ ಮುಖ್ಯವಯ್ಯಾ.
ನಿಮ್ಮಿಂದಧಿಕರನಾರನೂ ಕಾಣೆನಯ್ಯಾ
ಕೂಡಲಸಂಗಮದೇವಾ,
ನೀವು ಜ್ಞಾನಗುರುವಾದ ಕಾರಣ. ॥೨೫೭॥

೧೨೧೭

ಧ್ಯಾನಕ್ಕೆ ಮೋನವೆಂಬ ಶಸ್ತ್ರವ ಪಿಡಿಯಲರಿಯದೆ
ಅಹಂಕಾರದ ಧಾರೆಯ ಮೊನೆಯಲಗೆಂಬ ಶಸ್ತ್ರವ ಪಿಡಿದು ಕೆಟ್ಟೆನಯ್ಯಾ.
ಅಂಜುವೆನಂಜುವೆನಯ್ಯಾ,
ಜಂಗಮಲಿಂಗವೆಂಬ ಭಾಷೆ ಪಲ್ಲಟವಾಯಿತ್ತು.
ಇನ್ನು ಜಂಗಮವೆಂಬ ಶಿಕ್ಷಾಶಸ್ತ್ರದಲ್ಲಿ ಎನ್ನ ಹೊಯ್ದು ಬಯ್ದು
ರಕ್ಷಿಸುವುದು ಕೂಡಲಸಂಗಮದೇವಾ. ॥೨೫೮॥

೧೨೧೮

ನಂಬಿದೆನಯ್ಯಾ ನಾನು, ನಚ್ಚಿದೆನಯ್ಯಾ ನಾನು,
ಬದುಕಿದೆನಯ್ಯಾ ನಾನು ನಿಮ್ಮ ಕೃಪೆಯಿಂದಲಿ,
ಹಾಳು ಕುಳಿಯಲ್ಲಿ ಬಿದ್ದ ಪಶುವಿನ ಕರುವ ತೆಗೆದು
ತಾಯ ಮುಖವ ತೋರುವಂತೆ, ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ
ಕೂಡಲಸಂಗನ ಶರಣರ ಚರಣವ ತೋರಿ, ಎನ್ನನುಳುಹಿದನು.
ಹೋದ ಜೀವಕ್ಕೆ ತನ್ನ ಕರುಣವೆಂಬ
ಮರುಜವಣಿಯ ಹಿಂಡಿ ಎತ್ತಿದನು,
ಚೆನ್ನಬಸವಣ್ಣನಿಂದಲೆಂತಕ್ಕೆ ಬದುಕಿದೆನು. ॥೨೫೯॥

೧೨೧೯

ನಚ್ಚು ಮಚ್ಚಿನ ಶರಣರೆನ್ನ ಕಣ್ಣಮುಂದೆ ಬಂದು ನಿಂದಿರಲು
ಎನ್ನ ತನುವ ಬಗಿದು ಎನ್ನ ತನುವಿನೊಳಗಿಂಬಿಟ್ಟುಕೊಂಬೆನು,
ಎನ್ನ ಮನವ ಬಗಿದು ಎನ್ನ ಮನದೊಳಗಿಂಬಿಟ್ಟುಕೊಂಬೆನು,
ಎನ್ನ ಕಂಗಳ ಬಗಿದು ಎನ್ನ ಕಂಗಳೊಳಗಿಂಬಿಟ್ಟುಕೊಂಬೆನು.
ಕೂಡಲಸಂಗನ ಶರಣರೆನ್ನ ಒಡೆಯರಾಗಿ
ಎನ್ನ ಭಾವಕ್ಕೆ ಬಂದ ಭಕ್ತಿಯ ಮಾಡುವೆನು. ॥೨೬೦॥

೧೨೨೦

ನಡುದೊರೆಯೊಳಗೆ ಹರುಗೋಲನಿಳಿದಂತಾಯಿತ್ತೆನ್ನ ಭಕ್ತಿ,
ಮರನನೇರಿ ಕೈಯ ಬಿಟ್ಟಂತಾಯಿತ್ತೆನ್ನ ಭಕ್ತಿ.
ಶಿವಶಿವಾ, ಕೆಟ್ಟೆನಲ್ಲಾ ಗುರುವೆ, ಕೂಡಲಸಂಗಮದೇವಾ,
ಈ ಮರುಳಶಂಕರದೇವರ ಕೃಪೆ
ಎನಗಿನ್ನೆಂದಪ್ಪುದು ಹೇಳಾ, ಪ್ರಭುವೆ. ॥೨೬೧॥

೧೨೨೧

ನಡೆಯ ಚೆನ್ನ ನುಡಿದು ತೋರಿ,
ನುಡಿಯ ಚೆನ್ನ ನಡೆದು ತೋರಿ,
ಆ ನಡೆನುಡಿ ಎರಡರ ಚೆನ್ನ ಮೃಡ ನಿಮ್ಮೊಳಗಡಗಿಸಿ,
ತಾವೆಡೆಯಿಲ್ಲದೆ ಪರಿಪೂರ್ಣರಾದವರ ಪಡುಗವ ಹೊರುವೆ,
ಪಾದರಕ್ಷೆಯಹಿಡಿವೆ, ಎನಗಿದೆ ಮಾಟ, ಬಯಸುವ ಬೇಟ.
ಕೂಡಲಸಂಗಮದೇವಾ,
ಇದು ನಿಮ್ಮ ಕೂಡುವ ಕೂಟ. ॥೨೬೨॥

೧೨೨೨

ನಾ ನಡೆವುದೆಲ್ಲಾ ಅನಾಚಾರ,
ನಾ ನುಡಿವುದೆಲ್ಲಾ ಅವಿಚಾರ,
ನಡೆನುಡಿ ಶುದ್ಧವಿಲ್ಲದ ಅಪವಿತ್ರನ ತಂದು
ನಿಮ್ಮೊಕ್ಕುದನಿಕ್ಕಿ ಸಲಹಿದಿರಾಗಿ,
ಎನಗಿನ್ನಾವ ಭಯವೂ ಇಲ್ಲ.
ಕೂಡಲಸಂಗಮದೇವರು ಸಾಕ್ಷಿಯಾಗಿ,
ಆಯ್ದಕ್ಕಿಯ ಮಾರಯ್ಯನ ಮನೆಯ ಮಗ ನಾನು. ॥೨೬೩॥

೧೨೨೩

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯ[ನಿ]ಲ್ಲಿ ತಂದೆ;
ಇನ್ನು ಹುಟ್ಟಲಾರೆನು, ಹೊಂದಲಾರೆನು,
ಜನನ ಮರಣವೆಂಬೆರಡಕ್ಕೆ ಹೊರಗಾದೆನಯ್ಯಾ.

ನೀವು ಹೇಳಿದ ಮಣಿಹವ ಮಾಡಿದೆ,
ಇನ್ನು ಕೂಡಿಕೊಳ್ಳಾ ಕೂಡಲಸಂಗಮದೇವಾ. ॥೨೬೪॥

೧೨೨೪

ನಾನಾ ಯುಗಂಗಳಲ್ಲಿ ಬಂದಲ್ಲಿ
ಇಂತಪ್ಪ ನಿಲವ ಕಂಡುದಿಲ್ಲವಯ್ಯಾ.
ಅಂಗಮನಭಾವಕರಣಂಗಳು ಮಾದು
ಕೂಡಲಸಂಗಮದೇವರ ನಿಲವನೊಳಕೊಂಡ
ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡು
ಬದುಕಿದೆನು ಕಾಣಾ, ಕಿನ್ನರಿ ಬ್ರಹ್ಮಯ್ಯಾ. ॥೨೬೫॥

೧೨೨೫

ನಾನಾರಿದೆಲ್ಲಿಯ ಪಾಶವಿದೆತ್ತಣ ಮರವೆ,
ಅಕಟಕಟಾ ತಾಮಸಕ್ಕೆ ಗುರಿಮಾಡಿದೆಯಲ್ಲಾ.
ಎಲೆ ಕರುಣಾಂಬುನಿಧಿಯೆ, ದಯಾಪಾರಿಯೆ,
ನೀನು ವಿಚಾರಿಸದಿರ್ದಡಾನೆಂತುಳಿವೆನಯ್ಯಾ.
ನಿಮ್ಮ ಕೃಪಾದೃಷ್ಟಿಯಿಂ ನಿರೀಕ್ಷಿಸಿ, ನಿಮ್ಮತ್ತ ಸಾರುವಂತೆ ಮಾಡಾ
ಕೂಡಲಸಂಗಮದೇವಾ. ॥೨೬೬॥

೧೨೨೬

ನಾನಾ ಸ್ಥಾನದಲ್ಲಿ ಬಂದು ತೊಳಲಿ ಬಳಲಿ ಅಳಿದುಳಿದು ನಿಂದ ನಿಲದವನಲ್ಲ,
ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿಹೋಯಿತ್ತೆಂದು
ಕರ್ತನು ತಾನೆ ಮಹಾಪ್ರಸಾದಿಯಾಗಿ ಉದಯವಾದನು.
ಹಸ್ತಮಸ್ತಕ ಸಂಯೋಗವಿಲ್ಲದ ಮುನ್ನವೆ
ಆದಿಗುರು ಅನಾದಿಶಿಷ್ಯನೆಂಬುದ ನೆಲೆಮಾಡಿ,
ಸಂಗಮನಾಥನೆಂಬ ಲಿಂಗವನೆನ್ನ ಕೈಯಲ್ಲಿ ಕೊಟ್ಟು,
ಸಾಮದಿಂದ ಅನುಗ್ರಹಿಸಿಕೊಂಡನು.
ಎನ್ನ ಹಿಂದಣ ಪೂರ್ವಾಪರವನೆತ್ತಿ ತೋರಿ ತನ್ನತ್ತತೆಗೆದುಕೊಂಡನು,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೨೬೭॥

೧೨೨೭

ನಾನು ಭಕ್ತನಲ್ಲಯ್ಯಾ,
ನಾನು ಯುಕ್ತನಲ್ಲಯ್ಯಾ,
ನಾನು ಮುಕ್ತನಲ್ಲಯ್ಯಾ,
ಕಪಟವೇಷದ ಡಂಭಕ ನಾನು.
ಕೂಡಲಸಂಗಮದೇವಾ,
ಎನ್ನ ಭಕ್ತಿ ಒಳಲೊಟ್ಟೆ ಎಂಬುದ ನೀವು ತೋರಬಂದಿರಾಗಿ,
ಎನಗಿಂದರಿಯ ಬಂದಿತ್ತು. ॥೨೬೮॥

೧೨೨೮

ನಾನೆಂಬುದೆಲ್ಲಿಯದಯ್ಯ ಲಿಂಗವೆಂಬ ಮಹಾತ್ಮಂಗೆ,
ಶರಣನೊಡಲುಗೊಂಡಡೇನು ಸಾಮಾನ್ಯನೆ?
ಪ್ರಕೃತಿಗುಣವಿಡಿದು ಭಿನ್ನಭಾವಿಯಲ್ಲ.
ಕೂಡಲಸಂಗನ ಶರಣರ ಪರಿ ಬೇರೆ. ॥೨೬೯॥

೧೨೨೯

ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು,
ಬಂದ ಬಳಲಿಕೆಯ ಪರಿಹರಿಸಲಿಕ್ಕೆ ಚೆನ್ನಬಸವಣ್ಣ ಬಂದನು,
ಇನ್ನು ಬಾರದಂತೆ ಪ್ರಭುದೇವರು ಬಂದರು,
ಇದಕ್ಕೆ ಆಜ್ಞಾಕರ್ತೃ ಮಡಿವಾಳ ಮಾಚಿತಂದೆ ಬಂದನು.
ನಾನಿನ್ನಾರಿಗಂಜೆನು, ಬದುಕಿದೆನು
ಕಾಣಾ ಕೂಡಲಸಂಗಮದೇವಾ. ॥೨೭೦॥

೧೨೩೦

ನಾರಗೋಣಿಯ ಮೂಲೆಯ ಹೊಲಿದು,
ನೀರಭಂಡವ ತುಂಬಿದರಯ್ಯಾ,
ಊರೊಳಗೈವರು ಕಳ್ಳರು ಸಾರಲೀಯರು, ಧರ್ಮವಿಲ್ಲಯ್ಯಾ.
ಊರ [ಸೂರೆ]ಗೊಳ್ಳದ ಮುನ್ನ
ಕೂಡಿಕೊಳ್ಳಿ ಕೂಡಲಸಂಗಮದೇವನ. ॥೨೭೧॥

೧೨೩೧

ನಿಂದಿಸುವನೊಬ್ಬ, ಸ್ತುತಿಸುವನೊಬ್ಬ,
ಇವರಿಬ್ಬರು ನಮ್ಮ ಶಿವಯೋಗಿಯ ಪರಮಬಂಧುಗಳಯ್ಯಾ.
ಪಾಪವನೊಬ್ಬ ಕೊಂಬ, ಪುಣ್ಯವನೊಬ್ಬ ಕೊಂಬ,
ಕೂಡಲಸಂಗಮದೇವಾ, ನಿಮ್ಮ ಶರಣರು ನಿತ್ಯಮುಕ್ತರು. ॥೨೭೨॥

೧೨೩೨

ನಿಜರೂಪ ರೂಪಿನಿಂದ ನಿಂದಿತ್ತು,
ಆ ರೂಪ ನಿಜರೂಪವನವಗ್ರಹಿಸಿತ್ತು.
ನಿಜರೂಪ ನಿರ್ಣಯದಲ್ಲಿ ನಿಂದ ನಿಜಶರಣರ ನಿಲವ
ಕಾಯವಿಡಿದು ಕಂಡಹೆನೆಂದಡೆ ಕಾಣಬಹುದೆ?
ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವು,
ಎನಗೆ ಸಾಧ್ಯವಪ್ಪುದೆ? ॥೨೭೩॥

೧೨೩೩

ನಿತ್ಯನಿರಂಜನ ಪರಂಜ್ಯೋತಿವಸ್ತು:
ಉಪದೇಶವ ಕೊಟ್ಟು ಗುರುವಾದ,
ಕರಸ್ಥಲಕ್ಕೆ ಬಂದು ಲಿಂಗವಾದ,
ಹಸರವಾದ ಪ್ರಪಂಚನಳಿದು ದಾಸೋಹವ
ಮಾಡಿಸಿಕೊಂಡು ಜಂಗಮವಾದ,
ಇಂತೀ ಗುರುಲಿಂಗಜಂಗಮ ಒಂದೆಯಲ್ಲದೆ ಭಿನ್ನವಿಲ್ಲ.
ಈ ಮೂರಕ್ಕೆ ಮೂರನಿತ್ತು ಮೂರನೊಂದ ಮಾಡಬಲ್ಲಡೆ,
ಆತ ಪ್ರಸಾದಕಾಯನಯ್ಯಾ, ಕೂಡಲಸಂಗಮದೇವಾ. ॥೨೭೪॥

೧೨೩೪

ನಿನಗೆ ಮಜ್ಜನಕ್ಕೆರೆವುದಕ್ಕೆ ಮೂಚುಟಾಗಿ
ಶ್ರೀಗುರುವಿನ ಪಾದೋದಕವ ಕೊಂಬೆ,
ನಿನಗಾರೋಗಣೆಯ ಮಾಡಿಸುವುದಕ್ಕೆ ಮೂಚುಟಾಗಿ
ಶ್ರೀಗುರುವಿನ ಪ್ರಸಾದವ ಕೊಂಬೆ.
ಎನಗೆಯೂ ನಿನಗೆಯೂ ಸಹಭೋಜನ,

ಎನಗೆಯೂ ನಿನಗೆಯೂ ಏಕಾರ್ಥಶಯನ,
ನೀನೆನಗೆ ಚಿಕ್ಕ ತಮ್ಮ, ಕೂಡಲಸಂಗಮದೇವಾ. ॥೨೭೫॥

೧೨೩೫

ನಿನ್ನ ಜನ್ಮದ ಪರಿಭವವ ಮರದೆಯಲ್ಲಾ ಮನವೆ,
ಲಿಂಗವ ನಂಬು ಕಂಡಾ ಮನವೆ,
ಜಂಗಮವ ನೆರೆ ನಂಬು ಕಂಡಾ, ಎಲೆ ಮನವೆ,
ಕೂಡಲಸಂಗಮದೇವರ ಬೆಂಬತ್ತು ಕಂಡಾ, ಎಲೆ ಮನವೆ. ॥೨೭೬॥

೧೨೩೬

ನಿನ್ನಾಳಿ ಕುಂಬಾರನ ಕೆಲಸದೋಪಾದಿ;
ಉದಕದ ಶೈತ್ಯವನೆ ಕೊಟ್ಟು, ನೂಲೆಳೆಯಲ್ಲಿ ಗೋಣ ಕೊಯ್ದು,
ವಾಯುವಿನ ಶೈತ್ಯದಲ್ಲಿ ಆರಿಸಿ,
ಅಗ್ನಿಮುಖದಲ್ಲಿ ಬೇರೆ ಭಾಂಡವೆಂದೆನಿಸಿದಂತೆ
ಕೂಡಲಸಂಗಮದೇವಾ. ॥೨೭೭॥

೧೨೩೭

ನಿಮ್ಮ ಕಂಡು, ಕೈಮುಗಿದು, ನಿಮಗೆ ಭಕ್ತನಾದೆನಲ್ಲದೆ,
ನಿಮ್ಮ ಕಾಣದಲೆ ಕೈಮುಗಿವ ಭಕ್ತಿಯುಂಟೆ ಅಯ್ಯಾ?
ನಿಮ್ಮ ಮುಟ್ಟಿ ಪೂಜಿಸಿ ಆಚಾರಿಯಾದೆನಲ್ಲದೆ,
ನಿಮ್ಮ ಮುಟ್ಟದಲೆ ಎನಗಾಚಾರವೆಲ್ಲಿಯದಯ್ಯಾ?
ನಿಮ್ಮ ಘನವನು ಮನದಲ್ಲಿ ನೆನೆದು ಧರಿಸಿದ ಕಾರಣ
ಜ್ಞಾನೋದಯವಾಯಿತ್ತಲ್ಲದೆ,
ನೀವಿಲ್ಲದಡೆ ಎನಗೆ ಜ್ಞಾನವೆಲ್ಲಿಯದಯ್ಯಾ?
ಇಂತು ಆವ ಮುಖದಲ್ಲಿಯೂ ಎನ್ನನಾಗುಮಾಡಲೆಂದು
ನೀವು ಮುಂದುಗೊಂಡಿದ್ದ ಕಾರಣ,
ನಿಮ್ಮ ಸನ್ನಿಧಿಯಲಾನು ಸದಾಚಾರಿಯಾದಡೆ,
ನಿಮಗಾನು ಸರಿಯೆ? ಕೂಡಲಸಂಗಮದೇವಾ,
ಜಂಗಮಮುಖದಿಂದ ಸಂಗನಬಸವಣ್ಣ ಬದುಕಿದನೆಂಬುದ
ಮೂರು ಲೋಕವೆಲ್ಲವೂ ಬಲ್ಲುದು ಕಾಣಾ ಪ್ರಭುವೆ. ॥೨೭೮॥

೧೨೩೮

ನಿಮ್ಮ ನೋಡ ನೋಡಲೆನ್ನ ಹರಣವಿದ್ದುದ ಕಂಡೆ,
ನಿಮ್ಮನಗಲಲೊಡನೆ ಎನ್ನ ಹರಣವಿಲ್ಲಯ್ಯಾ.
ಇರುಳೊಂದು ಜುಗ ಮೇಲೆ ಕೆಡೆದಂತೆ, ಆಳವಾಡಿ ಕಳೆವೆನಯ್ಯಾ,
ಹಗಲೆಲ್ಲ ಹಂಬಲಿಸಿ ಹಲುಬಲೇನಯ್ಯಾ,
ಕೂಡಲಸಂಗನ ಶರಣರನಗಲುವ ಧಾವತಿಯಿಂದ,
ಮರಣವೇ ಲೇಸಯ್ಯಾ. ॥೨೭೯॥

೧೨೩೯

ನಿರಹಂಭಾವದೊಳಗೆ ದಾಸೋಹದ
ನಿರಹಂಕೃತಿ ನಿಷ್ಪತ್ತಿಯಾಗಿ,
ಎರಡರಿಯದೆ ನಿಜಪರಮಾನಂದದೊಳಿಪ್ಪೆನು,
ಕೂಡಲಸಂಗಯ್ಯಾ ॥೨೮೦॥

೧೨೪೦

ನಿರ್ಲೇಪವಾದ ನಿಜಗುಣಿ ನೋಡಯ್ಯಾ,
ಕಾಮಿಸದ ಕಲ್ಪಿಸದ ಪ್ರಸಾದಿ ನೋಡಯ್ಯಾ.
ಬಯಸಲಿಲ್ಲದ ಪ್ರಸಾದಿ
ಗುರುವಿನ ಮುಖದಿಂದ ಬಂದ ಪ್ರಸಾದವಲ್ಲದೆ
ಮತ್ತೇನನೂ ಮುಟ್ಟಲೀಯನು,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೨೮೧॥

೧೨೪೧

ನೀರ ಒರಳ ಮಾಡಿ, ನೆರಳ ಒನಕೆಯ ಮಾಡಿ,
ಆಕಾರವಿಲ್ಲದಕ್ಕಿಯ ಥಳಿಸುತ್ತಿರಲು,
ಮೇರುಗಿರಿಯಾಕಳ ಕರೆದ ಕ್ಷೀರದಲ್ಲಿ ಅಡಿಗೆಯ ಮಾಡಿ
ನಾರಿಯ ಬಸುರೊಳಗೆ ಗಂಡ ಬಂದು ಕುಳ್ಳಿರಲು,
ಮಾಡಿದಡಿಗೆಯ ಮನವುಂಡು ಹೋಗಲು,
ಮೇಲು ಕೈ ತಲೆ ಹಿಡಿದು ಸಂತೋಷದಿಂದ,

ಪ್ರಾಣಸಖಿ ತನ್ನ ಗಂಡಂಗೆ ನೀಡುತ್ತಿರಲು,
ಅರಳ ಹುಟ್ಟಿಗೆಯಲ್ಲಿ ಹೊರಳಿ ಕೂಡುವ ಭೇದ,
ಮರಳಿ ಕೂಡಲಿಕೆಂತು ಪಣವಿಲ್ಲ.
ಕೆರಳಿ ಮುನಿದು ಘುಡುಘುಡಿಸಿ ಗರ್ಜಿಸಲೊಡನೆ
ಕೆರಳಲಮ್ಮದೆ ಅಂಜಿ ಒಳಗಡಗಿದ,
ಶರಣಸತಿ ಲಿಂಗಪತಿಯೆಂಬ ಭಾಷೆ.
ನೀನು ಹರನ ಬಟ್ಟೆಯ ನೋಡಿ ಸುಯ್ಯಬೇಡ,
ಜನನ ಮರಣವಿರಹಿತ ಕೂಡಲಸಂಗನ ಅನುಭಾವ,
ಪ್ರಭುವಿನ ಶ್ರೀಪಾದದೊಳಗಿದ್ದು ಸುಖಿಯಾದೆನು. ॥೨೮೨॥

೧೨೪೨

ನೀಲದ ಮಣಿಯೊಂದು ಮಾಣಿಕವ ನುಂಗಿದಡೆ,
ವಜ್ರ ಬಂದು ಅದು ಬೇಡವೆಂದುಗುಳಿಸಿತ್ತು ನೋಡಾ,
ಅಡಗಿದ ಮಾಣಿಕ್ಯ ನೀಲದ ತಲೆಯ ಮೆಟ್ಟಿ,
ಆನಂದನಾಟ್ಯವನಾಡುತ್ತಿದ್ದಿತ್ತು.
ಅಂಬರದೊಳಗಣ ಮುಗ್ಧೆ ಕಂಗಳ ಮುತ್ತಿನ ಮಣಿಯ
ಮಥನವಿಲ್ಲದೆ ನುಂಗಿ ಉಗುಳುತ್ತಿದ್ದಳು.
ಲಿಂಗ ಜಂಗಮವೆಂಬುದ ಇಂದರಿದು ಸುಖಿಯಾದೆನು,
ಕೂಡಲಸಂಗಮದೇವರಲ್ಲಿ
ಪ್ರಭುವಿನ ಕೃಪೆಯಿಂದ ನಾನು ಬದುಕಿದೆನು. ॥೨೮೩॥

೧೨೪೩

ನೆಲ್ಲ ಗಿಡುವಿನೊಳಗೆ ನಾನೊಂದು ಹುಲ್ಲಾಗಿ ಹುಟ್ಟಿದೆನಯ್ಯಾ.
ಆನು ಭಕ್ತನೆಂದೆಂಬೆನೆ, ಆನು ಯುಕ್ತನೆಂದೆಂಬೆನೆ
ಆನು ಕೂಡಲಸಂಗನ ಶರಣರೊಕ್ಕುದನುಂಡಡೆ,
ಪಾದರಕ್ಷೆಗೆ ಸರಿಯಹೆನೆ? ॥೨೮೪॥

೧೨೪೪

ನೋಡಿರೇ ನೋಡಿರೇ ಪೂರ್ವದತ್ತವ;
ವರುಣ ಹೆಳವ, ರವಿ ಕುಷ್ಠ, ಶುಕ್ರನಂಧಕ,

ಶನಿಗೆ ಸಂಕಲೆ, ಬಲಿಗೆ ಬಂಧನ, ಸೀತೆಗೆ ದ್ರೌಪದಿಗೆ ಸೆರೆ,
ಹರಿ ಹಂದಿಯಾದ, ಅರುಹಂಗೆ ಲಜ್ಜೆ, ಬ್ರಹ್ಮನ ಶಿರಹೋಯಿತ್ತು,
ಬಲ್ಲಿದನೆಂಬವನ ಕೊಡೆವಿಡಿಸದೆ ವಿಧಿ?
ಜತ್ತಕನೆಂಬವನ ಕತ್ತೆಯ ಮಾಡಿತ್ತು.
ದಶಮುಖನ ನಾಯ ಡೋಣಿಯಲ್ಲಿ ಉಣಿಸಿತ್ತು.
ದೇವೇಂದ್ರನ ಮೈಯ್ಯ ನಾಣುಗೆಡಿಸಿತ್ತು.
ಶೂದ್ರಕನ ತಲೆ ಕಂಚಿಯಾಲದಲ್ಲಿ ನೇರಿತ್ತು.
ಕೂಡಲಸಂಗಮದೇವಯ್ಯಾ,
ನೀ ಮಾಡಿದ ಮಾಯೆಯನಂತರನಾಳಿಗೊಂಡಿತ್ತು. ॥೨೮೫॥

೧೨೪೫

ಪಂಚಬ್ರಹ್ಮಾತ್ಮಕದಿಂದುದಯವಾದ
ಪಂಚಗವ್ಯ ಗೋಮಯವನು
ಆಗಮಮತದಿಂದ ದಹಿಸಿ,
ಸಮಸ್ತ ಜನಂಗಳು ಧರಿಸುವ
ಭಸಿತವಿದು ನೋಡಾ ಕೂಡಲಸಂಗಯ್ಯಾ. ॥೨೮೬॥

೧೨೪೬

ಪಂಚಮುಖವ ಪೂಜಿಸುವಯ್ಯಗಳು
ನೀವು ಕೇಳಿರಯ್ಯಾ;
ಪಂಚಲಿಂಗವಾವುದೆಂಬುದ ನೀವು ಕೇಳಿರೆ!
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ
ಈ ಐದರಲ್ಲಿ ನೊಂದುಬೆಂದಯ್ಯಗಳು ನೀವು ಕೇಳಿರೆ!
ನಾನವನೊಲ್ಲೆ, ನಾನವನಂಗವಿಸುವನಲ್ಲ, ನಾನವ ಹಿಡಿವನಲ್ಲ,
ಸನ್ಯಾಸದೊಳಗಾಡಿ ಸಮೀಪಕ್ಕೆ ಬಾಹಾತನಲ್ಲ,
ಕ್ಷಪಣರೊಳಗಾಡಿ ಲಜ್ಜೆದೋರುವವನಲ್ಲ,
ಲಿಂಗದೊಳಗಾಡಿ ಅಂಗವ ಬಿಡುವವನಲ್ಲ,
ಸರ್ವದೊಳಗಾಡಿ ಅಧೋಗತಿಗಿಳಿವವನಲ್ಲ.
ನಾನು ಜಂಗಮದಾಸೋಹದೊಳಗಾಡಿ ನಿಮ್ಮ ಕಂಡೆ
ಕೂಡಲಸಂಗಮದೇವಾ. ॥೨೮೭॥

೧೨೪೭

ಪಂಚೇಂದ್ರಿಯಂಗಳರತು ತನುಮನವ ನಿಲಿಸಬಲ್ಲಡೆ
ಚೆನ್ನನ ಪ್ರಸಾದ ಲಿಂಗಕ್ಕೋಗರವಾಗದೆ?
ನಾಲಗೆಯ ರುಚಿಯ ನಾಣಕ್ಕೆ ತಂದು
ಮರಳಿ ಲಿಂಗಾರ್ಪಿತವ ಮಾಡಿದಡೆ,
ಮನದ ಭಾವವ ಕೈಕೊಂಡ ಕಾರಣ,
ನಮ್ಮ ಕೂಡಲಸಂಗಮದೇವನಿಗೆ
ಕೊಡಬಹುದು ಕಾಣಾ, ಪ್ರಭುವೆ. ॥೨೮೮॥

೧೨೪೮

ಪಂಚೇಂದ್ರಿಯಂಗಳೆಂಬ ಪಂಚವಿಷಯವೆಂಬ
ವಿಷಯದೊಳಗೆ ಆಳುತ್ತ ಏಳುತ್ತ ಬೀಳುತ್ತಲಿದೇನೆ,
ಓಂ ನಮಃ ಶಿವಾಯ, ಓಂ ನಮಃ ಶಿವಾಯವೆಂಬುತಿದೇನೆ,
ಕೂಡಲಸಂಗಮದೇವಾ, ಪರಿಹರಿಸುವರ ಕಾಣೆ. ॥೨೮೯॥

೧೨೪೯

ಪರಿಮಿತಕೆ ನಡೆತಂದು ಪರುಷದ ಸಿಂಹಾಸನದ ಮೇಲೆ
ಪರಮಗುರು ಮೂರ್ತಿಗೊಂಡಿರಲು,
ಪರಮಾನಂದಜಲದಿಂದ ಪಾದಾರ್ಚನೆಯಂ ಮಾಡಿ,
ದಿವ್ಯಸುಗಂಧಮಂ ಲೇಪಿಸಿ, ಅಕ್ಷಯವೆಂಬ ಅಕ್ಷತೆಯನಿಟ್ಟು,
ಹೃದಯಕಮಲದ ಪುಷ್ಪದಿಂದ ಪೂಜೆಯ ಮಾಡಿ,
ಸುಜ್ಞಾನವಾಸನೆಯೆಂಬ ಧೂಪಮಂ ಬೀಸಿ,
ಭಕ್ತಿಸಾರಾಯವೆಂಬ ನೈವೇದ್ಯಮಂ ಸಮರ್ಪಿಸಿ,
ಪರಮಹರುಷವನೆ ಹಸ್ತಮಜ್ಜನಕ್ಕೆರೆದು,
ತ್ರಿಕರಣಶುದ್ಧವೆಂಬ ತಾಂಬೂಲಮಂ ಕೊಟ್ಟು,
ಸಮರಸಸಂಗದಿಂದ ಕೂಡಲಸಂಗಮದೇವರ ಶರಣ
ಪ್ರಭುದೇವರ ಕರುಣವೆನಗಾಯಿತ್ತು. ॥೨೯೦॥

೧೨೫೦

ಪವಿತ್ರಲಿಂಗಕ್ಕೆ ಅಪವಿತ್ರವ ಕೊಡಲೊಲ್ಲೆನೆಂಬುದೆನ್ನ ಭಾಷೆ,
ಧರೆಯೊಳು ಬೆಳೆದುವೆಲ್ಲಾ ಅಪವಿತ್ರವೆಂಬುದ ಬಲ್ಲೆನಾಗಿ ನಾನವನೊಲ್ಲೆ,
ಪಾಚಿಗೆಟ್ಟ ಹೊಲದಲ್ಲಿ ಒಂದು ಲಿಂಗಮೂರ್ತಿದೋರಿದಡೆ ಅದು ದಿವ್ಯಕ್ಷೇತ್ರ,
ಅಲ್ಲಿದ್ದವರೆಲ್ಲರೂ ಪವಿತ್ರಕಾಯರು.
ಇದು ಕಾರಣ, ಅನಘ ಅನಾದಿ ಜಂಗಮಮುಖದಿಂದೊಗೆದ ಪ್ರಸಾದ,
ಕೂಡಲಸಂಗಯ್ಯಾ, ನಿಮಗೆ ನೈವೇದ್ಯವೆನಗೆ ಪ್ರಸಾದ ತಪ್ಪದು,
ನಿಮ್ಮವರು ಸವಿದ ಸವಿಯ
ಕೈಯಾಂತು ಕೊಂಡುದ ನಾ ಬಲ್ಲೆನಾಗಿ. ॥೨೯೧॥

೧೨೫೧

ಪಿಂಡವೇ ಆದಿಯಾಗಿ, ಜ್ಞಾನವೇ ಶೂನ್ಯವಾಗಿ,
ಆದಿ ಅಂತ್ಯಗಳೆರಡು ಮಧ್ಯದಲ್ಲಿ ನಿಲ್ಲಲು
ನೂರು ಒಂದರ ಮೇಲೆ ನಿಂದು,
ಒಂದೇ ನೂರಾಗಿ ನಿಂದ ಮೇಲೆ ನೂರೊಂದೆಂಬುದಿಲ್ಲವಾಗಿ
ಕೂಡಲಸಂಗಮದೇವನೆಂಬ ಸೊಲ್ಲು ಇಲ್ಲ. ॥೨೯೨॥

೧೨೫೨

ಪುಣ್ಯಗಳಹ ಕಾಲಕ್ಕೆ ಹಗೆಗಳು ತನ್ನವರಹರು,
ಪುಣ್ಯಗಳಹ ಕಾಲಕ್ಕೆ ಮಣ್ಣು ಹೊನ್ನಹುದು,
ಪುಣ್ಯಗಳಹ ಕಾಲಕ್ಕೆ ಹಾವು ಲೇವಳವಹುದು,
ಪುಣ್ಯಗಳಹ ಕಾಲಕ್ಕೆ ಅನ್ಯರು ತನ್ನವರಹರು.
ಇಂತಪ್ಪ ಪುಣ್ಯಂಗಳೆಲ್ಲವೂ ಭಕ್ತಿಯಿಂದಹುದು,
ಭಕ್ತಿ ಕೆಟ್ಟಡೆ ಪುಣ್ಯವು ಕೆಡುವುದು.
ಇಂತಪ್ಪ ಭಕ್ತಿಯೂ ಪುಣ್ಯವೂ ಚೆನ್ನಬಸವಣ್ಣನಿ[ಂದು]ಂಟಾಗಿ,
ನಾನು ಬದುಕಿದೆನಯ್ಯಾ,
ಕೂಡಲಸಂಗಮದೇವಾ. ॥೨೯೩॥

೧೨೫೩
ಪುಣ್ಯವೆಂದರಿಯೆ, ಪಾಪವೆಂದರಿಯೆ,
ಸ್ವರ್ಗವೆಂದರಿಯೆ, ನರಕವೆಂದರಿಯೆ,
ಹರಹರ ಮಹಾದೇವ ಶಿವಶರಣೆಂದು ಶುದ್ಧ ನೋಡಯ್ಯಾ,
ಹರಹರ ಮಹಾದೇವ ಶಿವಶರಣೆಂದು ಧನ್ಯ ನೋಡಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮನರ್ಚಿಸಿ, ಪೂಜಿಸಿ ನಿಶ್ಚಿಂತನಾದೆ. ॥೨೯೪॥

೧೨೫೪
ಪ್ರಣವಾರೂಢನು, ಪ್ರಣವಪ್ರಕೃತಿಸಂಜ್ಞನು,
ಪ್ರಣವಸಂಗಸಮರಸ,
ನಮ್ಮ ಕೂಡಲಸಂಗಮದೇವರು. ॥೨೯೫॥

೧೨೫೫
ಪ್ರಸಾದಿಯ ಪ್ರಸಾದದಲೊದಗಿದ ಪ್ರಸಾದಿಯನು
ಏನೆಂದುಪಮಿಸುವೆನು?
ಏನೆಂದು ಸ್ತುತಿಸುವೆನಯ್ಯಾ,
ಮಹಾಪ್ರಸಾದಿಗೆ ಮಹಾಘನಪ್ರಸಾದವಾದ ಪ್ರಸಾದಿಯನು?
ಅಗಮ್ಯಪ್ರಸಾದದಲ್ಲಿ ಸ್ವಾಯತವಾದ ಕೂಡಲಸಂಗಮದೇವಾ,
ನಿಮ್ಮ ಶರಣ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೨೯೬॥

೧೨೫೬
ಪ್ರಾಣಲಿಂಗ ಪ್ರವೇಶಿತನಾಗಿ ಪ್ರಸಾದದಲ್ಲಿ ಸನ್ನಿಹಿತನಯ್ಯಾ,
ಲಿಂಗಾರ್ಪಿತವಲ್ಲದೆ ಅನರ್ಪಿತವ ಮುಟ್ಟಲೀಯನಯ್ಯಾ,
ಅಂಗಗುಣಂಗಳೆಲ್ಲವನತಿಗಳೆದು ಪ್ರಸಾದದಲ್ಲಿ ಬ್ರಹ್ಮಚಾರಿಯಾದನು
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೨೯೭॥

೧೨೫೭
ಫಲವ ಸಲಿಸುವನ್ನಬರ ಬಿತ್ತು ಸಿಪ್ಪೆ ಉಭಯವು ಇರಬೇಕು.
ಸಾರವ ಸಲಿಸಿದಲ್ಲಿ ಸಮಯ ಉಳಿಯಿತ್ತು.

ನಮ್ಮ ಕೂಡಲಸಂಗಮದೇವರಲ್ಲಿ
ಹಾಗರಿಯಬೇಕು, ಎಲೆ ಘಟ್ಟಿವಾಳಯ್ಯಗಳೆ. ॥೨೯೮॥

೧೨೫೮

ಬಟ್ಟಬಯಲಲ್ಲಿ ಒಂದು ತಲೆಯಿಲ್ಲದ ಆನೆಯಿದ್ದಿತ್ತು,
ಆನೆ ಬಂದು ಆನೆಯ ನುಂಗಿ ತಾನೆ ಅಳಿಯಿತ್ತು,
ಅಂತರವಿಲ್ಲದ ಒಳಗು, ಅವಲಂಬನವಿಲ್ಲದ ಹೊರಗು ನೋಡಾ.
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ
ಒಡಲಿಲ್ಲದ ಘನವುಮೂರ್ತಿಗೊಂಡು,
ವಿಚಿತ್ರವಾಯಿತ್ತು ಜಗವೆಲ್ಲ.
ಕೂಡಲಸಂಗಮದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ
ಆನು ನಮೋ ನಮೋ ಎಂಬೆನು. ॥೨೯೯॥

೧೨೫೯

ಬಡಗವಾಗಿಲ ಪೌಳಿಯ ಭರವಸದಿಂ ಪೊಕ್ಕು,
ಪಶ್ಚಿಮದ್ವಾರದ ಧವಳಾರಮಂ ಪಶ್ಚಿಮದಿ ಪೊಕ್ಕು,
ತ್ರಿವಿಧಗತಿಯ ಶೂನ್ಯಸಿಂಹಾಸನದ ಮೇಲೆ ತರಹರವಾದಡೆ
ನಂಬುವುದೆನ್ನ ಮನವು. ಕೂಡಲಸಂಗಮದೇವರು ಸಾಕ್ಷಿಯಾಗಿ,
ನೀನು ನಮ್ಮ ಕೋಪಿಸಿದಡೆ ಕೋಪಿಸು, ಚೆನ್ನಬಸವಣ್ಣಾ. ॥೩೦೦॥

೧೨೬೦

ಬಣ್ಣವನಿಟ್ಟು ಮೆರೆವ ಅಣ್ಣನ ಭಕ್ತಿ
ಸುಣ್ಣದ ಕಲ್ಲ ಕಟ್ಟಿ ಮಡುವ ಬಿದ್ದಂತೆ ಆಯಿತ್ತು.
ತನ್ನ [ಬಣ್ಣ ತನ್ನ ಸು]ಡುವುದು,
ತನ್ನ ಸುಡದ ಹಾಗೆ ನೆನೆಯಾ,
ಕೂಡಲಸಂಗಮದೇವನ. ॥೩೦೧॥

೧೨೬೧

ಬಲೆಗೆ ಸಿಲ್ಕಿದ ಮೃಗದಂತೆ ನಾನಯ್ಯಾ,
ಮರಿದಪ್ಪಿದ ಹುಲ್ಲೆಯಂತೆ ದೆಸೆದೆಸೆಗೆ ಬಾಯಿಬಿಡುತ್ತಿದ್ದೇನೆ.

ನಾನಾರ ಸಾರುವೆನಯ್ಯಾ, ತಾಯಾಗಿ ತಂದೆಯಾಗಿ ನೀನೇ,
ಸಕಲ ಬಂಧುಬಳಗ ನೀನೇ ಕೂಡಲಸಂಗಮದೇವಾ. ॥೩೦೨॥

೧೨೬೨

ಬಸವನಿದ್ದಂತೆ ಊರ ಪಶುವನೊಯಿವರೆ ಸಂಗಯ್ಯಾ?
ಕಗ್ಗಾಯಿಯಿದ್ದಂತೆ ಹೂಮಿಡಿಯನೊಯಿವರೆ ಸಂಗಯ್ಯಾ?
ನಾನಿದ್ದಂತೆ ನನ್ನ ಶಿಶು ಸಂಗಯ್ಯನನೊಯಿವರೆ
ಕೂಡಲಸಂಗಯ್ಯಾ. ॥೩೦೩॥

೧೨೬೩

ಬಸುರೆ ಬಾಯಾಗಿ, ಬಾಯಿ ಬಸುರಾಗಿಪ್ಪುದ ತೊಡೆದ,
ಕಣ್ಣೆ ತಲೆಯಾಗಿ, ತಲೆಯೆ ಕಣ್ಣಾಗಿರಿಸಿದ,
ಕಾಲೆ ಕೈಯಾಗಿ, ಕೈಯೆ ಕಾಲಾಗಿ ನಡೆಸಿದ,
ನೆಳಲನುಟ್ಟು ಸೀರೆಯನೆನಗೆ ಉಡುಗೊರೆಯ ಕೊಟ್ಟನು,
ಮಥನವಿಲ್ಲದ ಸಂಗಸುಖವನೆನಗೆ ತೋರಿದನು.
ಕೂಡಲಸಂಗಮದೇವಾ,
ಪ್ರಭುವಿನ ಶ್ರೀಪಾದಕ್ಕೆ ಶರಣೆನುತ್ತಿರ್ದೆನು. ॥೩೦೪॥

೧೨೬೪

ಬಾಗಿಲ ಮುಂದೆ ಬಾಳೆ ಬಿತ್ತುವುದಯ್ಯಾ.
ಬಾಳೆಗೊನೆವಾಗದ ಮುನ್ನ
ಕೂಡಿಕೊಳ್ಳಿ ಕೂಡಲಸಂಗಮದೇವನ. ॥೩೦೫॥

೧೨೬೫

ಬಾಳತ್ವಕ್ಕೆಂದು ಮಧುವ ತಂದು
ಕೊಡನ ತುಂಬಿದ ಜೇನಹುಳುವಿನಂತೆ ತಾನುಂಬುದು,
ತನ್ನೆಂಜಲ ಜಗವುಂಬುದು ನೋಡಯ್ಯಾ.
ಶಿವಭಕ್ತನಾಗಿ ಶಿವಾನ್ನವನೆ ಕೊಂಡು,
ಒಕ್ಕಮಿಕ್ಕ ವಸ್ತುವ ಜಂಗಮಕ್ಕಿಕ್ಕುವಾತನೆ ಭಕ್ತ,

ಕೊಂಡಾತನೆ ಜಂಗಮ.
ನಡುವೆ ನೀ ಬಂದು ಭಂಡ ಮಾಡದಿರೈ
ಕೂಡಲಸಂಗಮದೇವಾ. ॥೩೦೬॥

೧೨೬೬
ಬಿತ್ತು ಬೆಳೆಯಿತ್ತು, ಕೆಯ್ಯ ಕೊಯ್ಯಿತ್ತು, ಗೂಡು ಮುರಿಯಿತ್ತು,
ಕುತ್ತುರಿಯೊಟ್ಟಿತ್ತು, ಒಕ್ಕಿತ್ತು ತೂರಿತ್ತು ಅಳೆಯಿತ್ತು, ಸಲಗೆ ತುಂಬಿತ್ತು.
ಕೂಡಲಸಂಗಮದೇವಯ್ಯಾ
ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ. ॥೩೦೭॥

೧೨೬೭
ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ,
ಸುಗಂಧ ಬಂಧುರದಂತೆ ಹುಟ್ಟುತ್ತದೆ ಪರಿಮಳ!
ಆದಿ ಅನಾದಿಯಿಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗ ಸಯವಾಗಿ,
ಎನಗೆ ಗತಿಪಥವ ತೋರಿಸಬೇಕೆಂದು ಆಗಾದನು,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೩೦೮॥

೧೨೬೮
ಬೆಟ್ಟದ ಕಲ್ಲು ಸೋರೆಯ ಕೂಡೆ ಆಡಿದಂತಾಯಿತ್ತಯ್ಯ,
ಜಾತಿಯಲ್ಲದ ಜಾತಿಯ ಕೂಡಿ, ಅದರ ಪರಿಯಂತೆ,
ಸಂಗವಲ್ಲದ ಸಂಗವ ಮಾಡಿದಡೆ ಭಂಗತಪ್ಪದು,
ಕೂಡಲಸಂಗಮದೇವಾ. ॥೩೦೯॥

೧೨೬೯
ಬೆದರಿಸುವ, ಬೆಚ್ಚಿಸುವ, ಮುಯ್ಯಾನುವ,
ಮೇಳವಾಡುವ, ಆಳಿಗೊಳಿಸುವ,
ಆಳಲಿ ನುಡಿಸುವ, ಬಳಲಿಸುವನೊತ್ತಿ ನೋಡುವ,
ಒಳಹೊರಗೆ ಹೊಳೆದು ಹೋಹ, ಕೇಳದೆ ಬಹ,

ಬೇಳು ಮಾಡುವನಾಳವಾಡುವ, ಹೊಳೆದು ಹೋಹ,
ನಾ ಇದಕ್ಕಂಜೆ ಕೂಡಲಸಂಗಮದೇವಾ. ॥೩೧೦॥

೧೨೭೦

ಬೇಡದಿರು ಶಿವಭಕ್ತರಲ್ಲದವರ,
ಬೇಡಿ ಬೋಡಾಗದಿರು,
ಬೇಡಿದಡೆ ಹುರುಳಿಲ್ಲ.
ಬೇಡಿದ ಕೈಗೆ ಕಡೆಯಿಲ್ಲದೆ ಕೊಡಬಲ್ಲರು
ಕೂಡಲಸಂಗನ ಶರಣರು. ॥೩೧೧॥

೧೨೭೧

ಬ್ರಹ್ಮನೆಂದೆನ್ನೆ–ಬ್ರಹ್ಮುಗನೆಂದೆನ್ನೆ,
ನಾರಣನೆಂದೆನ್ನೆ–ನಾರುಗನೆಂದೆನ್ನೆ
ಜಿನನೆಂದೆನ್ನೆ–ಜಿನುಗನೆಂದೆನ್ನೆ,
ಭೈರವನೆಂದೆನ್ನೆ–ಭೈರುಗನೆಂದೆನ್ನೆ.
ವೀರಭದ್ರ ಕೊಲುವಲ್ಲಿ, ವಿಷವಟ್ಟೆ ಸುಡುವಲ್ಲಿ
ಕೂಡಲಸಂಗಮದೇವಾ, ಶಿವಧೋ ಶಿವಧೋ. ॥೩೧೨॥

೧೨೭೨

ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ
ವಿರಹಿತ ಹೋಗಬಾರದು.
ಲಿಂಗಸಂಬಂಧಿಯಾದಡೆ ಜಂಗಮಪ್ರೇಮಿ ನೀನಾಗು,
ಅಲ್ಲದಿದ್ದಡೆ ಪರುಷ ದೊರೆಕೊಳ್ಳದಯ್ಯಾ,
ಜಂಗಮದಲ್ಲಿ ನಿರುತ ಭರಿತ,
ಕೂಡಲಸಂಗಮದೇವ. ॥೩೧೩॥

೧೨೭೩

ಭಕ್ತನ ಕಾಯವ ಜಂಗಮ ಧರಿಸಿಪ್ಪ ನೋಡಾ,
ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ.

ಭಕ್ತನಲ್ಲಿಯೂ ಭಕ್ತಜಂಗಮವೆರಡೂ ಸನ್ನಿಹಿತ,
ಜಂಗಮದಲ್ಲಿಯೂ ಜಂಗಮಭಕ್ತವೆರಡೂ ಸನ್ನಿಹಿತ,
ಜಂಗಮಕ್ಕಾದಡೂ ಭಕ್ತಿಯೆ ಬೇಕು,
ಭಕ್ತಂಗೆ ಭಕ್ತಿಸ್ಥಲವೆ ಬೇಕು.
ಭಕ್ತನ ಅರ್ಥಪ್ರಾಣಾಭಿಮಾನಕ್ಕೆ
ತಾನೆ ಕಾರಣನೆಂದು ಬಂದ ಜಂಗಮ
ಆ ಭಕ್ತನ ಮನೆಗೆ ತಾನೆ ಕರ್ತನಾಗಿ ಹೊಕ್ಕು,
ತನುಮನಧನಂಗಳೆಲ್ಲವನೊಳಕೊಂಡು,
ಆ ಭಕ್ತನ ಪಾವನವ ಮಾಡಬಲ್ಲಡೆ ಆತ ಜಂಗಮವೆಂಬೆ.
ಆ ಜಂಗಮದ ಗಳಗರ್ಜನೆಗೆ ಸೈರಿಸಿ,
ಮುಡುಹಿಂಗೆ ಮುನ್ನೂರು ಪಟ್ಟವ ಕಟ್ಟಿದಡೆ ಆತ ಭಕ್ತನೆಂಬೆ.
ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೆ?
ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು
ಕರ್ತರು ಗೃಹಕ್ಕೆ ಬಂದಡೆ ಬೇಕು ಬೇಡೆನ್ನೆ. ॥೩೧೪॥

೧೨೭೪

ಭಕ್ತಿಯುಕ್ತಿಯನರಿಯೆ,
ಷೋಡಶೋಪಚಾರವನರಿಯೆ,
ಭಾವನಿರ್ಭಾವವನರಿಯೆ,
ಜ್ಞಾನಮಹಾಜ್ಞಾನವನರಿಯೆ,
ಕೂಡಲಸಂಗಮದೇವಯ್ಯಾ,
ಮಡಿವಾಳತಂದೆಗಳ ಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೩೧೫॥

೧೨೭೫

ಭಕ್ತಿಯೆಂಬ ಪಿತ್ತ ತಲೆಗೇರಿ ಕೈಲಾಸದ
ಬಟ್ಟೆಯ ಹತ್ತುವ ವ್ಯರ್ಥರ ಕಂಡು
ಎನ್ನ ಮನ ನಾಚಿತ್ತು, ನಾಚಿತ್ತು.
ಕೈಲಾಸವೆಂಬುದೇನೊ, ಪೃಥ್ವಿಯ ಮೇಲೊಂದು ಮೊರಡಿ.

ಆ ಪೃಥ್ವಿಗೆ ಲಯವುಂಟು, ಆ ಮೊರಡಿಗೆಯು ಲಯವುಂಟು,
ಅಲ್ಲಿರ್ಪ ಗಂಗೆವಾಳುಕಸಮರುದ್ರರಿಗೂ ಲಯವುಂಟು.
ಇದು ಕಾರಣ,
'ಯದ್ದೃಷ್ಟಂ ತನ್ನಷ್ಟಂ' ಎಂಬ ಶ್ರುತಿಯ ನೋಡಿ ತಿಳಿದು,
ಬಟ್ಟಬಯಲು ತುಟ್ಟತುದಿಯ ಮೆಟ್ಟಿನಿಂದ
ಕೂಡಲಸಂಗಾ, ನಿಮ್ಮ ಶರಣ. ॥೩೧೬॥

೧೨೭೬

ಭಕ್ತಿಯೆಂಬುದು ಅನಿಯಮ ನೋಡಯ್ಯಾ,
ಅದು ವಿಷದ ಕೊಡ; ತುಡುಕಬಾರದು,
ಅಂಗಕ್ಕೆ ಹಿತವಲ್ಲ, ಸಿಂಗಿ ನೋಡಯ್ಯಾ,
ಅದು ವಿಚಿತ್ರ, ವಿಸ್ಮಯ ಕೂಡಲಸಂಗಮದೇವಾ. ॥೩೧೭॥

೧೨೭೭

ಭಕ್ತಿರತಿಯೆಂಬ ಮದುವೆಗೆ–
ಕಣಗಿಲೆಲೆಯ ಉಂಗುರವನಿಕ್ಕಿ,
ಮೊಲ್ಲೆಮಲ್ಲಿಗೆಯ ತೆರೆಯ ಕಟ್ಟಿ,
ಸೇವಂತಿಗೆಯ ಚಪ್ಪರವನಿಕ್ಕಿ,
ಪುಷ್ಪಜಾತಿಗಳೆಲ್ಲಾ ನಿಬ್ಬಣವ ಬನ್ನಿರೇ.
ನಮಗೆಯು ನಮ್ಮ ಕೂಡಲಸಂಗಮದೇವಂಗೆಯು ಮದುವೆ. ॥೩೧೮॥

೧೨೭೮

ಭವಭವದಲ್ಲಿ ಭಕ್ತನಾದಡೆ
ಆ ಭವವೆ ಲೇಸು ಕಂಡಯ್ಯಾ.
ಲಿಂಗಾರಾಧನೆ, ಜಂಗಮಾನುಭವ
ಅಂದಂದಿಗೆ ಪರಮಸುಖವಯ್ಯಾ.
ಎಂದೆಂದೂ ನಾನಿದನೆ ಬಯಸುವೆ ತಂದೆ,
ಕರುಣಿಸಯ್ಯಾ ಕೂಡಲಸಂಗಮದೇವಾ. ॥೩೧೯॥

೧೨೭೯
ಭವರೋಗವೈದ್ಯನೆಂದು ನಂಬಿದೆ ನಾನು,
ಒಮ್ಮಿಂಗೆ ಕರುಣಿಸಯ್ಯಾ ಭಕ್ತಿಫಲಪ್ರದಾಯಕ.
ನೀನು ಒಮ್ಮಿಂಗೆ ಕರುಣಿಸಯ್ಯಾ
ಜಯ ಜಯ ಶ್ರೀ ಮಹಾದೇವ ಎನುತಿರ್ದೆನು.
ಕೂಡಲಸಂಗಮದೇವಯ್ಯಾ,
ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೩೨೦॥

೧೨೮೦
ಭವವಿಲ್ಲದಡೇನು, ಬಂಧನವಿಲ್ಲದಡೇನು,
ಶಿವಗಣಂಗಳೆಲ್ಲರ ಮನಕ್ಕೆ ಬಾರದುದೆ ಭವಬಂಧನ ನೋಡಾ.
ಪರಹಿತಾರ್ಥವಾಗಬೇಕೆಂದು ಲಿಂಗವ ಕೊಟ್ಟಡೆ
ನಿಮ್ಮ ಪ್ರಮಥರ ಮುಂದೆ ಶಿವ ಮುನಿದು ಮರ್ತ್ಯಲೋಕಕ್ಕೆ ಕಳುಹಿಸಿದನು.
ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂದು ನಂಬಿದಲ್ಲಿ
ನಿಮ್ಮ ಪ್ರಮಥರೆನ್ನನೊಳಗಿಟ್ಟುಕೊಂಡರು.
ಜಂಗಮಮುಖದಲ್ಲಿ ಲಿಂಗವನರಸಿಕೋ ಎಂದಡೆ
ದಾಸೋಹವೆಂಬ ಪಸರವನಿಕ್ಕಿದೆನು.
ಕೂಡಲಸಂಗಮದೇವರ ಮುಂದೆ
ಜಂಗಮಮುಖದಲ್ಲಿ ಎಂದು ಸುಖಿಯಪ್ಪೆನು ಹೇಳಾ,
ಚೆನ್ನಬಸವಣ್ಣಾ. ॥೩೨೧॥

೧೨೮೧
ಭವಿಸಂಗವನೊಲ್ಲೆನೊಲ್ಲೆ–
ಆ ಸಂಗ ಮುಂದೆ ಅನಂತ ಭವಂಗಳಲ್ಲಿ ಬರಿಸುವುದಾಗಿ,
ಅನ್ಯದೈವದ ಭಜನೆಯನೊಲ್ಲೆನೊಲ್ಲೆ–
ಆ ಭಜನೆ ಮುಂದೆ ಅನಂತ ಘೋರವನುಣಿಸುವುದಾಗಿ,
ಈ ಉಭಯ ಜಡತೆಯ ಹೊದ್ದದೆ ಹಿಂಗಿ ನಿಂದೆ,
ಕೂಡಲಸಂಗಮದೇವಾ. ॥೩೨೨॥

೧೨೮೨

ಭೂಮಿಯ ಸಾರಾಯದಲೊಂದು ತರು ಬೆಳೆಯಿತ್ತು,
ನವರಸಫಲವನಿತ್ತಿತ್ತು ನೋಡಾ.
ಏನೆಂದರಿಯದೆ, ಎಂತೆಂದರಿಯದೆ ಮರುಳಾದೆನು,
ನಾನು ಮಾರಾರಿಯ ಬಲೆಯಲ್ಲಿ ಸಿಲುಕಿದೆನಯ್ಯಾ.
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನಿಂದಲಾನು ಬದುಕಿದೆನು. ॥೩೨೩॥

೧೨೮೩

ಭೇರುಂಡನ ಪಕ್ಷಿಗೆ ದೇಹ ಒಂದೆ,
ತಲೆಯೆರಡರ ನಡುವೆ ಕನ್ನಡವ ಕಟ್ಟಿ
ಒಂದು ತಲೆಯಲ್ಲಿ ಹಾಲನೆರೆದು, ಒಂದು ತಲೆಯಲ್ಲಿ ವಿಷವನೆರೆದಡೆ
ದೇಹವೊಂದೇ, ವಿಷ ಬಿಡುವುದೇ ಅಯ್ಯಾ
ಲಿಂಗದಲ್ಲಿ ಪೂಜೆಯ ಮಾಡಿ, ಜಂಗಮದಲ್ಲಿ ನಿಂದೆಯ ಮಾಡಿದಡೆ
ನಾನು ಬೆಂದೆ ಕಾಣಾ, ಕೂಡಲಸಂಗಮದೇವಾ. ॥೩೨೪॥

೧೨೮೪

ಮಡಿವಾಳ ಮಡಿವಾಳನೆಂಬರು,
ಮಡಿವಾಳನೆಂಬುದನಾರೂ ಅರಿಯರು,
ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಡ
ಮನದ ಮೈಲಿಗೆಯ ತಂದು,
ತನ್ನ ಮನೆಗೆ ಕೊಂಡುಹೋಗಿ ಹಾಯ್ಕಿದಡೆ,
ಕೈಮುಟ್ಟಿದಡೆ ಆಗದೆಂದು ತನ್ನ ಪಾದದೊಳಗೆ ಮೆಟ್ಟಿ,
ಅಲುಬಿ ಸೆಳೆದನಯ್ಯಾ.
ತನ್ನ ನಿರ್ಮಲವ ಕೊಟ್ಟನೆನಗೆ,
ಆ ಕೊಟ್ಟ ಬೀಳುಡಿಗೆಯ ಹೊದೆದುಕೊಂಡೆನಾಗಿ,
ಮಡಿವಾಳ ಮಾಚಿತಂದೆಯ
ಕೃಪೆಯಿಂದಲಾನು ಬದುಕಿದೆನಯ್ಯಾ,
ಕೂಡಲಸಂಗಮದೇವಾ. ॥೩೨೫॥

೧೨೮೫

ಮತಿಗೆಟ್ಟು ಧೃತಿಗುಂದಿ ಬೇಳಾದೆನಯ್ಯಾ,
ಗತಿಗೆಟ್ಟು ವ್ರತಗೆಟ್ಟು ಧಾತುಗೆಟ್ಟ ಬಾಹಿರ ನಾನಯ್ಯಾ,
ಕಹಿಸೋರೆ ಮುತ್ತಂತಾಯಿತ್ತೆನ್ನ ಭಕ್ತಿ.
ನಡೆಲಿಂಗ ಜಂಗಮ ಮನೆಗೆ ಬರಲು
ಇಂಬುಗೊಳಲರಿಯದೆ ಕೆಟ್ಟ
ಕೇಡನೇನೆಂದುಪಮಿಸುವೆನಯ್ಯಾ,
ನವರತ್ನವ ಕಿತ್ತು ಮಡುವಿನೊಳಗೆ
ಹಾಯ್ಕಿದ ಕಪಿಯಂತಾಯಿತ್ತೆನ್ನ ಭಕ್ತಿ
ಕೂಡಲಸಂಗಮದೇವರ ತಂದುಕೊಟ್ಟಡೆ
ನಿಮ್ಮ ಚಮ್ಮಾವುಗೆಯ ಹೊತ್ತು ಕುಣಿದಾಡುವೆನು
ಕಾಣಾ, ಚೆನ್ನಬಸವಣ್ಣಾ. ॥೩೨೬॥

೧೨೮೬

ಮನದೊಡೆಯ ಮನೆಗೆ ಬಂದಡೆ
ಕನಕದ ತೋರಣವ ಕಟ್ಟಿ,
ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ,
ಉಘೇ, ಚಾಂಗು, ಭಲಾ ಎಂಬೆನು.
ಕೂಡಲಸಂಗಮದೇವಾ,
ನಿಮ್ಮ ಶರಣ ಪ್ರಭುದೇವರು ಬಂದಡೆ
ಉಬ್ಬಿ ಕೊಬ್ಬಿ ನಲಿನಲಿದಾಡುವೆ. ॥೩೨೭॥

೧೨೮೭

ಮನ ಮಜ್ಜನ, ತನು ಸಿಂಹಾಸನ,
ನೆನಹೆ ನಾಗವತ್ತಿಗೆಯಾಯಿತ್ತಾಗಿ
ಅರಿಯಲಿಲ್ಲ, ಮರೆಯಲಿಲ್ಲ ತೆರಹಿಲ್ಲದೆ ಇದ್ದುದಾಗಿ.
ಎಲೆ,ಕೂಡಲಸಂಗಮದೇವಯ್ಯಾ,
ಈಯನುವ ಅಲ್ಲಮ ತೋರಿದನು. ॥೩೨೮॥

೧೨೮೮

ಮನವು ಮಹದೊಳಗೆ ಲೀಯವಾಗಿ
ಘಟವಿಡಿದು ಸುಳಿದಾಡುವ ಮಹಾಮಹಿಮಂಗೆ
ಅಹುದಾಗದೆಂಬ ಭ್ರಾಂತೇಕೊ?
ಹಿಡಿತಹುದು, ಬಾರದಡೆ ಶಿರವನರಿದು ತಹುದು.
ಕೂಡಲಸಂಗಮದೇವರು ಬಲ್ಲಂತೆ ಮಾಡಲಿ. ॥೩೨೯॥

೧೨೮೯

ಮನೆಮನೆದಪ್ಪದೆ ಹಗಹದ ಬತ್ತ
ಎನಗಿಲ್ಲೆಂದು ಬೆಂಬೀಳಲೇಕಯ್ಯಾ?
ಶಿವಶರಣರೆಂಬ ಹಗಹದ ಬತ್ತ
ಭವಭವದಲ್ಲಿ ಬಳಸಲುಂಟು.
ತವನಿಧಿಯ ಹಡೆದ ನಮ್ಮ ದಾಸಯ್ಯನುಂಟು,
ಕೂಡಲಸಂಗಮದೇವಾ. ॥೩೩೦॥

೧೨೯೦

ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ?
ಸಲಿಗೆ ತಪ್ಪಿದ ಬಳಿಕ ಸಲುವುದೆ ಮಾತು?
ತಿವಿದು ತಪ್ಪಿದಡೆ ಸಾವೊಂದು ತಪ್ಪದು.
ಬರಿದೆ ಚಿಂತಿಸಿ ಬಳಲಿ ಕೆಡಬೇಡ ಮನವೆ.
ಅಹುದು ಆಗದೆಂಬ ಸಂದೇಹವುಳ್ಳಡೆ ಅಹುದೆ?
ಕೂಡಲಸಂಗಯ್ಯ ಕೊಟ್ಟಲ್ಲದಿಲ್ಲ. ॥೩೩೧॥

೧೨೯೧

ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂದುಂಡು,
ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ

ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,
ಕೂಡಲಸಂಗನ ಶರಣರು
ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು. ॥೩೩೨॥

೧೪೨

ಮರಹಿಂದಲಾದ ಕುರುಹಿನ
ಕಾಯವ ಧರಿಸಿಕೊಂಡು ಬಂದಡೆ,
ಅದು ಎನಗೆ ಕುಂದಲ್ಲ ನೋಡು ದೇವಾ!
ನಿಮ್ಮ ಲೀಲೆಯಿಂದ ಹಿಂದಾರು ಜನ್ಮದಲ್ಲಿ ಬಂದಡೆ,
ಅದು ನಿಮ್ಮ ಜಂಗಮಭಕ್ತಿಯಿಂದ ಕಳೆದೆ ನೋಡಯ್ಯಾ.
ಕಾಯವಿಲ್ಲದ ಜಂಗಮಕ್ಕೆ ಪ್ರಾಣವಿಲ್ಲದ ಮಾಟ,
ಒಲ್ಲೆನೆಂಬುದಕ್ಕೆ ಕಾರಣವೇನು ಹೇಳಾ,
ಕೂಡಲಸಂಗಮದೇವಾ. ॥೩೩೩॥

೧೪೩

ಮರುಗದ ಗಿಡುವಿನಂತೆ ಹುಟ್ಟುತ್ತಲೆ ಪರಿಮಳ,
ಎರವಿನ ಬಣ್ಣದೊರೆಗೆಡಿಸಿದ ಪರಿಯ ನೋಡಾ.
ಹರನ ಪ್ರೇರಣೆಯೊಳಗೆ ಹಿರಿದೊಂದು ವಾರುಧಿ,
ವಾರುಧಿಯೊಳಗಣ ಕಮಲ ಬಾಡಿ,
ಕಮಲದೊಳಗೆ ಸುಳಿವ ಭ್ರಮರನ ಪಕ್ಕ ಮುರಿದು ಉರುಳಿದಡೆ
ನಿರಂಜನವಾಯಿತ್ತು ನೋಡಾ.
ಹರಿಗೊಯಿದ ಮಿಂಚಿನ ಗೊಂಚಲ ನೆರೆವೋತು,
ಇಂದುಕೋಟಿಪ್ರಭೆಯ ಕಾಂತಿಯನೊಳಕೊಂಡು
ಕೂಡಲಸಂಗಮದೇವರ ನೆರೆವೋತ
ಪ್ರಭುದೇವರ ಶ್ರೀಪಾದದಲ್ಲಿ ಭೃಂಗನಾಗಿ ಬದುಕಿದೆನು. ॥೩೩೪॥

೧೨೫೪

ಮರುಳ ಹಿಡಿದಿಹೆನೆಂಬವರು
ಮರುಳಾಗಿ ಹಿಡಿಯಬೇಕು ಕೇಳಿರೆ.
ಬಹುಬುದ್ಧಿಯ ಜಡರಿಗೆ ಹಿಡಿಯಬಾರದು.
ನಿರವಯಲ ಬಯಲ ಹಿಡಿಯಬಹುದೆ
ಕೂಡಲಸಂಗಮದೇವರ ಭಾವಶಸ್ತ್ರದಿಂದ ಗೆಲಿದುಕೊಂಡು ಬನ್ನಿ. ॥೩೩೫॥

೧೨೫೫

ಮಹಾಪ್ರಳಯದೊಳು
ಧರೆ ಜಲದಲ್ಲಡಗಿತ್ತು,
ಬ್ರಹ್ಮ ವಿಷ್ಣುವಿನಲ್ಲಡಗಿದ,
ಜಲ ಅಗ್ನಿಯಲ್ಲಡಗಿತ್ತು,
ವಿಷ್ಣು ರುದ್ರನಲ್ಲಡಗಿದ,
ಅಗ್ನಿ ವಾಯುವಿನಲ್ಲಡಗಿತ್ತು,
ರುದ್ರ ಈಶ್ವರನಲ್ಲಡಗಿದ,
ವಾಯುವಾಕಾಶದಲ್ಲಡಗಿತ್ತು,
ಈಶ್ವರ ಸದಾಶಿವನಲ್ಲಡಗಿದ,
ಆಕಾಶ ಅಕ್ಷರ ಮೂರೆಂಬ ಓಂಕಾರದಲ್ಲಡಗಿತ್ತು,
ಸದಾಶಿವನತೀತನಲ್ಲಡಗಿದ,
ಅತೀತ ಆದಿಯಲ್ಲಡಗಿದ, ಆದಿ ಅನಾದಿಯಲ್ಲಡಗಿತ್ತು,
ಅನಾದಿ ನಿಜದ ಅಹಂಕಾರದಲ್ಲಿಳಿಯಿತ್ತು,
ನಿಜವು ತಾನು ತಾನು ಆಗಿದ್ದಿತು,
ಈ ಭೇದವ ಕೂಡಲಸಂಗನಲ್ಲಿ ಪ್ರಭುವೆ ಬಲ್ಲ
ಕಾಣಾ ಚೆನ್ನಬಸವಣ್ಣಾ. ॥೩೩೬॥

೧೨೫೬

ಮಹಾಲಿಂಗದ ರೂಪಂಗಳು
ಮಹಾಲಿಂಗದ ಪೆಸರಲ್ಲದೆ ಲಿಂಗ ಬೇರೆ ರೂಪ ನಿರೂಪವಲ್ಲ.
ಲಿಂಗ ಬೇರೆ ಕಾಯಸಂಧಿಯಲ್ಲ,

ಲಿಂಗ ಬೇರೆ ಜೀವಸಂಧಿಯಲ್ಲ.
ಲಿಂಗ ಬೇರೆ ಮಹಾಘನದಿಂದತ್ತಲೆ.
ಕೂಡಲಸಂಗಮನ ನಿಲವು ಆರಿಗೆಯೂ ಅರಿಯಬಾರದು. ॥೩೩೭॥

೧೪೭

ಮಾಡುವಂತಿರಬೇಕು, ಮಾಡದಂತಿರಬೇಕು.
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು.
ಕೂಡಲಸಂಗಮದೇವರ
ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು. ॥೩೩೮॥

೧೪೮

ಮಾಡುವ ಮಾಡಿಸಿಕೊಂಬ ಎರಡರ ನಡುವೆ
ಸಂದುಭೇದ ಉಂಟೆ ದೇವಾ?
ಕಾಯ ಪ್ರಾಣದ ಸಂಗದಂತೆ ಇದ್ದುದಲ್ಲದೆ.
ಬಲ್ಲಂತೆ ಮಾಡು, ಬಲ್ಲಂತೆ ನೀಡು,
ನಾನರಿಯೆನೆಂಬುದು ನಿಮಗುಚಿತವೆ?
ಮಾಡುವಲ್ಲಿ ನೀಡುವಲ್ಲಿ ಹೇಳಿ ಮಾಡಿಸಿಕೊಂಬುದಲ್ಲದೆ.
ಕೈ ಕಲಸಿದಡೆ ಬಾಯಿಗೆ ಹಂಗುಂಟೆ
ಕೂಡಲಸಂಗಮದೇವಾ? ॥೩೩೯॥

೧೪೯

ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ,
ನೀಡುವಲ್ಲಿ ಎನ್ನ ಮಾನರಿದು ನೀಡಿದೆನಾದಡೆ,
ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ,
ನಿಮಗಂದೆ ದ್ರೋಹವಯ್ಯಾ
ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಿರ್ದಡೆ,
ನೀನಂದೆ ಮೂಗ ಕೊಯಿ ಕೂಡಲಸಂಗಮದೇವಾ. ॥೩೪೦॥

೧೩೦೦

ಮಾಯೆವಿಡಿದು ಜೀವಿಸುವ ಜೀವಕನಲ್ಲ,
ಅದೇನು ಕಾರಣ?
ಆತ ಘನಲಿಂಗವಿಡಿದು ಜೀವಿಸುವ ಜೀವಕನಾಗಿ.
ವಿಷಯವಿಡಿದು ಭುಂಜಿಸುವ ಭುಂಜಕನಲ್ಲ,
ಅದೇನು ಕಾರಣ?
ಆತ ಘನಲಿಂಗವಿಡಿದು ಮಹಾಪ್ರಸಾದ
ಭುಂಜಿಸುವ ಭುಂಜಕನಾಗಿ.
ವೇಷವಿಡಿದು ರಂಜಿಸುವ ರಂಜಕನಲ್ಲ,
ಅದೇನು ಕಾರಣ?
ಆತ ಸಹಜವಿಡಿದು ರಂಜಿಸುವ ರಂಜಕನಾಗಿ.
ಇಂತೀ ತ್ರಿವಿಧ ಒಂದೆಯೆಂದರಿದು
ಪರಮಾರ್ಥದಲ್ಲಿ ಚರಿಸುವ ಶರಣಂಗೆ
ಶರಣೆನುತಿರ್ದೆನಯ್ಯಾ, ಕೂಡಲಸಂಗಮದೇವಾ. ॥೩೪೧॥

೧೩೦೧

ಮಾರಂಕನಿರಿವಲ್ಲಿ ಘಾಯಖಂಡೆಯ ತೋರಿದಾತನೆ ತೆತ್ತಿಗ,
ಕೈಯ ಕೈದು ಬಿದ್ದಲ್ಲಿ ಎತ್ತಿಕೊಟ್ಟಾತನೆ ಹಿತವ.
ಕೂಡಲಸಂಗನ ಶರಣ ಸೊಡ್ಡಳ ಬಾಚರಸರ ಕರುಣವುಳ್ಳನ್ನಕ್ಕರ
ಇನ್ನು ನಾನು ಅಂಜುವನಲ್ಲ ಕಾಣಾ, ಚೆನ್ನಬಸವಣ್ಣಾ. ॥೩೪೨॥

೧೩೦೨

ಮುಗಿಲ ಮರೆಯ ಮಿಂಚಿನಂತೆ,
ಒಡಲ ಮರೆಯ ಆತ್ಮನಂತೆ,
ನೆಲದ ಮರೆಯ ನಿಧಾನದಂತೆ ಇಪ್ಪ,
ನಿಮ್ಮ ನಿಲವನಾರು ಬಲ್ಲರು ದೇವಾ?
ನಿಮ್ಮ ನಿಲವ ಹಲಕಾಲದಿಂದ ಕಂಡು ಕಂಡು
ಕಡೆಗಣಿಸಿ, ಮರೆದು ಮತಿಗೆಟ್ಟು ಮರುಳಾದೆನು.
ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ
ತ್ರಾಹಿ ತ್ರಾಹಿ ಕಾಯಯ್ಯಾ, ಕೂಡಲಸಂಗಮದೇವಾ. ॥೩೪೩॥

೧೩೦೩
ಮುದ್ದ ನೋಡಿ, ಮುಖವ ನೋಡಿ,
ಮೊಲೆಯ ನೋಡಿ, ಮುಡಿಯ ನೋಡಿ,
ಕರಗಿಕೊರಗುವುದೆನ್ನಮನ,
ಲಿಂಗದೇವನ ಧ್ಯಾನವೆಂದಡೆ ಕರಗಿ ಕೊರಗದೆನ್ನ ಮನ.
ಆನು ಭಕ್ತನೆಂಬಡೆ ಲಜ್ಜೆಯಿಲ್ಲ ನೋಡಯ್ಯಾ.
ಎನ್ನ ತಂದೆ ಕೂಡಲಸಂಗಮದೇವಯ್ಯ
ಒಲಿದು ಒಪ್ಪಗೊಂಡನಾದಡೆ,
ಆನು ಚೆಂಗಳೆಯ ಬಸುರಲ್ಲಿ ಬಾರದಿಹೆನೆ. ॥೩೪೪॥

೧೩೦೪
ಮೂರ್ತಿಯ ಮುಂದಣ ಮೂವರದೇನೊ?
ಸನಕ ಸನಂದಾದಿಗಳಿಂದತ್ತತ್ತಲು ನೋಡಾ.
ಕೂಡಲಸಂಗಮದೇವಾ,
ನಾನಾಳು, ನೀನಾಳ್ದ ಕಂಡಯ್ಯಾ. ॥೩೪೫॥

೧೩೦೫ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ.
ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ
ನಿರವಯಸ್ಥಲವನೆಯ್ದುವೆನಯ್ಯಾ,
ಕೂಡಲಸಂಗಮದೇವಾ. ॥೩೪೬॥

೧೩೦೬
ಮೆಲ್ಲ ಮೆಲ್ಲನೆ ಭಕ್ತ್ಯಾದ್ಯೈಕ್ಯಾಂತವಾದೆಹೆನೆಂದು
ತಾಮಸಜ್ಞಾನದಲ್ಲಿರಲು,
ಅದಕ್ಕೆ ನೀನು ನಿತ್ಯವ ಪಡೆದು ಬಂದೆಯಾ? ಎಂದು

ನಿಂದ ಸ್ಥಲದಲ್ಲಿಯೆ ನಿಜ ಷಡುಸ್ಥಲವಡಗದಿರ್ದಡೆ
ಜಂಗಮದಾಸೋಹವೇಕೆಂದು ಹೇಳಿ, ನಿಜವ ಕರುಣಿಸಿದನಾಗಿ,
ಲಿಂಗಜಂಗಮದ ಭೇದವ ಚೆನ್ನಬಸವಣ್ಣ ಬಲ್ಲ,
ನಾನು ಆತನಿರಿಸಿದಂತಿಪ್ಪೆನಯ್ಯಾ.
ಇದು ಕಾರಣ, ಕೂಡಲಸಂಗಮದೇವರಲ್ಲಿ
ಚಂದಯ್ಯಗೆ ಶರಣೆಂದು ಶುದ್ಧನಯ್ಯಾ ಪ್ರಭುವೆ. ॥೩೪೭॥

೧೩೦೭

ಮೊರಹಾರ ನೀಡಿದಡೆ ತೆರಹಾರ ಕೊಳುತ್ತೈದಾನೆ,
ಅಹುದಹುದು, ಮತ್ತೇನು?
ದೇವರ ಹಸಿವು ನಮಗೆ ಹೊಸತಲಾ!
ದೆಸೆದಿಕ್ಕೆಲ್ಲಾ ವಿಶ್ವತೋಮುಖದ ಕೂಡಲಸಂಗಮದೇವಂಗೆ,
ದೆಸೆದೆಸೆಯಲ್ಲಿ ನೀಡಿ. ॥೩೪೮॥

೧೩೦೮

ಯೋಗಾಂಗ ಭೋಗಾಂಗ ಜ್ಞಾನಾಂಗ
ಈ ತ್ರಿವಿಧವನು ಮರೆದು,
ಭಕ್ತಿಯೋಗದ ಮೇಲೆ ನಿಂದು,
ವೈರಾಗ್ಯಯೋಗದ ಮೇಲೆ ನಿಂದು,
ನಡೆದು ನುಡಿದು ತೋರುವರು ಎಮ್ಮ ಶರಣರು,
ಗುರುಲಿಂಗಜಂಗಮ ಈ ತ್ರಿವಿಧವನು.
ಸುಖ ದುಃಖ ಚಿಂತೆ ಸಂತೋಷವೆಂಬುವಂ ಕಳೆದು,
ಉತ್ಪತ್ತಿಸ್ಥಿತಿಲಯವೆಂಬುವ ಸುಟ್ಟು,
ದೃಕ್ಕು, [ದರ್ಶನ], ದೃಶ್ಯವೆಂಬ ತ್ರಿಕರಣವ ಏಕವಮಾಡಿ,
ಪಿಂಡಾಂಡವಾ ಬ್ರಹ್ಮಾಂಡವೊಂದೆಂಬುದ ಅರಿದು,
ಸಂದ ಹರಿದು, ನಿಂದ ನಿಜಾನಂದದಲ್ಲಿ
ಹಿಂದುಮುಂದೆಂಬುದನರಿಯದೆ,
ನಿಮ್ಮೊಳೊಂದಾದ ಲಿಂಗೈಕ್ಯಂಗೆ ವಂದಿಸಿ ವಂದಿಸಿ
ಎನ್ನ ಬಂಧನ ಹರಿಯಿತ್ತು,

ನಾನು ಬಟ್ಟಬಯಲಾದೆನಯ್ಯಾ,
ಕೂಡಲಸಂಗಮದೇವಾ. ॥೩೪೯॥

೧೩೦೯

ರಂಗವಾಲೆಯೆಂದಡೆ ಅಂಗವಿಸದಯ್ಯಾ ಎನ್ನ ಮನವು,
ಷಡುಸಮ್ಮಾರ್ಜನೆಯೆಂದಡೆ ಸೊಗಸದಯ್ಯಾ ಎನ್ನ ಮನಕ್ಕೆ.
ಅದೇನು ಕಾರಣವೆಂದಡೆ,
ಭಕ್ತರಂಗಳ ವಾರಣಾಸಿಯೆಂದುದಾಗಿ.
ತಾ ಹುಟ್ಟಿ ತಮ್ಮವ್ವೆಯ ಬಂಜೆಯೆನ್ನಬಹುದೆ
ಕೂಡಲಸಂಗಮದೇವಾ? ॥೩೫೦॥

೧೩೧೦

ರೂಪು ಅರೂಪಿನಲ್ಲಿ ನಿಂದಿತ್ತು,ಅರೂಪು
ನಿಜರೂಪವನವಗ್ರಹಿಸಿತ್ತು.
ನಿಜರೂಪು ನಿರ್ಣಯದಲ್ಲಿ ನಿಷ್ಪತ್ತಿಯಾಯಿತ್ತು,
ನಿಷ್ಪತ್ತಿಯಾದ ನಿಜಶರಣರ ನಿಲವು
ಕಾಯವಿಡಿದು ಕಂಡೆಹೆನೆಂದಡೆ ಕಾಣಬಹುದೆ?
ಕೂಡಲಸಂಗಮದೇವರ ಶರಣ ಪ್ರಭುದೇವರ ನಿಲವು
ಎನಗೆ ಸಾಧ್ಯವಪ್ಪುದೆ? ॥೩೫೧॥

೧೩೧೧

ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೆ?
ಮನವಿಲ್ಲದವಂಗೆ ಮಚ್ಚಿದವರಿಗೆ ಅಭಿಮಾನದ ಹಂಗುಂಟೆ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ?
ಕೂಡಲಸಂಗಮದೇವಯ್ಯಾ,
ಮಹಾದೇವಿಯಕ್ಕನೆಂಬ ಭಕ್ತೆಗೆ,
ಆವ ಹೊರೆಯೂ ಇಲ್ಲ ನೋಡಾ, ಪ್ರಭುವೆ. ॥೩೫೨॥

೧೩೧೨

ರೂಹಿಲ್ಲದ ಸಯದಾನವ ನೀಡುವೆ,
ರುಚಿಯಿಲ್ಲದ ಪದಾರ್ಥವ ಮಥನಿಸದೆ ನೀಡುವೆ, ಲಿಂಗಕ್ಕೆಂದು.
ಲಿಂಗಪದಾರ್ಥವನಂಗಮುಖವ ಮರೆದು ನಿಮಗೆ ನೀಡುವೆ.
ಕಾಮಿಸದೆ ಕಲ್ಪಿಸದೆ ಭಾವಿಸದೆ ಭ್ರಮಿಸದೆ ನಿಮ್ಮ ಪರಿಯಾಣಕ್ಕೆ ನೀಡುವೆ.
ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯಾ
ಕೂಡಲಸಂಗಮದೇವಯ್ಯಾ. ॥೩೫೩॥

೧೩೧೩

ಲಕ್ಷದ ಮೇಲೆ ತೊಂಬತ್ತಾರುಸಾವಿರ ವಚನ
ನಿತ್ಯ ಭಂಡಾರಕ್ಕೆ ಸಂದಿತ್ತಯ್ಯಾ.
ಬೆಟ್ಟಕ್ಕೆ ಬಳ್ಳು ಬಗುಳಿದಂತಾಯಿತ್ತಯ್ಯಾ.
ಕ[ರೆದು]ಕೊಳ್ಳಯ್ಯಾ, ಕ[ರೆದು]ಕೊಳ್ಳಯ್ಯಾ,
ಓ ಎನ್ನಯ್ಯಾ, ಓ ಎನ್ನಯ್ಯಾ,
ಕೂಡಲಸಂಗಮದೇವಾ. ॥೩೫೪॥

೧೩೧೪

ಲಿಂಗಗಂಭೀರ ಗಮನಗೆಟ್ಟುದಲ್ಲಾ,
ಜಂಗಮಗಂಭೀರ ಸುಳುಹುಗೆಟ್ಟುದಲ್ಲಾ,
ಪ್ರಸಾದಗಂಭೀರ ರೂಪುಗೆಟ್ಟುದಲ್ಲಾ,
ಆಚಾರಗಂಭೀರ ಅವಯವಗೆಟ್ಟುದಲ್ಲಾ,
ಜ್ಞಾನಗಂಭೀರ ನಡೆಗೆಟ್ಟುದಲ್ಲಾ,
ಕೂಡಲಸಂಗಮದೇವರಲ್ಲಿ ಪ್ರಭುದೇವರು ನಿಜವನ್ಯೆದಲು
ಸಂಗನಬಸವಣ್ಣನ ಪ್ರಾಣ ಒಡನೆ ಬಳಿಸಂದಿತ್ತಲ್ಲಾ. ॥೩೫೫॥

೧೩೧೫

ಲಿಂಗಗಂಭೀರದೊಳಗೆ ಜಗ ಹುಟ್ಟಿದಡೇನು,
ಆ ಲಿಂಗದಿಂದ ಘನವೆ?
ಶಿವಲಿಂಗದೊಳಗೆ ಜಗ, ಜಗದೊಳಗೆ ಶಿವಲಿಂಗ,
ಲೋಕಾದಿ ಲೋಕಂಗಳಿಗೆ ನೀನು ಭಕ್ತಿಯ ಕಂದೆರೆದು ತೋರಿದೆ,

ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣಾ,
ನಿನ್ನ ಶ್ರೀಪಾದಕ್ಕೆ ನಮೋ ನಮೋ ಎನುತ್ತಿರ್ದೆನು. ॥೩೫೬॥

೧೩೧೬

ಲಿಂಗ ಜಂಗಮ, ಜಂಗಮ ಲಿಂಗವೆಂಬುದ
ಎನಗೆ ತೋರಿದವರಾರಯ್ಯಾ?
ಲಿಂಗವ ಪೂಜಿಸಿದಡೆ ಭವ ಹರಿಯದೆಂದು,
ಜಂಗಮ ಮುಖಲಿಂಗವಾಗಿ ಬಂದು ಶಿಕ್ಷಿಸಿ, ರಕ್ಷಿಸಿ,
ಎನ್ನ ಆದಿ ಅನಾದಿಯ ತೋರಿ,
ಪ್ರಾಣಲಿಂಗ ಜಂಗಮವೆಂದು
ಎನಗೆ ಪ್ರತಿಷ್ಠಿಸಿ ತೋರಿದಿರಾಗಿ,
ಕೂಡಲಸಂಗಮದೇವಾ,
ನಿಮ್ಮಿಂದಲಾನು ಬದುಕಿದೆನು ಕಾಣಾ, ಪ್ರಭುವೆ ॥೩೫೭॥

೧೩೧೭

ಲಿಂಗಜಂಗಮಪ್ರಸಾದವೆಂಬರು;
ಲಿಂಗವೆಂದಡೆ ಅಂಗದೊಳಗಾಯಿತ್ತು,
ಜಂಗಮವೆಂಬೆನೆ ವಾಸಿಗೊಳಗಾಯಿತ್ತು,
ಪ್ರಸಾದವೆಂಬೆನೆ ವಿಷದೊಳಗಾಯಿತ್ತು,
ಇಂತೀ ತ್ರಿವಿಧವು ನಷ್ಟ. ಇವರ ಮೇಲಣ ಅಂಕುರಿತವ ಬಲ್ಲ
ಜಂಗಮವ ತೋರಾ ಕೂಡಲಸಂಗಮದೇವಾ. ॥೩೫೮॥

೧೩೧೮

ಲಿಂಗದ ಪ್ರಾಣದ ಸಕೀಲಸಂಬಂಧವೆಂತಿಪ್ಪುದೆಂದರಿಯೆನು,
ಪ್ರಾಣ[ದ] ಲಿಂಗದ ಸಕೀಲಸಂಬಂಧವೆಂತಿಪ್ಪುದೆಂದರಿಯೆನು.
ಹೂಸಿ ಹುಂಡನ ಮಾಡಿ, ಹೊರಗನೆ ಪೂಜಿಸಿ
ವೃಥಾ ದಿನಂಗಳು ಸವೆದುಹೋದವು.
ಕೂಡಲಸಂಗಮದೇವರಲ್ಲಿ,
ಎನ್ನ ಪ್ರಾಣ ನಿಕ್ಷೇಪವಹ ಭೇದವ ತೋರಾ ಚೆನ್ನಬಸವಣ್ಣಾ. ॥೩೫೯॥

೧೩೧೯
ಲಿಂಗದಲ್ಲಿ ಅರ್ಪಿತವಾದ ಸುಖವು
ಲಿಂಗದಲ್ಲಿ ಲೀಯವಾಯಿತ್ತೆಂದಡೆ,
ಅಂಗವ ಲಿಂಗದಲ್ಲಿ ನಿಕ್ಷೇಪಿಸಿಹೆನೆಂಬ
ಕಾರಣವೇಕಯ್ಯಾ ಶರಣಂಗೆ?
ಪ್ರಾಣವ ಲಿಂಗದಲ್ಲಿ ಸವೆಸಿ ನಿರವಯವಾಗಬಹುದಲ್ಲದೆ,
ಕರ್ಮದಿಂದಾದ ಕಾಯವ ಸವೆಸಿ
ಸಯವಪ್ಪ ಪರಿಯೆಂತು ಹೇಳಯ್ಯಾ?
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರು ಕಾಯವಿಡಿದಿರ್ದು
ನಿರ್ಮಾಯರಾಗಿಪ್ಪುದ ಹೇಳಯ್ಯಾ,
ನಿಮ್ಮ ಧರ್ಮ, ನಿಮ್ಮ ಧರ್ಮ. ॥೩೬೦॥

೧೩೨೦
ಲಿಂಗದಲ್ಲಿ ಹೊಳೆದು ಹೋಹ ಜಂಗಮವ ಕಂಡು ಬಿಟ್ಟಡೆ
ಭವ ಹೊದ್ದಿತ್ತಯ್ಯಾ ಎನ್ನ ಭಕ್ತಿಗೆ.
ಹಿಂದೆ ಲಿಂಗವನಗಲಿದ ಕಾರಣ ಬಂದೆನೀ ಜನ್ಮಕ್ಕೆ,
ಕೂಡಲಸಂಗಯ್ಯ ತಪ್ಪಿಹೋಗದ ಮುನ್ನ ಹಿಡಿದು ತನ್ನಿ. ॥೩೬೧॥

೧೩೨೧
ಲಿಂಗವಲ್ಲದನ್ಯವರಿನಯೆ, ಶಿವಲಿಂಗವಲ್ಲದನ್ಯವ ನೆನೆಯೆ,
ಜಂಗಮವಲ್ಲದನ್ಯಕ್ಕೆರಗೆ, ಪ್ರಸಾದವಲ್ಲದನ್ಯವ ಕೊಳ್ಳೆ,
ಶಿವಗಣಂಗಳಲ್ಲದನ್ಯರ ಬೆರೆಯೆ.
ಕೂಡಲಸಂಗಮದೇವರು ಸಾಕ್ಷಿಯಾಗಿ
ನಾನಾವ ತೀರ್ಥಯಾತ್ರೆಗಳನರಿಯೆ. ॥೩೬೨॥

೧೩೨೨
ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು,
ಅವರೆಂತಿದ್ದಡೇನು? ಹೇಗಿದ್ದಡೇನು?
ಲಿಂಗವಂತರವರು,

ಉಪಮಿಸಬಾರದ ಮಹಾಘನವು
ಕೂಡಲಸಂಗನ ಶರಣರು. ॥೩೬೩॥

೧೩೨೩

ಲಿಂಗವಿರದೆ ಸೀಮೆಯ ಕಲ್ಲಿನಲ್ಲಿ?
ಲಿಂಗವಿರದೆ ಪಶುವಿನ ತೊಡೆಯಲ್ಲಿ?
ಕಲ್ಲ ತೆಕ್ಕೊಂಡು ಮೆಳೆಯ ಮೇಲೆ ಇಟ್ಟಡೆ,
ಆ ಕಲ್ಲು ಮೆಳೆಯಲ್ಲಿ ಸಿಕ್ಕಿದಡೆ ಆ ಮೆಳೆ ಭಕ್ತನಾಗಬಲ್ಲುದೆ?
ಇದು ಕಾರಣ ಸತ್ಯ, ಸಹಜ, ಸದ್ಭಾವ, ಸದ್ವರ್ತನೆ ಉಳ್ಳಡೆ ಸದ್ಭಕ್ತ,
ಇಲ್ಲದಿದ್ದಡೆ ಆ ಮೆಳೆಯೊಳಗೆ ಸಿಕ್ಕ ಕಲ್ಲಿನಂತೆ
ಕಾಣಾ ಕೂಡಲಸಂಗಮದೇವಾ. ॥೩೬೪॥

೧೩೨೪

ಲಿಂಗವೆಂತಿಪ್ಪುದೆಂದರಿಯೆನು,
ಲಿಂಗದ ನಿಲವೆಂತುಟೆಂಬುದ ಹೋದ ಹೊಲಬನರಿಯೆನು,
ಲಿಂಗಾರ್ಚನೆಯ ಮಾತು ಎನಗೇಕಯ್ಯಾ?
ಜಂಗಮಲಿಂಗವಾಗಿ ಬಂದು ನೀವಿರುತ್ತಿರಲು,
ಸ್ಥಾವರಕ್ಕೆ ಮಚ್ಚಿ ಮರುಳಾದೆನು. ಕೂಡಲಸಂಗಮದೇವಾ,
ಎನ್ನ ತಪ್ಪನೆ ಎಣಿಸಿಹೆನೆಂದಡೆ ಕಡೆಯಿಲ್ಲ. ॥೩೬೫॥

೧೩೨೫

ಲಿಂಗವೆ ಅಂಗ, ಅಂಗವೆ ಲಿಂಗವೆಂದರಿದ ಬಳಿಕ ಅಲ್ಲಿಯೆ ಅದೆ.
ಲಿಂಗವೆ ಪ್ರಾಣ, ಪ್ರಾಣವೆ ಲಿಂಗವೆಂದರಿದ ಬಳಿಕ ಅಲ್ಲಿಯೆ ಅದೆ.
ಉಂಟೆಂದು ತೋರಲಿಲ್ಲ, ಇಲ್ಲವೆಂದು ಅರಸಲಿಲ್ಲ,
ಕೂಡಲಸಂಗಮದೇವಾ, ಲಿಂಗ ನಿರಂತರವಲ್ಲಿಯೇ. ॥೩೬೬॥

೧೩೨೬

ಲಿಂಗಾರ್ಪಿತವ ಮಾಡುವ ಅವಧಾನವೆಂತೆಂದಡೆ:
ಅನ್ಯಾಯವು ಸೋಂಕಲೀಯದವಧಾನವು,

ಅರಿಷಡ್ವರ್ಗಂಗಳು ಮುಟ್ಟಲೀಯದವಧಾನವು.
ಪಂಚಭೂತದ ಭವಿತ್ವವ ಕಳೆದು ಪ್ರಸಾದಕಾಯವಾಗಿಪ್ಪ ಪರಿಯನೋಡಾ.
ಪಂಚೇಂದ್ರಿಯಂಗಳ ಗುಣವ ಕಳೆದುಪಂಚವಿಂಶತಿತ್ವದಲ್ಲಿ ಪರಿಣಾಮಿ,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೩೬೭॥

೧೩೨೭
ಲಿಂಗಾರ್ಪಿತವಿಲ್ಲದೆ ಬೋನ ಪದಾರ್ಥವ ಕೊಂಡಡೆ,
ಮಕ್ಕಳಡಗು ನರಮಾಂಸವಯ್ಯಾ.
ಲಿಂಗಾರ್ಪಿತವಿಲ್ಲದೆ ಉದಕವ ಮುಕ್ಕುಳಿಸಿದಡೆ
ನಾಯ ಮೂತ್ರವ ಮುಕ್ಕಳಿಸಿದುದಯ್ಯಾ.
ಲಿಂಗಾರ್ಪಿತವಿಲ್ಲದೆ ಹಲ್ಲುಕಡ್ಡಿಯನಿರಿದಡೆ
ನಾಯ ಎಲುಬಿದ್ದ ಮಲಕ್ಕೆ ಬಾಯಿದೆರೆದುದು.
ನಿಮಗೆತ್ತಿದ ಕರವ ಅನ್ಯರಿಗೆ ಮುಗಿದಡೆ ಅಘೋರ ನರಕವಯ್ಯಾ.
ಈ ಭಾಷೆಗೆ ತಪ್ಪಿದಡೆ ತಲೆದಂಡ ತಲೆದಂಡ,
ಅಳವರಿಯದೆ ನುಡಿದೆನು, ಕಡೆಮುಟ್ಟಿ ನಡೆಸಯ್ಯಾ.
ಪ್ರಭುವೆ ಕೂಡಲಸಂಗಮದೇವಾ. ॥೩೬೮॥

೧೩೨೮
ಲೋಕದಿಚ್ಛೆಯ ನಡೆವವನಲ್ಲ,
ಲೋಕದಿಚ್ಛೆಯ ನುಡಿವವನಲ್ಲ,
ಲೋಕವಿರಹಿತ ಶರಣ, ಶರಣವಿರಹಿತ ಲೋಕವೆಂಬುದು
ಕಾಣಬಂದಿತ್ತು ನೋಡಾ.
ಲಿಂಗವೆ ಗೂಡಾಗಿ, ಜಂಗಮವೆ ಸ್ವಾಯತವಾಗಿ
ಪ್ರಸಾದವೆ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ ನೋಡಯ್ಯಾ.
ಕೂಡಲಸಂಗಮದೇವಾ, ನಿಮ್ಮ ಶರಣ ಚೆನ್ನಬಸವಣ್ಣಂಗೆ
ನಮೋ ನಮೋ ಎಂಬೆನು. ॥೩೬೯॥

೧೩೨೯
ಲೋಕಾದಿ ಲೋಕಂಗಳೆಲ್ಲಾ ಚೆನ್ನಯ್ಯನ ಮಕ್ಕಳು,
ಬ್ರಹ್ಮವಿಷ್ಣುರುದ್ರರೆಲ್ಲಾ ಚೆನ್ನಯ್ಯನ ಮಕ್ಕಳು,
ಸನಕ ಸನಂದ ಸನಾದಿಗಳೆಲ್ಲಾ ಚೆನ್ನಯ್ಯನ ಮಕ್ಕಳು,
ಕಿನ್ನರ ಕಿಂಪುರುಷರೆಲ್ಲಾ ಚೆನ್ನಯ್ಯನ ಮಕ್ಕಳು,
ಗರುಡ ಗಾಂಧರ್ವರೆಲ್ಲಾ ಚೆನ್ನಯ್ಯನ ಮಕ್ಕಳು,
ಸಿದ್ಧವಿದ್ಯಾಧರರುಗಳೆಲ್ಲಾ ಚೆನ್ನಯ್ಯನ ಮಕ್ಕಳು,
ಏಕಾದಶರುದ್ರರು ದ್ವಾದಶಾದಿತ್ಯರು ಚೆನ್ನಯ್ಯನ ಮಕ್ಕಳು,
ನವಬ್ರಹ್ಮರು ಚೆನ್ನಯ್ಯನ ಮಕ್ಕಳು,
ತ್ರೈತ್ರಿಂಶಕೋಟಿ ದೇವತೆಗಳೆಲ್ಲಾ ಚೆನ್ನಯ್ಯನ ಮಕ್ಕಳು,
ಅಂತರಂತರ ಸಂತರೆಲ್ಲಾ ಚೆನ್ನಯ್ಯನ ಮಕ್ಕಳು,
ಭಾವ ಭಾಳೇಕ್ಷಣರೆಲ್ಲಾ ಚೆನ್ನಯ್ಯನ ಮಕ್ಕಳು.
ನನ್ನ ನಿನ್ನಂತಹವರೆಲ್ಲಾ ಚೆನ್ನಯ್ಯನ ಮಕ್ಕಳು.
ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ. ॥೩೭೦॥

೧೩೩೦
ಲೌಕಿಕದನುಸಂಧಾನ ಸಮನಿಸದೆ ಅನ್ಯವ ಸುಟ್ಟರು.
ಎನ್ನ ಹೃದಯದ ಕಂಗಳು ಲಿಂಗದಲ್ಲಿ ನಟ್ಟು ಬಗೆಯಲಾರಳವು.
ಅಲ್ಲದೆ, ನಿಷ್ಠೆ ಬಲಿದು ಗಟ್ಟಿಗೊಂಡು
ಅಂಗಶಂಕೆಯೆಂಬ ಭಂಗವಿನ್ನೆಲ್ಲಿಯದೊ.
ಹಾಲು ಬೆರಸಿದ ನೀರ ಹಂಸೆ[ಗಾ]ಗದಂತೆ
ಪಾವಕನಾದನಯ್ಯಾ ಕೂಡಲಸಂಗಮದೇವಾ, ನಿಮ್ಮ ಶರಣ. ॥೩೭೧॥

೧೩೩೧
ವಚನನಾನುಭವವ ಮಾಡುವಯ್ಯಗಳಿರಾ,
ನಿಮಗೆ ವಚನ ಪ್ರಾಣಲಿಂಗವೊ ಅಲ್ಲ,
ದಾಸೋಹ ಪ್ರಾಣಲಿಂಗವೊ?
ಆರೂಢವನೆ ಕಲಿತು ಅಂಗಸಂಗದಲಿಪ್ಪ
ಆರೂಢ ಪ್ರಾಣಲಿಂಗವೊ? ಅಲ್ಲ,

ದಾಸೋಹ ಪ್ರಾಣಲಿಂಗವೊ?
ಬ್ರಹ್ಮವಿದ್ಯೆಯನೆ ಕಲಿತು, ಭ್ರಮೆಯೆಂಬ ಶೂಲದ ಮೇಲೆ ಕುಳ್ಳಿರ್ದು,
ಆ ಬ್ರಹ್ಮವಿದ್ಯೆಯೆ ಪ್ರಾಣಲಿಂಗವೊ? ಅಲ್ಲ,
ದಾಸೋಹವೆ ಪ್ರಾಣಲಿಂಗವೊ?
ಎಲ್ಲ ಮಾತುಗಳ ಹಲ್ಲಣಿಸಿಕೊಂಡು,
ಬಲು ಹುಲಿಯ ಬೆನ್ನಲಿ ಬಪ್ಪತೆರನಂತೆ.
ಬಲ್ಲವರಿಗೆ ಬಲ್ಲವರು ನಮ್ಮ ಜಂಗಮದಾಸೋಹಿಗಳು.
ಕೂಡಲಸಂಗಮದೇವರರಿತಡೆ ನಿಮ್ಮ ಹಲ್ಲ ಕಳೆವ ಕಾಣಿರೆ! ॥೩೭೨॥

೧೩೩೨

ವನದ ಕೋಗಿಲೆ ಮನೆಗೆ ಬಂದಡೆ,
ತನ್ನ ವನವ ನೆನೆವುದ ಮಾಣ್ಬುದೆ?
ಮಲೆಯ ಗಜ ಮನೆಗೆ ಬಂದಡೆ,
ತನ್ನ ಮಲೆಯನೆನೆವುದಮಾಣ್ಬುದೆ?
ಕೂಡಲಸಂಗನ ಶರಣರು ಮರ್ತ್ಯಕ್ಕೆ ಬಂದಡೆ
ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ? ॥೩೭೩॥

೧೩೩೩

ವಾಸನೆ ಕಾರಣ, ನೊಣವಿನ ಮಲ
ಜೇನುತುಪ್ಪವೆಂದೆನಿಸಿತ್ತು,
ಪರಿಮಳ ಕಾರಣ, ಕೋಣನ ಮಾಂಸ
ವಾಣಿಜ್ಯತೆ ಇಂಗು ಎನಿಸಿತ್ತಯ್ಯಾ,
ಭಕ್ತಿ ಕಾರಣ, ಎನ್ನಲುಳ್ಳ ಅವಗುಣ ಹಿಂಗಿತ್ತು ಕಾಣಾ. ॥೩೭೪॥

೧೩೩೪

ವಿಷ್ಣು ವರಾಹವತಾರದಲ್ಲಿ ಹಂದಿಯಂ
ತಿಂಬುದಾವಾಚಾರವೋ?
ವಿಷ್ಣು ಮತ್ಸ್ಯಾವತಾರದಲ್ಲಿ ಮೀನಂ
ತಿಂಬುದಾವಾಚಾರವೋ?

ವಿಷ್ಣು ಕೂರ್ಮಾವತಾರದಲ್ಲಿ ಆಮೆಯ
ತಿಂಬುದಾವಾಚಾರವೋ?
ವಿಷ್ಣು ಹರಿಣಾವತಾರದಲ್ಲಿ ಎರಳೆಯ
ತಿಂಬುದಾವಾಚಾರವೋ?
ಇಂತಿವನೆಲ್ಲ ಅರಿಯದೆ ತಿಂದರು.
ಅರಿದರಿದು ನಾಲ್ಕು ವೇದ, ಹದಿನಾರು ಶಾಸ್ತ್ರ,
ಹದಿನೆಂಟು ಪುರಾಣ, ಇಪ್ಪತ್ತೆಂಟಾಗಮ
ಇಂತಿವೆಲ್ಲನೋದಿ, ಕೇಳಿ, ಹೋಮವನಿಕ್ಕಿ ಹೋತನ ಕೊಂದು
ತಿಂಬುದಾವಾಚಾರದೊಳಗೋ?
ಇಂತೀ ಶ್ರುತಿಗಳ ವಿಧಿಯ ಜಗವೆಲ್ಲ ನೋಡಿರೆ.
ನಮ್ಮ ಕೂಡಲಸಂಗಮದೇವಂಗೆ
ಅಧಿದೇವತೆಗಳ ಸರಿಯೆಂಬವರ ಬಾಯಲ್ಲಿ ಸುರಿಯವೆ
ಬಾಲಹುಳುಗಳ. ॥೩೭೫॥

೧೩೩೫

ವೀರದನುಜರೆಲ್ಲಾ ಧಾರುಣಿಯೆಂಬುದರೊಳಗೆ
ಸಾಗರವಾಗಿದ್ದುದನಾರೂ ಅರಿಯರಲ್ಲಾ,
ದ್ವಾರಾವತಿಯಪುರದೊಳಗೆ ಪರವು ಬಂದಿದ್ದಡೆ
ಶರೀರಸಂಬಂಧವ ಮಾಡಲರಿಯರಲ್ಲಾ.
ಕರಗಸವ ಕಳೆದುಕೊಂಡು, ಪರಶುರಾಮನ ಗೆಲಿದು,
ಸುರರೊಳಗೆ ಸುಳಿದಾಡಲರಿಯರಲ್ಲಾ.
ವಾರುಧಿಯ ಸೇರಿಕೊಂಡು, ಮರಣವೆಂಬುದ ನಿಲಿಸಿ,
ತ್ರಿಪುರವ ಮೂರ್ತಿಗೊಳಿಸಲರಿಯರಲ್ಲಾ.
ಮೇರುವೆಂಬುದ ಹೊಕ್ಕು ನೂರೆಂಟನೆಣಿಸಿಕೊಂಡು
ನಿರಾಕಾರದಲಡಗುವರಿನ್ನಾರು ಹೇಳಾ?
ಸಾಸಿರದ ಮೇಲೆ ನೂರೆಂಬತ್ತೆಂಟು ರಾಶಿ
ಪರುಷವೇಧಿಗಳಾಗಲರಿಯರಲ್ಲಾ.
ಕೂಡಲಸಂಗನ ಶರಣರ ಸಂಬಂಧವು
ಪ್ರಭುವಿಂಗಲ್ಲದೆ ಮತ್ತಾರಿಗೆಯೂ ಅಳವಡದು. ॥೩೭೬॥

೧೩೩೬
ವೇದ ವೇದಾಂತಗಳಿಗೆ ಅಸಾಧ್ಯವಾದ
ಅನುಪಮಲಿಂಗವ ತಂದುಕೊಟ್ಟನಯ್ಯಾ,
ಸದ್ಗುರು ಎನ್ನ ಕರಸ್ಥಲಕ್ಕೆ.
ನಾದಬಿಂದು ಕಳೆಗೆ ಅಭೇದ್ಯವಾದ
ಅಚಲಿತ ಲಿಂಗವ ತಂದುಕೊಟ್ಟನಯ್ಯಾ,
ಸದ್ಗುರು ಎನ್ನ ಕರಸ್ಥಲಕ್ಕೆ.
ವಾಙ್ಮನಕ್ಕಗೋಚರವಾದ
ಅಖಂಡಿತ ಲಿಂಗವ ತಂದುಕೊಟ್ಟನಯ್ಯಾ,
ಸದ್ಗುರು ಎನ್ನ ಕರಸ್ಥಲಕ್ಕೆ,
ಇನ್ನು ನಾನು ಬದುಕಿದೆನು,
ನಾ ಬಯಸುವ ಬಯಕೆ ಕೈಸಾರಿತ್ತಿಂದು
ಕೂಡಲಸಂಗಮದೇವಾ. ॥೩೭೭॥

೧೩೩೭
ಶರಣ ಮನಬಂದಂತೆ ಮಾಡುವ;
ಅರಸಿ ಸಕಳಾಗಮಚಾರ್ಯನಪ್ಪ,
ಅಹುದಾಗದೆಂಬ ಪರಿಯಲ್ಲ ನೋಡಾ.
ಕೂಡಲಸಂಗನ ಶರಣ ಸಂಗಿಯಲ್ಲ, ನಿಸ್ಸಂಗಿಯಲ್ಲ. ॥೩೭೮॥

೧೩೩೮
ಶರಣ ಲಿಂಗದಲ್ಲಿ ಕೂಡಲು ಮಹಾಪಥವಯ್ಯಾ!
ದೃಢದೃಢಾಂಗಮಧ್ಯಸ್ಥನಾಗಿ,
ಕೂಡಲಸಂಗಮದೇವರ ನಾಮವತಿಸುಖವೆಂದುದು. ॥೩೭೯॥

೧೩೩೯
ಶರಣೆಂದು ಕರ ಸಂತೋಷವ ಮಾಡಿ,
ಮುರಿದು ಮಂಜೆರಗ ಗಂಟಿಕ್ಕಿ,
ನೆಲನ ಹೊಯಿದ ಕೈ ತಪ್ಪುವುದಲ್ಲದೆ,

ಆದಿ ಶರಣರ ನುಡಿತಪ್ಪುವುದೆ?
ಕೂಡಲಸಂಗಮದೇವರು ಸಾಕ್ಷಿಯಾಗಿ
ಕಟ್ಟುವೆ ಗುಡಿಯನೆತ್ತುವೆನು ಧ್ವಜವ. ॥೩೮೦॥

೧೩೪೦

ಶರಣೆಂದು ಪಾದವ ಹಿಡಿದಿಹೆನೆಂದಡೆ
ಚರಣದ ನಿಲವು ಕಾಣಬಾರದು,
ಕುರುಹುವಿಡಿದೆಹೆನೆಂದಡೆ ಕೈಗೆ ಸಿಲುಕದು,
ಬೆರಸಿ ಹೊಕ್ಕೆಹೆನೆಂದಡೆ ಮುನ್ನವೆ ಅಸಾಧ್ಯ.
ಅಕಟಕಟಾ, ಅಹಂಕಾರದಲ್ಲಿ ಕೆಟ್ಟೆನಲ್ಲಾ,
ಗುರುವೆ, ಎನ್ನ ಪರಮಗುರುವೆ ಬಾರಯ್ಯಾ,
ಅರಿಯದ ತರಳನ ಅವಗುಣವ ನೋಡುವರೆ
ಕೂಡಲಸಂಗಮದೇವಾ? ॥೩೮೧॥

೧೩೪೧

ಶಾಂತಿಯ ಮಾಡಹೋದಡೆ ಬೇತಾಳವಾಯಿತ್ತಯ್ಯಾ.
ಸೀತಾಳದಾಪ್ಯಾಯನವಾಯಿತೆಂದಡೆ
ಪರಹಿತಾರ್ಥವೆಂದು ತೋರಿದೆನೆನ್ನ ಪ್ರಾಣಲಿಂಗವನು.
ನೇಮವ ಮಾಡಲೆಂದು ಕೊಟ್ಟಡೆ
ಕೊಂಡೋಡಿ ಹೋದನು ಅನಿಮಿಷನು.
ಅಭವನ ಮಹಾಮನೆಯ ಹೊಕ್ಕಡೆ
ಎನಗೆ ಹೇಯವನೊಡ್ಡಿ ಅರಸೆಂದು ಕಳುಹಿದನು.
ಅಳಲಿ ಬಳಲಿ ತೊಳಲಿ ಆಡಿಹಾಡಿ ಹಂಬಲಿಸಿ,
ಅನಂತ ಅವಸ್ಥೆಯಿಂದ ಲಕ್ಷದ ಮೇಲೆ
ತೊಂಬತ್ತಾರುಸಾವಿರ ವಚನವ ಹಾಡಿ,
ಆಚಾರ ವಿಚಾರದಿಂದ
ವಿಚಿತ್ರನಭಯವ ಕೊಟ್ಟು ಕಳುಹಿಸಿದನಯ್ಯಾ.
ಗೊಹೇಶ್ವರನ ಶರಣ ತೋರಿದಡರಿದನು
ಕೂಡಲಸಂಗಮದೇವರ. ॥೩೮೨॥

೧೩೪೨

ಶಿವನೆ ಜಗತ್ರಯಕ್ಕೊಡೆಯನೆಂದುದು ವೇದ,
ಉತ್ಪತ್ತಿ ಸ್ಥಿತಿ ಲಯಕಾರಣನೆಂದುದು ವೇದ,
'ಈಶಃ ಸರ್ವಸ್ಯ ಜಗತಃ ಪ್ರಭುಃ ಪ್ರೀಣಾತಿ ವಿಶ್ವಭುಕ್' ಎಂದುದು ಶ್ರುತಿ.
ಇದು ಕಾರಣ,
ಕೂಡಲಸಂಗಮದೇವನೊಬ್ಬನೆ ದೇವನು. ॥೩೮೩॥

೧೩೪೩

ಶಿವಶಿವಾಯೆಂಬ ಮಂತ್ರವೆನಗೆ
ಅಮೃತಾರೋಗಣೆಯೋ ಎನ್ನ ತಂದೆ.
ಹರ ಹರಾ ಎಂಬ ಮಂತ್ರವೆನಗೆ
ಅಮೃತಾರೋಗಣೆಯೋ ಎನ್ನ ತಂದೆ.
ಶ್ರೀ ವಿಭೂತಿ ರುದ್ರಾಕ್ಷಿ ಭಕುತಿಯ
ಮುಕುತಿಗೆ ಸಾಧನವೋ ಎನ್ನ ತಂದೆ,
ಎನಗಿದೆ ಗತಿಮತಿ ಚೈತನ್ಯ,
ಕೂಡಲಸಂಗಮದೇವಯ್ಯಾ,
ನಿಮ್ಮ ನಾಮದ ರುಚಿ ತುಂಬಿತ್ತೊ ಎನ್ನ ತನುವ. ॥೩೮೪॥

೧೩೪೪

ಶಿಶುವೆನ್ನಬಹುದೆ, ನಂಬಿಯಣ್ಣನ?
ಸೂಕ್ಷ್ಮನೆನಬಹುದೆ ರವಿಯನು? ಜಗವ ಬೆಳಗುವ.
ದೃಷ್ಟಿ ಕಿರಿದೆನ್ನಬಹುದೆ? ಸೃಷ್ಟಿಯನು ಕಾಣ್ಬ,
ಭಾವ ಕಿರಿದೆನ್ನಬಹುದೆ? ಬಳ್ಳ ಲಿಂಗವಾದುದನು.
ಕೂಡಲಸಂಗಮದೇವಯ್ಯಾ,
ಯುಗಜುಗವೆಲ್ಲವನೂ ಮೀರಿದ ಶರಣನ
ಕಿರಿದೆನಬಹುದೆ? ಚೆನ್ನಬಸವಣ್ಣನ? ॥೩೮೫॥

೧೩೪೫

ಶ್ವಾನ ಮಡಕೆಯ ನಿಳುಹಿ ಬೋನವನುಂಡು,
ಮಡಕೆಯನೇರಿಸಲರಿಯದಂತೆ
ನಾನು ಷಟ್‌ಸ್ಥಲವನೋದಿ ಏನ ಮಾಡುವೆನಯ್ಯಾ?
ಅವಗುಣಂಗಳೆನ್ನ ಬೆನ್ನ ಬಿಡದನ್ನಕ್ಕರ.
ಕಾರ್ಯವುಳ್ಳ ಕರ್ತ ಜಂಗಮಲಿಂಗದಲ್ಲಿ
ನಾನು ದಾಸೋಹವ ಮಾಡಲರಿಯದೆ ಕೆಟ್ಟೆನು,
ಕೂಡಲಸಂಗಮದೇವಾ. ॥೩೮೬॥

೧೩೪೬

ಶ್ರೀಗುರುಕರುಣಿಸಿ ಹಸ್ತಮಸ್ತಕಸಂಯೋಗದಿಂದ
ಪ್ರಾಣಲಿಂಗವನು ಕರತಳಾಮಳಕವಾಗಿ
ಕರಸ್ಥಲಕ್ಕೆ ತಂದುಕೊಟ್ಟನಾಗಿ,
ಒಳಗೆನ್ನದೆ ಹೊರಗೆನ್ನದೆ,
ಆ ಲಿಂಗದಲ್ಲಿ ನಚ್ಚಿ ಮಚ್ಚಿ ಹರುಷದೊಳೋಲಾಡಿದೆ,
ಅದೆಂತೆಂದಡೆ,
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ನಾದಬಿಂದುಕಲಾತೀತಂ ಗುರುಣಾ ಲಿಂಗಮುದ್ಭವಮ್'ಎಂದುದಾಗಿ
ಆ ಲಿಂಗವ ಪಡೆದು ಆನಂದಿಸುವೆ,
ಕೂಡಲಸಂಗಮದೇವಾ. ॥೩೮೭॥

೧೩೪೭

ಶ್ರೀವಿಭೂತಿಯ ಬಿಟ್ಟು
ತಪಸ್ಸು ಮಾಡಿದಡೆ ಆ ತಪಃಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು
ದೀಕ್ಷೆಯ ಕೊಂಡಡೆ ಆ ದೀಕ್ಷೆ ಬಯಲು,
ಶ್ರೀವಿಭೂತಿಯ ಬಿಟ್ಟು
ಮಂತ್ರಗಳ ಸಾಧಿಸಿದಡೆ ಆ ಮಂತ್ರಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು

ಯಜ್ಞಂಗಳ ಸಾಧಿಸಿದಡೆ ಆ ಯಜ್ಞಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು
ದೇವತಾರ್ಚನೆಯ ಮಾಡಿದಡೆ ಆ ದೇವತಾರ್ಚನೆ ಬಯಲು,
ಶ್ರೀವಿಭೂತಿಯ ಬಿಟ್ಟು
ವಿದ್ಯವ ಸಾಧಿಸಿದಡೆ ಆ ವಿದ್ಯಾಸಿದ್ಧಿ ಬಯಲು.
ಹಲವು ಕಾಲ ಕೊಂದ ಸೂನೆಗಾರನ
ಕೈಯ್ಯ ಕತ್ತಿಯಾದಡೇನು
ಪರುಷ ಮುಟ್ಟಲು ಹೊನ್ನಾಗದೇ ಅಯ್ಯಾ?
ಲಲಾಟದಲ್ಲಿ ವಿಭೂತಿಯ ಧರಿಸಲ್ಕೆ,
ಪಾಪಂಗಳು ಬೆಂದು ಹೋಗದಿಹವೇ
ಕೂಡಲಸಂಗಮದೇವಾ? ॥೩೮೮॥

೧೩೪೮

ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು,
ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ಇಂತೀ ಪಂಚೇಂದ್ರಿಯಂಗಳಲ್ಲಿ ಬ್ರಹ್ಮಚಾರಿಯಾಗಿ,
ಕೂಡಲಸಂಗಮದೇವರಲ್ಲಿ ಎನ್ನನಾಗುಮಾಡಲಿಕೆ
ಬ್ರಹ್ಮಚಾರಿಯಾದರು, ಪ್ರಭುದೇವರು ॥೩೮೯॥

೧೩೪೯

ಸಂಜೆಯ ಮಂಜಿನ ಕಪ್ಪು ಅಂಜಿದಡೆ
ಶಂಕೆ ತದ್ರೂಪವಾಗಿನಿಂದಿತ್ತು.
ತನ್ನ ಭಾವದ ನಟನೆ ನಡೆವನ್ನಕ್ಕ ನಡೆಯಿತ್ತು,
ಅದು ನಿಂದಲ್ಲಿಯೇ ನಿಂದಿತ್ತು. ಅದರಂತುವನರಿದಡೆ
ಹಿಂದೆ ಹುಸಿ, ಮುಂದೆ ಕೂಡಲಸಂಗಮದೇವನ ನಿಲವು ತಾನೆ. ॥೩೯೦॥

೧೩೫೦

ಸಂಸಾರವೆಂಬಡವಿಯಲ್ಲಿ ಹುಲಿಯುಂಟು, ಕರಡಿಯುಂಟು.
ಶರಣನಂಜನಂಜ, ಮಹಾಧೀರ ಶರಣನಂಜನಂಜ,
ಕೂಡಲಸಂಗನ ಶರಣಂಗೆ ನಿರ್ಭಯ. ॥೫೯೧॥

೧೩೫೧

ಸಂಸಾರಸರ್ಪನ ಹೇಳಿಗೆಯ ಬಿಡಿಸಲು ಬಾರದು,
ಬಿಟ್ಟಡೆ ಕಟ್ಟಲು ಬಾರದು ನೋಡಾ.
ಬಿಡಿಸುವ ಬೆಡಗಿನ್ನೆಂತೊ!
ಕಾಮಕ್ರೋಧಲೋಭಮೋಹಮದಮತ್ಸರವೆಂಬ
ವಿಷದ ಹಲ್ಲಿಂಗಾವುದು ಗಾರುಡವಯ್ಯಾ,
ಮಹಾದಾನಿ ಕೂಡಲಸಂಗಮದೇವಾ. ॥೫೯೨॥

೧೩೫೨

ಸಕಲಕ್ರಿಯೆಗಳಿಗಿದು ಕವಚ,
ಸಕಲವಶ್ಯಕ್ಕಿದು ಶುಭತಿಲಕ,
ಸಕಲಸಂಪದಕ್ಕೆ ತಾಣವಿದು,
ಅಘಟಿತ ಘಟಿತವೆನಿಸುವ ಅನುಪಮ ತ್ರಿಪುಂಡ್ರ.
ಅಣುಮಾತ್ರ ವಿಭೂತಿಯ ಪಣೆಯೊಳಿಡೆ
ಎಣಿಕೆಯಿಲ್ಲದ ಭವಪಾಶ ಪರಿವುದು.
ತ್ರಿಣಯ ನೀನೊಲಿದು ಧರಿಸಿದೆಯೆಂದೆನೆ,
ಆನು ಧರಿಸಿ ಬದುಕಿದೆ ಕೂಡಲಸಂಗಯ್ಯಾ. ॥೫೯೩॥

೧೩೫೩

ಸತಿಪುರುಷರಿಬ್ಬರೂ
ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೆ ಮಾಟ,
ಕೂಡಲಸಂಗಮದೇವರ ಕೂಡುವ ಕೂಟ. ॥೫೯೪॥

೧೩೫೪

ಸತ್ಯಮುಕ್ತಿಯ ಕಳೆಯ ನೋಡಾ,
ನಿತ್ಯತತ್ವದ ಇರವ ನೋಡಾ,
ಮೂರೊಂದಾದ ಆರೂಢನ ನೋಡಾ,
ಕೂಡಲಸಂಗಮದೇವರಲ್ಲಿ ತದ್ಗತನಾಗಿಪ್ಪ
ಮರುಳಶಂಕರದೇವರ ನಿಲವ
ಪ್ರಭು ಸಿದ್ಧರಾಮಯ್ಯದೇವರಿಂದ ಕಂಡು ಬದುಕಿದೆನು. ॥೩೯೫॥

೧೩೫೫

ಸದಾಚಾರವ ಕಂಡು, ಲಾಂಛನಪಕ್ಷವನಾ[ಡಿ]ದವರಿಗೆ,
ಇಹದೊಳು ಪರದೊಳು ಗತಿಯಿಲ್ಲ, ಕಾಣಿರೋ.
ಮಣ್ಣೆತ್ತಾದಡೇನು, ತನ್ನೆತ್ತು ಗೆಲಬೇಕೆಂಬುದಕ್ಕೊಲಿವ
ನಮ್ಮ ಕೂಡಲಸಂಗಯ್ಯ. ॥೩೯೬॥

೧೩೫೬

ಸಬಳದ ತುದಿಯಲ್ಲಿ ಕಟ್ಟಿದ ಗಂಟೆಯಂತೆ,
ಮಾತು ಲಿಂಗಾ ಲಿಂಗಾ ಎನುತ್ತ
ಮೊನೆ ಇರಿವಂತೆ ಬೇಡವಯ್ಯಾ, ಹುಸಿ.
ಮಾತಿನಲ್ಲಿ ದಿಟ, ಮನದಲ್ಲಿ ಸಟೆ ಬೇಡವಯ್ಯಾ.
ಮನ ವಚನ ಕಾಯ ಒಂದಾಗದಿದ್ದರೆ
ಕೂಡಲಸಂಗಯ್ಯನೆಂತೊಲಿವನಯ್ಯಾ? ॥೩೯೭॥

೧೩೫೭

ಸಮತೆ ಸನ್ಮತದಿಂದ ನಿಜಗುಣಕಾರಣದಿಂದ
ಸತ್ವರಜಸ್ತಮದ ಕ್ರೋಧವಳಿಯದನ್ನಕ್ಕರ
ಅನುಭಾವವೆಲ್ಲಿಯದೊ?
ಆತ್ಮಸ್ತುತಿ, ಪರನಿಂದೆ, ಅಸಹ್ಯ, ಅನೃತ, [ಕು]ತರ್ಕ
ಉಡುಗದನ್ನಕ್ಕರ ಅನುಭಾವವೆಲ್ಲಿಯದೊ?
ಅರಿಷಡ್ವರ್ಗ ದಶವಾಯುಗಳ ವಿಕಳ ಅಪಾನ ಬಿಡದನ್ನಕ್ಕರ

ಅನುಭಾವವೆಲ್ಲಿಯದೊ?
ಮದ ಮತ್ಸರ ವೈತಾಳ ಸಂವಾದವಲ್ಲದೆ
ಅನುಭಾವವೆಲ್ಲಿಯದೊ?
ಸಮತೆ, ಸಜ್ಜನಿಕೆ, ಸಮಯಾಚಾರದ ನಿಜಪದವು
ದುರಾಚಾರಿಗಳಿಗಳವಡುವುದೆ?
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಅನುಭಾವವೆಲ್ಲರಿಗೆಲ್ಲಿಯದೊ? ॥೩೯೮॥

೧೩೫೮

ಸಮಯವಿರುದ್ಧಕಂಜಿ ವಿನಯವ ನುಡಿವೆ,
ಕೊಂದಡೆ ಕೊಲ್ಲು, ಕಾಯ್ವಡೆ ಕಾಯಿ.
ಎನ್ನವರೆಂದು ಮನ ಹಿಡಿಯದು,
ಕೂಡಲಸಂಗಮದೇವಾ. ॥೩೯೯॥

೧೩೫೯

ಸಮರತಿ ಸಮಸಂಧಾನದ ಸಂಗಸುಖವು
ನಿನ್ನಿಂದಲೆನಗೆ ಸಾಧ್ಯವಾಯಿತ್ತಲ್ಲದೆ,
ಎನಗೆ ತೋರಿದಪರಾರು ಹೇಳಾ ಲಿಂಗೈಕ್ಯದ ಹೊಲಬ?
ಕೂಡಲಸಂಗಮದೇವರ ಶರಣ ಪ್ರಭುದೇವರಲ್ಲಿ
ನೀನೆನ್ನನಿರಿಸದನ್ನಕ್ಕರ, ನಾನು ಬಲ್ಲನೆ ಹೇಳಾ. ॥೪೦೦॥

೧೩೬೦

ಸಮುದ್ರಕ್ಕೆ ಚಂದ್ರಮನ ಬರವೆ ಜೀವಾಳವಯ್ಯಾ,
ಬತ್ತಿದ ಕೆರೆಯ ಕಮಲಕ್ಕೆ ಉದಕವೆ ಜೀವಾಳವಯ್ಯಾ,
ಚಕೋರಂಗೆ ಚಂದ್ರಮನ ಬರವೆ ಜೀವಾಳವಯ್ಯಾ.
ಕೂಡಲಸಂಗಮದೇವಾ,
ಎನಗೆ ನಿಮ್ಮ ಶರಣರ ಬರವೆ ಜೀವಾಳವಯ್ಯಾ. ॥೪೦೧॥

೧೩೬೧

ಸಯದಾನ ಸವೆಯಿತ್ತೆಂದು ಬೆದರಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಪಡಿಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ
ಮನವಳುಕಿ ಬೆದರಿದೆನಾದಡೆ ನಿಮ್ಮ ಭಕ್ತರಿಗೆ ಸಲ್ಲೆನು,
ಒಡವೆ ಸವೆದಡೆ ಒಡಲನೆ ಸಲಿಸುವೆನು.
ಕಡೆಮುಟ್ಟ ಪೂರೈಸದಿದ್ದೆನಾದಡೆ
ಮಡಿವಾಳ ಮಾಚಿತಂದೆಯ ಪಾದಸಾಕ್ಷಿಯಾಗಿ
ಕೂಡಲಸಂಗಮದೇವರಿಗೆ ದೂರವಹೆನು. ॥೪೦೨॥

೧೩೬೨

ಸರ್ವಾವಧಾನಿ ಸಮಯಪ್ರಸಾದಿ ನೋಡಯ್ಯಾ,
ಲಿಂಗಾರ್ಪಿತದಲ್ಲಿ ಸರ್ವಾವಧಾನಿ ನೋಡಯ್ಯಾ,
ಅಯ್ಯಾ, ಅನಾಹತಂಗಳ ಮುನ್ನವೆ ಇರಲೀಯ,
ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೪೦೩॥

೧೩೬೩

ಸಾಕಾರ ನಿರಾಕಾರದೊಳಗೆ
ನಿರವಯಾಂಗನಾಗಿ ಸುಳಿದು,
ಭಕ್ತರ ಭವವ ಹರಿಯಲೆಂದು ಬಂದ
ಜಂಗಮದ ಪರಿಯ ನೋಡಾ.
ಉಣಲುಡಲು ಬಂದವನಲ್ಲ ಪ್ರಭುದೇವರು,
ತ್ರಿವಿಧದಾಸೆ ಮುನ್ನವೆಯಿಲ್ಲ, ಪ್ರಭುದೇವರಿಗೆ.
ಭಕ್ತನೆಂಬ ತನ್ನಂಗವ ತನ್ನೊಳೈಕ್ಯವ ಮಾಡಿಕೊಂಡು,
ನಿರವಯವಾಗ ಬಂದ ನಿರವಯನಯ್ಯಾ,
ಕೂಡಲಸಂಗಮದೇವರಲ್ಲಿ ಪ್ರಭುದೇವರು. ॥೪೦೪॥

೧೩೬೪

ಸಾಕಾರ ಸಂಗನಲ್ಲಿ ನಿರಾಕಾರವಿಲ್ಲೆಂದು
ನಿರಾಕಾರ ಸಂಗನ[ನ]ರಸಿ ತೊಳಲಿ ಬಳಲಿದೆನಯ್ಯಾ.
ನಿಶ್ಚಿಂತ ನಿಜಭಜನೆ ನೆಲೆಗೊಳ್ಳದೆನಗೆ,
ಭ್ರಾಂತು ಭ್ರಮೆಯಿಲ್ಲದಂತೆ ಎಂದಪ್ಪುದೋ ಎನಗೆ
ಕೂಡಲಸಂಗಮದೇವಾ, ಕೇಳಯ್ಯಾ. ॥೪೦೫॥

೧೩೬೫

ಸುಖವಾದಡುಂಡು,
ದುಃಖ ಬಂದಲ್ಲಿ ಬಳಲಿದಡಹುದೆ?
ತುಯ್ಯಲೆಂದಡುಂಡು,
ಹುಯ್ಯಲೆಂದ[ಡೋಡಿದೊ]ಡಹುದೆ?
ಕೇಳಯ್ಯಾ ಕೂಡಲಸಂಗಮದೇವಯ್ಯಾ
ನೀ ಮಾಡಿದ ಮಾಟಕ್ಕಾಡಿದಡಹುದೆ? ॥೪೦೬॥

೧೩೬೬

ಸೂತ್ರಧಾರಿ ಮನದ ಮೈಲಿಗೆಯ
ಕಳೆಯಬಂದನಯ್ಯಾ ಮಡಿವಾಳನು.
ಎನ್ನ ಕಾಯದ ಮೈಲಿಗೆಯ ತಂದು ತನ್ನ ಮುಂದೆ ಇರಿಸಿದಡೆ
ಸಮತೆಯೆಂಬ ಕೂಪತೋಹಿನಲ್ಲಿ ಅದ್ದಿ, ಕಟ್ಟಿ ಹಿಳಿದನಯ್ಯಾ.
ಪಂಚೇಂದ್ರಿಯವರ್ಗಂಗಳ ಜ್ಞಾನವೆಂಬ ನಿರ್ಮಲಜಲದಲ್ಲಿ
ಅಲುಬಿ ಸೆಳೆದನಯ್ಯಾ.
ರವಿಶಶಿಶಿಖಿಯ ತೇಜದಲ್ಲಿ ಆರಿಸಿದನು,
ಚತುರ್ದಶ ಷೋಡಶವೆಂಬ ಘಳಿಗೆಯ ಮಾಡಿದನು.
ಸಮಾಧಾನವೆಂಬ ಅಡ್ಡೆಯ ಮೇಲಿರಿಸಿ ಸಮಗುಣವೆಂಬ
ಕೊಡತಿಯಲ್ಲಿ ಘಟ್ಟಿಸಿದನು.
ಹರಿಯಿತ್ತಯ್ಯಾ ಸೆರಗು ಮೂರಾಗಿ.
ಆ ಮೂರರಿವೆಯ ಕೊಟ್ಟನಯ್ಯಾ, ಎನ್ನ ಕೈಯಲ್ಲಿ,
ಆ ಅರಿವೆಯ ಗುರುವಿಂಗೊಂದ ಕೊಟ್ಟೆನು,

ಲಿಂಗಕ್ಕೊಂದ ಕೊಟ್ಟೆನು, ಜಂಗಮಕ್ಕೊಂದ ಕೊಟ್ಟೆನು.
ಎನಗೆ ಕೊಟ್ಟ ಮೂರರಿವೆಯನೂ ಒಂದುಮಾಡಿ
ಹೊದೆದುಕೊಂಡು ನಿಶ್ಚಿಂತನಾಗಿ,
ಮಡಿವಾಳನ ಕೃಪೆಯಿಂದಲಾನು ಬದುಕಿದೆನು
ಕಾಣಾ, ಕೂಡಲಸಂಗಮದೇವಾ. ॥೪೦೭॥

೧೩೬೭

ಸ್ಥೂಲತನುವೆಂಬ ಭಾಂಡದಲ್ಲಿ ಸರ್ವಾಚಾರವೆಂಬ ಸಯದಾನವ ತುಂಬಿದೆ.
ತುಂಬಲೊಡನೆ ಅಗ್ನಿಯಿಲ್ಲದ ಮುನ್ನ ಪಾಕವಾಯಿತ್ತು,
ಮೇಲು ಸಾಧನವಿಲ್ಲದ ಮುನ್ನ ರುಚಿ ಪಕ್ವವಾಯಿತ್ತು.
ಅದನು ಸೂಕ್ಷ್ಮತನುವೆಂಬ ಭಾಂಡದಲ್ಲಿ ಬರಿಕೆಯ್ದು,
ಕಾರಣತನುವಿನಲ್ಲಿ ಕುಳ್ಳಿರ್ದು ಊಡೆಹೆನೆಂದನುಮಾಡಲು,
ಪ್ರಕೃತಿಯಳಿದು ಒಂದೆ ಭಾಂಡವಾದುದ ಕಂಡು,
ಉಣಲೊಲ್ಲದೆ ಅನ್ಯರಿಗಿಕ್ಕದೆ,
ಎನ್ನದೆನ್ನದೆ, ಸಯದಾನಂಗಳ ತೆಗೆದುಕೊಳ್ಳದೆ,
ಬೀಸರವೋಗದೆ, ಒಂದರೊಳಗೊಂದಿತ್ತೆನ್ನದೆ
ಉಂಡು ಸುಖಿಯಾದೆನಯ್ಯಾ,
ಕೂಡಲಸಂಗಮದೇವಾ. ॥೪೦೮॥

೧೩೬೮

ಹಗಲಾಯಿತ್ತು [ಹೊತ್ತು] ಹೋಗದು,
ಇರುಳಾಯಿತ್ತು ನಿದ್ರೆಬಾರದು,
ಉಳಿದವರ ಮಾತು ಸಾಗದು,
ಕೂಡಲಸಂಗಯ್ಯನಲ್ಲದೆ ಒಲ್ಲದು ಮನ. ॥೪೦೯॥

೧೩೬೯

ಹದಿನಾರಿದ್ದಡೆ ಎಂಟಮಾಡುವ ಸಂಗಯ್ಯದೇವರು,
ಎಂಟಿದ್ದಡೆ ನಾಲ್ಕಮಾಡುವ ಸಂಗಯ್ಯದೇವರು,
ನಾಲ್ಕಿದ್ದಡೆ ಎರಡಮಾಡುವ ಸಂಗಯ್ಯದೇವರು,

ಎರಡಿದ್ದಡೆ ಒಂದಮಾಡುವ ಸಂಗಯ್ಯದೇವರು,
ಆ ಒಂದ ಇಲ್ಲವೆಯ ಮಾಡುವ ಸಂಗಯ್ಯದೇವರು,
ತಿರಿಕನ ಶೋಭಿತನ ಮಾಡುವ ಸಂಗಯ್ಯದೇವರು,
ತಿರಿ [ತಿ]ನಹೋದಡೆ ಹುಟ್ಟದೆನಿಸುವ ಸಂಗಯ್ಯದೇವರು.
ಇದಾವುದಕ್ಕೂ ಸೆಡೆಯದಿದ್ದಡೆ
ಕೂಡಲಸಂಗಮದೇವರು ತನ್ನಂತೆ ಮಾಡುವ. ॥೪೧೦॥

೧೩೭೦

ಹಮ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು,
ಏನ ಮಾಡಿದಡೇನಯ್ಯಾ, ಎನ್ನಲ್ಲಿ ದಿಟವಿಲ್ಲದನ್ನಕ್ಕರ?
ಏನ ಹಮ್ಮಿದಡೇನಯ್ಯಾ, ಎನ್ನಲ್ಲಿ ದಿಟವಿಲ್ಲದನ್ನಕ್ಕರ?
ಎನ್ನ ಪುಣ್ಯದ ಫಲ, ಕೂಡಲಸಂಗಮದೇವಾ,
ಬಾಯಿನದುಂಡೆಗೆ ತೋಯನಟ್ಟಂತಾಯಿತ್ತು. ॥೪೧೧॥

೧೩೭೧

ಹರನ ಭಜಿಸುವುದು,
ಮನಮುಟ್ಟಿ ಭಜಿಸಿದೆಯಾದಡೆ ತನ್ನ ಕಾರ್ಯ ಘಟ್ಟಿ.
ಅಲ್ಲದಿರ್ದಡೆ ತಾಪತ್ರಯ ಬೆನ್ನಟ್ಟಿ ಮುಟ್ಟಿ ಒತ್ತಿ ಮುರಿದೊಯ್ವುದು,
ವಿಧಿ ಹೆಡಗಯ್ಯ ಕಟ್ಟ ಕಟ್ಟುವುದು.
ಕೂಡಲಸಂಗನ ಶರಣರ ದೃಷ್ಟಿಯವನ ಮೇಲೆ ಬಿದ್ದವ ಜಗಜಟ್ಟಿ. ॥೪೧೨॥

೧೩೭೨

ಹರ-ಶಕ್ತಿಗಳಲ್ಲಿ ಹುಟ್ಟಿದ ಬೆನಕ ಭೈರವ ಷಣ್ಮುಖರ
ಮಹಾಹರನ ಮಕ್ಕಳೆಂಬ ಪಾತಕ ನೀ ಕೇಳೊ.
ಹರಿಹರನು ಒಂದೆಂಬ ಶಿವದ್ರೋಹಿ ನೀ ಕೇಳೊ.
ಹರಿ ಸಹಿತಾರರಿಂದತ್ತ ಅಜಾತನಚರಿತ್ರ ಅಪ್ರತಿಮಮಹಿಮ
ಕೂಡಲಸಂಗಮದೇವನೊಬ್ಬನೆ ಕಾಣಿ ಭೋ. ॥೪೧೩॥

೧೩೭೩
ಹರಿಯ ಬೇಡುವಡೆ ಅವಗೆ ಬಲೀಂದ್ರ ದಾನವನಿಕ್ಕಿದನು,
ಬ್ರಹ್ಮನ ಬೇಡುವಡೆ ಅವಗೆ ಶಿರವಿಲ್ಲ,
ಬೌದ್ಧನ ಬೇಡುವಡೆ ಅವಗೆ ಬುದ್ಧಿ ಸಮನಿಸದು,
ಜಿನನ ಬೇಡುವಡೆ ಅವಗೆ ಉಡಲಿಲ್ಲ,
ಬೆನಕನ ಬೇಡುವಡೆ ಅವಗೆ ಕೋಡು ಮುರಿಯಿತ್ತು,
ಭೈರವನ ಬೇಡುವಡೆ ಅವ ಉಟ್ಟುದನಿಕ್ಕಿ ಆಡುತ್ತಿರ್ದನು.
ಅಭಯಂಕರ ಜಗಕ್ಕೆಲ್ಲ!
ಜಗದಾನಿಯ ಬೇಡುವೆನು ಕೂಡಲಸಂಗಯ್ಯನ. ॥೪೧೪॥

೧೩೭೪
ಹಸಿದಳುವ ಶಿಶುವಿಂಗೆ ತಾಯಿ ಮೊಲೆಯ ಕೊಟ್ಟಡೆ,
ಆ ಶಿಶು ಜೀವಿಸದಿಪ್ಪುದೆ ಹೇಳಾ. ಅಯ್ಯಾ?
ಪ್ರಾಣವಲ್ಲಭನ ಅಗಲಿಕೆಯಿಂದ ಪ್ರಾಣವಿಯೋಗವಾಗಿಹ
ಹೆಂಗೂಸಿಂಗೆ ಆ ಪ್ರಾಣವಲ್ಲಭ ಬಂದಡೆ
ವಿರಹ ಸಂತವಿಸದಿಪ್ಪುದೆ ಹೇಳಾ? ಅಯ್ಯಾ.
ಕೂಡಲಸಂಗಮದೇವರು ಸಾಕ್ಷಿಯಾಗಿ
ಪ್ರಭುವೆನ್ನ ಮನೆಗೆ ಬಂದಡೆ ಎನ್ನ ಬಯಕೆ ಕೈಸಾರಿ
ಚೆನ್ನಬಸವಣ್ಣನ ಕರುಣದ ಕಂದನಾಗಿ
ಉಳಿದೆನು ಕಾಣಾ, ಮಡಿವಾಳಯ್ಯಾ. ॥೪೧೫॥

೧೩೭೫
ಹಸುವ ಕೊಂದಾತನು ನಮ್ಮ ಮಾದಾರ ಚೆನ್ನಯ್ಯ.
ಶಿಶುವೇಧೆಗಾರನು ನಮ್ಮ ಡೋಹರ ಕಕ್ಕಯ್ಯ.
ಪಾಪಕರ್ಮಿ ನಮ್ಮ ಮಡಿವಾಳ ಮಾಚಯ್ಯ.
ಇವರಿಬ್ಬರ ಮೂವರ ಕೂಡಿಕೊಂಡಿಪ್ಪ,
ಕೊಟ್ಟುದ ಬೇಡನು ನಮ್ಮ ಕೂಡಲಸಂಗಯ್ಯ. ॥೪೧೬॥

೧೩೭೬

ಹಸ್ತಕಡಗ ಕೈಗಧಿಕ ನೋಡಾ;
ಕೊಡಲಹುದು ಕೊಳಲಾಗದು,
ಬಾಹುಬಳೆ ತೋಳಿಂಗಧಿಕ ನೋಡಾ;
ಪರವಧುವನಪ್ಪಲಾಗದು,
ಕರ್ಣಕುಂಡಲ ಕಿವಿಗಧಿಕ ನೋಡಾ;
ಶಿವನಿಂದೆಯ ಕೇಳಲಾಗದು,
ಕಂಠಮಾಲೆ ಕೊರಳಿಂಗಧಿಕ ನೋಡಾ;
ಅನ್ಯದೈವಕ್ಕೆ ತಲೆವಾಗಲಾಗದು.
ಆಗಳೂ ನಿಮ್ಮುವ ನೆನೆದು,
ಕೂಡಲಸಂಗಮದೇವಾ,
ನಿಮ್ಮುವನೆ ಪೂಜಿಸಿ ಸದಾ ಸನ್ನಿಹಿತನಾಗಿಪ್ಪನು
ಲಿಂಗಶಿಖಾಮಣಿಯಯ್ಯಾ. ॥೪೧೭॥

೧೩೭೭

ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ
ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನೆ ರುದ್ರನು ನೋಡಾ.
ಅದೆಂತೆಂದಡೆ;
'ಹಸ್ತೇ ಚೋರಸಿ ಕಂಠೇ ವಾ ಮಸ್ತಕೇ ವಾಪಿ ಧಾರಯೇತ್
ಮುಚ್ಯತೇ ಸರ್ವಪಾಪೇಭ್ಯಃ ಸ ರುದ್ರೋ ನಾತ್ರ ಸಂಶಯಃ'
ಇಂತೆಂದುದಾಗಿ,
ಸಮಸ್ತ ಪಾಪಂಗಳ ಕಳೆದು,
ಕೂಡಲಸಂಗಯ್ಯ ತನ್ನಂತೆ ಮಾಡುವನು. ॥೪೧೮॥

೧೩೭೮

ಹಳಿವವರ ಲೆಂಕ,
ಮತ್ಸರಿಸುವವರ ಡಿಂಗರಿಗ,
ಸಲೆಯಾಳಿಗೊಂಬವರ ತೊತ್ತಿನ ಮಗ.

ಜರಿದು [ಮತ್ಸರಿ]ಸಿ,
ಹೊಯ್ದು ಬೈದು ಅದ್ದಲಿಸಿ
ಬುದ್ಧಿಯ ಹೇಳುವ ಹಿರಿಯರಾದ
ಡೋಹರ ಕಕ್ಕಯ್ಯಗಳ ಪಾದರಕ್ಷೆಯ ಕಿರುಕುಣಿಕೆಯಲ್ಲಿ
ಎ[ನ್ನನ್ನಿ]ಡು ಕೂಡಲಸಂಗಮದೇವಾ. ॥೪೧೯॥

೧೩೭೯
ಹಾಡಿದಡೆನ್ನೊಡೆಯನ ಹಾಡುವೆ,
ಬೇಡಿದಡೆನ್ನೊಡೆಯನ ಬೇಡುವೆ,
ಒಡೆಯಂಗೊಡಲ ತೋರಿ ಎನ್ನ ಬಡತನವ ಬಿನ್ನೈಸುವೆ.
ಒಡೆಯ ಮಹಾದಾನಿ ಕೂಡಲಸಂಗಮದೇವಂಗೆ
ಸೆರಗೊಡ್ಡಿ ಬೇಡುವೆ. ॥೪೨೦॥

೧೩೮೦
ಹಾದರದ ಮಿಂಡನ ಹತ್ತಿರ ಮಡಗಿಕೊಂಡು,
ಮನೆಯ ಗಂಡನ ಒಲ್ಲೆನೆಂದಡೆ ಒಲಿವನೆ?
ತಾ ಶಿವಭಕ್ತನಾಗಿ, ತನ್ನಂಗದ ಮೇಲೆ ಲಿಂಗವಿದ್ದು
ಮತ್ತೆ ಭಿನ್ನಶೈವಕ್ಕೆರಗುವುದೆ ಹಾದರ,
ಕೂಡಲಸಂಗಯ್ಯನು ಅವರ ಮೂಗ ಕೊಯ್ಯದೆ ಮಾಣ್ಬನೆ? ॥೪೨೧॥

೧೩೮೧
ಹಾವು, ಕಿಚ್ಚ ಮುಟ್ಟಿಹ ಶಿಶುವೆಂದು
ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ ಇಪ್ಪ ನೋಡಾ,
ಎನ್ನೊಡನೊಡನೆ ಕೂಡಲಸಂಗಮದೇವ ಕಾಯ್ದುಕೊಂಡಿಪ್ಪನಾಗಿ. ॥೪೨೨॥

೧೩೮೨
ಹಾವು ಹದ್ದು ಕಾಗೆ ಗೂಗೆ ಅನಂತಕಾಲ ಬದುಕವೆ?
ಬೇಡವೋ ಮಾನವಾ, ಲೇಸೆನಿಸಿಕೊಂಡು ಬದುಕು,
ಓ ಮಾನವಾ ಶಿವಭಕ್ತನಾಗಿ.

ಅದೆಂತೆಂದಡೆ;
'ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ
ನಾಜಕಲ್ಪಸಹಸ್ರಾಣಿ ಭಕ್ತಿಹೀನಸ್ಯ ಶಾಂಕರಿ' ಎಂದುದಾಗಿ,
ನಮ್ಮ ಕೂಡಲಸಂಗಮದೇವರ ಭಕ್ತಿವಿಡಿದು,
ಐದು ದಿವಸವಾದಡೂ ಬದುಕಿದಡೆ ಸಾಲದೆ? ॥೪೨೩॥

೧೩೮೩

ಹಿಂದೆ ಎನ್ನ ಗುರುವನುಮಿಷಂಗೆ ನೀನು
ಲಿಂಗವ ಕೊಟ್ಟೆನೆಂಬ ಸೂತಕ ಬೇಡ,
ಅಂದು ಅನುಮಿಷ ನಿನ್ನ ಕೈಯಲ್ಲಿ ಕೊಂಡನೆಂಬ ಸಂಕಲ್ಪ ಬೇಡ,
ಹಿಂದು ಮುಂದೆಂಬ ಸಂದಳಿದು ನಿಂದಲ್ಲಿ ಭರಿತನಾದ ಬಳಿಕ
ಕೊಡಲುಂಟೆ, ಕೊಳಲುಂಟೆ ಹೇಳಾ!
ಹಿಡಿದಡೆ ಸಿಕ್ಕದು, ಕೊಡುವಡೆ ಹೋಗದು,
ಎಡೆಯಾಟದ ಜೀವಪರಿಯೆಂತಯ್ಯಾ?
ಲಿಂಗವ ಹೋಗಾಡಿದನೆಂಬ ನಿಂದೆಯ ಪ್ರಮಥರು ನುಡಿವುತ್ತಿರಲು
ಲಿಂಗೈಕ್ಯವೆಂತಪ್ಪುದು ಹೇಳಾ!
ನಿಮ್ಮ ಪ್ರಮಥರು ಮೆಚ್ಚಿ ಅಹುದೆಂದು ಒಡಂಬಟ್ಟು,
ಎನ್ನ ಮನ ಮನ ತಾರ್ಕಣೆಯಪ್ಪಂತೆ
ನಿಮ್ಮಲ್ಲೈಕ್ಯವ ಮಾಡಾ, ಕೂಡಲಸಂಗಮದೇವಾ. ॥೪೨೪॥

೧೩೮೪

ಹಿಂದೆ ಸಂದ ಭಕ್ತರಂತಾನೊಂದೊಂದ ಬೇಡಿ ಕಾಡುವನಲ್ಲ,
ಹಿಂದೆ ಬೆನ್ನಲಿ ಬಂದು ಬಳಲಿದೆ.
ಇನ್ನೊಂದ ಬೇಡೆನಂಜದಿರಂಜದಿರಯ್ಯಾ,
ಆಶಾಪಾಶ ಎನ್ನಲ್ಲುಳ್ಳಡೆ ಕೂಡಲಸಂಗಾ ನಿಮ್ಮಾಣೆ. ॥೪೨೫॥

೧೩೮೫

ಹುತ್ತವ ಕಂಡಲ್ಲಿ ಹಾವಾಗಿ,
ನೀರ ಕಂಡಲ್ಲಿ [ಒಳ್ಳೆ]ಯಾದವನ ಮೆಚ್ಚುವನೆ?

ಬಾರದ ಭವಂಗಳಲ್ಲಿ ಬರಿಸುವನಲ್ಲದೆ ಮಚ್ಚುವನೆ?
ಅಘೋರನರಕವನುಣಿಸುವನಲ್ಲದೆ, ಮಚ್ಚುವನೆ?
ಅಟಮಟದ ಭಕ್ತರ ಕಂಡಡೆ, ಕೋಟಲೆಗೊಳಿಸುವ
ಕೂಡಲಸಂಗಮದೇವ. ॥೪೭೬॥

೧೩೮೬
ಹೆಂಗೂಸಿನಂಗವ ನೋಡಿರೆ ಪುರಾತನರು,
ಬಾಲತನದಂಗವ ನೋಡಿರೆ ಪುರಾತನರು,
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ ಲಿಂಗವಂತರು.
ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರವೋಗದೆಯಿಪ್ಪ ಇರವು
ಕೂಡಲಸಂಗಮದೇವರಲ್ಲಿ ನಮ್ಮ
ಮಹದೇವಿಯಕ್ಕಂಗಾಯಿತ್ತು. ॥೪೭೭॥

೧೩೮೭
ಹೊನ್ನಿನ ಆಪ್ಯಾಯನಕ್ಕೆ ಬೋಳಾದವನಲ್ಲ,
ಮಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ,
ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ.
ಕೂಡಲಸಂಗಮದೇವರಲ್ಲಿ ಎನಗಾರೂ ಇಲ್ಲವೆಂದು
ಬೋಳಾದನೆನ್ನ ಪ್ರಭುದೇವರು. ॥೪೭೮॥

೧೩೮೮
ಹೊಯಿದವರೆನ್ನ ಹೊರೆದವರೆಂಬೆ,
ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ,
ಆಳಿಗೊಂಡವರೆನ್ನ ಆಳ್ದವರೆಂಬೆ,
ಜರಿದವರೆನ್ನ ಜನ್ಮಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ
ಕೂಡಲಸಂಗಮದೇವಾ. ॥೪೭೯॥

❖❖

ಅನುಬಂಧ

೧. ಪ್ರಕ್ಷಿಪ್ತ ವಚನಗಳು
೨. ಕಠಿಣಪದಕೋಶ
೩. ಷಟ್‌ಸ್ಥಲ ವಚನಗಳ ಅಕಾರಾದಿ
೪. ಆಕರಗ್ರಂಥಗಳು

೧. ಪ್ರಕ್ಷಿಪ್ತ ವಚನಗಳು

೧೩೮೯

ಅಂಗಲಿಂಗ ಸಂಗಸುಖ ಸಾರಾಯದನುಭಾವ
ಲಿಂಗವಂತಂಗಲ್ಲದೆ ಸಾಧ್ಯವಾಗದು ನೋಡಾ.
ಏಕಲಿಂಗಪರಿಗ್ರಾಹಕನಾದ ಬಳಿಕ,
ಆ ಲಿಂಗನಿಷ್ಠೆ ಗಟ್ಟಿಗೊಂಡು,
ಸ್ವಯಲಿಂಗಾರ್ಚನೋಪಚಾರ ಅರ್ಪಿತ ಪ್ರಸಾದಭೋಗಿಯಾಗಿ,
ವೀರಶೈವಸಂಪನ್ನನೆನಿಸಿ ಲಿಂಗವಂತನಾದ ಬಳಿಕ
ತನ್ನಂಗಲಿಂಗಸಂಬಂಧಕ್ಕನ್ಯವಾದ ಜಡಭೌತಿಕ ಪ್ರತಿಷ್ಠೆಯನುಳ್ಳ
ಭವಿಶೈವದೈವಕ್ಷೇತ್ರತೀರ್ಥಂಗಳಾದಿಯಾದ ಹಲವು ಲಿಂಗಾರ್ಚನೆಯ
ಮನದಲ್ಲಿ ನೆನೆ[ಯ]ಲಿಲ್ಲ,
ಮಾಡಲೆಂತೂ ಬಾರದು.
ಇಷ್ಟೂ ಗುಣವಳವಟ್ಟಿತ್ತಾದಡೆ
ಆತನೀಗ ಏಕಲಿಂಗನಿಷ್ಠಾಚಾರಯುಕ್ತನಾದ ವೀರಮಾಹೇಶ್ವರನು.
ಇವರೊಳಗೆ ಅನುಸರಿಸಿಕೊಂಡು ನಡೆದನಾದಡೆ
ಗುರುಲಿಂಗಜಂಗಮಪಾದೋದಕಪ್ರಸಾದ ಸದ್ಭಕ್ತಿಯುಕ್ತವಾದ
ವೀರಶೈವ ಷಡುಸ್ಥಲಕ್ಕೆ ಹೊರಗಾ[ಗೆ] ನರಕಕ್ಕಿಳಿವನು ಕಾಣಾ,
ಕೂಡಲಸಂಗಮದೇವಾ. ॥೧॥

೧೩೯೦

ಅರ್ಘವಣಿಯವಸರ ಸದಾಚಾರ ಸತ್ಕ್ರೀಯೆಂಬ ಭೂಮಿಯ ಮೇಲೆ
ಸರ್ವಶುದ್ಧವೆಂಬ ಗೋಮಯವ ತಂದು,
ವಿನಯಾರ್ಥವೆಂಬ ಉದಕದಿಂದ ಸಮ್ಮಾರ್ಜನೆಯಂ ಮಾಡಿ
ತನುವಿನ ಅವಗುಣಂಗಳಂ ಹುಡಿಗುಟ್ಟಿ ರಂಗವಾಲೆಯನಿಕ್ಕಿ,
ಅಕ್ಷಯವೆಂಬ ಬಿಂದಿಗೆಯಲ್ಲಿ ಪರಮಾನಂದವೆಂಬ ಅರ್ಘವಣಿಯ ತುಂಬಿ,
ಸಮರಸದಿಂದ ಮಜ್ಜನಕ್ಕೆರೆಯಲು ಹೃದಯಕಮಲವೆಂಬ ಪುಷ್ಪಮಂ ಸಲಿಸಿ,
ಸೌಖ್ಯತರಶಾಂತಿಯೆಂಬಗಂಧವನಿಟ್ಟು,
ಅಕ್ಷಯವೆಂಬ ಅಕ್ಷತೆಯನಳವಡಿಸಿ,
ಸದ್ಭಾವವೆಂಬ ಧೂಪಮಂ ಬೀಸಿ,
ಸುಜ್ಞಾನವೆಂಬ ನಿವಾಳಿಯನೆತ್ತಿ
ನಿತ್ಯನಿರಂಜನವೆಂಬ ನೀರಾಜನಮಂ ಬೆಳಗಲು,
ಬ್ರಹ್ಮನಾದವೆಂಬ ಘಂಟೆಯಂ ಬಾರಿಸಲು,
ನಿತ್ಯಲಿಂಗಾರ್ಚನೆಗೆಡೆಮಾಡಲು,
ಇದರ ವರ್ಮಕರ್ಮಸ್ಥಿತಿಯನರಿದು
ಶಿವಲಿಂಗಾರ್ಚನೆಯ ಮಾಡಬಲ್ಲಡೆ,
ಮರ್ತ್ಯದಲ್ಲಿ ನಾನಾರನೂ ಕಾಣೆನು. ಕೂಡಲಸಂಗಮದೇವಾ,
ಪ್ರಭು ಶಿವಲಿಂಗಾರ್ಚನೆಯಂ ಮಾಡಲು, ನಾನೆ ಪರಿಚಾರಕನು. ॥೨॥

೧೩೯೧

ಇಷ್ಟಲಿಂಗವೊಂದು, ಪ್ರಾಣಲಿಂಗ[ವೊಂದು, ಭಾವಲಿಂಗ]ವೊಂದೆಂಬ
ಮಿಟ್ಟಿಯ ಭಂಡರ, ಅವರ ಮಾತ ಕೇಳಲಾಗದು.
ಅಂಗಳದೊಳಗೊಬ್ಬ ಗಂಡ, ಮನೆಯೊಳಗೊಬ್ಬ ಗಂಡ,
ಹಿತ್ತಿಲೊಳಗೊಬ್ಬ ಗಂಡನೆಂಬ ಸತಿಯರ
ಲೋಕದ ಮಾನವರು ಮೆಟ್ಟಿ ಮೂಗಕೊಯ್ಯದೆ ಮಾಣ್ಬರೆ, ಅಯ್ಯಾ?
ಲಿಂಗತ್ರಯವೆಂದು ತೋರಿದವರಾರೊ?
'ಲಿಂಗಮೇಕಂ ಪರಂ ನಾಸ್ತಿ' ಎಂದು ಸದ್ಗುರುಸ್ವಾಮಿ ಅರುಹಿದನಾಗಿ.
ಷಟ್ತ್ರಿಂಶತ್ತತ್ವಕ್ಕೆ ಆಲಯಮಪ್ಪಂತಹ ಮಹಾಘನಲಿಂಗದ ಬೆಳಗು
ಕರಸ್ಥಲದಲ್ಲಿ, ಮನಸ್ಥಲದಲ್ಲಿ, [ಭಾವಸ್ಥಲದಲ್ಲಿ] ವೇದ್ಯವಾದ ಬಳಿಕ
ಸರ್ವಾಂಗಲಿಂಗ, ಕೂಡಲಸಂಗಯ್ಯಾ ನಿಮ್ಮ ಶರಣಂಗೆ. ॥೩॥

೧೩೯೨

ಇಹದ ಪೂರ್ವವ ಜರೆದು, ಪರದ ಪೂರ್ವವನರಿದು,
ಗುರುಕಾರುಣ್ಯವ ಪಡೆದು, ಅಂತರ್ಬಾಹ್ಯದ ಭವಿಯ ತೊರೆದು
ಭಕ್ತಿಪರಾಯಣರಾಗಿ ನಿಂದುದೆ ಲಿಂಗದ ನಿಜದಂಗ.
ಅದೆಂತೆಂದಡೆ;
'ತ್ರಿಗುಣಂ ಪಂಚಕಂ ಚೈವ ಚತ್ವಾರಿ ಷಡ್ವಿಧೈವ ಚ
ಸಘಾತಂ ವ್ಯಸನಂ ಚೈವ ಇತ್ಯಾದಿ ಭವಿಮಿಶ್ರಿತಮ್'
ಎಂದುದಾಗಿ, ಅಂತರಂಗದ ಭವಿಯನು ಹಿಂಗಿ,
'ಅನೃತಮಸ್ಥಿರಂ ವಾಕ್ಯಂ ವಂಚನಂ ಪಙ್ತಿಭೇದನಮ್
ಔದಾಸೀನಂ ನಿರ್ದಯತ್ವಂ ಷಡ್ವಿಧಂ ಭವಿಮಿಶ್ರಿತಮ್'
ಎಂಬೀ ಮಾನವರಂಗದ ಭವಿಯನು ಕಳೆದು,
'ಅರ್ಚನಾದಿ ಕ್ರಿಯಾಕಾಲೇ ಪ್ರಚ್ಛನ್ನಂ ಪಟಮುತ್ತಮಮ್
ಪಾಪೀ ಕೋಪೀ ಪರಿಭ್ರಷ್ಟೋ ನಾಸ್ತಿಕೋ ವ್ರತದೂಷಕಃ'
'ದುರ್ಜನಶ್ಚ ದುರಾಚಾರೀ ದುರ್ಮುಖಶ್ಚಾಪ್ಯದೀಕ್ಷಿತಃ
ಪ್ರಮಾದಾದ್ದೃಶ್ಯತೇ ಯೇನ ತಸ್ಯ ಪೂಜಾ ತು ನಿಷ್ಫಲಮ್"
ಎಂಬೀ ಬಹಿರಂಗದ ಭವಿಯನ್ನು ತೊಲಗಿಸಿ,
ಇಂತೀ ತ್ರಿವಿಧಭವಿಯನು ದೂರಮಾಡಿ,
ಶಿವಭಕ್ತಿಯೆ ಅಂಗವಾದ ಲಿಂಗೈಕ್ಯ ಲಿಂಗಪೂಜಕರಿಗೆ
ಪೂರ್ವವರ್ಣಾಶ್ರಮಾದಿ ಸೂತಕವಿಲ್ಲ, ಕೂಡಲಸಂಗಯ್ಯಾ. ॥೪॥

೧೩೯೩

ಎನ್ನ ಬಂದ ಭವಂಗಳನು ಪರಿಹರಿಸಿ, ಎನಗೆ ಭಕ್ತಿಘನವೆತ್ತಿ ತೋರಿ,
ಎನ್ನ ಹೊಂದಿದ ಶೈವಮಾರ್ಗಂಗಳನತಿಗಳೆದು,
ನಿಜವೀರಶೈವಾಚಾರವನರುಹಿ ತೋರಿ,
ಎನ್ನ ಕರಸ್ಥಲದ ಸಂಗಮನಾಥನಲ್ಲಿ ಮಾಡುವ
ಜಪ ಧ್ಯಾನ ಅರ್ಚನೆ ಉಪಚರಿಯ ಅರ್ಪಿತ
ಪ್ರಸಾದಭೋಗಂಗಳಲ್ಲಿ ಸಂದಿಸಿದ ಶೈವಕರ್ಮವ ಕಳೆದು,
ಭವಮಾಲೆಯ ಹರಿದು, ಭಕ್ತಿಮಾಲೆಯನಿತ್ತು,
ಭವಜ್ಞಾನವ ಕೆಡೆಮೆಟ್ಟಿ, ಭಕ್ತಿಜ್ಞಾನವ ಗಟ್ಟಿಗೊಳಿಸಿ,

ಭವಮಾಟಕೂಟವ ಬಿಡಿಸಿ, ಭಕ್ತಿಮಾಟಕೂಟವ ಹಿಡಿಸಿ,
ಭವಶೇಷವನುತ್ತರಿಸಿ, ಭಕ್ತಿಶೇಷವನಿತ್ತು,
ಎನಗೆ, ಎನ್ನ ಬಳಿವಿಡಿದು ಬಂದ ಶರಣಗಣಂಗಳೆಲ್ಲರಿಗೆ
ಶಿವಸದಾಚಾರದ ಘನವನರುಹಿ ತೋರಿ,
ಮರ್ತ್ಯಲೋಕದಲ್ಲಿ ಸತ್ಯಸದಾಚಾರವನು ಹರಿಸಿ,
ಶಿವಭಕ್ತಿಯನುದ್ಧರಿಸಿ, ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣ ಎನ್ನನಾಗುಮಾಡಿ ಉಳುಹಿದನಾಗಿ
ಇನ್ನೆನಗೆ ಭವವಿಲ್ಲದೆ, ಬಂಧನವಿಲ್ಲದೆ,
ಭಕ್ತಿ ಮಾಟಕೂಟದ ಗೊತ್ತಿನಲ್ಲಿರ್ದು
ನಾನು ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕುವೆನು. ॥೫॥

೧೩೪೪

[ಎ]ನ್ನಿಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ
ಷೋಡಶೋಪಚಾರಂಗಳ ಮಾಡುವೆನು. ಅವಾವುವಯ್ಯಾ ಎಂದಡೆ;
'ಜಲಗಂಧಾಕ್ಷತಂ ಚೈವ ಪುಷ್ಪಂ ಚ ಧೂಪದೀಪಯೋ
ನೈವೇದ್ಯಂ ತಾಂಬೂಲಂ ಚೈವ ಏತೇ ಚಾ ಷ್ಟವಿಧಾರ್ಚನಮ್'
ಇನ್ನು ಷೋಡಶೋಪಚಾರಗಳು;
'ಸುಖತಲ್ಪಂ ಸುವಸ್ತ್ರಂ ಚ ಆಭರಣಾನುಲೇಪನಮ್
ಛತ್ರಚಾಮರವ್ಯಜನಂ ದರ್ಪಣಂ ನಾದವಾದ್ಯಯೋಃ
ನೃತ್ಯಂ ಗೀತಂ ತಥಾ ಸ್ತೋತ್ರಂ ಪುಷ್ಪಾಂಜಲೀ ಪ್ರಣಾಮಕಮ್
ಪ್ರದಕ್ಷಿಣಂ ಚ ಮೇ ಯುಕ್ತಂ ಷೋಡಶಂ ಚೋಪಚಾರಕಮ್
ಈ ಕ್ರಮವಿಡಿದು ಇಷ್ಟಲಿಂಗಾರ್ಚನೆಯ ಮಾಡಿ
ನಿಮ್ಮಲ್ಲಿ ಕೂಡುವೆನು, ಕೂಡಲಸಂಗಮದೇವಾ. ॥೬॥

೧೩೪೫

ಎಲ್ಲಕ್ಕಿಂತ ಪಾಪಿಕಷ್ಟ, ಪಾಪಿಗಿಂದ ಪಾರದ್ವಾರಿಕಷ್ಟ;
ಪಾರದ್ವಾರಿಗಿಂದ ವೇಶಿಕಷ್ಟ, ವೇಶಿಗಿಂದ ದಾಸಿ ಕಷ್ಟ,
ದಾಸಿಗಿಂದ ದರಿದ್ರಕಷ್ಟ, ದ್ರರಿದ್ರಗಿಂದ ವೇದವ್ಯ ಕಷ್ಟ,

ವೇದವ್ಯಗಿಂದ ಮಾಂಸಾಹಾರಿ ಕಷ್ಟ,
ಮಾಂಸಾಹಾರಿಗಿಂದ ಪ್ರಾಣಘಾತಕ ಕಷ್ಟ,
ಪ್ರಾಣಘಾತಿಗಿಂದ ಅಪುನಿ ಕಷ್ಟ,
ಅಪುನಿಗಿಂದ ಭಂಗಿಸುರೆ ಕಷ್ಟ,
ಭಂಗಿಸುರೆಗಿಂದ ಹುಸಿ ಕಷ್ಟ,
ಹುಸಿಗಿಂದ ಭವಿಕಷ್ಟ, ಭವಿಗಿಂದ ತ್ರಿವಿಧಮಲಕಷ್ಟ,
ಎನ್ನತ್ತ ತೋರದಿರು ಕೂಡಲಸಂಗಮದೇವಾ ॥೭॥

೧೩೯೬

ಒಡವೆ ಭಂಡಾರ ಕಡವರ ದ್ರವ್ಯವ ಬಡ್ಡಿ ಬೆವಹಾರಕ್ಕೆ ಕೊಟ್ಟು,
ಮನೆಯ ಗೋಂಟಿನಲ್ಲಿ ಹೊಯಿದುಕೊಂಡಿದ್ದೆನಾದಡೆ
ಅದು ಎನ್ನರ್ಥವಲ್ಲ, ಅನರ್ಥವೆಂದೆಂಬೆ.
ಸಂಗಮದೇವಾ, ನೀನು ಜಂಗಮರೂಪಾಗಿ ಬಂದು
ಆ ಧನವನು ನೀನು ಬಲ್ಲಂತೆ ಎನ್ನ ಮುಂದೆ ಸೂರೆಗೊಳುತಿರ್ದಡೆ,
ನಾನು ಬೇಕು ಬೇಡೆಂದು ಮನದಲ್ಲಿ ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ.
ಕಾಮನೇಮವೆಂಬ ಸಿಂಧುಬಲ್ಲಾಳನ ವಧುವ
ಸರ್ವಭುವನದೊಡೆಯ ಸಂಗಮದೇವರು ಬೇಡುವಂತಲ್ಲ.
ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆಯ ಚೆಲುವೆ,
ಆಕೆಯನು ಸಂಗಮದೇವಾ, ನೀನು ಜಂಗಮರೂಪಾಗಿ ಬಂದು
ಎನ್ನ ಮುಂದೆ ಸಂಗವ ಮಾಡುತ್ತಿರಲು
ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ.
ಪ್ರತ್ಯಕ್ಷವಾಗಿ ಸಿರಿಯಾಳಸೆಟ್ಟಿ ಚಂಗಳವ್ವೆಯ ಮನೆಗೆ ಬಂದು
ಅವರ ಮಗನ ಬೇಡುವಂತಲ್ಲ.
ಸಂಗಮದೇವಾ, ನಿಮ್ಮ ಹೆಸರ ಚಿಕ್ಕಸಂಗಯ್ಯನಿದ್ದಾನೆ.
ನೀನು ಜಂಗಮರೂಪಾಗಿ ಬಂದು, ಆತನ ಹಿಡಿದು
ಎನ್ನ ಮುಂದೆ ಹೆಡಗುಡಿಯ ಕಟ್ಟಿ, ಚಿನಿಖಂಡವ ಮಾಡಿ
ಬಾಣಸವ ಮಾಡುವಲ್ಲಿ,

ಎನ್ನ ಉದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ನಾನು ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ.
ಇಂತೀ ತ್ರಿವಿಧವೂ ಹೊರಗಣವು.
ಎನ್ನ ನೋವಿನೊಳಗಲ್ಲ, ಎನ್ನ ಬೇನೆಯೊಳಗಲ್ಲ.
ಇನ್ನು ನಾನಿದೇನೆ,
ಕದ್ದ ಕಳ್ಳನ ಕಟ್ಟುವಂತೆ ಕಟ್ಟಿ,
ನೀನು ಜಂಗಮರೂಪಾಗಿ ಬಂದು
ಎನ್ನಂಗದ ಮೇಲೆ ಶಸ್ತ್ರವನಿಕ್ಕಿ ನೋಡು,
ಬಸಿದ ಶೂಲಪ್ರಾಪ್ತಿಯ ಮಾಡಿ ನೋಡು,
ಸೂಜಿಯ ಮೊನೆಯಂತಿರ್ದ ಶೂಲದ ಮೇಲಿಕ್ಕಿ ನೋಡು,
ನವಖಂಡವ ಮಾಡಿ ಕಡಿಕಡಿದು ನೋಡು,
ಆ ಶೂಲವ್ಯೆದ್ಯೆದು ಮುಖವಾಗಿ ಹಾಯುವಾಗ ಹರಿತಿನಿಸಿ ನೋಡು.
ಈ ರೀತಿಯಲ್ಲಿ ಎನ್ನ ಭಂಗಬಡಿಸಿ ನೋಡಿದಡೆಯೂ
ಲಿಂಗಾರ್ಚನೆಯ ಮಾಡುವುದ ಬಿಡೆ,
ಜಂಗಮದಾಸೋಹವ ಮಾಡುವುದ ಬಿಡೆ,
ಪಾದತೀರ್ಥಪ್ರಸಾದವ ಕೊಂಬುದ ಬಿಡೆ.
ಇಂತೀ ತ್ರಿವಿಧಕ್ಕೆ ರೋಷವ ಮಾಡಿಬಿಟ್ಟೆನಾದಡೆ,
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಇಷ್ಟರೊಳಗೆ ತಪ್ಪುಳ್ಳಡೆ ಮೂದಲಿಸಿ ಮೂಗಕೊಯಿ,
ಕೂಡಲಸಂಗಮದೇವಾ. ॥೮॥

೧೩೯೭

ಕಕ್ಷೆ ಕರಸ್ಥಲ ಉತ್ತಮಾಂಗ ಉರಸೆಜ್ಜೆ ಅಂಗಸೋಂಕು
ಅಮಳೋಕ್ಯವೆಂಬುದ ನಾನು ಮನದಲ್ಲಿ ಅರಿಯದಂದು,
ಭಾವ ನಿರ್ಭಾವವೆಂಬುದನರಿದು
ಆಯತ ಸ್ವಾಯತವ ಮಾಡಲ್ಕೆ ಬಂದ ಪದಾರ್ಥವು
ಲಿಂಗಮುಖದಲ್ಲಿ ಅರ್ಪಿತವಾಗದೆಂದು,
ಜಂಗಮಮುಖದಲ್ಲಿ ಬಂದ ಪದಾರ್ಥವಲ್ಲದೆ ಅರ್ಪಿತವಾಗದೆಂದು,
ಆ ಜಂಗಮವನೆನ್ನ ಮನದಲ್ಲಿ ನೆನೆದುಕೊಂಡು

ಆ ಜಂಗಮದಾಸೋಹಕ್ಕೆ ಎನ್ನ ಮನವು ವೇದ್ಯವಾದಲ್ಲಿ
ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂದರಿದಲ್ಲಿ,
ಲಿಂಗವೂ ಹುಸಿ, ಜಂಗಮವೂ ಹುಸಿಯೆಂದು
ಪರವಾದಿ ಬಿಜ್ಜಳನು ಸಂ[ವಾ]ದಿಸುವಲ್ಲಿ,
ಅವರನು ಆದಿಗಣೇಶ್ವರನೆಂದರಿಯದೆ ತರ್ಕಿಸುವಲ್ಲಿ,
ಅವನೆನ್ನ ಭಕ್ತಿಗೆ ಒರೆಗಲ್ಲಾದಲ್ಲಿ,
ಆತನು ಭಕ್ತಿಯ ಪಥವಲ್ಲೆಂಬುದ, ನಾನಹುದೆಂಬುದ–
ಈ ಎರಡನೂ ನೀನು ಸೂತ್ರಧಾರಿಯಾಗಿ ಆಡಿಸುವಲ್ಲಿ,
ಶಿವಭಕ್ತಿಯ ಮುಖ ಮುಸುಕು ತೆಗೆವಲ್ಲಿ,
ಮೂವತ್ತಾರು ಕೊಂಡೆಯವ ಪರಿಹರಿಸಿ
ಎಂಬತ್ತೆಂಟು ಪವಾಡವ ಮೆರೆವಲ್ಲಿ,
ಮುನ್ನೂರರುವತ್ತು ಸತ್ತ ಪ್ರಾಣವನೆತ್ತುವಲ್ಲಿ
ಅಂದು ನೀನೇನಾಗಿರ್ದೆ ಹೇಳಾ,
ಕೂಡಲಸಂಗಮದೇವಾ. ॥೯॥

೧೩೫೮

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗಂಗಳು
ಭವರಾಟಳದಲ್ಲಿ ತಿರುಗುತ್ತಿಪ್ಪಲ್ಲಿ
ಅನಂತ ಕೋಟ್ಯನುಕೋಟಿ ಯುಗಂಗಳು ಮಡಿದುಹೋದವು,
ಅನಂತ ಜಲಪ್ರಳಯಂಗಳು ಸರಿದು ಹೋದವು.
ಹದಿನಾಲ್ಕು ಲೋಕಂಗಳೆಂಬ ಅನಂತಕೋಟಿ ಬ್ರಹ್ಮಾಂಡಗಳೆಲ್ಲ
ಲಯವಾಗಿ ಹೋದವು.
ಇದರೊಳಗೆ ಆವ ಲೋಕದಲ್ಲಿ ಆವ ಯುಗದಲ್ಲಿ
ಪ್ರಾಣಲಿಂಗ, ಲಿಂಗಪ್ರಾಣವೆಂಬ ಭೇದವನರುಹಿದವರಾರು ಹೇಳಾ?
ಗಂಗೆ ಗೌರೀವಲ್ಲಭರು ಮೊದಲಾದ
ಅನಂತಕೋಟಿ ರುದ್ರಾದಿಗಳೆಲ್ಲರೂ
ಪ್ರಾಣಲಿಂಗಸಂಬಂಧದ ಹೊಲಬನರಿಯದೆ
ಅಣಿಮಾದಿ ಚತುರ್ವಿಧ ಫಲಪ್ರಾಪ್ತಿಗೆ ಒಳಗಾದರು.
ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟುಹೋಹುದೆಂದು

ಪರಮಪುರುಷಾರ್ಥಕಾರಣವಾಗಿ ಮರ್ತ್ಯದಲ್ಲಿಅವತರಿಸಿ,
ಗುರುಲಿಂಗಜಂಗಮಪಾದೋದಕಪ್ರಸಾದವೆಂಬ
ಪಂಚಾಚಾರಸ್ಥಲವ ನೆಲೆಗೊಳಿಸಿ,
ಷಡುಸ್ಥಲವೆಂಬ ಮಹಾನುಭಾವಮಂ
ಕರತಳಾಮಳಕವಾಗಿ ಸ್ಥಿತಗೊಳಿಸಿ,
ಪ್ರಾಣಲಿಂಗ, ಲಿಂಗಪ್ರಾಣವೆಂಬ ಭೇದವನೆನಗೆ ತಿಳುಹಿ,
ಎನ್ನ ಭ್ರಾಂತಿಸೂತಕವ ಬಿಡಿಸಿ,
ಲಿಂಗೈಕ್ಯವೆಂಬುದನೆನಗೆ ತೋರಿದೆಯಾಗಿ
ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರುವಡೆದೆನು.
ಕೂಡಲಸಂಗಮದೇವರು ಸಾಕ್ಷಿಯಾಗಿ
ಎನಗೆ ನೀನು ಪರಮಾರಾಧ್ಯ ಕಾಣಾ, ಚೆನ್ನಬಸವಣ್ಣಾ. ॥೧೦॥

೧೩೯

ಕೇಳಿ ಭೋ! ಕೇಳಿ ಭೋ! ವಿಪ್ರರೆಲ್ಲರೂ
ಬ್ರಹ್ಮಾಂಡಪುರಾಣದಲ್ಲಿ ನಿಮ್ಮ ಬ್ರಹ್ಮ ನುಡಿದ ವಾಕ್ಯವು;
'ವಿಪ್ರಾಣಾಂ ವೇದವಿದುಷಾಂ ವೇದಾಂತಜ್ಞಾನವೇದಿನಾಮ್
ಸಿತೇನ ಭಸ್ಮನಾ ಕಾರ್ಯಂ ತ್ರಿಪುಂಡ್ರಮಿತಿ ಪದ್ಮಭೂಃ' ಎಂದುದಾಗಿ
ನಂಬಿ ಧರಿಸಿ ಭೋ! ವಿಪ್ರರೆಲ್ಲರೂ ಶ್ರೀಮಹಾಭಸಿತವ.
ಇದ ನಂಬಿಯೂ ನಂಬದೆ ಅಜ್ಞಾನದಿಂದ ಶ್ರೀಮಹಾಭಸಿತವ ಬಿಟ್ಟು,
ಮಣ್ಣು ಮಸಿ ಮರದ ರಸಂಗಳ
ಮೋಹದಿಂದ ನಿಮ್ಮ ಹಣೆಯಲ್ಲಿ ಬರೆದುಕೊಂಡಿರಾದಡೆ
ನಮ್ಮ ಕೂಡಲಸಂಗಮದೇವರಲ್ಲಿ,
ನಿಮ್ಮ ಅಧಿದೈವವೇ ನಿಮ್ಮ ಕಿವಿ ಮೂಗ ಕೊಯಿದು,
ಇಟ್ಟಿಗೆಯಲೊರಸಿ, ಕನ್ನಡಿಯ ತೋರಿ,
ನಡೆಸಿ ನರಕದಲ್ಲಿ ಕೆಡಹದೆ ಬಿಡ ಕಾಣಿ ಭೋ!
ಇದನರಿದು ಮರೆಯದೆ ಧರಿಸಿ ಭೋ!
ಕೆಡಬೇಡ, ಕೆಡಬೇಡ,
ಮಹತ್ತಪ್ಪ ಶ್ರೀಮಹಾಭಸಿತವ ಧರಿಸಿ ಮುಕ್ತರಾಗಿರೇ. ॥೧೧॥

೧೪೦೦

ಗುರುಲಿಂಗಜಂಗಮದ ಘನಪ್ರಸಾದವ ಪಡಕೊಂಡು,
ಅಂಗವಿಕಾರಕ್ಕೆ ಭುಂಜಿಸುವ ಅವಿಚಾರಿಗಳ ವಿವರವೆಂತೆಂದಡೆ:
ಆದಿಸ್ವಾದಿ ಅನಾಹತ ಹೃದಯ ದೀನಸ್ಥಿತಿಯ ತಿಳಿಯದೆ,
ಆದಿ ಅನಾದಿಯ ಭೇದಿಸಲರಿಯದೆ,
ಆದಿಪ್ರಸಿದ್ಧವಾದ ಪರಮಗುರುವಿನಲ್ಲಿ
ಸಮಯದ ಹಂಗಿಂಗೆ ಗಡಣಿಸಿಕೊಂಡು, ಬಲಭಿಚಾರಿಗಳು
ನುಗ್ಗಿಯ ಬೀಜ, ಮಾವಿನ ಬೀಜ, ದಂಟುದಡಿ
ಮೊದಲಾದ ನಾನಾ ಕಠಣಂಗಳನು
ಅಂಗವಿಕಾರಕ್ಕೆ ಭುಂಜಿಸುವ ಭಕ್ಷಿಸುವ ಭವಕರ್ಮಿಗಳು.
ಅಂಗವಿಕಾರಕ್ಕೆ ಭೂತನಂತೆ ಒಟ್ಟಿಕೊಂಡು,
ಕರಿ ಸೂಕರನಂತೆ ಅಗ್ನಿಯಲ್ಲಿ ಸುಡು ಎಂಬ ಲಿಂಗದ್ರೋಹಿಗೇಕೊ ಪ್ರಸಾದ?
ಅಂತಪ್ಪ ಪರಮಪಾತಕರಿಗೆ ಪಾದೋದಕ ಪ್ರಸಾದವ ಕೊಡಲಾಗದು.
ಇಂತಪ್ಪ ಪ್ರಸಾದದಿಂದೊಗೆದ ಕಠಣವನು ಅಗ್ನಿಯಲ್ಲಿ ದಗ್ಧವ ಮಾಡಲಾಗದು.
ಬೆಂಕಿಯಲ್ಲಿ ಸುಡು ಎಂಬುದಕ್ಕೆ ಕುರಿಯ ಹೋಮವೆ?
ಮಾತಂಗಿಯ ಮಕ್ಕಳ ಸಂತಾನವೆ?
ಸತ್ತರೆ ಸುಡಿಸಿಕೊಂಬ ಶ್ವಪಚ ಮಾತಂಗಿಯ
ಮಕ್ಕಳ ಸಂತಾನವನೇನೆಂಬೆನಯ್ಯಾ!
ಆ ಶಿವನ ಪ್ರಸಾದವ ಸುಡುವರೆ?
ಸತ್ತ ಹಾರುವನ ಅಗ್ನಿಯಲ್ಲಿ ಸುಡು ಎಂಬ ದ್ರೋಹಿಗೇಕೊ ಪ್ರಸಾದ?
ಅರಿಯದುದೆಲ್ಲ ಜ್ಞಾನದೊಳು ಅರಿದು,
ಅರುಹಿಸಿಕೊಂಡ ಬಳಿಕ ತಿಳಿದಾಚರಿಸುವುದು,
ಭಕ್ತಿಜ್ಞಾನವೈರಾಗ್ಯವಿಡಿದಾಚರಿಸುವುದೆ ಗುರುಭಕ್ತಿ.
ಇಂತಪ್ಪ ಗುರುಮಾರ್ಗಾಚಾರವಸಾಧ್ಯವೆಂಬವರಿಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ.
ಆ ಪ್ರಸಾದವಿಲ್ಲದವಂಗೆ ಪಂಚಾಚಾರವಿಲ್ಲ,
ಆ ಪಂಚಾಚಾರವಿಲ್ಲದವಂಗೆ ಪ್ರಸಾದವಿಲ್ಲ.
ಇಂತಪ್ಪ ಪ್ರಸಾದವಿಲ್ಲದವಂಗೆ ಯುಕ್ತಿಯೆಂಬುದು ಎಂದೆಂದಿಗೂ ಇಲ್ಲ.
ಅವಂಗೆ ಇಹವಿಲ್ಲ, ಪರಕ್ಕೆ ಸಲ್ಲನೆಂಬ ಗುರುವಚನವುಂಟು,
ಪ್ರಭುವೆ ನಿಮ್ಮಾಣೆ, ಕೂಡಲಸಂಗಮದೇವಾ. ॥೧೨॥

೧೪೦೧

ಜಗತ್ರಯದ ಹೊ[ಲೆ]ಯನೆಲ್ಲವನು ಉದಕ ಒಳಕೊಂಬುವುದು.
ಉದಕದ ಪೂರ್ವಾಶ್ರಯವ ಕಳೆವಡಾರಳವಲ್ಲ. ಅದೆಂತೆಂದಡೆ:
'ಯದಾ ಪೃಥ್ವೀ ಶ್ಮಶಾನಂ ಚ ತದಾ ಜಲಂ ನಿರ್ಮಲಿನಕಮ್
ಮಹಾಲಿಂಗಂ ತು ಪೂಜಾನಾಂ ವಿಶೇಷಂ ಪಾಕಂ ಭವೇತ್'
ಎಂದುದಾಗಿ. ಅದಕ್ಕೆ ಮತ್ತೆಯು;
'ಪ್ರಥಮಂ ಮಾಂಸತೋಯಾನಾಂ ದ್ವಿತೀಯಂ ಮಾಂಸಗೋರಸಃ
ತೃತೀಯಂ ಮಾಂಸನಾರೀಣಾಂ ಕಸ್ಯ ಶೀಲಂ ವಿಧೀಯತೇ' ಎಂದುದಾಗಿ,
ಯಥಾ ಉದಕದಿಂದಲಿ ಅಗ್ನಿಯಿಂದಲಿ
ಪಾಕವಾದ ದ್ರವ್ಯಪದಾರ್ಥಂಗಳೆಲ್ಲವು
ಜೀವಮಯವೆಂದು ಹೇಳುತಿರ್ದವಾಗಿ,
ಆ ದೋಷದಿಂದಲಾದ ಭೋಜನವನು
ಲಿಂಗಕ್ಕೆ ಸಮರ್ಪಿಸಲಾಗದು. ಅದೆಂತೆಂದಡೆ;
'ಭೂಮಿದ್ರವ್ಯಂ ಯಥಾ ಮಾಂಸಂ ಪ್ರಾಣಿದ್ರವ್ಯಂ ಯಥಾ ಮಧು
ಸರ್ವಭೂತಮಯಂ ಜೀವಂ ಜೀವಂ ಜೀವೇನ ಭಕ್ಷ್ಯತೇ' ಎಂದುದಾಗಿ
ಇಂಥ ಉದಕದ ಪೂರ್ವಾಶ್ರಯವು, ಬೋನದ ಪೂರ್ವಾಶ್ರಯವು,
ಹೇಗೆ ಹೋಹುದಯ್ಯಾ ಎಂದಡೆ:
ಉದಕದ ಪೂರ್ವಾಶ್ರಯವು
ಜಂಗಮದ ಪಾದತೀರ್ಥ ಮುಖದಿಂದ ಹೋಯಿತ್ತು,
ಬೋನದ ಪೂರ್ವಾಶ್ರಯವು
ಜಂಗಮ ಪ್ರಸಾದದ ಮುಖದಿಂದ ಹೋಯಿತ್ತು.
ಇದು ಕಾರಣ, ಈ ವರ್ಮ ಸಕೀಲವು
ಪ್ರಭುದೇವರ ಬಳಿಯ ಬಸವಣ್ಣನ ವಂಶಕ್ಕಲ್ಲದೆ
ಮತ್ತಾರಿಗೂ ಅಳವಡದು ಕಾಣಾ,
ಕೂಡಲಸಂಗಮದೇವಾ. ॥೧೩॥

೧೪೦೨

ಜನನಸೂತಕ, ಕುಲಸೂತಕ, ರಜಃಸೂತಕ,
ಎಂಜಲಸೂತಕ, ಪ್ರೇತಸೂತಕ

ಎಂಬಿವಾದಿಯಾದ ಸರ್ವಸೂತಕಂಗಳು
ಅಂಗಲಿಂಗ ಸಂಬಂಧಿಗಳಾದ
ಲಿಂಗಭಕ್ತರಿಗಿಲ್ಲ ನೋಡಾ, ಅದೆಂತೆಂದೊಡೆ:
'ಆದಿಬಿಂದುರ್ಭವೇದ್ಬೀಜಂ ಬೀಜಮಧ್ಯಸ್ಥಿತಂ ಕುಲಮ್
ಬೀಜಂ ನಾಸ್ತಿ ಕುಲಂ ನಾಸ್ತಿ ತಸ್ಮೈ ಶಿವಕುಲಂ ಭವೇತ್' ಎಂದುದಾಗಿ
ಪೂರ್ವಾಚಾರವನಳಿದು ಪುನರ್ಜಾತನಾಗಿ,
ಅಂಗದ ಮೇಲೆ ಲಿಂಗಸಾಹಿತ್ಯನಾದ ಭಕ್ತಂಗೆ
ಜನನಸೂತಕವೆಂಬುದೆ ಪಾತಕ ನೋಡಾ.
ಶಿವಭಕ್ತರಾದ ಬಳಿಕ ಭವಿನೇಮಸ್ತರ ಕಳೆದು
ಶಿವಕುಲವೆ ಕುಲವಾದ ಭಕ್ತರಿಗೆ ಕುಲಸೂತಕವೆಂಬುದೆ ಪಾತಕ ನೋಡಾ.
ಗುರುಪಾದತೀರ್ಥ, ಲಿಂಗಪಾದತೀರ್ಥ,
ಜಂಗಮಪಾದತೀರ್ಥ ಆದಿಯಾದ
ಲಿಂಗೋದಕ, ಪಾದೋದಕ, ಪ್ರಸಾದೋದಕ ಎಂಬ ತ್ರಿವಿಧೋದಕದಲ್ಲಿ
ಸರ್ವಪಾಕಪ್ರಯತ್ನ, ನಾನಾ ಕ್ರಿಯಾವಿಧಾನ, ಸ್ನಾನಪಾನಂಗಳಿಂದ
ಬಾಹ್ಯಾಭ್ಯಂತರಂ ಶುಚಿಯಾದ,
ಶುದ್ಧನಿರ್ಮಲದೇಹಿಯಾದ ಭಕ್ತಂಗೆ
ರಜಃಸೂತಕವೆಂಬುದೆ ಪಾತಕ ನೋಡಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಯುಕ್ತವಾದ ಸದಾಸನ್ನಹಿತ ಭಕ್ತಂಗೆ
ಎಂಜಲಸೂತಕವೆಂಬುದೆ ಪಾತಕ ನೋಡಾ.
ಗುರುವಿನಿಂ ಜನನ, ಚರಲಿಂಗದಿಂ ಸ್ಥಿತಿ,
ಪರಮಪಾವನ ಘನಮಹಾಲಿಂಗದೊಳೈಕ್ಯ. ಅದೆಂತೆಂದೊಡೆ;
'ಸದ್ಗುರೋಃ ಪಾಣಿಜಾತಸ್ಯ ಸ್ಥಿತೇ ಸದ್ಭಕ್ತಸಂಗಿನಾಮ್
ಲೀಯತೇ ಚ ಮಹಾಲಿಂಗೀ ವೀರಶೈವೋತ್ತಮೋತ್ತಮ' ಎಂದುದಾಗಿ,
ನಿಜಲಿಂಗೈಕ್ಯವಾದ ಸದ್ಭಕ್ತಂಗೆ
ಪ್ರೇತಸೂತಕವೆಂಬುದೆ ಪಾತಕ ನೋಡಾ.
ಇಂತೀ ಪಂಚಸೂತಕವನುಳ್ಳ ಪಾತಕಂಗಳ
ಪಂಚಾಚಾರಯುಕ್ತನಾದ ಸದ್ಭಕ್ತಂಗೆ ಕಲ್ಪಿಸುವ
ಪಂಚಮಹಾಪಾತಕರ ಅಘೋರ ನರಕದಲ್ಲಿಕ್ಕುವ
ಕೂಡಲಸಂಗಯ್ಯ. ॥೧೪॥

೧೪೦೩

ದೇವ ದೇವ ಮಹಾಪ್ರಸಾದ!
ಅವಧರಿಸು ದೇವಾ ಎನ್ನ ಬಿನ್ನಹವ:
ಕಾಯದ ಮಾಯದ ಸಡಗರದಲ್ಲಿ ಹುಟ್ಟಿಸಿದಿರಿ ಎನ್ನ,
ಅದು ನಿಮ್ಮ ಲೀಲಾವಿನೋದ.
ಆ ಕಾಯದ ಮಾಯದ ತಲೆಯ ಚಿವುಟಿ ಶ್ರೀಗುರುಕಾರುಣ್ಯವ ಮಾಡಿ
ಗುರುಲಿಂಗಜಂಗಮ ತ್ರಿವಿಧಭಕ್ತಿಯ ಘನವ ತೋರಿ
ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಿಸಿದಿರಿ,
ಅದು ನಿಮ್ಮ ಲೀಲಾವಿನೋದ.
ಪರವಾದಿ ಬಿಜ್ಜಳ ಒರೆಗಲ್ಲಾದಲ್ಲಿ
ಮುನ್ನೂರರುವತ್ತು ಸತ್ತ ಪ್ರಾಣವನೆತ್ತಿ,
ಮೂವತ್ತಾರು ಕೊಂಡೆಯರ ಪರಿಹರಿಸಿ,
ಎಂಬತ್ತೆಂಟು ಪವಾಡವ ಮೆರೆದಿರಿ,
ಅದು ನಿಮ್ಮ ಲೀಲಾವಿನೋದ.
ಎನ್ನ ಮನದ ಮಲಿನವ ತೊಳೆಯಲೆಂದು ಬಂದು,
ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡು,
ನಿಮ್ಮ ನಿಜ ಮಹಿಮೆಯನೆಲ್ಲಾ ಪ್ರಮಥರ ಮುಂದೆ ತೋರಿ,
ಎನ್ನ ಪಾವನವ ಮಾಡಿ,
ಷಡುಸ್ಥಲಮಂ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ,
ಎನ್ನ ನಿಮ್ಮಂತೆ ಮಾಡಿದಿರಿ,
ಅದು ನಿಮ್ಮ ಲೀಲಾವಿನೋದ.
ಕೂಡಲಸಂಗಮದೇವಾ,
ಎನ್ನ ವರ್ಮದ ಸಕೀಲವ ನೀವೆ ಬಲ್ಲಿರಾಗಿ
ಎನಗೊಮ್ಮೆ ತಿಳುಹಿಕೊಟ್ಟು ಎನ್ನನುಳುಹಿಕೊಳ್ಳಾ ಪ್ರಭುವೆ. ॥೧೫॥

೧೪೦೪

ದೇವರು ಕಾಮನ ಕೊಂದನೆಂಬರು,
ದೇವಂಗಿಬ್ಬರು ಹೆಂಡಿರುಂಟು.
ದೇವರು ಕಾಮನ ಕೊಂದುದಿಲ್ಲ ಕಾಣ ಭೋ!

ಕಾಮವೈರಿಗಳು, ಕಾಮನ ಕೊಂದ ಮೂವರಿತ್ತಲೈದಾರೆ–
ಕೂಡಲಸಂಗಯ್ಯನಲ್ಲಿ
ಶುಕನು, ಸೊನ್ನಲಿಗೆಯ ಸಿದ್ಧರಾಮಯ್ಯನು, ಹನುಮಂತನು. ॥೧೬॥

೧೪೦೫

ಲಿಂಗ ಜಂಗಮದ ಪ್ರಸಾದವಲ್ಲದೆ,
ಭೂತದ್ರವ್ಯವ ಮುಟ್ಟಬಾರದು,
ಶಿಷ್ಟೋದನವಲ್ಲದುದ ಕೊಳ್ಳಬಾರದು. ಅದೆಂತೆಂದಡೆ:
'ಶೂದ್ರಾನ್ನಂ ಸೂತಕಸ್ಯಾನ್ನಂ ನೈವೇದ್ಯಂ ಶ್ರಾದ್ಧಮೇವ ಚ।
ಪತಿತಾನ್ನಂ ಸಮೂಹಾನ್ನಂ ರಾಜಾನ್ನಂ ಚೈವ ವರ್ಜಯೇತ್'
ಎಂಬೀ ಮನುಸ್ಮೃತಿಯಲ್ಲಿ ಹೇಳುವ ಅನ್ನವಾವುವೆಂದೊಡೆ;
ಶಿವೋಪದೇಶವಿಲ್ಲದವರಲ್ಲಿಯ[ದು] ಶೂದ್ರಾನ್ನ,
ಹೊಲೆಗಳೆವುದಕ್ಕೆ ಮಾಡಿದು[ದು] ಸೂತಕಾನ್ನ,
ಸ್ಥಾವರನಿಮಿತ್ತವಾದು[ದು] ನೈವೇದ್ಯಾನ್ನ,
ಪಿತೃಕಾರ್ಯಕ್ಕಾದುದು ಶ್ರಾದ್ಧಾನ್ನ,
ಬಲಿಗೆ ಹಾಕಿದುದು ಪತಿತಾನ್ನ,
ಪರ್ವಕ್ಕೆ ಮಾಡಿದುದು ಸಮೂಹಾನ್ನ,
ಆವುದೊಂದು ಸಿರಿಗರ ಹೊಡೆದಲ್ಲಿ ಪಾಕಭೇದವಾಗಿ
ಟೊಂಬರಕ್ಕೆ ಬೇರೆ ಮಾಡಿದುದು ರಾಜಾನ್ನ.
ಇಂತೀ ಸಪ್ತವಿಧದನ್ನವ ಬಿಟ್ಟು
'ನ ಜಾತಿಭೇದೋ ಲಿಂಗಾರ್ಚೇ ಸರ್ವೇ ರುದ್ರಗಣಾಃ ಸ್ಮೃತಾಃ'
ಎಂಬುದನರಿದು, ಜಾತಿಭೇದವ ಮರೆದು,
ಶಿವಭಕ್ತರ ಮನೆಯ ಅನ್ನವ ಶಿವಪ್ರಸಾದವೆಂದು ಕೊಂಡು
ಸರ್ವ ಬವರವ ಜಯಸಿದರೆಂಬುದಕ್ಕೆ
ಬ್ರಹ್ಮಾಂಡಪುರಾಣೇ;
'ಆಧಿವ್ಯಾಧಿವಿನಾಶಾಯ ಚರೋಚ್ಛಿಷ್ಟಂ ತು ಸೇವಯೇತ್
ಮಾರ್ಗಾದಿಷು ಚ ಶೈವಾನಾಂ ಚ ಪುಣ್ಯತೀರ್ಥ ಸುದರ್ಶನಮ್'
ಎಂದುದಾಗಿ
ಶೈವಾದಿಗಳು ಜಂಗಮಪ್ರಸಾದವ ಕೊಂಡು ಮುಕ್ತರಾದರಲ್ಲದೆ,

ಜಂಗಮಪ್ರಸಾದದಲ್ಲಿ ವಿಶ್ವಾಸಹೀನರನೇನೆಂಬೆನಯ್ಯಾ
ಕೂಡಲಸಂಗಮದೇವಾ. ॥೧೭॥

೧೪೦೬

ವೇದಾಗಮಂಗಳು ಹೇಳಿದ ಹಾಗೆ ನಡೆವುದು!
ಹೇಳಿದಂತೆ ನುಡಿವುದು!
ಮೀರಿ ನಡೆಯಲಾಗದು!
ಮೀರಿ ನುಡಿಯಲಾಗದು!
ಮುಕ್ತಿಪದವೈದುವಾತ.
ಅಪಹಾಸ್ಯಕ್ಕೆ ಬಾರದೆ ಆಚಾರಮಾರ್ಗದಲ್ಲಿರಬಲ್ಲಡೆ
ಕೂಡಲಸಂಗಮದೇವನೀಗಲೆ ಒಲಿವ. ॥೧೮॥

೧೪೦೭

ಶ್ರೀಗುರು ತನ್ನ ಲಿಂಗವನೆ
ಅಂಗದ ಮೇಲೆ ಬಿಜಯಂಗೆಯ್ಸಿದನಾಗಿ,
ಆ ಲಿಂಗಕ್ಕೆ ನಾನು ಅಷ್ಟವಿಧಾರ್ಚನೆ,
ಷೋಡಶೋಪಚಾರಗಳ ಮಾಡಿ,
ಚತುರ್ವಿಧ ಫಲಪದಪುರುಷಾರ್ಥವ ಪಡೆದು,
ಆ ಪರಿಭವಕ್ಕೆ ಬರಲೊಲ್ಲದೆ,
ನಾನು ನಿಷ್ಕಳವೆಂಬ ಹೊಲದಲ್ಲಿ ಒಂದು ನಿಧಾನವ ಕಂಡೆ.
ಆ ನಿಧಾನದ ಹೆಸರಾವುದೆಂದಡೆ;
ತ್ರೈಲಿಂಗದ ಆದಿಮೂಲಾಂಕುರವೊಂದಾದ ಚರಲಿಂಗವೆಂದು.
ಆ ಚರಲಿಂಗದ ಪಾದಾಂಬುವ ತಂದೆನ್ನ
ಇಷ್ಟಲಿಂಗದ ಚತುರ್ವಿಧ ಫಲಪದಪುರುಷಾರ್ಥವೆಂಬ ಕರಂಗಳಂ ತೊಳೆವೆ.
ಅದೆಂತೆಂದಡೆ;
'ಸಾಲೋಕ್ಯಂ ಚ ತು ಸಾಮೀಪ್ಯಂ ಸಾರೂಪ್ಯಂ ಚ ಸಾಯುಜ್ಯತಾ
ತದುಪೇಕ್ಷಕಭಕ್ತಶ್ಚ ರೌರವಂ ನರಕಂ ವ್ರಜೇತ್' ಎಂದುದಾಗಿ,
ಆ ಚರಲಿಂಗದ ಪ್ರಸಾದವ
ತಂದೆನ್ನ ಇಷ್ಟಲಿಂಗದ ಜೀವಕಳೆಯ ಮಾಡುವೆ

ಅದೆಂತೆಂದಡೆ:
'ಸ್ವಯಂಪ್ರಕಾಶರೂಪಶ್ಚ ಜಂಗಮೋ ಹಿ ನಿಗದ್ಯತೇ'
ಮತ್ತಂ,
'ಜಂಗಮಸ್ಯ ಪದೋದಂ ಚ ಯುಕ್ತಂ ಲಿಂಗಾಭಿಷೇಚನೇ
ತತ್ಪ್ರಸಾದೋ ಮಹಾದೇವ ನೈವೇದ್ಯಂ ಮಂಗಲಂ ಪರಮ್' ಎಂದುದಾಗಿ,
ಆ ಲಿಂಗವೆ ಅಂಗ, ಅಂಗವೆ ಲಿಂಗ,
ಆ ಲಿಂಗವೆ ಪ್ರಾಣ,
ಆ ಪ್ರಾಣವೆ ಲಿಂಗವಾದುದು.
ಇದು ಚತುರ್ವಿಧಫಲಪದಮುರುಷಾರ್ಥವ ಮೀರಿದ ಘನವು.
ಕೂಡಲಸಂಗಮದೇವಯ್ಯಾ.
ಈ ದ್ವಯದ ಪರಿಯ ನಿಮ್ಮ ಶರಣರನೆ ಬಲ್ಲ. ॥೧೯॥

೧೪೦೮

ಸದ್ಭಕ್ತಂಗೆಯೂ ಜಂಗಮಕ್ಕೆಯೂ ಭಾಜನ ಬೇರೆಂಬ
ಶಾಸ್ತ್ರದ ಸದಗರು ನೀವು ಕೇಳಿರೋ.
ಭಕ್ತದೇಹಿಕ ದೇವನೆಂದು ಶ್ರುತಿ ಸಾರುತ್ತಿವೆ,
ಅರಿದು ಮರೆಯದಿರಿ,
ಮರವೆಯಿಂದ ಬ್ರಹ್ಮ ಶಿರವ ಹೋಗಾಡಿಕೊಂಡ,
ಮರವೆಯಿಂದ ದಕ್ಷ ಶಿರವ ನೀಗಿ ಕುರಿದಲೆಯಾದುದನರಿಯಿರೆ?
ಮರೆಯದೆ ವಿಚಾರಿಸಿ ನೋಡಿ, ಭಕ್ತಂಗೂ ಲಿಂಗಕ್ಕೂ ಭಿನ್ನವಿಲ್ಲ.
ಇನ್ನು ಆ ಭಕ್ತಂಗೆಯೂ ಆ ಜಂಗಮಕ್ಕೆಯೂ ಭೇದವಿಲ್ಲ.
ಬೇರ್ಪಡಿಸಿ ನುಡಿಯಲುಂಟೆ?
ಇನ್ನು ಆ ಗುರುವಿಂಗೆಯೂ ಆ ಭಕ್ತಂಗೆಯೂ ಸಂಕಲ್ಪವಿಲ್ಲ.
ಅದೆಂತೆಂದಡೆ:
ಮೆಟ್ಟುವ ರಕ್ಷೆ, ಮುಟ್ಟುವ ಯೋನಿ, ಅಶನ, ಶಯನ, ಸಂಯೋಗ,
ಮಜ್ಜನ, ಭೋಜನ ಇಂತಿವನು
ಗುರುಲಿಂಗಜಂಗಮ ಸಹಿತವಾಗಿ ಭೋಗಿಸುವ ಸದ್ಭಕ್ತಂಗೆ
ನಾನು ನಮೋ ನಮೋ ಎಂಬೆನು.
ಅದೆಂತೆಂದಡೆ:

'ಅರ್ಥಪ್ರಾಣಾಭಿಮಾನಂ ಚ ಗುರೌ ಲಿಂಗೇ ಚ ಜಂಗಮೇ
ತಲ್ಲಿಂಗಜಂಗಮಪ್ರಾಣಂ ಭಕ್ತಸ್ಥಲಮುದಾಹೃತಮ್' ಎಂದುದಾಗಿ,
ಇದನರಿದು ಅರ್ಥವನೂ ಪ್ರಾಣವನೂ ಅಭಿಮಾನವನೂ
ಗುರುಲಿಂಗಜಂಗಮಕ್ಕೆ ಸಮರ್ಪಿಸಿ
ಆ ಗುರುಲಿಂಗಜಂಗಮವೆ ಪ್ರಾಣವಾಗಿಹ ಸದ್ಭಕ್ತಂಗೆಯೂ
ಆ ಗುರುಲಿಂಗಜಂಗಮಕ್ಕೆಯೂ ಏಕಭಾಜನವಲ್ಲದೆ ಏಕಭೋಜನವಲ್ಲದೆ,
ಭಿನ್ನಭಾಜನ, ಭಿನ್ನಭೋಜನವುಂಟೆ?–ಇಲ್ಲವಾಗಿ,
ಅದೇನು ಕಾರಣವೆಂದಡೆ:
ಆ ಸದ್ಭಕ್ತನ ಅಂಗವೆಂಬ ಗೃಹದಲ್ಲಿ ಜಂಗಮವಿಪ್ಪನಾಗಿ,
ಇದನರಿದು ಬೇರೆ ಮಾಡಿ ನುಡಿಯಲಾಗದು.
ಚೆನ್ನಯ್ಯನೊಡನುಂಬುದು ಆವ ಶಾಸ್ತ್ರ?
ಕಣ್ಣಪ್ಪ ಸವಿದುದ ಸವಿವುದಾವ ಶಾಸ್ತ್ರ?
ಭಕ್ತದೇಹಿಕ ದೇವನಾದ ಕಾರಣ.
ಅದೆಂತೆಂದಡೆ;
'ಭಕ್ತಜಿಹ್ವಾಗ್ರತೋ ಲಿಂಗಂ ಲಿಂಗಜಿಹ್ವಾಗ್ರತೋ ರುಚಿಃ
ರುಚ್ಯಗ್ರೇ ತು ಪ್ರಸಾದೋಸ್ತು ಪ್ರಸಾದಃ ಪರಮಂ ಪದಮ್'
ಇಂತೆಂಬ ಪುರಾಣವಾಕ್ಯವನರಿದು
ಸದ್ಭಕ್ತನೂ ಗುರುಲಿಂಗಜಂಗಮವೂ– ಈ ನಾಲ್ವರೂ
ಒಂದೆ ಭಾಜನದಲ್ಲಿ ಸಹಭೋಜನಮಾಡುವರಿಂಗೆ
ಇನ್ನೆಲ್ಲಿಯ ಸಂಕಲ್ಪವೊ, ಇನ್ನೆಲ್ಲಿಯ ಸೂತಕವೊ,
ಇನ್ನೆಲ್ಲಿಯ ಪಾತಕವೊ ಕೂಡಲಸಂಗಮದೇವಾ. ॥೨೦॥

೧೪೮೯

ಸದ್ಗುರುಮಾರ್ಗಾಚಾರದ ನೆಲೆಕಲೆಯನರಿಯದೆ,
ಸದಾಚಾರಸದ್ಭಕ್ತನಲ್ಲಿ ಆಡಂಬರಲಾಂಛನದ ವೇಷವ ಧರಿಸಿ,
ಗ್ರಾಸವ ಹೊರೆದು, ಗುಹ್ಯಲಂಪಟ ಹೆಚ್ಚಿ,
ಆ ಭಕ್ತನ ಕ್ರಿಯಾಶಕ್ತಿಗೆ ಭ್ರಮಿಸುವನೊಬ್ಬ ಚರಪ್ರಾಣಿಯ
ಜಡಜಂತುವೆಂಬೆನಯ್ಯಾ.
ಅಂಥ ಕಾಮವಿಕಾರಭ್ರಾಂತನ ಕಾಮವ ಪರಿಹರಿಸಿ,

ಲಿಂಗಾಂಗನಿಷ್ಠಾಪರತ್ವವ ಹೇಳದೆ,
ತಾ ಭೋಗಿಸುವ ಸ್ತ್ರೀಯಳ ಕೊಡುವನೊಬ್ಬ ಸ್ಥಾವರಪ್ರಾಣಿಯ
ಕ್ರಿಮಿಕೀಟಕಪ್ರಾಣಿಯೆಂಬೆನಯ್ಯಾ.
ಇಂತು ತನುಮನಧನಂಗಳ ಕೊಟ್ಟುಕೊಂಬ ವಿಚಾರವನರಿಯದೆ
ಬಿಂದುವೆ ನಿಜಶೇಷವೆಂದು ತಿಳಿಯದ
ಮೂಳನಿಗೆಲ್ಲಿಯದೊ ತ್ರಿವಿಧಪ್ರಸಾದ!
ಸ್ಥಲದಿಂದ ಸ್ಥಲವನರ್ಪಿಸುವುದು ಒಡಲ ಗುಣ,
ನಿಃಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನ ಗುಣ,
ನೋಡಿ ಆರೈವುದೆ ಅರ್ಪಿತ ಗುಣ,
ಇಂಥ ಮಹಾಂತರ ತೋರಿ ಬದುಕಿಸಯ್ಯಾ,
ಕೂಡಲಸಂಗಮದೇವಾ. ॥೨೧॥

❖❖

೨. ಕಠಿಣಪದಕೋಶ

ಅಂಕ–ಸೈನಿಕ, ಯೋಧ
ಅಂಕಕಾರ–ಹೆಸರಾಂತ ವೀರ
ಅಂಗಜಾಹವ–ಕಾಮಕೇಳಿ?
ಅಂಗತ–ಅಂಗಸ್ಥ. ಅಳವಟ್ಟ
ಅಂಗವಣೆ–ಧೈರ್ಯ
ಅಂಗವಿಸು–ಶರೀರದ ಮೇಲೆ ಲಿಂಗ ಧರಿಸುವುದು
ಅಂಜನ–ದೋಷ, ಗುಪ್ತನಿಧಿ ಶೋಧಕ್ಕೆ ಬಳಸುವ ಕಾಡಿಗೆ
ಅಂಜನ–ತತ್ತಿಯಿಂದ ಹುಟ್ಟುವ ಪ್ರಾಣಿ
ಅಂಡಲೆ–ಪೀಡಿಸು
ಅಂತಕ–ಯಮ
ಅಂತರಂಗಶುದ್ಧಿ–ವಿಚಾರಶುದ್ಧಿ
ಅಂತರಬೆಂತರ–ಅಂತರ ವ್ಯಮತರ, ಅಂತರ್ ಪಿಶಾಚಿ
ಅಂತು–ಅಂತ್ಯ, ಕೊನೆ
ಅಂತು–ಅಂತ್ಯ, ಕೊನೆ
ಅಂತುಟು– ಅಷ್ಟು
ಅಂದಲ–ಆಂದೋಇಕಾ, ಪಲ್ಲಕಕ್ಕಿ
ಅಂಬರ–ಆಕಾಶ
ಅಕ್ಕವ–ಜೀರ್ಣ, ಪ್ರಯೋಜನ
ಅಕ್ಕಾಡು–ಆಳ್ಳಾಡು, ಕಂಪನಗೊಳ್ಳು
ಅಕ್ಕಿತ್ತೆ ಕಂಪನಗೂಂಡಿತ್ತೆ
ಅಕ್ಕೆ–ದುಃಖ
ಅಮ್ಮ–ತಿಳಿಯಲು ಬಾರದ
ಅಘ್ಘವಣಿ–ಪವಿತ್ರ ಜಲ
ಅಗೆ–ಸಸಿ
ಅಘ–ಪಾಪ
ಅಘಟಿತ ಘಟಿತ–ಉಂಟಾಗದುದನ್ನು ಉಂಟಾಮುಮಾಡುವವ
ಅಚ್ಚಿಗ–ವ್ಯಥೆ, ಕಳವಳ
ಅಜಪೆ–ಉಸಿರಾಟದಲ್ಲಿಯೇ ಅಕ್ಷರ ರೂಪವಾಗಿ ಪರಿಣಮಿಸುವ 'ಹಂಸ' ಮಂತ್ರ
ಅಜಾಂಡ–ಲೋಕ
ಅಟಮಟ–ಮೋಸ
ಅಟ್ಟಟ್ಟಿಕೆ–ಜಂಬ
ಅಟ್ಟೆ–ಮುಂಡ
ಅಡಕು–ಸೇರಿಸು
ಅಡಕೆ–ಹಾಗಕ್ಕಿಂತ ಸಣ್ಣ ನಾಣ್ಯ
ಅಡ್ಡ–ದೊಡ್ಡ–ಮಿತಿಮೀರಿ ಬೆಳೆದವನು
ಅಡ್ಡಾಯುಧ ಒಂದು ಪ್ರಕಾರದ ಖಡ್ಗ
ಅಡ್ಡ–ಅಡಿಯ ಕಲ್ಲು
ಅಡೆ–ಆಶ್ರಯ, ಆಧಾರ
ಅಣಕ–ಸೋಗು, ಕುಚೋದ್ಯ
ಅಣಚಿ–ಮೈಮೇಲೆ ಬಿಡಿಸಿಕೊಳ್ಳುವ ಚ್ಚಿ
ಅಣಲ–ದವಡೆ
ಅಣೆ–ಅಪ್ಪಳಿಸು, ಹೊಡೆ
ಅತ್ಯತಿಷ್ಠದ್ಧಶಾಂಗುಲ–ಹತ್ತು ಬೆರಳಿನಷ್ಟು ಮಿಗಿಲು
ಅತಿಗಳೆ–ದೂರ ಮಾಡು, ಜೀವ ಒಂದೇ ಎಂದು ಪ್ರತಿಪಾದಿಸುವ ತತ್ವ
ಅದ್ದಲಿಸು–ಬೆದರಿಸು

ಅಧರ_(ಕೆಳಗಿನ)ತುಟಿ
ಅಧಿಕ–ಶ್ರೇಷ್ಠ
ಅದ್ದು–ಮುಳುಗಿಸು
ಅನಂಗ–ಕಾಮ
ಅನವರತ–ನಿರಂತರ, ಯಾವಾಗಲೂ
ಅನಾಮಿಕ–ಶೂದ್ರ, ಅಸ್ಪೃಶ್ಯ
ಅನಾಯತ–ಪ್ರಮಾದ, ತಪ್ಪು
ಅನಿಮಿಷ–ದೇವತೆ, ಒಬ್ಬ ಶರಣ
ಅನುಶ್ರುತ–ನಿರಂತರ, ಪ್ರಸಿದ್ಧ
ಅಪೇಯ–ಕುಡಿಯ(ತಿನ್ನ)ಬಾರದ
ಅಭವು–ಶಿವ
ಅಭ್ರಛ್ಛಾಯ–ಮೋಡದ ನೆರಳು
ಅಬ್ಯಾಸ–ರೂಢಿ
ಅಮಲೋಕಯ–ಬಾಯಿಯಲ್ಲಿ ಲಿಂಗವನ್ನು ಧರಿಸುವುದು
ಅಮೃತಕತ–ಶೀತಲ ಕಿರಣ
ಅಮೃತಗಣ–ಗುರುತ್ವ, ಘನತೆ
ಅಯ್ದುದೆ–ಅದೆ, ಇದೆ
ಅರತ–ಅರ್ತಿ, ಪ್ರೀತಿ
ಅರಸಾಡು–ಅರಚು, ಕೂಗು
ಅರಳಂಬು–(ಕಾಮನ)ಹೂಬಾಣ
ಅರಳೆ–ಅರಳೆಯ ಮರ
ಅರ್ತಿ–ಅಚ್ಚೆ, ಪ್ರೀತಿ
ಅರ್ಧಗಾಣ–ಕಾಣಿ ನಾಣ್ಯದ ಅರ್ಧ ಭಾಗ
ಅರೆಬಿರಿದ ಅಲ್ಪ ಕೀರ್ತಿ
ಅರೆಭಕ್ತ–ಭಕ್ತನಾಗಿಯೂ ಭವಿ ಆಚರಣೆ ಬಿಡದವ
ಅಲಗು–ಖಡ್ಗ
ಅಲಸು–ದಣಿ, ಆಲಸ್ಯ ಹೊಂದು
ಅಲುಬು–ಅಲುಗಾಡಿಸು
ಅವಧಾರು–ಚಿತ್ತಯಿಸು, ಲಕ್ಷ್ಯ ಕೊಡು
ಅವಲೋಹ–ಕೀಳು ಲೋಹ
ಅವಸರ–ಪ್ರಸಂಗ, ತವಕ
ಅವಸ್ಥೆ–ಸಂಕಟ, ದುಃಖ

ಅವುಟು–ಮೂರುವರೆ
ಅವುಡಿ–ದವಡೆ
ಅಶನ–ಆಹಾರ
ಅಶ್ರುಜಲ–ಸುಖದ ಕಣ್ಣೀರು
ಅಷ್ಟತನುಮೂರ್ತಿ–ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ ಅಹಂಕಾರ ಈ ಎಂಟು ಅಂಶಗಳನ್ನು ಹೊಂದಿದ ಶಿವ
ಅಷ್ಟವಿಧಾರ್ಚನೆ–ಜಲ, ಗಂಧ, ಅಕ್ಷತೆ, ಪತ್ರ, ಪುಷ್ಪ, ಧೂಪ, ದೀಪ, ನೈವೇದ್ಯ–ಈ ಎಂಟು ವಿಧಗಳಿಂದ ಮಾಡು ಪೂಜೆ
ಅಷ್ಟೋತ್ತರ ಶತ–ಒಂದುನೂರಾ ಎಂಟು
ಅಸುಗತಿ–ದುರ್ಗತಿ
ಅಳಲು–ದುಃಖ, ಸಂಕಟ
ಅಳವು–ಸಾಮರ್ಥ್ಯ, ಶಕ್ತಿ
ಅಳಿಮನ–ಕ್ಷುದ್ರಮನಸ್ಸು
ಅಗಡಿ–ಅಗಡ, ಕೆಟ್ಟ ಕೆಲಸ
ಆಚಮನ–ಬಾಯಿ ತೊಳೆಯದುಕೊಳ್ಳುವುದು
ಆದ್ಯರು–ಪ್ರಾಚೀನ ಶರಣರು
ಆದಿ–ಚಿಂತೆ
ಆಪ್ಯಾಯನ–ತೃಪ್ತಿ
ಆಪೋಶನ–(ಬೊಗಸೆಯಿಂದ)ಕುಡಿಯುವುದು
ಆಯ–ಉತ್ಪನ್ನ
ಆಯತ–ಯೋಗ್ಯ, ಇಷ್ಟಲಿಂಗ ದೀಕ್ಷೆ
ಆರತ–ಆಸೆ, ತೃಷ್ಣೆ
ಆರಂಬ–ಒಕ್ಕಲುತನ
ಆರಯ್–ಎಚ್ಚರದಿಂದಿರು
ಆರಾಧ್ಯ–ಪೂಜಾಯೋಗ್ಯ
ಆಲು–ಆರ್, ಕೂಗು
ಆವಗೆ–ಕುಂಬಾರನು ಮಡಿಕೆ ಸುಡುವ ಆವಗೆ
ಆಶ್ರಯದ–ಆಶ್ಲಿಷ್ಟ, ಕೂಡಿದ
ಆಸುರ–ತಾಮಸಭಾವ, ಸೊಕ್ಕು
ಅಹ್ವಾನ–ಬರಮಾಡಿಕೊಳ್ಳುವುದು
ಆಳವಾಡು–ಅವಹೇಳನ ಮಾಡು

ಆಳ್ದ-ಒಡೆಯ
ಆಳಿಕಾರ-ನಿಂದಕ
ಆಲಿಗೊಳ್ಳು-ಹೀಯಾಳಿಸು, ಧಿಕ್ಕರಿಸು
ಆಳು-ಮುಳುಗು
ಇಟ್ಟಿಯ ಹಣ್ಣು-ತಿಂದರೆ ತಲೆ ತಿರಗುವಮತೆ
ಮಾಡುವ ಒಂದು ಬಗೆಯ ಹಣ್ಣು
ಇದಿರ-ಪ್ರತಿ, ವಿರೋಧ
ಇಮ್ಮನ-ಎರಡು ಮನಸ್ಸು, ಎಂಟು ಸೂಲಿಗೆ
ಪ್ರಮಾಣ
ಇಮ್ಮೈಗೊಳ್ಳು-ದೇಹ ಎರಡೂ ಮೈಗಳಲ್ಲಿ
ಪಾರಾಗು
ಇಲ್ಲವೆ-ಇಲ್ಲದಿರುವಿಎ, ಅಭಾವ
ಈಡಾಡು-ಒಗೆ, ಬೀಸಾಡು
ಉಂಡಲಿಗೆ-ಉಂಡಿ
ಉಂಡಿಗೆ-ಮುದ್ರೆ
ಉಚ್ಛಿಷ್ಟೆ-ಎಂಜಲು
ಉಡು-ಹಾವಿನ ವೈರಿಯಾದ ಒಂದು ಪ್ರಾಣಿ
ಉಡುಗು-ಹುಡುಗು, ಗುಂಪುಗೊಳಿಸು
ಉಡುಹ-ಉಟ್ಟು ತೊಟ್ಟುಕೊಳ್ಳುವಲ್ಲಿ
ಆಸಕ್ತಿಯುಳ್ಳವ, ವೇಷಧಾರಿ
ಉತ್ತಮಾಂಗ-ತಲೆ
ಉತುಪತಿ-ಉತ್ಪತ್ತಿ, ಜನನ
ಉತ್ತು-ಊಳುವ ಕೆಲಸಮಾಡಿ
ಉದಮದ-ಉನ್ಮದ, ಅತಿಯಾದ ಸೊಕ್ಕು
ಉದ್ದರೆ-ಉದ್ದರಿ ವ್ಯಾಪಾರ
ಉದ್ಭಿಜ-ಭೂಮಿಯ ತಂಪಿನಲ್ಲಿ ಹುಟ್ಟಿದ ಜೀವಿ
ಉಪದೇಶ ಪರೀಕ್ಷೆ-ಮಂತ್ರೋಪದೇಶ ಪರೀಕ್ಷೆ?
ಉಪ್ಪರಗುಡಿ-ಎತ್ತಿ ಕಟ್ಟಿದ ಧ್ವಜ
ಉಪ್ರೇಂದ್ರ-ವಿಷ್ಣು
ಉಮ್ಮಹ-ಉನ್ಮಾದ>ಉಮ್ಮಾಹ>ಉಮ್ಮಹ,
ಅತಿ ಹರ್ಷ
ಉಭಯಕುಳ-ಲಿಂಗಪೂಜೆ,
ಜಂಗಮದಾಸೋಹ
ಉಭಯ-ಭ್ರಷ್ಟ-ಇಹಪರಗಳಿಗೆ ಹೊರತಾದವ
ಉಭಯಲಿಂಗ-ಲಿಂಗ ಮತ್ತು ಜಂಗಮ
ಉರಸಜ್ಜೆ-ಎದೆಯ ಮೇಲಿನ ಲಿಂಗ ಕರಡಗೆ
ಉರುಗು-ಬಾಗು, ಓರೆಯಾಗು
ಉರೆ-ಚನ್ನಾಗಿ
ಉಲಿ-ಸದ್ದು ಮಾಡು
ಉಳಿದ-ಸೂಳೆ-ಬಿಟ್ಟ ಸೂಳೆ, ದೂರವುಳಿದ
ಸೂಳೆ
ಊಡದ-(ಹಾಲು)ಉಣಿಸದ
ಎಚ್ಚಿಕೊಂಬುದು-ಹಚ್ಚಿಕೊಳ್ಳುವುದು
ಎಚ್ಚು-ಬಾಣವನ್ನು ಎಸೆದು
ಎಡಹುಗುಳಿ-ಎಡಹುವ ತಗ್ಗು
ಎಡೆಯಾಟ-ಅತ್ತಿತ್ತ ಅಡ್ಡಾಡುವುದು
ಎರದೆಲೆ-ಬೋರೆ ಎಲೆ
ಎರೆ-ಸುರಿ, ನೀಡು
ಎಲವದ-ಮರ-ಬೂರಲ ಮರ
ಎಸಕ-ಮಾಡುವಿಕೆ, ಕಲಸ
ಎಸವೋದ-ಶಕ್ತಿ ಗುಂದಿದ
ಎಹಗೆ-ಹೇಗೆ ಬೇಕಾದ ಹಾಗೆ
ಎಳೆವಾವು-ಮಿಡಿ ನಾಗರ
ಏಗುವುದು?-ಏನು ಮಾಡುವುದು?ಧೆಇಸು-
ಅನಕಿಸು, ನಿಂದಿಸು, ಹಂಗಿಸು
ಏರಂಡ-ಔಡಲ
ಏರಿ-(ಕೆರೆಯ)ಒಡ್ಡು
ಏರಿಸಿ-ನುಡಿ ಹೊಗಳು
ಏವನಾದಡೇನು-ಏನು ಮಾಡಬೇಕಾದರೂ
ಏವುದಯ್ಯಾ-ಏನು ಮಾಡುವುದುಯ್ಯಾ
ಐದೆ-ಸುಮಂಗಳೆ, ತಾಳಿ?
ಒಕ್ಕತನ-ಒಂದುತನ, ನಂಟುತನ
ಒಕ್ಕುದು-(ಉಂಡು)ಒಗೆದುದು
ಒಟ್ಟಿಲ-ಗುಂಪು,ರಾಶಿ
ಒಡಲವಸರ-ಜೀವನದ ಅಗತ್ಯ
ಒಟ್ಟ-ಜೂಜಿನಲಲ್ಲಿ ಹಚ್ಚುವ ಹಣ
ಒತ್ತೆ-ಸೂಳೆ ವಿಟರಿಂದ ಸ್ವೀಕರಿಸುವ ಹಣ
ಒಪ್ಪಚ್ಚಿ-ಒಮ್ಮೆಯಾದರೂ

ಒಮ್ಮನ–ಒಂದುಮನಸ್ಸು, ನಾಲ್ಕು ಸೊಲಿಗೆ ಪ್ರಮಾಣ
ಒರಳ–ಒರಳಕಲಲ್ಲು, ಹಗ್ಗದ ಉರಲು?
ಒರೆ–ಒರೆಗಲ್ಲಿಗೆ ಒಮ್ಮೆ ತಿಕ್ಕಿದರೆ ಬರುವಷ್ಟು ಚಿನ್ನ
ಒರೆ–ಖಡ್ಗದ ಹೊದಿಕೆ
ಒರೆಗಟ್ಟು–(ಒರೆಸಹಿತ)ಖಡ್ಗವನ್ನು ಕಟ್ಟು
ಒರೆಯಾವು–ದುಷ್ಟ ಆಕಳು? ಕರುವಿದ್ದ ಆಕಳು?
ಒಳ್ಳಹ–ಸುಂದರವಾಗಿ ಕಾಣುವ
ಒಳಬೊಳ್ಳೆ–ಒಳಗೆ ಪೊಳ್ಳಾಗಿರುವುದು
ಒಳಲೋಟೆ–ಮೋಸಗಾರಿಕೆ, ಪೊಳ್ಳುತನ
ಒಳ್ಳೆ–ನೀರಹಾವು
ಓಗರ–ಅನ್ನ, ಬೋನ
ಓಜುಗಟ್ಟಿಗೆ–ವಿದ್ಯಾರ್ಥಿಗಳನ್ನು ದಂಡಿಸಲು ಶಿಕ್ಷಕರು ಬಳಸುವ ಕೋಲು
ಓಡು–(ಹರಿಯುವ)ಹಂಚು
ಓತ–ಪ್ರೀತಿಸಿದ, ಒಲಿದ
ಓತಿ–ಓತಿಕಾಟ
ಓಜ–(ತಾಳದ)ಕಗರಮು
ಓಲೆಕಾರ–ಸಶಸ್ತ್ರ ಸೈನಿಕ
ಓವರಿ–ಕೋಣೆ
ಓಸರಿಸು–ದೂರ ಸರಿ
ಕಚು–ಕಂಚಿನಿಂದ ಮಾಡಿದ ಊಟದ ತಟ್ಟೆ
ಕಂಡೆ–ಖಂಡೆಯ, ಖಡ್ಗ
ಕಂತೆ–ಜೋಳಿಗೆ
ಕಂದಲು–ಹೈನಕ್ಕಾಗಿ ಬಳಸುವ ಪಾತ್ರೆ
ಕಂಪಣ–(ಹುಲ್ಲು)ದೊರೆ
ಕಂಪಣಿಗ–ಹುಲ್ಲು ಹಾಕುವವ
ಕಂಬಿ–ಕಬ್ಬಿಣದ ಕಡ್ಡಿ
ಕಕ್ಷೆ–ಬಗಲು, ಪಕ್ಕೆ
ಕಗ್ಗಾಯಿ–ಅಪಕ್ವ ಹಣ್ಣು
ಕಜ್ಜಾಯ–ಅಡುಗೆ, ವಿಶೇಷ
ಕಟ್ಟಣೆ–ಕಟ್ಟಳೆ, ನಿಯಮ
ಕಟ್ಟಾಳು–ನಿಷ್ಠೆಯ ಸೇವಕ
ಕಟ್ಟಿದಿರು–ಸಮ್ಮುಖ, ನೇರ ಎದುರು
ಕಟ್ಟುಗ್ರ–ಅಧಿಕ ಉಗ್ರ
ಕಡವರ–ಬಂಗಾರ
ಕಡಿಹಕ್ಕೆ–ಕಡಿತಕ್ಕೆ, ತುಂಡು ಮಾಡುವಿಕೆಗೆ
ಕಡೆಗಳ–ಕಡೆಗಣ, ರಣಭೂಮಿಯ ಮೇರೆ
ಕಡೆಗೋಡಿವರೆ–ಒರ ಪ್ರವಹಿಸು
ಕಡೆಮುಟ್ಟ–ಕೊನೆಯವರೆಗೆ
ಕಡೆಯಾಣಿ–ಶುದ್ಧ ಬಂಗಾರ
ಕಣಕಾಲು–ಮೊಳಕಾಲಿನ ಕೆಳಭಾಗ
ಕಣ್ಣೇಟ–ಕಣ್ಣಿನ ಬೇಡುವಿಕೆ, ನೋಟ ಸುಖ
ಕರ್ದಮ–ಕೆಸರು
ಕನ್ನಡ–ಕನ್ನಡಿಯ ಗೋಡೆ
ಕನ್ನದುಳಿ–ಗೋಡೆ ಕೊರೆಯಲು ಕಳ್ಳರು ಬಳಸುವ ಉಪಕರಣ
ಕನ್ನೆಯ–ಸ್ನೇಹ ಕನ್ನೆಯೊಳಗಿನ ಕಾಮ
ಕಪ್ಪಡಿ–ಶೈವ ಸನ್ಯಾಸಿ
ಕಪಾಲ–(ಬ್ರಹ್ಮ)ತಲೆಬುರುಡೆ
ಕಮ್ಮಟ–ಕರ್ಮಸ್ಥಾನ, ಟಂಕಸಾಲೆ
ಕಮ್ಮನೆ–ಸುವಾಸನೆ
ಕರಕಷ್ಟ–ಅತಿ ಕೀಳು
ಕರಣವೃತ್ತಿ–ಪಂಚೇಂದ್ರಿಯಗಳ ವೃತ್ತಿ
ಕರತಳಾಮಳಕ–ಅಂಗೈಯಲ್ಲಿಯ ನೆಲ್ಲಿಕಾಯಿಯಷ್ಟು ಸ್ವಾಧೀನ
ಕರಲಭೂಮಿ–ಸವುಳುಉ ನೆಲ
ಕರಿ–ಇದ್ದಿಲು
ಕರಿಗಟ್ಟು–ಕಪ್ಪಾಗು, ಗಟ್ಟಿಯಾಗು?
ಕರುಳ ಕಲೆ–ಕರುಳಿಗೆ ಆದ ಗುರುತು
ಕರೋಟಿ–ತಲೆಬುರುಡೆ
ಕಲಕೇತ–ಕಕಲ್ಲಿನಿಂದ ಎದೆಗೆ ಬಡಿದುಕೊಂಡು ಭಿಕ್ಷೆ ಕೇಳುವವ?
ಕಲ್ಮಷ–ದೋಷ ಹೊಲಸು
ಕಲ್ಪಿತ–ಬ್ರಹ್ಮಲಿಖಿತ
ಕವಚ–(ಕರ್ಣನ)ಮೈಗೆ ಅಂಟಿಕೊಂಡಿದ್ದ ವಜ್ರದ ಅಂಗಿ
ಕವಳಿಗೆ–(ಕಪಾಲಿಕಾ)ಶಿವನ ಕೈಯಲ್ಲಿರುವ ತಲೆಬುರುಡೆ

ಕವಿಲೆ–ಕಪಿಲೆ, ಆಕಳು
ಕವುಳಗೋಲು–ರಡಿಯ ಮನೆಯಲ್ಲಿ
ಆಯುಧದಂತೆ ಬಳಸುವ
ಪರ್ಯಾಯಕೋಲು
ಕಳ–ಕಣ, ರಣರಂಗ
ಕಳ್ಳದಮ್ಮ–ಖೋಟಾ ನಾಣ್ಯ
ಕಳಿದ–ಬಾಡಿದ
ಕಳೆದುಕೊಳ್ಳು–(ಒರೆಯಿಂದ)ಸೆಳೆದುಕೊಳ್ಳು
ಕಾಟುಗ–ಕಾಟ ಕೊಡುವವ, ಪೀಡಿಸುವವ
ಕಾಣಿ–ಒಂದು ಸಣ್ಣ ನಾಣ್ಯ
ಕಾಲ–ಯಮುಮ
ಕಾಲವಳ್ಳ–ಸಣ್ಣ ಹಳ್ಳ
ಕಾಹ–ರಕ್ಷಣೆ
ಕಾಲ–ಕತ್ತಲೆ
ಕಾಳಿಕೆ–ಕಪ್ಪು, ದೋಷ
ಕಾಳಿಕಾ ಕಂಕಾಳ–ಕಾಳಿಕಾ ಖಂಡದಲ್ಲಿಯ
ಕಂಕಾಳ(=ಬೆನ್ನೆಲುಬ)ದ ಘಟನೆ
ಕಾಳೆಗಮುಖ–ಯುದ್ಧದ ಪ್ರಾಥಮಿಕ ತಿಳಿವಳಿಕೆ
ಕಿಂಕಿರ–ಸೇವಕ
ಕಿಂಕಲ–ಸೇವಾವೃತ್ತಿ, ಸೇವಕ
ಕಿಂಚಿತು–ಕಿಂಚಿತ್, ಸ್ವಲ್ಪ
ಕಿಂಪುರುಷ–ದೇವಲೋಕದಲ್ಲಿರುವ ಮೃಗ
ಮುಖದ ವ್ಯಕ್ತಿ
ಕಿಗ್ಗದಡಲ–(ಕೆಗ್ಗಡಲ?=ಕೆಂಪು ಸಮುದ್ರ)
ಕಿರಿದು+ ಕಡಲು, ಸಣ್ಣ ಸಮುದ್ರ
ಕಿಚ್ಚಡಿ–ಜೋಳದ ಹುಗ್ಗಿ
ಕಿನ್ನರ–ದೇವತೆಗಳಲ್ಲಿಯೂ ಒಂದು ಪ್ರಕಾರ
ಕಿಲ್ಬಿಷ–ಕಿಲುಬು, ದೋಷ
ಕಿರುಕುಣಿಕಿ–ಕಿರುಬೆರಳು
ಕಿರುಕುಳ–ಸಣ್ಣ, ಕ್ಷುದ್ರ
ಕೀಟಕ–ಕೀಟ, ಹುಳು
ಕೀರ್ತಿವಾರ್ತೆ–ಕೀರ್ತಿ ಪ್ರಚಾರ
ಕೀಸು–ಗೀಚು, ಕೆತ್ತು
ಕೀಳ್–ಹೀನ, ಕರು, ಕೀಲು
ಕೀಳಾಳು–ಸಣ್ಣ ಆಳು
ಕುಂಡಲಿಗ–ಮುಟದಾಕ್ಷಣ
ವರ್ತುಲವಾಗುವ ಹುಳು?
ಕುಂಭಿಪಾತಕ–ಕುಂಭೀ ಹೆಸರಿನ ನರಕ
ಕುಕ್ಷಿ–ಹಟ್ಟೆ
ಕುಕ್ಕುಟಜ್ಞಾನ–ಕೋಳಿಯ ಜ್ಞಾನದಂಥ ಜ್ಞಾನ?
ಕುಚಿತ–ಕುತತ್ಸಿತ, ಕ್ಷುದ್ರ
ಕುಚಿತ್ತಾಚಾರ–ಕ್ಷುದ್ರ, ನಡತೆ
ಕುಟುಕ–ಗುಟುಕು,ತುತ್ತು
ಕುತ್ತರಿ–ಮೇಟಿಯ ಸುತ್ತ ಒಟ್ಟಿದ ಬೆಳಸು
ಕಿಕುತ್ತು–ಬಗ್ಗಿಸು
ಕುನ್ನಿ–ಗಂಡು ಮಗು?
ಕುಪ್ಪಳಿಸು–ಹೊರಚೆಲ್ಲು
ಕುಲಿಶ–ಸಿಡಿಲು
ಕುರುಕು–ಕುರುಕುರು ಸದ್ದಿನೊಂದಿಗೆ ತಿನ್ನು
ಕುದುರ–ಗೋಡೆ
ಕುಳಿ–ಕುಣಿ,ತಗ್ಗು
ಕೂಪ–ಬಾವಿ, ಪ್ರಿಯ
ಕೂಪರು–ಕೂರ್ಪವವರು, ಪ್ರೀತಿಯವರು
ಕೂರಂಬು–ಹರಿತವಾದ ಬಾಣ
ಕೂರಲಗ–ಹರಿತವಾದ ಖಡ್ಗ
ಕೂರ್ತು–ಪ್ರೀತಿಸಿ
ಕೂರ್ಮ–ಆಮೆ
ಕೃತಕ–ಮೋಸ
ಕೆಚ್ಚನೆ–ಕೆಂಪಗೆ
ಕೆಟ್ಟಂಗೆ–ಹಾಳಾದವನಿಗೆ
ಕೆಡೆ–ಬೀಳು
ಕೆಡೆಮೆಟ್ಟು–ಕೆಡವಿ ತುಳಿ
ಕೆನ್ನೆ–ಗಲ್ಲದ ಮೇಲ್ಭಾಗ
ಕೆನ್ನವಾರ–ಕೆನ್ನೆಯವರೆಗೆ
ಕೆಮ್ಮನೆ–ವ್ಯರ್ಥ
ಕೆಯ್–ಹೊಲ
ಕೆರಹ–ಚಪ್ಪಲಿ
ಕೆಲ–ಪಕ್ಕ, ನೆರೆಹೊರೆ

ಕೆಲೆ–ಹೂಂಕರಿಸು, ಮನ ಬಂದಂತೆ ಮಾತನಾಡು
ಕೆಳಯಿಂಕೆ–ಕೆಳಗೆ
ಕೇಚರಗಾವಿಲ–ಗ್ರಾಮೀಣ ದೇವತೆ
ಕೇತು–(ಧೂಮ)ಕೇತುವಿನಂತೆ ಅನಿಷ್ಟಕಾರಕ
ಕೈದುಆಯುಧ
ಕೈದುಡುಕು–ಕೈ ಹಾಕು
ಕೈಮರೆ–ಕೈಯೊಳಗಿನ ಆಯುಧದ ಉಪಯೋಗವನ್ನು ಮರೆಯುವುದು
ಕೈವಾರ–ಸುತ್ತಿ, ಸೇವೆ
ಕೊಂಡಮಾರು–ಕೊಂಡ ಬೆಲೆಗೆ ಮಾರುವುದು
ಕೊಂಡಲಿಗ–ಮುಟ್ಟಿದರೆ ವರ್ತುಲವಾಗುವ ಹುಳು(?)
ಕೊಂತ–ಭರ್ಚಿ
ಕೊಂಬಮೆಟ್ಟಿ ಕೂಗು–ಅಹಂಕಾರದ ಕೋಡನ್ನು ತುಳಿದು ಕೂಗು?
ಕೊಡಗೂಸು–ಮದುವೆ ವಯಸ್ಸಿನ ಹೆಣ್ಣು
ಕೊಯಿಲು–ಕೊಯ್ದ ಬೆಳೆಯ ಕೆಳಭಾಗ
ಕೊಲ್ಲೆ–ರೆಂಬೆ
ಕಕೊಳಗ–(ಧ್ಯಾನ)ಅಳೆಯುವ ಸಾಧನ
ಕೊಳುಗುಳ–ರಣಭೂಮಿ
ಕೋಟಲೆ–ತೊಂದರೆ
ಕೋಡಂಗಿಯಾಟ–ಎಡಗೈಯಿಂದ ಬಲಗಿವಿ ಬಲಗೈಯಿಂದ ಎಡಗಿವಿ ಹಿಡಿದುಕೊಂಡು ಕುಣಿಯುವುದು
ಕೋಡೇರಿ–ಕೊಡುಗೆಯೊಂದಿಗೆ
ಕೋಶಪಾನ–ನ್ಯಾಯಸಂದರ್ಭದಲ್ಲಿ ವಾದಿ ಇಲ್ಲವೆ ಪ್ರತಿವಾದಿ ತನ್ನ ಪ್ರಾಮಾಣಿಕತೆಯ ಪ್ರಕಟನೆಗಾಗಿ ದೇವರ ವಿಗ್ರಹ ತೊಳೆದ ನೀರನ್ನು
ಕುಡಿಯುವುದು
ಕೋಳ–ಬೇಡಿ
ಕೋಳಾಟ–ಬಲಾತ್ಕಾರ
ಕೋಳುಹೋದ–ಸೆರೆಹೋದ
ಕೌಪೀನ–ಲಂಗೋಟಿ
ಕ್ಷಪಣ–ಸನ್ಯಾಸಿ
ಖಂಡ–ಮಾಂಸ
ಖಂಡೆ–ಖಡ್ಗ
ಖಚರನ–ಅಸ್ಥಿ–ಖಚರನೆಂಬ ಸಿದ್ಧ(?)ನ ಎಲುಬು
ಖಟ್‌ವಾಂಗ–ಶಿವನ ಕೈಯೊಳಗಿರುವ ಎಲುಬಿನ ಆಯುಧ
ಖಲ್ಲರಿ–ತೋರಣರೂಪದ ಜಾಲರಿ
ಗಂಗೆವಾಳುಕ–ಗಂಗಾ ನದಿಯ ಉಸುಬು
ಗಂಜಳ–ಹೊಲಸು ನಾತ
ಗಂಡುಗೆದರಿ–ಆರ್ಭಟಿಸಿ
ಗಜಜ್ಞಾನ–ಆನೆಯ ಜ್ಞಾನದಂಥ ಜ್ಞಾನ?
ಗಜವೈದ್ಯ–ಗಹನವಾದ ವೈದ್ಯ?
ಗಡಹ–ಬಲೆ, ಹಸಿಲು (ಗಡಪ)ಗಣಮೇಳಾಪ–ಗಣಂಗಳನ್ನು ಕೂಡಿಕೊಂಡಿರುವುದು
ಗಣಾಂಡಂಬರ–ಗಣಗಳ ಸಮೂಹ, ಜಂಗಮ ದಾಸೋಹ
ಗದ್ಗದ–ಕಂಪನ, ನಡುಕ
ಗಮ್ಯ–ಪ್ರಕಟವಾದ
ಗಗರ–ಗ್ರಹ, ಪಿಶಾಚಿ
ಗರಳ–ವಿಷ
ಗರ್ಭಾವಾಸ–ಗರ್ಭಗುಡಿ
ಗರಿ–ಬಾಣದ ಕೊನೆಯ ಗರಿ
ಗರುವ–ಮಾನ್ಯ, ದೊಡ್ಡ
ಗಳಗರ್ಜನೆ–ಕಂಠದಿಂದ ಬರುವವ ದೊಡ್ಡ
ಗಳುಹು–ಮನ ಬಂದಂತೆ ಮಾತಾನಡು
ಗಳೆ–ಗಳ, ಬಾಣ
ಗಾಡಿ–ಮನೆಯ ಜಗುಲಿಯ ಮೇಲೆ ಪೂಜಿಸಲ್ಪಡುವ ಬೂತ
ಗಾಯತ್ರಿ–ವೇದಮಂತ್ರ
ಗ್ರಾಸ–ತುತ್ತು
ಗಿಡುವು–ಗದ್ದೆ?

ಗಿಣ್ಣೆಲು–ಗಿಂಡಿ
ಗಿಳಿಯೋದು–ಗಿಳಿಯು
ಭವಿಷ್ಯಹೇಳುವುದು
ಗುಡಿಹಟ್ಟುಸಂತೋಷ ಸೂಚಿಸು
ಗುಡಿಲ–ಗುಡಿಸಲು
ಗುಮ್ಮಡಿ–ಮೊಲೆ ಮೂಗು
ಕೊಯ್ಸಿಕೊಮಡ ಜೋಗಿವೆಣ್ಣು
ಗುರುಗುಂಜಿ–ಗುಲಗಂಜಿ
ಗುರುಲಘು–ಶ್ರೇಷ್ಠ ಕನಿಷ್ಠ
ಗುಹ್ಯ–ಜನನೇಂದ್ರಿಯ
ಗುಳ್ಳೆ–ಗುಡ್ಡೆ, ರಾಶಿ
ಗೂಡು–ಕೊಯ್ದ ಪೈರಿನ ಬಣವೆ
ಗೂಡುವೋಗು–ಅಸ್ಥಿಪಂಜರ
ಕಾಣುವಂತಾಗು
ಗೆರೆಯಿಲ್ಲದ ಕೋಲು–ಅಳತೆ ಸೂಚಿಸುವ
ಗೆರೆಗಳಿಲ್ಲದ ಕೋಲು
ಗೂಡಾರ–ಗೂಢಾಗಾರ, ಡೇರೆ
ಗೊತ್ತು–ಗುರಿ
ಗೊರಜೆ–ಗಿಡುಗಂಟಿ
ಗೊರವ–ಗುರವಃ, ಯತಿ, ಅರ್ಚಕ?
ಗೋಟು–ಮೂಲೆ
ಗೋಣು–ಕುತ್ತಿಗೆ
ಗೋತ್ರ–ವಂಶ
ಗೋರಿಗೊಳಗಾಗು–ಬಲೆಯಲ್ಲಿ ಬೀಳು
ಗೋವ–ದನಗಾಹಿ
ಗೋಸುಂಬೆ–ಊಸರವಳ್ಳಿ
ಘಟರ್ಪ–ಕೂಡದಲ್ಲಿ ದಿವವ್ಯಕ್ಕೋಸಗ
ಮಡಗಿದ ಹಾಡು
ಘ್ರಾಣ–ಮೂಗು
ಚತುರ್ವೇದಿ–ನಾಲ್ಕು ವೇದಗಳನ್ನು ಬಲ್ಲದ
ಚಮ್ಮಾವುಗೆ–ಚರ್ಮದ ಪಾದರಕ್ಷೆ
ಚಲ್ಲಣ–ಚಣ್ಣ
ಚಲ್ಲವಾಡು–ಸರಸವಾಡು
ಚಾಗುಬೊಲ್ಲ–(ಹಣೆಚುಕ್ಕೆ ಹೂ ಬಾಲದ)ಕುದುರೆ
ಚಾಗೆ–ಚೇಗೆ, ವ್ಯರ್ಥ, ಹಾಳು
ಚಿಕ್ಕು–ಹಲಚೆಗಡಬು
ಚಿತ್ತರಟ್ಟೆಯ ಕಾಯಿ–ಒಳಗೆ ಪೊಳ್ಳಾಗಿರುವ
ಕಾಯಿ
ಚಿನಿಖಂಡ–ಸಣ್ಣ ತುಂಡು
ಚಿನ್ನಗೆಯ್ಯ–ಚಿನ್ನದ ಆಭರಣ ಮಾಡುವವ
ಚಿಪ್ಪಿನನ–ಹಲ್ಲು–ಚಿಪ್ಪುಗಳಿಂದ ಮಾಡಿದ ಹಲ್ಲು
ಚಿಪ್ಪು–ಸಿಂಪೆ
ಚುಳುಕು–ಚುಲಕ, ಅರ್ಧ ಬೊಗಸೆ
ಚೇಗು–ಹಾನಿ
ಚೋಹ–ವೇಷ
ಚೌಡೇಶ್ವರಿ–ಕ್ರೂರ ಹೆಣ್ಣುದೇವತೆ
ಚೌರಾಸಿ–ಎಬತ್ತುನಾಲ್ಕು
ಚೌಷಷ್ಟಿವಿದ್ಯೆ–ಅರವತ್ತುನಾಲ್ಕು ವಿದ್ಯೆ
ಛಲದಾಳಿ–ಛಲಗಾರ
ಜಂಗಮ–ಚಲನಶೀಲ ಸ್ವಭಾವದವ
ಜಂಗುಳಿ–ಹಿಂಡು, ಗುಂಪು
ಜಂಘೆ–ಎರಡು ಮಾರು ಪ್ರಮಾಣ,
ಮೊಳಕಾಲ ಕೆಳಭಾಗ
ಜಂಬೂದ್ವೀಪ–ಭಾರತವನ್ನೊಳಗೊಂಡ
ವಿಶಾಲ ಖಂಡ
ಜಜ್ಜನೆ–ಬೇಗ, ತೀವ್ರ
ಜನ್ನ–ಯಜ್ಞ
ಜನನ್ನಿಗೆಯರು–ಯಜ್ಞದವರು, ಬ್ರಾಹ್ಮಣರು
ಜವೆ–(ಬಾಲದ)ಕೂದಲು?
ಜೀಯಾ–ಒಡೆಯಾ
ಜುಗ–ನಾಲ್ಕು ಯುಗಗಳು ೧೮ ಸಲ ಮರಳಿ
ಬರುವ ಕಾಲ ಪ್ರಮಾಣ
ಜೂಬು–ಯೂಪ,(ಯಜ್ಞ)ವಧಸ್ತಂಭ
ಜೀಗೈಸುವ ಮೆಟ್ಟುವ
ಜೋಡೆ–ವ್ಯಭಿಚಾರಸ್ತ್ರೀ
ಜೋಳವಾಳಿ–ಯೋಧ, ಸೈನಿಕ
ಝುಂಕೆ–ಬೆದರಿಕೆ

ಟಿಂಬನನಾಡಿಸು–ದೀರ್ಘ ಶ್ವಾಸ–ಉಚ್ಛ್ವಾಸಕ್ಕೆ ಗುರಿಮಾಡು?
ಟೀವಕ–ಟಿಂಬನನಾಡಿಸು–ತಂತಿ ವಾದ್ಯಕ್ಕೆ ತಕಕ್ಕಂತೆ ಕುಣಿಸು
ಟೊಣೆ–ಹೊಡೆ, ಹಾರಿ ಹೊಡೆ
ಡಂಬ–ಡಂಬಾಚಾರಿ
ಡಂಬು–ಬಹಿರಂಗದ ಬೂಟಕತ್ವ
ಡಳುಹು–ಅಂತರಂಗದ ಕಾಪಟ್ಯ
ಡಿಂಗರಿಗ–ಸೇವಕ, ಆಳು
ಡಿಂಬುಗ–ದನದ ಹಕ್ಕೆಯಲ್ಲಿ ಪೂಜೆಗೊಳ್ಳು ಬೂತ
ಡುಂಡುಟಿ–ಡುಂಡುಭ (ದುಂಡೀ) ಗಣಪತಿ?
ಡೊವಿಗೆ–ತಲೆಬುರಡೆ
ತಂಬುಲ–ತಾಂಬೂಲ
ತಕ್ಕೈಸು–ಅಪ್ಪಿಕೊಳ್ಳು
ತಗರ–ತರಗ, ಎಣ್ಣೆಯಲಲ್ಲಿ ಮಾಡಿದ ಒಂದು ಬಗೆಯ ಖಾದ್ಯ
ತಡಗೆಡುಹು–ತಡೆದು ಕೆಡಹು
ತತ್ವಮಮಸಿ–ತತ್+ತ್ವಂ+ ಅಸಿ
ತ್ದಗತ–ಕೂಡಿಕೊಂಡ, ತಲ್ಲೀನ
ತದ್ದಿನ–ಶ್ರಾದ್ಧ
ತನುಸಾರಾಯ–ತನುವಿನಲ್ಲಿ ಗುರು ಸಂಬಂಧ ಮಾಡಿಕೊಳ್ಳುವುದು
ತರಕಟ–ಅಧಿಕ ಹಿಂಸೆ
ತರಿ–ಕತ್ತರಿಸು
ತರಹರ–ವಿಶ್ರಾಂತಿ
ತರಳ–ಹುಡುಗ, ಬಾಲಕ
ತರಿಯ–ಕದಿರುಮರ
ತರುವಲ್ಲಿ–ತಬ್ಬಲಿ, ಪರದೇಶಿ
ತಲಹಿಲ್ಲದ ಕೋಲು–ಗರಿಯಿಲ್ಲದ ಬಾಣ
ತವನಿಧಿ–ಸವೆತಲಾರದ ಸಂಪತ್ತು
ತವರಾಜ–ಒಂದು ಬಗೆಯ ಸಕ್ಕರಿ
ತಳಿಗೆ–ಊಟದ ತಟ್ಟೆ
ತಾರಕೆ–ನಕ್ಷತ್ರ
ತಾಳಮಾನ–ತಾಳದ ಪ್ರಮಾಣ
ತಾಳಸಂಪುಟ–ಮಾತನ್ನು ಉತ್ಪಾದಿಸುವ ತಾಳುಗೆಯ ಪೆಟ್ಟಿಗೆ
ತಿಂದುದು–ತೀನ್ದುದು, ತಿಂಡಿ ಕೊಟ್ಟುದು, ತುರಿಕೆವುಂಟಾದುದು
ತಿಂಬ–ತೀನ್ಬ್, ತಿಂಡಿ ಕೊಡುವ
ತಿಗುರು–ಮೈಗೆ ಲೇಪಿಸಿಕೊಳ್ಳುವ ಹಳದಿ ಪುಡಿ
ತಿಟ್ಟನೆ–ತಿರ್‍ರನೆ
ತಿಂದವರ–ತೀನ್ದ್‌ವರ, ಕಚ್ಚಿದವರ ತಿಮಿರ–ಕತ್ತಲೆ
ತುಯ್ಯಲ–ಬಿಳಿಯ ವರ್ಣದ ಅಡುಗೆ
ತುಷ–ಮುಸುಕು, ಹೊದಿಕೆ
ತುಂಬು–ತೂಂಬು, (ಕೆರೆಯ)ತೂಬು
ತೆತ್ತಿಗೆ–ಒಡೆಯ
ತೆತ್ತೀಸ–ಮೂವತ್ತುಮೂರು
ತೆರೆಹಾರ–ತೆರವಿಲ್ಲದೆ
ತೆರಹು–ಅವಕಾಶ, ಬಿಡುವ
ತೊಂಡಿಲ–ದಂಡೆ
ತೊಡಹ–ಆಭರಣ
ತೊಡರು–ಬಿರುದು ಬಾವಲಿ
ತೊನೆ–ತೂಗು
ತೋಯ–ನೀರು
ತ್ರಿಪುಂಡ್ರ–ವಿಭೂತಿ ಮೂರು ಬೆರಳಿನ ಅಡ್ಡ ರೇಖೆಗಳು
ತ್ರಾಸು–ಬಂಗಾರ ತೂಗುವ ತಕ್ಕಡಿ
ತ್ರಾಹಿ–ರಕ್ಷಿಸು
ದಂಡಿಗೆ–ವೀಣೆಯ ಕೋಲು
ದಂಡೆ–ಮೊಳಕಾಲೂರಿ ಬಿಲ್ಲು ಬಿಡುವ ಭಂಗಿ
ದಂದಣದತ್ತಣ–'ದಂದಣ–ದತ್ತಣ' ಯೆಂಬ ಮುಗ್ಧಮಾತು
ದಂದುಗ–ದುಃಖ, ಕಷ್ಟ
ದಕ್ಕ–ಕಬ್ಬಿಣದ ಕದಿರು
ದಡಿ–ಬಡಿಗೆ
ದಡಿಗೆ–ಅಡ್ಡ ತೊಲೆ

ದಮ್ಮಯ್ಯ-'ಧರ್ಮವಯ್ಯ' ಎಂಬ ಕೂಗು
ದರ್ಭೆ-ಕರಿಕೆ ಹುಲ್ಲು
ದಷ್ಟ-ಕಚ್ಚಿದ
ದಸಿ-ಗೂಟ
ದಾತಾರ-ಒಡೆಯ
ದಾವತಿ-ಶ್ರಮ
ದಾಸೋಹಂ ದಾಸಃ+ ಅಹಂ, ನಾನು
ದಾಸನು ಎಂಬ ಭಾವನೆ
ದಿಬ್ಯ-ದಿವ್ಯ, ಆಣೆ ಪ್ರಮಾಣ
ದಿಮ್ಮಿತ್ತೆ?-ಭಾರವೆ?
ದಿಷ್ಟ ದೀವಿಗೆ-ಗೋಚರವಾದ ದೀಪ
ದೀಪ್ತಿ-ಪ್ರಕಾಶ
ದುಂಡೆ-ಸ್ವೇಚ್ಛಾಚಾರಿಣಿ
ದುರಿತ-ಪಾಪ
ದೃಷ್ಟ-ಪ್ರತ್ಯಕ್ಷ
ದೃಷ್ಟಿವಾರಿ-ಎವೆಯಿಕ್ಕವೆ ಶಿವಲಿಂಗವನ್ನು
ನೋಡುವ ವ್ರತ
ದೆಸೆ-ನೆಲೆ
ದೇವಗಣ-ನಗಣ ಅಥವಾ ಮಗಣ
ದೇಶಿಗ-ಪರದೇಶಿ
ದೇಸೆ--ಉತ್ತಮ
ದೇಹಾರ-ದೇವಪೂಜೆ
ದ್ವಾಶಾದಿತ್ಯ-೧೨ ಜನ, ಸೂರ್ಯರು
ಧರಣೇಂದ್ರ-ಆದಿಶೇಷ
ಧರಧುರ-ಶ್ರೇಷ್ಠ
ಧರ್ಮದ ಕವಿಲೆ-ದೇವರಿಗೆ ಬಿಟ್ಟ ಆಕಳು
ಧಾ(ರಾ)ವಟ್ಟಲು-ಲಿಂಗದ ಮೇಲೆ ಕಟ್ಟಿದ
ಜಲದಾರಾ ಪಾತ್ರೆ
ಧವಳಿತೆ-ಬಿಳಿಯ, ಶುಭ್ರ
ಧಾತುಗೆಡು-ಶಕ್ತಿಗುಂದು
ಧೃತಿ-ಧೈರ್ಯ
ನಡೆವೆಣ-ನಡೆದಾಡುತ್ತಿದ್ದರೂ ಹೆಣದಂತೆ
ಬದುಕುವವ
ನಂದಿ-ಸೆರೆ
ನನೆ-ಮೊಗ್ಗು
ನರವಿಂಧ್ಯ-ಜನವಸತಿಯೆಂಬ ಬಿಡು
ನರೆ-ಬಿಳಿ ಕೂದಲು
ನವಖಂಡ-ಒಂಬತ್ತು ಭಾಗ
ನಾಣು-ನಾಚಿಕೆ
ನಾಣುಗೆಡು-ನಾವಿಕೆಯನ್ನು ಬಿಡು
ನಾಣುನುಡಿ-ಲೋಕನಿಂದೆ?
ನಾಭಿ-ಹೊಕ್ಕುಳ
ನಾರಗೋಣಿ-ನಾರಿನಿಂದ ಮಾಡಿದ ಚೀಲ
ನಾತಿ-ಬಿಲ್ಲಿನ ದಾರ
ನಾರಿವಾಣ-ತೆಂಗು
ನಾರುಳಿ-ತೆಂಗು?
ನಾಸ್ತಿಕವಾಡು-ದೇವರ ಅಸ್ತಿತ್ವವನ್ನು ಅಲ್ಲಗಳೆ
ನಿಃಕರಿಸು-ಇಲ್ಲದಂತೆ ಮಾಡು, ಹೋಗಲಾಡಿಸು
ನಿಕ್ಷೇತ್ರ-ಕ್ಷೇತ್ರವಲ್ಲ ದಂತಾಗುವುದು, ನಾಶ?
ನಿಕ್ಷೇಪಿಸು-ಹುದುಗಿಸು, ಹೂಳಿಸು
ನಿಗಳ-ಬೇಡಿ, ಬಂಧನ
ನಿಟ್ಟೈದೆ-ಆಜೀವ ಮುತ್ತೈದೆ
ನಿಧಾನ-ಹೂಳಿಟ್ಟ ದ್ರವ್ಯ
ನಿಯತನಾಗುಉ-ವ್ರತಸ್ಥನಾಗು
ನಿ[ಮ್ಮೈ]ಸಿರಿ-ನಿಮ್ಮ ಐಶ್ವರ್ಯನಿರಿಯನಿಕ್ಕಿ
ದಾಂಟು-ಪ್ರಾಮಾಣಿಕತೆಯನ್ನು
ಸಾರುವುದಕಕ್ಕಾಗಿ ನಿರಿಯನ್ನು ಚೆಲ್ಲಿ
ದಾಟುವುದು
ನಿಂರ್ಆಲ್ಯ-ಉಪಯೋಗಿಸಿದ ವಸ್ತು
ನಿವಾಟ-ನಿರ್ಮೂಲನ?
ನಿಷ್ಪತ್ತಿ-ಪರಿಪಾಕ, ಮುಕ್ತಿ
ನೀರಾಜನ-ಆರತಿ
ನುಡಿವೆಣ-ಮಾತನಾಡುತ್ತಿದ್ದರೂ ಹೆಣದಂತೆ
ಬದುಕುವವ
ನುಸಿ-ನುಚ್ಚು, ಪುಡಿ
ನುಸುಳು-ಮೋಸ, ಜಾರಿಕೊಳ್ಳುವಿಕೆ
ನೆರವಿ-ಸಂಭೋಗ, ಕೂಟ
ನೆರಹು-ಒಗ್ಗೂಡಿಸು, ಸಂಗ್ರಹಿಸು

ನೆಲನಾಳ್ವ-ಅರಸು
ನೆಲೆವಣ್ಣ ಮಾಡು-ವಾಸಸ್ಥಾನವನ್ನು ಮಣ್ಣು ಮಾಡು
ನೇಣು-ಹಗ್ಗ, ಜನ್ನಿವಾರ
ನೇಣಗಾರ-ಕುತ್ತಿಗೆ ಕೊಯ್ಯುವವ, ಜನಿವಾರ ಧರಿಸಿದ ಬ್ರಾಹ್ಮಣ
ನೋನು-ವ್ರತ ಮಾಡು
ನೋಂಪಿ-ವ್ರತ
ಪಂಗುಳ-ಹೆಳವ,ಸೇವಕ
ಪಂಚಗವ್ಯ-ಗೋವಿನಿಂದ ಪ್ರಾಪ್ತವಾಗುವ ೫ ಬಗೆಯ ವಸ್ತು
ಪಂಚಮಹಾವಾದ್ಯ-ರಾಜರ ಮುಂದೆ ನುಡಿಸುವ ೫ ಬಗೆಯ ವಾದ್ಯಗಳು
ಪಂಚೈವರ(ಂ)-ಐದು ಇಂದ್ರಿಯಗಳನ್ನು
ಪಚಾರಿಸಿ-ಪ್ರಚಾರಿಸಿ, ಪ್ರಕಟ ಮಾಡಿ
ಪಟ್ಟಪರಿ-ತುಂಡು ತುಂಡು
ಪಟ್ಟೆಯ-ಖಡ್ಗ
ಪಡಿದೊತ್ತು-ಪ್ರತಿತೊತ್ತು, ತೊತ್ತಿನ ಕೈಕೆಳಗಿನ ತೊತ್ತು
ಪಡಿಪದಾರ್ಥ-ಪ್ರತಿಯೊಂದು ಪದಾರ್ಥ
ಪಡುಗ-ಉಗುಳು ಪಾತ್ರೆ
ಪನ್ನಗಭೂಷಣ-ಹಾವಿನಿಂದ ಅಲಂಕೃತನಾದ ಶಿವ
ಪರದ್ವಾರ-ಪರದಾರತ್ವ, ಜಾರತನ
ಪರಿಗ್ರಾಹಕ-ಸ್ವೀಕರಿಸಿದವ
ಪರಿಚಾರಕ-ಸೇವಕ
ಪರಿಣಾಮ-ತೃಪ್ತಿ
ಪರಿಣಾಮಿಸು-ತೃಪ್ತಿ ಹೊಂದು
ಪರಿಭವ-ಅಪಮಾನ
ಪರಿಯಾಣ-ಊಟದ ತಟ್ಟೆ
ಪರುಷವೇಧಿ-ಪರುಷವನ್ನು ಸ್ಪರ್ಶಿಸಿದುದು
ಪರ್ವತ-ಶ್ರೀಶೈಲ ಪರ್ವತ
ಪಸರ-ಸಂಗ್ರಹ
ಪಾದಚ್ಛಾಯ-೧೫ಳಂಮಾರು ಪ್ರಮಾಣ
ಪಾಪಿಯ ಕೂಸು-ಎತ್ತಿಕೊಂಡವರನ್ನು ತಿನ್ನುವ ಶ್ರೀಶೈಲದಲ್ಲಿಯ ಕೂಸು
ಪಾರ-ದಂಡೆ, ತೀರ
ಪಾಷಂಡಿ-ನಾಸ್ತಿಕ, ಪಿಂಬೇರ
ಪಿಂಬೇರಮೈ(ಲುಗ)-ಪಿಂಬೇರ ಗ್ರಾಮದ ಮೈಲಾರ ದೇವತೆ
ಪಿಸಿತ-ಮಾಂಸ
ಪುರಾತವಳಿ-ಪುರಾತ ಬಳಿ, ಪುರಾತನರ ಸಂತಾನ
ಪುರುಷ-ನಿರ್ವಾಣ-ಪತಿಯ ಮೋಕ್ಷ
ಪುರುಷಬ್ರತಿ-ಪತಿವ್ರತೆ
ಪುಳಕ-ರೋಮಾಂಚನ
ಪುರಾಯ-ಪೂರ್ಣ
ಪೇಯ್ಯ(<ಪಯ್ಯ)-ಕರು
ಪೋಲುಗ-ಪೊಲಲ್ಲುಗ, ಕೆಡುಕು ಮಾಡುವವ
ಪ್ರಣವ-ಓಂಕಾರ ಮಂತ್ರ ರತಿಗ್ರಾಹಕ- ಸ್ವೀಕರಿಸಿದವ
ಪ್ರತಿಪಾದಿಸು-ದೂಷಣೆ ಮಾಡು
ಪ್ರತಿಷ್ಠೆ-ಸ್ಥಾವರಲಿಂಗ
ಪ್ರಮಥರು-ಶಿವನು ಗಣಂಗಳು
ಪ್ರಮಾಣು-ಸಾಕ್ಷಿ
ಪ್ರಾಜ್ಞ-ಚೆನ್ನಾಗಿ ತಿಳಿದವ
ಪ್ರಾರಬ್ಧಕರ್ಮ-ಮುಂದುವರಿದ ಕರ್ಮ
ಫಣಾಮಣಿ-ಹಾವಿನ ಹೆಡೆಯ ರತ್ನ
ಬಂಟ-ಸೇವಕ
ಬಗಿ-ತೋಡು
ಬವ್ವಣೆ-ಬಚ್ಚಣೆ, ಸುಂದರ
ಬಜಾವಣೆ-ಬಾರಿಸುವಿಕೆ
ಬಟ್ಟೆ-ದಾರಿ
ಬಡಿಹ-ಬಡಿತ, (ಸುತ್ತಿಗೆಯಿಂದ) ಬಡಿಯುವುದು
ಬಣಗು-ಕ್ಷುದ್ರ
ಬಣಬೆ-ಬಣವೆ, ಗುಂಪು

ಬತ್ತೀಸ-ಮೂವತ್ತೆರಡು
ಬಯ್ಕೆಯ-ಬಯ್ತಿಟ್ಟ, ಮುಚ್ಚಿಟ್ಟ
ಬಯ್ಕೆಯ ಕಿಚ್ಚು-ವಡಬಾನಲ
ಬರಬರ-ಬರುಬರುತ್ತ
ಬರುದೊರೆ-ವ್ಯರ್ಥ
ಬರುಕಾಯ-ಭವಿ, ಲಿಂಗಕಾಯವಲ್ಲದವ
ಬಕ್ಕಹ-ಒಡೆಯ
ಬಲ್ಲಿತ್ತು-ಗಟ್ಟಿಮುಟ್ಟು
ಬಲ್ಲಿದ-ಬಲಶಾಲಿ
ಬಲುಹು-ಬಲಿಷ್ಠ
ಬವರ-ಯುದ್ಧ
ಬಸಕುತ್ತ-ಅಣಕಿಸುತ್ತ?
ಬಹಿರಂಗ-ಶುದ್ಧಿ-ಆಚಾರ ಶುದ್ಧಿ
ಬಳಿಬಳಿ-ಬೆನ್ನು ಹಿಂದೆ, ಬೆಂಬಳಿ
ಬಳಿನೀರು-ಮಂತ್ರಜಲ
ಬಳ್ಳು-ನರಿ
ಬಳ್ಳ-ಅಳೆಯುವ ಪ್ರಮಾಣ
ಬಳಿದಪ್ಪು-ಕ್ರಮ ತಪ್ಪು.ದಾರಿ ತಪ್ಪು ರಹ್ಮೇತಿ-ಬ್ರಾಹ್ಮಣ ಹತ್ಯೆ
ಬ್ರಹ್ಮವಿತ್ತು-ಬ್ರಹ್ಮವನ್ನು ತಿಳಿದವ
ಬ್ರಹ್ಮಹತ್ಯ-ಬ್ರಾಹ್ಮಣಹತ್ಯೆ
ಬಾಣಸ-ಅಡಿಗೆ, ಊಟ
ಬಾತೆ-ಪ್ರಯೋಜನ
ಬಾದುಮ-ಗಂಡೂ ಹೆಣ್ಣೂ ಅಲ್ಲದ ಒಂದು ಗ್ರಾಮದೇವತೆ? ಜೋಕುಮಾರ?
ಬಾಯಿನ-ಬಾಗಿನ, ಕಾಣಿಕೆ
ಬಾರೆನೆತ್ತು-ಚರ್ಮಸುಲಿ
ಬಾರಿ-ಕ್ರಮ, ಸರತಿ
ಬಾಲವ-ಕೊಯ್ದು-ಪುನರ್ಜನ್ಮ ನಿವೃತ್ತಿ ಮಾಡಿ
ಬಾವುಲ-ತೊಗಲ ಬಾವುಲ
ಬಾವನ್ನ-ಶ್ರೀಗಂಧ
ಬಾಸುಳ-ಹೊಡೆತದಿಂದ ಮೈಮೇಲೆ ಮೂಡುವ ಗೆರೆ
ಬಾಳ-ಖಡ್ಗ
ಬಾಳಿಲ್ಲದವಳು-ವಿಧವೆ
ಬಾಳುವೆಣ-ಬದುಕಿದ್ದರೂ ಸತ್ತಂತೆ ಇರುವವ
ಬಿಟ್ಟಿ-ವಿಷ್ಟಿ, ಸಂಬಳವಿಲ್ಲದ ಸೇವೆ
ಬಿಡಲು-ಈಡು ಬಬಿಡಲು
ಬಿತ್ತು-ಬೀಜ
ಬಿದಿರು-ಬಾಗು, ವಿನಯಿಯಾಗು
ಬಿನ್ನಾಣ-ವಿಜ್ಞಾನ, ನೈಪುಣ್ಯ
ಬಿನ್ನಾಣಿ-ವಿಜ್ಞಾನಿ ತಿಳಿದವ
ಬಿರಿದ-ಬಿರುದು
ಬಿಲಿ-ಬೆಲೆ ಕೊಟ್ಟು ತೆಗೆದುಕೊಳ್ಳು
ಬಿಲಿತು-ಬೆಲೆ ಕೊಟ್ಟು
ಬೀಗು-ಕೊಬ್ಬು
ಬೀದಿಯ ಗುಂಡ-ಬೀದಿಯಲ್ಲಿ ಬಡಿವಾರದಿಂದ ತಿರುಗಾಡುವವ
ಬೀಯ-ವ್ಯೆಯ
ಬೀಸರ-ವ್ಯರ್ಥ
ಬೀಸಿ-ಬೀಸಿ ಬೀಸಿ ಬಟ್ಟೆ ಒಗೆಯುವ ಕೆಲಸ ಮಾಡಿ
ಬೀಳುಡೆ-ಉಟ್ಟು ಕಳೆದ ಬಟ್ಟೆ
ಬೀಳುವೆಣ-ಉಂಟು ಮಲಗುವ ವ್ಯರ್ಥ ಮನುಷ್ಯ
ಬೂರ-ಟೊಳ್ಳು
ಬೆಂತರ-ವ್ಯಂತರ, ಪಿಶಾಚಿ
ಬೆಂಬೀಳು-ಬೆನ್ನು ಹತ್ತು
ಬೆಟ್ಟು-ಪೆಟ್ಟು, ಹೊಡೆಯುವಿಕೆ
ಬೆದರಟ್ಟು-ಬೆದರಿಸಿ ಬೆನ್ನು ಹತ್ತು
ಬೆನಕ-ವಿನಾಯಕ, ಗಣಪತಿ
ಬೆನಕ-ತೂಕಕ್ಕೆ ಬಳಸುವ(ಬೆಣಚು)ಕಲ್ಲು
ಬೆನ್ನು ಬಾರನೆತ್ತು ಬೆನ್ನು ಚರ್ಮವನ್ನು ಸುಲಿ
ಬೆರಣಿ-(ಸಗಣಿಯ)ಕುರುಳು
ಬೆರೆ-ಅಹಂಕಾರದಿಂದ ವರ್ತಿಸು
ಬೆವಹಾರ-ವ್ಯವಹಾರ
ಬೆಸನ-ವ್ಯಸನ, ಬೆಸಗೊಳ್ಳುವಿಕೆ
ಬೆಳಸು-ಪೈರು

ಬೆಳ್ಳಾರು–ಮೃಗಗಳನ್ನು ಹಿಇಡಿಯುವ ಬಲೆ
ಬೆಳ್ಳಿಗೆಯಾವು–ಬಿಳಿಯ ಜಾತಿಯ ಆಕಳು
ಬೆಳ್ಳುಕ–ಬಳ್ಳಗಿರುವುದು
ಬೆಳುಗಾರ–ಬೆಸುಗೆಗಾಗಿ ಬಳಸುವ ಪದಾರ್ಥ
ಬೆಳ್ಳೆ ಎತ್ತು–ಬಿಳಿಯ ಜಾತಿಯ ಎತ್ತು
ಬೇಟ–(ಪ್ರೇಮ)ಬೇಡುವುದು
ಬೇಹು–ಗೌಪ್ಯ
ಬೇಳ್–(ಯಜ್ಞದಲ್ಲಿ)ಆಹುತಿ ಕೊಡು
ಬೊಜಗ–ವಿಟ
ಬೊಂತೆ–ಕೌದಿ
ಬೊಪ್ಪ–ದೊಡ್ಡಪ್ಪ
ಬೊಬ್ಬುಲಿ–ಜಾಲಿ
ಬೊಬ್ಬುಳಿಕೆ–ನೀರಗುಳ್ಳೆ
ಬೊಮ್ಮ–ಬ್ರಹ್ಮ
ಬೊಳ್ಳಗ–ಮೋಸಗಾರ
ಬೋಡಾಗು–ಊನವಾಗು
ಬೋಹರಿಗೆ–ಕಸಬರಿಗೆ
ಬೋಳ–ಬೋಳು ತಲೆಯವ, ತಲೆ
ಬೋಳಿಸಿಕೊಳ್ಳುವ ಒಂದು ಧಾರ್ಮಿಕ ಪಂಥದ ಅನಿಯಾಯಿ
ಬೋವಿತಿ–ಮೀನುಗಾರಿತಿ
ಬೋಳೈಸು–ಸಮಾಧಾನಪಡಿಸು, ಪ್ರೀತಿಸು
ಭಂಗಗಾರ–ಅವಮಾನಿತ
ಭಂಡ–ನಾಚಿಕೆಯಿಲ್ಲದವ
ಭಾಂಡ–ಅಡುಗೆ ಪಾತ್ರೆ
ಭಾಜನ–ಊಟದ ಪಾತ್ರೆ, ಗುರಿ
ಭಕ್ತಕಾಯ ಮಮಕಾಯ–ಭಕ್ತನ ಕಾಯವೇ ನನ್ನ ಕಾಯ
ಭರ–ಉತ್ಸಾಹ
ಭವ–ಜನನ ಮರಣ ರೂಪದ ಸಂಸಾರ
ಭವಿತವ್ಯ–ಬದುಕುವ ವ್ಯವಸ್ಥೆ
ಭಾಷೆ–ಪ್ರತಿಜ್ಞೆ
ಭಿತ್ತಿ–ಗೋಡೆ
ಭೂತದೇಹಿ–ಪದಾರ್ಥವಾದಿ, ಭವಿ
ಭೂತಿಕ–ಭೂತ ಹಿಡಿದವ
ಭೂನಾಗ–ಸಾಮಾನ್ಯ ನಾಗರಹಾವು
ಮಂಜರ–ಬೆಕ್ಕು
ಮಂಡೂಕ–ಕಪ್ಪೆ
ಮಂಡೆ–ತಲೆ
ಮಂಡೆಯ ಮೇಲೆ ಸಿಂಬೆ–ಆಳುಗಳ ಮಾರಾಟ ಸಂದರ್ಭದಲ್ಲಿ ತಲೆಗೆ ಸುತ್ತುತ್ತಿದ್ದ ಬಳ್ಳಿ
ಮಂಡೆಯ ಬೋಳಿಸು–ಒಬ್ಬನಿಗೆ ಆಳಾದುದನ್ನು ಸೂಚಿಸಲು ತಲೆ ಬೋಳಿಸಿಕೊಳ್ಳುವ ಪದ್ಧತಿ
ಮಂತ್ರವೈದ್ಯ–ಮಂತ್ರದಿಂದ ರೋಗಗುಣಪಡಿಸುವ ವೈದ್ಯಪದ್ಧತಿ
ಮಚ್ಚು–ಪ್ರೀತಿ, ಮೆಚ್ಚು
ಮಟ್ಟಿ–(ಹಣಡಯ ನಾಮಕ್ಕೆ ಬಳಸುವ) ಒಂದು ಬಗೆಯ ಮಣ್ಣು
ಮಡಗು–ಮುಚ್ಚಿಡು
ಮಡಿಲು–ಉಡಿ
ಮತ್ತರ–ಹೊಲ ಅಳೆಯುವ ಒಂದು ಅಳತೆ ಪ್ರಮಾಣ
ಮತ್ಸ್ಯ–ಮೀನು
ಮದವಳಿಗೆ–ಮದುವಣಗಿತ್ತಿ, ಮದವು ಅಳಿಯಲಿ
ಮನೆಯ–ಮಗ–ವೇಳೆವಾಳಿ
ಮರಗಾಲು–ಕಟ್ಟಿಗೆಯ ಕಾಲು
ಮರುಜವಣಿ–ಸಂಜೀವಿನಿ ಕಡ್ಡಿ
ಮರೀಚಿ–ಮೃಗಜಲ
ಮರುಳ–ತಿಳಿಗೇಡಿ, ದೆವ್ವ
ಮಸುಕು–ಉಲ್ಬಣತೆ, ಕಪ್ಪು ಬಣ್ಣ
ಮಸಣಿ–ಸ್ಮಶಾನವಾಸಿ ದೇವತೆ ಮಾಗಿ–ಚಳಿಗಾಲ
ಮಾಗುಡ–ಮಹಾಗುಂಡ, ತೀರ್ಥ
ಮಾಟ–ಮಾಟ ಮಂತ್ರ ಮಾಡುವಿಕೆ, ಕೆಲಸ
ಮಾಡದ ಕನಸು–ಮನಸ್ಸಿನಲ್ಲಿ ಮಂಡಗೆ?

ಮಾಣದ-ಬಿಡದೆ, ಒಂದೇ ಸವನೆ
ಮಾತಂಗಿ-ಶೂದ್ರ ಹೆಣ್ಣು
ಮಾತಿನ ಮಾತು-ಗತಾನುಗತಿಕ ಮಾತು, ವೇದ
ಮಾಬಳೆ-ಮಾಣ್ಬಳೆ? ಬಿಡವಳೆ?
ಮಾರಂಕ-ಪ್ರತಿಯೋಧ
ಮಾರುಗೋಲು-ಪ್ರತಿಬಾಣ
ಮಾರುವೋಗು-ಮಾರಿಕೊಳ್ಳು
ಮಾಸಾಳು-ಯೋಧ
ಮಾಳ-ಶ್ರಾದ್ಧ, ಮಹಳಪಕ್ಷ
ಮೀಂಬುಲಿಗನ ಹಕ್ಕಿ-ಮೀನು ತಿನ್ನುವ ಹಕ್ಕಿ
ಮಿಟ್ಟಿ-ಮಣ್ಣು
ಮಿಡಿ-ಮಿಡಿ ನಾಗರಹಾವು
ಮಿಡುಕರು-ಬೆಂಕಿಯ ಕಿಡಿ
ಮುಂಡಿಗೆ-ಆಹ್ವಾನ, ಸಮಸ್ಯೆ
ಮುಂಬಲ್ಲು-ಮುಂದಿನ ಹಲ್ಲು
ಮುಕ್ಕು-ಉನವಾದುದು
ಮುಖಲಿಂಗಿ-ಮುಖವುಳ್ಳ ಲಿಂಗ ಸ್ವರೂಪಿಗಳು
ಮುಚ್ಚಿಗ-ಕಲ್ಲುಕುಡಿಗ, ಉಪ್ಪಾರ
ಮುಟ್ಟಿಗೆ-ಮುಷ್ಟಿಕೆ, ಮುಟಿಗೆ
ಮುಡುಹಿಕ್ಕು-ಭುಜ ಚಪ್ಪರಿಸಿಕೊಳ್ಳು
ಮುತ್ತಂತೆ-ಪಕ್ವವಾದಂತೆ
ಮುತ್ತಯ್ಯ-ತಂದೆಯ ತಂದೆ, ಅಜ್ಜ
ಮುಯ್ಯಾನು-ಸರಿಗಟ್ಟು, ಸಲುಗೆ ತೋರಿಸು
ಮೂಕೂರತಿ-ಮೂಗಿಲ್ಲದವಳು
ಮೂಗುವಡುಮೂಕನಾಗು
ಮೂಚುಟಾಗಿ-ಮೊದಲೇ
ಮೂಲಸ್ಥಾನ-ಕೇಂದ್ರ ದೇವಸ್ಥಾನ
ಮೂಲಿಗ-(ಮನೆತನದ)ಮೂಲಪುರುಷ
ಮೂವಿಧಿ-ಸೃಷ್ಟಿ, ಸ್ಥಿತಿ, ಲಯ
ಮೇಳವಾಡು-ಸ್ನೇಹಿತನಾಗು
ಮೇಳಾಪ-ಸಹವಾಸ, ಸಭೆ
ಮೊಗೆ-ಬೊಗಸೆಯಲ್ಲಿ ತುಂಬಿಕೊಳ್ಳು
ಮೊನೆ-ತುದಿ
ಮೊರಡಿ-ಕಲ್ಲು ಮಣ್ಣಿನ ಭೂಮಿ
ಮೋಟ-ಕೈಯಿಲ್ಲದವ
ಮೋಟಹಿಸು-ತಾಗು
ಮೌಳಿ-ಕಿರೀಟ
ಯಾಗ ನಟ್ಟುವಿಗ, ಪಾಣರು-ಯಜ್ಞದಲ್ಲಿ ಕುಣಿಯುವವರು, ಹಾಡುವವರು
ಯೋಜನ-ನಾಲಕು ಹರಿದಾರಿ
ರಂಜಕ-ಬಣ್ಣದ ಮಾತುಗಾರ
ರಜ್ಜ-ಹಗ್ಗ
ರವಣ-ಔಡಲ
ರಾಟಳ-ಚಕ್ರ
ರಾಣಿವಾಸ-ಅಂತಃಪುರ
ರೂಹು-ರೂಪ, ಆಕಾರ, ಮೂರ್ತಿ
ಲಂಘಿಸು-ಜಿಗಿ
ಲಂದಣಗಿತ್ತಿ-(ರಂಧನಿಕಾ)ಅಡಿಗೆಯವಳು
ಲಂಪಟ-ಆಸಕ್ತ
ಲಗ್ಗ-ಲಗಗ್ಗ, ಕೂಡುವಿಕೆ
ಲಲನೆ-ಸ್ತ್ರೀ
ಲಾಂಛನ-ಜಂಗಮ ಚಿಹ್ನೆ
ಲಾಯ-ಕುದುರೆ ಕಟ್ಟುವ ಸ್ಥಳ
ಲಕ್ಕಗಾವುದ-ಲಕ್ಷ ಗಾವುದ
ಲಗ್ನ-ಮುಹೂರ್ತ
ಲಲಾಟಲಿಖಿತ-ಹಣೆಯ ಬರಹ
ಲೀಯ-ಲೀನ
ಲೆಂಕ-ವೇಳೆವಾಳಿ
ಲೆಂಗಿ-ಲೆಂಕಿ, ವೇಳೆವಾಳಿ ಸ್ತ್ರೀ
ಲೊಟ್ಟಿಯತನ-ಟೊಳ್ಳುತನ
ಲೋಗರ-ಸಾಮಾನ್ಯರ
ವಜ್ರ-ಸಿಡಿಲು
ವರದ-ವರವನ್ನು ಕರುಣಿಸುವವ
ವರ್ತಮಾನ-ಕ್ರಿಯೆ, ಘಟನೆ
ವರ್ಮ-ಮರ್ಮ, ರಹಸ್ಯ
ವಶ್ಯ-ವಶೀಕರಣ ವಿದ್ಯೆ
ವಸ್ತು-ಮೂಲವಸ್ತು()
ವಳಿ-ಬಳಿ, ವಂಶಾವಳಿ

ವಾಮಕ್ಷೇಮ–ಹಾನಿ ವೃದ್ಧಿ
ವಾಯ–ಮಾಯ? ಮೋಸ, ವ್ಯರ್ಥ
ವಾರಣಾಸಿ–ಕಾಶಿ ಕ್ಷೇತ್ರ
ವಾರಿಕಲ್ಲು– ಆಣೆಕಲ್ಲು
ವಾಸಿ–ನೆಲೆ ನಿಲ್ಲುವಂಥದು
ವಿಗರ್ಭಣೆ–ಬೆದರಿಕೆ
ವಿದಾರಿಸಿ–ಕತ್ತರಿಸಿ
ವಿಧಿ–ರೀತಿ
ವಿಭಾವ–ಭಿನ್ನಭಾವ
ವಿರಿಂಚಿ–ಬ್ರಹ್ಮ
ವಿರೂಪಾಕ್ಷ–ಹಂಪೆ
ವಿಲಗ್ಗ–ವಿಲಗ್ನ, ಅಗಲಿಕೆ
ವಿಶ್ರಾಮ–ಕೊನೆ, ನೆಲೆ
ವಿಷ್ಟಿಸು–ಮಲವಿಸರ್ಜನೆ ಮಾಡು
ವಿಸರ್ಜನೆ–ಬಿಟ್ಟುಕೊಡುವುದು
ವೀಚಿ–ತೆರೆ
ವೀರಪಟ್ಟ–ಸೇನಾಪತಿಯ ಹಣೆಗೆ ಕಟ್ಟುವ ಗೌರವದ ಪಟ್ಟಿ
ವೃಷ್ಟಿ–ಮಳೆ
ವೆಗ್ಗಳ–ಅಧಿಕ
ವೇದ್ಯ–ತಿಳಿದವ
ವೇದ್ಯವಾಗು–ತಿಳಿ, ಗೋತ್ತಾಗು
ವೇಧಿಸು–ಅಪ್ಪಳಿಸು, ಸ್ಪರ್ಶಿಸು
ವೇಸರ–ಹೇಸರಗತ್ತೆ
ವೇಳೆ–ವೇಳೆವಾಳಿ?
ವೇಳೆವಾಳಿ–ಒಡೆಯನಿಗಾಗಿ ಆತ್ಮ ಬಲಿಯಾಗುವ ವ್ಯಕ್ತಿ
ವೈತರಣಿ–ನರಕದಲ್ಲಿಯ ಒಂದು ನದಿ
ವೈಶಿಕ–ಸಮ್ಮೋಹನ ಶಕ್ತಿ
ವೈಶಿಕಶಾಸ್ತ್ರ–ವಶೀಕರಣ ಶಾಸ್ತ್ರ
ವೈಶೀಷಿಕ–ಕಣಾದನ ಸಿದ್ಧಾಂತವಿಶೇಷ
ವ್ಯತೀಪಾತ–ಸೂರ್ಯ ಚಂದ್ರರ ದುಷ್ಪಯೋಗ
ವ್ಯಾಧ–ಬೇಡ, ಕಿರಾತ
ವ್ಯಾಧಿ–ರೋಗ
ವ್ಯಾಪ್ತಿ–ವ್ಯಾಪತ್ತಿ, ಉದ್ಯೋಗ
ವ್ಯಾಳೇಶ–ಆದಿಶೇಷ
ಶಿಖೆ–ಜುಟ್ಟ
ಶಿವದಾನ–ಮಜ್ಜಿಗೆ
ಶುಕ್ಲ–ಪುರುಷನ ವೀರ್ಯ
ಶೋಣಿಸು–ಸ್ತ್ರೀಯ ರಜಸ್ಸು
ಶೌಚ–ಶುಚಿಯುಳ್ಳ
ಶ್ರಪಣ–ಕಟ್ಟಿಗೆ
ಶ್ವಪಚ–ಕಟ್ಟಿಗೆ
ಶ್ವಪಚ–ಕಟ್ಟಿಗೆ
ಶ್ವಪಚ–ಶ್ವಾನ ಮಾಂಸಾಹಾರಿ, ಶೂದ್ರ
ಶ್ವಾನ–ಜ್ಞಾನ–ಶ್ವಾನ ಜ್ಞಾನದಂಥ ಜ್ಞಾನ
ಶ್ರವ–(ಶ್ರಮ), ವ್ಯಾಯಾಮ
ಶ್ರುತಿ–ವೇದ
ಶ್ರೋತ್ರ–ಕಿವಿ
ಷಡ್ಭಾಗ–ಆರರಲ್ಲಿ ಒಂದು ಭಾಗ
ಷಡುಸಮ್ಮಾರ್ಜನೆ–ಆರು ಬಗೆಯ ಸಾರಣೆ
ಷೋಡಶೋಪಚಾರ–ದೇವರನ್ನು ೧೬ ಬಗೆಯಾಗಿ ಉಪಚರಿಸುವುದು
ಸಂಕಲೆ–ಸಂಕೋಲೆ, ಬೇಡಿ
ಸಂಚಲ–ಚಂಚಲ
ಸಂಚಿತ–ಸಂಗ್ರಹಿಸಲ್ಪಟ್ಟ
ಸಂಚಿತಕರ್ಮ–ಹಿಂದಿನ ಜನ್ಮದಲ್ಲಿ
ಸಂಗ್ರಹಿತವಾದ ಕರ್ಮ
ಸಂಬೋಳಿ–ಶೂದ್ರರು ಗ್ರಾಮ ಪ್ರದೇಶ
ಪ್ರಸಂಗದಲ್ಲಿ ವ್ಯಕ್ತಪಡಿಸುವ ಶಬ್ದ ಸಕೃತ್–ಒಮ್ಮೆ
ಸಜ್ಜನ–ಹೆಂಡತಿ
ಸಟ್ಟುಕ–ಅಡಿಗೆಗಾಗಿ ಬಳಸುವ ಸವುಟು
ಸತ್ತಿಗೆ–ಛತ್ರಿಕಾ, ಛತ್ರಿ
ಸದಗ–ಮಂದ
ಸದಮದ–ಅಧಿಕಮದ?
ಸದೆ–ಹೊಡೆ
ಸನ್ನಿ–ಸರಿಯಿರಿ, ತೊಲಗಿರಿ

ಸನ್ನಿಹಿತ-ತೀರ ಹತ್ತಿರದಲ್ಲಿರವವರು
ಸಬಳ-ಕೋಲು
ಸಮನಿಸು-ಪ್ರಾಪ್ತವಾಗು, ಸರಿ ಕಾಣು
ಸಮವೇದಿಸು-ಸರಿಯಾಗಿ ತಿಳಿ
ಸಮಯಾಚಾರ-ಧರ್ಮದ ಆಚರಣೆ
ಸಯದಾನ-ಅಡುಗೆ-ಪದಾರ್ಥ
ಸಯವಪ್ಪ-ಸ್ವಯವಾಗಿರುವ ತನ್ನದಾಗಿರುವ
ಸರಕು-ಮಾಡು-ಗಮನ ಕೊಡು
ಸರವಿ-ಹಗ್ಗ
ಸರಿಸವ-ಸರಿಸಮಾನ
ಸಲಗೆ-ಧಾನ್ಯ ಅಳೆಯುವ ಸಾಧನ
ಸಲ್ಲದ-ಹೊನ್ನು-ಖೊಟ್ಟಿ ನಾಣ್ಯ
ಸಲಾಕೆ-ಕಿರಣ
ಸಲೆ-ಚೆನ್ನಾಗಿ
ಸಲುಗೆ-ಚೆನ್ನಾಗಿ
ಸಲುಗೆ-ಚಲಾವಣೆ
ಸಲುವ-ಚಲಾವಣೆಯಲ್ಲಿರುವ
ಸವಣ-ಜೈನ ಸನ್ಯಾಸಿ
ಸವಸು-ಸಮೆಯಿಸು, ಸಿದ್ಧಪಡಿಸು.
ಸವೆಯಿಸು. ವ್ಯಯಿಸು, ನೀಡು
ಸಸಿನ-ನೇರ
ಸಾರಾಯ-ನಿಜತತ್ವ.ತಿರುಳು
ಸಾರು-ಸಮೀಪ ಬರು. ಹೊಂದು
ಸಾಲಿಗ-ಜೇಡ(ಜೇಲ>ಚೇಲಿಗ)
ಸಿಂಗಿ-ಭಯಂಕರ ವಿಷ
ಸಿಂಬರ-ಸೇವಕ, ತೋತ್ತು
ಸಿತಗ-ಕಡುಕ, ನಿಷ್ಠುರ
ಸಿದ್ದಿಗೆ-ಶವವನ್ನು ಒಯ್ಯುವ ಸಿದಿಗೆ
ಸಿನೆ-ಶೂನ್ಯ? ಹಾಳಾದ
ಸೀರೆ-ಚೀರೆ.ಬಟ್ಟೆ
ಸುಮ್ಮಾನ-ಸುಮ್ಮನಿರುವಿಕೆ
ಸುಯಿಧಾನ-ಎಚ್ಚರಿಕೆ
ಸುರಗಿ-ಖಡ್ಗ
ಸುಲಿ-ಸೆಳೆದುಕೊಳ್ಳು
ಸೂತಕ-ಮೈಲಿಗೆ
ಸೂನೆಗಾರ-ಕಟುಕ
ಸೂರೆ-ವಿಪುಲ
ಸೊಡರು-ದೀಪ
ಸೊಣಗ-ಶುನಕ, ನಾಯಿ
ಸೊಲ್ಲು-ಮಾತು
ಸೊಮ್ಮು-ಸ್ವತ್ತು.ಆಸ್ತಿ
ಸೋಂಕು-(ಸ್ತ್ರೀ)ಸ್ಪರ್ಶನ
ಸೋರೆ-ಕುಂಬಳಕಾಯಿ, ವೀಣೆಯ ಕುಂಬಳ ಬುರುಡೆ
ಸೋಹಂ-ನಾನೇ(ಆತನು=)ದೇವರು ಎಂಬ ಭಾವ
ಸೋಹೆ-ಗುರುತು.ಸುಳುಹು
ಸ್ವಯಲಿಂಗ-ಸ್ವಯಂಲಿಂಗ
ಸ್ಥಾವರ-ಸ್ಥಗಿತಿ ವ್ಯವಸ್ಥೆ.ಸ್ಥಾಪಿತಲಿಂಗ
ಸ್ವಾತಿ-ಸ್ವಾತಿ ನಕ್ಷತ್ರ
ಸ್ವಾಮಿ-ಭೃರತ ಸಂಬಂದ ಒಡೆಯ ಸೇವಕ ಸಂಬಂಧ
ಸ್ವೇದಜ-ಬೆವರಿನಲ್ಲಿ ಹುಟ್ಟುವ ಜೀವಿ
ಹಂಗುಹರಿ-ಋಣ
ಹಂಜ-ಪಮಜರ
ಹಂದೆ-ಹೆಂಡಿ
ಹಗರಣ-ವೇಷ.ಸೋಗು
ಹಗಹ-ಧಾನ್ಯ ಸಂಗ್ರಹಿಇಸುವ ತಗ್ಗು
ಹಡಿಕೆ-ದುರ್ವಾಸನೆ.ಮಲ
ಹಡೆದ-ಕಾಯ-ಪಡೆದ ಶರೀರ
ಹಣಿದ-ಜೂಜಾಟ
ಹಡೆದೊಡೆವೆ-ಗಳಿಸಿದ ಸಂಪತ್ತು
ಹದುಳ-ಕ್ಷೇಮ
ಹನ್ನಿಬ್ಬರು-ಹನನ್ನೆರಡು ಜನ
ಹಯನು-ಹೈನು
ಹರಕೆಯ-ಕೇಡು-ಹರಹುವಿಕೆಯ ಕೇಡು?
ಹರದ-ಪರದ, ವ್ಯಾಪಾರಿ
ಹರಬೀಜ-ಶಿವಸಮತಾನ

ಹರ-(ಹಿ)-ಹರವಿಕೊಂಡು
ಹರಿತಿನಿಸು ಹರಿದು ತಿನ್ನಿಸುಹರಿಬ-ಕ್ರಮ
ಹರಿವ-ಹಲ್ಲಿನಿಂದ ಕೊರೆಯುವ
ಹರೆ-ಪರೆ, ಹಲಗೆ
ಹಲ್ಲಣಿಸು-ಸಿದ್ಧಪಡಿಸು
ಹಲುದೋರೆ-ಹಲ್ಲು ಕಾಣುವ ಹಾಗೆ
ಹವಣಿಸು-ಎಣಿಕೆ ಹಾಕು
ಹವಿ-(ಯಜಜ್ಞಕ್ಕೆ ಅರ್ಪಿಸುವ)ತುಪ್ಪ
ಹಸರ-ಪ್ರಸಾರ
ಹಸ್ತಬಾಯನೆ-ಮುಚ್ಚಿ-ಕೈ ಮುಗಿದು
ಹಸುರಂಬಲಿ-ಸೊಪ್ಪಿನಿಂದ ಮಾಡಿದ ಅಂಬಲಿ
ಹಾಗ-ಒಂದು ಸಣ್ಣ ನಾಣ್ಯ
ಹಾರು-ಪಾರ್. ನಿರೀಕ್ಷಿಸು
ಹಾವುಗೆ-ಪಾದುಕೆ
ಹಾಸ-ನೆಯ್ಗೆ
ಹಿಡಿವಡೆ-ಸೆರೆ ಸಿಗು
ಹಿದಿರೆ-ಬಣವೆ
ಹಿಳಿ-ಹಿಂಡು
ಹುಂಡ-ಗ್ರಾಮ್ಯ
ಹುದುವಾಳಿಗೆ-ಕೂಡಿಕೊಂಡು ಬಾಳುವುದು
ಹುಯ್ಯಲು-ದುಃಖ ಧ್ವನಿ.ದಾನಿ
ಹುರಿಬುತ್ತಿ-ಹುರಿದ ವಸ್ತುಇನ ಅಡಿಗೆ
ಹುಲುಗಿಳಿ-ಕ್ಷುದ್ರಗಿಳಿ
ಹುಳ್ಳಿ-ಕಟ್ಟಿಗೆ
ಹುಳುಗುಪ್ಪೆ-ಹುಳದ ಗುಂಪು
ಹುಳುಗೊಂಡ-ಹುಳಗಳಿಂದ ತುಂಬಿದ ನರಕ
ಹೂತು-ಹೂವು ಬಿಟ್ಟು
ಹೂವಿನ-ಬೊಟ್ಟು-ಹಣೆಯ ಕುಂಕುಮ?
ಹೂಸು-ಪೂಸು. ಲೇಪಿಸು
ಹೆಂಪು-ಪೆಂಪು.ಹಿರಿಮೆ
ಹೆಗ್ಗುರಿ-ದೊಡ್ಡಕುರಿ ಮೂರ್ಖ
ಹೆಡಗೈ-ಹಿಂದು ಎಳೆದ ಕೈ
ಹೆಡಗುಡಿ-ಹೆಡಮುರಿಗೆ
ಹೆಣಮೂಳ-ಹೆಣದಂಥವ
ಹೆರಮೂಲ-ಹೆಣದಂಥವ
ಹೆರತೊಲಗು-ಹಿಂದೆ ಸರಿ
ಹೇಗತನ-ಹೆಗ್ಗತನ, ದಡ್ಡತನ
ಹೇಯ-ತಿರಸ್ಕಾರ
ಹೇಳಿಗೆ-(ಹಾವಿನ)ಬುಟ್ಟಿ
ಹೊಂದಿಗೆ-ಹೊದ್ದಿಗೆ, ಕೂಡುವಿಕೆ
ಹೊಂದು-ಸಾಯು
ಹೊಂಬಿತ್ತಾಳೆ-ಬಂಗಾರದ ಗಿಲೀಟು ಮಾಡಿದ ಹಿತ್ತಾಳೆ
ಹೊಟ್ಟೆ-ಬಾವು
ಹೊತ್ತಾರೆ-ಮುಂಜಾವು
ಹೊದಕುಳಿ-ಹುದುಗುವಿಕೆ
ಹೊನಲು-ಪ್ರವಾಹ
ಹೊಯ್ದು-ಹುಯ್ಯಲು, ದುಃಖ
ಹೊರಸು-ಕಾಡು ಪಾರಿವಾಳ. ಬೆಳವ
ಹೊರಹಂಚೆ-ಹೊರವೇಷ
ಹೊರೆ-ಹೊದಿಕೆ, ಪೋಷಿಸು, ಸಾಮಿಪ್ಯ
ಹೊಲಬು-ದಾರಿ
ಹೊಲಬಿಗ-ಸರಿಯಾದ ದಾರಿಯಲ್ಲಿರುವವನು
ಹೊಲಬುಗೆಡು-ದಾರಿ ತಪ್ಪು
ಹೊಲ್ಲ-ಕೆಟ್ಟ. ಅಯೋಗ್ಯ
ಹೊಲೆ-ಸ್ತ್ರೀಯರ ಮುಟ್ಟು
ಹೊಸತು-ಮೀಸಲು ಪದಾರ್ಥ, ಮೊದನೆಯ ಬಲಿ
ಹೊಳ್ಳು-ಪೊಳ್ಳು
ಹೋಕು-ಹೋಗುವಿಕೆ

❖❖

೩. ಷಟ್ಸ್ಥಲ ವಚನಗಳ ಅಕಾರಾದಿ

ಇದು, ಒಂದನೆಯ ಕಾಂಡದಲ್ಲಿರುವ ಷಟ್ಸ್ಥಲ ವಚನಗಳ ಅಕಾರಾದಿಯಾಗಿದೆ. ಎರಡನೆಯ ಕಾಂಡದಲ್ಲಿ ವಚನಗಳನ್ನು ಅಕಾರಾದಿ ಕ್ರಮದಲ್ಲಿಯೇ ಹೊಂದಿಸಿರುವುದರಿಂದ ಮತ್ತೆ ಅವುಗಳ ಅಕಾರಾದಿಯನ್ನು ಇಲ್ಲಿ ಕೊಟ್ಟಿಲ್ಲ.

ಅ–ಆ

ಒ–ಓ

ಕ–ಖ

ದ-ಧ

ಪ–ಫ

ಬ–ಭ

❖❖

೪. ಆಕರ ಗ್ರಂಥಗಳು

೧. **ಅದ್ವೈತಾನಂದದ ವಚನಗಳು**
ಸಂ: ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯಮಠ, ಗದಗ, ೧೯೮೩

೨. **ಅನುಭಾವಜ್ಞಾನಸಾರಾಮೃತ ಸಂಪಾದನಾಸ್ತೋತ್ರ-ಸಂಪಾದನೆಯ ಪರ್ವತೇಶ**
ಸಂ: ಶ್ರೀ ಬಿ.ಆರ್. ಹೂಗಾರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೯

೩. **ಅಷ್ಟಾವರಣದ ವಚನಗಳು-ಎಳಮಲೆಯ ಗುರುಶಾಂತದೇವ**
(ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು)
ಸಂ: ಡಾ ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೩

೪. **ಆಚರಣೆಯ ಸಂಬಂಧದ ವಚನಗಳು-ಸಂಪಾದನೆಯ ಹರತಾಳ ಚೆನ್ನಂಜಯದೇವರು**
ಸಂ: ಶ್ರೀ ಪಿ. ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣ ಸಂತಾನ(ತ್ರೈಮಾಸಿಕ)
೪೪೭, ಸಂತೆಪೇಟೆ, ಮೈಸೂರು, ೧೯೮೨

೫. **ಆಚರಣೆಯ ಸಂಬಂಧದ ವಚನಗಳು-ಸಂಪಾದನೆಯ ಸಿದ್ಧವೀರೇಶ್ವರದೇವರು**
ಸಂ: ಶ್ರೀ. ಪಿ. ಎಂ. ಗಿರಿರಾಜು
ಶರಣ ಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ)
೪೪೭, ಸಂತೆಪೇಟೆ, ಮೈಸೂರು, ೧೯೮೨

೬. **ಏಕೋತ್ತರ ಶತಸ್ಥಲ-ಮಹಾಲಿಂಗದೇವ**
ಸಂ: ಪ್ರೊ. ಎಸ್. ಎಸ್. ಭೂಸನೂರಮಠ
ಪ್ರ: ಶ್ರೀ. ನಿ.ಪ್ರ. ಸ್ವ ಶಿವಬಸವ ಮಹಾಸ್ವಾಮಿಗಳು
ನಾಗನೂರು ರುದ್ರಾಕ್ಷಿಮಠ, ಹನುಮನಬೀದಿ, ಬೆಳಗಾವಿ, ೧೯೭೪

೭. **ಏಕೋತ್ತರಶತಸ್ಥಲ–ಸಿದ್ಧಲಿಂಗ**
ಸಂ: ಫ. ಗು. ಹಳಕಟ್ಟಿ
ಪ್ರ: ಶಿವಾನುಭವ ಗ್ರಂಥಮಾಲೆ, ವಿಜಾಪುರ

೮. **ಏಕೋತ್ತರ ಶತಸ್ಥಲ ಬೊಲ್ಲಿ**
(ಅಪ್ರಕಟಿತ, ಕ.ಅ.ಪೀ.ಹಸ್ತಪ್ರತಿ ಭಾಂಡಾರ)

೯. **ಏಕೋತ್ತರ ಶತಸ್ಥಲ ಸಾರಾಮೃತ–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ**
(ಅಪ್ರಕಟಿತ, ಕ.ಅ.ಪೀ. ಹಸ್ತಪ್ರತಿ ಭಾಂಡಾರ)

೧೦. **ಗಣಭಾಷಿತ ರತ್ನಮಾಲೆ–ಗುಬ್ಬಿ ಮಲ್ಲಣ್ಣ**
ಸಂ: ಶ್ರೀ ಪ್ರಭುಸ್ವಾಮಿಗಳು
ಪ್ರ: ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ
ಶ್ರೀ ಮುರುಘಾಮಠ, ಧಾರವಾಡ, ೧೯೪೮

೧೧. **ಗುರುಕಾರುಣ್ಯ**
(ಜಿ.ಎ. ಶಿವಲಿಂಗಯ್ಯ, ಮೈಸೂರು ಅವರ ಪ್ರತಿ)

೧೨. **ಚಿತ್ಕ್ರಿಯಾಸಂಗ್ರಹ–ಜಿಗುನಿ ಮರುಳದೇವರು**
(ಜಿಗುನಿ ಮರುಳದೇವರ ಕೃತಿಗಳು)
ಸಂ: ಡಾ. ಎಸ್. ವಿದ್ಯಾಶಂಕರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೩

೧೩. **ಚಿದ್ಭಸ್ಮಮಣಿಮಂತ್ರ ಮಹಾತ್ಮೆಯ ಸ್ಥಲದ ವಚನ–ಜಟಾಶಂಕರದೇವರು**
(ವಚನ ಸಂಕಲನ ಸಂಪುಟ–೧)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೦

೧೪. **ಚಿದೈಶ್ವರ್ಯಚಿದಾಭರಣ–ಗುರುಸಿದ್ಧದೇವ**
ಸಂ: ಶ್ರೀ. ಪಿ.ಎಂ. ಗಿರಿರಾಜು
ಪ್ರ: ಶರಣಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ)
೪೪೭, ಸಂತೆಪೇಟೆ, ಮೈಸೂರು, ೧೯೮೫

೧೫. **ಚೆನ್ನಬಸವೇಶ್ವರದೇವರ ಸ್ತೋತ್ರದ ವಚನಗಳು**
ಸಂ: ಪ್ರೊ. ಜಿ. ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೧

೧೬. **ಜಂಗಮಸ್ಥಲದ ಆಚರಣೆಯ ನಿರ್ಣಯದ ವಚನಗಳು**
(ವಚನ ಸಂಕಲನ ಸಂಪುಟ–೧)
ಸಂ: ಡಾ. ಬಿ.ಆರ್. ಹಿರೇಮಠ,
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೩

೧೭. **ಜ್ಞಾನಷಟ್‌ಸ್ಥಲಸಾರ–ಗುರುಶಂಕರಸ್ವಾಮಿ**
ಸಂ: ಡಾ ವೀರಣ್ಣ ರಾಜೂರ
ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೨

೧೮. **ನಿರಸನದ ವಚನಗಳು**
(ವಚನ ಸಂಕಲನ ಸಂಪುಟ–೧)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೦

೧೯. **ನಿಷ್ಕಲಲಿಂಗ ಚಿದಾನಂದಲೀಲೆ**
(ಅಪ್ರಕಟಿತ, ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ)

೨೦. **ಪರಮಮೂಲಜ್ಞಾನಷಟ್‌ಸ್ಥಲ–ಚಿಕ್ಕವೀರಣ್ಣೊಡೆಯ**
ಸಂ: ಡಾ.ಎಂ.ಎಸ್. ಸುಂಕಾಪುರ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೭

೨೧. **ಪ್ರಭುಲಿಂಗಲೀಲೆ(ಕಾವ್ಯ)–ಚಾಮರಸ**
ಸಂ: ಪ್ರೊ. ಶಿ.ಶಿ. ಬಸವನಾಳ
ಪ್ರ: ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೭೧

೨೨. **ಪ್ರಭುದೇವರ ಸ್ತೋತ್ರದ ವಚನಗಳು–ಸಂಪಾದನೆಯ ಸಿದ್ಧವೀರಣ್ಣೊಡೆಯ**
(ವಚನ ಸಂಕಲನ ಸಂಪುಟ–೩)
ಸಂ: ಶ್ರೀ.ಎಸ್. ಶಿವಣ್ಣ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೧

೨೩. **ಪ್ರಸಾದಿಸ್ಥಲದ ವಚನಗಳು**
ಸಂ: ಡಾ. ಎಂ.ಎಸ್. ಸುಂಕಾಪುರ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ ಧಾರವಾಡ, ೧೯೭೭

೨೪. **ಶ್ರೀ ಬಸವೇಶ್ವರನ ವಚನಗಳು**
ಸಂ: ಡಾ. ಫ.ಗು. ಹಳಕಟ್ಟಿ
ಪ್ರ: ಶಿವಾನುಭವ ಗ್ರಂಥಮಾಲೆ, ವಿಜಾಪುರ, ೧೯೨೬

೨೫. **ಬಸವಣ್ಣನವರ ಷಟ್‌ಸ್ಥಳದ ವಚನಗಳು**
ಸಂ: ಪ್ರೊ. ಶಿ.ಶಿ. ಬಸವನಾಳ
ಪ್ರ: ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೫೧

೨೬. **ಬಸವಣ್ಣನವರ ಷಟ್‌ಸ್ಥಲದ ವಚನಗಳು**
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮

೨೭. **ಬಸವಣ್ಣನವರ ಷಟ್‌ಸ್ಥಲದ ವಚನಗಳು**
ಸಂ: ಡಾ. ಎಲ್. ಬಸವರಾಜು
ಪ್ರ: ಶ್ರೀ ಶರಣಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ, ಗುಲ್ಬರ್ಗಾ, ೧೯೯೦

೨೮. **ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ–ಕರಸ್ಥಲದ ಮಲ್ಲಿಕಾರ್ಜುನ ಒಡೆಯ**
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೩

೨೯. **ಭಕ್ತ್ಯಾನಂದ ಸುಧಾರ್ಣವ**
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೫

೩೦. **ಮಿಶ್ರಸ್ತೋತ್ರದ ವಚನಗಳು–ಸಂಪಾದನೆಯ ಚೆನ್ನಂಜೇದೇವರು**
ಸಂ: ಪ್ರಭುಸ್ವಾಮಿಗಳು, ಹೊಸಹಳ್ಳಿ
ಪ್ರ: ಬೂದಿಸ್ವಾಮಿ ಸಂಸ್ಥಾನಮಠ, ಹೊಸಹಳ್ಳಿ

೩೧. **ಮಿಶ್ರಸ್ತೋತ್ರದ ವಚನಗಳು–ಎಳಮಲೆಯ ಗುರುಶಾಂತದೇವ**
(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು)
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೩

೩೨. **ಮೋಕ್ಷದರ್ಶನ ಸಂಗ್ರಹ**
ಸಂ : ಪ್ರೊ. ಜಿ.ಎ. ಶಿವಲಿಂಗಯ್ಯ
ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೨೦೧೦

೩೩. **ಲಿಂಗಚಿದಮೃತಬೋಧೆ–ಶಾಂತಬಸವೇಶ್ವರ**
ಸಂ: ಡಾ. ಎಂ.ಎಸ್. ಸುಂಕಾಪುರ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೫

೩೪. **ಲಿಂಗಲೀಲಾವಿಲಾಸಚಾರಿತ್ರ-ಕಲ್ಲುಮಠದ ಪ್ರಭುದೇವ**
ಸಂ: ಸಂ. ಶಿ. ಭೂಸನೂರಮಠ
ಪ್ರ: ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ
ಮುರುಘಾಮಠ, ಧಾರವಾಡ, ೧೯೭೬

೩೫. **ಲಿಂಗವಿಕಳಾವಸ್ಥೆಯ ವಚನಗಳು-ಎಳೆಮಲೆಯ ಗುರುಶಾಂತದೇವ**
(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು)
ಸಂ:ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯಮಠ, ಗದಗ, ೧೯೮೩

೩೬. **ಲಿಂಗಸ್ತೋತ್ರದ ವಚನಗಳು-ಸಂಪಾದನೆಯ ಸಿದ್ಧವೀರಣ್ಣದೇವರು**
ಸಂ: ಶ್ರೀ ವೀರಭದ್ರಪ್ಪ ಕೊಪ್ಪಳ
ಪ್ರ: ಶ್ರೀ ಗುರುಬಸವ ಮಂಟಪ ಟ್ರಸ್ಟ್ ಕಮೀಟಿ, ಹುಬ್ಬಳ್ಳಿ, ೧೯೬೪

೩೭. **ವಚನಸಾರ**
ಸಂ: ಡಾ ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೯

೩೮. **ವಚನಾಮೃತಸಾರ**
ಸಂ: ಪ್ರೊ. ಕಾಶಿಪುಟ್ಟಸೋಮಾರಾಧ್ಯ ಮತ್ತು ಡಾ. ವೀರಣ್ಣ ರಾಜೂರ
ಪ್ರ: ಮಂಗಳ ಪ್ರಕಾಶನ, ಕಲ್ಯಾಣನಗರ, ಧಾರವಾಡ, ೧೯೭೯

೩೯. **ವಚನೈಕೋತ್ತರಶತಸ್ಥಲ-ಚೆನ್ನಬಸವಣ್ಣ**
ಸಂ: ಪ್ರೊ. ಜಿ.ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೩

೪೦. **ವಿರತಾಚರಣೆಯ ಶರಣಸಂಬಂಧದ ವಚನಗಳು-ಶಂಕರದೇವರು**
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ
ಶರಣ ಸಂತಾನ (ತ್ರೈಮಾಸಿಕ)
೪೪೭, ಸಂತೆಪೇಟೆ, ಮೈಸೂರು- ೧೯೭೯

೪೧. **ವಿಶೇಷಾನುಭವಷಟ್‌ಸ್ಥಲ-ಚೆನ್ನವೀರಾಚಾರ್ಯ**
ಸಂ : ಡಾ.ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೪೨. **ವೀರಶೈವ ಶಿಖಾರತ್ನ**
(ಅಪ್ರಕಟಿತ, ಧಾರವಾಡದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)

೪೩. **ವೀರಶೈವಚಿಂತಾಮಣಿ–ಮಹದ್ದೇವಯೋಗಿ**
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೪೪. **ವೀರಶೈವಾಭರಣ–ಗೌರವಾಂಕ**
(ಜಿ.ಎ. ಶಿವಲಿಂಗಯ್ಯ, ಮೈಸೂರು ಅವರ ಹಸ್ತಪ್ರತಿ)

೪೫. **ಶರಣಚಾರಿತ್ರದ ವಚನಗಳು–ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು**
ಸಂ: ಡಾ. ಬಿ.ವಿ. ಶಿರೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೪

೪೬. **ಶರಣಮುಖಮಂಡನ**
ಸಂ: ಡಾ.ಬಿ.ವಿ. ಶಿರೂರ ಮತ್ತು ಶ್ರೀ ಬಿ. ಆರ್. ಹೂಗಾರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೮

೪೭. **ಶರಣಸ್ತೋತ್ರದ ವಚನಗಳು–ಎಳಮಲೆಯ ಗುರುಶಾಂತದೇವರು**
(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು)
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯಮಠ, ಗದಗ, ೧೯೮೩

೪೮. **ಶಿವತತ್ತ್ವ ಚಿಂತಾಮಣಿ(ಕಾವ್ಯ)–ಲಕ್ಕಣ್ಣ ದಂಡೇಶ**
ಸಂ: ಎಚ್. ದೇವೀರಪ್ಪ
ಪ್ರ: ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು, ೧೯೬೦

೪೯. **ಶಿವನ ಬಿರುದಾವಳಿ ಸ್ತೋತ್ರದ ವಚನಗಳು–ಸಂಪಾದನೆಯ ಸಿದ್ಧವೀರಣ್ಣೊಡೆಯ**
(ವಚನ ಸಂಕಲನ ಸಂಪುಟ–೩)
ಸಂ: ಶ್ರೀ ಎಸ್. ಶಿವಣ್ಣ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೧

೫೦. **ಶಿವಮಹಿಮಾಸ್ತೋತ್ರದ ವಚನಗಳು–ವೀರಸಂಗಯ್ಯ**
(ವಚನ ಸಂಕಲನ ಸಂಪುಟ–೭)
ಸಂ: ಡಾ. ವೀರಣ್ಣ ರಾಜೂರ
ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದರ್ಯಾಮಠ, ಗದಗ, ೨೦೦೯

೫೧. **ಶಿವಯೋಗ ಚಿಂತಾಮಣಿ–ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿ**
ಸಂ: ಡಾ. ಉಮಾದೇವಿ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೭

೫೨. **ಶಿವಾಧಿಕ್ಯಪುರಾಣ–ಬಸವಲಿಂಗ**
ಸಂ: ಪ್ರೊ. ಜಿ.ಎ. ಶಿವಲಿಂಗಯ್ಯ
ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೨೦೦೫

೫೩. **ಶೀಲಸಂಪಾದನೆ**
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೪

೫೪. **ಶೂನ್ಯಸಂಪಾದದನೆ–ಶಿವಗಣ ಪ್ರಸಾದಿ ಮಹದೇವಯ್ಯ**
ಸಂ : ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೫೫. **ಶೂನ್ಯಸಂಪಾದನೆ–ಹಲಗೆದೇವ**
ಸಂ : ಡಾ. ವಿದ್ಯಾಶಂಕರ ಮತ್ತು
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ
ಪ್ರ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೮

೫೬. **ಶೂನ್ಯಸಂಪಾದನೆ–ಗುಮ್ಮಳಾಪುರದ ಸಿದ್ಧಲಿಂಗದೇವ**
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೨

೫೭. **ಶೂನ್ಯಸಂಪಾದನೆ–ಗೂಳೂರು ಸಿದ್ಧವೀರಣ್ಣೊಡೆಯ**
ಸಂ: ಪ್ರೊ. ಸಂ. ಶಿ. ಭೂಸನೂರಮಠ
ಪ್ರ: ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ
ಕಲ್ಲುಮಠದ ಅಧಿಪತಿಗಳು, ೧೯೮೬

೫೮. **ಷಟ್‌ಸ್ಥಲದ ವಚನಗಳು–ಬಸವಣ್ಣ**
(ಹಸ್ತಪ್ರತಿ ೫೧, ಕನ್ನಡ ಅಧ್ಯಯನಪೀಠ, ಧಾರವಾಡ)

೫೯. **ಷಟ್‌ಸ್ಥಲ ಬ್ರಹ್ಮಾನಂದವಿರಕ್ತ ಚಾರಿತ್ರ ಸಂಪಾನೆಯ ವಚನಗಳು–ಸಂಪಾದನೆಯ ಬೋಳಬಸವೇಶ್ವರದೇವರು**
ಸಂ: ಪ್ರೊ. ಎಸ್. ಉಮಾಪತಿ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೪

೬೦. **ಷಟ್‌ಸ್ಥಲಸ್ತೋತ್ರದ ವಚನಗಳು–ಎಳಮಲೆಯ ಗುರುಶಾಂತದೇವರು**
(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು)
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೭

೬೧. **ಸಂಪಾದನೆಯ ಸಾರಾಮೃತ–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ**
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೮

೬೨. **ಸಂಬಂಧಾಚರಣೆಯ ವಚನಗಳು**
ಸಂ: ಶ್ರೀ. ಪಿ.ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ)
೪೪೭, ಸಂತೆಪೇಟೆ, ಮೈಸೂರು, ೧೯೮೬

೬೩. **ಸಕಲಪುರಾತನರ ವಚನಗಳು–೧**
ಸಂ: ಡಾ. ಆರ್ ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೨

೬೪ **ಸಕಲ ಪುರಾತನರ ವಚನಗಳು–೨**
ಸಂ: ಡಾ ಎಂ.ಎಸ್. ಸುಂಕಾಪುರ
ಪ್ರ: ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೬

೬೫. **ಸಿಂಗಿರಾಜ ಪುರಾಣ(ಕಾವ್ಯ)–ಸಿಂಗಿರಾಜ**
ಸಂ: ಎಚ್. ದೇವೀರಪ್ಪ
ಪ್ರ: ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು, ೧೯೫೦

೬೬. **ಸುಖಸಂಪಾದನೆಯ ವಚನಗಳು**
ಸಂ : ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೭

೬೭. **ಸೂಕ್ಷ್ಮಮಿಶ್ರಷಟ್‌ಸ್ಥಲ–ಮಹಾಲಿಂಗದೇವ**
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೭

❖❖

ಚೆನ್ನಂಜೇದೇವರು ಮತ್ತು ಬೋಳಬಸವರಾಜದೇವರು ಸಂಪಾದಿಸಿದ

ಬಸವಸ್ತೋತ್ರದ ವಚನಗಳು

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ಅಧ್ಯಯನಪೀಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೬

*

ಪ್ರಸ್ತಾವನೆ

ಪ್ರವೇಶ :

ಧರ್ಮ ಮತ್ತು ಕಾವ್ಯಧರ್ಮಗಳ ಸಂಗಮವಾಗಿರುವ ಪ್ರಾಚೀನಕನ್ನಡ ಸಾಹಿತ್ಯದಲ್ಲಿ ಜೈನ, ಲಿಂಗಾಯತ, ಬ್ರಾಹ್ಮಣಮತಗಳ ಮೌಲ್ಯಪ್ರಸಾರ ಎದ್ದು ತೋರುತ್ತದೆ. ಈ ಅರ್ಥದಲ್ಲಿ ಕನ್ನಡ ಲಿಂಗಾಯತಸಾಹಿತ್ಯ, ಲಿಂಗಾಯತಮೌಲ್ಯಗಳಿಗೆ ಬರೆದ ಸಾಹಿತ್ಯಿಕ ವ್ಯಾಖ್ಯಾನವಾಗಿದೆ.

೮೦೦ ವರ್ಷಗಳ ಇತಿಹಾಸವಿರುವ ಲಿಂಗಾಯತಸಾಹಿತ್ಯದ ಮೊದಲಪೈರು ವಚನಸಾಹಿತ್ಯ. ಲಿಂಗಾಯತಮನಸ್ಸಿನ ಭಾಷಿಕ ಅವತಾರವಾದ ಈ ವಚನ ಸ್ತೋಮಕ್ಕೆ, ಹರಿಹರ-ರಾಘವಾಂಕಾದಿಗಳ ಮೂಲಕ ಸಾಹಿತ್ಯಿಕವ್ಯಾಖ್ಯಾನ ರೂಪಕೊಡುವ ಕಾರ್ಯ ನಡೆದರೆ, ಏಕೋತ್ತರಶತಸ್ಥಲ-ಶೂನ್ಯಸಂಪಾದನೆಕಾರರ ಮೂಲಕ ತಾತ್ವಿಕವ್ಯಾಖ್ಯಾನ ರೂಪಕೊಡುವ ಕಾರ್ಯ ನಡೆಯಿತು. ವಚನೋದ್ಯಾನದಲ್ಲಿ ವಿಹರಿಸುತ್ತ ಇವರಲ್ಲಿ ಒಬ್ಬರು ಸೌಂದರ್ಯೋಪಾಸಕರಾಗಿ ಪುಷ್ಪರಾಶಿಯನ್ನು ಸಂಗ್ರಹಿಸಿದರೆ, ಇನ್ನೊಬ್ಬರು ತತ್ವೋಪಾಸಕರಾಗಿ ಬೀಜಕೋಶಗಳನ್ನು ಸಂಪಾದಿಸಿದರು. ವಚನವಾರಿಧಿಯನ್ನು ಕಡೆದು ಹೊರತಂದ ಈ ಉಭಯಸಂಪತ್ತುಗಳನ್ನು ಕ್ರಮವಾಗಿ "ಲಿಂಗಾಯತ ಸೃಜನಸಾಹಿತ್ಯ" ಮತ್ತು "ಲಿಂಗಾಯತ ಸಂಪಾದನ ಸಾಹಿತ್ಯ"ವೆಂದು ಕರೆಯಬಹುದು.[೧] ಪ್ರಸ್ತುತ ಚೆನ್ನಂಜೇದೇವರು, ಬೋಳಬಸವ ರಾಜದೇವರು ಇವುಗಳಲ್ಲಿ "ಸಂಪಾದನಸಾಹಿತ್ಯನಿರ್ಮಾತೃ"ಗಳ ವರ್ಗಕ್ಕೆ ಸೇರುತ್ತಾರೆ.

ವಚನಸಾಹಿತ್ಯ

ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ನವಮನ್ವಂತರವನ್ನು ತೆರೆದ ಶಿವಶರಣರ ಆಂದೋಲನ, ಸಾಹಿತ್ಯಕ್ಷೇತ್ರದಲ್ಲಿಯೂ ಹೊಸ ಆಯಾಮಗಳನ್ನು ಮೂಡಿಸಿತು. ಸಾಹಿತ್ಯವೆನ್ನುವುದು ಭಾಷಾಮಾಧ್ಯಮದಿಂದ ಸುಂದರವಾಗಿ ಅಭಿವ್ಯಕ್ತಗೊಳ್ಳುವ ಭಾವವಿಶೇಷವಾದುದರಿಂದ ವಚನಗಳು ಭಾಷೆ, ಅಭಿವ್ಯಕ್ತಿ ಮತ್ತು ಭಾವ ಈ ವಲಯಗಳಲ್ಲಿ ನವ್ಯತೆಯನ್ನು ಸಾಧಿಸಿದವು.

ಸಾಮಾನ್ಯವಾಗಿ ಬ್ರಾಹ್ಮಣರಿಂದ ಅಸ್ಪೃಶ್ಯಭಾಷೆಯೆಂಬ ಮೈಲಿಗೆ ಸ್ಥಿತಿಯನ್ನೂ, ಜೈನರಿಂದ ಮಾತೃಭಾಷಾಶುದ್ಧಿಯೆಂಬ ಮಡಿವಂತಿಕೆ ಸ್ಥಿತಿಯನ್ನೂ ಅನುಭವಿಸುತ್ತಲಿದ್ದ ಕನ್ನಡ ಭಾಷೆ, ಶರಣರಿಂದ ಏಕಕಾಲಕ್ಕೆ ಸ್ಪೃಶ್ಯ ಮತ್ತು ಮುಕ್ತಸ್ಥಿತಿಗಳನ್ನು ಪಡೆಯಿತು. ಸ್ವಭಾಷೆಯೇ ಇರಲಿ, ಪರಭಾಷೆಯೇ

---

೧. 'ಸೃಜನಸಾಹಿತ್ಯ'ದಲ್ಲಿ ಹರಿಹರಪ್ರಣೀತ 'ಚಾರಿತ್ರಿಕಸಾಹಿತ್ಯ', ಭೀಮಕವಿಪ್ರಣೀತ 'ಪುರಾಣಸಾಹಿತ್ಯ' ವೆಂದೂ 'ಸಂಪಾದನಸಾಹಿತ್ಯ'ದಲ್ಲಿ ಮಹಲಿಂಗದೇವಪ್ರಣೀತ 'ತತ್ವ ಸಂಪಾದನೆ', ಸಂಪಾದನಸಮಯಪ್ರಣೀತ 'ಅನುಭಾವ ಸಂಪಾದನೆ' ಎಂದೂ ಮತ್ತೆ ಎರಡು ಭಾಗಗಳನ್ನು ಮಾಡಬಹುದು.

ಇರಲಿ, ಅದನ್ನು ಸ್ವೀಕರಿಸುವ, ಜೀರ್ಣಿಸಿಕೊಳ್ಳುವ, ತನ್ನದಾಗಿ ದಕ್ಕಿಸಿಕೊಳ್ಳುವ ಆರೋಗ್ಯಕರಸ್ಥಿತಿ ಭಾಷೆಗೆ ಪ್ರಾಪ್ತವಾಗಿ, ಆಲೋಚನೆಗೆ ಬಳಕೆಯಾಗುವ ಹದವನ್ನು ಪಡೆಯಿತು.

ಅಭಿವ್ಯಕ್ತಿಯಲ್ಲಿ ಸರಳತೆಯೆಂದರೂ ವಾಚ್ಯವಲ್ಲದ, ಅಲಂಕಾರವೆಂದರೂ ವರ್ಣನಾತ್ಮಕವಲ್ಲದ ಬಗೆಯಲ್ಲಿ ಶರಣರ ಆಶಯಗಳು ಆಕೃತಿಪಡೆದ ವಚನರಚನಾ ರೀತಿ ವಿನೂತನವಾದುದು. ಬಸವಣ್ಣನವರ,

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು

ಎಂಬ ಮೂರು ಮಾತುಗಳು, ಈ ವರೆಗೆ ಎಲ್ಲರೂ ಏರಿದ್ದ ಮೂರು ಅರ್ಥಸೋಪಾನಗಳಾದ ವಾಚ್ಯ, ಲಕ್ಷ್ಯ, ವ್ಯಂಗ್ಯಗಳನ್ನು ಸೂಚಿಸಿದರೆ, "ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು" ಎಂಬ ಮಾತು, ವಚನಕಾರರು ಸಾಧಿಸಿದ ಇನ್ನೊಂದು ಹೊಸ ಅರ್ಥ ಸೋಪಾನವನ್ನು ಸೂಚಿಸುತ್ತದೆ. ಅಭಿವ್ಯಕ್ತಿಗೆ ಸಂಬಂಧಪಟ್ಟಂತೆ, ಇದು ಶರಣರು ಸಾಧಿಸಿದ ಹೊಸತನವಾಗಿದೆ.

ಅಂಗಕರಣಗಳನ್ನು ಲಿಂಗಕಿರಣಗಳನ್ನಾಗಿ ಮಾರ್ಪಡಿಸಿಕೊಂಡ ಶರಣರ ಬದುಕು ಅಂಗವ್ಯಾಪಾರವಲ್ಲ, ಲಿಂಗವ್ಯಾಪಾರ. ಅವರ ನಡೆ ಲಿಂಗದ ನಡೆ, ಅವರ ನುಡಿ ಲಿಂಗದ ನುಡಿ, ಶರಣರ ಮಾತಿನಲ್ಲಿಯೇ ಹೇಳುವುದಾದರೆ ವಚನಸಾಹಿತ್ಯವೆಂಬುದು, ಶರಣರು ಮನತೆರೆದು ಆಡಿದ ಮಾತಿನಲ್ಲಿ ಮೂಡಿಬಂದ ಲಿಂಗಾನುಭವವಾಗಿದೆ.

ಸೃಜನಸಾಹಿತ್ಯ

"ಊರು ಕೆಟ್ಟು ಸೂರೆಯಾಡುವಾಗ ಆರಿಗಾರೂ ಇಲ್ಲ"[೨] ಎಂಬಂತೆ ಕಲ್ಯಾಣದ ವಿಪ್ಲವಪ್ರಸಂಗದಲ್ಲಿ ಶರಣರು ದಿಕ್ಕೋಪದಿಕ್ಕುಗಳಿಗೆ ಚದುರಿದರು. ಈಗ ಅವರು ಕೈಯಾರೆ ಕಟ್ಟಿದ ಮನುಕುಲದ ಕಲ್ಯಾಣತಟಾಕ ಒಡೆದುದು 'ಲಿಂಗಾಯತ ಸಂಘಟನೆ'ಯ ದೃಷ್ಟಿಯಿಂದ ಹಾನಿ ಎನಿಸಿದರೂ ಆ ಜಲ ಹತ್ತೂ ದಿಕ್ಕಿನ ಕವಲು-ಕಾಲುವೆಗಳಲ್ಲಿ ಪ್ರವಹಿಸಿ ನಾಡ ನೆಲದ ತುಂಬ ಹಬ್ಬುವಲ್ಲಿ, ಅವರ ವಿಚಾರಗಳಿಗೆ ವ್ಯಾಪಕವಾದ ಪ್ರಸಾರಲಾಭ ಪ್ರಾಪ್ತವಾಯಿತು. ಲಿಂಗಾಯತವನ್ನು ಬದುಕಿಸಬೇಕೆಂಬ ಸಾಂಘಿಕಹೊಣೆ ಈಗ ವೈಯಕ್ತಿಕವಾಯಿತು. ಈ ಹೊಣೆಯನ್ನು ಹೊತ್ತು ಬೇರೆಬೇರೆ ಪ್ರದೇಶಗಳಲ್ಲಿ ಬದುಕುತ್ತಲಿದ್ದ ಲಿಂಗಾಯತರು, ತಮ್ಮ ಜೀವನದಲ್ಲಿ ಆಳವಾಗಿ ಬೇರುಬಿಟ್ಟಿದ್ದ ವಚನಸಾಹಿತ್ಯವನ್ನು ಸ್ತುತಿ, ಪೂಜೆ, ಗೋಷ್ಠಿ ಸಂದರ್ಭಗಳಲ್ಲಿ ಪಠನಗೈಯುತ್ತಿದ್ದ ಉಲ್ಲೇಖಗಳು ಅಲ್ಲಲ್ಲಿ ದೊರೆಯುತ್ತವೆ.

೧. "ಗಾಯಂತೋ ಬಸವೇಶಸ್ಯ ಗೀತಾನ್ಯಪಿ"

೨. "ಪ್ರಭು ಸತ್ಯೇಶ ಚಾಮಯ್ಯ ಮಡಿವಳಮಾಚಯ್ಯ ಜಮಗೈಸ್ತಥಾ ॥

ವರದಶಂಕರ ದಾಸಯ್ಯದಾಸ ಕೇತೋದ್ಭಟೈರಪಿ ।

---

೨. ಗೂಳೂರು ಶೂನ್ಯಸಂಪಾದನೆ(೧೯೫೮) ಪು. ೨೬೦

ಕಕ್ಕಯ್ಯ ಚೆನ್ನಬಸವ ಕಲ್ಲಿದೇಹ ಹಲಾಯುಧೈಃ ॥
ಶ್ರೀ ಕೇಶಿರಾಜ ಚಿಕ್ಕಾರ್ಯಾ ಮಸಣಾರ್ಯೈರ್ಮಹಾತ್ಮಭಿಃ ।
ಸಿದ್ಧರಾಮಾಭಿಧಾನೇನ ಮಹಾದೇವ್ಯಾ ಪ್ರಸಿದ್ಧಯಾ ॥
ಭವ್ಯ ಸೊಡ್ಡಲಬಾಚಾರ್ಯ ಬಸವೇಶಪುರಸ್ಸರೈ ।
ಕೃತೇಷು ಗೀತೇಷ್ವಭಿತೋ ಗೀಯಮಾನೇಷು ಗಾಯಕೈಃ ॥"

೩. "ಬಸವೇಶೋಪರಚಿತಾ ಗೀತಾಂ .... ಗಾಯಂತ್ಯಃ"[೩]

ಗುರುರಾಜನ ಮಲ್ಲಿಕಾರ್ಜುನಪಂಡಿತಾರಾಧ್ಯಚರಿತ್ರೆಯ ಈ ಹೇಳಿಕೆಗಳಿಂದ ಬಸವ, ಪ್ರಭುದೇವ, ಸತ್ಯೇಶ, ಚಾಮಯ್ಯ, ಮಡಿವಳಮಾಚಿದೇವ, ಅಜಗಣ್ಣ, ಶಂಕರದಾಸಿಮಯ್ಯ, (ಜೇಡರ) ದಾಸ, ಕೇತಯ್ಯ, ಉದ್ಭಟ, ಕಕ್ಕಯ್ಯ, ಚನ್ನಬಸವ, ಕಲ್ಲಿದೇಹ(?), ಹಲಾಯುಧ, ಕೇಶಿರಾಜ, ಚಿಕ್ಕಾರ್ಯ, ಮಸಣಾರ್ಯ, ಸಿದ್ಧರಾಮ, ಅಕ್ಕಮಹಾದೇವಿ, ಸೊಡ್ಡಳಬಾಚರಸರ ಸಾಹಿತ್ಯವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲದಲ್ಲಿ ಜನತೆ ಮೈದುಂಬಿ ಹಾಡುತ್ತಿದ್ದರೆಂದು ತಿಳಿದುಬರುತ್ತದೆ. ತ್ರಿಭುವನತಾತನೊಂದಿಗೆ ವಾದಕ್ಕೆ ನಡೆದ ಶರಣರ ಸಮೂಹವು, ದಾರಿಯಲ್ಲಿ "ಬಸವೇಶ್ವರಾದಿಗಳ ಗೀತಂಗಳಂ"[೪] ಹಾಡುತ್ತ ನಡೆದರೆಂಬ ಪದ್ಮರಾಜಪುರಾಣದ ಉಕ್ತಿಯನ್ನೂ, ಶಿವತತ್ವಚಿಂತಾಮಣಿಯಲ್ಲಿ ಬರುವ "ಹವಳಿಗೆಯ ವಚನಗಾಯಕದ ಬೊಮ್ಮಣ್ಣ"[೫]ನ ಉಲ್ಲೇಖವನ್ನೂ ಇಲ್ಲಿ ನೆನೆಯಬಹುದು. ಇದಕ್ಕೆ ಸಮಾಂತರವಾಗಿ ನಾಡಿನ ಅನೇಕ ಕಡೆಗಳಲ್ಲಿ ವಚನಗಳ ಲೇಖನ, ಪ್ರತಿಲೇಖನ ಕಾರ್ಯವೂ ನಡೆದಿರುವ ಸಂಭವವಿದೆ.

ಹೀಗೆ ಶರಣಸಾಹಿತ್ಯ, ಶ್ರಾವಣ ಮತ್ತು ಚಾಕ್ಷುಷ ರೂಪಗಳಿಂದ ಅಲ್ಲಲ್ಲಿ ಬದುಕುತ್ತಲಿದ್ದ ಪ್ರಸಂಗದಲ್ಲಿ ಲಿಂಗಾಯತಸಾಹಿತ್ಯದ ಉತ್ತರಾಧಿಕಾರಿಗಳಾಗಿ ಹರಿಹರ ರಾಘವಾಂಕಾದಿಗಳು ಅವತರಿಸಿದರು. ವಚನರಚನೆಯ ಪರಂಪರೆಯನ್ನು ಮುಂದುವರಿಸದೆ ಲಿಂಗಾಯತಸಾಹಿತ್ಯವನ್ನು ರಗಳೆ, ಷಟ್ಪದಿಗಳ ಮೂಲಕ ಮುನ್ನಡೆಸುವಲ್ಲಿ, ಇವರಿಗೆ ಕಾವ್ಯವಸ್ತುವಾಗಿ ಬಂದವರು ಶರಣರು; ಕಾವ್ಯಸಂದೇಶವಾಗಿ ಬಂದುದು ಶರಣತತ್ತ್ವ. ಒಂದರ್ಥದಲ್ಲಿ ಶರಣರು ರೂಪಿಸಿದ ಜೀವನಮೌಲ್ಯಗಳ ಪ್ರಸಾರ ಕಾರ್ಯ ಇವರ ಸಾಹಿತ್ಯದ ಗುರಿಯಾಯಿತು. ಹೀಗಾಗಿ ಇವರ ಕೃತಿಗಳಲ್ಲಿ ಶರಣ ತತ್ವಗಳು ಎದ್ದು ಕಾಣುತ್ತವೆ; ಶರಣವಾಣಿ ಎದ್ದು ಕೇಳಿಸುತ್ತದೆ. ಈ ಅವಧಿಯಲ್ಲಿ ಹೀಗೆ ಸೃಜನಸಾಹಿತ್ಯ ನಿರ್ಮಾಣವಾಗುತ್ತ ನಡೆದಂತೆ, ವಚನರಚನೆ, ವಚನರಕ್ಷಣೆ ಅಲಕ್ಷ್ಯಕ್ಕೆ ಗುರಿಯಾಗುತ್ತ ನಡೆಯಿತು.

೩. ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ(ಗುರುರಾಜಕೃತ), ಪು. ೧೭೪, ೪೫೬, ೯೨೦.
೪. ಪದ್ಮರಾಜ ಪುರಾಣಂ(೧೯೫೮)
೫. ಶಿವತತ್ವಚಿಂತಾಮಣಿ(೧೯೬೦) ಪು. ೪೨೩

ಇಷ್ಟರಲ್ಲಿ ಕರ್ನಾಟಕದ ಮೇಲೆ ಬೀಸಿಬಂದ ಮುಸಲ್ಮಾನ ದಾಳಿಯ ಗಾಳಿ, ಲಿಂಗಾಯತಕ್ಕೂ ತಗುಲಿತು. ಇದನ್ನು ಪ್ರತಿಭಟಿಸಲು ತಲೆಯೆತ್ತಿದ ವಿಜಯನಗರ ಸಾಮ್ರಾಜ್ಯದ ಅರಸುಗದ್ದುಗೆಯನ್ನು, ಪ್ರೌಢದೇವರಾಯನು ಏರುವಲ್ಲಿ ಲಿಂಗಾಯತ ಹೊಸಜೀವ ಪಡೆಯಿತು. ಈಗ ಒಡೆದುಹೋದ ಲಿಂಗಾಯತರೆಲ್ಲ ಮತ್ತೆ ಒಂದುಗೂಡಿದರು.

"ಕಲ್ಯಾಣ ಮಂಡಲದ ಶಿವಭಕ್ತಸಂತಾನ"[೬]ವೆನಿಸಿ "ಜಂಗಮಸ್ಥಲವಾಂತು ಪರಮಷಟ್ಸ್ಥಲವನುದ್ಧರಿಸಿ"ದ[೭] ನೂರೊಂದು ವಿರಕ್ತರ ಧರ್ಮರಕ್ಷೆ ಮತ್ತು ಇವರ "ಪಾದಯುಗವ ನೆರೆನಂಬಿ ಭಜಿಸುತ ಜ್ಞಾನಪಲ್ಲವಿಸೆ ಅಘದ ಬೇರಂ ಪರಿದು ಅತಿಧರ್ಮದಿಂದ"[೮] ರಾಜ್ಯವಾಳುತ್ತಿದ್ದ ಪ್ರೌಢದೇವರಾಯ, ಅವನ ಮಂತ್ರಿವರ್ಗದ ಲಕ್ಕಣ, ಜಕ್ಕಣರ ರಾಜರಕ್ಷೆಗಳ ಬಲದಿಂದ "ಪರತರ ಶಿವಾನುಭಾವಿಗಳ ಪರಿಮಿತಗೃಹಂ ಪರಿಕಿಪರಿಗಿದು ವಿಜಯಕಲ್ಯಾಣ"[೯] ವೆಂಬಂತೆ ಹಂಪೆಯಲ್ಲಿ ಕಲ್ಯಾಣದ ಶರಣವಾತಾವರಣ ಮತ್ತೆ ತಲೆದೋರಿತು. ಈ ಯುಗದ ಲಿಂಗಾಯತರಿಗೆ 'ಸೃಜನ ಸಾಹಿತ್ಯ'ವನ್ನು ಸೃಷ್ಟಿಸುವಷ್ಟೇ ಮಹತ್ವದ್ದೆನಿಸಿತು; ಹಾಳಾಗುತ್ತಲಿದ್ದ ವಚನಸಾಹಿತ್ಯವನ್ನು ರಕ್ಷಿಸುವುದು. ಈಗ

> ಲಕ್ಕಣ್ಣದಣ್ಣಾಯಕನು ಮುನ್ನ ಭಂಡಾರಿ
> ಜಕ್ಕಪ್ಪ ಕಲ್ಲೆಹದ ಕೇತಿಸೆಟ್ಟಿಯರಿವರು
> ಲಕ್ಕಸಂಖ್ಯೆಯವಿತ್ತಮಂ ವೆಚ್ಚಿಸುತ್ತ.....[೧೦]

ಲಿಂಗಾಯತೋದ್ಧಾರ ಕಾರ್ಯದಲ್ಲಿ ನಿರತರಾದರು. ಇವರ ಪ್ರಯತ್ನದಿಂದಾಗಿ ಶರಣರ ಜೀವನಚರಿತ್ರೆಯನ್ನು ಬೆಳಕಿಗೆ ತರುವ, ಅಲ್ಲಲ್ಲಿ ಜೀವಹಿಡಿದಿದ್ದ ವಚನಸಾಹಿತ್ಯವನ್ನು ಶೋಧಿಸುವ, ಸಂಗ್ರಹಿಸುವ, ಟೀಕೆ, ಟಿಪ್ಪಣಿ ಬರೆವ, ಓದುವ, ವ್ಯಾಖ್ಯಾನಿಸುವ ಕಾರ್ಯಗಳು ಭರದಿಂದ ನಡೆದವು. ಈ ಆಂದೋಲನದ ಪ್ರಥಮ ಪ್ರಯತ್ನವೆಂದರೆ, ಗೊಗ್ಗವ್ವೆಯ ವಚನದಿಂದ, ಕೋಲಶಾಂತಯ್ಯನ ವಚನದಿಂದ, ಮತ್ತು ಬಸವಣ್ಣನ ವಚನದಿಂದ ಪ್ರಾರಂಭವಾಗುವ "ಸರ್ವಪುರಾತನರ ವಚನಗಳು" ಹೆಸರಿನ ಮೂರು ಬಗೆಯ ಕಟ್ಟುಗಳ ರಚನೆ. ಒಮ್ಮೆ ಇಂಥ ಕಟ್ಟುಗಳು ಅಸ್ತಿತ್ವಕ್ಕೆ ಬರುವುದೇ ತಡ, ಈ ಮಾದರಿಯಲ್ಲಿ ಬೇರೆಬೇರೆ ದೃಷ್ಟಿಕೋನಗಳಿಂದ ಹೊಸ ಹೊಸ ಸಂಪಾದನಕೃತಿಗಳನ್ನು ರೂಪಿಸುವ ಮಹಾಕಾರ್ಯ ವ್ಯಾಪಕವಾಗಿ ನಡೆಯಿತು. ತಮಿಳುನಾಡಿನ "ಸಂಘಂ ಸಾಹಿತ್ಯ ಸಂಕಲನ"ದ ಆಂದೋಲನಕ್ಕೆ ಸಮಾನವಾದ, ಈ ಸಂಪಾದನ ಕಾರ್ಯದ ಉತ್ಕೃಷ್ಟ ಕೃತಿಗಳೆನಿಸಿದ ಮಹಾಲಿಂಗದೇವನ "ಏಕೋತ್ತರ ಶತಸ್ಥಲ" ಮತ್ತು ಕಲ್ಲುಮಠದ ಪ್ರಭುದೇವರ "ಲಿಂಗಾಲೀಲಾ ವಿಲಾಸಚಾರಿತ್ರ"ಗಳು ಹುಟ್ಟಿ ಬರುವಲ್ಲಿ,

---

೬. ನೂರೊಂದು ವಿರಕ್ತರ ಕಾವ್ಯ ೩-೨೨

೭. ಚೆನ್ನಬಸವಪುರಾಣ ೬೩-೪೨

೮. ಪ್ರೌಢರಾಯನ ಕಾವ್ಯ ೨೧-೩೩

೯. ಶಿವತತ್ವಚಿಂತಾಮಣಿ ೩೮-೨೦೫

೧೦. ವೀರಶೈವಾಮೃತ ಮಹಾಪುರಾಣಂ: ಕಾಂಡ ೮, ಸಂಧಿ ೨೨, ಪದ್ಯ ೫೨


ನೂರೊಂದು ವಿರಕ್ತರ ಕಾಲದ "ಸಂಪಾದನ ಸಾಹಿತ್ಯ"ದ ಪ್ರಥಮಘಟ್ಟ ಪರ್ಯವಸಾನಗೊಳ್ಳುತ್ತದೆ.

ಹರಭಕ್ತರಾದ ಸಂಗಮವಂಶದವರನ್ನು ಪದಚ್ಯುತಗೊಳಿಸಿ, ಹರಿಭಕ್ತರಾದ ಸಾಳ್ವರು ಪಟ್ಟಕ್ಕೆ ಬರುವಲ್ಲಿ "ದ್ವೈತಮತ" ಪಶ್ಚಿಮ ಘಟ್ಟದಿಂದ ಇಳಿದು ವಿಜಯ ನಗರದ ಒಳಗೆ ಬಂದಿತು; "ಲಿಂಗಾಯತ ಮತ" ವಿಜಯನಗರದಿಂದ ಹೊರಬಿದ್ದು ಎಡೆಯೂರಿಗೆ ನಡೆಯಿತು. ಏಳುನೂರೊಂದು ವಿರಕ್ತರ ಅಧಿಪತಿ ತೋಂಟದ ಸಿದ್ಧಲಿಂಗನ ನೇತೃತ್ವದಲ್ಲಿ ಸಂವರ್ಧಿಸತೊಡಗಿ

ಎಲ್ಲಿ ನೋಡಿದಡಲ್ಲಿ ಸದ್ಭಕ್ತವಿತತಿ ಮ ।
ತ್ತೆಲ್ಲಿ ನೋಡಿದಡಲ್ಲಿ ಮಾಹೇಶ್ವರ ವ್ರಜಮ ।
ದೆಲ್ಲಿ ನೋಡಿದಡಲ್ಲಿ ಶುದ್ಧಸಿದ್ಧಪ್ರಸಿದ್ಧಪ್ರಸಾದಿಗಳ ನಿಕರಂ ।
ಎಲ್ಲಿ ನೋಡಿದಡಲ್ಲಿ ಪ್ರಾಣಲಿಂಗಿಗಳು ಮ ।
ತ್ತೆಲ್ಲಿ ನೋಡಿದಡಲ್ಲಿ ಶರಣಸಂಕುಳವು ಬಳಿ ।
ಕೆಲ್ಲಿ ನೋಡಿದಡಲ್ಲಿ ಲಿಂಗೈಕ್ಯರುಗಳು ಜಗವೆಲ್ಲವೀಪರಿಯಾದುದು ॥[೧೧]

ಎಂಬಂತೆ ಲಿಂಗಾಯತ ದಟ್ಟವಾದ ಪ್ರಸಾರವನ್ನು ಪಡೆಯಿತು. ಶಾಖೆ-ಪ್ರತಿಶಾಖೆಯಾಗಿ ಬೆಳೆದುಬಂದ ಈ ತೋಂಟದ ಸಿದ್ಧಲಿಂಗನ ಶಿಷ್ಯಸಂತಾನ ಅಪಾರವಾದುದು. ಹಲವು ಕಾವ್ಯಗಳನ್ನು ಆಧರಿಸಿ ಅದರ ಮುಖ್ಯ ಚಿತ್ರವನ್ನು ಹೀಗೆ ರೂಪಿಸಬಹುದು.

ತೋಂಟದ ಸಿದ್ಧಲಿಂಗ[೧೨]



---

೧೨. ಹಲವು ಕಾವ್ಯಗಳ ಆಧಾರದಿಂದ ರಚಿಸಿದ ವಂಶಾವಳಿಯಿದು

ನೂರೊಂದು ವಿರಕ್ತರು ಕೈಕೊಂಡಿದ್ದ ವಚನಸಾಹಿತ್ಯದ ಸಂಗ್ರಹಕಾರ್ಯ ಮತ್ತು ಟೀಕೆ, ಟಿಪ್ಪಣಿ, ವ್ಯಾಖ್ಯಾನರಚನೆಯ ಕಾರ್ಯಗಳನ್ನು "ಕಾಯಕ"ವಾಗಿ ಸ್ವೀಕರಿಸಿ, "ಸಂಪಾದನೆ" ಹೆಸರಿನಿಂದ ಮುನ್ನಡೆಸಿತು, ಸಿದ್ಧಲಿಂಗನ ಶಿಷ್ಯಕೋಟಿ. ಇದರ ಫಲವಾಗಿ ಚೆನ್ನಂಜೇದೇವನ ಸಂಪ್ರದಾಯ "ಸಂಪಾದನ ಸಮಯ" ಹೆಸರಿನಿಂದ ಪ್ರತ್ಯೇಕ ಶಾಖೆಯಾಗಿಯೇ ಬೆಳೆಯಿತು. ಈ ಪರಂಪರೆ ಪ್ರಾಚೀನ ಇಜಿಪ್ತದ ಸುಪ್ರಸಿದ್ಧ ಗ್ರಂಥಸಂಪಾದಕನಾದ ಜೆನೊಡೋಟಸ್, ಶಿಷ್ಯ ಅರಿಸ್ಟೋಫೆನಿಸ್, ಶಿಷ್ಯ ಅರಿಸ್ಟಾರ್ಕಸ್ ಎಂಬ ಗುರು-ಶಿಷ್ಯ ಪರಂಪರೆಯನ್ನೂ, ಗ್ರಂಥಲೇಖನ ಚಟುವಟಿಕೆಯಲ್ಲಿ ತೊಡಗಿದ್ದ ಪ್ರಾಚೀನ ಬಿಜಾಂಟಿಯಂ ಪ್ರದೇಶದ ಕ್ರೈಸ್ತಮಠಗಳನ್ನೂ ನೆನಪಿಗೆ ತರುತ್ತದೆ. ತೋಂಟದಾರ್ಯ ಪರಂಪರೆಯ ವ್ಯಕ್ತಿಗಳ ಜೊತೆಗೆ ಇತರ ಮಠಾಧಿಪತಿಗಳೂ ಕೈಕೊಳ್ಳುವಲ್ಲಿ, ಈ ಕಾರ್ಯಶ್ರದ್ಧೆಯಿಂದಾಗಿ ಸಂಪಾದನಸಾಹಿತ್ಯ, ಲಿಂಗಾಯತಸಾಹಿತ್ಯದ ಒಂದು ಪ್ರಮುಖ ಪ್ರಕಾರವಾಗಿ ಬೆಳೆದು ಬಂದಿತು. ಸಂಪಾದನ ಸಾಹಿತ್ಯದ ಈ ದ್ವಿತೀಯ ಘಟ್ಟದ ಸಾರ್ಥಕಕೃತಿಗಳೆಂದರೆ ನಾಲ್ಕೂ ಶೂನ್ಯಸಂಪಾದನೆಗಳು. ಹೀಗೆ ಎರಡು ಘಟ್ಟಗಳನ್ನು ದಾಟಿಬಂದ ಸಮಗ್ರ ಲಿಂಗಾಯತ ಸಂಪಾದನಸಾಹಿತ್ಯದ ಒಂದು ಸ್ಥೂಲಚಿತ್ರವನ್ನು ಹೀಗೆ ಬಿಡಿಸಬಹುದು:

ವೀರಶೈವ ಸಂಪಾದನಸಾಹಿತ್ಯ

ಸಂಗ್ರಹ	**ಸಂಪಾದನೆ**
ಸರ್ವಪುರಾತನರ ವಚನಗಳು	ಏಕೋತ್ತರಶತಸ್ಥಲಗಳು:
ಸರ್ವಪುರಾತನರ ಬೆಡಗಿನ ವಚನಗಳು	೧. ಮಹಾಲಿಂಗದೇವ ೨. ಜಕ್ಕಣಾರ್ಯ
ಕಾಲಜ್ಞಾನದ ವಚನಗಳು	೩. ಸಿದ್ಧಲಿಂಗೇಶ್ವರ ೪. ಏಕೋತ್ತರಶತಸ್ಥಲ
ಎಲ್ಲಾ ಪುರಾತನರ ಸ್ತೋತ್ರದ ವಚನಗಳು	ಸಾರಾಮೃತ
ಮಿಶ್ರಸ್ತೋತ್ರದ ವಚನಗಳು	ಶೂನ್ಯಸಂಪಾದನೆಗಳು:
ಬಸವಸ್ತೋತ್ರದ ವಚನಗಳು	೧. ಪ್ರಸಾದಿ ಮಹಾದೇವಯ್ಯ ೨. ಹಲಗೆ
ಶರಣಸ್ತೋತ್ರದ ವಚನಗಳು	ದೇವ ೩. ಗುಮ್ಮಳಾಪುರದ ಸಿದ್ಧಲಿಂಗ
ವಚನಸಾರ	೪. ಗೂಳೂರ ಸಿದ್ಧವೀರಣಾರ್ಯ.
ಅಷ್ಟಾವರಣಸ್ತೋತ್ರದ ವಚನಗಳು	ಷಟ್ಸ್ಥಲವಚನಗಳು :
ಷಟ್ಸ್ಥಲಸ್ತೋತ್ರದ ವಚನಗಳು	ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ
ಲಿಂಗಸ್ತೋತ್ರದ ವಚನಗಳು	ಇತರ ಸಂಪಾದನೆಗಳು:
ಶಿವಮಹಿಮಾಸ್ತೋತ್ರದ ವಚನಗಳು	ಷಟ್ಸ್ಥಲಬ್ರಹ್ಮಾನಂದವಿರಕ್ತ ಚಾರಿತ್ರ
	ಸಂಪಾದನೆಯ ವಚನಗಳು. ವೀರಶೈವ
	ಸಾರೋದ್ಧಾರ ಸಂಪಾದನೆಯ ವಚನಗಳು

ಅನುಭವಜ್ಞಾನ ಸಾರಾಮೃತ ಸಂಪಾದನೆಯ ವಚನಗಳು, ಆಚರಣೆಯ ವಚನ, ಸಂಬಂಧದ ವಚನ. ಲಿಂಗಲೀಲಾವಿಲಾಸ ಚಾರಿತ್ರ, ಗಣಭಾಷಿತ ರತ್ನಮಾಲೆ. ವಿಶೇಷಾನುಭವ ಷಟ್ಸ್ಥಲ. ಪರಮ ಮೂಲಜ್ಞಾನ ಷಟ್ಸ್ಥಲ, ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಚರಣ. ಲಿಂಗಚಿದಮೃತ ಬೋಧೆ. ವೀರಶೈವಚಿಂತಾಮಣಿ. ಮುಕ್ತಿಕಂಠಾಭರಣ. ಚಿದೈಶ್ವರ್ಯ ಚಿದಾಭರಣ. ಷಟ್ಪ್ರಕಾರ ಸಂಗ್ರಹ. ಅದ್ವೈತಾನಂದದ ವಚನ. ಪ್ರಸಾದಿಸ್ಥಲದ ವಚನ. ಸೃಷ್ಟಿಯ ವಚನ. ಲಿಂಗವಿಕಳಾವಸ್ಥೆಯ ವಚನ.

ಸಂಪಾದನ ವಿಧಾನ :

ಕಲ್ಯಾಣಕ್ರಾಂತಿಗೆ ಸಿಕ್ಕು ಮೊದಲೇ ನುಗ್ಗಾದ ವಚನಸಾಹಿತ್ಯ, ಕಾಲ ಕ್ರಮೇಣ ಲೇಖನಪ್ರಮಾದ, ಉಚ್ಚಾರಪ್ರಮಾದಗಳಿಗೆ ತುತ್ತಾಗುತ್ತ ಸಾಗಿ ಬಂದಿತು. ಸಂಪಾದನಕೃತಿಗಳ ನಿರ್ಮಾಣಕಾರ್ಯದಲ್ಲಿ ತೊಡಗಿದ ಸಂಪಾದಕರಿಗೆ ಮೂಲಧನವಾಗಿ ಬಂದುದು, ಈ ರೂಪದ ಸಾಹಿತ್ಯ. ಈಗ ಅವರು ನೂರುಕಡೆಗಳಿಂದ ಸಂಗ್ರಹಿಸಿದ ಇಂತಹ ವಚನಗಳ ಪಾಠಶುದ್ಧಿಯನ್ನು ನಿರ್ಣಯಿಸುವ ಮತ್ತು ತಾವು ಕೈಕೊಂಡ ಕೃತಿಚೌಕಟ್ಟಿಗೆ ಹೊಂದುವಂತೆ ಅವುಗಳಿಗೆ ಆಕಾರ ಕೊಡುವ–ಹೀಗೆ ಎರಡು ಕಾರ್ಯಗಳನ್ನು ನಿರ್ವಹಿಸಬೇಕಾಗಿ ಬಂದಿತು. ಪಾಠ ಶುದ್ಧಿಯನ್ನು ನಿರ್ಣಯಿಸುವಲ್ಲಿ ಇವರು ಅನುಸರಿಸಿದ ವಿಧಾನಗಳು ನಮಗೆ ತಿಳಿದುಬಂದಿಲ್ಲ. ಆದರೆ ತಾವು ಕೈಕೊಂಡ ಕೃತಿಚೌಕಟ್ಟಿಗೆ ಹೊಂದಿಕೆಯಾಗುವಂತೆ ಕೆಲವು ವಚನಗಳನ್ನಾದರೂ ಸಂಕೋಚ–ವಿಸ್ತಾರ–ತಿದ್ದುಪಡಿಗೊಳಿಸುವ, ಅವಶ್ಯವೆನಿಸಿದಲ್ಲಿ ಒಂದೆರಡು ಹೊಸ ವಚನಗಳನ್ನು ಸೃಷ್ಟಿಸುವ ಕಾರ್ಯ ಇವರಿಂದ ತಕ್ಕ ಮಟ್ಟಿಗೆ ನಡೆದಿರುವ ಸಾಧ್ಯತೆಯಿದೆ. ಉದಾಹರಣೆಗೆ–ಗಣಭಾಷಿತ ರತ್ನಮಾಲೆಯ ಕರ್ತೃ ವಚನೋಕ್ತಿಗಳನ್ನು ಇನ್ನೂ ಸಮರ್ಥಿಸಲು ಅವುಗಳ ಒಡಲೊಳಗೆ ಹೇರಳವಾಗಿ ಸಂಸ್ಕೃತ ಉದ್ಧರಣೆಗಳನ್ನು ಬಳಸಿದರೆ, ಶೂನ್ಯಸಂಪಾದನೆಕಾರರು ಸಂಭಾಷಣೆಯ ಕೊಂಡಿಗಾಗಿ ವಚನಗಳ ಕೊನೆಯನ್ನು ಅನುಕೂಲಿಸಿಕೊಂಡರು. ಬಹುಶಃ ಏಕೋತ್ತರಶತಸ್ಥಲಕಾರ ಗದ್ಯಗಂಧಿಯಾದ ವಚನಗಳಿಗೆ ಪದ್ಯದೀಕ್ಷೆ ನೀಡಿದರೆ, ಮಿಕ್ಕವರು ವಚನಗಳ ಮಧ್ಯ ಲೋಪ, ಆಗಮ, ಆದೇಶ, ಪಲ್ಲಟರೂಪದ ಪಾಠಭೇದಗಳನ್ನು ಕಲ್ಪಿಸಿರಬಹುದು. ಲಿಪಿಕಾರರಿಂದಾದ ಅನುದ್ದೇಶಿತ ಪಾಠಾಂತರಗಳನ್ನು ಬಿಟ್ಟರೂ ಸಂಪಾದನಕಾರರಿಂದಾದ ಇಂಥ ಉದ್ದೇಶಿತ ಪಾಠಾಂತರ, ರೂಪಾಂತರಗಳ ಅಧ್ಯಯನಕಾರ್ಯ ಇಂದು ಐತಿಹಾಸಿಕವಾಗಿ, ಶಾಸ್ತ್ರಶುದ್ಧವಾಗಿ ನಡೆಯಬೇಕಾಗಿದೆ. ಇಷ್ಟರಮಟ್ಟಿಗೆ ಲಿಂಗಾಯತ ಸಂಪಾದನಸಾಹಿತ್ಯದಲ್ಲಿ ಪಾಠ ಪೀಳಿಗೆಗಳು ಜಾಳಿಗೆಯಂತೆ ಹರಡಿಕೊಂಡಿವೆ. "ಬಸವಸ್ತೋತ್ರದ ವಚನಗಳು" ಹೆಸರಿನ ಈ ಉಭಯ ಕೃತಿಗಳಲ್ಲಿಯೂ ಇಂಥ ಪಾಠಾಂತರ, ರೂಪಾಂತರಗಳು ಸ್ಥಾನ ಪಡೆದಿವೆ. ಉದಾ :

೧. ತನುವ ಕೊಟ್ಟು ತನು ಬಯಲಾಯಿತ್ತು.
ಮನವ ಕೊಟ್ಟು ಮನ ಬಯಲಾಯಿತ್ತು.
ಧನವ ಕೊಟ್ಟು ಧನ ಬಯಲಾಯಿತ್ತು.
ಈ ತ್ರಿವಿಧವನು ಕೊಟ್ಟ ಕಾರಣ
ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತಯ್ಯಾ.[೧೩]

ಮೂಲತಃ ಬಸವಣ್ಣನ ಸ್ತುತಿಯಾಗಿರುವ ಈ ವಚನವನ್ನು "ಬಸವಸ್ತೋತ್ರದ ವಚನ" ಕೃತಿಗೆ ಬರಮಾಡಿಕೊಳ್ಳುವಲ್ಲಿ,

ತನುವಕೊಟ್ಟು ತನು ಬಯಲಾಯಿತ್ತು, **ಬಸವಣ್ಣಂಗೆ,**
ಮನವಕೊಟ್ಟು ಮನ ಬಯಲಾಯಿತ್ತು, **ಬಸವಣ್ಣಂಗೆ,**
ಧನವಕೊಟ್ಟು ಧನ ಬಯಲಾಯಿತ್ತು, **ಬಸವಣ್ಣಂಗೆ,**
ಈ ತ್ರಿವಿಧವನು ಕೊಟ್ಟಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತಯ್ಯಾ.[೧೩.ಎ]

ಹೀಗೆ 'ಬಸವಣ್ಣಂಗೆ' ಪದದ ಪುನರುಕ್ತಿಯಿಂದ ವಚನದ ಆಶಯಕ್ಕೆ ಒಂದು ಬಗೆಯ ಒತ್ತನ್ನು ಒದಗಿಸಿಕೊಟ್ಟಿರುವರು. ಇಂಥ ಪಾಠಾಂತರದ ಕೆಲವು ವಚನಗಳು ಇಲ್ಲಿವೆ.

೨. ಆಚಾರ, ತನುಸಂಬಂಧವಾದಲ್ಲಿ ಶ್ರೀಗುರು ಸನ್ನಹಿತನು.
ಅರಿವು, ಮನಸಂಬಂಧವಾದಲ್ಲಿ ಶಿವಲಿಂಗ ಸನ್ನಹಿತನು.
ಈ ಉಭಯವು, ಸಂಬಂಧವಾದಲ್ಲಿ ಜಂಗಮಲಿಂಗ ಸನ್ನಹಿತನು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧಸಂಪನ್ನ ಶರಣನು.[೧೪]

ಮೂಲತಃ ಈ ವಚನ 'ಶರಣ'ನಿಗೆ ಸಂಬಂಧಿಸಿದೆ. ಇದು ಬಸವಣ್ಣನಿಗೆ ಹೊಂದುವಂತೆ

ಆಚಾರ, ತನುಸಂಬಂಧವಾದಲ್ಲಿ ಗುರು ಸನ್ನಹಿತ **ಬಸವಣ್ಣ**ನು.
ಅರಿವು, ಮನಸಂಬಂಧವಾದಲ್ಲಿ ಶಿವಲಿಂಗ ಸನ್ನಹಿತ **ಬಸವಣ್ಣ**ನು.
ಈ ಉಭಯವು, ಸಂಬಂಧವಾದಲ್ಲಿ ಜಂಗಮಲಿಂಗ ಸನ್ನಹಿತ **ಬಸವಣ್ಣ**ನು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧಸಂಪನ್ನ **ಶರಣ ಬಸವಣ್ಣ**ನು.

ಎಂದು ತಿರುಗಿಸಿಕೊಂಡುದು ಗಮನಾರ್ಹವಾಗಿದೆ. ಇಂಥ ರೂಪಾಂತರದ ಹಲವು ವಚನಗಳೂ ಇಲ್ಲಿ ಕಾಣುತ್ತವೆ.

೩. ದಿಟ್ಟಿಸಿ ನೋಡಿದರೆ ಒಂದೆರಡಾದರೂ ಕೂಟವಚನಗಳು ಇಲ್ಲಿ ಕಣ್ಣಿಗೆ ಬೀಳಬಹುದು, ಎನಿಸುವುದಾದರೂ ಪತ್ತೆ ಹಚ್ಚಲು ಅಧಿಕೃತ ಆಧಾರಗಳು ಸಾಲುವುದಿಲ್ಲ.

---


೧೩. ಚೆನ್ನಬಸವಣ್ಣನವರ ವಚನಗಳು(ಸಂ. ಆರ್.ಸಿ. ಹಿರೇಮಠ)ವ. ೭೪೫
೧೩.ಎ. ಬಸವಸ್ತೋತ್ರದ ವಚನಗಳು–ಬೋಳಬಸವರಾಜ(ಸಂ. ಎಂ.ಎಂ. ಕಲಬುರ್ಗಿ), ೪೦.

ಅದೇನೇ ಇದ್ದರೂ ಇಲ್ಲಿಯ ಬಹುಪಾಲು ವಚನಗಳು ಪ್ರಾಮಾಣಿಕವಾಗಿವೆಯೆಂಬುದನ್ನೂ ಈ ಕಾರ್ಯದಲ್ಲಿ ದುಡಿದು ನಮಗೆ ಅಪಾರವಾದ ವಚನಸಾಹಿತ್ಯವನ್ನು ಉಳಿಸಿಕೊಟ್ಟ ಪುಣ್ಯ, ಈ ಸಂಪಾದನಕಾರರಿಗೆ ಸಲ್ಲುತ್ತದೆಯೆಂಬುದನ್ನೂ ಮರೆಯುವಂತಿಲ್ಲ.

ಬಸವಸ್ತೋತ್ರದ ವಚನ : ಕರ್ತೃಗಳು

ಸಂಪಾದನೆಯ ಚೆನ್ನಂಜೇದೇವ : ಇವನಿಗೆ ಹರತಾಳ ಚೆನ್ನಂಜೇದೇವ, ಸಂಪಾದನೆಯ ಚೆನ್ನಂಜೇದೇವ ಎಂಬ ಎರಡು ಹೆಸರುಗಳಿವೆ. ಪೂರ್ವಾರ್ಧದ 'ಹರತಾಳ', ಗ್ರಾಮಸೂಚಿಯಾಗಿದ್ದರೆ, 'ಸಂಪಾದನೆ' ಕಾಯಕಸೂಚಿಯಾಗಿದೆ. ಉತ್ತರಾರ್ಧದ ಚೆನ್ನಂಜೇದೇವ ಎಂಬುದು ಚೆನ್ನಂಜಯ್ಯದೇವ ಎಂಬುದರ ಸಂಗ್ರಹ ರೂಪ. ಇವನಿಗೆ ಚೆನ್ನನಂಜಾರ್ಯ, ಚೆನ್ನಾಚಾರ್ಯ, ಆಚಾರ್ಯವರದ ಹರತಾಳ ನಂಜೇಶ ಎಂಬ ನಾಮಾಂತರಗಳೂ ಇವೆ.

ಸಂಪಾದನೆಯ ಗುರುಲಿಂಗದೇವನ ಶೀಲವಂತಯ್ಯನ ತ್ರಿವಿಧಿವ್ಯಾಖ್ಯಾನ, ಸಂಪಾದನೆಯ ಪರ್ವತೇಶನ ಚತುರಾಚಾರ್ಯ ಪುರಾಣ, ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣಗಳ ಪ್ರಕಾರ



೧೭. "ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣನಿರಂಜನ ಪರಂಜ್ಯೋತಿಸ್ವರೂಪರಾದ ತೋಂಟದ ಸಿದ್ಧಲಿಂಗಪ್ರಭು ವೆಂಬಾಚಾರ್ಯರು; ಅವರ ನಿಜದಜೀವಿನಾಚರಣೆಯನುಭವಿಯೆ ಬೋಳಬಸವೇಶ್ವರನು; ಅವರ ನಿಜದಜೀನಾಚರಣೆಯನುಭವಿಯ ಹರತಾಳ ಚೆನ್ನಂಜೆದೇವರು, ಅವರನುಭವದ ಅಖಂಡತೇಜೋವಿಗ್ರಹವೆ ಎಳಮಲೆಯ ಗುರುಶಾಂತದೇವರು; ಅವರ ಭಕ್ತಿ ಜ್ಞಾನ ವೈರಾಗ್ಯದ ಸಮರಸಾನಂದಾನುಭಾವಿಯೆ ಸಂಪಾದನೆಯ ಸಿದ್ಧವೀರಣಾಚಾರ್ಯರು; ಅವರಂಗಲಿಂಗದನುಭಾವದಾಚರಣೆಯ ನಿಜದ ನಿಜೆಗೆವಿಡಿದು ಸ್ವಲೀಲಾನಂದದಲ್ಲಾಚರಿಸಿದವರೇ ಸಂಪಾದನೆಯ ಬೋಳಬಸವದೇವರು; ಅವರ ಲಿಂಗಾಂಗಸಂಗಸಮರಸದಋಹಿನ ಪ್ರಸಾದಪೂರಿತಹೃದಯರಾದ ಸಂಪಾದನೆಯ ಗುರುಲಿಂಗದೇವರು ಲಿಂಗಾಂಗಪ್ರಾಣಸಂಯೋಗವೆಂಬ ಶಾಸ್ತ್ರದ ಗರ್ಭಗರ್ಭೀಕೃತಮಾಗಿರ್ದ ಮಂತ್ರಾರ್ಥವನು ಕರ್ಣಾಟಕ ಭಾಷೆಯಿಂದ ಟೀಕಿಸಿದವರು."(ಕ.ಕ.ಚ. II ಪು. ೪೨೨).

ಎಂಬ ಗುರು–ಶಿಷ್ಯಪರಂಪರೆ ವೇದ್ಯವಾಗುತ್ತದೆ. ಇಲ್ಲಿಯ ಹರತಾಳ ಚೆನ್ನಂಜೇದೇವನೆಂದರೆ ನಮಗೆ ಪ್ರಸ್ತುತವಾಗಿರುವ ಬಸವಸ್ತೋತ್ರ ವಚನಗಳ ಸಂಕಲನಕಾರ. ಹಸ್ತಪ್ರತಿಗಳಲ್ಲಿ ಬರುವ "ಷಟ್‌ಸ್ಥಲಚಕ್ರವರ್ತಿ ಹರತಾಳ ಚೆನ್ನಂಜೇದೇವರು ಸೇರಿಸಿದ" ಎಂಬ ಮಾತು ಈತನ ಷಟ್‌ಸ್ಥಲಸಿದ್ಧಿಯ ದ್ಯೋತಕವಾಗಿದೆ. ಸೋಮಶೇಖರ ಶಿವಯೋಗಿಗಳು ಬರೆದ ಬಸವಣ್ಣನವರ ವಚನಗಳ ಟೀಕೆಯ ಪ್ರಾರಂಭದಲ್ಲಿ ಬರುವ "ಆದ್ಯರೆಂದರೆ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಮೋಳಿಗೆಯ ಮಾರಯ್ಯ, ಹಡಪದಪ್ಪಣ್ಣ, ಸೊಡ್ಡಳ ಬಾಚರಸ, ಮರುಳಶಂಕರದೇವರು, ಸಿದ್ಧರಾಮಯ್ಯ, ಕಿನ್ನರಯ್ಯ ಮೊದಲಾದ ಪೂರ್ವಾಚಾರ್ಯರುಗಳೇ ಆದ್ಯಗಣಂಗಳೆನಿಸುವರು. ವೇದ್ಯರೆಂದರೆ ಕೋವಿಶಾಂತಯ್ಯ, ಕೋಲಶಾಂತಯ್ಯ, ಕುದುರೆಶಾಂತಯ್ಯ, ಸರವಿಶಾಂತಯ್ಯ, ಮಂಚದಶಾಂತಯ್ಯ, ಗಿರಿಗಟೆಶಾಂತಯ್ಯ ಮೊದಲಾದ ನೂರೊಂದು ವಿರಕ್ತರುಗಳೇ ವೇದ್ಯಗಣಂಗಳೆನಿಸುವರು. ಸಾಧ್ಯರೆಂದರೆ ತೋಂಟದ ಸಿದ್ಧೇಶ್ವರ ಸ್ವಾಮಿಗಳು, ಬೋಳಬಸವೇಶ್ವರ ಸ್ವಾಮಿಗಳು, ಮರುಳಸ್ವಾಮಿಗಳು, ಸ್ವತಂತ್ರ ಸ್ವಾಮಿಗಳು, ಗುಮ್ಮಳಾಪುರದ ಸಿದ್ಧವೀರಸ್ವಾಮಿಗಳು, ಗಗನದ ಸ್ವಾಮಿಗಳು, ಚೆನ್ನಂಜೆಯಸ್ವಾಮಿಗಳು, ಕಟ್ಟಿಗೆಹಳ್ಳಿ ಸ್ವಾಮಿಗಳು, ಮುರಿಗೇಸ್ವಾಮಿಗಳು ಮೊದಲಾದ ನೂತನಪುರಾತನರೇ ಸಾಧ್ಯಗಣಂಗಳೆನಿಸುವರು' ಎಂಬ ಹೇಳಿಕೆಯಲ್ಲಿ ಬರುವ ಚೆನ್ನಂಜೇದೇವನ ಉಲ್ಲೇಖ ಆತನ ದಿವ್ಯವ್ಯಕ್ತಿತ್ವವನ್ನು ತಿಳಿಸುತ್ತದೆ.

ತೋಂಟದ ಸಿದ್ಧಲಿಂಗನ ಪ್ರಶಿಷ್ಯನಾಗಿರುವುದನ್ನೂ ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳನ್ನು ತನ್ನ ಸಂಪಾದನೆಗಳಲ್ಲಿ ಬಳಸಿಕೊಂಡಿರುವುದನ್ನೂ ಗಮನಿಸಿ, ಕವಿಚರಿತೆಕಾರರು ಈತನ ಕಾಲ ಕ್ರಿ. ಶ. ೧೫೩೦ ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಯಿಂದಾಗಿ ತೋಂಟದ ಸಿದ್ಧಲಿಂಗಯತಿಯ ಕಾಲ ಕ್ರಿ. ಶ. ೧೫೬೦ಆಗಿರಲು ಸಾಧ್ಯವಿದೆ.[೧೮] ಇದು ನಿಜವಿದ್ದ ಪಕ್ಷದಲ್ಲಿ ಸಿದ್ಧಲಿಂಗನ ಪ್ರಶಿಷ್ಯನಾದ ಈ ಚೆನ್ನಂಜೇದೇವನು ಕ್ರಿ. ಶ. ೧೫೬೦ರ ತರುವಾಯ ಬದುಕಿದ್ದನೆಂದು ಭಾವಿಸಬೇಕಾಗುತ್ತದೆ. ಚೆನ್ನಂಜೇದೇವನ ಊರು, ಹರತಾಳ ಎಂಬುದು ಸ್ಪಷ್ಟವಿದ್ದರೂ

.... ಕಾವೇರಿ ಹೇಮಾವತಿಗಳ ಬಂ ।
ಧುರ ಮಧ್ಯದೇಶದೊಳಗಿರ್ಪ ನಂದಿಯಪುರದ ಸಿಂಹಾಸನಾಧಿಪನಹ ॥
ಗುರು ಚೆನ್ನಂಜೇಶನಮಲಕರಕಮಲದೊ ।
ಳ್ವರಿರಂಜಿಸುತ್ತೊಗೆದ ಪರ್ವತೇಂದ್ರನ ಹಸ್ತ ।
ಸರಸಿಜೋದ್ಭವ ತೋಂಟದಾರ್ಯನ್..............[೧೯]

ಎಂಬ ಪದ್ಯದಿಂದ ಈತನು ನಂದಿಯಪುರಸಿಂಹಾಸನಾಧೀಶನು ಆಗಿದ್ದನೆಂದೂ ತಿಳಿದುಬರುತ್ತದೆ. ಪ್ರಶಿಷ್ಯ ವಿರಕ್ತ ತೋಂಟದಾರ್ಯನದೂ ನಂದಿಪುರವೆಂದು ಶ್ರೀ ಎನ್. ಆರ್. ಕರಿಬಸವಶಾಸ್ತ್ರಿಗಳ ಅಭಿಪ್ರಾಯ. ಇವರ ಪ್ರಕಾರ ಇದು ಬಿಜವಾಡದ ನೆರೆಯ ಬಸವಪಟ್ಟಣ. ಶ್ರೀ ಎಂ. ಎ. ನಾರಾಯಣಶಾಸ್ತ್ರಿಗಳ ಪ್ರಕಾರ, ಕೋಲಾರದ ಬಳಿಯ ನಂದಿಹಳ್ಳಿ. ಈತನ ಕೃತಿಗಳು ಆರು :

---

೧೮. ಶ್ರೀಕಂಠತೀರ್ಥ(೧೯೭೬)ಪು. ೩೦೮ ತೋಂಟದ ಸಿದ್ಧಲಿಂಗೇಶ್ವರರ ಕಾಲ ವಿಚಾರ: ಒಂದು ಮರು ಪರಿಶೀಲನೆ (ಎಸ್. ಶಿವಣ್ಣ)

೧೯. ಶ್ರೀ ಸಿದ್ಧೇಶ್ವರ ಮಹಾಪುರಾಣವು(ವಿರಕ್ತ ತೋಂಟದಾರ್ಯ) ೧-೨೫

೧. ಆಚರಣೆಯ ವಚನ (ವಚನ ಸಂಖ್ಯೆ ೧೪೦)[೨೧]

೨. ಸಂಬಂಧದ ವಚನ (ವಚನ ಸಂಖ್ಯೆ ೧೨೧).

೩. ಮಿಶ್ರಸ್ತೋತ್ರದ ವಚನ (ವಚನ ಸಂಖ್ಯೆ ೧೦೮).

೪. ಬಸವಸ್ತೋತ್ರದ ವಚನ (ವಚನ ಸಂಖ್ಯೆ ೧೨೩ ಅಥವಾ ೧೪೨).[೨೨]

೫. ಬಸವಸ್ತೋತ್ರದ ಷಟ್ಪದಿ (ಪದ್ಯಸಂಖ್ಯೆ ೧೧೧).[೨೩]

೬. ಶಂಕರದೇವರ ಕಂದ (ಪದ್ಯಸಂಖ್ಯೆ ೧೧೭).[೨೪]

ಪೂರ್ವದ ಶಿವಶರಣರ ವಚನ, ಶಿವಕವಿಗಳ ಕಾವ್ಯಬಲದಿಂದ ರೂಪಗೊಂಡ ಸಂಪಾದನ ಕೃತಿಗಳಿವು. ಇವುಗಳಲ್ಲಿ ಆಚರಣೆಯ ವಚನ, ಸಂಬಂಧದ ವಚನಗಳು ತಾತ್ವಿಕ ಸಂಕಲನಗಳಾಗಿದ್ದರೆ, ಮಿಶ್ರಸ್ತೋತ್ರದ ವಚನ ಬಸವಸ್ತೋತ್ರದ ವಚನ, ಬಸವಸ್ತೋತ್ರದ ಷಟ್ಪದಿ, ಶಂಕರದೇವರ ಕಂದ, ಸಾಮಾನ್ಯ ಸಂಕಲನಗಳಾಗಿವೆ. ಕೆಲವು ಹಸ್ತಪ್ರತಿಗಳಲ್ಲಿ ಮೊದಲಿನ ಎರಡೂ ಕೃತಿಗಳನ್ನು ಒಂದಾಗಿ ಸಂಗ್ರಹಿಸಿ "ಆಚರಣೆ ಸಂಬಂಧದ ವಚನಗಳು" ಎಂದೂ ಹೇಳಿದುದುಂಟು. ಅಂತಹ ಪ್ರಸಂಗಗದಲ್ಲಿ ಒಟ್ಟು ವಚನ ಸಂಖ್ಯೆ ೨೬೧(೧೪೦+೧೨೧) ಎಂಬ ಉಲ್ಲೇಖ ಕಂಡುಬರುತ್ತದೆ. ಮೊದಲನೆಯ ಕೃತಿ "ಕ್ರಿಯಾಜ್ಞಾನಾರೂಢ ತ್ರೈಬೋಳು ನಿರ್ಣಯಾಚರಣೆಯ ಸ್ಥಲ"ದಿಂದ "ಸರ್ವಸಮತಾ ಭಾವಾಚರಣೆಯ ಸ್ಥಲ"ದ ವರೆಗೆ ೨೭ ಸ್ಥಲಗಳನ್ನು, ಎರಡನೆಯದು "ಷಟ್‌ಸ್ಥಲಜ್ಞಾನ ಸಾರಾಯ ಸಂಬಂಧಸ್ಥಲ"ದಿಂದ "ಪರಿಪೂರ್ಣ ಸ್ವತಂತ್ರಭಾವ ಸಂಬಂಧಸ್ಥಲ"ದ ವರೆಗೆ ೨೩ ಸ್ಥಲಗಳನ್ನು ವ್ಯಾಪಿಸಿದೆ. ಈ ೫೦ ಸ್ಥಲಗಳ ಆದಿಯಲ್ಲಿ ಗುರುಸ್ತೋತ್ರದ ೧ ಸ್ಥಲ, ಅಂತ್ಯದಲ್ಲಿ ಶರಣಸ್ತೋತ್ರದ ೧ ಸ್ಥಲ ಸೇರಿಸಿ, ಹಸ್ತಪ್ರತಿಗಳಲ್ಲಿ "ಅಂತು ಆಚರಣೆ ಸಂಬಂಧ ಉಭಯಕ್ಕೆ ಸ್ಥಲ ೫೨ಕ್ಕಂ ಶ್ರೀ ಶ್ರೀ" ಎಂದು ಹೇಳಿದುದು ಸ್ವಾಭಾವಿಕವಾಗಿದೆ. ಇದರಿಂದ ಆಚರಣೆಯ ತತ್ವ ಮತ್ತು ಸಂಬಂಧದ ತತ್ವಗಳನ್ನು ಹೊಂದಿಸಿಕೊಂಡು ಗ್ರಹಿಸುವುದಕ್ಕೆ ಲಿಂಗಾಯತದಲ್ಲಿ ಮನ್ನಣೆ ಇರುವುದು ಸ್ಪಷ್ಟವಾಗುತ್ತದೆ. ಈ ಆದರ್ಶದಲ್ಲಿ ನಡೆದು, ಚೆನ್ನಂಜೇದೇವನ ಪ್ರಶಿಷ್ಯ ಸಂಪಾದನೆಯ ಸಿದ್ಧವೀರಣ್ಣ ಬೇರೊಂದು "ಆಚರಣೆಯ ಸಂಬಂಧದ ವಚನ: ಕೃತಿ ರಚಿಸಿದುದನ್ನು ಇಲ್ಲಿ ನೆನೆಯಬೇಕು. ಆಚರಣೆಯ ವಚನ, ಶರಣನಾದವನು ಬದುಕಿನಲ್ಲಿ ದೂರಗೊಳಿಸಬೇಕಾದ ದುರಾಚಾರಗಳನ್ನು, ಸ್ವೀಕರಿಸಬೇಕಾದ ಸದಾಚಾರಗಳನ್ನು ವಿವರಿಸಿದರೆ, ಸಂಬಂಧದ ವಚನ, ಶರಣನಾದವನು ಸಂಬಂಧ ಪಡೆಯಬೇಕಾದ ಷಟ್‌ಸ್ಥಲ, ಅಷ್ಟಾವರಣಗಳನ್ನು ನಿರೂಪಿಸುತ್ತ ಲಿಂಗಾಂಗಸಾಮರಸ್ಯದ ಕಡೆಗೆ ಬೆರಳು ತೋರಿಸುತ್ತದೆ.

---

೨೦. ಕರ್ನಾಟಕ ಶಬ್ದಮಂಜರಿ–ವಿರಕ್ತತೋಂಟದಾರ್ಯ(ಸಂ. ವ್ಹಿ.ಶಿವಾನಂದ) ಮುನ್ನುಡಿ ೨೫

೨೧. ಇದು ಹೊಸಹಳ್ಳಿ ಸಂಸ್ಥಾನಮಠದ ಶ್ರೀ ಪ್ರಭುಸ್ವಾಮಿಗಳು ಅವರಿಂದ ಪ್ರಕಟವಾಗಿದೆ(೧೯೫೧).

೨೨. ೧೨೩ ವಚನಗಳ "ಬಸವಸ್ತೋತ್ರದ ವಚನ" ಶ್ರೀ ಎಸ್. ಎಂ. ಹುಣಶ್ಯಾಳ ಮತ್ತು ಶ್ರೀ ಸಿ. ಎಚ್. ಅನ್ನದಾನಯ್ಯ ಅವರಿಂದ ಪ್ರಕಟವಾಗಿದೆ(೧೯೬೫).

೨೩. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ–ತೃತೀಯ ಸಂಪುಟ ನಂ. ೧೦೩೭.

೨೪. ಇದು ಪ್ರಿಸಿ. ಮಹಾದೇವಪ್ಪ ಅವರಿಂದ ಪ್ರಕಟವಾಗಿದೆ(೧೯೫೮).

ಅನೇಕ ಶರಣರ ಸ್ತುತಿವಚನಗಳ ಸಂಕಲನವಾಗಿರುವ "ಮಿಶ್ರಸ್ತೋತ್ರದ ವಚನ" ಶಿವಶರಣರು ಪರಸ್ಪರರ ಬಗೆಗೆ ವ್ಯಕ್ತಪಡಿಸಿದ ಸ್ತುತಿರೂಪದ ವ್ಯಕ್ತಿ ಚಿತ್ರಗಳ ಚಿತ್ರಶಾಲೆಯಾಗಿದೆ. ಶಿಷ್ಯ, ಎಳಮಲೆಯ ಗುರುಶಾಂತದೇವನ ಬೇರೊಂದು "ಮಿಶ್ರಸ್ತೋತ್ರದ ವಚನ" ಕೃತಿಗೆ ಮಾದರಿಯಾಗಿದೆ ಈ ಕೃತಿ. "ಬಸವಸ್ತೋತ್ರದ ವಚನ" ಬಸವಣ್ಣನವರನ್ನು ಅನೇಕ ಶರಣರು ಕಂಡು ಕಂಡರಿಸಿದ ವಚನಗಳ ಸಂಕಲನವಾಗಿದೆ. ೧೨೩ ಮತ್ತು ೧೪೧ ವಚನಗಳ ಎರಡು ಕುಟುಂಬಗಳಲ್ಲಿ ಬೆಳೆದುಬಂದ ಇದು, ಪ್ರಶಿಷ್ಯ ಸಂಪಾದನೆಯ ಬೋಳಬಸವನ ಬೇರೊಂದು "ಬಸವಸ್ತೋತ್ರ ವಚನ" ಕೃತಿಗೆ ಸ್ಫೂರ್ತಿ ನೀಡಿದೆ. ಪ್ರಾಚೀನ ಹಲವು ಕೃತಿಗಳಿಂದ ಎತ್ತಿಕೊಂಡ ಬಸವಸ್ತುತಿ ರೂಪದ ೧೧೧ ಪದ್ಯಗಳ "ಬಸವಸ್ತೋತ್ರದ ಷಟ್ಪದಿ"ಯೂ ಆತನ ಸಂಕಲನವೆಂದು ತಿಳಿದುಬರುತ್ತದೆ. ಇವನ ಇನ್ನೊಂದು ಕೃತಿ "ಶಂಕರದೇವರ ಕಂದ" ಪ್ರಸನ್ನ ಶಂಕರ ಲಿಂಗಾ ಮುದ್ರಿಕೆಯನ್ನಿಟ್ಟುಕೊಂಡು ಶಂಕರದೇವನು ಬರೆದ ಅನೇಕ ಕಂದಗಳಲ್ಲಿ ೧೧೭ನ್ನು ಮಾತ್ರ ಒಳಗೊಂಡಿದೆ. ಭವದಿಂದ ಮುಕ್ತಗೊಳಿಸಬೇಕೆಂದು ಇಷ್ಟಲಿಂಗವನ್ನು ಪ್ರಾರ್ಥಿಸಿದ ಭಕ್ತನೊಬ್ಬನ ಆರ್ತಭಾವ, ಇಲ್ಲಿ ಮಡುಗಟ್ಟಿ ನಿಂತಿದೆ.

ಸಂಪಾದನೆಯ ಬೋಳಬಸವ

ತೋಂಟದ ಸಿದ್ಧಲಿಂಗಯತಿಯ ಶಿಷ್ಯ ಪರಂಪರೆಯಲ್ಲಿ ಬೋಳಬಸವ ಹೆಸರಿನ ಇಬ್ಬರು ವ್ಯಕ್ತಿಗಳಿದ್ದಾರೆ. ಒಬ್ಬ ನಿರಕ್ಷರಿ ಬೋಳಬಸವ, ಇನ್ನೊಬ್ಬ ಸಂಪಾದನೆಯ ಬೋಳಬಸವ. ಇವರಲ್ಲಿ ಮೊದಲನೆಯವ ತೋಂಟದಾರ್ಯನ ಶಿಷ್ಯ, ಎರಡನೆಯವ ಸಂಪಾದನೆಯ ಸಿದ್ಧವೀರಣಾಚಾರ್ಯನ ಶಿಷ್ಯ. "ಅವರಂಗ (=ಸಿದ್ಧವೀರಣಾಚಾರ್ಯರಂಗ) ಲಿಂಗದನುಭಾವದಾಚರಣೆಯ ನಿಜದ ನಿರಿಗೆವಿಡಿದು ಸ್ವಲೀಲಾನಂದದಲ್ಲಾಚರಿಸಿದವರೇ ಸಂಪಾದನೆಯ ಬೋಳಬಸವದೇವರು"[೨೫] ಎಂದು, ಶಿಷ್ಯನಾದ ಸಂಪಾದನೆಯ ಗುರುಲಿಂಗದೇವ ಹೇಳಿದುದು ಬೋಳಬಸವದೇವನ ಘನವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತದೆ. ತೋಂಟದ ಸಿದ್ಧಲಿಂಗ (೧೪೭೦) ನಿಂದ ೭ನೆಯ ತಲೆಮಾರಿನವರೆಂಬ ಅಂಶವನ್ನು ಗ್ರಹಿಸಿ, ಕವಿಚರಿತೆಕಾರರು ಕ್ರಿ. ಶ. ೧೬೭೦ ಈತನ ಕಾಲವೆಂದು ಹೇಳುತ್ತಾರೆ. ಆದರೆ ಮೇಲೆ ವಿವೇಚಿಸಿದಂತೆ, ತೋಂಟದ ಸಿದ್ಧಲಿಂಗನಕಾಲ ಕ್ರಿ. ಶ. ೧೫೬೦ ಆಗಿದ್ದ ಪಕ್ಷದಲ್ಲಿ ಸಂಪಾದನೆಯ ಬೋಳಬಸವನ ಕಾಲ ಇನ್ನೂ ಮುಂದೆ ಸರಿಯುತ್ತದೆ. ಈತನ ಕೃತಿಗಳು ಮೂರು :

೧. ಷಟ್‌ಸ್ಥಲಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು (ವಚನ ಸಂಖ್ಯೆ ೨೩೧).

೨. ಬಸವಸ್ತೋತ್ರದ ವಚನಗಳು (ವಚನ ಸಂಖ್ಯೆ ೧೨೩).

೩. ಬಸವಸ್ತೋತ್ರದ ವಚನಗಳು (ವಚನ ಸಂಖ್ಯೆ ೪೬).[೨೬]

ಇವುಗಳಲ್ಲಿ "ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು" ಹೆಸರೇ ಸೂಚಿಸುವಂತೆ "ಷಟ್‌ಸ್ಥಲ ಬ್ರಹ್ಮಾನಂದ"ನಾದ ವಿರಕ್ತನ ಲಕ್ಷಣ, ಆಚರಣೆಗಳನ್ನು ವಿವರಿಸಿದರೆ, ಮಿಕ್ಕ ಎರಡು "ಬಸವಸ್ತೋತ್ರದ ವಚನಗಳು" ಬಸವಸ್ತುತಿರೂಪದ ವಚನಗಳ ಸಂಕಲನಗಳಾಗಿವೆ.

೨೫. ಕ.ಕ.ಚ. II ಪು. ೪೨೨.

೨೬. ಈ ಮೂರರಲ್ಲಿ ಎರಡನೆಯ ಕೃತಿ ಮಾತ್ರ ಈಗ ಅಚ್ಚಾಗುತ್ತಲಿದೆ. ಇನ್ನೆರಡು ಅಚ್ಚಾಗಬೇಕಾಗಿವೆ. ಈಗ ಮೂರೂ ಕೃತಿಗಳು ಅಚ್ಚಾಗಿವೆ(ಸಂ)

ಬಸವಸ್ತೋತ್ರದ ವಚನ : ಕೃತಿಗಳು

"ಬಸವಸ್ತೋತ್ರದ ವಚನಗಳು" ಬಸವಣ್ಣನವರ ದಿವ್ಯವ್ಯಕ್ತಿತ್ವವನ್ನು ಕಥಿಸುವ ಬೇರೆ ಬೇರೆ ಶರಣರ ವಚನಗಳ 'ಸಂಕಲನಕೃತಿ'ಗಳಾಗಿವೆ. ಎಲ್ಲಾ ಪುರಾತನರ ಸ್ತೋತ್ರದ ವಚನಗಳು, ಮಿಶ್ರಸ್ತೋತ್ರದ ವಚನಗಳು, ಶರಣ ಸ್ತೋತ್ರದ ವಚನಗಳು ಇತ್ಯಾದಿ ಕೃತಿಗಳ ವರ್ಗಕ್ಕೆ ಸೇರುವ "ಬಸವಸ್ತೋತ್ರದ ವಚನಗಳು" ಹೆಸರಿನಗ್ರಂಥಗಳು ಒಂದೇ ಗುರುಪರಂಪತೆಯ ಇಬ್ಬರು ವ್ಯಕ್ತಿಗಳಿಂದ ರೂಪಗೊಂಡಿವೆ. ಸಾಲದುದಕ್ಕೆ ಈ ಇಬ್ಬರಲ್ಲಿಯೂ ಮತ್ತೆ ಎರಡು ಕುಟುಂಬಗಳು ಹೀಗೆ ಕಂಡುಬರುತ್ತವೆ :

ಬಸವಸ್ತೋತ್ರದ ವಚನಗಳು[೨೭]

ಚೆನ್ನಂಜೇದೇವ

ಬೋಳಬಸವೇಶ

ಬಸವಸ್ತೋತ್ರದ ವಚನಗಳು=೧
ವಚನ ಸಂಖ್ಯೆ ೧೨೩
(ಹ. ಪ್ರ. ೩೧೬)

ಬಸವಸ್ತೋತ್ರದ ವಚನಗಳು-೨
ವಚನ ಸಂಖ್ಯೆ ೧೪೨
(ಹ. ಪ್ರ. ೩೧೪)

ಬಸವಸ್ತೋತ್ರದ ವಚನಗಳು-೧
ವಚನ ಸಂಖ್ಯೆ ೧೨೪
(ಹ. ಪ್ರ. ೩೭೩)

ಬಸವಸ್ತೋತ್ರದ ವಚನಗಳು-೨
ವಚನ ಸಂಖ್ಯೆ ೪೬
(ಹ. ಪ್ರ. ೪೯)

ಇವುಗಳಲ್ಲಿ ಚೆನ್ನಂಜೇದೇವನ 'ಬಸವಸ್ತೋತ್ರದ ವಚನಗಳು-೧'ಕ್ಕೆ ಬಹುಶಃ ಸಹೃದಯರು ಮಧ್ಯಮಧ್ಯ ೧೮ ಹೊಸ ವಚನಗಳನ್ನು ಸೇರಿಸುವುದರಿಂದ "ಬಸವಸೋತ್ರದ ವಚನಗಳು"-೨ ಸಿದ್ಧವಾಗಿದ್ದರೆ,[೨೮] ಬೋಳಬಸವೇಶನವು ಎರಡು ಸ್ವತಂತ್ರ ಕೃತಿಗಳೇ ಆಗಿವೆ. ಹೀಗಾಗಿ ನೋಡಲಿಕ್ಕೆ ಇವು ನಾಲ್ಕು ಕೃತಿಗಳೆನಿಸಿದರೂ ವಸ್ತುತಃ ಮೂರೇ (ಚೆನ್ನಂಜೇದೇವ-೧, ಬೋಳಬಸವರಾಜ-೨). ಇವುಗಳಲ್ಲಿ ಇನ್ನೂ ಅಪ್ರಕಟಿತ ರೂಪದಲ್ಲಿ ಉಳಿದಿರುವ ಬೋಳಬಸವರಾಜದೇವರ "ಬಸವಸ್ತೋತ್ರದ ವಚನಗಳು-೨" ಕ್ರಮವಾಗಿ ಚೆನ್ನಬಸವಣ್ಣ ೨ ವಚನ, ಮಹಾದೇವಿಯಕ್ಕನ ೨ ವಚನ, ಪ್ರಭುದೇವರ ೧ ವಚನ, ನೀಲಮ್ಮನ ೪೧ ವಚನಗಳ ಸಂಕಲನವಾಗಿದೆ. ಇಲ್ಲಿ ಪ್ರಕಟವಾಗುತ್ತಿರುವ ಚೆನ್ನಂಜೇದೇವರ "ಬಸವಸೋತ್ರದ ವಚನಗಳು-೨" ಮತ್ತು ಬೋಳಬಸವರಾಜ ದೇವರ "ಬಸವಸ್ತೋತ್ರದ ವಚನ-೧" ಗಳಲ್ಲಿಯ ವಚನ ವಿವರಣೆ ಹೀಗಿದೆ.

---

೨೭. ಇಲ್ಲಿಯ ಹಸ್ತಪ್ರತಿಗಳು ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರಕ್ಕೆ ಸಂಬಂಧಿಸಿದುವು.

೨೮. ಈ ಹದಿನೆಂಟು ವಚನಗಳು ಬೋಳಬಸವರಾಜನು 'ಬಸವಸ್ತೋತ್ರದ ವಚನಗಳು-೧'ರಲ್ಲಿಯೂ ಇವೆ. ಬಹುಶಃ ಈ ವಚನಗಳನ್ನು ಬೋಳಬಸವರಾಜನ ಸಂಕಲನದಿಂದಲೇ ಚೆನ್ನಂಜೇದೇವರ ಸಂಕಲನಕ್ಕೆ ಸಹೃಯರು ಆ ಮೇಲೆ ಸೇರಿಸಿರಬೇಕು.

ಚೆನ್ನಂಜೇದೇವ :

ಪ್ರಭುದೇವ	೨೨
ಚೆನ್ನಬಸವಣ್ಣ	೨೫
ಮಡಿವಳ ಮಾಚಿದೇವ	೩೭
ಸಿದ್ಧರಾಮ	೨೬
ಉರಿಲಿಂಗಪೆದ್ದಿ	೨
ತೋಂಟದ ಸಿದ್ಧಲಿಂಗ	೨
ಅಕ್ಕಮಹಾದೇವಿ	೫
ಅಕ್ಕನಾಗಮ್ಮ	೩
ಮೇದಾರ ಕೇತಯ್ಯ	೨
ಮರುಳ ಶಂಕರದೇವ	೩
ಹಾವಿನಾಳ ಕಲ್ಲಯ್ಯ	೧
ಬಹುರೂಪಿ ಚೌಡಯ್ಯ	೩
ಮೋಳಿಗೆಯ ಮಾರಯ್ಯ	೩
ನೀಲಲೋಚನೆ	೨
ಹಡಪದ ಅಪ್ಪಣ್ಣ	೪
ಸೋಮನಾಥ (?)	೧
ಸಿದ್ಧರಾಮ	೧
	೧೪೨

ಬೋಳಬಸವರಾಜದೇವ :

ಪ್ರಭುದೇವ	೨೩
ಚೆನ್ನಬಸವಣ್ಣ	೧೯
ಮಡಿವಳ ಮಾಚಿದೇವ	೯
ಸಿದ್ಧರಾಮ	೫೨
ಉರಿಲಿಂಗಪೆದ್ದಿ	೧
ಸೊಡ್ಡಳ ಬಾಚರಸ	೨
ಮರುಳ ಶಂಕರದೇವ	೨
ಅಕ್ಕಮಹಾದೇವಿ	೩
ನೀಲಲೋಚನೆ	೨
ಕಿನ್ನರಿ ಬ್ರಹ್ಮಯ್ಯ	೧
ಹಡಪದ ಅಪ್ಪಣ್ಣ	೧
ತೋಂಟದ ಸಿದ್ಧಲಿಂಗ	೧
ಬಹುರೂಪಿ ಚೌಡಯ್ಯ	೧
ಸ್ವತಂತ್ರ ಸಿದ್ಧಲಿಂಗೇಶ್ವರ	೧
ಆಯ್ದಕ್ಕಿ ಮಾರಯ್ಯ	೩
ಅಕ್ಕನಾಗಮ್ಮ	೨
ಸಿದ್ಧರಾಮ	೧
	೧೨೪

ಇಬ್ಬರಲ್ಲಿಯೂ ಸಮಾನವಾಗಿರುವ ೧೮ ವಚನಗಳನ್ನು ಕಳೆದರೆ (೧೨೪+೧೨೪–೧೮=) ಉಳಿಯುವ ೨೪೮ ವಚನಗಳು, ಈ ಉಭಯ ಕೃತಿಗಳಲ್ಲಿ ಸಂಕಲಿತವಾಗಿವೆ. ಬಸವಣ್ಣನವರನ್ನು ಸ್ತುತಿಸುವ ಇನ್ನೂ ನೂರಾರು ವಚನಗಳಿದ್ದು, ಇವರು ಮಾತ್ರ ೨೪೮ನ್ನು ಸಂಗ್ರಹಿಸಿದ್ದಾರೆ.

'ವೀರಶೈವ ನಿರ್ಣಯ ಪರಮಾವತಾರ' ಎನಿಸಿದ ಬಸವಣ್ಣನವರು ವೀರಶೈವದ ಉಸಿರು. ಮಾನವನಾಗಿ ಹುಟ್ಟಿ, ದೇವಮಾನವನಾಗಿ ಬೆಳೆದ ಈತನ ನಾಮ ಲಿಂಗಾಯತರಿಗೆ ಮಂತ್ರಸ್ವರೂಪ. ಕಳೆದ ೮೦೦ ವರ್ಷಗಳಿಂದಲೂ ಸುಖದುಃಖಗಳಲ್ಲಿ ನಿತ್ಯ ಸ್ಮರಣೀಯವಾಗಿ, ಲಿಂಗಾಯತಹಸ್ತಪ್ರತಿಗಳ ಪ್ರಾರಂಭದಲ್ಲಿ "ಶ್ರೀಗುರು ಬಸವಲಿಂಗಾಯನಮಃ" ಎಂದು ಸ್ವಸ್ತಿಲೇಖನವಾಗಿ ಈ ಹೆಸರು

ಬಳಕೆಯಾಗುತ್ತ ಬಂದಿದೆ. ಹೀಗೆ ತಮ್ಮ ಅಂತರಂಗ ಬಹಿರಂಗಗಳಲ್ಲಿ ತುಂಬಿತುಳುಕುತ್ತಿರುವ ಈ ವಿಭೂತಿವ್ಯಕ್ತಿತ್ವವನ್ನು ಕಂಡು ಮಂತ್ರಮುಗ್ಧರಾದ ಶಿವಶರಣರು, ಶಿವಕವಿಗಳು ಮನದಣಿ ಹೊಗಳಿದ್ದಾರೆ. ಯಾವ ಶರಣನ ವಿಷಯವಾಗಿಯೂ ಇಲ್ಲದಷ್ಟು ಸ್ತುತಿರೂಪ ಅನೇಕ ವಚನಗಳೂ ಚರಿತ್ರೆ, ಪುರಾಣರೂಪದ ಅನೇಕ ಕಾವ್ಯಗಳೂ ಬಸವಣ್ಣನವರ ಬಗೆಗೆ ಕನ್ನಡದಲ್ಲಿ ಕಣ್ಣು ತೆರೆದಿವೆ. ಇವುಗಳಲ್ಲಿ ಒಂದು ಕಡೆ ಶಿವಕವಿಗಳ ಕೃತಿಗಳಿಂದ ಪದ್ಯಗಳನ್ನು ಆಯ್ದುಕೊಂಡು "ಬಸವಸ್ತೋತ್ರದ ಷಟ್ಪದಿ" ಮುಂತಾದವುಗಳನ್ನು ಸಂಪಾದಿಸಿದರೆ, ಇನ್ನೊಂದುಕಡೆ ಶಿವಶರಣರ ಸಾಹಿತ್ಯದಿಂದ ವಚನಗಳನ್ನು ಆಯ್ದುಕೊಂಡು 'ಬಸವಸ್ತೋತ್ರದ ವಚನ'ಗಳನ್ನು ಸಂಪಾದನಕಾರರು ಸಂಪಾದಿಸಿದ್ದಾರೆ.

"ಬಸವಸ್ತೋತ್ರದ ವಚನಗಳು" ಕೃತಿಗಳಲ್ಲಿ ಅವರವರ ಭಾವಕ್ಕೆ ಅವರವರ ದರುಶನಕೆ ಪ್ರಕಟವಾದ ಬಸವಣ್ಣನ ವ್ಯಕ್ತಿತ್ವ ವ್ಯಾಪಿಸಿನಿಂತಿದೆ. ಪ್ರಭುದೇವನಂತಹ ವ್ಯೋಮಕಾಯನು ಮೊದಲುಮಾಡಿ ಎಲ್ಲ ಶರಣರ ವಚನಗಳಲ್ಲಿ ಬಸವಣ್ಣನವರ 'ನಾಮಾಮೃತ' ತುಂಬಿ ಸೂಸಿದೆ. ಅವನನ್ನು ನೋಡುವುದು, ಅವನೊಂದಿಗೆ ನುಡಿಯುವುದು, ಅವನನ್ನು ನೆನೆಯುವುದು, ಪುಣ್ಯಕರವೆಂದು ಎಲ್ಲರ ನಂಬುಗೆ, ಆತನು ವ್ಯಕ್ತಿಯೆಂದು, ಶಕ್ತಿಯೆಂದು, ಶಿವನೆಂದು ಅನೇಕರು ವಚನೋಕ್ತಿಯಿಂದ ಗೌರವಿಸಿರುವರು. ಪ್ರಭುದೇವರು ಬಸವಣ್ಣನ ತೀರ ವೈಯಕ್ತಿಕ ಬದುಕನ್ನು–

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ, ಬ್ರಹ್ಮಚಾರಿಯಾದ ಬಸವಣ್ಣ.
ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯಾ ಬಸವಣ್ಣ.
ಗೊಹೇಶ್ವರಾ ನಿಮ್ಮಲ್ಲಿ ಬಾಲಬ್ರಹ್ಮಚಾರಿ ಬಸವಣ್ಣನೊಬ್ಬನೇ.[೨೯]

ಎಂದು ವರ್ಣಿಸುತ್ತಾರೆ. ಭವಗೆಟ್ಟು ಮುಕ್ತನಾಗಬೇಕಾದರೆ ಬ್ರಹ್ಮಚರ್ಯ ಅವಶ್ಯ "ಆವ ಪದಾರ್ಥವಾದಡೇನು ತಾನಿರ್ದಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಸದಾಚಾರ" ಎಂಬ ಭಾವವೇ ಬ್ರಹ್ಮಚರ್ಯ. ಈ ಅರ್ಥದಲ್ಲಿ ಬಸವಣ್ಣನವರ ಬ್ರಹ್ಮಚರ್ಯವನ್ನು ಸಮರ್ಥಿಸುತ್ತದೆ, ಈ ವಚನ.

ಎತ್ತೆತ್ತ ನೋಡಿದರೆ ಅತ್ತತ್ತ ಬಸವನೆಂಬ ಬಳ್ಳಿ.
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು,
ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ, [೩೦]

ಎಂಬ ಮಾಚಿದೇವನ ವಚನ, ಲಿಂಗವೆಂಬ ಗೊಂಚಲು ಭಕ್ತಿಯೆಂಬ ರಸದಿಂದ ತುಂಬಿಕೊಂಡು ಮರ್ತ್ಯದ ಮೇಲೆ ಕುಡಿಯಾಗಿ, ಮಿಡಿಯಾಗಿ, ಹೂವಾಗಿ, ಹಣ್ಣಾಗಿ ಹಬ್ಬಿದ ಬಸವನೆಂಬ ಬಳ್ಳಿಯ ದರ್ಶನ ಮಾಡಿಸುತ್ತದೆ.

ಈ ರೀತಿ ವ್ಯಕ್ತಿತ್ವ ವಿಕಾಸವಾಗುವಲ್ಲಿ, ಸಾಧಿಸಿದ ಸಾರ್ಥಕತೆಯನ್ನು ಮಹಾದೇವಿಯಕ್ಕ "ದೇವಲೋಕದವರಿಗೂ ಬಸವಣ್ಣನೇ ದೇವರು, ಮರ್ತ್ಯಲೋಕದವರಿಗೂ ಬಸವಣ್ಣೇ ದೇವರು"[೩೧]

---

೨೯. ಬಸವಸ್ತೋತ್ರದ ವಚನಗಳು–ಚೆನ್ನಂಜೇದೇವ(ಸಂ. ಎಂ.ಎಂ. ಕಲಬುರ್ಗಿ), ೫

೩೦. ಬಸವಸ್ತೋತ್ರದ ವಚನಗಳು–ಚೆನ್ನಂಜೇದೇವ(ಸಂ. ಎಂ.ಎಂ. ಕಲಬುರ್ಗಿ), ೭೨

೩೧. ಬಸವಸ್ತೋತ್ರದ ವಚನಗಳು–ಚೆನ್ನಂಜೇದೇವ(ಸಂ. ಎಂ.ಎಂ. ಕಲಬುರ್ಗಿ), ೧೧೬

ಎಂದು ದೇವರದೇವ ಬಸವನನ್ನು ಕೀರ್ತಿಸಿದರೆ, ಪ್ರಭುದೇವ "ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಏಕೆ ಹುಟ್ಟಿಸಿದೆ ಗೂಹೇಶ್ವರಾ?"[೩೨] ಎಂದು ಬಸವಣ್ಣನ ಸರ್ವಸಾರ್ಥಕ ಬದುಕನ್ನು ಸೂಚಿಸಿದ್ದಾರೆ.

ಹೀಗೆ ಈ ವಚನಗಳ ತುಂಬ, ಬಸವಣ್ಣನ ಬಗ್ಗೆ ಪ್ರತಿಯೊಬ್ಬ ಶರಣನು ವ್ಯಕ್ತಪಡಿಸಿದ ನೂರಾರು ಭಾವಗಳು ನಿಕ್ಷಿಪ್ತವಾಗಿವೆ. ಸಮಕಾಲೀನ ಮತ್ತು ಉತ್ತರಕಾಲೀನ ಶರಣರನ್ನು ಏಕರೀತಿಯಾಗಿ ಸೆರೆಹಿಡಿದ ಬಸವಣ್ಣನ ವ್ಯಕ್ತಿತ್ವದ ಘನತೆ, ಇಲ್ಲಿ ಓದುಗರ ಕಣ್ಣು ಮುಂದೆ ಸುಳಿಯುತ್ತದೆ.

ಸಂಪಾದನೆ

ಈ ಉಭಯ ಕೃತಿಗಳಲ್ಲಿ ಚೆನ್ನಂಜೇದೇವನ "ಬಸವಸ್ತೋತ್ರದ ವಚನಗಳು", ಶ್ರೀ ಎಸ್. ಎಂ. ಹುಣಸ್ಯಾಳ ಮತ್ತು ಶ್ರೀ ಸಿ. ಎಚ್. ಅನ್ನದಾನಯ್ಯ ಅವರಿಂದ ೧೯೬೮ರಲ್ಲಿ ಪ್ರಕಟವಾಗಿದ್ದರೆ, ಬೋಳಬಸವರಾಜದೇವರ "ಬಸವಸ್ತೋತ್ರದ ವಚನಗಳು" ಪ್ರಥಮಸಲ ಪ್ರಕಟವಾಗುತ್ತಲಿದೆ. ಈ ಎರಡಕ್ಕೂ ಕ್ರಮವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದ ತಾಳೆಗರಿ ಪ್ರತಿ ನಂ. ೩೧೪(ಚೆ) ಮತ್ತು ನಂ. ೨೩೨(ಬ)ಗಳನ್ನು ಮೂಲಮಾತೃಕೆಗಳೆಂದು ಬಳಸಿಕೊಂಡಿದ್ದೇವೆ. ಪಾಠಾಂತರಕ್ಕೋಸುಗ ಚೆನ್ನಂಜೇದೇವರ ಕೃತಿಗೆ ಶ್ರೀ ಹುಣಸ್ಯಾಳ (ಹು) ಅವರ ಪ್ರಕಟನೆಯನ್ನೂ ಬೋಳಬಸವರಾಜದೇವ ಕೃತಿಗೆ ಕನ್ನಡ ಅಧ್ಯಯನಪೀಠದ ವಚನ ಭಾಂಡಾರದ ಹ. ಪ್ರ. ೧೧೫(ಬ೨)ನ್ನೂ ಬಳಸಿಕೊಳ್ಳಲಾಗಿದೆ. ಅವಶ್ಯವೆನಿಸಿದಲ್ಲಿ ಎರಡಕ್ಕೂ ಕನ್ನಡ ಅಧ್ಯಯನಪೀಠ ಪ್ರಕಟಿಸಿರುವ "ಚೆನ್ನಬಸವಣ್ಣನವರವಚನಗಳು" (ಚೆಬ) "ಶ್ರೀ ಸಿದ್ಧರಾಮೇಶ್ವರ ವಚನಗಳು" (ಸಿ), ಶಿವಶರಣೆಯರ ವಚನಗಳು" (ಶಿವ), ಡಾ. ಎಲ್. ಬಸವರಾಜು ಸಂಪಾದಿಸಿದ "ಅಲ್ಲಮನ ವಚನ ಚಂದ್ರಿಕೆ" (ಅಚ) ಈ ಗ್ರಂಥಗಳನ್ನೂ ಉಪಯೋಗಿಸಿಕೊಳ್ಳಲಾಗಿದೆ. ಹಸ್ತ ಪ್ರತಿಗಳಲ್ಲಿ ವಚನಗಳ ತಲೆಯ ಮೇಲೆ ಇಲ್ಲದ ಆ ಆ ಶರಣರ ಹೆಸರುಗಳನ್ನು ಇಲ್ಲಿ ಶೀರ್ಷಿಕೆಯಾಗಿ ಕೊಡಲಾಗಿದೆ. ಹೀಗೆ ಕೊಡುವಲ್ಲಿ ತುಂಬ ಎಚ್ಚರವಹಿಸಿದರೂ ಚೆನ್ನಂಜೇದೇವ ಸಂಪುಟದ ೧೩೫ನೆಯ ವಚನದ ಮೇಲೆ 'ನೀಲಲೋಚನೆ' ಎಂಬ ಶೀರ್ಷಿಕೆ ಬಿಟ್ಟುಹೋಗಿದೆ, ೧೩೦ನೆಯ ವಚನದ ಮೇಲೆ 'ಹಡಪದ ಅಪ್ಪಣ್ಣ'ಕ್ಕೆ ಬದಲು 'ನೀಲಲೋಚನೆ' ಎಂದು ಅಚ್ಚಾಗಿದೆ.* ಈ ದೋಷವನ್ನು ವಿದ್ವಾಂಸರು ಮನ್ನಿಸಬೇಕು. ಎಡೆವಾಯ್ದು ಬಂದಿರಬಹುದಾದ ಇತರ ದೋಷಗಳನ್ನೂ ಮನ್ನಿಸಬೇಕು.

ಕೃತಜ್ಞತೆ

"ಶ್ರೀ ಮುರಗೋಡ ಸಂಸ್ಥಾನ ಮಠಾಧೀಶರಾದ ಶ್ರೀ ಮ. ನಿ. ಪ್ರ. ಸ್ವ ಮಹಾಂತಶಿವಯೋಗೀಶ್ವರ ಶತಮಾನೋತ್ಸವಸ್ಮಾರಕ ಶ್ರೀ ಬಸವೇಶ್ವರಪೀಠ" ಕನ್ನಡ ಅಧ್ಯಯನಪೀಠದಲ್ಲಿ ಅಧಿಷ್ಠಾನಗೊಂಡುದು ಒಂದು ಪುಣ್ಯ ವಿಶೇಷ. ಮುರಗೋಡ ಶ್ರೀಗಳ ಮಹಿಮೆ, ಬಸವಭಕ್ತರ ತ್ಯಾಗಗಳಲ್ಲಿ ಮೂಡಿಬಂದ ಈ ಪೀಠ, ಬಸವಬೆಳಕನ್ನು ಕರ್ನಾಟಕದಿಂದ ಭಾರತಕ್ಕೆ, ಭಾರತದಿಂದ ವಿಶ್ವಕ್ಕೆ ವಿಸ್ತರಿಸುವ

---

೩೨. ಬಸವಸ್ತೋತ್ರದ ವಚನಗಳು-ಚೆನ್ನಂಜೇದೇವ(ಸಂ. ಎಂ.ಎಂ. ಕಲಬುರ್ಗಿ), ೪

* ಈ ಆವೃತ್ತಿಯಲ್ಲಿ ಅದನ್ನು ಸರಿಪಡಿಸಲಾಗಿದೆ(ಸಂ)

ಧ್ಯೇಯಾದರ್ಶಗಳನ್ನು ಹೊಂದಿದೆ. ಈ ಧ್ಯೇಯ ಸಾಧನೆಗೆ ನಡೆಯಬೇಕಾದ ಸಂಶೋಧನೆ, ಸಂಪಾದನೆ, ಸಮಾಲೋಚನೆ, ಗ್ರಂಥರಚನೆ ಮತ್ತು ಭಾಷಾಂತರ ಕಾರ್ಯಗಳಿಗೆ ಮೊದಲು, ಬಸವಣ್ಣನವರನ್ನು ಕುರಿತ ಎಲ್ಲ ಕೃತಿಗಳು ಒಂದೂ ಬಿಡದಂತೆ ಪ್ರಕಟವಾಗಬೇಕು. ಈ ಧೋರಣೆಯ ಹಿನ್ನೆಲೆಯಲ್ಲಿ ಬೆಳಕುಕಾಣುತ್ತಲಿದೆ 'ಬಸವಸ್ತೋತ್ರದ ವಚನಗಳು.'

ಶ್ರೀ ಬಸವೇಶ್ವರಪೀಠದ ಪುಣ್ಯಚೈತನ್ಯವೆನಿಸಿದ ಮುರುಗೋಡದ ಲಿಂ. ಶ್ರೀ. ನಿ. ಪ್ರ. ಸ್ವ ಮಹಾಂತ ಶಿವಯೋಗಿಗಳಲ್ಲಿ ಭಕ್ತಿಪೂರ್ವಕ ನಮಸ್ಕಾರಗಳು. ಈ ಪೀಠವನ್ನು ಅನುಷ್ಠಾನಕ್ಕೆ ತರುವ ಕನಸುಕಂಡು, ನನಸಾಗುವಂತೆ ಆಶೀರ್ವದಿಸಿದ ಧಾರವಾಡದ ಶ್ರೀ ಮುರುಘಾಮಠದ ಶ್ರೀ ನಿ. ಪ್ರ. ಸ್ವ ಮಹಾಂತಸ್ವಾಮಿಗಳಲ್ಲಿ ತ್ರಿಕರಣಪೂರ್ವಕ ವಂದನೆಗಳು. ಅಂದಿನ ಕುಲಪತಿ ಡಾ. ಎ. ಎಸ್. ಅಡಕೆ, ಇಂದಿನ ಕುಲಪತಿ ಡಾ. ಆರ್. ಸಿ. ಹಿರೇಮಠ, ಶ್ರೀ ಎಸ್. ಎಸ್. ಒಡೆಯರ, ಡಾ. ಎಂ. ಎಸ್. ಸುಂಕಾಪುರ, ಶ್ರೀ ಎಸ್. ಬಿ. ಶಾಪೇಟಿ, ಮತ್ತು ಶ್ರೀ ಸಿದ್ಧರಾಮಪ್ಪ ಬೆಂಬಳಗಿ ಇವರು ಹಗಲಿರುಳೂ ದುಡಿದುದರ ಫಲ ಈ ಪೀಠ. ಇವರಿಗೆ ನಮ್ಮ ವಂದನೆಗಳು ಸಲ್ಲಬೇಕು.

ಈ ಕೃತಿಯನ್ನು ಬೆಳಕಿಗೆ ತರಲು ಪ್ರೋತ್ಸಾಹಿಸಿದವರು, ಕನ್ನಡ ಅಧ್ಯಯನಪೀಠದ ಮುಖ್ಯಸ್ಥರೂ ನನ್ನ ವಿದ್ಯಾಗುರುಗಳೂ ಆದ ಡಾ. ಎಂ. ಎಸ್. ಸುಂಕಾಪೂರ ಅವರು. ಪ್ರಕಟನೆಯ ಅನುಕೂಲತೆಯನ್ನು ಕಲ್ಪಿಸಿಕೊಟ್ಟವರು ವ್ಯಾಸಂಗವಿಸ್ತರಣ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಮತ್ತು ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕರು. ಶುದ್ಧ ಪ್ರತಿಯನ್ನು ಸಿದ್ಧಗೊಳಿಸಿಕೊಡುವಲ್ಲಿ, ಅಚ್ಚಿನ ಕಾರ್ಯದ ನಿರ್ವಹಣೆಯಲ್ಲಿ ನೆರವಾದವರು, ಬಸವಪೀಠದ ಸಿಬ್ಬಂದಿವರ್ಗದವರು. ಮುದ್ರಣ ಕಾರ್ಯವನ್ನು ಆಸ್ಥೆಯಿಂದ ಪೂರೈಸಿದವರು ವಿಶ್ವವಿದ್ಯಾಲಯದ ಮುದ್ರಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಜಿ. ಬಿ. ಮನ್ವಾಚಾರ ಮತ್ತು ಅವರ ಸಿಬ್ಬಂದಿಗಳು. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

–ಎಂ. ಎಂ. ಕಲಬುರ್ಗಿ

ಶ್ರೀ ಬಸವೇಶ್ವರಪೀಠ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೮–೭–೧೯೭೬

❖❖

*

ಪರಿವಿಡಿ

ಚೆನ್ನಂಜೇದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು :

ಬೋಳಬಸವರಾಜದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು :

ವಚನಗಳ ಅಕಾರಾದಿ

ಚೆನ್ನಂಜೇದೇವರು ಸಂಪಾದಿಸಿದ
ಬಸವಸ್ತೋತ್ರದ ವಚನಗಳು

*

ಪ್ರಭುದೇವ

೧

ಧರೆಯಾಕಾಶ ತಾರಾಮಂಡಲ ಸಪ್ತಸಮುದ್ರಂಗಳಿಲ್ಲದಂದು
ಒಂದು ಮಹಾವೃಕ್ಷವಿದ್ದಿತಯ್ಯಾ.
ಆ ವೃಕ್ಷವ ಕಂಡು, ನಾನು ಓಂ ನಮಃ ಶಿವಾಯಯೆನುತಿರ್ದೆನು.
ಆ ವೃಕ್ಷದಿಂದ ಷಡುಸಾದಾಖ್ಯಂಗಳು ಪುಟ್ಟಿದವು.
ಆ ಷಡುಸಾದಾಖ್ಯಂಗಳ ನೆಳಲಲ್ಲಿ ಕುಳ್ಳಿರ್ದು, ನಾನು
ಬಸವಾ ಬಸವಾ ಬಸವಾ ಎನುತಿರ್ದೆನು ಕಾಣಾ ಗೊಹೇಶ್ವರಾ.

೨

ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು,
ಲಿಂಗಪ್ರಾಣಿಯಾದನಯ್ಯ ಬಸವಣ್ಣನು,
ಲಾಂಛನದ ಪೂರ್ವಾಶ್ರಯವ ಕಳೆಯಲೆಂದು,
ಜಂಗಮಪ್ರಾಣಿಯಾದನಯ್ಯ ಬಸವಣ್ಣನು.
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು,
ಮಹಾಪ್ರಸಾದಿಯಾದನಯ್ಯ ಬಸವಣ್ಣನು.
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು
ಬಸವಣ್ಣ ಮರ್ತ್ಯಕ್ಕೆ ಬಂದನು ಕಾಣಾ ಗೊಹೇಶ್ವರಾ.

೩

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ಪ್ರಾಣದಲ್ಲಿ ಲಿಂಗ [ವ]* ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ಜಂಗಮದಲ್ಲಿ ಪ್ರಸಾದ[ವ] ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ಪ್ರಸಾದದಲ್ಲಿ ನಿತ್ಯ[ವ] ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನಯ್ಯ, ಬಸವಣ್ಣನು.
ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತನಿವಾಸಿಯಾಗಿದಾನೆ–
ಗೊಹೇಶ್ವರಲಿಂದಲ್ಲಿ ಸಂಗನಬಸವಣ್ಣಂಗೆ ಶರಣೆಂದು
ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯ.

೪

ಕೌಪು ಕಾಷಾಂಬರವ ಕಟ್ಟಿ ಮಂಡೆ ಬೋಳಾದರೇನಯ್ಯ ಎನ್ನಲ್ಲಿ ನಿಜವಿಲ್ಲದನ್ನಕ್ಕ.
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೋರಿದರೇನಯ್ಯ ಮನದಲ್ಲಿ ವ್ರತಿಯಾಗದನ್ನಕ್ಕ.
ಹಸಿವು ತೃಷೆ ವ್ಯಸನಾದಿಗಳ ಬಿಟ್ಟರೇನಯ್ಯ ಅರ್ಥದಿಚ್ಛೆ ಮನದಲ್ಲಿ ಹಿಂಗದನ್ನಕ್ಕ.
ಆನು ಜಂಗಮವೆ? ಆನು ಹಿರಿಯನಾದೆನಲ್ಲದೆ, ಆನು ಜಂಗಮವೆ?
ಒಡಲಿಲ್ಲದಾತ ಬಸವಣ್ಣ; ಪ್ರಾಣವಿಲ್ಲದಾತ ಬಸವಣ್ಣ.
ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಏಕೆ ಹುಟ್ಟಿಸಿದೆ ಗೊಹೇಶ್ವರಾ.

೫

ಸತಿಯ ಕಂಡು, ವ್ರತಿಯಾದ ಬಸವಣ್ಣ.
ವ್ರತಿಯಾಗಿ, ಬ್ರಹ್ಮಚಾರಿಯಾದ ಬಸವಣ್ಣ.
ಬ್ರಹ್ಮಚಾರಿಯಾಗಿ, ಭವಗೆಟ್ಟನಯ್ಯ ಬಸವಣ್ಣ.
ಗೊಹೇಶ್ವರಾ, ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದ ಬಸವಣ್ಣನೊಬ್ಬನೇ.

---

* ಹಸ್ತಪ್ರತಿಗಳಲ್ಲಿ ಇಲ್ಲ.

೬

ಕುಂಡಲಿಗನ ಕೀಟಕನಂತೆ
ಮೈಮಣ್ಣಾಗದಂತಿರ್ದೆಯಲ್ಲಾ ಬಸವಣ್ಣ!
ಜಲದೊಳಗಣ ತಾವರೆಯಂತೆ
[೧]ಹೊದ್ದಿ[೧] ಹೊದ್ದದಂತಿದ್ದೆಯಲ್ಲಾ ಬಸವಣ್ಣ!
ಜಲದಿಂದಲಾದ ಮೌಕ್ತಿಕದಂತೆ
ಜಲವು ತಾನಾಗದಂತಿರ್ದೆಯಲ್ಲಾ ಬಸವಣ್ಣ!
ಗೊಹೇಶ್ವರಲಿಂಗದಾಣತಿವಿಡಿದು
ತನುಗುಣ ಮತ್ತರಾಗಿದ್ದ ಐಶ್ವರ್ಯ ಅಂಧಕರ
ಮತವನೇನಮಾಡಿಬಂದೆಯಯ್ಯ ಸಂಗನಬಸವಣ್ಣಾ?

೭

ಅಂಗಸಂಸಾರ ಲಿಂಗದೊಳರತು ಕಾಯವೆಂಬ ಸಂದುಸಂಶಯ(ವಿ)ಲ್ಲದೆ
ನಿಸ್ಸಂದೇಹಿಯಾಗಿಪ್ಪನು ನೋಡಾ, ಬಸವಣ್ಣನು.
ಪ್ರಾಣಭಾವವಳಿದು ಶಂಕೆ ತಲೆದೋರಿದೆ.
ನಿಶ್ಶಂಕನಾಗಿ ನಿಜೈಕ್ಯನಾಗಿಪ್ಪನು ನೋಡಾ, ಬಸವಣ್ಣನು.
ಆ ಬಸವಣ್ಣನ ಅಂತರಂಗದೊಳಗೆ ನಿಶ್ಚಿಂತನಿವಾಸಿಯಾಗಿರ್ದೆನು.
ಆ ಬಸವಣ್ಣನ ಬಹಿರಂಗದಲ್ಲಿ ನಿರಾಲಂಬ ಜ್ಞಾನಿಯಾಗಿರ್ದೆನು.
ಆ ಬಸವಣ್ಣನೊಳಗೆ ನಾನಳಿದುಳಿದೆನು.
ಆ ಬಸವಣ್ಣ ಎನ್ನಂತರಂಗದೊಳಗೆ ನಿಜನಿವಾಸಿಯಾಗಿ[ರ್ದ]*ನು.
ಇದು ಕಾರಣ,
ಒಂದನೊಂದು ಬಿಚ್ಚಿ ಬೇರೆ ಮಾಡಬಾರದು.
ಗೊಹೇಶ್ವರಲಿಂಗದಲ್ಲಿ ಬಸವ–ಪ್ರಭುವೆಂಬ
ಎರಡು ಭಾವಭ್ರಾಂತಿಯಳಿದುಳಿದು
ನಿಭ್ರಾಂತಿ ಎಡೆಗೊಂಡಿತ್ತು ಕಾಣಾ, ಚೆನ್ನಬಸವಣ್ಣಾ.

೧–೧ ಹಾರಿ(ಚೆ) * ವ(ಚೆ)

೮

ಆದಿ ಜಂಗಮ, ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸವಣ್ಣನಲ್ಲದೆ?
ನಿತ್ಯನಿರಾಕಾರಘನವು ಶಕ್ತಿಯಿಲ್ಲದಿರ್ದಡೆ ವಾಳಿ ಬಯಲಾದು[ದೆಂ]*ದು
ನೀನು ಘನಚೈತನ್ಯವೆಂಬ ಕಾಯವ ಧರಿಸಿದಡೆ
ಆ ಬಯಲು ಪರಬ್ರಹ್ಮವೆಂಬ ೨ನಾ೨ಮವನ್ನೈದಿತ್ತು ನೋಡಾ, ಬಸವಣ್ಣಾ, ನಿನ್ನಿಂದ,
ಆ ಮಹಾಘನವು, ತನ್ನ ವಿನೋದದಿಂದ ಸಾಕಾರವನ್ನೈದಿದಡೆ,
ನೀನು ಧರ್ಮವೆಂಬ ಕಾಯವ ಧರಿಸಿ, ಆ ಮೂರ್ತಿಗಾಧಾರವಾದೆಯಾಗಿ
ಜಗದ ಕರ್ತೃ ಶಿವನೆಂಬ ನಾಮವಾಯಿತ್ತು ನೋಡಾ ಬಸವಣ್ಣಾ.
ನಿನ್ನ ಸನ್ನಿಧಿಯಿಂದ ಪ್ರತಿನಿಧಿಯಾಯಿತ್ತು ನೋಡಾ ಬಸವಣ್ಣಾ ನಿನ್ನಿಂದ.
ಲಿಂಗವ ಹಿಡಿದು ನೀನು ಪೂಜಿಸಲಾಗಿ
ಲಿಂಗವು ಹೆಸರುವಡೆಯಿತ್ತು ನೋಡಾ ಬಸವಣ್ಣಾ ನಿನ್ನಿಂದ.
ಪ್ರಸಾದವ ನೀನು ಕೊಂಡು ಪಥವ ತೋರಿದೆಯಾಗಿ
ಪ್ರಸಾದವು ಹೆಸರಾಯಿತು ನೋಡಾ ಬಸವಣ್ಣಾ ನಿನ್ನಿಂದ.
ಇದು ಕಾರಣ, ನೀನೇ ಅನಾದಿಭಕ್ತನು, ನಾನೇ ಅನಾದಿಯಿಂದತ್ತತ್ತ.
ನೀ ಮಾಡಲಾನಾದೆನೆಂಬುದ ನಮ್ಮ ಗೊಹೇಶ್ವರಲಿಂಗವು ಬಲ್ಲನು ಕಾಣಾ ಸಂಗನಬಸವಣ್ಣಾ!

೯

ಕೆಳಗೇಳುಲೋಕಂಗಳಿಲ್ಲದಂದು, ಮೇಲೇಳುಲೋಕಂಗಳಿಲ್ಲದಂದು,
ಸಹಸ್ರಬ್ರಹ್ಮಾಂಡಂಗಳಿಲ್ಲದಲ್ಲಿಂದತ್ತತ್ತ, ಬಸವಣ್ಣ,
ನೀನು ಲಿಂಗಭಕ್ತ; ಜಂಗಮಪ್ರಾಣಿ,
ಶಶಿಧರ ಶರಣಂಗೆ ವೃಷಧರ ಸ್ವಾಯತವಾಗಿ
ನಮ್ಮ ಗೊಹೇಶ್ವರಲಿಂಗಕ್ಕೆ ಸಂಗನಬಸವಣ್ಣನೇ ಭಕ್ತನೆಂದರಿದು
ನಾನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೧೦

ಶತಕೋಟಿಲೋಕಂಗಳೆಲ್ಲಾ
ಬಸವಣ್ಣನ ಕೋಡಿನಲ್ಲಿರ್ದುವು ನೋಡಾ!
ಅತೀತವಪ್ಪ ಪರಶಿವನು
ಬಸವಣ್ಣನ ಹಿಳಿಲ ಕೆಳಗೆ ಸೂಕ್ಷ್ಮರೂಪಾಗಿರ್ದನು ನೋಡಾ!
೩ಸಕಲ೩ ಶ್ರುತಿ ಸ್ಮೃತಿಗಳೆಲ್ಲಾ

---

* ವೆಂ(ಚ)   ೨-೨ ನೇ(ಹು)   ೩-೩ ಕಸಲ(ಚೆ)

ಬಸವಣ್ಣನ ಹೊಗಳಲರಿಯದೆ ಕೆಟ್ಟವು ನೋಡಾ!
ಕರ್ತನಾದನಲ್ಲದೆ ಭೃತ್ಯನಲ್ಲ.
ಬಿನ್ನಾಣವ ಹೋಲಲರಿಯೆ
ಒಂದೆತ್ತಿಲ್ಲದಿರ್ದಡೆ ಕತ್ತಲೆಯಾಗದೇ ಈ ಜಗವೆಲ್ಲವು!
ಹರಿವ ನದಿಗಳೆಲ್ಲವು ಅಮೃತವಾದವು ಕಾಣಾ, ಬಸವಣ್ಣಾ, ನಿನ್ನಿಂದ.
ಹರಿಹನ್ನಿ ಕೋಟಿ ಯುಗಜುಗಂಗಳು
ನಿನ್ನ ಉಸಿರಿನಲ್ಲಿ ಒತ್ತಿದಡೆ ಬ್ರಹ್ಮಾಂಡಕ್ಕೆ ಹೋದವು;
ಬಿಟ್ಟಡೆ ಬಿದ್ದವು, ಕಾಯಿದಡೆ ಬದುಕಿದವು.
ನೀನು ಹೊರೆವ ಯುಗಜುಗಂಗಳು ಒಂದು ತೃಣಮಾತ್ರವಾದ ಕಾರಣ
ನಿನ್ನ ಹಸುಮಕ್ಕಳೆನುತಿರ್ದೆನಯ್ಯ.
ನಿಮ್ಮ ಗೋಮಯದ ಷಡುಸಮ್ಮಾರ್ಜನೆಯ ಮೇಲೆ ಕುಳ್ಳಿರ್ದು
ಗೊಹೇಶ್ವರನೆಂಬ ಲಿಂಗವು ಶುದ್ಧನಾದನು ಕಾಣಾ,
ಸಂಗನಬಸವಣ್ಣಾ ನಿನ್ನಿಂದ.

೧೧

ಅಂದೊಮ್ಮೆ ಧರೆಯ ಮೇಲೆ ಉದಕವಿಲ್ಲದಂದು,
ಕೆಳಯಿಂಕೆ ಪಾದವ ನೀಡಿದೆಯಲ್ಲಾ ಬಸವಣ್ಣಾ!
ಧರೆಯ ತಾಗಿದ ಪಾದವ ಧಿಗಿಲನೆತ್ತಲು
ಭುಗಿಲನೆದ್ದವು ಉದಕ ನಿಮ್ಮ ಉರಸ್ಥಲಕ್ಕೆಬಾರದೆ ಬಸವಣ್ಣಾ!
ಕನಲಿದಂಕೆಗೆ ನಿಂದು ನೋಡಲು,
ಸಪ್ತಸಾಗರಂಗಳೆಲ್ಲವು ನಿಮ್ಮ ಕಿರುಪಾದದಲ್ಲಿ ಅಡಗವೆ ಬಸವಣ್ಣಾ?
ಅದನೆಂತು ಕೊಡಬಹುದು, ಅದನೆಂತು ಕೊಡಬಹುದು.
ನಮ್ಮ ಗೊಹೇಶ್ವರಲಿಂಗಕ್ಕೆ ನಿಮ್ಮ ಪಾದೋದಕವೇ
ಮಜ್ಜನ ಕಾಣಾ, ಸಂಗನಬಸವಣ್ಣಾ.

೧೨

ಅನಾದಿಪುರಾತ ಬಸವಣ್ಣ,
ಕಾಲ[೪]ಮಾಯೆ[೪]ಗಳೆರಡು ನಿಮ್ಮ ಮುಂದಿರ್ದು [ನಿಮ್ಮ]* ಕಾಣೆನೆನುತ್ತಿಹವು.

೪-೪ ಮೊಯಿ(ಚೆ) * ಹಸ್ತಪ್ರತಿಗಳಲ್ಲಿ ಇಲ್ಲ.

ಆದಿಪುರುಷ ಬಸವಣ್ಣ,
ಅಸುರ ಸುರರು ನಿಮ್ಮ ಮುಂದಿರ್ದು ನಿಮ್ಮ ಕಾಣೆನೆನುತ್ತಿಹರು.
ನಾದಪುರುಷ ಬಸವಣ್ಣ,
ನಾದಮಂತ್ರಂಗಳು ಪಂಚಮಹಾವಾದ್ಯಂಗಳು ನಿಮ್ಮ ಮುಂದಿರ್ದು
ನಿಮ್ಮ ಕಾಣೆನೆನುತ್ತಿಹವು.
ಅಗಮ್ಯಪುರುಷ, ವೇದಪುರುಷ ಬಸವಣ್ಣ,
ವೇದಶಾಸ್ತ್ರಾಗಮಪುರಾಣಂಗಳು ನಿಮ್ಮ ಮುಂದಿರ್ದು
ನಿಮ್ಮ ಕಾಣೆನೆನುತ್ತಿಹವು.
ಅಗಮ್ಯಪುರುಷ ಬಸವಣ್ಣ,
ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು, ನಂದಿವಾಹನರು,
ಗಂಗೆವಾಳುಕರೆಲ್ಲಾ
ನಿಮ್ಮ ಮುಂದಿರ್ದು ನಿಮ್ಮ ಕಾಣೆನೆನುತ್ತಿಹರು!
ಅಗೋಚರಪುರುಷ ಬಸವಣ್ಣ,
ಗೋಚರಿಸಿದ ಮನು, ಮುನಿ, ದೇವ, ದಾನವ ಮಾನವರೆಲ್ಲರೂ
ನಿಮ್ಮ ಮುಂದಿರ್ದು ನಿಮ್ಮ ಕಾಣೆನೆನುತ್ತಿಹರು!
ಅಪ್ರಮಾಣಪುರುಷ ಬಸವಣ್ಣ,
ಈ ಪ್ರಮಾಣರೆಲ್ಲರೂ ನಿಮ್ಮ ಮುಂದಿರ್ದು
ನಿಮ್ಮ ಕಾಣೆನೆನುತ್ತಿಹರು.
ಸರ್ವಜ್ಞಾನಪುರುಷ ಬಸವಣ್ಣ,
ಸರ್ವರೂ ನಿಮ್ಮ ಬಳಸಿದ್ದು ನಿಮ್ಮ ಕಾಣೆನೆನುತ್ತಿಹರು.
ಇಂತೀ ಸರ್ವಪ್ರಕಾರದವರೆಲ್ಲರು ನಿಮ್ಮ ಮುಂದಿರ್ದು,
ಸಾಧಿಸಿ, ಭೇದಿಸಿ ಪೂಜಿಸಿ, ತರ್ಕಿಸಿ, ಹೊ*[ಗಳಿ ಕಾಣೆವೆ]*ಂದು
ನಿಮ್ಮಿಂದವೆ ಉತ್ಪತ್ಯ ಸ್ಥಿತಿ ಲಯಂಗಳಾಗುತ್ತಿಹರು.
ಅದು ಕಾರಣ, ನಮ್ಮ ಗೊಹೇಶ್ವರಲಿಂಗದಲ್ಲಿ
ಭಕ್ತಿವಡೆದ ಅನಂತಭಕ್ತರೆಲ್ಲಾ ಬಸವಣ್ಣಾ ಬಸವಣ್ಣಾ ಬಸವಣ್ಣಾ
ಎನುತ ಬದುಕಿದರಯ್ಯಾ.

– ಹ ಕಾಣೆನೆಂದು(ಚ)

೧೩

ಆದಿ, ಅನಾದಿ ಎಂಬೆರಡರ ಮೂಲವನೆತ್ತಿ
ತೋರಿದನಯ್ಯ ಬಸವಣ್ಣನು.
ಆದಿ ಲಿಂಗ, ಅನಾದಿ ಶರಣನೆಂಬ ಭೇದವ
ವಿವರಿಸಿ ತೋರಿದನಯ್ಯ ಬಸವಣ್ಣನು.
ಕಾಯದ ಜೀವದ ಸಂಬಂಧವ ಅಸಂಬಂಧವ
ಮಾಡಿ ತೋರಿದನಯ್ಯ ಬಸವಣ್ಣನು.
ಎನ್ನ ಆದಿಯ ಅನಾದಿಯನು ಬಸವಣ್ಣನಿಂದರಿದು,
ಗೊಹೇಶ್ವರಲಿಂಗದಲ್ಲಿ ಸುಖಿಯಾದೆನು
ಕಾಣಾ, ಚೆನ್ನಬಸವಣ್ಣಾ!

೧೪

ಆದಿಯಲ್ಲಿ ಬಸವಣ್ಣನುತ್ಪತ್ಯವಾದ ಕಾರಣ
ನಾಗಲೋಕದ ನಾಗಗಣಂಗಳಿಗೂ ಬಸವಣ್ಣನ ಪ್ರಸಾದ,
ಮರ್ತ್ಯಲೋಕದ ಮಹಾಗಣಂಗಳಿಗೂ ಬಸವಣ್ಣನ ಪ್ರಸಾದ,
ದೇವಲೋಕದ ದೇವಗಣಂಗಳಿಗೂ ಬಸವಣ್ಣನ ಪ್ರಸಾದ,
ಗೊಹೇಶ್ವರ, ನಿಮ್ಮಾಣೆ,
ಎನಗೂ ನಿನಗೂ ಬಸವಣ್ಣನ ಪ್ರಸಾದ.

೧೫

ಆಯಿತ್ತು ಬಸವಾ, ನಿನ್ನಿಂದ ಗುರು ಸ್ವಾಯತವೆನಗೆ,
ಆಯಿತ್ತು ಬಸವಾ, ನಿನ್ನಿಂದ ಲಿಂಗಸ್ವಾಯತವೆನಗೆ,
ಆಯಿತ್ತು ಬಸವಾ, ನಿನ್ನಿಂದ ಜಂಗಮ ಸ್ವಾಯತವೆನಗೆ,
ಆಯಿತ್ತು, ಬಸವಾ, ನಿನ್ನಿಂದ ಪ್ರಸಾದ ಸ್ವಾಯತವೆನಗೆ.
ಇಂತೀ ಚತುರ್ವಿಧವನಾಗುಮಾಡಿದೆಯಾಗಿ,
ಗೊಹೇಶ್ವರಲಿಂಗಕ್ಕೆ ವಿಳಾಸವಾದೆಯಲ್ಲೈ ಸಂಗನಬಸವಣ್ಣಾ!

೧೬

ತನು ಶುದ್ಧವಾಯಿತ್ತು, ಬಸವಾ ಇಂದೆನ್ನ,
ಮನ ಶುದ್ಧವಾಯಿತ್ತು, ಬಸವಾ ಇಂದೆನ್ನ,
ಭಕ್ತಿ ಯುಕ್ತಿ ಮುಕ್ತಿ ಶುದ್ಧವಾಯಿತ್ತು, ಬಸವಾ ಇಂದೆನ್ನ,
ಇಂತೀ ಸರ್ವಶುದ್ಧವಾಯಿತ್ತು, ಬಸವಾ ಇಂದೆನ್ನ,
ಗೊಹೇಶ್ವರಲಿಂಗಕ್ಕೆ ಆದಿಯಾಧಾರವಾದೆಯಲ್ಲೈ, ಸಂಗನಬಸವಣ್ಣಾ,

೧೭

ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ
ಬಸವಣ್ಣನ ಕರಸ್ಥಲದೊಳಗಡಗಿತ್ತಲ್ಲಾ.
ಇನ್ನಾರಿಗಹುದೀ ಭಕ್ತಿಸ್ಥಲ;
ಇನ್ನಾರಿಗಹುದೀ ಲಿಂಗಸ್ಥಲ; ಬಸವಣ್ಣಂಗಲ್ಲದೆ,
ಗೊಹೇಶ್ವರಾ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು.

೧೮

ಬಸವಣ್ಣನ ಉಂಗುಷ್ಟದಲ್ಲಿ
ಅಷ್ಟಷಷ್ಟಿ ತೀರ್ಥಂಗಳ ಉದಕವ ಮೀರಿದ
ಮಹಾತೀರ್ಥದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ಆಧಾರಲಿಂಗನಾಭಿ ಪರಿಯಂತರವೂ
ಗುರುಸ್ಥಲದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ನಾಭಿಹೃದಯಗಳ ಪರಿಯಂತರವೂ
ಜಂಗಮಸ್ವರೂಪದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ಗಳ ಮುಖ ಭ್ರೂಮಧ್ಯ ಉನ್ಮನಿ ಉತ್ತಮಾಂಗಪರಿಯಂತರವು
ಲಿಂಗಸ್ವರೂಪದೊಟ್ಟಿಲ ಕಂಡೆನಯ್ಯಾ
ಬಸವಣ್ಣನ ವಿಶ್ವತೋಮುಖವನುಳ್ಳ ಶರೀರದೊಳಗೆ
ಈ ಪರಿಯ ಕಂಡಾತನೆ ಭಕ್ತ ಜಂಗಮವೆಂಬೆನು ಕಾಣಾ, ಗೊಹೇಶ್ವರಾ.

೧೯

ಆದಿಲಿಂಗ, ನಿಮ್ಮಿಂದ ಎನಗಾಯಿತ್ತು ಬಸವಣ್ಣಾ,
ಅನಾದಿಯ ಜ್ಞಾನಜಂಗಮ ನಿಮ್ಮ ನೆನೆದರೆ
ಎನಗೆ ಸಾಧ್ಯವಾಯಿತ್ತು ಬಸವಣ್ಣಾ.
ನಿಮ್ಮ ಕೃಪೆಯಿಂದ ಸರ್ವಾಂಗಲಿಂಗಿಯಾದೆ ಬಸವಣ್ಣಾ.
ನಿಮ್ಮ ಕಾರುಣ್ಯದೃಷ್ಟಿಯಿಂದ ಪ್ರಾಣಲಿಂಗ ಸಂಬಂಧಿಯಾದೆ ಬಸವಣ್ಣಾ.
ನಿಮ್ಮ ಸದ್ಬೋಧೆಯಿಂದ ಪರಮಜಂಗಮವಾದೆ ಬಸವಣ್ಣಾ.
ಇಂತಿವು ಮೊದಲಾದ ಸರ್ವಾಚಾರ ಸಂಪತ್ತು
ನೀನನುಗ್ರಹಿಸಿಕೊಟ್ಟೆಯೆಂಬುದ ನಿಮ್ಮ ಪ್ರಮಥರೆಲ್ಲರೂ ಬಲ್ಲರು,
ನಮ್ಮ ಗೊಹೇಶ್ವರಲಿಂಗವು ಸಾಕ್ಷಿಯಾಗಿ
ನಿಮ್ಮ ಕರುಣದ ಶಿಶು ನಾನು ಕಾಣಾ, ಸಂಗನಬಸವಣ್ಣಾ.

೨೦

ಬಸವಣ್ಣಾ, ನಿನ್ನ ಕಂಡು ಕಂಡು,
ಎನ್ನ ತನು ಬಯಲಾಯಿತ್ತು,
ಬಸವಣ್ಣಾ ನಿನ್ನ ಮುಟ್ಟಿ ಮುಟ್ಟಿ,
ಎನ್ನ ಕ್ರೀ ಬಯಲಾಯಿತ್ತು.
ಬಸವಣ್ಣಾ, ನಿನ್ನ ನೆನೆನೆನೆದು,
ಎನ್ನ ಮನ ಬಯಲಾಯಿತ್ತು,
ಬಸವಣ್ಣಾ, ನಿನ್ನ ಮಹಾನುಭಾವವ ಕೇಳಿ ಕೇಳಿ
ಎನ್ನ ಭವಂ ನಾಸ್ತಿಯಾಯಿತ್ತು.
ನಮ್ಮ ಗೊಹೇಶ್ವರಲಿಂಗದಲ್ಲಿ ನೀನಜಾತನೆಂಬುದ ನೆಲೆಮಾಡಿ
ಭವಪಾಶಂಗಳ ಹರಿದಿಪ್ಪೆಯಾಗಿ
ನಿನ್ನ ಸನ್ನಿಧಿಯಿಂದ ಆನು ಬದುಕಿದೆನು ಕಾಣಾ, ಸಂಗನಬಸವಣ್ಣಾ,

೨೧

ಬ, ಎಂಬಲ್ಲಿ ಎನ್ನ ಭವ ಹರಿಯಿತ್ತು.
ಸ, ಎಂಬಲ್ಲಿ ಸರ್ವಜ್ಞನಾದೆನು.
ವ, ಎಂಬಲ್ಲಿ ವಚಿಸುವರೆ ಚೈತನ್ಯಾತ್ಮಕನಾದೆನು.

ಇಂತೀ ಬಸವಾಕ್ಷ[ರ]ತ್ರಯವೆನ್ನ
ಸರ್ವಾಂಗದಲ್ಲಿ ತೊಳಗಿ ಬೆಳಗುವುದ ಕಂಡು,
ನಾನು ನೀನು ಬಸವಾ ಬಸವಾ ಬಸವಾ
ಎನುತಿರ್ದೆವಯ್ಯಾ ಗೊಹೇಶ್ವರ.

೨೨

ಅದ್ವೈತವೆಂಬ ಶಿಶುವೆನ್ನ ಕರಸ್ಥಲಕ್ಕೆ ಬಂದು ಸೋಂಕಲೊಡನೆ,
ಎನ್ನ ತನ್ನಂತೆ ಮಾಡಿತ್ತಾಗಿ,
ಎನ್ನ, ನಾನೆಂಬ ವಿಚಾರವು ಅರಿತು ಹೋಯಿತ್ತು ನೋಡಾ.
ಮತ್ತನ್ಯ ವಿಚಾರವನೆಂತೂ ಅರಿಯೆನು.
ಎನ್ನ ಪೂರ್ವಾಪರವ ನಿಮ್ಮಿಂದಲರಿಯಲೆಂದು
ಬಂದು ನಿಮ್ಮ ಮರೆಹೊಕ್ಕೆನಾಗಿ
ಬಸವಣ್ಣನ ಮಹಿಮೆಯ ನಾನೆತ್ತ ಬಲ್ಲೆನು.
ನಮ್ಮ ಗೊಹೇಶ್ವರಲಿಂಗವು ಸಾಕ್ಷಿಯಾಗಿ
ಸಂಗನಬಸವಣ್ಣ, ನಿಮ್ಮ ಅಂತರಂಗದೊಳಗೆ ಬೆಳಗುತ್ತೈದಾನೆ.
ಎನಗೊಮ್ಮೆ ಸಂಗನಬಸವಣ್ಣನ ಶ್ರೀಪಾದದ ಘನವ
ತಿಳುಹಿ ಕೊಡಾ ಚೆನ್ನಬಸವಣ್ಣಾ.

*

ಚೆನ್ನಬಸವಣ್ಣ

೨೩

ಹರನಟ್ಟಿದಗ್ರನಿಗ್ರಹದ ಬೆಸನ, ಗುರುನಿರೂಪವೆಂದು
ಕರುಣಿ ಬಸವಣ್ಣ ಕೈಗೊಂಡು,
ಏಳುನೂರೆಪ್ಪತ್ತು ಅಮರಗಣಂಗಳು ಸಹಿತ
ಗುರುಲಿಂಗ ಜಂಗಮಕ್ಕೆ ಭಕ್ತಿಯ ಮಾಡಬೇಕೆಂದು
ಕೈಲಾಸದಿಂದ ಮರ್ತ್ಯಲೋಕಕ್ಕೆಯೆಯಿತಂದನಯ್ಯಾ ಬಸವಣ್ಣನು.
ಶಿವಸಮಯಕ್ಕೆ [ಆ]ಧಾ[ರ]ವಾದನಯ್ಯಾ ಬಸವಣ್ಣನು.

ಲೋ[ಕಾ]ದಿ ಲೋಕಂಗಳಿಗೆ ಪರಮಗುರುವಾದನಯ್ಯ ಬಸವಣ್ಣನು.
ಜಡರುಗಳ ಮನದ ಕತ್ತಲೆಯ ಕಳೆಯಲೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು.
ಪರಮನಟ್ಟಿದ ಓಲೆ ಬಂದಿಳಿಯಿತ್ತು ಬಿಜ್ಜಳನ ಸಿಂಹಾಸನದ ಮುಂದೆ.
ಅದು ತಂದು ಓದಿಸಲು ಸೃಷ್ಟಿಯ ಸೇನಬೋವರಿಗೆ ತಿಳಿಯದು.
ಚಪ್ಪನ್ನ ಭಾಷೆಯ ಲಿಪಿ ಮುನ್ನವಲ್ಲ.
ಅದನೋದಿದವರ್ಗೆ ಆನೆ, ಸೇನೆ, ಕುದುರೆ, ಭಂಡಾರ
ಅರುವತ್ತಾರು ಕರಣಿಕಕ್ಕೆ ಮುಖ್ಯನ ಮಾಡುವೆನೆಂದು
ಬಿಜ್ಜಳ ಭಾಷೆಯ ಕೊಡುತಿರಲು, ಹರನಿರೂಪವ ಶಿರದಮೇಲಿಟ್ಟು
ಶಿವಶರಣೆಂದು ಬಸವಣ್ಣ ಓದಿ ಓದಿ ಮೆಟ್ಟಿ ತೆಗಸಿದನಯ್ಯ
ಅರುವತ್ತಾರುಕೋಟಿ ವಸ್ತುವ.
ಅರಮನೆಗೆ ರಾಜ್ಯಕೆ ಒಡೆಯನಾದನಯ್ಯಾ ಬಸವಣ್ಣನು.
ಹರಶರಣರ್ಗೆ ಗತಿಮತಿ ಚೈತನ್ಯ ತಾನೆಯಾದನಯ್ಯಾ ಬಸವಣ್ಣನು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ
ಎನ್ನ ತಂದೆ ಪೂರ್ವಾಚಾರ್ಯ ಸಂಗನಬಸವಣ್ಣನು.

೨೪

ಭಕ್ತಿ, ಜ್ಞಾನ, ವೈರಾಗ್ಯದ ಕುಳಸ್ಥಳವ ಹರಹಲೆಂದು
ಮರ್ತ್ಯಲೋಕಕ್ಕೈತಂದನಯ್ಯ ಬಸವಣ್ಣನು.
ವ್ರತಾಚಾರದ ಮುಂದಣ ಕನ್ನಡಕವ ಕಳದು
ಕರತಳಾಮಳಕವ ಮಾಡಿ ತೋರಬಂದನಯ್ಯ ಬಸವಣ್ಣನು.
ಪರವಾದಿ ಬಿಜ್ಜಳ ಒರೆಗಲ್ಲ ಹಿಡಿದು ಶಿವಭಕ್ತಿ ಸಂಪಾದನೆಯ ಮಾಡುವಲ್ಲಿ
ಮೂವತ್ತಾರು ಕೊಂಡೆಯರ ಪರಿಹರಿಸಿ
ಶಿವಾಚಾರದ ಧ್ವಜವನೆತ್ತಿಸಿ ಮೆರದನಯ್ಯ ಬಸವಣ್ಣನು.
ಇದು ಕಾರಣ,
ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣನ ನಿಲವ ಹೊಗಳುವರೆ
ಎನ್ನಳವಲ್ಲ ನಿನ್ನಳವಲ್ಲ ಕಾ(ಣಾ) ಪ್ರಭುವೆ.

೨೫

ಪ್ರಥಮಕಾಲದಲ್ಲಿ ನಿರಾಲಂಬಜ್ಞಾನಿಯಾಗಿದ್ದೆ ಬಸವಣ್ಣಾ
ದ್ವಿತೀಯಕಾಲದಲ್ಲಿ ತೇಜೋಮೂರ್ತಿಯಾಗಿದ್ದೆ ಬಸವಣ್ಣಾ.
ತೃತೀಯಕಾಲದಲ್ಲಿ ನಾದಮೂರ್ತಿಯಾಗಿದ್ದೆ ಬಸವಣ್ಣಾ
ಚತುರ್ಥಕಾಲದಲ್ಲಿ ಚೈತನ್ಯರೂಪ ತಾಳಿದ್ದೆ ಬಸವಣ್ಣಾ
ಪಂಚಮಕಾಲದಲ್ಲಿ ಧರ್ಮಮೂರ್ತಿಯಾಗಿದ್ದೆ ಬಸವಣ್ಣಾ.
ಷಷ್ಠಮಕಾಲದಲ್ಲಿ ತ್ರಿವಿಧಭಕ್ತಿ ಕಾರಣವಾಗಿ ಬಂದೆ ಬಸವಣ್ಣಾ.
ಇದು ಕಾರಣವಾಗಿ,
ನೀವು, ನಿಮ್ಮ ಪ್ರಮಥರೂ ಸಹಿತ
ಪ್ರಾಣಲಿಂಗದ ಹರಹ ಮುಟ್ಟಿ ತೋರಬೇಕು ನಿಮಿತ್ತ,
ನಿಮ್ಮ ಬೆಸನವಿಡಿದು, ನಿಮ್ಮ ಕರಕಮಲದಲ್ಲಿ ಹುಟ್ಟಿದೆ ಬಸವಣ್ಣಾ.
ಇದು ಕಾರಣ ಕೂಡಲಚೆನ್ನಸಂಗ,
ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು.

೨೬

ಲಿಂಗದ ಪೂರ್ವಾಶ್ರಯವ ಕಳೆದು,
ಇದು ಪ್ರಾಣಲಿಂಗವೆಂದು ತೋರಬಂದನಯ್ಯಾ ಬಸವಣ್ಣನು.
ಲಾಂಛನದ ಪೂರ್ವಾಶ್ರಯವ ಕಳೆದು,
ಇದು ಲಿಂಗಜಂಗಮವೆಂದು ತೋರಬಂದನಯ್ಯ ಬಸವಣ್ಣನು.
ಪ್ರಸಾದದ ಪೂರ್ವಾಶ್ರಯವ ಕಳೆದು,
ಇದು ಮಹಾಪ್ರಸಾದವೆಂದು ಸಯವಮಾಡಿ
ತೋರಬಂದನಯ್ಯ ಬಸವಣ್ಣನು.
ಈ ತ್ರಿವಿಧದ ಪೂರ್ವಾಶ್ರಯವ ಕಳೆದು, ಸರ್ವ ಸ್ವಾಯತವ ಮಾಡಲೆಂದು,
ಕೂಡಲಚೆನ್ನಸಂಗಯ್ಯನಲ್ಲಿ, ಮರ್ತ್ಯಕ್ಕೆ ಬಿಜಯಂಗೆಯಿದನಯ್ಯಾ
ಎನ್ನ ತಂದೆ ಸಂಗನಬಸವಣ್ಣನು.

೨೭

[೫]ಮನ[೫]ಭ್ರಮೆಯ ಕಳೆದು ಗುರುವ ಮಾಡಿ,
ಗುರುಭಕ್ತನಾದನಯ್ಯಾ ಬಸವಣ್ಣನು.
[೬]ಪಾಷಾಣದ[೬] ಭ್ರಮೆಯ ಕಳೆದು ಲಿಂಗವ ಮಾಡಿ,
ಲಿಂಗಭಕ್ತನಾದಯ್ಯ ಬಸವಣ್ಣನು.
ಸಂಸಾರದ ಭ್ರಮೆಯ ಕಳೆದು ಜಂಗಮವ ಮಾಡಿ,
ಜಂಗಮಭಕ್ತನಾದನಯ್ಯಾ ಬಸವಣ್ಣನು.
ಈ ತ್ರಿವಿಧದ ಭ್ರಮೆಯ ತ್ರಿಕರಣದಲ್ಲಿ ಕಳೆದು,
ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನಾದನಯ್ಯ ಬಸವಣ್ಣನು.

೨೮

ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬರು,
ಹುಸಿಹುಸಿ ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು.
ಲಿಂಗವು ಬಸವಣ್ಣನ ಉದರದಿಂದ ಪುಟ್ಟಿತ್ತು.
ಜಂಗಮವು ಬಸವಣ್ಣನ ಉದರದಿಂದ ಪುಟ್ಟಿತ್ತು.
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣವಯ್ಯಾ
ಕೂಡಲಚೆನ್ನಸಂಗದೇವಾ.

೨೯

ನಮಃ ಶಿವಾಯ ಲಿಂಗವು; ಓಂ ನಮಃ ಶಿವಾಯ ಬಸವಣ್ಣನು,
ಮತ್ತಂ
ನಮಃ ಶಿವಾಯ [೭]ಶಿವ[೭]ಶಕ್ತಿ; ಓಂ ನಮಃ ಶಿವಾಯ ಬಸವಣ್ಣನು.
ಇಂತೀ ಶಿವಲಿಂಗ ಮಂತ್ರವನೆ
ಎನ್ನ ಮನೋಮೂರ್ತಿಯಾಗಿ ಬೆಳಗಿ ತೋರಿದೆಯಾಗಿ,
ಕೂಡಲಚೆನ್ನಸಂಗಯ್ಯನಲ್ಲಿ ಆವ ನಿರ್ಣಯವಿಲ್ಲದಂದು
ಓಂ ನಮಃಶಿವಾಯ ಬಸವಗುರುವೆ ಶರಣು ಶರಣೆನುತಿರ್ದೆನು.

೫-೫ ಮನದ(ಚೆ. ವ) ೬-೬- ಪ್ರಾಣದ(ಚೆ.ವ) ೭-೭ ಶಿವಾಯ (ಚೆ)

೩೦

ಬಸವಣ್ಣ ಓಂಕಾರದಿಂದತ್ತತ್ತ.
ಬಸವಣ್ಣ ನಾದಬಿಂದುಕಳೆಗಳಿಂದತ್ತತ್ತ.
ಪ್ರಥಮಾಚಾರ್ಯ ನೀನೇ ಬಸವಣ್ಣ.
ಲಿಂಗಾಚಾರ್ಯ ನೀನೆ ಬಸವಣ್ಣ.
ಜಂಗಮಾಚಾರ್ಯ ನೀನೆ ಬಸವಣ್ಣ.
ಪ್ರಸಾದಾಚಾರ್ಯ ನೀನೆ ಬಸವಣ್ಣ.
ಎನ್ನ ಸರ್ವಾಚಾರಸಂಪತ್ತು ನೀನೆ ಬಸವಣ್ಣ.
ಎನ್ನ ಗತಿಮತಿ ಚೈ[ತ]ನ್ಯ ನೀನೆ ಬಸವಣ್ಣ.
ಇದು ಕಾರಣ,
ಕೂಡಲಚೆನ್ನಸಂಗಯ್ಯನಲ್ಲಿ
ಆದಿ ಆಧಾರವಿಲ್ಲದಂದು
ಓಂ ನಮಃ ಶಿವಾಯ ಬಸವಗುರುವೆ
ಶರಣು ಶರಣೆನುತಿರ್ದೆನು.

೩೧

ಮಾಂಸಪಿಂಡವೆಂದೆನಿಸದೆ,
ಮಂತ್ರಪಿಂಡವೆಂದೆನಿಸಿದನಯ್ಯಾ ಬಸವಣ್ಣನು.
ಪಂಚಭೂತ ಕಾಯವೆಂದೆನಿಸದೆ,
ಪ್ರಸಾದಕಾಯವೆಂದೆನಿಸಿದನಯ್ಯ ಬಸವಣ್ಣನು.
ವಾಯುಪ್ರಾಣಿ ಎಂದೆನಿಸದೆ,
ಲಿಂಗಪ್ರಾಣಿ ಎಂದೆನಿಸಿದನಯ್ಯ ಬಸವಣ್ಣನು.
ಜಂಗಮಭರಿತನೆಂಬ ಶಬ್ದಕೆ ಅಂಗವಿಸಲೊಲ್ಲದೆ,
ಶರಣಭರಿತ ಲಿಂಗವೆಂದೆನಿಸಿದನಯ್ಯಾ
ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣನು.

೩೨

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚಭೂತಂಗಳಲ್ಲಿ
ಪಂಚಮುಖಲಿಂಗ ಪ್ರತಿಷ್ಠೆಯ ಮಾಡಿ ತೋರಿದನಯ್ಯ ಬಸವಣ್ಣನು.

ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ,
ವಾಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ದಶೇಂದ್ರಿಯಂಗಳಲ್ಲಿ
ದಶಮುಖಲಿಂಗ ಪ್ರತಿಷ್ಠೆಯ ಮಾಡಿ ತೋರಿದನಯ್ಯಾ ಬಸವಣ್ಣನು.
ಅಂತರ್ಬಾಹ್ಯಭರಿತನಾಗಿ,
ಸರ್ವಾಂಗಲಿಂಗ ಪ್ರತಿಷ್ಠೆಯ ಮಾಡಿ ತೋರಿದನಯ್ಯಾ [ಬಸವಣ್ಣನು].
ಕೂಡಲಚೆನ್ನಸಂಗಯ್ಯ [ನ]ಲ್ಲಿ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೩೩

ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ.
ಆ ಲಿಂಗ ನಿನಗೆ ಸೇರಿತ್ತಾಗಿ,
ಬಸವಣ್ಣನ ಸಂಪ್ರದಾಯದ ಕಂದನು ನೋಡಾ ನೀನು.
ಭಕ್ತಿದಳದುಳದಿಂದ ಚೆನ್ನಸಂಗಮನಾಥನೆಂಬ
ಲಿಂಗನ ಅವಗ್ರಹಿಸಿಕೊಂಡೆನಾಗಿ
ಬಸವಣ್ಣನ ಸಾಂಪ್ರದಾಯಕದ ಕಂದನು ನೋಡಾ ನಾನು.
ಇಂತೀ ಇಬ್ಬರಿಗೆ ಕುಳಸ್ಥಲವೊಂದೆಯಾದ ಕಾರಣ,
ಕೂಡಲಚೆನ್ನಸಂಗಯ್ಯನ ಮಹಾಮನೆಯಲ್ಲಿ
ಸಂಗನಬಸವಣ್ಣನ ಪ್ರಸಾದ ಇಬ್ಬರಿಗೂ ಒಂದೇ ಕಾಣಾ ಪ್ರಭುವೇ.

೩೪

ಭಕ್ತಿಯುಕ್ತಿಯನಾರು ಬಲ್ಲರು,
ಮೂರು ಲೋಕದೊಳಗೆ ಬಸವಣ್ಣನಲ್ಲದೆ?
ಲಿಂಗಕ್ಕೆ ಭಕ್ತಿಯ ಮಾಡಿದರೆ ಭವ ಹರಿಯದೆಂದು
ಜಂಗಮವನರ್ಚಿಸಿ, ಪೂಜಿಸಿ, ಪ್ರಸನ್ನತೆ ಹಡದ ಬಸವಣ್ಣನು.
ಆ ಪ್ರಸನ್ನತೆಯ ರುಚಿಯನುಪಮಿಸಬಾರದು
ಬಸವಣ್ಣನ ಭಕ್ತಿಪ್ರಸಾದವ ಕೊಂಡು ನಾನು ಬದುಕಿದೆನು.
ಆ ಬಸವಣ್ಣನ ಪ್ರಸಾದದಿಂದ ಅಲ್ಲಮಾಪ್ರಭುದೇವರು ತೃಪ್ತಿಯಾದರು.
ಅಲ್ಲಮಾಪ್ರಭುದೇವರು ಕೊಂಡ ಪ್ರಸಾದದ ತೃಪ್ತಿ,
ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ ತೃಪ್ತಿಯಾಯಿತ್ತು.

ಆ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮ ಕೊಂಡ ಪ್ರಸಾದದ ತೃಪ್ತಿ,
ಸಚರಾಚರವೆಲ್ಲವೂ ಕೂಡಿ ತೃಪ್ತಿಯಾಯಿತ್ತೆಂದರೆ,
ಇಲ್ಲವೆಂದು ಬಿಜ್ಜಳ ತರ್ಕಿಸಲು
ಕಪ್ಪೆಯ ಒಡಲೊಳಗೆ ಪ್ರಭುವಿನ ಪ್ರಸಾದವ ತೋರನೆ ಬಸವಣ್ಣನು?
ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಬಸವಣ್ಣನ ಪ್ರಭುದೇವರ ಪ್ರಸಾದ, ತ್ರೈಜಗದೊಳಗೆ ಬೆಳವಿಗೆಯಾಯಿತ್ತು.

೩೫

ಅಂದೊಮ್ಮೆ ಧರೆಯ ಮೇಲೆ ಬೀಜವಿಲ್ಲದಂದು
ಬಸವನೆಂಬ ಗಣೇಶ್ವರನು ಭೋಂಕರಿಸಿ ಕೆಲೆದರೆ,
ಶಂಕರನೆಂಬ ಬೀಜ ಉತ್ಪತ್ಯವಾಯಿತ್ತು.
ಅದನೆ ಬಿತ್ತಿ, ಅದನೆ ಬೆಳೆದು, ೮ಅದನೆ ಅಟ್ಟಟ್ಟು೮
ಅದನೆ ಲಿಂಗಕ್ಕೆ ಬೋನವ ಮಾಡಿ,
ನಾಗಲೋಕದ ನಾಗಗಣಂಗಳಿಗೂ ಬಸವಣ್ಣನ ಪ್ರಸಾದ.
ಮರ್ತ್ಯಲೋಕದ ಮಹಾಗಣಂಗಳಿಗೂ ಬಸವಣ್ಣನ ಪ್ರಸಾದ.
ದೇವಲೋಕದ ದೇವಗಣಂಗಳಿಗೂ ಬಸವಣ್ಣನ ಪ್ರಸಾದ.
ಎಲೆ ಕೂಡಲ[ಚೆನ್ನ]ಸಂಗಮದೇವಾ,
ನಿಮ್ಮಾಣೆ ಎನಗೂ ನಿಮಗೂ ಬಸವಣ್ಣನ ಪ್ರಸಾದ.

೩೬

ಬಸವಣ್ಣನ ಶೃಂಗದಲ್ಲಿ ತುಂಬುರ ನಾ[ರ]ದರು.
ಬಸವಣ್ಣನ ಲಲಾಟದಲ್ಲಿ ವೀರಗಣಂಗಳು.
ಬಸವಣ್ಣನ ನಯನದಲ್ಲಿ ಚಂದ್ರಸೂರ್ಯರು.
ಬಸವಣ್ಣ[ನ] ಕರ್ಣದಲ್ಲಿ ಗಂಗೆವಾಳುಕಸಮಾರುದ್ರರು.
ಬಸವಣ್ಣ[ನ] ನಾಸಿಕದಲ್ಲಿ ವಾಯು.
ಬಸವಣ್ಣನ ದಂತದಲ್ಲಿ ಭೃಂಗೀಶ್ವರ ದೇವರು.
ಬಸವಣ್ಣನ ಕೊರಳಗರಳದಲ್ಲಿ

೮–೮ X (ಚೆ)

ಈರೇಳು ಭುವನ ಹದಿನಾಲ್ಕು ಲೋಕಂಗಳು
ಬಸವಣ್ಣನ ಬೆನ್ನಸುಳಿಯಲ್ಲಿ
ಅಭಿನವ ಪಾರ್ವತಿ ಪರಮೇಶ್ವರನ ದೇವರು.
ಬಸವಣ್ಣನ ೯ಅಂಡ೯ದಲ್ಲಿ ಅಷ್ಟಾಷಷ್ಠಿತೀರ್ಥಂಗಳು
ಬಸವಣ್ಣನ ಬಲದ ತೊಡೆಯಲ್ಲಿ
ಅಜ, ಹರಿ, ಸರಸ್ವತಿ, ಪಂಚನದಿ, ಮಹಾಗಂಗೆ,
ಬಸವಣ್ಣನ ಮಣಿಪಾದದಲ್ಲಿ
ದೇವಲೋಕದ ದೇವಗಣಂಗಳು.
ಬಸವಣ್ಣನ ಕಿರುಗೊಳಗಿನಲ್ಲಿ ಸಪ್ತಸಮುದ್ರಂಗಳು
ಆ ಸಪ್ತ ಸಮುದ್ರಂಗಳೊಳಗಿಹ ಸಕಲಪ್ರಾಣಿಗಳಿಗೆ
ಸಂಕೀರ್ಣತೆಯಾದೀತೆಂದು ಬಾಲದಂಡದಲ್ಲಿ ಎತ್ತಿ,
ತಡಿಗೆ ಸೇರಿಸಿದನು ನಮ್ಮ ಬಸವಣ್ಣನು.
ಇದು ಕಾರಣ,
ನಾಗಲೋಕದ ನಾಗಗಣಂಗಳು ಕೊಂಬುದು ಬಸವಣ್ಣನ ಪ್ರಸಾದ.
ಮರ್ತ್ಯಲೋಕದ ಮಹಾಗಣಂಗಳು ಕೊಂಬುದು ಬಸವಣ್ಣನ ಪ್ರಸಾದ.
ದೇವಲೋಕದ ದೇವಗಣಂಗಳು ಕೊಂಬುದು ಬಸವಣ್ಣನ ಪ್ರಸಾದ.
ರುದ್ರಲೋಕದ ದೇವಗಣಂಗಳು ಕೊಂಬುದು ಬಸವಣ್ಣನ ಪ್ರಸಾದ.
ಇಂತೀ ನಮ್ಮ ಬಸವಣ್ಣನ ಪ್ರಸಾದವ ಉಂಡು ಉಟ್ಟುಕೊಂಡು,
ಅನ್ಯದೈವಂಗಳ ಹೊಗಳುವ ಕುನ್ನಿಗಳನೇನೆಂಬೆ ಕೂಡಲಚೆನ್ನಸಂಗಮದೇವಾ.

೩೭

ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದವರೆಲ್ಲರೂ ಬಸವಣ್ಣನಂತಹರೆ?
ಇನ್ನು, ಭೂಲೋಕದವರೆಲ್ಲರೂ ಬಸವಣ್ಣನಂತಹರೆ?
ದುರಿತನಿವಾರಣ ಕೂಡಲಚೆನ್ನಸಂಗಾ,
ನಿಮ್ಮ ಶರಣ ಬಸವಣ್ಣನಿಂತಹ ಮಹಿಮ ನೋಡಯ್ಯಾ.

೯-೯ ಅಂಡಜ (ಹು)

೩೮

ಆದಿಯಲ್ಲಿ ವೇದ್ಯ,* ಶಿವಸಂಪತ್ತಿನಲ್ಲಿ ಮಹಾಘನ
ಲಿಂಗಪ್ರಾಣ ಸಹಜದಲ್ಲಿ ಉದಯವಾದ
ಸಂಗನಬಸವಣ್ಣ ನಮೋ, ಸಂಗನಬಸವಣ್ಣ ನಮೋ,
ಚೆನ್ನಸಂಗನ ಬಸವಿದೇವಂಗೆ, ಅಪ್ರತಿಮಂಗೆ ಪ್ರತಿಯಿಲ್ಲ.
ಆ ಧರ್ಮವೇ ಧರ್ಮ, ಕೂಡಲಚೆನ್ನಸಂಗಾ,
ನಿಮ್ಮ ಶರಣ ಬಸವಣ್ಣನು ಉಪಮಾತೀತನಯ್ಯಾ.

೩೯

ಶರಣರ ಸಮತೆಯ ನಿಧಿ ಬಸವನಯ್ಯಾ
ಭಕ್ತಿಯ ಬೆಳೆಸಿರಿ ಬಸವನಯ್ಯಾ.
ಮುಕ್ತಿಯ ತವನಿಧಿ ಬಸವನಯ್ಯಾ
ಸತ್ಯದ ನಿಧಿ ಬಸವನಯ್ಯಾ
ಹರಪದ ಕಮಲಭೃಂಗ ಬಸವನಯ್ಯಾ
ಕೂಡಲಚೆನ್ನಸಂಗಯ್ಯನಲ್ಲಿ ಅನಿಮಿಷ ಬಸವನಯ್ಯ.

೪೦

ಚೆನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವರೆ
ಬಸವನಂತಪ್ಪ ನಿಧಾನ ದೊರಕಿತ್ತೆನಗೆ.
ಚೆನ್ನಸಂಗಾ, ನಿಮ್ಮಲಿ ಬಯಸಿ ಬೇಡುವರೆ
ಬಸವನಂತಪ್ಪ ಪರುಷ ದೊರಕಿತ್ತೆನಗೆ.
ಚೆನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವರೆ
ಬಸವನಂತಪ್ಪ ಕಾಮಧೇನು ದೊರಕಿತ್ತೆನಗೆ.
ಚೆನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವರೆ
ಬಸವನಂತಪ್ಪ ಸುರತರು ದೊರಕಿತ್ತೆನಗೆ.
ಚೆನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವರೆ
[ತ್ರಿ]ವಿಧ ತ್ರೀವಿಧವ ಮೊದಲನೇ ತೋರಿದ ಬಸವಣ್ಣನೆನಗೆ,

---

*+ನು (ಚೆ)

ಚೆನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವರೆ
ಬಸವಣ್ಣನಿಂದ ನೀವಾದಿರಾಗಿ,
ಕೂಡಲ[ಚೆನ್ನ]ಸಂಗಯ್ಯನಲ್ಲಿ ಪ್ರಸಾದಿಯ ಪ್ರಸಾದಿಯಾನಾದೆನು.

೪೧

ಓಂಕಾರವೆ ಬಸವಣ್ಣನ ಶಿರಸ್ಸು, ನಕಾರವೆ ಬಸವಣ್ಣನ ನಾಸಿಕ,
ಮಕಾರವೆ ಬಸವಣ್ಣನ ಜಿಹ್ವೆ, ಶಿಕಾರವೆ ಬಸವಣ್ಣನ ನೇತ್ರ,
ವಕಾರವೆ ಬಸವಣ್ಣನ ತ್ವಕ್ಕು, ಯಕಾರವೆ ಬಸವಣ್ಣನ ಶ್ರೋತ್ರ,
ಮತ್ತಂ
ಓಂಕಾರವೆ ಬಸವಣ್ಣನ ವದನ, ನಕಾರವೆ ಬಸವಣ್ಣನ ಬಲದ ಭುಜ,
ಮಕಾರವೆ ಬಸವಣ್ಣನ ಎಡದ ಭುಜ, ಶಿಕಾರವೆ ಬಸವಣ್ಣನ ನಾಭಿ,
ವಕಾರವೆ ಬಸವಣ್ಣನ ಬಲದ ಪಾದ, ಯಕಾರವೆ ಬಸವಣ್ಣನ ಎಡದ ಪಾದ.
ಅದೆಂತೆಂ[ದ]ಡೆ:
ಓಂಕಾರಂ ವದನಂ ದೇವಿ ನಮಃಕಾರಂ ಭುಜದ್ವಯಂ ।
ಶಿಕಾರಂ ದೇಹಮಧ್ಯಸ್ತು ವಯಕಾರಂ ಪದದ್ವಯಂ ॥
ಇತಿ ಷಡ್ವರ್ಣ ರೂಪಂ ಹಿ ಭಕ್ತರೂಪಂ ಮಯೋದಿತಂ ।
ಇಂತೆಂದುದಾಗಿ,
ಕೂಡಲಚೆನ್ನಸಂಗಯ್ಯನಲ್ಲಿ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೪೨

ನಕಾರವೆ ಬಸವಣ್ಣನ ನಾಸಿಕ, ಮಕಾರವೆ ಬಸವಣ್ಣನ ಜಿಹ್ವೆ,
ಶಿಕಾರವೆ ಬಸವಣ್ಣನ ನಯನ, ವಕಾರವೆ ಬಸವಣ್ಣನ ತ್ವಕ್ಕು,
ಯಕಾರವೆ ಬಸವಣ್ಣನ ಶ್ರೋತ್ರ,
ಓಂಕಾರವೆ ಬಸವಣ್ಣನ ಪ್ರಾಣ,
ಅಕಾರವೆ ಬಸವಣ್ಣನ ನಾದ, ಉಕಾರವೆ ಬಸವಣ್ಣ[ನ] ಬಿಂದು,
ಮಕಾರವೆ ಬಸವಣ್ಣನ ಕಳೆ.
ಇಂತೀ ಮೂರು ಪ್ರಣಮಂಗಳೆ ಪ್ರಣಮದ ಶಿರಸ್ಸಾಗಿ
ಪ್ರಣಮದ ಕುಂಡಲಿಯ ಸೋಂಕಿ ಶಾಖೆಗಳಾಗಿಪ್ಪವು.

ಬಕಾರವೆ ಭವಹರಗುರು, ಸಕಾರವೆ ಸಕಲಚೈತನ್ಯಲಿಂಗ,
ವಕಾರವೆ ವಚಿಸುವರೆ ಜಂಗಮ,
ಇಂತೀ ಮೂರು ಪ್ರಣಮಂಗಳೆ
ಪ್ರಣಮದ ಮೂರು ಪದಂಗಳಾಗಿ
ಪ್ರಣಮಕ್ಕೆ ಮೂಲ ಪದಂಗಳಾಗಿಪ್ಪವು.
ಇಂತೀ ಹನ್ನೆರಡು ಪ್ರಣಮವು ತಾನೆಯಾದ
ಕೂಡಲಚೆನ್ನಸಂಗಯ್ಯನಲ್ಲಿ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು.

೪೩

ಲಿಂಗ ಜಂಗಮ, ಜಂಗಮ ಲಿಂಗವೆಂಬುದ ತೋರಿ
ನಿತ್ಯ ನಿಜೈಕ್ಯನಾದೆಯಲ್ಲಾ ನಿಜಗುರು ಬಸವಣ್ಣ.
ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ
ಎನ್ನ ಆಗು ಮಾಡಿ ಮುಂದುವರಿದೆಯಲ್ಲಾ ಬಸವಣ್ಣ.
ಲಿಂಗ ಪ್ರಾಣ, ಪ್ರಾಣ ಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಾಪ್ಯವ ಮಾಡಿ
ಎನ್ನ ನಿಮ್ಮಂತೆ ಮಾಡಿ
ನಿರವಯವಾದೆಯಲ್ಲಾ ಪರಮಗುರು ಬಸವಣ್ಣ.
ಎನ್ನ ಮನವ ಮಹಾತತ್ತ್ವದಲ್ಲಿ ಲಯವ ಮಾಡಿ
ನಿರವಯವಾದೆಯಲ್ಲಾ ನಿತ್ಯನಿಜಲಿಂಗೈಕ್ಯ ಬಸವಣ್ಣ.
ನಿಮ್ಮ ಒಕ್ಕುಮಿಕ್ಕ ಶೇಷಪ್ರಸಾದವನಿಕ್ಕಿ ಆಗು ಮಾಡಿ
ಅವ್ವೆ ನಾಗಾಯಿಯ ನಿಮ್ಮಂತರಂಗದಲ್ಲಿ ಇಂಬಿಟ್ಟುಕೊಂಡರೆ
ಎನ್ನ ಮನ ನಿಮ್ಮ ಶ್ರೀಪಾದಲ್ಲಿ ಕರಗಿ ಕೊರಗಿತ್ತಲ್ಲಾ ಬಸವಣ್ಣ.
ಕೂಡಲಚೆನ್ನಸಂಗಯ್ಯಂಗೆ ಸುಜ್ಞಾನವಾಹನವಾಗಬೇಕೆಂದು
ನಿರವಯವಾಗಿ ಹೋದೆಯಲ್ಲಾ ಸಂಗನಬಸವಣ್ಣ

೪೪

ಅಯ್ಯಾ ಅಯ್ಯಾ ಎಂದಡೆ ಅಯ್ಯ. ಓ ಎಂಬುದ ಮಾಣ್ಬನೆ?
ಅವ್ವಾ ಅವ್ವಾ ಎಂದಡೆ ಅವ್ವೆ, ಓ ಎಂಬುದ ಮಾಣ್ಬಳೆ?
ಇದು ಕಾರಣ,

ಕೂಡಲಚೆನ್ನಸಂಗಯ್ಯನಲ್ಲಿ
ಬಸವಲಿಂಗಾ, ಬಸವಲಿಂಗಾ, ಬಸವಲಿಂಗಾ ಎಂದಡೆ
ಎನ್ನ ಕಾಯ ಬಯಲಾಗದೆ?

೪೫

ಬಸವಾ ಎಂಬ ಮೂರಕ್ಷರ, ಹೃದಯಕಮಲದಲ್ಲಿ ನೆಲೆಗೊಂಡರೆ
ಅಭೇದ್ಯ ಭೇದ್ಯವಪ್ಪುದು, ಅಸಾಧ್ಯ ಸಾಧ್ಯವಪ್ಪುದು.
[೧೦]ಭಕ್ತಿ ಭರ[೧೦] ವಪ್ಪುದು.
ಅದೆಂತೆಂದಡೆ:
ಯಸ್ಯ ವಕ್ತ್ರಸ್ಥಿತಂ ದೇವಿ ಬಸವೇತ್ಯಕ್ಷರತ್ರಯಂ ।
ವಸಾಮಿ ಸತತಂ ತತ್ರ ಸತ್ಯಂ ಸತ್ಯಂ ನ ಚಾನ್ಯತಃ ॥
ಇಂತೆಂದುದಾಗಿ,
ಕೂಡಲಚೆನ್ನಸಂಗಯ್ಯನಲ್ಲಿ ಸಂಗನಬಸವಣ್ಣನ ಕೃಪೆಯಿಂದ.

೪೬

ಬಸವಾ ಎಂಬ ಮೂರಕ್ಷರ, ಹೃದಯದಲ್ಲಿ ನೆಲೆಗೊಂಡರೆ
ಅಭೇದ್ಯ ಭೇದ್ಯವಾಯಿತ್ತು, ಅಸಾಧ್ಯ ಸಾಧ್ಯವಾಯಿತ್ತು.
ಇಂತು ಬಸವಣ್ಣನಿಂದ
ಲೋಕ ಲೌಕಿಕದ ಕುಭಾಷೆಯ ಕಳೆದು,
ಲೋಕಾಚರಣೆಯನತಿಗಳೆದು,
ಭಕ್ತಿ ಭರವಪ್ಪುದು,
ಕೂಡಲಚೆನ್ನಸಂಗಯ್ಯನಲ್ಲಿ, ಬಸವಣ್ಣನ ಕಾರುಣ್ಯದಿಂದ.

೪೭

ಸ್ಥಲ ಹೋಯಿತ್ತೆನಗೆ, ನಿಸ್ಥಲ ಹೋಯಿತ್ತೆನಗೆ;
[೧೧]ಗೋರಿಕಲ್ಲ[೧೧] ಮಾಡ ಹೋಯಿತ್ತೆನಗೆ;
ಹೂವಿನ ವಿಮಾನ ಹೋಯಿತ್ತೆನಗೆ;

೧೦–೧೦ ಭಕ್ತರ ಬರ (ಚೆ) ೧೧–೧೧ ಗೋಲಿಕಲ್ಲ(ಚೆ)

ಬಸವ ಹೋದನೆನಗೆ;
ಬಸವನ ಮನೆಯ ಜಂಗಮ ಹೋದರೆನಗೆ;
ಇನ್ನು, ಬಸವಾ, ಬಸವಾ, ಬಸವಾ ಎಂದೆನಾದಡೆ
ಕೂಡಲಚೆನ್ನಸಂಗಯ್ಯಾ ನಿಮ್ಮಾಣೆ.

*

ಮಡಿವಾಳ ಮಾಚಿದೇವ

೪೮

ಬಸವಣ್ಣನ ಬಳ್ಳಿಯಯ್ಯ, ಗಂಗೆವಾಳುಕ ಸಮಾರುದ್ರರೆಲ್ಲರು.
ಬಸವಣ್ಣನ ಫಲವಯ್ಯ, ಓಂ ನಮಃಶಿವಾಯಯೆಂಬವರೆಲ್ಲರು.
ಬಸವಣ್ಣನಾಜ್ಞೆಯಯ್ಯ, ಎಲ್ಲಾ ಶಿವಾರ್ಚಕರೆಲ್ಲರು.
ಬಸವಣ್ಣನ ಘನವಯ್ಯ, ಸೋಹಿ ದಾಸೋಹಿಗಳು,
ಬಸವಣ್ಣನ ಧನವಯ್ಯ, ಪಾದೋದಕ ಪ್ರಸಾದ ಸಂಬಂಧಿಗಳೆಲ್ಲರು
ಬಸವಣ್ಣನ ಮನವಯ್ಯ,
ತನುಮಧನವ ಗುರುಲಿಂಗಜಂಗಮಕ್ಕೆ ನಿವೇದಿಸುವವರು.
ಬಸವಣ್ಣನ ತನುವಯ್ಯ,
ತನುಪದಾರ್ಥವ ಮಾಡಿ ಗುರುಲಿಂಗಕ್ಕರ್ಪಿಸುವವರು.
ಬಸವಣ್ಣನ ಬಂಧುಗಳಯ್ಯ, ಎಲ್ಲಾ ಶಿವಲಾಂಛನಿಗಳೆಲ್ಲರು.
ಬಸವಣ್ಣ ಮಾಡಿದ ಅನುಗಳಯ್ಯಾ,
ಕನಸಿನಲ್ಲಿ ಮನಸಿನಲ್ಲಿ ಶಿವಶಿವಾ ಎಂಬವರೆಲ್ಲರು.
ಬಸವಣ್ಣನ ಪ್ರಸಾದಿಗಳಯ್ಯಾ,
ಬಸವಣ್ಣನ ನಾಮಾಮೃತವ ನೆನವವರೆಲ್ಲರು.
ಎಲೆ ಕಲಿದೇವಯ್ಯಾ, ಬಸವಣ್ಣನ ಹಂಗಿನಲ್ಲಿ ನೀನಿರ್ದೆಯಾಗಿ,
ಎಲ್ಲಾ ಭಕ್ತರ ತನುಮನಸಹಿತ ನಾನಾದೆನಯ್ಯಾ.

೧೨-೧೨ ೪ (ಚೆ)

೪೯

ಇಂದ್ರಲೋಕದವರೆಲ್ಲರೂ ಸೂತಕಲಾಸಂಹಾರಿ ಬಸವಾ ಎಂದೆಂಬರು,
ಚಂದ್ರಲೋಕದವರೆಲ್ಲರೂ ಷೋಡಶಕಲಾ ಪರಿಪೂರ್ಣ ಬಸವಾ ಎಂದೆಂಬರು.
ಯುಗಕೋಟಿಬ್ರಹ್ಮರೆಲ್ಲರೂ ಪರಶಿವ ಬಸವಾ ಎಂದೆಂಬರು.
ಅಷ್ಟದಿಕ್ಪಾಲಕರೆಲ್ಲರೂ ಪರಶಿವ ಬಸವಾ ಎಂದೆಂಬರು.
ಸುರಪಡೆ ಎಲ್ಲಾ ಅಮೃತಸಾಗರ ಬಸವಾ ಎಂದೆಂಬರು.
ನವನಾಥಸಿದ್ಧರೆಲ್ಲರೂ ಪರಮಘುಟಿಕೆ ಬಸವಾ ಎಂದೆಂಬರು.
ಲಂಬೋದರ ಕುಂಭೋದರ ದಾರುಕ ರೇಣುಕ ಗೌರೀಸುತ ತಾಂಡವರೆಲ್ಲರೂ
ಸಕಲಜೀವ ಚೈತನ್ಯಮಾತ್ರ ಬಸವಾ ಎಂದೆಂಬರು.
ಓತವರೆಲ್ಲರೂ ಮಾತಾಪಿತ ಬಸವಾ ಎಂದೆಂಬರು.
ಒಲಿದವರೆಲ್ಲರೂ ಪ್ರಾಣ ಪರಿಣಾಮಿ ಬಸವಾ ಎಂದೆಂಬರು.
ಆನೇನೆಂಬೆನು!
ಉಪಮಿಸಬಾರದ ಮಹಾಘನ ಮಹಿಮನ.
ಕಲಿದೇವಾ, ನಿಮ್ಮ ಶರಣ ಬಸವಣ್ಣನಿಂತಹ ಮಹಿಮ ನೋಡಯ್ಯಾ.

೫೦

ಪುರವರಾಧೀಶ್ವರರೆಲ್ಲರೂ ಪುರದೊಡೆಯ ಬಸವಣ್ಣಾ ಎಂದೆಂಬರು.
ಅಮರಾಧೀಶ್ವರರೆಲ್ಲರೂ ಅಮರಪತಿ ಬಸವಣ್ಣಾ ಎಂದೆಂಬರು.
ಕೈಲಾಸಾಧಿಪತಿಗಳೆಲ್ಲರೂ ಶಿವಲಿಂಗ ಬಸವಣ್ಣಾ ಎಂದೆಂಬರು.
ದೇವ ಸಮೂಹವೆಲ್ಲಾ ಮಹಾಲಿಂಗ ಬಸವಣ್ಣಾ ಎಂದೆಂಬರು.
ಪಂಚವಕ್ತ್ರಗಣಂಗಳೆಲ್ಲರೂ ಪಂಚಲಿಂಗ ಬಸವಣ್ಣಾ ಎಂದೆಂಬರು.
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಗಣಂಗಳೆಲ್ಲರೂ
[ಪದವೀವ] ಬಸವಣ್ಣಾ ಎಂದೆಂಬರು.
ನಾಗಲೋಕದವರೆಲ್ಲರೂ ಸಕಲಾಧಾರ ಬಸವಣ್ಣಾ ಎಂದೆಂಬರು.
ಮರ್ತ್ಯಲೋಕದವರೆಲ್ಲರೂ ಗುರುಲಿಂಗ ಬಸವಣ್ಣಾ ಎಂದೆಂಬರು.
ಭಕ್ತ ಬಸವಣ್ಣಾ ಎಂದೆಂಬರು; ಸೋಹಿ ದಾಸೋಹಿ ಬಸವಣ್ಣಾ ಎಂದೆಂಬರು.
ತನುಮನಧನವ ಗುರುಲಿಂಗಜಂಗಮಕ್ಕೆ ನಿವೇದಿಸುವಾತ ಬಸವಣ್ಣಾ ಎಂದೆಂಬರು.
ಇದು ಕಾರಣ, ನಾನು,
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎಂದು
ಬಯಲಾದೆನು ಕಾಣಾ ಕಲಿದೇವರದೇವಾ.

೫೧

ಇಂದ್ರಲೋಕದವರೆಲ್ಲರೂ
ಸಹೀಂದ್ರನಾಥ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಬ್ರಹ್ಮಲೋಕದವರೆಲ್ಲರೂ
ಪರಬ್ರಹ್ಮ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ವಿಷ್ಣುಲೋಕದವರೆಲ್ಲರೂ
ಹರಿದಂಡನಾಥ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ರುದ್ರಲೋಕದವರೆಲ್ಲರೂ
ಮಹಾರುದ್ರ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ
ಶಿವಲೋಕದವರೆಲ್ಲರೂ
ಪರಶಿವ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ
ಪ್ರಮಥಲೋಕದವರೆಲ್ಲರೂ
ಪ್ರಮಥನಾಥ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಪರಲೋಕದವರೆಲ್ಲರೂ
ಪರಾಪರ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಸತ್ಯಲೋಕದವರೆಲ್ಲರೂ
ನಿತ್ಯ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ.
ಮರ್ತ್ಯಲೋಕದವರೆಲ್ಲರೂ
ಕರ್ತ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ನಾಗಲೋಕದವರೆಲ್ಲರೂ
ನಾಗನಾಥ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಪಾತಾಳಲೋಕದವರೆಲ್ಲರೂ
ಅಪ್ರಮಾಣ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ
ರಸಾತಳಲೋಕದವರೆಲ್ಲರೂ
ಮಹಾಮಹಿಮ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಶೂನ್ಯಲೋಕದವರೆಲ್ಲರೂ
ಶೂನ್ಯಲಿಂಗ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ,
ಸರ್ವಲೋಕದವರೆಲ್ಲರೂ
ಸರ್ವಾಧಾರ ಬಸವಣ್ಣಾ ಎಂದು ಹೊಗಳುತಿಪ್ಪರಯ್ಯಾ.

ಇಂತು
ನಿತ್ಯರು, ನಿಜೈಕ್ಯರು ಬಸವಣ್ಣನ ನೆನೆಯದವರಾರು?
ಸತ್ಯರು, ಸದ್ಯೋನ್ಮುಕ್ತರು ಬಸವಣ್ಣನ ಹೊಗಳದವರಾರು?
ಸರ್ವ ಮಹಿಮನೇ,
ಸರ್ವಘನಮನವೇದ್ಯನೇ,
ಸರ್ವಪರಿಪೂರ್ಣನೇ,
ಕಲಿದೇವಾ ನಿಮ್ಮ ಶರಣ ಬಸವಣ್ಣನಿಂತಹ ಘನಮಹಿಮ ನೋಡಯ್ಯಾ.

೫೨

ಅಯ್ಯಾ ಅಯ್ಯಾ ಎಂದು ನೆನವುತ್ತಿಹರಯ್ಯಾ
ಗಂಗೆವಾಳುಕ ಸಮಾರುದ್ರರು,
ಅವರಿಗೆ ಪ್ರಸಾದ ಲಿಂಗ ಸಾಹಿತ್ಯವ ಮಾಡಿದಕಾರಣ.
ಅಯ್ಯಾ ಅಯ್ಯಾ ಎಂದು ಹೊಗಳುತ್ತಿಹರಯ್ಯಾ ಏಕಾದಶ ರುದ್ರರು,
ಅವರಿಗೆ ಸಕಲ ನಿಃಕಲಾತ್ಮಕ ನೀನೆಯಾಗಿ
ಪ್ರಾಣಲಿಂಗವ ಸಾಹಿತ್ಯವ ಮಾಡಿದ ಕಾರಣ.
ಶಿವಶಿವಾ ಎನುತಿಪ್ಪರಯ್ಯಾ,
ವಿಷ್ಣು ಮೊದಲಾದ ತ್ರೈತ್ರಿಂಶತಿಕೋಟಿ ದೇವತೆಗಳು,
ಅವರಿಗೆ ಧರ್ಮಾರ್ಥಕಾಮಮೋಕ್ಷಂಗಳನಿತ್ತೆಯಾಗಿ.
ಹರಹರಾ ಹರಾ ಎನುತಿಪ್ಪರಯ್ಯಾ
ಬ್ರಹ್ಮ ಮೊದಲಾದ ಅಷ್ಟಾಸೀತಿ ಸಹಸ್ರಋಷಿಯರು;
ಅವರಿಗೆ ಸ್ವರ್ಗ ನರಕಾದಿಗಳ ಮಾಡಿದೆಯಾಗಿ,
ಮಹಾದೇವಾ ಮಹಾದೇವಾ ಎನುತಿಪ್ಪರಯ್ಯಾ ದಾನವಾದಿಗಳು;
ಅವರಿಗೆ ಸುಕೃತ ದುಃಕೃತಂಗಳನೀವೆಯಾಗಿ.
ಬಸವಾ ಬಸವಾ ಎನುತಿಪ್ಪರಯ್ಯಾ ಮಹಾಭಕ್ತರು;
ಅವರಿಗೆ ಗುರುಲಿಂಗ ಜಂಗಮ
ಪಾದೋದಕ ಪ್ರಸಾದವ ತೋರಿದ ಕಾರಣ,
ಉಳಿದ ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳೆಲ್ಲ
ನಿಮ್ಮುವನನಿಮಿಷವಾಗಿ ನೋಡುತಿಪ್ಪರಯ್ಯಾ;
ಸಕಲ ನಿಃಕಲಾತ್ಮಕ ಚೈತನ್ಯನಾದೆಯಾಗಿ.

ಸಕಲವೂ ನಿನ್ನಾಧಾರ, ನಿಃಕಲವೂ ನಿನ್ನಾಧಾರ.
ಸಕಲ ನಿಃಕಲದೊಡೆಯ ದೇವರದೇವ ಕಲಿದೇವಾ,
ನಿಮ್ಮ ಕರಸ್ಥಲದ ಹಂಗಿನೊಳಗಿರ್ದ ಕಾರಣ ಸಂಗನಬಸವಣ್ಣ.

೫೩

ಬಸವಣ್ಣನ ಕಿರುಗೊಳಗೇ
ನಾಗಲೋಕದ ನಾಗಗಣಂಗಳೆನಿಸೂದು.
ಬಸವಣ್ಣನ ಜಾನು ಜಂಘೆ[ಯೇ]
ಮರ್ತ್ಯಲೋಕದ [೧೩]ಮಹಾಗ[೧೩]ಣಂಗಳೆನಿಸೂದು.
ಬಸವಣ್ಣನ ನಾಭಿಯೇ
ದೇವಲೋಕದ ದೇವಗಣಂಗಳೆನಿಸೂದು.
ಮೇಲಣ ಘನವ ಹೊಗಳುವರೆ ಎನ್ನಳವಲ್ಲ ಕಲಿದೇವಾ
ಇನ್ನು ಹೊಗಳುವರೆ ನಿನ್ನಳವಲ್ಲವೆ [೧೪]ಬಸವಣ್ಣ[ನ]?[೧೪]

೫೪

ಮಾರಾರಿಯ ಬೆಸನದಿಂದ ಬಸವಣ್ಣ ಧಾರುಣಿಗೆ ಅವತರಿಸಿ,
ಸಾರಾಯ ಸದ್ಭಕ್ತಿಯ ತೋರಿದನು ಶಿವಶರಣರೆಲ್ಲರಿಗೆ,
ಭಕ್ತಿಯ ಸಂಚವ, ಮುಕ್ತಿಯ ಭೇದವನುಪದೇಶಿಸಿದನು,
ಬಸವಣ್ಣ ಶಿವಶರಣರೆಲ್ಲರಿಗೆ.
ನಿತ್ಯಲಿಂಗಾರ್ಚನೆಯೊಳಗೆ ಎನ್ನನಿರಿಸಿ
ರಕ್ಷಿಸಿದಾತ ಬಸವಣ್ಣ ಕಾಣಾ ಕಲಿದೇವಯ್ಯಾ.

೫೫

ಪ್ರಥಮಕಾಲದಲ್ಲಿ ದೇವಗಣ, ಮಹಾಗಣ,
ಕಿನ್ನರಗಣ, ಆಳಾಪಗಣ ಸಹಿತ ಸಂಗನಬಸವಣ್ಣನು.
ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು
ಶಿವಗಣಂಗಳ ಮಾಡಿದಾತ ಬಸವಣ್ಣನು.

೧೩-೧೩ ಮಹಂಗ (ಚೆ) ೧೪-೧೪ ಬಸವಣ್ಣ (ಚೆ)

ಸ್ವರೂಪ ಸಾರಾಯವ ಪದಾರ್ಥವೆಂದಾತ ಬಸವಣ್ಣನು.
ಕಲಿದೇವಯ್ಯಾ, ನಿಮ್ಮ ಶರಣಬಸವಣ್ಣನಿಂತಹ
ಘನಮಹಿಮ ನೋಡಯ್ಯಾ.

೫೬

ಎಲ್ಲಾ ಭಕ್ತಿಯ ಭೇದವನೂ ಎಲ್ಲಾ ಶೀಲದ ಭೇದವನೂ
ಎಲ್ಲಾ ಮಾಟದ ಭೇದವನೂ ಎಲ್ಲಾ ಕೂಟದ ಭೇದವನೂ
ನಾ ನಿಮಗೆ ಬಿನ್ನೈಸುವೆ ಕೇಳಯ್ಯಾ;
ನೀನು ಕರ್ತನಾಗಿ, ನಾನು ಭೃತ್ಯನಾಗಿ ಅವಧರಿಸಯ್ಯಾ.
ಮಹತ್ತಾಗಿ[೧೫]ಹೊಗಳ[೧೫]ಲೆಲ್ಲಿಯದು?
ಎಲ್ಲಾ ಭೇದವನು ಬಸವಣ್ಣ ಮಾಡಿದನು.
ಸಾಧ್ಯಾಸಾಧ್ಯವನು ಬಸವಣ್ಣ ಮಾಡಿದನು.
ಆದಿ ಅನಾದಿಯನು ಬಸವಣ್ಣ ಮಾಡಿದನು.
ಲಿಂಗ ಜಂಗಮವನು ಬಸವಣ್ಣ ಮಾಡಿದನು.
ಎನಗೆ ಸರ್ವಸ್ವಾಯತವನು ಬಸವಣ್ಣ ಮಾಡಿದನು.
ಕಾರಣ, ಆ ಬಸವಣ್ಣಂಗೆ ಶರಣೆಂದು ಬದುಕಿದೆನು
ಕಾಣಾ ಕಲಿದೇವರದೇವಾ.

೫೭

ಮಾಡುವಾತ ಕಲಿದೇವಯ್ಯ.
ಮಾಡಿಸಿಕೊಂಬಾತ ಕಲಿದೇವಯ್ಯ.
ಮಾಡಿ ಮಾಡಿಸಿಕೊಂಬ ಎರಡರ
ಚೈತನ್ಯವೇ ಸಂಗನಬಸವಣ್ಣನು.
ಆ ಸಂಗನಬಸವಣ್ಣನೇ [೧೬]ಸ್ಥೂಲ[೧೬]ವ ನಿರಾಕರಿಸಿ,
ಸೂಕ್ಷ್ಮವ ಕರಸ್ಥಲದಲ್ಲಿ ಅನುಕರಿಸಿ ತೋರಿದನು.
ಆ ಬಸವಣ್ಣನ ನಿಲವ ನೆನದು ಬದುಕಿದೆನು
ಕಾಣಾ ಕಲಿದೇವರದೇವಾ.

೧೫-೧೫ ಹೇಳ (ಹು) ೧೬-೧೬ ಸ್ಥಲ (ಚೆ)

೫೮

ಆದಿಯಲ್ಲಿ ನಿಮ್ಮ ಜಂಗಮವೇ ಲಿಂಗವೆಂಬುದನಾರು ಬಲ್ಲರು ಬಸವಣ್ಣನಲ್ಲದೆ?
ಎಲ್ಲಿ ಸ್ಥಾವರವಿದ್ದಲ್ಲಿ ನೋಡಲಾಗದು; ಮನದಲ್ಲಿ ನೆನೆಯಲಾಗದು.
ಲಿಂಗಕ್ಕಾದರೂ ಜಂಗಮವೇ ಬೇಕು,
ಜಂಗಮವಿಲ್ಲದೆ ಲಿಂಗ ಉಂಟೆ?
ಗುರುವಿಗಾದರೂ ಜಂಗಮವೆ ಬೇಕು,
ಜಂಗಮವಿಲ್ಲದೆ ಗುರು ಉಂಟೆ?
ಆ ಜಂಗಮಕ್ಕಾದರೂ ಜಂಗಮವೆ ಬೇಕು,
ಆ ಜಂಗಮವಿದ್ದಲ್ಲಿಯೆ ಗುರು, ಲಿಂಗ, ಜಂಗಮ,
ಪಾದೋದಕ, ಪ್ರಸಾದ, ಅನುಭಾವ ಸನ್ನಿಹಿತವಾಗಿಹುದು.
ಇಂತಪ್ಪ ಜಂಗಮವೆ ಪ್ರಾಣಲಿಂಗವೆಂದು
ಬಸವಣ್ಣನೆನಗೆ ತೋರಿದನಾಗಿ ಆ ಬಸವಣ್ಣನ ಶ್ರೀಪಾದಕ್ಕೆ
ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು
ಕಾಣಾ ಕಲಿದೇವರದೇವಾ.

೫೯

ಈರೇಳು ಸ್ಥಲ, ಈರೈದು ಸ್ಥಲ, ಅಷ್ಟಸ್ಥಲ,
ನವಸ್ಥಲ, ತ್ರಿವಿಧಸ್ಥಲ, ಚತುರ್ಗ್ರಾಮಸ್ಥಲ,
ಪಂಚವರ್ಣ, ದಶವರ್ಣ, ಸಪ್ತವರ್ಣ,
ಷಡುವರ್ಣ, ಏಕವರ್ಣ ದ್ವಿವರ್ಣ ಸ್ಥಲಂಗಳಲ್ಲಿ ಮುಖವಿಲ್ಲ, ಮುಖವಿಲ್ಲ.
ಪವಿತ್ರಾಂಕಿತಕ್ಕೆ ನೋಡಿ ಮಾಡುವ ಆರಂಭವೇನುಯ್ಯೆದಿದುದಿಲ್ಲ.
ಬಸವನೆ ವಿಸ್ತಾರವೆನಗೆ,
ಬಸವನೆ ನುಡಿ ಎನಗೆ, ಬಸವನೆ ನಡೆ ಎನಗೆ,
ಬಸವನೆ ಗತಿ ಎನಗೆ, ಬಸವನೆ ಮತಿ ಎನಗೆ,
ಬಸವನೆ ಇಹವೆನಗೆ, ಬಸವನೆ ಪರವೆನಗೆ,
ಬಸವನಲ್ಲದೆ ಕಾಣೆ ಕಾಣಾ ಕಲಿದೇವರದೇವಾ.

೬೦

ಲಿಂಗೈಕ್ಯ, ಲಿಂಗವಂತ,
ಲಿಂಗಪ್ರಾಣಿ, ಪ್ರಾಣಲಿಂಗಿಗಳೆಂದೆನಬಹುದು;
ಉದಯಕಾಲ, ಮಧ್ಯಾಹ್ನಕಾಲ, ವಿಚಿತ್ರಕಾಲ, ತ್ರಿಕಾಲ
ಲಿಂಗಾರ್ಚಕರೆಂದೆನಬಹುದು, ಎನಬಹುದು.
ಹೊನ್ನು, ಹೆಣ್ಣು, ಮಣ್ಣು ತ್ರಿವಿಧವ[೧೭]ತೋರಿದ[೧೭]
ನಿಸ್ಪೃಹರೆಂದೆನಬಹುದು, ಎನಬಹುದು
ಧಾರಣೆ, ಪಾರಣೆ, ಒಡಲ ದಂಡಣೆ,
ಕರಣದಂಡಣೆವುಳ್ಳವರೆಂದೆನಬಹುದು, ಎನಬಹುದು.
ಶೀಲವಂತರು, ಸಂಬಂಧಿಗಳು, ಒರತೆಯಗ್ಗಣಿಯ
ನೇಮಿಗಳೆಂದೆನಬಹುದು, ಎನಬಹುದು.
ನೇಮ, ವ್ರತ, ಪಾಕದ್ರವ್ಯವ
ಒಲ್ಲೆವೆಂದೆನಬಹುದು, ಎನಬಹುದು.
ಶುದ್ಧಶೈವ, ಪೂರ್ವಶೈವ,
ವೀರಶೈವವೆಂದೆನಬಹುದು, ಎನಬಹುದು.
ಸರವೇದಿಗಳು, ಶಬ್ದವೇದಿಗಳು,
ಮಹಾನುಭಾವಿಗಳೆಂದೆನಬಹುದು, ಎನಬಹುದು.
ಇಂತಿವರೆಲ್ಲರೂ ಶಿವಪಥದೊಳಗೆ ಮಾಡುತ್ತ ಆಡುತ್ತ ಇದ್ದರಲ್ಲದೆ
ಒಂದರ ಕುಳವು ತಿಳಿಯದು ನೋಡಾ.
ಆ ಒಂದು ದಾಸೋಹದಲ್ಲಿ ಬಸವಣ್ಣನು ಸ್ವತಂತ್ರನಾಗಿ
ಲಿಂಗವು ಬಸವಣ್ಣನ ವೊಡನೊಡನೆ ಆಡುತಿರ್ದನು ನೋಡಾ
ಇದು ಕಾರಣ,
ಬಸವಣ್ಣನ ನಡೆ ಪರುಷ; ಬಸವಣ್ಣನ ನುಡಿ ಪರುಷ
ಬಸವಣ್ಣನ ದೃಷ್ಟಿ ಪರುಷ; ಬಸವಣ್ಣನ ಹಸ್ತ ಪರುಷ.
ಬಸವಣ್ಣನ ಮನ ಪರುಷ; ಬಸವಣ್ಣನ ಭಾವ ಪರುಷ
ತನು, ಮನ, ಧನವ ಗುರು, ಲಿಂಗ, ಜಂಮಕ್ಕೆ
ನಿವೇದಿಸಿದಾತ ಬಸವಣ್ಣ.

೧೭-೧೭ ತೋಟು ಚೆ)

ಮನಃ ಪ್ರಾಣವ ನಿವೇದಿಸಿದಾತ ಬಸವಣ್ಣ.
ಅದು ಕಾರಣ.
ಅಂದಾದಿ ಇಂದಾದಿಯಾಗಿ ಬಸವಣ್ಣನ ನೆನವುದೆ ಲಿಂಗಾರ್ಚನೆ.
ಬಸವಣ್ಣನ ನೆನವುದೆ ಜಂಗಮಾರ್ಚನೆ,
ಬಸವಣ್ಣನ ನೆನೆವುದೆ ಪರತತ್ವ,
ಬಸವಣ್ಣನ ನೆನೆವುದೆ ಪರಮ ಕಲ್ಯಾಣ.
ಕಲಿದೇವಾ ನಿಮ್ಮ ಶರಣ ಸಂಗನಬಸವಣ್ಣನ ನೆನದು
ಸಮಸ್ತಗಣಂಗಳೆಲ್ಲರೂ ಅತಿ ಶುದ್ಧರಾದರಯ್ಯಾ.

೬೧

ಬಸವಣ್ಣನ ನಡೆ ಪರುಷ; ಬಸವಣ್ಣ ನುಡಿ ಪರುಷ.
ಬಸವಣ್ಣನ ದೃಷ್ಟಿ ಪರುಷ; ಬಸವಣ್ಣನ ಹಸ್ತ ಪರುಷ.
ಬಸವಣ್ಣನ ಮನ ಪರುಷ; ಬಸವಣ್ಣನ ಭಾವ ಪರುಷ.
ತನು, ಮನ, ಧನವ ಗುರುಲಿಂಗ ಜಂಗಮಕ್ಕೆ
ನಿವೇದಿಸಿದಾತ ಬಸವಣ್ಣನು.
ಬಸವಣ್ಣನ ನೆನವುದೆ ಲಿಂಗಾರ್ಚನೆ, ಎನಗೆ
ಬಸವಣ್ಣನ ನೆನವುದೆ ಜಂಗಮಾರ್ಚನೆ, ಎನಗೆ.
ಬಸವಣ್ಣನ ನೆನವುದೆ ಪರತತ್ವ, ಎನಗೆ.
ಬಸವಣ್ಣನ ನೆನವುದೆ ಪರಮ ಕಲ್ಯಾಣವೆನಗೆ.
ಕಲಿದೇವನಯ್ಯಾ ನಿಮ್ಮ ಶರಣ ಬಸವಣ್ಣನಿಂತಹ
ಘನಮಹಿಮ ನೋಡಯ್ಯಾ.

೬೨

ಖೇಚರರಾಗಲಿ, ಭೂಚರರಾಗಲಿ,
ಪುರಹರರಾಗಲಿ, ಮಧ್ಯಸ್ಥರಾಗಲಿ,
ಪವನ ದಣಿಯುಂಡವರಾಗಲಿ, ಅಗ್ನಿಪರಿಹರರಾಗಲಿ,
ಖೇಚರರೊಳು ಬಸವನಾಜ್ಞೆ, ಭೂಚರರೊಳು ಬಸವನುತ್ಪತ್ಯ;
ಪುರಹರರೊಳು ಬಸವನ ಮಹಾರತಿ,
ಮಧ್ಯಸ್ಥರೊಳು ಬಸವನೇಕಾಂತನಿವಾಸಿ,

ಪವನದೊಳು ಬಸವ ಹೇಳಿತ್ತ ಕೇಳುವೆ.
ಆಜ್ಞೆಯೊಳು ಬಸವಣ್ಣಂಗೆ ದಾಸೋಹವ ಮಾಡುವೆ.
ಎನ್ನ ನೀಪರಿಯಲ್ಲಿ ನಡಸುವಾತ ಬಸವಣ್ಣ
ಕಾಣಾ ಕಲಿದೇವರದೇವಾ.

೬೩

ಗುರುಸ್ವಾಯತವಾಯಿತ್ತು.
[೧೮]ಎಂಟು[೧೮] ಭಾವಸ್ವಾಯತವಾಯಿತ್ತು.
ಹದಿನಾರು ತೆರದ ಭಕ್ತಿ ಸ್ವಾಯತವಾಯಿತ್ತು.
ಅಷ್ಟವಿಧಾರ್ಚನೆ ಸ್ವಾಯತವಾಯಿತ್ತು.
ತ್ರಿವಿಧದರಿವು ಸ್ವಾಯತವಾಯಿತ್ತು.
ಮಹಲಿಂಗದ ನಿಲವು, ಮಹಾಜಂಗಮದ
ನಿಜವು ಸ್ವಾಯತವಾಯಿತ್ತು.
ಶುದ್ಧ ಪ್ರಸಾದ ತನು ಸ್ವಾಯತವಾಯಿತ್ತು.
ಸಿದ್ಧಪ್ರಸಾದ ಚೈತನ್ಯಸ್ವಾಯತವಾಯಿತ್ತು.
ಪ್ರಸಿದ್ಧ ಪ್ರಸಾದ ಮನ ಸ್ವಾಯತವಾಯಿತ್ತು.
ವಾಮಭಾಗದಲ್ಲಿ ಮಹವು ಉದಯವಾಯಿತ್ತು.
ಶಿವಾಚಾರದಲ್ಲಿ ನಿರವಯ ಉದಯವಾಯಿತ್ತು.
ನಿಜಸ್ಥಾನದಲ್ಲಿ ನಿಂದಿತ್ತು.
ಕ್ಷೀರಕಸ್ಥಾನದಲ್ಲಿ ಸಾರಾಯವಾಯಿತ್ತು.
ಅನುಭಾವದಲ್ಲಿ ಘನಾಗಮವೆನಿಸಿತ್ತು.
ಸ್ವಾನುಭಾವದಲ್ಲಿ ನಿಮ್ಮ ಬಸವಣ್ಣಂಗೆ ಶರಣೆಂದಿತ್ತು.
ನೆಮ್ಮುಗೆವಿಡಿದು ನಿಮ್ಮ ಬಸವಣ್ಣನ ಪ್ರಸಾದವ ಕೊಂಡಿತ್ತು.
ನಿಮ್ಮ ಬಸವಣ್ಣನ ಪ್ರಸಾದದಿಂದ ಇಂತಹ ಘನವು ಸ್ವಾಯತವಾಯಿತ್ತು.
ಬಸವಣ್ಣನಿಂದ ನೀವಾದಿರಾಗಿ ಕಲಿದೇವಾ
ನಿಮ್ಮ ಶರಣ ಸಂಗನಬಸವಣ್ಣನ ಪ್ರಸಾದಕ್ಕೆ
ನಮೋ ನಮೋ ಎನುತಿರ್ದೆನು.

೧೮-೧೮ ಉಂಡು (ಚ)

೬೪

ಆದಿ ಅನಾದಿಗಳಲ್ಲಿ ಸಾಧ್ಯಾಸಾಧ್ಯಾಂಗಳಿಲ್ಲದಂದು,
ಸ್ಥೂಲ ಸೂಕ್ಷ್ಮವೆಂಬ ಮೂರ್ತಿಗಳಿಲ್ಲದಂದು,
ಸಾಕಾರ ನಿರಾಕಾರವೆಂಬ ವಾಕು ಹುಟ್ಟದಂದು,
ಶಂಕರ, ಶಶಿಧರ, ಈಶ್ವರರೆಂಬ ಗಣಾಧೀಶ್ವರರಿಲ್ಲದಂದು,
ಉಮೆಯ ಕಲ್ಯಾಣವಿಲ್ಲದಂದು,
ಶಿವರತಿ, ಮಹಾರತಿ ಬಸವಣ್ಣನಿಂದಾಯಿತ್ತು.
ಸರ್ವವಿಸ್ತೀರ್ಣವ ನಿರಾಕರಿಸಿ
ನಿತ್ಯಲಿಂಗಾರ್ಚನೆಯ ತೋರಿದ ಬಸವಣ್ಣನು.
ಲಿಂಗಾರ್ಚನೆಯಲ್ಲಿ ಪ್ರಸಾದದ ಧ್ಯಾನ.
ಜಂಗಮಾರ್ಚನೆಯಲ್ಲಿ ಪ್ರಸಾದ ಭೋಗೋಪಭೋಗ.
ವೆಂಬುದನು ಬಸವಣ್ಣ ಬಲ್ಲನು.
ಇಂತಹ ಭಕ್ತಿಯ ಕುಳಸ್ಥಳವನರಿಯದೆ
ಎಲ್ಲರೂ ಎಂದಂತೆಯೆಂದರು, ಬಂದಲ್ಲಿ ಬಂದರು.
ಇದ ನಿರಾಕರಿಸಿ ಜಂಗಮವೆ ಲಿಂಗವೆಂದು
ಸಂಗಸಾಹಿತ್ಯವಾದ ಬಸವಣ್ಣನು.
ಬಸವಣ್ಣನಿಂತಹ ನಿತ್ಯನಯ್ಯಾ ಕಲಿದೇವರದೇವಾ.

೬೫

ಬ್ರಹ್ಮನ ಹೆಂಡತಿಯ ಹಿಡಿತಂದು ಅಡಿಗೆಯ ಮಾಡಿಸಿದಾತ ಬಸವಣ್ಣ.
ಹರಿಯ ಸಾಸಿರದೇಳ್ನೂರು ಕುಮಾರಿಯರ ತಂದಾತ ಬಸವಣ್ಣ.
ರುದ್ರಗಣಂಗಳು ಬಸವಣ್ಣಂಗೆ ಸೇವೆಯ ಮಾಡುವರು.
ಈ ಬಸವಣ್ಣಂಗೆ ಪ್ರಸಾದವೆಲ್ಲಿಯದು ಹೇಳಾ ಕಲಿದೇವರದೇವಾ.

೬೬

ಹುಲಿಯ ಕೊಂದು, ಲಿಂಗಕ್ಕೆ ಬೋನವ ಮಾಡಿದಾತ ಬಸವಣ್ಣ.
ಕರಡಿಯ ಕೊಂದು, ಲಿಂಗಕ್ಕೆ ಮೇಲೋಗರವ ಮಾಡಿದಾತ ಬಸವಣ್ಣ.

ಹಾವಿನ ಪರಿ[೧೯]ಯಾ[೧೯]ಣವ ಮಾಡಿಕೊಡಬಲ್ಲಾತ ಬಸವಣ್ಣ
ಕಾಣಾ ಕಲಿದೇವರದೇವಾ.

೬೭

ಶಬ್ದ, ಸ್ಪರ್ಶ, ರೂಪು, ರಸ, ಗಂಧ,
ವಿಷಯ ಸಂಗತಿ[೨೦]ಗಳಾವಾ[೨೦]ವೆಂದಡೆ:
ಶಬ್ದ ಗುರು, ಸ್ಪರ್ಶನ ಲಿಂಗ, ರೂಪು ಶಿವಲಾಂಛನ,
ರಸ ಶಿವಪ್ರಸಾದ, ಗಂಧ ಶಿವಾನುಭಾವ,
ಇಂತಿವನರಿದು ಮಾಡಬಲ್ಲ ನಮ್ಮ ಬಸವಣ್ಣನು.
ಮನ, ಬುದ್ಧಿ, ಚಿತ್ತಹಂಕಾರಂಗಳಾವಾವವೆಂದಡೆ:
ಮನ ಧ್ಯಾನ, ಬುದ್ಧಿ ವಂಚನೆಯಲ್ಲದಿಹುದು,
ಚಿತ್ತ ದಾಸೋಹ, ಅಹಂಕಾರ ಶಿವಜ್ಞಾನ,
ಇಂತಿವರಲ್ಲಿ ಸನ್ನಿಹಿತ ನಮ್ಮ ಬಸವಣ್ಣನು.
ಸತ್ವ, ರಜ, ತಮಂಗಳಾವಾವವೆಂದಡೆ;
ಸತ್ವ ಶುದ್ಧ, ರಜ ಸಿದ್ಧ, ತಮ ಪ್ರಸಿದ್ಧ
ಇಂತೀ ತ್ರಿವಿಧದಲ್ಲಿ ಸಂಪನ್ನನು ನಮ್ಮ ಬಸವಣ್ಣನು
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳಾವಾವವೆಂದಡೆ:
ಕಾಮ ಪೂಜೆ, ಕ್ರೋಧ ಅನಿಮಿಷ, ಲೋಭ ಭಕ್ತಿ,
ಮೋಹ ಅಷ್ಟವಿಧಾರ್ಚನೆ, ಮದ ನಿರಹಂಭಾವ, ಮತ್ಸರ ಭವಂನಾಸ್ತಿ,
ಇಂತಿವರಲ್ಲಿ ನಿಪುಣನು ನಮ್ಮ ಬಸವಣ್ಣನು.
ಮಹಾದೇವನು [೨೧]ನಮ್ಮ[೨೧] ಬಸವಣ್ಣನು.
ಮಹಾಲಿಂಗವು [೨೧]ನಮ್ಮ[೨೧] ಬಸವಣ್ಣನು.
ನಮ್ಮ ಬಸವಣ್ಣಂಗೆ ಮತ್ತೇನನೂ ಪ್ರತಿಗಾಣೆ
ಕಾಣಾ ಕಲಿದೇವರದೇವಾ.

೬೮

ಸುಖವೊಂದು ಕೋಟಿ ಬಂದಲ್ಲಿ ಬಸವಣ್ಣನ ನೆನವುದು.
ದುಃಖವೊಂದು ಕೋಟಿ ಬಂದಲ್ಲಿ ಬಸವಣ್ಣನ ನೆನವುದು.

೧೯-೧೯ ಮಾ (ಹು) ೨೦-೨೦ ಯವಾವಾವ(ಚೆ) ೨೧-೨೧ x (ಚೆ)

ಲಿಂಗಾರ್ಚನೆಯ ಮಾಡುವಲ್ಲಿ ಬಸವಣ್ಣನ ನೆನೆವುದು.
ಜಂಗಮಾರ್ಚನೆಯ ಮಾಡುವಲ್ಲಿ ಬಸವಣ್ಣನ ನೆನವುದು,
ಬಸವಣ್ಣನ ನೆನೆದಲ್ಲದೆ ಎನಗೆ ಭಕ್ತಿಯಿಲ್ಲವೆಂದು,
ನಾನು ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎನುತಿರ್ದೆನು
ಕಾಣಾ ಕಲಿದೇವರದೇವಾ.

೬೯

ನೆನವೆನಯ್ಯಾ ಬಸವಣ್ಣಾ,
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವಾಹನ್ನಕ್ಕ.
ನೋಡುವೆನಯ್ಯಾ ಬಸವಣ್ಣಾ,
ನಿಮ್ಮ ಮೂರ್ತಿ ಎನ್ನನವಗವಿಸುವನ್ನಕ್ಕ.
ಪೂಜಿಸುವೆನಯ್ಯಾ ಬಸವಣ್ಣಾ,
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ.
ನಿಮ್ಮ ಆಹ್ವಾನಿಸುವೆನಯ್ಯಾ ಬಸವಣ್ಣಾ,
ಅನಿಮಿಷ ನಿಮಿಷ ನಿಮಿಷಗಳಿಲ್ಲವೆಂದೆನಿಸುವನ್ನಕ್ಕ
ನಿಮ್ಮ ಧ್ಯಾನಿಸುವೆನಯ್ಯಾ ಬಸವಣ್ಣಾ.
ಜ್ಞಾನಾಜ್ಞಾನವಿಲ್ಲವೆನಿಸುವನ್ನಕ್ಕ.
ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣಾ,
ಅಹಂ ಸೋಹಮೆಂಬ ಶಬ್ದವುಳ್ಳನ್ನಕ್ಕ.
ಬಸವಣ್ಣಾ ಎಂದು ಹಾಡುವೆನಯ್ಯಾ,
ಎನ್ನ ತನುವಿನ ಗಮನ ನಿರ್ಗಮನವಾಹನ್ನಕ್ಕ.
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎನುತಿರ್ದೆನಯ್ಯಾ,
ಕಲಿದೇವರದೇವನೆಂಬ ಶಬ್ದವುಳ್ಳನ್ನಕ್ಕ.

೭೦

ಅಯ್ಯಾ ನಿಮ್ಮ ಧ್ಯಾನದಲ್ಲಿ ಇರಿಸಲೊಲ್ಲದೆ
ಬಸವಣ್ಣನ ಧ್ಯಾನದಲ್ಲಿ ಇರಿಸಯ್ಯಾ, ಎನ್ನನು.
ಲಿಂಗವೇದ್ಯನು ಬಸವಣ್ಣನು.
ಜಂಗಮವೇದ್ಯನು ಬಸವಣ್ಣನು.

ಪ್ರಸಾದವೇದ್ಯನು ಬಸವಣ್ಣನು.
ನಿಜಪದವೇದ್ಯನು ಬಸವಣ್ಣನು.
ಮಹಾವೇದ್ಯನು ಬಸವಣ್ಣನು.
ಇಂತು ಬಸವಣ್ಣನ ಸಂಗದಲ್ಲಿರಿಸು ಕಲಿದೇವರದೇವಾ.

೭೧

ಗುರುವಾದಡೂ ಬಸವಣ್ಣನಿಲ್ಲದೆ ಗುರುವಿಲ್ಲ.
ಲಿಂಗವಾದಡೂ ಬಸವಣ್ಣನಿಲ್ಲದೆ ಲಿಂಗವಿಲ್ಲ.
ಜಂಗಮವಾದಡೂ ಬಸವಣ್ಣನಿಲ್ಲದೆ ಜಂಗಮವಿಲ್ಲ
ಪ್ರಸಾದವಾದಡೂ ಬಸವಣ್ಣನಿಲ್ಲದೆ ಪ್ರಸಾದವಿಲ್ಲ.
ಅನುಭಾವವಾದಡೂ ಬಸವಣ್ಣನಿಲ್ಲದೆ ನುಡಿಯಲಾಗದು.
ಇಂತು,
ಸಂಗಿಸುವಲ್ಲಿ, ನಿಜ ಸಂಗಿಸುವಲ್ಲಿ, ಸುಸಂಗಿಸುವಲ್ಲಿ, ಮಹಾಸಂಗಿಸುವಲ್ಲಿ,
ಪ್ರಸಾದ ಸಂಗಿಸುವಲ್ಲಿ ಕಲಿದೇವಾ
ನಿಮ್ಮ ಶರಣ ಬಸವಣ್ಣನ ನಿಲವು.

೭೨

ಎತ್ತೆತ್ತ ನೋಡಿದರೆ ಅತ್ತತ್ತ ಬಸವನೆಂಬ ಬಳ್ಳಿ.
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು,
ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯಾ,
ಆಯತವು ಬಸವಣ್ಣನಿಂದ, ಸ್ವಾಯತವು ಬಸವಣ್ಣನಿಂದ,
ಸನ್ನಿಹಿತವು ಬಸವಣ್ಣನಿಂದ.
ಗುರುವು ಬಸವಣ್ಣನಿಂದ, ಲಿಂಗವು ಬಸವಣ್ಣನಿಂದ,
ಜಂಗಮವು ಬಸವಣ್ಣನಿಂದ.
ಪಾದೋದಕವು ಬಸವಣ್ಣನಿಂದ, ಪ್ರಸಾದವು ಬಸವಣ್ಣನಿಂದ
ಅತ್ತ ಬಲ್ಲರೆ ನೀವು [೨೨]ಹೇಳಿರೆ,[೨೨] ಇತ್ತ ಬಲ್ಲರೆ ನೀವು ಕೇಳಿರೆ,
ಬಸವಾ, ಬಸವಾ, ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ
ಶೂನ್ಯ ಕಾಣಾ ಕಲಿದೇವರದೇವಾ.

೨೨-೨೨ ತೋರಿಕೆ ಹೇಳಿಕೆ (ಚೆ)

೭೩

ಎನ್ನ ಕಾಯ ಬಸವಣ್ಣನ ಪೂಜಿಸಲಿಕಾಯಿತ್ತು.
ಎನ್ನ ಜೀವ ಬಸವಣ್ಣನ ನೆನೆಯಲಿಕಾಯಿತ್ತು.
ಎನ್ನ ಶ್ರೋತ್ರ ಬಸವಣ್ಣನ ಚಾರಿತ್ರವ ಕೇಳಲಿಕಾಯಿತ್ತು.
ಎನ್ನ ಪ್ರಾಣ ಬಸವಣ್ಣ[ನ] ಸ್ತುತಿಸಲಿಕಾಯಿತ್ತು.
ಎನ್ನ ನೇತ್ರ ಬಸವಣ್ಣನ ಸರ್ವಾಂಗವ ನೋಡಲಿಕಾಯಿತ್ತು.
ಇಂತೆನ್ನ ಪಂಚೇಂದ್ರಿಯಂಗಳು ಕಲಿಗಳಾಗಿ
ಬಸವಣ್ಣನ ಹಿಡಿಯಲಿಕಾಯಿತ್ತು.
ಬಸವಣ್ಣನ ಅರಿವಿನೊಳಗೆ ನಾನಿದ್ದೆನು.
ಬಸವಣ್ಣನ ಮರಹಿನೊಳಗೆ ನಾನಿದ್ದೆನು,
ಕಾಣಾ ಕಲಿದೇವರದೇವಾ.

೭೪

ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ.
ಎನ್ನ ಸೂಕ್ಷ್ಮ ತನುವಿಂಗೆ [೨೩]ಪ್ರಾಣ[೨೩] ಲಿಂಗವಾದಾತ ಬಸವಣ್ಣ.
ಎನ್ನ ಕಾರಣತನುವಿಂಗೆ ಭಾವಲಿಂಗವಾದಾತ ಬಸವಣ್ಣ.
ಎನ್ನ ದೃಕ್ಕಿಂಗೆ ಇಷ್ಟಲಿಂಗವಾದಾತ ಬಸವಣ್ಣ.
ಎನ್ನ ಮನಕ್ಕೆ ಪ್ರಾಣಲಿಂಗವಾದಾತ ಬಸವಣ್ಣ.
ಎನ್ನ ಭಾವಕ್ಕೆ ತೃಪ್ತಿಲಿಂಗವಾದಾತ ಬಸವಣ್ಣ.
ಎನ್ನ ನಾಸಿಕಕ್ಕೆ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಜಿಹ್ವೆಗೆ ಗುರುಲಿಂಗವಾದಾತ ಬಸವಣ್ಣ.
ಎನ್ನ ನೇತ್ರಕ್ಕೆ ಶಿವಲಿಂಗವಾದಾತ ಬಸವಣ್ಣ.
ಎನ್ನ ತ್ವಕ್ಕಿಂಗೆ ಜಂಗಮಲಿಂಗವಾದಾತ ಬಸವಣ್ಣ.
ಎನ್ನ ಶ್ರೋತ್ರಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ಹೃದಯಕ್ಕೆ ಮಹಾಲಿಂಗವಾದಾತ ಬಸವಣ್ಣ.
ಎನ್ನ ಸುಚಿತ್ತವೆಂಬ [೨೪]ಹಸ್ತ[೨೪]ಕ್ಕೆ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಸುಬುದ್ಧಿ ಎಂಬ ಹಸ್ತಕ್ಕೆ ಗುರುಲಿಂಗವಾದಾತ ಬಸವಣ್ಣ.

೨೩-೨೩ ಪ್ರಣವ(ಚೆ) ೨೪-೨೪ ಸಹಸ್ರ (ಚೆ)

ಎನ್ನ ನಿರಹಂಕಾರವೆಂಬ ಹಸ್ತಕ್ಕೆ ಶಿವಲಿಂಗವಾದಾತ ಬಸವಣ್ಣ.
ಎನ್ನ ಸುಮನವೆಂಬ ಹಸ್ತಕ್ಕೆ ಜಂಗಮಲಿಂಗವಾದಾತ ಬಸವಣ್ಣ.
ಎನ್ನ ಸುಜ್ಞಾನವೆಂಬ ಹಸ್ತಕ್ಕೆ ಮಹಾಲಿಂಗವಾದಾತ ಬಸವಣ್ಣ.
ಎನ್ನ ಆಧಾರಚಕ್ರದಲ್ಲಿ ಆಚಾರಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
[೨೫]ಎನ್ನ ಸ್ವಾದಿಷ್ಠಾನಚಕ್ರದಲ್ಲಿ ಗುರುಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ[೨೫]
ಎನ್ನ ಮಣಿಪೂರಕಚಕ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಅನಾಹತಚಕ್ರದಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ವಿಶಿದ್ಧಿಚಕ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಆಜ್ಞಾಚಕ್ರದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಬ್ರಹ್ಮರಂಧ್ರದಲ್ಲಿ ನಿಃಕಲಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಪಶ್ಚಿಮಚಕ್ರದಲ್ಲಿ ನಿರಂಜನಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ವದನಕ್ಕೆ ಓಂಕಾರವಾದಾತ ಬಸವಣ್ಣ.
ಎನ್ನ ಬಲದ ಭುಜಕ್ಕೆ ನಕಾರವಾದಾತ ಬಸವಣ್ಣ.
ಎನ್ನ ಎಡದ ಭುಜಕ್ಕೆ ಮಕಾರವಾದಾತ ಬಸವಣ್ಣ.
ಎನ್ನ ಒಡಲಿಂಗೆ ಶಿಕಾರವಾದಾರ ಬಸವಣ್ಣ.
ಎನ್ನ ಬಲದ ಪಾದಕ್ಕೆ ವಕಾರವಾದಾತ ಬಸವಣ್ಣ.
ಎನ್ನ ಎಡದ ಪಾದಕ್ಕೆ ಯಕಾರವಾದಾತ ಬಸವಣ್ಣ.
ಎನ್ನ ಆಪಾದಮಸ್ತಕ ಪರಿಯಂತರ
ಮಂತ್ರರೂಪಕ ಸಂಬಂಧವಾದಾತ ಬಸವಣ್ಣ.
ಎನ್ನ ನಾದಕ್ಕೆ ಅಕಾರವಾದಾತ ಬಸವಣ್ಣ.
ಎನ್ನ ಬಿಂದುವಿಂಗೆ ಉಕಾರವಾದಾತ ಬಸವಣ್ಣ.
ಎನ್ನ ಕಳೆಗೆ ಮಕಾರವಾದಾತ ಬಸವಣ್ಣ.
ಎನ್ನ ರುಧಿರಕ್ಕೆ ನಕಾರವಾದಾತ ಬಸವಣ್ಣ.
ಎನ್ನ ಮಾಂಸಕ್ಕೆ ಮಕಾರವಾದಾತ ಬಸವಣ್ಣ.
ಎನ್ನ ಮೇದಸ್ಸಿಂಗೆ ಶಿಕಾರವಾದಾತ ಬಸವಣ್ಣ.
ಎನ್ನ ಅಸ್ಥಿಗೆ ವಕಾರವಾದಾತ ಬಸವಣ್ಣ.

೨೫–೨೫ ಈ ವಾಕ್ಯವನ್ನು ಸಂಕೇತದೊಂದಿಗೆ ಕೆಳಮಗ್ಗಲು ಬರೆಯಲಾಗಿದೆ(ಚೆ)

ಎನ್ನ ಮಜ್ಜೆಗೆ ಯಕಾರವಾದಾತ ಬಸವಣ್ಣ.
ಎನ್ನ ಸರ್ವಾಂಗಕ್ಕೆ ಓಂಕಾರವಾದಾತ ಬಸವಣ್ಣ.
ಇಂತು ಬಸವಣ್ಣನೆ ಪರಿಪೂರ್ಣನಾಗಿ,
ಬಸವಣ್ಣನೆ ಪ್ರಾಣವಾಗಿ, ಬಸವಣ್ಣನೆ ಅಂಗವಾಗಿ
ಬಸವಣ್ಣನೆ ಲಿಂಗವಾದ ಕಾರಣ, ನಾನು
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎಂದು ಬಯಲಾದೆನು
ಕಾಣಾ ಕಲಿದೇವರದೇವಾ.

೭೫

ಪೃಥ್ವಿಯ [೨೬]ಚಿತ್ತದ[೨೬] ಪಂಚಕರ್ಮೇಂದ್ರಿಯಂಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಅಪ್ಪುವಿನ ಬುದ್ಧಿಯ ಪದಾರ್ಥಂಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಅಗ್ನಿಯ ಅಹಂಕಾರ ಪಂಚೇಂದ್ರಿಯಂಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ವಾಯುವಿನ ಮನದ ಪಂಚಪ್ರಾಣವಾಯುಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಆಕಾಶದ ಸುಜ್ಞಾನದ ಜ್ಞಾನಂಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಆತ್ಮನ ಪರಮಾತ್ಮನ ಹಸ್ತಂಗಳೈದೂ
ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಇಂತಿವೆಲ್ಲವೂ ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಕಲಿದೇವಾ ನಿಮ್ಮ ಶರಣ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೭೬

ಎನ್ನ ಚಿನ್ನಾದಮಯವ ಗುರುವೆಂದೆನಿಸಿದ ಬಸವಣ್ಣ.
ಎನ್ನ ಚಿದ್ಬಿಂದುವಿನ ಇರವ ಲಿಂಗವೆಂದೆನಿಸಿದ ಬಸವಣ್ಣ.

೨೬–೨೬ X (ಚೆ)

ಎನ್ನ ಚಿತ್ತಕಳೆಯಂಬರವ ಜಂಗಮವೆಂದೆನಿಸಿದ ಬಸವಣ್ಣ.
ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ ಸಿದ್ಧ, ಜಂಗಮದಲ್ಲಿ ಪ್ರಸಿದ್ಧ,
ಇಂತೀ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದದಲ್ಲಿ ಎನ್ನ ಉಣಕಲಿಸಿದ ಕಲಿದೇವಾ
ನಿಮ್ಮ ಶರಣ ಸಂಗನಬಸವಣ್ಣನು.

೭೭

ಎನ್ನ ತನು ಶುದ್ಧವಾಯಿತ್ತು,
ಬಸವಣ್ಣನ ಶುದ್ಧ ಪ್ರಸಾದವ ಕೊಂಡೆನಾಗಿ.
ಎನ್ನ ಮನ ಶುದ್ಧವಾಯಿತ್ತು.
ಬಸವಣ್ಣನ ಸಿದ್ಧಪ್ರಸಾದವ ಕೊಂಡೆನಾಗಿ.
ಎನ್ನ ಭಾವ ಶುದ್ಧವಾಯಿತ್ತು.
ಬಸವಣ್ಣ ಪ್ರಸಿದ್ಧ ಪ್ರಸಾದವ ಕೊಂಡನಾಗಿ.
ಇಂತೆನ್ನ ತನು, ಮನ, ಭಾವಂಗಳು
ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದದಲ್ಲಿ ಶುದ್ಧವಾದವು.
ಕಲಿದೇವಾ ನಿಮ್ಮ ಶರಣ ಬಸವನಿಂತಹ
ಘನಮಹಿಮ ನೋಡಯ್ಯಾ.

೭೮

ಎನ್ನ ತನು ಶುದ್ಧವಾಯಿತ್ತು, ಬಸವಣ್ಣಾ ನಿಮ್ಮ ಧರ್ಮದಿಂದ.
ಎನ್ನ ಮನ ಶುದ್ಧವಾಯಿತ್ತು, ಬಸವಣ್ಣಾ ನಿಮ್ಮ ಧರ್ಮದಿಂದ.
ಎನ್ನ ಪ್ರಾಣ ಶುದ್ಧವಾಯಿತ್ತು, ಬಸವಣ್ಣಾ ನಿಮ್ಮ ಧರ್ಮದಿಂದ.
ಇಂತೀ ಎನ್ನ ತನು ಮನ ಪ್ರಾಣಂಗಳು ಶುದ್ಧವಾದವು ಕಲಿದೇವಾ
ನಿಮ್ಮ ಶರಣ ಸಂಗನಬಸವಣ್ಣನ ಧರ್ಮದಿಂದ.

೭೯

ಬಸವಣ್ಣನ ನೆನೆದೆನ್ನ ತನು [೨೭]ಬಯಲಾ[೨೭]ಯಿತ್ತು.
ಬಸವಣ್ಣನ ನೆನದೆನ್ನ ಮನ [೨೮]ಬಯಲಾ[೨೮]ಯಿತ್ತು.

೨೭-೨೭ ಹಾಳಾ (ಚೆ) ೨೮-೨೮ ಹಾಳಾ

ಬಸವಣ್ಣನ ನೆನದೆನ್ನ ಭಾವ ಬಯಲಾಯಿತ್ತು.
ಕಲಿದೇವಯ್ಯ ನಿಮ್ಮ ಶರಣ, ಮಹಾಮಹಿಮ
ಸಂಗನಬಸವಣ್ಣನ ನೆನದು ನೆನದು
ಎನ್ನ ಸರ್ವಾಂಗವು ಲಿಂಗವಾಯಿತ್ತೆಂದರಿದೆನಯ್ಯಾ.

೮೦

ಬಿಂದುವ ಹರಿದು, ನಾದವನತಿಗಳದು, ಕಳೆಯ ಬೆಳಗ ಸಾಧಿಸಿ,
ಅಸಾಧ್ಯ ಸಾಧಕನಾದೆಯಲ್ಲಾ ಬಸವಣ್ಣಾ.
ಕಾಯವ ಹೊದ್ದದ, ಮಾಯವ ಸೋಂಕದೆ
ನಿರಾಳದಲ್ಲಿ ನಿಂದೆಯಲ್ಲಾ ಬಸವಣ್ಣಾ.
ನೀನೆನ್ನನವಗ್ರಹಿಸಿ, ನಾನಿನ್ನನವಗ್ರಹಿಸಿ
ಸಂದು ಭೇದವಿಲ್ಲದಿಪ್ಪಲ್ಲಿ [೨೯]ಹೊಗ[೨೯]ಲಿಂಬುಂಟೆ ಬಸವಣ್ಣನ?
ನಿನ್ನಿಂದ ಕಂಡೆನು ಕಾಣಾ ಸಂಗನಬಸವಣ್ಣಾ.

೮೧

ಬಿಂದುವ ಹರಿದೆಯಲ್ಲಾ ಬಸವಣ್ಣಾ.
ನಾದವ ಸಿಂಹಾಸನವ ಮಾಡಿಕೊಂಡೆಯಲ್ಲಾ ಬಸವಣ್ಣಾ.
ಅಷ್ಟಗುಣಂಗಳ ನಷ್ಟವ ಮಾಡಿದೆಯಲ್ಲಾ ನಿಜಲಿಂಗ ಬಸವಯ್ಯ.
ಭಕ್ತಿಯ ರೂಪುಗೆಟ್ಟು ಮತ್ತೊಂದು ರೂಪಾದೆಯಲ್ಲಾ ನಿರೂಪು ಬಸವಯ್ಯ.
ಶುಕ್ಲ ಶ್ರೋಣಿತದಿಂದಾದ ಕಾಯ ಎತ್ತ ಹೋಯಿತ್ತೋ [೩೦]ಘನ[೩೦]ಲಿಂಗ ಬಸವಯ್ಯ.
ಮೂರ್ತನಲ್ಲದ ಅಮೂರ್ತನಲ್ಲದ ಲಿಂಗವ ತೋರಿದೆಯಲ್ಲಾ ಬಸವಣ್ಣ ಗುರುವೆ.
ಯೋನಿಜನಲ್ಲದ, ಅಯೋನಿಜನಲ್ಲದ ಭಕ್ತಿಯ ಹರಹಿದೆಯಲ್ಲಾ ಬಸವಣ್ಣ ತಂದೆ.
ಬೆಳಗನುಟ್ಟು ಬಯಲಾದನು ನಮ್ಮ ಬಸವಣ್ಣನು.
ನಿರಾಕಾರವಾದನು ನಮ್ಮ ಬಸವರಾಜನು.
ನಿರವಯವಾದನು ನಮ್ಮ ಬಸವಿದೇವನು.
ನಿರಾಲಂಬವಾದನು ನಮ್ಮ ಬಸವಯ್ಯನು.
ಇದು ಕಾರಣ, ನಾನು
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎಂದೆನಲಮ್ಮೆನು.

೨೯-೨೯ ಹೊಗಳ (ಚೆ) ೩೦-೩೦ x (ಚೆ)

ಎನ್ನ ವಾಙ್ಮನಕ್ಕೆ ಅಗೋಚರವಾದನಾಗಿ,
ಆ ಬಸವಣ್ಣನ ಹಿಂದುಗೊಂಡು ಹೋಹ
ಪಥವನೇ ತೋರು ಕಂಡಾ, ಕಲಿದೇವರದೇವಾ.

೮೨

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣಾ.
ಮೆಟ್ಟಿದ ಕೆರಹ ಕಳದು ಹೋದಾತ ನೀನಲಾ ಬಸವಣ್ಣಾ.
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣಾ.
ಸೀಮೆ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣಾ.
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣಾ.
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ
ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣಾ.
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣಾ.
ಆ ಬಸವಣ್ಣಂಗೆ ಶರಣೆಂಬ ಪಥವನೇ ತೋರು ಕಂಡಾ, ಕಲಿದೇವರದೇವಾ.

೮೩

ನಿನ್ನಾಕಾರ ನಿಕಾರವಾಯಿತಲ್ಲಾ ಬಸವಣ್ಣಾ.
ನಿನ್ನ ಪ್ರಾಣ ನಿಃಪ್ರಾಣವಾಯಿತಲ್ಲಾ ಬಸವಣ್ಣಾ.
ಲಿಂಗ ಜಂಗಮದ ಮಾಟ ಸಮರ್ಪಿತವಾಯಿತಲ್ಲಾ ಬಸವಣ್ಣಾ.
ನಿಃಶಬ್ದವೇದ್ಯವಾದೆಯಲ್ಲಾ ಬಸವಣ್ಣಾ
ಕಲಿದೇವರದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣಾ

೮೪

ನೆನವೆನಯ್ಯಾ ಲೋಹ ಪರುಷದ ಸಂಗದಂತಾಯಿತ್ತಾಗಿ
ಬಸವಣ್ಣಾ ಬಸವಣ್ಣಾ ಎಂಬ ಶಬ್ದದೊಳಗೆ–
ಎನ್ನ ಗಮನ ನಿರ್ಗಮನವಾಯಿತ್ತು.
ಬಸವಾ ಎಂದೆನ್ನೆನಯ್ಯಾ ಕಲಿದೇವರದೇವಾ
ಕಿಡಿಗೊಂಡ ಅರಗಿನ ಸಂಗದಂತಾಯಿತ್ತಾಗಿ.

*

ಸಿದ್ಧರಾಮ

೮೫

ದೇವಿಯರಿಬ್ಬರಿಲ್ಲದಂದು, ಪ್ರಧಾನಿ ಮಂತ್ರಿಗಳಿಲ್ಲದಂದು,
ಆರಾರೂ ಇಲ್ಲದಂದು, ನೀನನಾದಿಮುಖಶೂನ್ಯನಯ್ಯಾ;
ಅರ್ಥಾಂತ ಅನ್ವಯಕ್ಕೆ ನೀ ಮೂಲಿಗನೆಂದೆಂಬೆ;
ನಿನ್ನೊಡನೆ ಬಂದಾತ ಬಸವಣ್ಣ.
ನೀನು ತಮಂಧದಲ್ಲಿ ಜ್ಞಾನಭಾಸ್ಕರ ದೀಪ್ತಿಯಿಂ ಪ್ರವೇಶಿಸಲು ಪಟ್ಟಡೆ
ನಿನ್ನ ದೀಪ್ತಿಯಿಂ ಪ್ರವೇಶಿಸಲು ಪಟ್ಟಾತ ಬಸವಣ್ಣ.
ನೀ ಸಕಲವನು, ನಿಃಕಲವನು; ಪ್ರಾಪಂಚಿಕವನು, ತಾತ್ಪರ್ಯವನು
ಮಾಡುವಾಗ ನೀನೆ ಎಂದೆಂಬೆ; ಅದು ಬಸವಣ್ಣನನುಮತ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನೀನನಾದಿ ಮೂಲದೊಡೆಯನೆಂದೆಂಬೆ,
ನಿಮ್ಮ ಬಲ್ಲಾತ ಬಸವಣ್ಣ.
ಗುರುಲಿಂಗಜಂಗಮತ್ರಯ ಬಸವಣ್ಣನಂಶಿಕವು.

೮೬

ಅಣ್ಣನ ನೋಡಿರೆ ಲೋಕಕ್ಕೆ
ಜಗದ ಕಣ್ಣ ಮದವ ಕಳೆದನು.
ಮುಕ್ಕಣ್ಣನಿಪ್ಪೆಡೆಯ ತೋರಿದನು.
ಅಣ್ಣನು ಬಸವಣ್ಣನು ವಾಙ್ಮನಕ್ಕಗೋಚರನು.
ಮುಕ್ಕಣ್ಣನ ಅವತಾರಂಗಳ ನಾಟಕವೆಂದರಿದು
ಮೆರೆದ ಸತ್ಯ, ಶುದ್ಧ, ನಿರ್ಮಲ ಕೈವಲ್ಯ.
ವಾಙ್ಮನಕ್ಕಗೋಚರ ಬಸವಣ್ಣನು.
ಅಣ್ಣಾ, ನಿಮ್ಮಿಂದ ಶುದ್ಧವ ಕಂಡೆನು.
ಸಿದ್ಧವ ಕಂಡೆನು, ಪ್ರಸಿದ್ಧವ ಕಂಡೆನು.
ಆರರಲಿ ಆಂದೋಳವಾದೆನು.
ಆರು ವ್ರತದಲ್ಲಿ ನಿಪುಣನಾದೆನು,

ಒಂದು ಮೂರಾಗಿ, ಮೂರೊಂದಾರಾಗಿ
ತೋರಿದ ಗುಣವಿಂತುಟಯ್ಯಾ ಬಸವಣ್ಣ.
ಎನಗೆ ಅಧಿಕೃವಪ್ಪುದೊಂದು ಅರಿದಿಲ್ಲ.
ನಾನಿನ್ನು ಉರವಣಿಸಿ ಹರಿವೆ;
ಹರಿದು ಭರದಿ ಗೆಲುವೆ.
ತತ್ವ ಮೂವತ್ತಾರರ ಮೇಲೆ ತತ್ವಮಸಿಯನ್ನೈದುವೆ.
ಬಸವಣ್ಣನ ಪ್ರಸಾದದಿಂದ ಅರಿದಪ್ಪುದೊಂದೂ ಇಲ್ಲ.

೮೭

ಲೋಕ ಲೌಕಿಕಿಗಳು ನೀವು ಕೇಳಿರೆ;
ಏಕೈಕ ರುದ್ರನ ಆಕಾರವರಿದೆವೆಂಬಿರಿ
ನೋಡಿ ನಚ್ಚಿರೆ ಶಿವನು ಬಸವಣ್ಣನಾದ.
ನೋಡಿ ಮಚ್ಚಿರೆ ಶಿವನು ಬಸವಣ್ಣನಾದ.
ಬಸವಣ್ಣ ಗುರುವಾದ, ಬಸವಣ್ಣ ಲಿಂಗವಾದ, ಬಸವಣ್ಣ ಜಂಗಮವಾದ,
ಬಸವಣ್ಣ ಪರಿಣಾಮ ಪ್ರಸನ್ನ [೩೧]ಪರ[೩೧]ವಾದ.
ಬಸವಣ್ಣ ಮೂಲತ್ರಯವಾದ.
ಬಸವಣ್ಣ ಭಕ್ತಿ ಎರಡು ತ್ರಯವಾದ.
ಬಸವಣ್ಣ ಆರೂರಿಂದ ಮೇಲೆ ತೋರಿದ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.
ಬಸವಣ್ಣನ ಪ್ರಸಾದದಿಂದ ಭವಂ ನಾಸ್ತಿಯಾಗಿ ಬದುಕಿದೆನು.

೮೮

ಜಲದಲುದ್ಭವಿಸಿ[೩೨]ದ ಮುತ್ತು[೩೨] ಜಲವು ತಾನಲ್ಲ.
ಜಲವೆಂದಿಪ್ಪರೀಲೋಕದ ಮನುಜರು.
ಪರಮಗುರು ಬಸವಣ್ಣ ಜಗವ ಪಾಲಿಸ ಬರಲು
ಎನ್ನ ಪರಿಭವದ ದಂದುಗ ಹರಿಯಿತ್ತಯ್ಯಾ,
ಆ ಶುದ್ಧಿಯನರಿಯದೆ ಅನೇಕ ಜಡರುಗಳೆಲ್ಲ

೩೧–೩೧ x (ಚೆ) ೩೨–೩೨ x (ಚೆ)

ಬೇಕಾದ ಪರಿಯಲ್ಲಿ ನುಡಿವುತಿಪ್ಪರು.
ಸತ್ತ ಪ್ರಾಣವನೆತ್ತಿ ಒಪ್ಪಿಪ್ಪ ನಿಶ್ಚಯವು
ಮರ್ತ್ಯದವರಿಗುಂಟೆ? ಶಿವಂಗಲ್ಲದೆ.
ಶಿವಗುರು ಬಸವಣ್ಣ, ಬಸವಣ್ಣ ಗುರುಶಿವನಾಗಿ
ದೆಸೆಗೆಟ್ಟ ದೇವತಾಪಶುಗಳಿಗೆ ಪತಿಯಾದನು.
ಬಸವಣ್ಣನ ನೆನಹು ಸುಖಸಮುದ್ರವಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಬಸವಣ್ಣನ ತೋರಿದಿರಾಗಿ
ಆನು ಬದುಕಿದೆನಯ್ಯಾ ಪ್ರಭುವೆ.

೮೯

ತನುತ್ರಯದ ಗುಣದಲ್ಲಿ ತಾಮಸಿಯಲ್ಲ ಬಸವಣ್ಣ.
ಮನತ್ರಯದಲ್ಲಿ ಮತ್ತನಲ್ಲ ಬಸವಣ್ಣ.
ಮಲತ್ರಯದಲ್ಲಿ ಮಗ್ನನಲ್ಲ ಬಸವಣ್ಣ.
ಲಿಂಗತ್ರಯದಲ್ಲಿ ನಿಪುಣ ಬಸವಣ್ಣ.
ಐದಾರು ಪ್ರಸಾದದಲ್ಲಿ ಪ್ರಸನ್ನ ಬಸವಣ್ಣ.
ಈರೈದು [೩೩]ಪಾದೋದಕ[೩೩]ದಲ್ಲಿ ಪ್ರಭಾವಿ ಬಸವಣ್ಣ.
ಎರಡು ಮೂರು ಭಕ್ತಿಯಲ್ಲಿ ಸಂಪನ್ನ ಬಸವಣ್ಣ
ಮೂವತ್ತಾರು ತತ್ವದಿಂದತತ್ತ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ಫಲಪದಕ್ಕೆ ದೂರವಾದ ನಮ್ಮ ಬಸವಣ್ಣನು.

೯೦

ಸ್ಥೂಲ, ಸೂಕ್ಷ್ಮ, ಕಾರಣವೆಂಬರಲ್ಲಾ ನಿನ್ನನು.
ಅವರು ಹಿಂದು ಮುಂದನರಿಯರು, ಬಂದ ಹಂಗೆ ನುಡಿವರು.
ಸ್ಥೂಲಕ್ಕೆ ನೆಲೆಯಾವುದು ಹೇಳಿಹೆ, ಕೇಳಿರೆ ಮನುಜರಿರಾ.
ಸ್ಥೂಲವನು ಅನೇಕ ಬ್ರಹ್ಮಾಂಡಂಗಳ ಮೀರಿಪ್ಪದದು ಸ್ಥೂಲವೇ? ಅಲ್ಲ,
ಹಾಂಗಿರಲಿ,

೩೩-೩೩ ಪ್ರಸಾದ (ಚೆ)

ಶ್ರೀಗುರು ಸ್ವಾಮಿ ವಿಸ್ತಾರ, ವಿಸ್ತಾರ, ವಿಸ್ತಾರವೆಂದು ಕೊಟ್ಟ ಲಿಂಗವೀಗ ಸ್ಥೂಲ.
ಆ ಲಿಂಗವು ಸಕಲ ವ್ಯಾಪ್ತಿಯ ತನ್ನೊಳಗಿಂಬಿಟ್ಟುಕೊಂಡ ಕಾರಣ ಸೂಕ್ಷ್ಮನಾದ.
ಶಿಷ್ಯಕಾರಣ ಪರಶಿವಮೂರ್ತಿಯಾದ ಕಾರಣ. ಕಾರಣನಾದ
ಎಲೆ ಗುರುವೆ, ಲಿಂಗವೆ, ಜಂಗಮವೆ,
ನೀವು ಒಂದಾದ ಭೇದವ ಲೋಕದ ಜಡರೆತ್ತ ಬಲ್ಲರು?
ಬಲ್ಲ ಬಸವಣ್ಣ, ಆ ಬಸವಣ್ಣ ಅವ್ವೆಯ ಮನೋನಾಥ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾಗಿ ಬದುಕಿದೆನು.

೬೧

ನೀಲಕಂಧರನೆಂಬಾತನು ಬಾಲತತ್ವದಲ್ಲಿ
ಭಾಮಿನಿವೊಡಗೂಟಸಂದು ಸವೆದು,
ಇದು ಕ್ರೀ ಇದು ನಿಃಕ್ರೀ, ಇದು ಸಿದ್ಧಿ, ಇದು ಪ್ರಸಿದ್ಧಿ,
ಇದು ಭಾವ, ಇದು ನಿರ್ಭಾವವೆಂದರುಪುವಾಗ
ಪಿಂಡಾಂಡಂಗಳಿಲ್ಲ, ಅಷ್ಟಮೂರ್ತಿ ಕೂಡಿದ ರುದ್ರನಿಲ್ಲ.
ಆನಂದವೆ ಒಡಲಾಗಿಪ್ಪ ಮಹಾತ್ಮನ ನಿಜವ ಕಂಡಾತ ಬಸವಣ್ಣ.
ಆ ಬಸವಣ್ಣನೆನಗೆ ಅರುಪಿದ ಗುಣದಿಂದ ಶುದ್ಧನಾದೆನು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಬಸವಣ್ಣನೆನ್ನ ಪರಮಾರಾಧ್ಯರು.

೬೨

ಯೋಗಭೂಷಣನೆ, ನಿಮ್ಮ ನೆರೆಯಲು ಬೇಕು ಬೇಕು
ಎಂಬ ಸದ್ಭಕ್ತರ ಮನದ ಕೊನೆಯಲ್ಲಿ ತಿಳುಹುವೆ ಅಕ್ಷರವ.
ಬಸವಾ ಬಸವಾ ಬಸವಾ ಎಂಬ ಮಧುರಾಕ್ಷರತ್ರಯದೊಳು ತಾನೇ ತ್ರೈಲಿಂಗವೊಪ್ಪಿಕ್ಕು.
ಘನಗುರುವೇ ಬಸವಣ್ಣ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೬೩

ಬಸವನ ಹಾಡದರ, ಬಸವನ ಹೊಗಳದರ,
ಬಸವಾಕ್ಷರತ್ರಯದ ಜಪವಿಲ್ಲದ ದೆಸೆಗೇಡಿ ಮನುಜರ

ಎನ್ನತ್ತ ತೋರದಿರಯ್ಯ ತಂದೆ,
ವಿಷಮಾಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೯೪

ಬಸವನ[ನು] ನೆನವವರ,
ಬಸವನನು ಹೊಗಳುವವರ,
ಬಸವನನು ಗುರುಚರಿಷ್ಟವೆನಿಪ
ಸದಮಲಜ್ಞಾನ ಪ್ರಕಾಶ ಸದ್ವರ್ತನರ,
ಹೊರೆಯೊಳಗೆನ್ನನಿರಿಸೈ
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೯೫

ಪ್ರಥಮ ನಾಮಕ್ಕೆ ಬಸವಾಕ್ಷರವೆ ಬೀಜ
ಗುರುನಾಮ ಮೂಲಕ್ಕೆ ಅಕ್ಷರಾಂಕ
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎಂದು,
ದೆಸೆಗೆಟ್ಟೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,

೯೬

ಆದಿಯಾಧಾರಕ್ಕೆ ಮೂಲ ತಾ ಬಸವಣ್ಣ,
ಹೋದನೈ ಭಕ್ತಿಯೊಳಗೆ ಹೊಲಬುದಪ್ಪಿ,
ಊರನರಿಯದ ಗ್ರಾಮ, ಹೊಲಬನರಿಯದ ಸೀಮೆ
ಆತನ ಆನತದಿಂದಾನು ನೀನಾದೆನೈ,
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎಂದು
[೩೪]ದೆಸೆ[೩೪]ಗೆಟ್ಟೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೯೭

ನಿನ್ನಾಜ್ಞೆಯಿಂದ ಲೋಕ ಒಪ್ಪಿಪ್ಪುದು ತಂದೆ,
ಬಸವಣ್ಣನಾಜ್ಞೆಯಿಂದ ನೀನಿಪ್ಪೆಯಾಗಿ,

೩೪-೩೪ ದೆಸೆಯೆರಡು (ಹು)

ಅನಿಮಿಷಾನಂದದಲ್ಲಿ ಬಸವಾಕ್ಷರತ್ರಯ
ಗುರುಬಸವಮೂರ್ತಿ ಶ್ರೀ ಮಲ್ಲಿಕಾರ್ಜುನಯ್ಯಾ.

೯೮

ಇಂದ್ರಾದಿ ದೇವತಾ ಸಂಕುಳಕ್ಕೆ,
ಅಂತಪ್ಪ ಪದವಿತ್ತಾತ ಬಸವಣ್ಣ.
ಬ್ರಹ್ಮ ವಿಷ್ಣ್ವಾದಿ ದೇವತಾ ಮೊತ್ತಕ್ಕೆ,
ಇಂತಪ್ಪ ಪದವಿತ್ತಾತ ಬಸವಣ್ಣ.
ಶಿವಲಿಂಗ ಭಕ್ತರಿಗೆ,
ಚರಲಿಂಗಧಾರಣೆಯ ಪರಿಯಾಯವನಿದೆಂದು
ತೋರಿದ ಗುರುಬಸವಣ್ಣ.
ಇಹಲೋಕದ ಪರಲೋಕದ
ಅನಿಮಿಷ ಶುದ್ಧಿಯನರುಹಿದಾತ ಗುರುಬಸವಣ್ಣ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೯೯

ಮರುಳತನದಿಂದ ಭ್ರಮಿಸಿ
ಫಲಪದಕ್ಕೆ ಒಳಗಪ್ಪವನ ಎತ್ತಿದ ಗುರು ಬಸವಣ್ಣ.
ಆಜ್ಞಾಸಿದ್ಧನನರ್ಚಿಸುವ ಪರಿಯಾಯವಿದೆಂದು ತೋರಿದ ಗುರು ಬಸವಣ್ಣ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,
ಬಸವಣ್ಣನೆನ್ನ ನಿನ್ನಂತೆ ಮಾಡಿದನಾಗಿ ಎನಗತಿಶಯವೇನೂ ಇಲ್ಲ.

೧೦೦

ಎನ್ನ ಸಕಲಕ್ಕೆ ಗುರು ಬಸವಣ್ಣ
ಎನ್ನ ನಿಃಕಲಕ್ಕೆ ಗುರು ಬಸವಣ್ಣ
ಎನ್ನ ಸಕಲ ನಿಃಕಲ ಕೂಡಿದಾನಂದ[೩೫]ದಾದಿ[೩೫] ಪದವೆನಿತ ಆಗೆನಿಸಿ,
ಪದವ ಮೀರಿದ ಸದಮಲ ಜ್ಞಾನಜ್ಯೋತಿರ್ಮಯನಲ್ಲೆ

೩೫-೩೫ ವಾಗಿ (ಹು)

ಬಸವಣ್ಣನೇ ಶರಣು, ಬಸವಣ್ಣನೇ ಶರಣು,
ಬಸವಣ್ಣನೆ ಭಕ್ತಿಮುಕ್ತಿಗೆ ಮೂಲ.
ಬಸವಣ್ಣನ ನೆನದು ಅನಿಮಿಷಾಕ್ಷರದಿಂದ
ಬಸವಪದವಾಯಿತ್ತೈ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೧೦೧

ಶ್ರೀಗುರುವೆ ಬಸವಯ್ಯಾ, ಶ್ರೀಚರವೆ ಬಸವಯ್ಯಾ
[೩೬]ಶ್ರೀ ಮಹಾ ಇಷ್ಟಲಿಂಗ[೩೬] ಬಸವಣ್ಣನು.
ಆರೈದು ಎನ್ನುವರು ಓರಂತೆ ಸಲಹಿದ
ಕಾರುಣ್ಯ ಸುರತರುವೆ ಬಸವಲಿಂಗಾ
ಭಾವಿಸಿ ಎನ್ನುವನು ಅಜಾತನ ಮಾಡಿದಾತ ಬಸವಣ್ಣ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೧೦೨

ಬಸವಣ್ಣನೆ ಶರಣು, ಬಸವಣ್ಣನೆ ಶರಣು.
ಬಸವಣ್ಣನೆ ಪರಮ ಬಂಧುವೆನಗೆ.
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನಿಮ್ಮ ಹೆಸರಿಟ್ಟ ಗುರುಬಸವಣ್ಣನಯ್ಯ.

೧೦೩

ಬಸವಣ್ಣನೆ ತಾಯಿ, ಬಸವಣ್ಣನೆ ತಂದೆ,
ಬಸವಣ್ಣನೆ ಪರಮಬಂಧುವೆನಗೆ,
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನಿಮ್ಮ ಹೆಸರಿಟ್ಟ ಗುರುಬಸವಣ್ಣನು ಕೇಳಾ ಪ್ರಭುವೆ.

೧೦೪

ಬಸವನೆ ಮಾತೆಯ್ಯೆ, ಬಸವನೆ ತಾತನ್ನೆ,
ಬಸವನೆ ಇಹಪರಕ್ಕೆ ದಾತನಾದ.

೩೬–೩೬ ಶ್ರೀ ಮಹಾಲಿಂಗ(ಹು)

ಬಸವಾಕ್ಷರತ್ರಯ ಸೋಪಾನವಿಡಿದೀಗ
ತ್ರೈಲಿಂಗಕ್ಕೆ ಆನು ಮೂಲನಾದೆ.
ಬಸವ, ಚೆನ್ನಬಸವ, ಪ್ರಭುವಿನ ಕರುಣದಿಂದ
ದೆಸೆ ಎರಡುಗೆಟ್ಟೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೧೦೫

ಭಕ್ತಿರೂಪನು ಬಸವ, ನಿತ್ಯರೂಪನು ಬಸವ,
ಮತ್ತಾನಂದ ಸ್ವರೂಪನು ಬಸವಣ್ಣನು.
ಸತ್ತುರೂಪನು ಬಸವ, ಚಿತ್ತರೂಪನು ಬಸವ.
ಎತ್ತೆತ್ತ ನೋಡಿದರೆ ಅತ್ತತ್ತ ಪರಿಪೂರ್ಣನಾಗಿಪ್ಪ ಬಸವಣ್ಣನಿಂದ
ನಿತ್ಯ ಸುಖಿಯಾದೆನೈ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೧೦೬

ತನುವಿಡಿದು ದಾಸೋಹವ ಮಾಡಿ, ಗುರುಪ್ರಸಾದಿಯಾದ ಬಸವಣ್ಣ
ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ
ಧನವಿಡಿದು ದಾಸೋಹವ ಮಾಡಿ ಜಂಗಮ ಪ್ರಸಾದಿಯಾದ ಬಸವಣ್ಣ
ಇಂತೀ ತ್ರಿವಿಧವಿಡಿದು ದಾಸೊಹವ ಮಾಡಿ ಸದ್ಗುರು ಮಲ್ಲಿಕಾರ್ಜುನಯ್ಯ
ನಿಮ್ಮ ಶರಣ ಬಸವಣ್ಣ [೩೭]ಸ್ವಯ[೩೭]ಪ್ರಸಾದಿಯಾದನಯ್ಯಾ

೧೦೭

ತನುವ ಗುರುವಿಂಗಿತ್ತು ಗುರುವಾದನಯ್ಯ ಬಸವಣ್ಣನು
ಮನವ ಲಿಂಗಕ್ಕಿತ್ತು ಲಿಂಗವಾದನಯ್ಯ ಬಸವಣ್ಣನು
ಧನವ ಜಂಗಮಕ್ಕಿತ್ತು ಜಂಗಮವಾದನಯ್ಯ ಬಸವಣ್ಣನು
ಇಂತೀ ತ್ರಿವಿಧವ ತ್ರಿವಿಧಕ್ಕಿತ್ತು ಸದ್ಗುರು ಮಲ್ಲಿಕಾರ್ಜುನಯ್ಯ
ನಿಮ್ಮ ಶರಣ ಬಸವಣ್ಣ ಎಲ್ಲರಿಗೆ ಗುರುವಾದನಯ್ಯಾ

೩೭-೩೭ ಸ್ವ (ಹು)

೧೦೮

ಅರ್ಪಿತ ಅವಧಾನಮುಖಂಗಳು ಎಲ್ಲರಿಗೆ ಸುಲಭವೆ?
ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ.
ತ್ರೈಲಿಂಗ ಮೂಲಮಂತ್ರಕ್ಕೆ ಆದಿಮಂತ್ರರೂಪ, ಬಸವಣ್ಣ
ತ್ರೈಲಿಂಗ ಪ್ರಸಾದಕ್ಕೆ ಅರುಹು, ಬಸವಣ್ಣ
ಮೂರುಲಿಂಗ ಒಂದಾದ ಮೂರ್ತಿ, ಬಸವಣ್ಣ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,
ನೀನು ಸಾಕ್ಷಿಯಾಗಿ ಬಸವಣ್ಣನ ನೆನವವರು ನಿಮ್ಮಂತೆ ಅಹರು.

೧೦೯

ಅಯ್ಯಾ ನಿಮ್ಮ ಶರಣ ಬಸವಣ್ಣನಿಂದ
ಲಿಂಗವ ಕಂಡು ಒಳಗೆ ಬೈಚಿಟ್ಟುಕೊಂಡೆನು.
ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ
ಲಿಂಗವ ಹಾಸಿಹೊದ್ದುಕೊಂಡೆನು.
ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ ನಿರವಯವಾದೆನು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,
ನಿಮ್ಮ ಶರಣ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೧೧೦

ಪಾವನವಾದೆನು ಬಸವಣ್ಣಾ, ನಿಮ್ಮ ಪಾವನ ಮೂರ್ತಿಯ ಕಂಡು
ಪರತತ್ತ್ವವನೈದಿದೆ ಬಸವಣ್ಣಾ, ನಿಮ್ಮ ಪರಮಸೀಮೆಯ ಕಂಡು.
ಪದ ನಾಲ್ಕ ಮೀರಿದೆ ಬಸವಣ್ಣಾ ನಿಮ್ಮ ಪುರುಷಪಾದವ ಕಂಡು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ,
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ನೀನು ಗುರುವಾದೆಯಾಗಿ.*

---

* + ಅರ್ಚಿಸಲು ಬೇಡವದ, ಪೂಜಿಸಲು ಬೇಡದವ,
ನಿತ್ಯ ಜಪತಪ ನಿನಗೆ ಬೇಡ
ಸಚ್ಚಿದಾನಂದಗುರು, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಬಸವಾಕ್ಷರತ್ರಯವ ನೆನೆ, ನಿನಗೆ ನಿತ್ಯಪದವು(ಹು)

*

ಉರಿಲಿಂಗಪೆದ್ದಿ

೧೧೧

ಶಿವಶಿವಾ, ಬಸವಣ್ಣನೇ ಗುರುತತ್ವವುಳ್ಳ ಮಹಾವಸ್ತುವಾಗಿ, ಶ್ರೀಗುರುಲಿಂಗವು ಬಸವಣ್ಣನೆ.
ಶಿವಸುಖ ಸಂಪನ್ನನಾಗಿ ಶಿವಲಿಂಗವು ಬಸವಣ್ಣನೆ.
ಜಂಗಮಪ್ರಾಣಿಯಾಗಿ ಜಂಗಮಲಿಂಗ ಬಸವಣ್ಣನೆ
ಪ್ರಸಾದಗ್ರಾಹಕನಾಗಿ ಪ್ರಸಾದಲಿಂಗವು ಬಸವಣ್ಣನೆ
ಭಾವಶುದ್ಧವುಳ್ಳ ಮಹಾನುಭಾವಿಯಾಗಿ ಭಾವಲಿಂಗವು ಬಸವಣ್ಣನೆ
ಪಂಚಾಚಾರನಿಯತಾತ್ಮನಾಗಿ ಆಚಾರಲಿಂಗವು ಬಸವಣ್ಣನೆ
ಗುರುಲಿಂಗಜಂಗಮಕ್ಕೆ ಎನಗೆ ಇಷ್ಟವಾಗಿ ಇಷ್ಟಲಿಂಗವು ಬಸವಣ್ಣನೆ
ಇಂತೀ, ಚತುರ್ವಿಧಪ್ರಾಣವಾಗಿ ಪ್ರಾಣಲಿಂಗವು ಬಸವಣ್ಣನೆ
ಮಹಾಮಹಿಮನೂ ಬಸವಣ್ಣನೆ
ಮಹಾವಸ್ತುವ ಗರ್ಭೀಕರಿಸಿಕೊಂಡಿಪ್ಪಾತನು ಬಸವಣ್ಣನೆ.
ಮಹಾ ಸತ್ಯನೂ ಬಸವಣ್ಣನೆ; ಮಹಾ ನಿತ್ಯನೂ ಬಸವಣ್ಣನೆ
ಮಹಾ ಶಾಂತನೂ ಬಸವಣ್ಣನೆ; ಮಹಾ ಸುಖಿಯೂ ಬಸವಣ್ಣನೆ
ಮಹಾ ಪರಿಣಾಮಿಯೂ ಬಸವಣ್ಣೆ; ಮಹಾಲಿಂಗವೂ ಬಸವಣ್ಣನೆ
ಇಂತೀ ನವವಿಧ ಲಿಂಗವು ಬಸವಣ್ಣನೆ.
ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು,
ಎನಗೆ ಪ್ರಸಾದವನಿತ್ತು ಸಲಹಿದನು ಬಸವಣ್ಣನು
ಇದು ಕಾರಣ, ಅನವರತ ನಾನು
ಬಸವ, ಬಸವಾ, ಬಸವಣ್ಣ, ಬಸವಯ್ಯ,
ಬಸವಗುರುವೆ, ಬಸವಲಿಂಗವೆ, ಬಸವ ತಂದೆ, (ಬಸವರಾಜ),
ಬಸವಪ್ರಭುವೆ ನಮೋ ನಮೋ ಎನುತಿರ್ದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೧೨

ಶ್ರೀಗುರುಲಿಂಗದಲ್ಲಿ ಬಸವಣ್ಣನ ಕಂಡೆನು;
ಬಸವಣ್ಣನಲ್ಲಿ ಶ್ರೀಗುರುಲಿಂಗವ ಕಂಡೆನು.

ಶಿವಲಿಂಗದಲ್ಲಿ ಬಸವಣ್ಣನ ಕಂಡೆನು;
ಬಸವಣ್ಣನಲ್ಲಿ ಶಿವಲಿಂಗವ ಕಂಡೆನು.
ಜಂಗಮಲಿಂಗದಲ್ಲಿ ಬಸವಣ್ಣನ ಕಂಡೆನು;
ಬಸವಣ್ಣನಲ್ಲಿ ಜಂಗಮಲಿಂಗವ ಕಂಡೆನು.
ಪ್ರಸಾದದಲ್ಲಿ ಬಸವಣ್ಣನ ಕಂಡೆನು;
ಬಸವಣ್ಣನಲ್ಲಿ ಪ್ರಸಾದವ ಕಂಡೆನು.
ಈ ಚತುರ್ವಿಧದಲ್ಲಿ ಬಸವಣ್ಣನ ಕಂಡೆನು;
ಬಸವಣ್ಣನಲ್ಲಿ ಚತುರ್ವಿಧವ ಕಂಡೆನು.
ಇಂತಹ ಮಹಿಮರುಂಟೆ?
ಶಿವಶಿವಾ ಮಹಾದೇವಾ ಇಂತಹ ಸದ್ಭಕ್ತರುಂಟೆ?
ಇದು ಕಾರಣ,
ಶ್ರೀಗುರುಲಿಂಗವು ಬಸವಣ್ಣನೆ.
ಶಿವಲಿಂಗವು ಬಸವಣ್ಣನೆ.
ಜಂಗಮಲಿಂಗವು ಬಸವಣ್ಣನೆ
ಪ್ರಸಾದಲಿಂಗವು ಬಸವಣ್ಣನೆ
ಇಷ್ಟಲಿಂಗವು ಬಸವಣ್ಣನೆ
ಪ್ರಾಣಲಿಂಗವು ಬಸವಣ್ಣನೆ
ಭಾವಲಿಂಗವು ಬಸವಣ್ಣನೆ
ಆಚಾರಲಿಂಗವು ಬಸವಣ್ಣನೆ
ಮಹಾಲಿಂಗವು ಎನಗೆ ಬಸವಣ್ಣನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

*

ತೋಂಟದ ಸಿದ್ಧಲಿಂಗ

೧೧೩

ಅನಾದಿ ಪರಶಿವತತ್ವದಿಂದ ಚಿತ್ತು ಉದಯಿಸಿತ್ತು.
ಆ ನಿರ್ಮಲ ಮಹಾಜ್ಞಾನ ಚಿತ್ಸರೂಪವೇ ಬಸವಣ್ಣ ನೋಡಾ.
ಆ ಬಸವಣ್ಣನಿಂದ ನಾದ ಬಿಂದು ಕಳೆ ಸಮರಸವಾಗಿ

ಅಖಂಡಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಪ್ಪ
ಮಹಾಲಿಂಗ ಉದಯಿಸಿತ್ತು ನೋಡಾ.
ಆ ಮಹಾಲಿಂಗದಿಂದ ಪಂಚಸಾದಾಖ್ಯಮೂರ್ತಿ
ಉತ್ಪತ್ಯವಾಯಿತ್ತು ನೋಡಾ.
ಇದು ಕಾರಣ,
ಆ ಲಿಂಗ, ಅನಾದಿ ಶರಣನೆಂದೆಂಬೆ,
ಬಸವಣ್ಣನಿಂದ ಲಿಂಗವಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

೧೧೪

[೩೮]ಹಸ್ತ[೩೮] ಕಮಲಮಧ್ಯದಲ್ಲಿ ಉತ್ಪತ್ತ್ಯವಾದ ಪರಂಜ್ಯೋತಿತತ್ವ
ಬ್ರಹ್ಮಾಂಡದಿಂದತತ್ತಲಾದ ಘನಕ್ಕೆ ಘನ, ಪರಕ್ಕೆ ಪರವು ನೋಡಾ.
ಆ ಪರಾಪರವು ತಾನೆ, ತತ್ವಬ್ರಹ್ಮಾಂಡದೊಳಹೊರಗೆ ಪರಿಪೂರ್ಣನಾಗಿ
ಸರ್ವವ್ಯಾಪಕನಾಗಿ, ಸರ್ವವನೂ ಹೊದ್ದಿಯೂ ಹೊದ್ದದ,
ಮುಟ್ಟಿಯೂ ಮುಟ್ಟದ ಅಕಳಂಕನು ನೋಡಾ.
ಸಪ್ತ ಕಮಲದ ಎಸಳುಗಳೊಳಗೆ
ಅಕ್ಷರಾತ್ಮಕ ಲಿಂಗವಾಗಿ ಅದ್ವಯನು ನೋಡಾ.
ನವಚಕ್ರಾಂಬುಜಂಗಳ ದಳಕುಳವ[೩೯]ನಾ[೩೯]ದಿ ದೇವತೆಗಳ,
ತೋರಿಕೆ ಏನೂ ಇಲ್ಲದ, ನಿತ್ಯ ನಿರಂಜನ ನಿರಾಮಯನಾದ
ಶರಣಂಗೆ ನಮೋ ನಮೋ ಎಂಬೆನು.
ಆ ನಿರಾಮಯ ವಸ್ತುವೆ ಸಂಗನಬಸವಣ್ಣನು ನೋಡಾ.
ಆ ಚಿದದ್ವದಯವಾದ ಸಂಗನಬಸವಣ್ಣನೆ
ಎನ್ನಂಗ ಲಿಂಗ, ಎನ್ನ ಪ್ರಾಣಲಿಂಗ, ಎನ್ನ ಭಾವಲಿಂಗ,
ಎನ್ನ ಸರ್ವಾಂಗಲಿಂಗವು, ಲಿಂಗವು ಕಾಣಾ,
ಅಯ್ಯಾ ಎನ್ನ ಷಡಾಧಾರದಲ್ಲಿ ಸಂಬಂಧವಾದ
ಷಡಕ್ಷರ ಮಂತ್ರ[ವೂ] ಬಸವಣ್ಣನಾದ ಕಾರಣ, ನಾನು
ಬಸವಲಿಂಗಾ, ಬಸವಲಿಂಗಾ, ಬಸವಲಿಂಗಾ, ಬಸವಲಿಂಗಾ

೩೮-೩೮ ಸಪ್ತ (ಹು) ೩೯-೩೯ ರ್ಣಾ(ಹು)

ಎಂದು ಜಪಿಸಿ ಭವಾರ್ಣವ ದಾಂಟಿದೆನು ನೋಡಾ.
ಬಸವನೆ ಪತಿಯಾಗಿ, ನಾನು ಸತಿಯಾಗಿ ಶರಣನಾದೆನು ನೋಡಾ.
ಬಸವನೆ ಲಿಂಗವಾದ ಕಾರಣ ನಾನಂಗವಾದೆನು.
ಕರ್ತುವೆ ಬಸವಣ್ಣನು, ಭೃತ್ಯನೆ ನಾನು
ಒಡೆಯನೆ ಬಸವಣ್ಣ, ಬಂಟನೆ ನಾನಾದ ಕಾರಣ
ದೇಹವೆ ನಾನು ದೇಹಿಯೆ ಬಸವಣ್ಣನಯ್ಯಾ,
ಇದು ಕಾರಣ,
ಎನ್ನ ನಡೆವ ಚೇತನ, ಎನ್ನ ನುಡಿವ ಚೇತನ,
ಎನ್ನ ನಡೆ ನುಡಿಯೊಳಗಿಪ್ಪ ಸರ್ವಚೈತನ್ಯಾತ್ಮಕ ಬಸವಣ್ಣನಯ್ಯಾ.
ಇಂತಪ್ಪ ಬಸವಣ್ಣನ ಶ್ರೀಪಾದದಲ್ಲಿ ಅಡಗಿ,
ನಾನು ಶರಣಾದೆನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

*

ಅಕ್ಕಮಹಾದೇವಿ

೧೧೫

ಆದಿ ಅನಾದಿಗಳಿಂದತ್ತತ್ತಲಯ್ಯಾ ಬಸವಣ್ಣನು.
ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು.
ನಾದ, ಬಿಂದು, ಕಳಾತೀತನಯ್ಯಾ
ಆದಿ ನಿರಂಜನನಯ್ಯಾ ಬಸವಣ್ಣನು.
ಅನಾದಿ ಸ್ವರೂಪವೇ ಬಸವಣ್ಣನಾದ ಕಾರಣ,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು
ಕಾಣಾ ಚೆನ್ನಮಲ್ಲಿಕಾರ್ಜುನಯ್ಯ.

೧೧೬

ದೇವಲೋಕದವರಿಗೂ ಬಸವಣ್ಣನೇ ದೇವರು.
ಮರ್ತ್ಯಲೋಕದವರಿಗೂ ಬಸವಣ್ಣನೇ ದೇವರು.
ನಾಗಲೋಕದವರಿಗೂ ಬಸವಣ್ಣನೇ ದೇವರು.

ಮೇರುಗಿರಿ, ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೇ ದೇವರು.
ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗೂ, ಎನಗೂ ನಿಮ್ಮ ಶರಣರಿಗೂ ಬಸವಣ್ಣನೇ ದೇವರು.

೧೧೭

ಕಾಮಾರಿಯ ಗೆಲಿದೆನು ಬಸವಾ ನಿಮ್ಮ ದಯದಿಂದ,
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ.
ನಾಮದಲ್ಲಿ ಹೆಂಗೂಸೆಂಬ ಹೆಸರಾದರೇನು?
ಭಾವಿಸಲು ಗಂಡುರೂಪು ಬಸವಾ ನಿಮ್ಮ ದಯದಿಂದ,
ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರಿಕ್ಕಿ, ಎರಡುವರಿಯದೆ
ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ.

೧೧೮

ಎನ್ನ ಅಂಗದಲ್ಲಿ ಆಚಾರವ ತೋರಿದನಯ್ಯಾ ಬಸವಣ್ಣನು;
ಆಚಾರವೇ ಲಿಂಗವೆಂದರುಹಿದನಯ್ಯಾ ಬಸವಣ್ಣನು.
ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯಾ ಬಸವಣ್ಣನು.
ಆ ಅರಿವೇ ಜಂಗಮವೆಂದರುಹಿದನಯ್ಯಾ ಬಸವಣ್ಣನು.
ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನ ಹೆತ್ತ ತಂದೆ ಸಂಗನಬಸವಣ್ಣ,
ಎನಗೀ ಕ್ರಮವನರುಹಿದನಯ್ಯಾ ಪ್ರಭುವೇ.

೧೧೯

ಬಸವಣ್ಣಾ, ನಿಮ್ಮಂಗದಾಚಾರವ ಕಂಡು
ಎನಗೆ [೪೦]ಲಿಂಗ[೪೦] ಸಂಗವಾಯಿತ್ತಯ್ಯಾ,
ಬಸವಣ್ಣಾ, ನಿಮ್ಮ ಮನದ ಸುಜ್ಞಾನವ ಕಂಡು
ಎನಗೆ ಜಂಗಮ ಸಂಬಂಧವಾಯಿತ್ತಯ್ಯಾ,
ಬಸವಣ್ಣಾ, ನಿಮ್ಮ ಸದ್ಭಕ್ತಿಯ ತಿಳಿದು
ಎನಗೆ [೪೧]ನಿಜವು[೪೧] ಸಾಧ್ಯವಾಯಿತ್ತಯ್ಯಾ.

೪೦-೪೦ x (ಚೆ) ೪೧-೪೧ ಸಹಜವು (ಹು)

ಚೆನ್ನಮಲ್ಲಿಕಾರ್ಜುನಯ್ಯನ ಹೆಸರಿಟ್ಟ ಗುರು ನೀವಾದ ಕಾರಣ,
ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು
ಕಾಣಾ ಸಂಗನಬಸವಣ್ಣಾ.

*

ಅಕ್ಕನಾಗಮ್ಮ

೧೨೦

ಎನ್ನ ಕುಲಸೂತಕವ ಕಳೆದಾತ ಬಸವಣ್ಣ.
ಎನ್ನ ಛಲಸೂತಕವ ಕಳೆದಾತ ಬಸವಣ್ಣ.
ಎನ್ನ ತನುಸೂತಕವ ಕಳೆದಾತ ಬಸವಣ್ಣ,
ಎನ್ನ ಮನಸೂತಕವ ಕಳೆದಾತ ಬಸವಣ್ಣ.
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ.
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ.
ಎನ್ನ ಅರಿವು ಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ.
ಎನ್ನ ತನ್ನಲ್ಲಿ ಇಂಬಿಟ್ಟುಕೊಂಡಾತ ಬಸವಣ್ಣ.
ತನ್ನ ಎನ್ನಲ್ಲಿ ಇಂಬಿಟ್ಟುಕೊಂಡಾತ ಬಸವಣ್ಣ.
ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ.
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು.

೧೨೧

ಬಸವನೆ ಮುಖಸೆಜ್ಜೆ, ಬಸವನೆ ಅಮಳೋಕ್ಯ,
ಬಸವನ ನಾನೆತ್ತಿ ಮುದ್ದಾಡಿಸುವೆನು
ಬಸವಾ ಸಂಗನಬಸವಿದೇವಾ ಜಯತು.
ಬಸವಾ ಸಂಗನಬಸವಲಿಂಗಾ ಜಯತು.
ಬಸವಗೂ ಎನಗೂ ಭಾವ ಭೇದವಿಲ್ಲ.
ಬಸವಗೂ ಎನಗೂ ರಾಶಿ ಕೂಟವುಂಟು.

ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯಾ
ಬಸವಾ, ಬಸವಾ, ಬಸವಾ !

೧೨೨

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದರೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲ ಪಸರಿಸಿತ್ತಲ್ಲಾ.
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರೊ.
ಅಣ್ಣಾ, ಶಶಿಧರನಟ್ಟಿದ ಮಣಿಹಪೂರೈಸಿತ್ತೆಂದು ನೀವು ಲಿಂಗೈಕ್ಯವಾಗಲು,
ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯ,
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ,
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ,
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ,
ಎನ್ನನೊಯ್ಯದೆ ಹೋದೆಯಲ್ಲಾ, ಪಂಚಪರುಷಮೂರ್ತಿ ಬಸವಣ್ಣ,
ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ.

*

ಮೇದಾರ ಕೇತಯ್ಯ

೧೨೩

ಎನ್ನ ಕಾಯದ ಕಳವಳವ ಕೆಡಿಸಿ,
ಗುರುಲಿಂಗವ ತೋರಿದನಯ್ಯ ಬಸವಣ್ಣ.
ಎನ್ನ ಮನದ ವ್ಯಾಕುಳವ ನಿಲಿಸಿ,
ಜಂಗಮಲಿಂಗವ ತೋರಿದನಯ್ಯ ಬಸವಣ್ಣ.
ಎನ್ನಂತರಂಗ ಬಹಿರಂಗದಲ್ಲಿ ತಾನೆಯಾಗಿ, ಎನ್ನ ಸರ್ವಾಂಗಮುಟ್ಟಿ,
ಪಾವನವ ಮಾಡಿದಾತ ಬಸವಣ್ಣ.

ಅಮರಗಣಂಗಳು ಮುನಿದು
ಎನ್ನ ಕೈಲಾಸಕ್ಕೊಯಿದರೆ, ಸದ್ಯೋನ್ಮುಕ್ತಿಯ ತೋರಲೆಂದು
ಮರಳಿ ಮರ್ತ್ಯಕೆ ತಂದನು ಬಸವಣ್ಣ.
ಸಂಗನಬಸವಣ್ಣನೆ ಗುರುವೆನಗೆ;
ಸಂಗನಬಸವಣ್ಣನೆ ಪರವೆನಗೆ.
ಆ ಸಂಗನಬಸವಣ್ಣನ ಕರುಣದಿಂದ
ಘನಕ್ಕೆ ಘನವಾದ ಅಲ್ಲಮಪ್ರಭುದೇವರ
ಶ್ರೀಪಾದವ ಕಂಡು ಬದುಕಿದೆನು ಕಾಣಾ ಗವರೇಶ್ವರಾ.

೧೨೪

ಎನ್ನ ಚಿತ್ತಕ್ಕೆ ಆಚಾರಲಿಂಗವಾದ ತಾ ಬಸವಣ್ಣ.
ಎನ್ನ ಬುದ್ಧಿಗೆ ಗುರುಲಿಂಗವಾದ ತಾ ಬಸವಣ್ಣ.
ಎನ್ನ ಅಹಂಕಾರಕ್ಕೆ ಶಿವಲಿಂಗವಾದ ತಾ ಬಸವಣ್ಣ.
ಎನ್ನ ಮನಕ್ಕೆ ಜಂಗಮಲಿಂಗವಾದ ತಾ ಬಸವಣ್ಣ.
ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾದ ತಾ ಬಸವಣ್ಣ.
ಎನ್ನ ಭಾವಕ್ಕೆ ಮಹಾಲಿಂಗವಾದ ತಾ ಬಸವಣ್ಣ.
ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದ ತಾ ಬಸವಣ್ಣ.
ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದ ತಾ ಬಸವಣ್ಣ.
ಎನ್ನ ಕಾರಣ ತನುವಿಂಗೆ ಭಾವಲಿಂಗವಾದ ತಾ ಬಸವಣ್ಣ.
ಇದೆಂತೆಂದರಿದೆನಾಗಿ ಗವರೇಶ್ವರಲಿಂಗದಲ್ಲಿ ಸುಖಿಯಾದೆನು.

*

ಮರುಳಶಂಕರದೇವರು

೧೨೫

ಅಯ್ಯಾ, ಅಷ್ಟತನುಮೂರ್ತಿಗಳಿಲ್ಲದಲ್ಲಿಂದತ್ತತ್ತ, ಅನಿರ್ವಾಚ್ಯವಾಗಿದ್ದಿರಯ್ಯ.
ಅಯ್ಯಾ, ನಿಮ್ಮ ವಿನೋದದಿಂದ ನೀವೇ ವಾಚಾಸ್ವರೂಪದಿಂದ ಜಂಗಮವಾದಿರಿ ದೇವಾ.
ನಿಮ್ಮ ಮಹಾತ್ಮೆಯ ನೀವೆ ಬಲ್ಲಿರಿ.

ನಿಮ್ಮ ಮುಖವೈದರಿಂದ ಉದಯಿಸಿದ
ಪಂಚಭೂತಾದಿ ಸಕಲತತ್ವಂಗಳೇ ಪದಾರ್ಥವೆಂದು ನಿಮಗರ್ಪಿಸಲು,
ಪಂಚಾಕ್ಷರಿ ಪ್ರಾಣಾತ್ಮಕನಾಗಿ ಬಂದಾತ ಬಸವಣ್ಣ.
ಪಾದತೀರ್ಥದಲ್ಲಿ ಬೆಳಸ ಬಿತ್ತಿ, ಕ್ರೀಯಿಂದಾದ ಬೆಳೆಸಿರಿವಂತನಾಗಿ
ಗುರುವಿಂಗಿತ್ತ, ಲಿಂಗಕ್ಕಿತ್ತ, ಮತ್ತಾ ಜಂಗಮಕ್ಕಿತ್ತ ಬಸವಣ್ಣ.
ಬಸವಣ್ಣನಿಂತಹ ಶ್ರೀಮಂತನೆಂದರಿದು,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣಬಸವಣ್ಣನ ಪ್ರಸಾದವ
ಹಾಸಿ ಹೊದ್ದುಕೊಂಡಿರ್ದೆನಯ್ಯಾ ನಿಮ್ಮ ಧರ್ಮ ನಿಮ್ಮ ಧರ್ಮ.

೧೨೬

ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು.
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು.
ಬಸವಣ್ಣ ನಡೆದುದೇ ಮಾರ್ಗ, ಅಖಿಳಗಣಂಗಳಿಗೆ.
ಬಸವಣ್ಣ ನುಡಿದುದೇ ವೇದ, ಮಹಾಪುರುಷರಿಗೆ,
ಬಸವಣ್ಣನನಾದಿ, ಲಿಂಗವಾದಿ ಎಂದರಿದೆನಾಗಿ
ಬಸವಣ್ಣನ ನೆನವುತಿರ್ದೆನಯ್ಯಾ.
ಬಸವಣ್ಣ[ನ] ಪಾದವಿಡಿದೆನಾಗಿ ಲಿಂಗವೇದಿಯಾದೆನು.
ಬಸವಣ್ಣನ ಬಾಗಿಲ ಕಾಯ್ದೆನಾಗಿ ಪ್ರಸಾದ ಸಾಧ್ಯವಾಯಿತ್ತು.
ಬಸವಣ್ಣನ ಕರುಣದಿಂದ ಪ್ರಭುದೇವರ ನಿಲವ ಕಂಡೆನು.
ಬಸವಣ್ಣನ ಬೋಧೆಯಿಂದ ಜಂಗಮವೇ ಲಿಂಗವೆಂದರಿದೆನು.
ಆ ಜಂಗಮಮುಖದಿಂದಲ್ಲದೆ ಲಿಂಗತೃಪ್ತಿಯಾಗದು.
ಪ್ರಸಾದಸಿದ್ಧಿಯಾದಲ್ಲದೆ ಭವಂ ನಾಸ್ತಿಯಾಗದು,
ಇದು ಕಾರಣ,
ಶುದ್ಧಸಿದ್ಧಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಬಸವಣ್ಣನ ನಂಬಿ,
ನಾನು ಕೆಟ್ಟು ಬಟ್ಟಬಯಲಾಗಿ ಹೋದೆನಯ್ಯಾ
ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ,

೧೨೭

*ಒಂದ, ಮೂರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಮೂರ, ಆರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಆರ, ಮೂವತ್ತಾರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಮೂವತ್ತಾರ, ಆರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಆರ, ಮೂರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಮೂರ, ಒಂದ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು.
ಆ ಒಂದು, ತಾನೆಯಾಗಿಪ್ಪನಯ್ಯ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾವಧಾನಿಯಯ್ಯ ನಮ್ಮ ಬಸವಣ್ಣನು.
ಇಂತಪ್ಪ ಸರ್ವಸಂಗಪರಿತ್ಯಾಗಿಯಯ್ಯ ನಮ್ಮ ಬಸವಣ್ಣನು.
ಇಂತಪ್ಪ ಕಾರುಣ್ಯಪ್ರಸಾದಿಯಯ್ಯ ನಮ್ಮ ಬಸವಣ್ಣನು.
ಇಂತಪ್ಪ ಸರ್ವ[೪೧]ಕಾರಣ[೪೧]ನಿರ್ಮುಕ್ತನಯ್ಯ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾಂಗಲಿಂಗಿಯಯ್ಯ ನಮ್ಮ ಬಸವಣ್ಣನು.
ಇಂತಪ್ಪ ಸರ್ವನಿರ್ವಾಣಿಯಯ್ಯ ನಮ್ಮ ಬಸವಣ್ಣನು.
ಇಂತಪ್ಪ ಬಸವಣ್ಣನ ಮಹಿಮೆಯ ನೀವೆ ಬಲ್ಲಿರಿ.
ಅಸಂಖ್ಯಾತರು, ಮಹಾಪುರುಷರು, ಪ್ರಭುದೇವರು,
ಮುಖ್ಯವಾದ ನಿಲವಿನ ಶ್ರೀಚರಣಕ್ಕೆ ನಾನು
ಶರಣಾರ್ಥಿ, ಶರಣಾರ್ಥಿ, ಶರಣಾರ್ಥಿ ಎಂದು
ಶಬ್ದಮುಗ್ಧವಾಗಿ ಉರಿಯುಂಡ ಕರ್ಪುರದಂತೆ
ನಿಮ್ಮ ಶ್ರೀಚರಣವ ಬೆರಸಿದೆನಯ್ಯ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು,
ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ
ನಿಮ್ಮ ಧರ್ಮ, ನಿಮ್ಮ ಧರ್ಮ

---

* + ಮಹಾಲಿಂಗ ತ್ರಯೋರ್ಲಿಂಗಂ ತ್ರಿವಿಧಂ ಷಡ್ವಿಧೋ ಮುಖಂ।
ತ್ರಿವಿಧೇಕ ಮುಖೋರ್ಲಿಂಗಂ ಮಹಾಲಿಂಗಂತು ದರುಶನಂ॥
೪೧-೪೧ ಕ (ಚೆ)

*

ಹಾವಿನಹಾಳ ಕಲ್ಲಯ್ಯ

೧೨೮

ತನುವ ಗುರುವಿಂಗಿತ್ತ, ಮನವ ಲಿಂಗಕ್ಕಿತ್ತ,
ಧನವ ಜಂಗಮಕ್ಕಿತ್ತ ಎನ್ನ ಬಸವರಾಜನಯ್ಯ.
ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ ಸಿದ್ಧ,
ಜಂಗಮದಲ್ಲಿ ಪ್ರಸಿದ್ಧ ಪ್ರಸಾದಿಯಯ್ಯ ಎನ್ನ ಬಸವರಾಜನು.
ಲಿಂಗದಲ್ಲಿ ದೀಕ್ಷೆ, ಶಿಕ್ಷೆ, ಸ್ವಾನುಭಾವ, ಆಯತ, ಸ್ವಾಯತ, ಸನ್ನಿಹಿತ ಎನ್ನ ಬಸವರಾಜನಯ್ಯ,
ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣ ಬಸವರಾಜನಯ್ಯ.

*

ಬಹುರೂಪಿ ಚೌಡಯ್ಯ

೧೨೯

ಸಂಗ ಸಮನಿಸದಂದು, ಲಿಂಗವುತ್ಪತ್ಯವಾಗದಂದು,
ಸಂಗಾ ಬಸವಾ ಎಂಬ ಸಬುದವೆಲ್ಲಿಯದೋ,
ಸಂಗಾ ಬಸವಾ ಎಂಬ ಸಬುದವ ಲಿಂಗಿಗಳೆತ್ತಬಲ್ಲರು?
ರೇಕಣ್ಣಪ್ರಿಯ ನಾಗಿನಾಥ, ಬಸವಣ್ಣನಿಂದ ಬದುಕಿದೆನು.

೧೩೦

ಶೂನ್ಯ [೪೨]ಸನ್ನಿಹಿತ[೪೨]ವಾದಲ್ಲಿ,
[೪೩]ಶೂನ್ಯಪದಾರ್ಥವಾದಲ್ಲಿ, ಶೂನ್ಯಪ್ರಸಾದ[೪೩]ವಾದಲ್ಲಿ
ಅದು ಬಸವಣ್ಣನ ಪ್ರಸಾದವೆಂದು
ಆನು ಬಸವಣ್ಣನ ಕೂಡೆ ಆಡುತಿರ್ದೆನು.
ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿದೆನು.

೪೨–೪೨ ಸಹಿತ (ಚೆ) ೪೩–೪೩ ಶೂನ್ಯ ಪದಾರ್ಥ ಪ್ರಸಾದ (ಚೆ)

೧೩೧

ಸರದೊಳಗೆ ಸರಗಟ್ಟಿ ಸರ ಹರಿದವ ನಾನಯ್ಯ.
ಮಹದೊಳಗೆ ಮನೆಗಟ್ಟಿ ಮನೆಬೆಂದವ ನಾನಯ್ಯ.
ಕಿಚ್ಚಿನೊಳಗೆ ಕಿಚ್ಚನೊಟ್ಟಿ ಕಾದವ ನಾನಯ್ಯ.
ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯ.
ಬಸವಣ್ಣನೆನ್ನ ಬಹುರೂಪಕ್ಕೆ ಸೂತ್ರಧಾರಿಯಾದ; ಸೂತ್ರವಾಗಿ ಹೋದೆ ನಾ.
ಬಸವಣ್ಣನಿಂದ ಕೆಟ್ಟೆ ಕಾಣಾ, ರೇಕಣ್ಣಪ್ರಿಯ ನಾಗಿನಾಥ,
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ.

*

ಮೋಳಿಗೆಯ ಮಾರಯ್ಯ

೧೩೨

ಎನ್ನ ಚಿತ್ತಕ್ಕೆ ನಕಾರವಾದನಯ್ಯ ಬಸವಣ್ಣನು.
ಎನ್ನ ಬುದ್ಧಿಗೆ ಮಕಾರವಾದನಯ್ಯ ಬಸವಣ್ಣನು.
ಎನ್ನ ಅಹಂಕಾರಕ್ಕೆ ಶಿಕಾರವಾದನಯ್ಯ ಬಸವಣ್ಣನು.
ಎನ್ನ ಮನಕ್ಕೆ ವಕಾರವಾದನಯ್ಯ ಬಸವಣ್ಣನು.
ಎನ್ನ ಜ್ಞಾನಕ್ಕೆ ಯಕಾರವಾದನಯ್ಯ ಬಸವಣ್ಣನು.
ಎನ್ನ ಮತಿಗೆ ಓಂಕಾರವಾದನಯ್ಯ ಬಸವಣ್ಣನು.
ಎನ್ನ ನಾದಕ್ಕೆ ಅಕಾರವಾದನಯ್ಯ ಬಸವಣ್ಣನು.
ಎನ್ನ ಬಿಂದುವಿಂಗೆ ಉಕಾರವಾದನಯ್ಯ ಬಸವಣ್ಣನು.
ಎನ್ನ ಕಳೆಗೆ ಮಕಾರವಾದನಯ್ಯ ಬಸವಣ್ಣನು.
ಎನ್ನ ಭವವ ಕೊಂದೆಹೆನೆಂದು ಬಕಾರವಾದನಯ್ಯ ಬಸವಣ್ಣನು.
ಎನ್ನ ಸಕಲಾಸೆಯ ಕೊಂದೆಹೆನೆಂದು ಸಕಾರವಾದನಯ್ಯ ಬಸವಣ್ಣನು.
ಎನ್ನ ವಿಕಾರವ ಕೊಂದೆಹೆನೆಂದು ವಕಾರವಾದನಯ್ಯ ಬಸವಣ್ಣನು.
ಎನ್ನ ಭಕ್ತಿಗೆ ಬಕಾರವಾದನಯ್ಯ ಬಸವಣ್ಣನು.
ಎನ್ನ ಶಕ್ತಿಗೆ ಸಕಾರವಾದನಯ್ಯ ಬಸವಣ್ಣನು.

ಎನ್ನ ವಚಸ್ಸಿಂಗೆ ವಕಾರವಾದನಯ್ಯ ಬಸವಣ್ಣನು.
ಇಂತಪ್ಪ ಮಹಾಪ್ರಣಮಗಳೇ ಬಸವಣ್ಣನಾಗಿ,
ಬಸವಣ್ಣನೇ ಮಹಾಪ್ರಣಮಂಗಳಾಗಿ,
ತಮ್ಮ ಮಠಕ್ಕೆ ತಾವೇ ಬಂದು ಭಕ್ತಿ ವಸ್ತುವನಿತ್ತಡೆ,
ನಾನದ, ನಿಃಕಳಂಕ ಮಲ್ಲಿಕಾರ್ಜುನನ ಶರಣರಿಗಿತ್ತು ಸುಖಿಯಾದೆನು.

೧೩೩

ಎನ್ನ ಅರಿವು ಮರಹು ಬಸವಣ್ಣಂಗರ್ಪಿತ.
ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತ
ಎನ್ನಂತರಂಗ ಬಹಿರಂಗ ಬಸವಣ್ಣಂಗರ್ಪಿತ.
ಎನ್ನ ಭಾವ ನಿರ್ಭಾವ ಬಸವಣ್ಣಂಗರ್ಪಿತ.
ನಾ ನೀನೆಂಬುದು ಬಸವಣ್ಣಂಗರ್ಪಿತ.
ಇಂತು,
ಬಸವಣ್ಣಂಗೆ ಎನ್ನ ನಿವೇದಿಸಿದೆನಾಗಿ ಆವ ಅವಲಂಬವುಯಿಲ್ಲದೆ
ನಿರಾಲಂಬದಲ್ಲಿ ನಿಜನಿವಾಸಿಯಾಗಿರ್ದೆನಯ್ಯ.
ನಿಃಕಳಂಕ ಮಲ್ಲಿಕಾರ್ಜುನಾ.

೧೩೪

ಬ ಎಂಬಲ್ಲಿ ಬಳಿಸಂದೆನು.
ಸ ಎಂಬಲ್ಲಿ ಸಯವಾದೆನು.
ವ ಎಂಬಲ್ಲಿ ನಿರ್ವಯಲಾದೆನು.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಬಸವಣ್ಣನ ನಿಜಪದವ ಸಂದಿಲ್ಲದೆ ಬೆರಸಿ,
ನಮೋ ನಮೋ ಎಂಬ ಹಂಗಳಿದುಳಿದೆನು.

*

ಅಜ್ಞಾತ ಕರ್ತೃ

೧೩೫

ಬಸವಣ್ಣನ ಏಕಾಕ್ಷರದಿಂದ ತ್ರಯಾಕ್ಷರ ಪುಟ್ಟಿತ್ತು.
ಬಸವಣ್ಣನ ಏಕಾಕ್ಷರದಿಂದ ಪಂಚಾಕ್ಷರ ಪುಟ್ಟಿತ್ತು.
ಬಸವಣ್ಣನ ಏಕಾಕ್ಷರದಿಂದ ಷಡಾಕ್ಷರ ಪುಟ್ಟಿತ್ತು.
ಇಂತು, ಬಸವಣ್ಣನ ಏಕಾಕ್ಷರ, ತ್ರಯಾಕ್ಷರ, ಪಂಚಾಕ್ಷರ, ಷಡಾಕ್ಷರ
ಎನ್ನ ಸರ್ವಾಂಗದಲ್ಲಿ ತುಂಬಿ, ಅಕ್ಷರಮಯವಾಗಿತ್ತು;
ಗುಹೇಶ್ವರಲಿಂಗದಲ್ಲಿ ಪ್ರಭುವೇ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ ಬಸವಣ್ಣನ ಕಾರುಣ್ಯದಿಂದಾ.

೧೩೬

ಬಸವಣ್ಣನ ನೆನವುತ್ತ ನೆನೆವುತ್ತ ಗುರುವ ಕಂಡೆ.
ಬಸವಣ್ಣ[ನ] ನೆನವುತ್ತ ನೆನವುತ್ತ ಲಿಂಗವ ಕಂಡೆ.
ಬಸವಣ್ಣನ ನೆನೆವುತ್ತ ನೆನವುತ್ತ ಪಾದೋದಕವ ಕಂಡೆ.
ಬಸವಣ್ಣನ ನೆನವುತ್ತ ನೆನವುತ್ತ ಪಂಚಾಚಾರವ ಕಂಡೆ.
ಗುಹೇಶ್ವರಲಿಂಗದಲ್ಲಿ ಪ್ರಭುವೇ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ
ಬಸವಣ್ಣನ ನೆನದ ಕಾರಣದಿಂದಾ.

*

ಹಡಪದ ಅಪ್ಪಣ್ಣ

೧೩೭

ಆದಿ ಅನಾದಿಗಳೆಂಬವು ನಾಮಕ್ಕೆ ಬಾರದ ಮುನ್ನ,
ಶೂನ್ಯ ನಿಶ್ಶೂನ್ಯ ಸುರಾಳ ನಿರಾಳವೆಂಬ ಸುಳುಹುದೋರದಂದು,
ತಾನು ತಾನೆಂಬ ತಲ್ಲಣವಿಲ್ಲದಂದು,
ಬಟ್ಟಬಯಲು ಬ್ರಹ್ಮವೇ ಘಟ್ಟಿಯಾದ ಘನವೆಂತೆಂದಡೆ,

ನಿಮ್ಮನುವ ನೀವರಿದ ಘನಮಹಿಮರು ತಿಳಿದುನೋಡಿರಣ್ಣಾ.
ಬಟ್ಟಬಯಲೆಂದಡಾರು? ಬಸವಣ್ಣ
ಬ್ರಹ್ಮವೆಂದಡಾರು? ಬಸವಣ್ಣ
ಆ ಬಸವನ ಆ ಮೂಲಾಂತವ ಬಲ್ಲವರು ನೀವು ಕೇಳಿರೇ,
ಬಸವಾ ಎಂಬ ತ್ರಯಾಕ್ಷರ ಮೂಲಪ್ರಣಮ.
ಮತ್ತೆ,
ಬ ಎಂಬುದೇ ಚಿನ್ನಾದವಾಯಿತ್ತು.
ಸ ಎಂಬುದೇ ಚಿದ್ಬಿಂದುವಾಯಿತ್ತು.
ವ ಎಂಬುದೇ ಚಿತ್ಕಳೆಯಾಯಿತ್ತು.
ಮತ್ತೆ,
ಬ ಎಂಬುದೇ ನಾದವಾಯಿತ್ತು.
ಸ ಎಂಬುದೇ ಬಿಂದುವಾಯಿತ್ತು.
ವ ಎಂಬುದೇ ಕಳೆಯಾಯಿತ್ತು.
ಮತ್ತೆ,
ಬ ಎಂಬುದೇ ಗುರುವಾಯಿತ್ತು.
ಸ ಎಂಬುದೇ ಲಿಂಗವಾಯಿತ್ತು.
ವ ಎಂಬುದೇ ಜಂಗಮವಾಯಿತ್ತು.
ಮತ್ತೆ,
ಬ ಎಂಬುದೇ ನಾದವೆತ್ತಲು,
ಸ ಎಂಬುದೇ ಬಿಂದು ಬಂದು ಕೂಡಲು,
ವ ಎಂಬ ಕಳೆ ಬೆಳಗಲು,
ಅಖಂಡಗೋಳಕಾಕಾರವಪ್ಪ ಆದಿಪ್ರಣಮವೆನಿಸಿತ್ತು ನೋಡಾ.
ಆದಿ ಪ್ರಣಮ, ಅನಾದಿ ಪ್ರಣಮ, ಅಂತ್ಯಪ್ರಣಮ,
ನಮ್ಮ ಬಸವಣ್ಣನ ಸ್ಥೂಲ ಸೂಕ್ಷ್ಮ ಕಾರಣ ಕಾಣಿರೇ,
ಇಂತಪ್ಪ ಬಸವಣ್ಣ,
ಬಯಲ ಬ್ರಹ್ಮವನೇ ಮೇದು, ಮೆಲುಕಿರಿದು,
ಗೋಮಯವಿಕ್ಕಲು ಪೃಥ್ವಿಯಾಯಿತ್ತು.
ಇಂತಪ್ಪ ಬಸವಣ್ಣ, ಜಲವ ಬಿಡಲು ಅಪ್ಪುಮಯವಾಯಿತ್ತು.
ಇಂತಪ್ಪ ಬಸವಣ್ಣನ ತೇಜವೇ ಅಗ್ನಿಯಾಯಿತ್ತು.

ಇಂತಪ್ಪ ಬಸವಣ್ಣನ ಉಚ್ವಾಸ ನಿಶ್ವಾಸವೇ ವಾಯುವಾಯಿತ್ತು.
ಇಂತಪ್ಪ ಬಸವಣ್ಣನ ಶಬ್ದವೇ ಆಕಾಶವಾಯಿತ್ತು.
ಇಂತಪ್ಪ ಬಸವಣ್ಣನ ಕಂಗಳ ಬೆಳಗೇ ಚಂದ್ರಸೂರ್ಯರು.
ಇಂತಪ್ಪ ಬಸವಣ್ಣನ ಬುದ್ಧಿಯೇ ಆತ್ಮನೆನಿಸಿ,
ಅಷ್ಟತನುಮೂರ್ತಿ ಎನಿಸಿ, ಅಜಾಂಡ ಬ್ರಹ್ಮಾಂಡ
ಕರಾಂಡಕೋಟಾನುಕೋಟಿ ಅಂಡಪಿಂಡಾಂಡಗಳಿಗೆ ಒಡಲಾಗಿ,
ಅಡಿಮುಡಿಗೆ ತಾನೆ ಆದಿಯಾಗಿ, ಸರ್ವವು ಬಸವಣ್ಣನ ಒಡಲೊಳಗೆ
ಹುಟ್ಟುತ್ತ ಬೆಳೆವುತ್ತ ಅಡಗುತಿಪ್ಪವು ಕಾಣಿರೇ;
ಇಂತೀ ಸರ್ವಪ್ರಾಣಿಗಳಿಗೆ ಬಸವಣ್ಣನ
ಗೋಮಯದಿಂದ ಹುಟ್ಟಿದ ಪೃಥ್ವಿಯೇ ಪದಾರ್ಥ,
ಜಲದಿಂದ ಹುಟ್ಟಿದ ಉದಕವೇ ಸಾರಾಯ,
ತೇಜದಿಂದ ಹುಟ್ಟಿದ ಅಗ್ನಿಯೇ ಕಳೆ,
ಉಚ್ವಾಸ ನಿಶ್ವಾಸದಿಂದ ಹುಟ್ಟಿದ ವಾಯುವೇ ಚೈತನ್ಯ,
ಶಬ್ದದಿಂದ ಹುಟ್ಟಿದ ಆಕಾಶವೇ ಭಾವ,
ಕಂಗಳ ಬೆಳಗಿಂದ ಹುಟ್ಟಿದ ಚಂದ್ರಸೂರ್ಯರೇ ಅರಿವು ಮರಹು,
ಬುದ್ಧಿಯಿಂದ ಹುಟ್ಟಿದ ಆತ್ಮನೇ ಚೈತನ್ಯಾತ್ಮನು,
ಇಂತೀ ಅಡಿಮುಡಿಗೆ ತಾನೆ ಆದಿಯಾಗಿ,
ಆದಿಯಲ್ಲಿ ಹುಟ್ಟಿ, ಮಧ್ಯದಲ್ಲಿ ಬೆಳದು,
ಅಂತ್ಯದಲ್ಲಿ ನಮ್ಮ ಬಸವಣ್ಣನಲ್ಲಿ ಅಡಗುತಿಪ್ಪರು ಕಾಣಿರೇ,
ಇಂತೀ ಸಕಲಪ್ರಾಣಿಗಳ ಒಳಹೊರಗೆ ಕೈಕೊಂಬುದಕ್ಕೆ
ಬೇರೊಂದು ದೇವರುಂಟಾದಡೆ ಬಲ್ಲರೆ ನೀವು ಹೇಳಿರೇ,
ಅಲ್ಲದಿರ್ದಡೆ ನಿಮ್ಮ ವೇದ ಶಾಸ್ತ್ರ ಆಗಮ ಪುರಾಣಂಗಳ ಕೈಯಲ್ಲಿ ಹೇಳಿಸಿರೇ.
ಇದು ಕಾರಣ,
ಅನಾದಿ ಸಂಸಿದ್ಧವಾಗಿ ಬಯಲಬ್ರಹ್ಮವೇ ಬಸವಣ್ಣನೆಂಬುದು ಕಾಣುತಿರ್ದು, ಕೇಳುತ್ತಿರ್ದು,
ಕೀಳುದೈವಂಗಳನಾರಾಧಿಸಿ ಅರ್ಚಿಸಿ ಪೂಜಿಸಿ,
ಹಲವು ಜಾತಿ, ಹಲವು ದರುಶನವೆನಿಸಿಕೊಂಡು,
ಹೊಲಬುದಪ್ಪಿದಿರಿ ಹುಲಮನುಜರಿರಾ,
ಇನ್ನಾದಡೂ ಅರಿದು, ನೆನದು ಬದುಕಿ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಸಂಗನಬಸವಣ್ಣನ ಶ್ರೀಪಾದವ.

೧೩೮

ಲಿಂಗ ಜಂಗಮ, ಜಂಗಮ ಲಿಂಗವೆಂಬುದನಾರು ಬಲ್ಲರು?
ಬಸವಣ್ಣನಲ್ಲದೆ.
ಲಿಂಗಕ್ಕೆ ಆಧಾರವಿಲ್ಲವೆಂದು ಮರ್ತ್ಯಲೋಕಕ್ಕೆ ಬಂದು,
ಅವತರಿಸಿದನಯ್ಯ ಬಸವಣ್ಣನು.
ಲಿಂಗಮುಖ ಜಂಗಮವೆಂದರಿದು,
ತನ್ನನರ್ಪಿಸಿ, ಇದಿರತಪ್ಪಿಸಿ ಇರಬಲ್ಲನಯ್ಯ ಬಸವಣ್ಣನು.
ಅಂಗಮುಖವೆಲ್ಲ ನಷ್ಟವಾಗಿ
ಭೃತ್ಯಾಚಾರವೆ ೪೪ತನು೪೪ವಾಗಿರಬಲ್ಲನಯ್ಯ ಬಸವಣ್ಣನು.
ಪ್ರಾಣನ ಕಳೆಯರಿತು ಜಂಗಮವೇ ಪ್ರಾಣವಾಗಿರಬಲ್ಲನಯ್ಯ ಬಸವಣ್ಣನು.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಆಚಾರವೇ ಪ್ರಾಣವಾಗಿಪ್ಪ ಸಂಗನಬಸವಣ್ಣನೆ
ನಿಮಗೆ ಭಕ್ತನಯ್ಯ ಪ್ರಭುವೇ.

೧೩೯

ಎನ್ನ ಆಚಾರ, ವಿಚಾರ ಬಸವಣ್ಣಂಗರ್ಪಿತವಾದವು.
ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿತವಾದವು.
ಎನ್ನ ಸರ್ವಾಚಾರಸಂಪತ್ತು ಬಸವಣ್ಣಂಗರ್ಪಿತವಾದವು.
ಬಸವಪ್ರಿಯ ಕೂಡಲಚೆನ್ನಸಂಗಯ್ಯನ
ಹೃದಯಕಮಲದಲ್ಲಿ ನಿಜನಿವಾಸಿಯಾಗಿದ್ದೆನು.

೧೪೦

ಎಲ್ಲಾ ಪುರಾತರ ಚರಣಕೆ ಇಲ್ಲಿರ್ದೇ ಶರಣಂದರೆ ಸಾಲದೆ?
ಬಸವಾ, ಬಸವಪ್ಪ, ಬಸವಯ್ಯ ಶರಣೆಂದರೆ ಸಾಲದೆ?
ಎಲ್ಲರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತಿಪ್ಪ
ಮಹಾಮಹಿಮನಾಗಿ ಎನಗಿದೇ ದಿವ್ಯ ಮಂತ್ರ
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಬಸವಾ, ಬಸವಾ, ಬಸವಾ ಶರಣೆಂದರೆ ಸಾಲದೆ.

೪೪-೪೪ ತನುತ (ಚೆ)

*

ಸೋಮನಾಥ (?)

೧೪೧

ಬಸವ ಜಗದಾದಿ ಬೀಜ,
ಬಸವ ಆನತ ಸುರಭೂಜ,
ಬಸವಾ ಬಸವಾ ಎಂಬ ನಾಮ ಸಾಲದೆ?
ಬಸವ ಭವರೋಗ ವೈದ್ಯ,
ಬಸವ ವೇದಾಂತ[೪೫]ವೇದ್ಯ,[೪೫]
ಬಸವಾ ಬಸವಾ ಎಂಬ ಲೀಲೆ ಸಾಲದೆ?
ಬಸವ ಕರುಣಾಮೃತಸಿಂಧು,
ಬಸವ ಪರಮಬಂಧು,
ಬಸವ ವರದ ಸೋಮನಾಥ, ನೀನೆ
ಬಸವಾ, ಬಸವಾ, ಬಸವಾ ಶರಣೆಂದರೆ ಸಾಲದೆ?

*

ಸಿದ್ಧರಾಮ

೧೪೨

ಅರ್ಚಿಸಲು ಬೇಡವದ, ಪೂಜಿಸಲು ಬೇಡವದ,
ನಿತ್ಯ ಜಪ ತಪ ನಿನಗೆ ಬೇಡಾ.
ಸಚ್ಚಿದಾನಂದ ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯ[೪೬]ನ[೪೬]
ಬಸವಾಕ್ಷರತ್ರಯವ [೪೭]ನೆನೆ[೪೭] ನಿನಗೆ ನಿತ್ಯಪದವು.*

ಬಸವೇಶ್ವರದೇವರ ಸ್ತೋತ್ರ ಸಮಾಪ್ತಂ ಮಂಗಳಮಹಾಶ್ರೀ

❖❖

೪೫–೪೫ ವೈ (ಚೆ) ೪೬–೪೬ X (ಚೆ) ೪೭–೪೭ X (ಚೆ) *–* X (ಹು)

ಬೋಳಬಸವರಾಜದೇವರು ಸಂಪಾದಿಸಿದ

ಬಸವಸ್ತೋತ್ರದ ವಚನಗಳು

*

ಪ್ರಭುದೇವ

೧

ಆದಿಯಾಧಾರವಿಲ್ಲದ ಆಗಮನಾಸ್ತಿಯಾಗಿಪ್ಪ,
ಸಾಗರವಿರಹಿತನನಾರೂ ಅರಿಯರಲ್ಲಾ.
ದಶಮುಖದ ಮಾಣಿಕ್ಯದೆಸಳ ಕಂಗಳು
ಪರ್ವಿಪಸರಿಸಿರ್ದುದನಾರೂ ಅರಿಯರಲ್ಲಾ.
ಪಿರಿದೊಂದು ವೃಕ್ಷವು ಅತಿಶಯದ ರೂಪಾಗಿ
ಪೃಥ್ವಿಗಿಂಬಾಗಿರ್ದುದನಾರೂ ಅರಿಯರಲ್ಲಾ.
ಅಂತರಂಗದ ಭುವನವ ಮೆಟ್ಟಿ ನೋಡುತ್ತಿಪ್ಪ,
ಬೆಡಗಿನ ತಾವರೆಯ ಮಧ್ಯದ ತಾರಕಿಯನಾರೂ ಅರಿಯರಲ್ಲಾ
ರವಿಶಶಿಗಳಿಬ್ಬರೂ ನಯನನೋಟದ
ಪುಷ್ಪ[1]ಪರಿಮಳವಾಗಿರ್ದುದನಾರೂ ಅರಿಯರಲ್ಲಾ.
ಇಂಬು ನಯನದಲ್ಲಿ ಸಂಭ್ರಮವಿಲ್ಲದ ರೂಪು
ಮಹತ್ತಾಗಿರ್ದುದನಾರೂ ಅರಿಯರಲ್ಲಾ.
ಸಾಗರದೊಳಗಣ ಜ್ಯೋತಿಯಂತೆ ಗೊಹೇಶ್ವರನೊಳಗೆ
ಸಂಗನಬಸವಣ್ಣ ನಿಂದ ನಿಲವನುಪಮಿಸಬಾರದು ಕಾಣಾ ಸಿದ್ಧರಾಮಯ್ಯ.

೨

ಕೆಳಗೇಳು ಭುವನಂಗಳಿಲ್ಲದಂದು,
ಮೇಲೇಳು ಭುವನಂಗಳಿಲ್ಲದಂದು,

೧-೧ + ದ (ಚೆ)

ಅಂದಾದ ಗುರು, ಅಂದಾದ ಲಿಂಗ, ಅಂದಾದ ಜಂಗಮ;
ಅಂದಾದ ಪ್ರಸಾದ, ಅಂದಾದ ಪಾದೋದಕ;
ಇಂದಿನದಾವುದೂ ಹೊಸತಿಲ್ಲಯ್ಯಾ.
ಶಶಿಧರಂಗೆ ವೃಷಭನಾಗಿದ್ದ[೧]ಂದು[೧]
ಗೊಹೇಶ್ವರನ ಸಂಗನಬಸವಣ್ಣ[ನಂ]ದೇ ಸಾಹಿತ್ಯನು.

೩

ಕೃತಯುಗದಲ್ಲಿ ನೀನು
ಸ್ಕಂದನೆಂಬ ಗಣೇಶ್ವರನಾಗಿರ್ದುದ ನಾ ಬಲ್ಲೆ ಬಸವಣ್ಣಾ.
ತ್ರೇತಾಯುಗದಲ್ಲಿ ನೀನು
ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ನಾ ಬಲ್ಲೆ ಬಸವಣ್ಣಾ.
ದ್ವಾಪರದಲ್ಲಿ ನೀನು
ವೃಷಭವೆಂಬ ಗಣೇಶ್ವರನಾಗಿರ್ದುದ ನಾ ಬಲ್ಲೆ ಬಸವಣ್ಣಾ.
ಕಲಿಯುಗದಲ್ಲಿ ನೀನು
ಬಸವಣ್ಣನೆಂಬ ಗಣೇಶ್ವರನಾಗಿ, ಸರ್ವಾಚಾರ ಸಂಪನ್ನನಾಗಿ,
ಭಕ್ತಿಜ್ಞಾನವ ಕಂದೆರವೆಯ ಮಾಡಿ, ಶಿವಾಚಾರದ ಘನವ ಬೆಳವಿಗೆಯ ಮಾಡಿ
ಶಿವಭಕ್ತಿಧ್ವಜವನೆತ್ತಿಸಿ,
ಮರ್ತ್ಯಲೋಕದೊಳಗೆ ಹರಹಿದ ಭೇದವ, ಭೇದಿಸಿ ನೋಡಿ ಆನು ಅರಿದೆ.
ಗೊಹೇಶ್ವರ ಸಾಕ್ಷಿಯಾಗಿ,
ನಿಮ್ಮ ಮಹಾತ್ಮೆಗೆ ನಮೋ ನಮೋ ಎನುತಿರ್ದೆನು ಕಾಣಾ ಸಂಗನಬಸವಣ್ಣಾ.

೪

ಆದಿಯ ತೋರಿದ, ಅನಾದಿಯನರುಹಿದ ಬಸವಣ್ಣ.
ಇಹವ ಕೆಡಿಸಿದ, ಪರವ ನಿಲಿಸಿದ ಬಸವಣ್ಣ.
ಕಾಯ ಪ್ರಸಾದ, ಪ್ರಾಣ ಪ್ರಸಾದ,
ಜ್ಞಾನ ಪ್ರಸಾದವ ತೋರಿದ ಬಸವಣ್ಣ.
ಗೊಹೇಶ್ವರನ ಶರಣ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೧-೧ ಅಪ್ಪಂದು (ಬ)

೫

ಆದಿಲಿಂಗ ನಿಮ್ಮಿಂದ ಎನಗಾಯಿತ್ತು ಬಸವಣ್ಣಾ.
ಅನಾದಿಯ ಜ್ಞಾನಜಂಗಮ ನಿಮ್ಮ ನೆನದಡೆ
ಎನಗೆ ಸಾಧ್ಯವಾಯಿತ್ತು ಬಸವಣ್ಣಾ.
ನಿಮ್ಮ ಕೃಪೆಯಿಂದ ಸರ್ವಾಂಗಲಿಂಗಿಯಾದೆ ಬಸವಣ್ಣಾ.
ನಿಮ್ಮ ಕಾರುಣ್ಯದೃಷ್ಟಿಯಿಂದ ಪ್ರಾಣಲಿಂಗ ಸಂಬಂಧಿಯಾದೆ ಬಸವಣ್ಣಾ.
ನಿಮ್ಮ ಸದ್ಬೋಧೆಯಿಂದ ಪರಮಜಂಗಮವಾದೆ ಬಸವಣ್ಣಾ.
ಇಂತಿವು ಮೊದಲಾದ ಸರ್ವಾಚಾರ ಸಂಪತ್ತು.
ನೀನನುಗ್ರಹಿಸಿಕೊ[೧][ಟ್ಟೆಯೆಂ][೧]ಬುದ ನಿಮ್ಮ ಪ್ರಮಥರೆಲ್ಲರೂ ಬಲ್ಲರು.
ನಮ್ಮ ಗೊಹೇಶ್ವರಲಿಂಗವು ಸಾಕ್ಷಿಯಾಗಿ,
ನಿಮ್ಮ ಕರುಣದ ಶಿಶು ನಾನು ಕಾಣಾ, ಸಂಗನಬಸವಣ್ಣಾ,

೬

ಆದಿಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲ,
ಪಾದೋದಕ ಸ್ಥಲಂಗಳನಾರು ಬಲ್ಲರಯ್ಯಾ? ಬಸವಣ್ಣನಲ್ಲದೆ,
ಆದಿಯ ತೋರಿಸಿದ, ಅನಾದಿಯನರುಪಿದ, ಬಸವಣ್ಣ,
ನಾದ ಬಿಂದು ಕಳೆಗಳ ಭೇದಮಂ ಭೇದಿಸಿ ತೋರಿದ, ಬಸವಣ್ಣ,
ಹುಟ್ಟುವುದ ಮುಟ್ಟಿ ತೋರಿದ, ಬಸವಣ್ಣ,
ಹುಟ್ಟದೆ ಇದ್ದುದ ಮುಟ್ಟಿ ತೋರಿದ ಬಸವಣ್ಣ.
ಎನ್ನಂತರಂಗವನನುಮಾಡಿ, ನಿಜಲಿಂಗವ ನೆಲೆಗೊಳಿಸಿದ, ಬಸವಣ್ಣ.
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನಿಂದ
ಸಕಲ ಸನುಮತವನರಿದೆನಯ್ಯಾ.

೭

ಅನಾದಿಪುರಾತನ ಬಸವಣ್ಣಾ,
ಕಾಲಮಾಯೆಗಳೆರಡೂ ನಿಮ್ಮ ಮುಂದಿರ್ದು ನಿಮ್ಮ ಕಾಣೆವೆನುತ್ತಿಹವು.
ಆದಿಪುರುಷ ಬಸವಣ್ಣಾ,
ಅಸುರಾಸುರರು ನಿಮ್ಮ ಮುಂದಿರ್ದು ನಿಮ್ಮ ಕಾಣೆವೆನುತ್ತಿಹರು.

೧-೧ ಟ್ಟನೆಂ (ಬ)

ನಾದಪುರುಷ ಬಸವಣ್ಣಾ,
ನಾದ ಮಂತ್ರಂಗಳು, ಪಂಚಮಹಾವಾದ್ಯಂಗಳು ನಿಮ್ಮ ಮುಂದಿರ್ದು
ನಿಮ್ಮ ಕಾಣೆವೆನುತ್ತಿಹವು.
ವೇದಪುರುಷ ಬಸವಣ್ಣಾ,
ವೇದ ಶಾಸ್ತ್ರಾಗಮ ಪುರಾಣಂಗಳು ನಿಮ್ಮ ಮುಂದಿರ್ದು
ನಿಮ್ಮ ಕಾಣೆವೆನುತ್ತಿಹವು.
ಅಗಮ್ಯಪುರುಷ ಬಸವಣ್ಣಾ,
ಅಂಗಾಲ ಕಣ್ಣವರು, ಮೈಯೆಲ್ಲಾ ಕಣ್ಣವರು
ನಂದಿವಾಹನರು, ಗಂಗೆವಾಳುಕರೆಲ್ಲರು ನಿಮ್ಮ ಮುಂದಿರ್ದು,
ನಿಮ್ಮ ಕಾಣೆವೆನುತ್ತಿಹರು.
ಅಗೋಚರಪುರುಷ ಬಸವಣ್ಣಾ,
ಅಪ್ರಮಾಣರೆಲ್ಲರು ನಿಮ್ಮ ಮುಂದಿರ್ದು ನಿಮ್ಮ ಕಾಣೆವೆನುತ್ತಿಹರು.
ಸರ್ವಜ್ಞ ಪುರುಷ ಬಸವಣ್ಣಾ,
ಈ ಸರ್ವರೂ ನಿಮ್ಮ ಒಳಗಿರ್ದು ನಿಮ್ಮ ಕಾಣೆನೆನುತ್ತಿಹರ.
ಇಂತೀ ಸರ್ವಪ್ರಕಾರದವರೆಲ್ಲರೂ
ನಿಮ್ಮ ಸಾಧಿಸಿ, ಭೇದಿಸಿ ಪೂಜಿಸಿ, ತರ್ಕಿಸಿ, ಹೊಗಳಿ ಕಾಣೆನೆಂದು
ನಿಮ್ಮಿಂದವೇ ಉತ್ಪತ್ಯ, ಸ್ಥಿತಿ, ಲಯಂಗಳಾಗುತ್ತಿಹರು.
ಅದು ಕಾರಣ,
ನಮ್ಮ ಗೊಹೇಶ್ವರಲಿಂಗದಲ್ಲಿ ಭಕ್ತಿವಡೆದ ಅನಂತಭಕ್ತರೆಲ್ಲಾ
ಬಸವಣ್ಣಾ, ಬಸವಣ್ಣಾ, ಬಸವಣ್ಣಾ ಎನುತ್ತ ಬದುಕಿದರಯ್ಯಾ.

೮

ಕೆಳಗೇಳು ಲೋಕಂಗಳಿಲ್ಲದಂದು,
ಮೇಲೇಳು ಲೋಕಂಗಳಿಲ್ಲದಂದು,
[೨]ಸಮಸ್ತ[೨] ಬ್ರಹ್ಮಾಂಡಂಗಳಿಲ್ಲದಲ್ಲಿಂದತ್ತತ್ತ
ಬಸವಣ್ಣಾ, ನೀನು ಲಿಂಗಭಕ್ತ; ಜಂಗಮ ಪ್ರಾಣಿ,
ಶಶಿಧರನ ಶರಣಂಗೆ ವೃಷಧರ ಸ್ವಾಯತವಾಗಿ,

೨–೨ ಸಹಸ್ರ (ಬ)

ನಮ್ಮ ಗೊಹೇಶ್ವರಲಿಂಗಕ್ಕೆ ಸಂಗನಬಸವಣ್ಣನೇ ಭಕ್ತನೆಂದರಿದು,
ನಾನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೯

ಶತಕೋಟಿ ಲೋಕಂಗಳೆಲ್ಲಾ
ಬಸವಣ್ಣನ ಕೋಡಿನಲ್ಲಿರ್ದುವು ನೋಡಾ.
ಅತೀತವಪ್ಪ ಪರಶಿವನು
ಬಸವಣ್ಣನ ಹಿಳಿಲ ಕೆಳಗೆ ಸೂಕ್ಷ್ಮರೂಪಾಗಿರ್ದನು ನೋಡಾ.
ಸಕಲ ಶ್ರುತಿ, ಸ್ಮೃತಿಗಳೆಲ್ಲಾ
ಬಸವಣ್ಣನ ಹೊಗಳಲರಿಯದೆ ಕೆಟ್ಟವು ನೋಡಾ.
ಕರ್ತನಾ[೨]ದಿ[೨]ನಲ್ಲದೆ ಭೃತ್ಯನಲ್ಲ;
ಬಿನ್ನಾಣವ ಹೊಲಲರಿಯೆ.
ಒಂದೆತ್ತಿಲ್ಲದಿರ್ದಡೆ ಕತ್ತಲೆಯಾಗದೆ ಈ ಜಗವೆಲ್ಲವು?
ಹರಿವ ನದಿಗಳೆಲ್ಲ ಅಮೃತವಾದವು
ಕಾಣಾ ಬಸವಣ್ಣಾ ನಿನ್ನಿಂದ.
ಹರಿಹನ್ನಿಕೋಟಿಯುಗಜುಗಂಗಳು
ನಿನ್ನ ಉಸಿರಿನಲ್ಲಿ ಇತ್ತಿದಡೆ, ಬ್ರಹ್ಮಾಂಡಕ್ಕೆ ಹೋದವು;
ಬಿಟ್ಟಡೆ ಬಿದ್ದವು; ಕಾಯ್ದಡೆ ಬದುಕಿದವು.
ನೀನು ಹೊರೆವ ಯುಗಜುಗಂಗಳು
ಒಂದು ತೃಣಮಾತ್ರವಾದ ಕಾರಣ,
ನಿನ್ನ ಗೋಮಯದ ಷಡುಸಮ್ಮಾರ್ಜನೆಯ ಮೇಲೆ ಕುಳ್ಳಿರ್ದು,
ಗೊಹೇಶ್ವರನೆಂಬ ಲಿಂಗವು ಶುದ್ಧನಾದ ಕಾಣಾ ಸಂಗನಬಸವಣ್ಣಾ.[೩]

೧೦

ಬಸವಣ್ಣನ ಉಂಗುಷ್ಠದಲ್ಲಿ, ಅಷ್ಟಾಷಷ್ಟಿ ಸ್ಥಾನಂಗಳ
ಉದಕವ ಮೀರಿದ ಮಹಾತೀರ್ಥದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ಆಧಾರಲಿಂಗ ನಾಭಿ ಪರಿಯಂ[ತರವು]

೨-೨ ದೆ (ಬ) ೩-೩ + ನಿನ್ನಿಂದ (ಚೆ)

ಗುರುಸ್ವರೂಪದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ನಾಭಿ ಹೃದಯಗಳ ಪರಿಯಂತರವು
ಜಂಗಮಸ್ವರೂಪದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ೪ಗಳ೪ ಮುಖಭ್ರೂಮಧ್ಯುನ್ಮನಿ ಉತ್ತಮಾಂಗ ಪರಿಯಂತರವು
ಲಿಂಗಸ್ವರೂಪದೊಟ್ಟಿಲ ಕಂಡೆನಯ್ಯಾ.
ಬಸವಣ್ಣನ ವಿಶ್ವತೋಮುಖವನುಳ್ಳ ಶರೀರದೊಳಗೆ
ಈ ಪರಿಯ ಕಂಡಾತನೆ ಭಕ್ತ ಜಂಗಮವೆಂಬೆನು ಕಾಣಾ ಗೊಹೇಶ್ವರಾ.

೧೧

ಅಂದೊಮ್ಮೆ ಧರೆಯ ಮೇಲೆ ಉದಕವಿಲ್ಲದಂದು
ಕೆಳಯಿಂಕೆ ಪಾದವ ನೀಡಿದೆಯಲ್ಲಾ ಬಸವಣ್ಣಾ.
ಧರೆಯ ತಾಗಿದ ಪಾದವ ಧಿಗಿಲನೆ ಎತ್ತಲು,
ಭುಗಿಲನೆ ಎದ್ದು ಉದಕ ನಿಮ್ಮ ಉರಸ್ಥಲಕ್ಕೆ ಬಾರದೆ ಬಸವಣ್ಣಾ.
ಕನಲಿದಂಕೆಗೆ ನಿಂದು ನೋಡಲು ಸಪ್ತಸಾಗರಂಗಳೆಲ್ಲವು
ನಿಮ್ಮ ಕಿರುಪಾದದಲ್ಲಿ ಅಡಗವೆ ಬಸವಣ್ಣಾ?
ಅದನೆಂತು ಕೊಡಬಹುದು, ಅದನೆಂತು ಕೊಳಬಹುದು.
ನಮ್ಮ ಗೊಹೇಶ್ವರಲಿಂಗಕ್ಕೆ
ನಿಮ್ಮ ಪಾದೋದಕವೇ ಮಜ್ಜನ ಕಾಣಾ ಸಂಗನಬಸವಣ್ಣಾ.

೧೨

ಭಾವುಕರಿಗೆ,
ಮೂರ್ತಿಯಾರಾಧನೆ ಸಂಸಾರಕ್ಕೆ ಬೀಜ; ಲಿಂಗಾರಾಧನೆ ಭವಕ್ಕೆ ಬೀಜ.
ಲಿಂಗಸ್ವಾಯತ ಜಂಗಮವೇ ಪ್ರಾಣಲಿಂಗ ಬಸವಣ್ಣಂಗೆ.
ಇದು ಕಾರಣ, ಗೊಹೇಶ್ವರಾ ಸಂಗನಬಸವಣ್ಣನ ಮರೆಹೊಕ್ಕು ಬದುಕಿದೆನು.

೧೩

ಅಂಗದಲ್ಲಿ ಅಳವಟ್ಟಿಪ್ಪ ಆಚಾರವೆ ಲಿಂಗವೆಂದರಿದ ಬಸವಣ್ಣನು.
ಮನದಲ್ಲಿ ಬೆಳಗುತ್ತಿಪ್ಪ ಅರಿವೆ ಜಂಗಮವೆಂದರಿದ ಬಸವಣ್ಣನು.

೪–೪ ಗರಳ (ಬ)

ಈ ಎರಡರ ಸಂಗವೆ ತಾನೆಂದರಿದ ಬಸವಣ್ಣನು.
ಮಾಡುವ ದಾಸೋಹವೆ ಲಿಂಗಜಂಗಮವೆಂದರಿದ ಬಸವಣ್ಣನು.
ನಮ್ಮ ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ
ನಿಲವನರಿಯಬೇಕು ಕೇಳಾ ಚಂದಯ್ಯ.

೧೪

ಕುಲದೊಳಗೆ ಹುಟ್ಟಿ ಕುಲವ ಬೆರಸದೆ,
ತಮ್ಮ ನಿಲವ ಬಲದಿಪ್ಪರಾರು ಹೇಳಾ, ಬಸವಣ್ಣನಲ್ಲದೆ?
ಹಬ್ಬಿದ ಮೂರು ಬೆಟ್ಟಕ್ಕೆ ತನ್ನ ಮನವ ಹಬ್ಬಲೀಯದೆ,
ಲಿಂಗಜಂಗಮಕ್ಕೆ ಸವೆಸಿ ಸ್ವಯಲಿಂಗವಪ್ಪವರಿನ್ನಾರು ಹೇಳಾ ಬಸವಣ್ಣನಲ್ಲದೆ?
"ಸ್ವಯೋಲಿಂಗ, ಸ್ವಯೋಶರಣ, ಸ್ವಯೋಭೋಗ"ವೆಂದುದಾಗಿ,
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣಂಗೆ ನಮೋ ನಮೋ ಎಂಬೆನು.

೧೫

ಮನಸುಖವನರಿಯನಾಗಿ, ಲಿಂಗವೆಂದರಿದ ಬಸವಣ್ಣನು.
ಧನಸುಖವನರಿಯನಾಗಿ, ಜಂಗಮವೆಂದರಿದ ಬಸವಣ್ಣನು.
ತನುಸುಖವನರಿಯನಾಗಿ, ಪ್ರಸಾದವೆಂದರಿದ ಬಸವಣ್ಣನು.
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣ ಸ್ವಯಲಿಂಗವಾದ ಕಾರಣ.

೧೬

ಆಯತದಲ್ಲಿ, ಪೂರ್ವಾಚಾರಿ ಸಂಗನಬಸವಣ್ಣನ ಕಂಡೆ.
ಸ್ವಾಯತದಲ್ಲಿ, ಪೂರ್ವಾಚಾರಿ ಸಂಗನಬಸವಣ್ಣನ ಕಂಡೆ.
ಸನ್ನಿಹಿತದಲ್ಲಿ, ಪೂರ್ವಾಚಾರಿ ಸಂಗನಬಸವಣ್ಣನ ಕಂಡೆ.
ಗೊಹೇಶ್ವರಲಿಂಗದಲ್ಲಿ ಸರ್ವಾಚಾರ ಸಂಪನ್ನನಾದ
ಪೂರ್ವಾಚಾರಿ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೧೭

ತನು ದಾಸೋಹ ಅವಯವಂಗಳೆಲ್ಲವು ಆಚಾರ,
ಮನ ಪವನ ಪ್ರಾಣವೆಂಬುವೆಲ್ಲವು ಅರಿವಿನ ಮೂರ್ತಿ ನೀನು ನೋಡಾ ಬಸವಣ್ಣಾ.

ಒಳಗು ಹೊರಗು, ಹೊರಗು ಒಳಗೆಂಬುದನರಿಯದ
ಸತ್ಯಸದಾಚಾರಿ ನೀನು ನೋಡಾ ಬಸವಣ್ಣಾ.
ನಿನ್ನಳವನರಿಯಲಾನೇತರವನಯ್ಯಾ ಬಸವಣ್ಣಾ.
ಅಂತರಂಗದಲ್ಲಿ ಅರಿವು ಉಂಟಾದರೇನು?
ಎನ್ನ ಕಾಯದಲ್ಲಿ ಭಕ್ತಿ ಸ್ವಾಯತವಿಲ್ಲ; ಆಚಾರವೆಂಬುದು ಅತ್ತತ್ತಲಿಲ್ಲ.
ಸರ್ವಾಚಾರ ಸಂಪನ್ನಾ, ನಿನ್ನಳವ ನಾನೆತ್ತ ಬಲ್ಲೆನಯ್ಯಾ ಬಸವಣ್ಣಾ.
ಗೊಹೇಶ್ವರ ಸಾಕ್ಷಿಯಾಗಿ,
ನಿನ್ನ ಮಹಾಮನೆಯ ಕಾವಲ ಬಂಟ ನಾನೆಂಬುದ
ನಿಮ್ಮ ಪ್ರಮಥರೆಲ್ಲರು ಬಲ್ಲರು ಕಾಣಾ, ಸಂಗನಬಸವಣ್ಣಾ.

೧೮

ಆಚಾರವಂಗಲೇಪವಾಗಿ,
ಕಾಯ[೫]ಮು[೫]ಕ್ತನು ನೀನು ನೋಡಯ್ಯಾ, ಬಸವಣ್ಣಾ
ಅರಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ,
ಮನೋಮುಕ್ತನು ನೀನು ನೋಡಯ್ಯಾ, ಬಸವಣ್ಣಾ,
ಅರ್ಪಿತ ಪರಿಣಾಮದಲ್ಲಿ ಅವಿರಳವಾಗಿಪ್ಪುದಾಗಿ
ಸರ್ವಾಂಗಲಿಂಗೈಕ್ಯನು ನೀನು ನೋಡಯ್ಯಾ, ಬಸವಣ್ಣಾ,
ಮುಕ್ತನಲ್ಲೆಂಬ ಬಳಕೆಯ ಮಾತಂತಿರಲಿ, ಬಯಲಭ್ರಮೆಯನೆ ಕಳೆದು,
ಭವದ ಬಟ್ಟೆಯ ಹರಿದಿಪ್ಪುದ ನಮ್ಮ ಗೊಹೇಶ್ವರಲಿಂಗವು ಬಲ್ಲನು.
ಮರೆಯಾಗಿ ನುಡಿವರೆ, ಸಂಗನ ಬಸವಣ್ಣಾ?

೧೯

ಆಯತ, ಸ್ವಾಯತ, ಸನ್ನಿಹಿತನಾಗಿ
ಆರಾಧ್ಯಲಿಂಗದಲ್ಲಿ ಅನುಭಾವಿಯಾಗಿಪ್ಪ, ಬಸವಣ್ಣ,
ಜಂಗಮಲಿಂಗಪ್ರಾಣಿಯಾಗಿ,
ಪ್ರಾಣ ನಿಃಪ್ರಾಣವಾಗಿಪ್ಪ, ಬಸವಣ್ಣ,
ಗೊಹೇಶ್ವರಲಿಂಗದಲ್ಲಿ, ಸಂಗನಬಸವಣ್ಣನ ಆಚಾರದ ಪರಿ,

೫–೫ ಯು (ಚೆ)

ನಿನಗಲ್ಲದೆ ಅರಿಯಬಾರದು.
ಎನಗೊಮ್ಮೆ ತಿಳುಹಿಕೊಡಾ ಚೆನ್ನಬಸವಣ್ಣಾ.

೨೦

ಹಿಂದಣದನೊಂದು ಮಾಡಿ, ಸಂದು ಸಂಶಯವಿಲ್ಲದೆ
ನಿಂದ ನಿಲವ ತೋರುವ, ಬಸವಣ್ಣನ ಪರಿಯ ನೋಡಾ,
ಮುಂದಿರ್ದ ಕೂಸಿನ ಸಂದು ಸರವೊಂದಾಗಿ,
ಎರಡೊಂದಾದ ಘನಮಹಿಮ ಬಸವಣ್ಣನ ನಾನೇನೆನ್ನಲಿ?
ಮೂರು ಮೂರನೆ ಮಾಡಿ, ಆರು ಆರನೆ ತಂದು,
ಬೇರೆ ಮತ್ತಿಲ್ಲದ ಬಸವಣ್ಣನ ಪರಿಯ ನೋಡಾ.
ಹತ್ತು ಹತ್ತನೆ ಕೂಡಿ, ಧಾತು ಧಾತನೆ ಬೆರಸಿ,
ಕಳೆಕಳೆಗಳೊಂದಾದ ಬಸವಣ್ಣನ ಪರಿಯ ನೋಡಾ.
ಕೃತಯುಗ, ತ್ರೇತಾಯುಗ, ದ್ವಾಪರ [ಯುಗ], ಕಲಿಯುಗವಿಲ್ಲದಂದು,
ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲವಿಲ್ಲದಂದು,
ಇಂತೀ ತ್ರಿವಿಧವು ಬಸವಣ್ಣನ ಕೈಯಲ್ಲಿ ನಿಕ್ಷೇಪವಯ್ಯಾ,
ಅಂದು ಲಿಂಗದಲನಿಮಿಷ, ಇಂದು ಜಂಗಮದಲನಿಮಿಷ,
ಬಸವಣ್ಣ, ಅಂದಾದ ಗುರುವೆಂದರಿದೆನಾಗಿ, ಗೊಹೇಶ್ವರಾ
ಅಮಳೋಕ್ಯ ಸಂಗನಬಸವಿದೇವನ ಶ್ರೀಪಾದಕ್ಕೆ ಶರಣು ಶರಣು.

೨೧

ಅವಸ್ಥೆ ಅವಸ್ಥೆಯ ಕೂಡಿ, ಬಿಂದು ನಾದವ ಕೂಡಿ,
ಕಳೆಕಳೆಗಳೊಂದಾದ ಬಸವಣ್ಣನ ಪರಿಯ ನೋಡಾ.
ಆನೆಂಬ ಗುರುಪದ ತಾನೆಯಾದನಯ್ಯಾ, ಬಸವಣ್ಣನು.
ಹಿಂದು ಮುಂದನೊಂದು ಮಾಡಿ, ಒಂದೆ ಮೂರ್ತಿಯಾಗಿ,
ಲಿಂಗಜಂಗಮವಾದ ಬಸವಣ್ಣನ ಪರಿಯ ನೋಡಾ.
ಗೊಹೇಶ್ವರ, ಅಮಳೋಕ್ಯ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೨೨

ಮಾಡಿ ಮಾಟವ ಮರೆದು, ಕೂಡಿ ಕೂಟವ ಮರೆದು,
ಬಯಲ ಸಮರಸದೊಳಗೆ ಬಯಲು ಬಯಲಾಗಿಪ್ಪವರಾರು ಹೇಳಾ, ಬಸವಣ್ಣನಲ್ಲದೆ?
ತನ್ನ ಭಿನ್ನವ ಮಾಡಿ ಅನ್ಯವೇನೂ ಇಲ್ಲದೆ,
ತನ್ನ ತಾ ಮರೆದಿಪ್ಪವರಾರು ಹೇಳಾ, ಬಸವಣ್ಣನಲ್ಲದೆ?
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ನಿಲವಿಂಗೆ ನಮೋ ನಮೋ ಎಂಬೆನು.

೨೩

ಭೂಮಿಯಿಂದ ಹುಟ್ಟಿ ಅಂತರದಲ್ಲಿ ಬೆಳೆವ ಫಲವೃಕ್ಷ,[೫]
ಸರ್ವರಿಗೆ ಭೂತಹಿತವಾಗಿ ಫಲರಸವನೀವಂತೆ,
ನೀ ಭೂಮಿಯಾಗಿ, ನಾ ಸಸಿಯಾಗಿ ಬೆಳದ ಬೆಂಬಳಿಯಲ್ಲಿ
ಗೊಹೇಶ್ವರಲಿಂಗವೆಂಬುದು ಫಲವಾಯಿತ್ತು; ಅರಿದರಿಕೆ ರಸವಾಯಿತ್ತು.
ಸಂಗನಬಸವಣ್ಣನಿಂದ ಎನ್ನಂಗ ಬಯಲಾಯಿತ್ತು.

*

ಚೆನ್ನಬಸವಣ್ಣ

೨೪

ಪ್ರಥಮಕಾಲದಲ್ಲಿ ನಿರಾಲಂಬಿಯಾಗಿದ್ದೆ, ಬಸವಣ್ಣ,
ದ್ವಿತೀಯಕಾಲದಲ್ಲಿ ತೇಜೋಮೂರ್ತಿಯಾಗಿದ್ದೆ, ಬಸವಣ್ಣ.
ತೃತೀಯ ಕಾಲದಲ್ಲಿ ನಾದಮೂರ್ತಿಯಾಗಿದ್ದೆ, ಬಸವಣ್ಣ.
ಚತುರ್ಥಕಾಲದಲ್ಲಿ ಚೈತನ್ಯರೂಪ ತಾಳಿದ್ದೆ, ಬಸವಣ್ಣ.
ಪಂಚಮಕಾಲದಲ್ಲಿ ಧರ್ಮಮೂರ್ತಿಯಾಗಿದ್ದೆ, ಬಸವಣ್ಣ.
ಷಷ್ಠಮಕಾಲದಲ್ಲಿ ತ್ರಿವಿಧಭಕ್ತಿ ಕಾರಣವಾಗಿ ಬಂದೆ, ಬಸವಣ್ಣ.
ಇದು ಕಾರಣವಾಗಿ,
ನೀವು, ನಿಮ್ಮ ಪ್ರಮಥರು ಸಹಿತ
ಪ್ರಾಣಲಿಂಗದ ಹರಹ ಮುಟ್ಟಿತೋರಬೇಕೆಂಬ ನಿಮಿತ್ತ,

---

೫ + ದಂತೆ (ಬ)

ನಿಮ್ಮ ಬೆಸನವಿಡಿದು ನಿಮ್ಮ ಕರಕಮಲದಲ್ಲಿ ಹುಟ್ಟಿದೆ ಬಸವಣ್ಣಾ.
ಇದು ಕಾರಣ, ಕೂಡಲಚೆನ್ನಸಂಗಾ
ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು.

೨೫

ಧರೆಯಾಕಾಶವಿಲ್ಲದಂದು,
ಅನಲ ಪವನ ಜಲ ಕೂರ್ಮರಿಲ್ಲದಂದು,
ಚಂದ್ರಸೂರ್ಯರೆಂಬವರ ಕಳೆದೋರದಂದು,
ಆತ್ಮಸ್ಥಲ ಅನುಭಾವಕ್ಕೆ ಬಾರದಂದು,
ನಿತ್ಯನಿಜಲಿಂಗವ ಬಲ್ಲವರಾರಯ್ಯಾ ಬಸವಣ್ಣಾ ನೀವಲ್ಲದೆ?
ಮಹಾಘನಕ್ಕೆ ಘನವಾಹನವಾಗಿ, ಅಗಮ್ಯಸ್ಥಲದಲ್ಲಿ ನಿಂದು,
ಭರಿತರಾಗಿರಬಲ್ಲವರಾರಯ್ಯಾ ಬಸವಣ್ಣ ನೀವಲ್ಲದೆ?
ನಿಮ್ಮ ಒಕ್ಕು ಮಿಕ್ಕ ಶೇಷಪ್ರಸಾದವ
ಕಾರುಣ್ಯದ ಶಿಶುವಾಗಿ ಒಡಲೊಳಗೆ ಇದ್ದಲ್ಲಿ
ವಿಭೂತಿಯ ಪಟ್ಟವ ಕಟ್ಟಿ, ಹಸ್ತಮಸ್ತಕ ಸಂಯೋಗವ ಮಾಡಿ,
ಎನ್ನನುಳುಹಿದವರಾರಯ್ಯಾ, ಬಸವಣ್ಣಾ ನೀವಲ್ಲದೆ?
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ, ನಾನು
ನಿಮ್ಮ ಕರುಣದ ಕಂದನೆಂಬುದ ಮೂರು ಲೋಕವೆಲ್ಲವೂ ಬಲ್ಲುದು
ಕಾಣಾ, ಸಂಗನಬಸವಣ್ಣಾ.

೨೬

ಆದಿ, ಅನಾದಿ, ಅನಾಗತ, ಅನಂತ, ಅದ್ಭುತ,
ತಮಂಧ, ತಾರಜ, ತಂಡಜ, ಬಿಂದುಜ,
ಭಿನ್ನಾಯುಕ್ತ, ಅವ್ಯಕ್ತ, ಅಮದಾಯುಕ್ತ,
ಮಣಿರಣ, ಮಾನ್ಯರಣ, ವಿಶ್ವರಣ, ವಿಶ್ವಾವಸು, ಅಲಂಕೃತ,
ಕೃತಯುಗ, ತ್ರೇತಾಯುಗ, ದ್ವಾಪರ (ಯುಗ), ಕಲಿಯುಗ=
ಇಂತೀ ಇಪ್ಪತ್ತೊಂದು ಯುಗಂಗಳ ನಿರ್ಮಿಸಿದಾತ ನಮ್ಮ ಬಸವಣ್ಣ.
ಪ್ರಥಮಯುಗದಲ್ಲಿ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಂಗಳಿಲ್ಲದಂದು,
ಆರೂ ಆರೂ ಇಲ್ಲದಂದು, ನಾಮವಿಲ್ಲದಂದು,

ಅಂದು ನಿಶ್ಶೂನ್ಯವಾಗಿದ್ದ ಕಾಣಾ ನಮ್ಮ ಬಸವಣ್ಣ.
ಅಂದು ನಿಮ್ಮ ನಾಭಿ ಕಮಲದಲ್ಲಿ ಜಲಪ್ರಳಯ ಪುಟ್ಟಿತ್ತು.
ಆ ಜಲಪ್ರಳಯದಲ್ಲಿ ಒಂದು ಗುಳ್ಳೆ ಲಿಂಗಾಕಾರವಾಗಿ ಪುಟ್ಟಿತ್ತು.
ಆ ಲಿಂಗವ ತಕ್ಕೊಂಡು ಸ್ಥಾಪ್ಯವಿಟ್ಟಾತ ನಮ್ಮ ಬಸವಣ್ಣನು.
ಇಪ್ಪತ್ತನೆಯ ಯುಗದಲ್ಲಿ
ಓಂಕಾರವೆಂಬ ಮೇವ ಮೇದು, ಮೆಲುಕಿರಿದು,
ಪರಮಾರ್ಥವೆಂಬ ಹೆಂಡಿಯನಿಕ್ಕಿ,
ನೊಸಲ ಕಣ್ಣ ತೆರೆದು ನೋಡಲಾಗಿ ಆ ಹೆಂಡಿ ಭಸ್ಮವಾಯಿತ್ತು.
ಆ ಭಸ್ಮವನೆ ತೆಗೆದು ತಳಿಯಲಾಗಿ ಭೂಮಂಡಲ ಹೆಪ್ಪಾಯಿತ್ತು.
ಹೆಪ್ಪಾಗಲಿಕ್ಕಾಗಿ ತೊಡೆಯ ಮೇಲಿದ್ದ ಲಿಂಗವ ತಕ್ಕೊಂಡು
ಸ್ಥಾಪ್ಯವಿಟ್ಟಾತ ನಮ್ಮ ಬಸವಣ್ಣ.
ಹತ್ತೊಂಬತ್ತನೆಯ ಯುಗದಲ್ಲಿ
ಕತ್ತಲೆಯ ಕಾಳೋದರನೆಂಬ ರುದ್ರನ
ನಿರ್ಮಿಸಿದಾತ ನಮ್ಮ ಬಸವಣ್ಣ.
ಹದಿನೆಂಟನೆಯ ಯುಗದಲ್ಲಿ
ಏಕಪಾದದ ಮಾಹೇಶ್ವರನ ನಿರ್ಮಿಸಿದಾತ ನಮ್ಮ ಬಸವಣ್ಣ.
ಹದಿನೇಳನೆಯ ಯುಗದಲ್ಲಿ
ಷಟ್ಸ್ಥಲಂಗಳ ನಿರ್ಮಿಸಿದಾತ ನಮ್ಮ ಬಸವಣ್ಣ.
ಹದಿನಾರನೆಯ ಯುಗದಲ್ಲಿ
ವೇದಪುರಾಣಾಗಮಶಾಸ್ತ್ರಂಗಳ ನಿರ್ಮಿಸಿದಾತ ನಮ್ಮ ಬಸವಣ್ಣ.
ಹದಿನೈದನೆಯ ಯುಗದಲ್ಲಿ
ಅಮೃತಮಥನವ ಮಾಡಿದಾತ ನಮ್ಮ ಬಸವಣ್ಣ.
ಹದಿನಾಲ್ಕನೆಯ ಯುಗದಲ್ಲಿ
ತೆತ್ತೀಸಕೋಟಿದೇವರ್ಕಳ ನಿರ್ಮಿಸಿದಾತ ನಮ್ಮ ಬಸವಣ್ಣ
ಹದಿಮೂರನೆಯ ಯುಗದಲ್ಲಿ
ಸೌರಾಷ್ಟ್ರ ಸೋಮೇಶ್ವರನ ನಿರ್ಮಿಸಿದಾತ ನಮ್ಮ ಬಸವಣ್ಣ.
ಹನ್ನೆರಡನೆಯ ಯುಗದಲ್ಲಿ

ಪಾರ್ವತಿ ಪರಮೇಶ್ವರನ ನಿರ್ಮಿಸಿದಾತ ನಮ್ಮ ಬಸವಣ್ಣ.
ಹನ್ನೊಂದನೆಯ ಯುಗದಲ್ಲಿ
ಏಕಾದಶ ರುದ್ರರ ನಿರ್ಮಿಸಿದಾತ ನಮ್ಮ ಬಸವಣ್ಣ.
ಹತ್ತನೆಯ ಯುಗದಲ್ಲಿ
ದಶವಿಷ್ಣುರ ನಿರ್ಮಿಸಿದಾತ ನಮ್ಮ ಬಸವಣ್ಣ.
ಒಂಬತ್ತನೆಯ ಯುಗದಲ್ಲಿ
ನವಬ್ರಹ್ಮರ ನಿರ್ಮಿಸಿದಾತ ನಮ್ಮ ಬಸವಣ್ಣ.
ಎಂಟನೆಯ ಯುಗದಲ್ಲಿ
ಅಷ್ಟದಿಕ್ಪಾಲರ ನಿರ್ಮಿಸಿದಾತ ನಮ್ಮ ಬಸವಣ್ಣ.
ಏಳನೆಯ ಯುಗದಲ್ಲಿ
ಸಪ್ತ ಸಮುದ್ರಗಳ ನಿರ್ಮಿಸಿದಾತ ನಮ್ಮ ಬಸವಣ್ಣ.
ಆರನೆಯ ಯುಗದಲ್ಲಿ
ಷಣ್ಮುಖದೇವರ ನಿರ್ಮಿಸಿದಾತ ನಮ್ಮ ಬಸವಣ್ಣ
ಐದನೆಯ ಯುಗದಲ್ಲಿ
ಪಂಚಮುಖದೀಶ್ವರನ ನಿರ್ಮಿಸಿದಾತ ನಮ್ಮ ಬಸವಣ್ಣ.
ನಾಲ್ಕನೆಯ ಯುಗದಲ್ಲಿ
ಚತುರ್ಮುಖದ ಬ್ರಹ್ಮನ ನಿರ್ಮಿಸಿದಾತ ನಮ್ಮ ಬಸವಣ್ಣ.
ಮೂರನೆಯ ಯುಗದಲ್ಲಿ
ಬ್ರಹ್ಮ, ವಿಷ್ಣು, ರುದ್ರರ ನಿರ್ಮಿಸಿದಾತ ನಮ್ಮ ಬಸವಣ್ಣ.
ಎರಡನೆಯ ಯುಗದಲ್ಲಿ
ಸಂಗಯ್ಯನ ನಿರ್ಮಿಸಿದಾತ ನಮ್ಮ ಬಸವಣ್ಣ
ಒಂದನೆಯ ಯುಗದಲ್ಲಿ
ಪ್ರಭುವೆಂಬ ಜಂಗಮವ ನಿರ್ಮಿಸಿದಾತ ನಮ್ಮ ಬಸವಣ್ಣ
ಇಂತೀ ಇಪ್ಪತ್ತೊಂದು ಯುಗಂಗಳಲ್ಲಿ
ಬಸವಣ್ಣನು ತಮ್ಮ ಕರಕಮಲವೆಂಬ ಗರ್ಭದಲ್ಲಿ ಜನಿಸಿದನೆಂದು,
ಕಕ್ಕಯ್ಯಗಳು ತಮ್ಮ ಮೋಹದ ಮಗನೆಂದು,
ಒಕ್ಕುದನಿಕ್ಕಿ ಸಲಹಿದರು ಕಾಣಾ ಕೂಡಲಚೆನ್ನಸಂಗಮದೇವಾ.

೨೭

ಕೃತಯುಗದಲ್ಲಿ ದೇವರು ದೇವಾಸುರನ ಕೊಲುವಲ್ಲಿ,
ಪ್ರಮಥನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಗಜಾಸುರನ ಚರ್ಮವ ಬಿಚ್ಚಿ [೬]ಆ[೬]ಜಾರಿ ಹೊದೆವಲ್ಲಿ,
ಉಗ್ರನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣ.
ಅಸುರಾಸುರರ ಶಿರೋಮಾಲೆಯ
ಕೊರಳಲ್ಲಿ, ಉರದಲ್ಲಿ ಹಾರವಾಗಿ ಧರಿಸಿ ಜಗಕ್ಕೆ ಜೂಬಾಗಿಪ್ಪಲ್ಲಿ,
ಶಂಕೆ ಇಲ್ಲದೆ ನಿಶ್ಶಂಕನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಸಮಸ್ತ ದೇವರಿಗೆ ಕರುಣಾಮೃತಮಂ ಸುರಿದು ಸುಖವನಿತ್ತು ರಕ್ಷಿಸುವಲ್ಲಿ,
ಶಂಕರನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಜಾಳಾಂಧರನೆಂಬ ಅಸುರನ ಕೊಲುವಲ್ಲಿ,
ಜಾಣರಿಗೆ ಜಾಣನಾಗಿ ವಿಚಿತ್ರನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ತ್ರೇತಾಯುಗದಲ್ಲಿ ಕಾಳಾಂಧರದೊಳಗೆ ಶಿವನು ನಿಜಮಂದಿರವಾಗಿಪ್ಪಲ್ಲಿ,
ಕಾಲಾಗ್ನಿರುದ್ರನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಪಿತಾಸುರನೆಂಬ ದೈತ್ಯನ ಕೊಂದು ಜಗವ ರಕ್ಷಿಸುವಲ್ಲಿ,
ಮಾತಾಪಿತನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ತಾಳಾಸುರನೆಂಬ ದೈತ್ಯನ ಕೊಂದು, ಜಗವ ರಕ್ಷಿಸಿ,
ಸೃಷ್ಟಿಯ ಕಲ್ಪಿಸಿ, ಬ್ರಹ್ಮಾಂಡ ಭಾರವ ಧರಿಸುವಲ್ಲಿ,
ಜಲಪ್ರಳಯದಲ್ಲಿ ಜಗನ್ನಾಥನಳಿಯದೆ ಇಪ್ಪಲ್ಲಿ,
ಜನನಮರಣವರ್ಜಿತನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಜಗವೆಲ್ಲಾ ಶೂನ್ಯವೆಂದಡೆ, ನಾನೆ ಹುಟ್ಟಿಸಿದೆನೆಂದು
ಆದಿಗಣನಾಥನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಸುರಾಸುರರು ಅಹಂಕಾರದಲ್ಲಿ ಹೆಚ್ಚಿ ಮೇರೆದಪ್ಪಿದಲ್ಲಿ ಗೂಳಿಯಾಗಿ[೭]ಹೋರಿ
ಎಲ್ಲರ[೭] ತೊತ್ತಳದುಳಿದು, ಒಕ್ಕಲಿಕ್ಕಿ, ಮಿಕ್ಕು ಮೀರಿ,
ನಂದಿಮಹಾಕಾಳನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಉರಿಗಣ್ಣ ತೆಗೆದರೆ ಉರಿದಾವು ಲೋಕಂಗಳೆಂದು ಜಗವ ಹಿಂದಿಕ್ಕಿಕೊಂಡು,
ವಂದ್ಯನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.

೬-೬ ಮ (ಬ) ೭-೭ ಹಾದಿಮಲ್ಲರ (ಬ)

ಉಮೆಯ ಕಲ್ಯಾಣದಲ್ಲಿ,
ಕಾಲಲೋಚನನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಅಂಧಕಾಸುರನ ಕೊಲುವಲ್ಲಿ,
ನೀಲಲೋಹಿತನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ತ್ರಿಪುರದಹನವ ಮಾಡುವಲ್ಲಿ,
ಸ್ಕಂದನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಬ್ರಹ್ಮಕಪಾಲ ವಿಷ್ಣುಕಂಕಾಳವನಿಕ್ಕುವಲ್ಲಿ,
ನೀಲಕಂಠನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ದ್ವಾಪರಯುಗದಲ್ಲಿ ಲಿಂಗಪ್ರಾಣ ಸಂಯೋಗವಾಗಿ,
ವೃಷಭನೆಂಬ ಗಣೇಶ್ವರನಾಗಿರ್ದ ನಮ್ಮ ಬಸವಣ್ಣನು.
ಕಲಿಯುಗದಲ್ಲಿ ಗುರುಲಿಂಗಜಂಗಮದ, ಪಾದೋದಕ ಪ್ರಸಾದದ
ಪೂರ್ವಾಶ್ರಯವ ಕಳೆದು, ಲಿಂಗವಾಗಿ ಕುಳಸ್ಥಳವನರಿತ
ಮಹಂತ ಕೂಡಲಚೆನ್ನಸಂಗನ ಮಹಾಮನೆಯಲ್ಲಿ,
ಸರ್ವಾಚಾರಸಂಪನ್ನ ಸಂಗನಬಸವಣ್ಣನೆಂಬ ಗಣೇಶ್ವರನಾಗಿರ್ದನು, ಕೇಳಾ ಪ್ರಭುವೆ

೨೮

ಎನಗೆನ್ನ ಗುರು ಬಸವಣ್ಣ ತೋರಿದ ಘನವ
ನಿಮಗೆ ಬಿನ್ನೈಸುವೆನು ಕೇಳಾ ಪ್ರಭುವೇ:
ಪ್ರಸಾದದಿಂದ ಹುಟ್ಟಿದ ಕಾಯಕ್ಕೆ
ಪ್ರಸಾದದಿಂದೊದಗಿದ ಲಿಂಗಮಂ ಕೊಟ್ಟು
ಪ್ರಸಾದಲಿಂಗಮುಖದಲ್ಲಿ ಪ್ರಸಾದಮಯವಾದ
ಪ್ರಣವ ಪಂಚಾಕ್ಷರಿಯಂ ಪ್ರಸಾದಿಸಿ,
ತನ್ನಾದಿ ರೂಪಿನಲ್ಲಿ ಅನಾದಿಲಿಂಗಪ್ರಸಾದವ ಭೋಗಮಂ ಮಾಡಿ,
ಆ ಪ್ರಸಾದದಿಂದೊದಗಿದ ಪ್ರಸಾದ[೭]ವ[೭]
ತನ್ನ ಪ್ರಸಾದಜ್ಞಾನವೆಂಬ ಪರಮಶಿಖಿಯಿಂ ದಹ್ಯಮಂ ಮಾಡಿ,
ಎನಗೆ, ಸಮಸ್ತ ಶಿವಭಕ್ತರ್ಗೆ ಇದು ಭಕ್ತಿ ನೀತಿಯೆಂದು ವಿಭೂತಿಯನಿಟ್ಟು,
ತ್ರಿಪುರದ ಸಂಚವನಳಿದು ತ್ರಿಜಗಮಂ ರಕ್ಷಿಸಲೆಂದು

೭–೭ ವೆನಗೆ (ಬ)

ತ್ರಿಲೋಚನದಲ್ಲಿ ಉಗ್ರಶಾಂತಿ ಗಾಂಭಿರ್ಯವೆಂಬ
ಜಲಬಿಂದುವೆ ಬೀಜವಾಗಿ ಬೆಳೆದ ರುದ್ರಾಕ್ಷಿಯಂ ಧರಿಸಿ, ಶಾಂಭವಿ ಮುದ್ರೆಯನೊತ್ತಿ,
ನಾದಬಿಂದುಕಳೆಯೊಂದಾದಂದಿನ
ಅನಾದಿ ಬೋಧ ಚೈತನ್ಯ ಜ್ಞಾನಲಿಂಗ ತಾನೆ ಜಂಗಮವೆಂದು ತಿಳುಪಿ,
ಆ ಜಂಗಮದ ಪಾದೋದಕ ಪ್ರಸಾದವೆ ಇಷ್ಟವಾದ
ಷಡ್ವಿಧಲಿಂಗದ ಮೂಲಾಂಗವೆನಿಸುವ ಇಷ್ಟಲಿಂಗಕ್ಕೆ
ಮಜ್ಜನ, ನೈವೇಧ್ಯಮಂ ಸಜ್ಜನ ಶುದ್ಧ ಶಿವಭಕ್ತಿಯಿಂದ ಮಾಡೆಂದ ಬಸವಣ್ಣ.
ಅದೆಂತೆಂದಡೆ : ಹಂಸೆಗೆ ಹಾಲನೆರೆವರಲ್ಲದೆ ಹುಳಿಯನೆರೆವರೆ?
ಪ್ರಸಾದ ಇಷ್ಟಲಿಂಗಕ್ಕೆ ಪ್ರಸಾದವೆ ಭೋಜನವೆಂದು ಬಸವಣ್ಣ ನಿರೂಪಿಸಲು
'ನಿರಂತರವೆ' ಎಂದು ಬಿನ್ನೈಸಿ ಬೋಧಿಸಿದ ಬಸವಣ್ಣ.
ಅದೆಂತೆಂದಡೆ :
ಪದಾರ್ಥಮಂ ಕೊಟ್ಟಡೆ ಫಲಪದ ತಪ್ಪದು;
ಎಂದನಯ್ಯಾ ಎನ್ನ ಗುರು ಬಸವಣ್ಣನು.
ಅದೆಂತೆಂದಡೆ :
ಪದಾರ್ಥವೆ ಕರ್ಮರೂಪು, ಪ್ರಸಾದವೆ ನಿಷ್ಕರ್ಮರೂಪು.
ಇದಕ್ಕೆ ಸಾಕ್ಷಿ :
"ಪದಾರ್ಥೋಃ ಜನ್ಮ ಹೇತುಸ್ಯಾತ್ಪ್ರಸಾದಂ ಭವನಾಶಕಃ"
ಇಂತೆಂದುದಾಗಿ,
ಇದೆ ಶಿವಲಿಂಗ[೮]ಮುಖ[೮]; [೯]ಇದೆ[೯] ಭವಸಂಗ [೧೦]ವಿಮುಖ;[೧೦]
ಇಂತೆಂದು ನುಡಿದು ಪೇಳಿ, ನಡೆದು ತೋರಿ ಹೊರೆದನಲಾ
ಬಸವಣ್ಣ, ಸಕಲ ಮಾಹೇಶ್ವರರ.
ಇದನರಿದು ಕೊಡುವುದು, ಇದನರಿದು ಕೊಂಬುದು,
ಇದೆ ಭಕ್ತಿಗೆ ಬೇಹ ಬುದ್ಧಿ; ಇದೆ ಪ್ರಸಾದಕ್ಕೆ ಪರಮಕಾರಣ.
ಇಂತಲ್ಲದವಂಗೆ ಲಿಂಗವಿಲ್ಲ, ಲಿಂಗವಿಲ್ಲವಾಗಿ ಪ್ರಸಾದವಿಲ್ಲ.
ಇದನರಿದು, ಗುರುವಿಡಿದು, ಲಿಂಗದಿಚ್ಛೆಯನರಿದು,
ಸುಖಿಸಿದೆನಯ್ಯಾ ಪ್ರಭುವೆ, ಕೂಡಲಚೆನ್ನಸಂಗಮದೇವಾ.

೮-೮ ಸುಖ (ಬ) ೯-೯ ಅದೆ(ಬ) ೧೦-೧೦ ಮುಖ(ಬ)

೨೯

ಗುರುವಿನಲ್ಲಿ, ಸದಾಚಾರಿ ಬಸವಣ್ಣ.
ಲಿಂಗದಲ್ಲಿ, ಶಿವಾಚಾರಿ ಬಸವಣ್ಣ.
ಜಂಗಮದಲ್ಲಿ, ಸಮಯಾಚಾರಿ ಬಸವಣ್ಣ,
ಪ್ರಸಾದದಲ್ಲಿ, ಬ್ರಹ್ಮಚಾರಿ ಬಸವಣ್ಣ.,
ಆಚಾರದಲ್ಲಿ, ಸುವಿಚಾರಿ ಕೂಡಲಚೆನ್ನಸಂಗಾ ನಿಮ್ಮ ಶರಣ ಬಸವಣ್ಣನು.

೩೦

ಅಂಗದಮೇಲೆ ಆಚಾರಲಿಂಗ ಸ್ವಾಯತವಾಯಿತ್ತು, ಬಸವಣ್ಣಂಗೆ,
ಪ್ರಾಣದ ಮೇಲೆ ಜಂಗಮಲಿಂಗ ಸ್ವಾಯತವಾಯಿತ್ತು, ಬಸವಣ್ಣಂಗೆ,
ಆತ್ಮನ ಮೇಲೆ ಸಮ್ಯಜ್ಞಾನಲಿಂಗ ಸ್ವಾಯತವಾಯಿತ್ತು, ಬಸವಣ್ಣಂಗೆ,
ಇಂತೀ ತ್ರಿವಿಧಕ್ಕೆ ತ್ರಿವಿಧ ಸ್ವಾಯತವಾಗಿಪ್ಪ,
ನಮ್ಮ ಕೂಡಲಚೆನ್ನಸಂಗನ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

೩೧

ಜಾಗ್ರ, ಸ್ವಪ್ನ, ಸುಷುಪ್ತಿಯಲ್ಲಿ ಲಿಂಗಜಂಗಮವಲ್ಲದಱಿಯ ಬಸವಣ್ಣನು.
ಗಣತಿಂಥಣಿಯ ಭಕ್ತಿ ಸಾಗರದೊಳಗೋಲಾಡುವ ಬಸವಣ್ಣನು.
ಕೂಡಲಚೆನ್ನಸಂಗಯ್ಯನಲ್ಲಿ, ಮತ್ತೊಂದನಱಿಯ ಬಸವಣ್ಣನು.

೩೨

ಲಿಂಗ ಲಕ್ಷಣವಂತ ಬಸವಣ್ಣ;
ಲಿಂಗ ಸಿರಿವಂತ ಬಸವಣ್ಣ;
ಲಿಂಗ ಸೌಭಾಗ್ಯವಂತ ಬಸವಣ್ಣ.
ಜಂಗಮ ಲಕ್ಷಣವಂತ ಬಸವಣ್ಣ;
ಜಂಗಮ ಸಿರಿವಂತ ಬಸವಣ್ಣ
ಜಂಗಮ ಸೌಭಾಗ್ಯವಂತ ಬಸವಣ್ಣ.
ಪ್ರಸಾದ ಲಕ್ಷಣವಂತ ಬಸವಣ್ಣ;
ಪ್ರಸಾದ ಸಿರಿವಂತ ಬಸವಣ್ಣ
ಪ್ರಸಾದ ಸೌಭಾಗ್ಯವಂತ ಬಸವಣ್ಣ

ಕೂಡಲಚೆನ್ನಸಂಗಯ್ಯನಲ್ಲಿ, ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೩೩

ಎನ್ನ ಬ್ರಹ್ಮರಂಧ್ರದಲ್ಲಿ ಅಖಂಡಿತನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಉತ್ತಮಾಂಗದಲ್ಲಿ ಗಂಗಾಧರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಲಲಾಟದಲ್ಲಿ ಮಹಾದೇವನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಪಶ್ಚಿಮದಲ್ಲಿ ಪಂಚಮುಖನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಕರ್ಣದಲ್ಲಿ ಶ್ರುತಿಪುರಾಣಪ್ರಿಯನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಕರ್ಣದಲ್ಲಿ ಪಾರ್ವತಿಪ್ರಿಯನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ನಯನದಲ್ಲಿ ತ್ರಿಪುರಸಂಹಾರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ
ಎನ್ನ ಎಡದ ನಯನದಲ್ಲಿ ಕಾಮಸಂಹಾರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ
ಎನ್ನ ನಾಸಿಕದಲ್ಲಿ ನಾಗಭೂಷಣನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಜಿಹ್ವೆಯಲ್ಲಿ ಭವಹರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ
ಎನ್ನ ಕಂಠದಲ್ಲಿ ಲೋಕೇಶ್ವರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಭುಜದಲ್ಲಿ ಸದಾಶಿವನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಭುಜದಲ್ಲಿ ಮೃತ್ಯುಂಜಯನೆಂಬ ರುದ್ರನಾಗಿ

ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ತೋಳಿನಲ್ಲಿ ಶೂಲಪಾಣಿಯೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ತೋಳಿನಲ್ಲಿ ಕೋದಂಡನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಮೊಳಕೈಯ್ಯಲ್ಲಿ ಪರಬ್ರಹ್ಮಸ್ವರೂಪನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಮೊಳಕೈಯ್ಯಲ್ಲಿ ವಿಶ್ವಕುಟುಂಬಿ ಎಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಮುಂಗೈಯಲ್ಲಿ ಕರಿಕಂಠನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಮುಂಗೈಯಲ್ಲಿ ಶ್ರೀಕಂಠನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಅಂಗೈಯಲ್ಲಿ ನಿಧಾಂಕನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಅಂಗೈಯಲ್ಲಿ ವೇದಾಂಕನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಹೃದಯದಲ್ಲಿ ಮಾಹೇಶ್ವರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಪಾರ್ಶ್ವದಲ್ಲಿ ದಕ್ಷಸಂಹಾರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಪಾರ್ಶ್ವದಲ್ಲಿ ಕಾಲಸಂಹಾರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬೆನ್ನಿನಲ್ಲಿ ಭೂತೇಶ್ವರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ನಾಭಿಯಲ್ಲಿ ಶಂಕರನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಗುಹ್ಯದಲ್ಲಿ ವಿಷ್ಣುಪ್ರಿಯನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.

ಎನ್ನ ಗುದದಲ್ಲಿ ಬ್ರಹ್ಮಪ್ರಿಯನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ತೊಡೆಯಲ್ಲಿ ಜ್ಞಾನಪ್ರಕಾಶನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ತೊಡೆಯಲ್ಲಿ ಸ್ಫಟಿಕಪ್ರಕಾಶನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಮಣಿಪಾದದಲ್ಲಿ ಫಣಿಭೂಷಣನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಮಣಿಪಾದದಲ್ಲಿ ರುಂಡಮಾಲಾಧರನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಹರಡಿನಲ್ಲಿ ಕಪಾಲಧರನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಹರಡಿನಲ್ಲಿ ಭಿಕ್ಷಾಟನನೆಂಬ ರುದ್ರನಾಗಿ
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಉಂಗುಷ್ಠದಲ್ಲಿ ನಂದಿಪ್ರಿಯನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಉಂಗುಷ್ಠದಲ್ಲಿ ಭೃಂಗಿಪ್ರಿಯನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಬಲದ ಅರೆಪಾದದಲ್ಲಿ ಪೃಥ್ವೀಪತಿ ಎಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಎಡದ ಅರೆಪಾದದಲ್ಲಿ ಸಚರಾಚರಪತಿ ಎಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಎನ್ನ ಸರ್ವಾಂಗದಲ್ಲಿ ಸರ್ವೇಶ್ವರನೆಂಬ ರುದ್ರನಾಗಿ,
ಬಂದು ನಿಂದಾತ ಬಸವಣ್ಣನಯ್ಯಾ.
ಇಂತೀ ಮೂವತ್ತೆಂಟು ಸ್ಥಾನಂಗಳಲ್ಲಿ ಕೂಡಲಚೆನ್ನಸಂಗನ ಶರಣರು
ಬಸವಸಾಹಿತ್ಯವಾಗಿಪ್ಪರಯ್ಯಾ.

೩೪

ಎನ್ನ ಆಧಾರಚಕ್ರಕ್ಕೆ ನಕಾರವಾದಾತ ಬಸವಣ್ಣ.
ಎನ್ನ ಸಾಧಿಷ್ಠಾನಚಕ್ರಕ್ಕೆ ಮಕಾರವಾದಾತ ಬಸವಣ್ಣ.
ಎನ್ನ ಮಣಿಪೂರಕಚಕ್ರಕ್ಕೆ ಶಿಕಾರವಾದಾತ ಬಸವಣ್ಣ.
ಎನ್ನ ಅನಾಹತಚಕ್ರಕ್ಕೆ ವಕಾರವಾದಾತ ಬಸವಣ್ಣ.
ಎನ್ನ ವಿಶುದ್ಧಿ ಚಕ್ರಕ್ಕೆ ಯಕಾರವಾದಾತ ಬಸವಣ್ಣ.
ಎನ್ನ ಆಜ್ಞಾಚಕ್ರಕ್ಕೆ ಓಂಕಾರವಾದಾತ ಬಸವಣ್ಣ.
ಎನ್ನ ಬ್ರಹ್ಮರಂಧ್ರಕ್ಕೆ ಸಾವಿರದೈವತ್ತೆರಡಕ್ಷರವಾದಾತ ಬಸವಣ್ಣ.
ಎನ್ನ ಶಿಖಾಚಕ್ರಕ್ಕೆ ಕ್ಷಕಾರವಾದಾತ ಬಸವಣ್ಣ.
ಎನ್ನ ಪಶ್ಚಿಮ ಚಕ್ರಕ್ಕೆ ಹಕಾರವಾದಾತ ಬಸವಣ್ಣ.
ಇಂತೀ ಎನ್ನ ನವಚಕ್ರಂಗಳಲ್ಲಿಯೂ ನವನಾಳಂಗಳಲ್ಲಿಯೂ
ನವವಿಧ ಲಿಂಗಸ್ವರೂಪವಾದಾತ ಬಸವಣ್ಣ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ, ನಿಮ್ಮ ತೋರಿ
ಎನ್ನ ಸಲಹಿದ ವರಗುರು ಸಂಗನಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಬದುಕಿದೆನು ಕಾಣಾ ಪ್ರಭುವೆ.

೩೫

ಸಂಗ ಸಹಿತ ಬಸವ ಲೇಸು, ಬಸವ ಸಹಿತ [೧೧]ಸಂಗ[೧೧] ಲೇಸು,
ಸಂಗಾ ಬಸವಾ ಎನುತಿರ್ದಿತ್ತು, ಎನ್ನ ಮನವು.
ದೃಷ್ಟಿ ಮುಟ್ಟಿ ಶರಣನಾಗಿ, ಲಿಂಗಜಂಗಮಕ್ಕೆ ಯೋಗ್ಯನಾಗಿ,
ಕೂಡಲಚೆನ್ನಸಂಗಯ್ಯನಲ್ಲಿ, ಪ್ರಸಾದ ಸಂತೋಷಿ ಬಸವಣ್ಣನು.

೩೬

ಅಯ್ಯಾ ಘನ ಗಂಭೀರವಪ್ಪ ಸಮುದ್ರದೊಳಗೊಂದು ರತ್ನ ಹುಟ್ಟಿದರೆ,
ಆ ಸಮುದ್ರದೊಳಗಿಪ್ಪುದಲ್ಲದೆ ಘನವಾಗಿ ತೋರಬಲ್ಲುದೆ? ಅಯ್ಯಾ ಬಸವಣ್ಣಾ.
ನಿಮ್ಮ ಕರುಣಕಟಾಕ್ಷದಿಂದಲುದಯಿಸಿ, ಅನಂತಲಿಂಗ ಪುರಾಣವೆಲ್ಲವು
ನಿಮ್ಮ ಕೃಪೆಯಿಂದ ಸಾಧ್ಯವಾಯಿತ್ತೆನಗೆ ಬಸವಣ್ಣಾ.

೧೧-೧೧ ಲಿಂಗ(ಬ)

ಆದಿ ಅನಾದಿಯಿಲ್ಲದಂದು ನೀನೊಬ್ಬನೆ ಪ್ರಸಾದಿ ಬಸವಣ್ಣಾ.
ಉಮೆಯ ಕಲ್ಯಾಣವಿಲ್ಲದಂದು ನೀನೊಬ್ಬನೆ, ಪ್ರಸಾದಿ ಬಸವಣ್ಣಾ.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಬಸವಣ್ಣಾ, ನಿಮ್ಮ ತೊತ್ತಿನ ತೊತ್ತಿನ ಮರಿದೊತ್ತಿನ ಮಗ ನಾನಯ್ಯ.

೩೭

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರೆಂದು
ಬೇಱಮಾಡಿ ನುಡಿದು, ಬೇಱಮಾಡಿ ನಡೆವ ಭಿನ್ನವಲ್ಲ.
ಅಂತರಂಗದಲ್ಲಿ ಅಱಿವು ಪರಿಪೂರ್ಣ ಬಸವಣ್ಣ.
ಬಹಿರಂಗದಲ್ಲಿ ದಾಸೋಹಸಂಪನ್ನ ಬಸವಣ್ಣ.,
ಮನವಚನಕಾಯದಲ್ಲಿ ಸದ್ಭಕ್ತಿಸಂಪನ್ನ ಬಸವಣ್ಣ.
ಎಡೆದೆಱಹಿಲ್ಲದೆ ಲಿಂಗಸಂಪನ್ನ ಬಸವಣ್ಣ.
ಸರ್ವಾಂಗದಲ್ಲಿ ಸರ್ವಾಚಾರಸಂಪನ್ನ ಬಸವಣ್ಣ.
ಕೂಡಲಚೆನ್ನಸಂಗಮದೇವರಲ್ಲಿ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೩೮

ಬಸವಣ್ಣ ಮಾಡುವ ಮಾಟವನಾರು ಬಲ್ಲರಯ್ಯಾ?
ಲಿಂಗವಿಲ್ಲದೆ ಮಾಡಿದನಯ್ಯಾ ಬಸವಣ್ಣನು.
ಜಂಗಮವಿಲ್ಲದೆ ನೀಡಿದಯ್ಯಾ ಬಸವಣ್ಣನು.
ಪ್ರಸಾದವಿಲ್ಲದೆ ರುಚಿಸಿದನಯ್ಯಾ ಬಸವಣ್ಣನು.
ಈ ಮಹಕ್ಕೆ ಬಂದು ಅನುಭಾವವ ಮಾಡಿ,
ಆಡಿದನಯ್ಯಾ ಬಸವಣ್ಣನು.
ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮದ ಸಂಗ
ಇಂದಿನಲಿ ಅಗಲಿತ್ತು ಕಾಣಾ,
ಕೂಡಲಚೆನ್ನಸಂಗಮದೇವಾ ನಿಮ್ಮ ಶರಣ ಬಸವಣ್ಣಂಗೆ

೩೯

ಆಚಾರ [೧೨]ತನು[೧೨] ಸಂಬಂಧವಾದಲ್ಲಿ,
ಶ್ರೀಗುರು ಸನ್ನಿಹಿತ ಬಸವಣ್ಣನು.
ಅರಿವು ಮನ ಸಂಬಂಧವಾದಲ್ಲಿ,
ಶಿವಲಿಂಗ ಸನ್ನಿಹಿತ ಬಸವಣ್ಣನು.
ಈ ಉಭಯವು ಸನ್ನಿಹಿತವಾದಲ್ಲಿ,
ಜಂಗಮ ಸನ್ನಿಹಿತ ಬಸವಣ್ಣನು.
ಇದು ಕಾರಣ, ಕೂಡಲಚೆನ್ನಸಂಗಾ
ನಿಮ್ಮಲ್ಲಿ ತ್ರಿವಿಧಸಂಪನ್ನ ಶರಣಬಸವಣ್ಣನು.

೪೦

ತನುವ ಕೊಟ್ಟು ತನು ಬಯಲಾಯಿತ್ತು ಬಸವಣ್ಣಂಗೆ.
ಮನವ ಕೊಟ್ಟು ಮನ ಬಯಲಾಯಿತ್ತು ಬಸವಣ್ಣಂಗೆ.
ಧನವ ಕೊಟ್ಟು ಧನ ಬಯಲಾಯಿತ್ತು ಬಸವಣ್ಣಂಗೆ.
ಈ ತ್ರಿವಿಧವನು ಕೊಟ್ಟ ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಬಸವಣ್ಣಂಗೆ, ಬಯಲ ಸಮಾಧಿಯಾಯಿತ್ತಯ್ಯ.

೪೧

ಆರಿಗೆ ಮಾಡಬಹುದಯ್ಯ ಸದ್ಭಕ್ತಿಯೆಂಬುದನು, ಬಸವಣ್ಣಂಗಲ್ಲದೆ?
ಆರಿಗೆ ತಿಳಿವುದಯ್ಯಾ ಶಿವಜ್ಞಾನದ ಸೆರಗು, ಬಸವಣ್ಣಂಗಲ್ಲದೆ?
ನಿರಾಳ ಸಿಂಹಾಸನದ ಮೇಲೆ ನಿರವಯ ಬಂದೆರಗಿದರೆ
ನಿರಾಕಾರ ಪದಾರ್ಥವನರ್ಪಿಸಿ ಪ್ರಸನ್ನತೆಯ ಹಡೆದ ಬಸವಣ್ಣ.
ಸಾಕಾರ ಸಿಂಹಾಸನದ ಮೇಲೆ ಮೂರ್ತಿಗೊಂಡ ಸಂಗಮನಾಥ ಮುನಿದೆದ್ದು ಹೋದರೆ,
ತನುವಿನೊಳಗೆ ತನುವಾಗಿ ಹೊಕ್ಕು, ಮನದೊಳಗೆ ಮನವಾಗಿ
ಭಾವದೊಳಗೆ ಭಾವವಾಗಿ ವೇದಿಸಿ, ಶಿವಶರಣರ ಮನದ
ಕಂದು ಕಲೆಯ ಕಳೆದು, ತನ್ನತ್ತ ತಿರುಗಿ, ಪ್ರಸನ್ನವಡೆದು
ಇಂತೀ ಉಭಯನಿರ್ಣಯದಲ್ಲಿ ನಿಸ್ಸೀಮನಾದ ಬಸವಣ್ಣ.

೧೨-೧೨ ವಂಗ (ಚೆ)

ಕೂಡಲಚೆನ್ನಸಂಗಮದೇವರ ಶರಣ ಬಸವಣ್ಣಂಗೆ
ತ್ರಿಜಗದೊಳಗೆ ಆರನೂ ಸರಿಗಾಣೆನು.

೪೨

ಲಿಂಗವೆ ಪ್ರಾಣವಾಯಿತ್ತಾಗಿ ಆಚಾರ ವಿಚಾರವಿಲ್ಲಯ್ಯಾ.
ಪ್ರಸಾದ ಕಾಯವಾಯಿತ್ತಾಗಿ ಸತ್ವ, ರಜ, ತಮ, ಕ್ರೋಧವಿಲ್ಲಯ್ಯಾ.
ಜಂಗಮಮುಖ ಲಿಂಗವಾದ ಕಾರಣ
ಲಿಂಗದಲ್ಲಿ ಅನುಭಾವಿಸಿ ನೋಡುತ್ತಿರ್ದೆನಯ್ಯಾ.
ಭಕ್ತ ಕಾಯ ಮಮಕಾಯವಾಗಿ
ಕೂಡಲ ಚೆನ್ನಸಂಗನಬಸವನಲ್ಲಿ ಸುಖಿಯಾಗಿದ್ದೆನಯ್ಯಾ.

*

ಮಡಿವಾಳ ಮಾಚಿದೇವ

೪೩

ಅಯ್ಯಾ ಅಯ್ಯಾ ಎಂದು ಹೊಗಳುತ್ತಿಹರಯ್ಯಾ, ಏಕಾದಶ ರುದ್ರರು;
ಅವರಿಗೆ ಸಕಲ ನಿಷ್ಕಲಾತ್ಮಕ ನೀನೆಯಾಗಿ,
ಪ್ರಾಣಲಿಂಗವ ಸಾಹಿತ್ಯವ ಮಾಡಿದ ಕಾರಣ,
ಶಿವಶಿವಾ ಶಿವಶಿವಾ ಎನುತ್ತಿಪ್ಪರಯ್ಯಾ,
ವಿಷ್ಣು ಮೊದಲಾದ ತ್ರೈತ್ರಿಂಶತಿ ಕೋಟಿ ದೇವತೆಗಳು,
ಅವರಿಗೆ ಧರ್ಮಾರ್ಥಕಾಮ ಮೋಕ್ಷಂಗಳನಿತ್ತೆಯಾಗಿ.
ಹರಹರಾ ಹರಹರಾ ಎನುತ್ತಿಪ್ಪರಯ್ಯಾ.
ಬ್ರಹ್ಮ ಮೊದಲಾದ ಅಷ್ಟಾಶೀತಿ ಸಹಸ್ರ ಋಷಿಯರು
ಅವರಿಗೆ ಸ್ವರ್ಗ ನರಕಾದಿಗಳ ಮಾಡಿದೆಯಾಗಿ.
ಮಹಾದೇವಾ, ಮಹಾದೇವಾ ಎನುತ್ತಿಪ್ಪರಯ್ಯಾ, ದಾನವಾದಿಗಳು;
ಅವರಿಗೆ, ಸುಕೃತ ದುಷ್ಕೃತಂಗಳನೀವೆಯಾಗಿ
ಬಸವಾ ಬಸವಾ ಎನುತ್ತಿಪ್ಪರಯ್ಯಾ, ಮಹಾಭಕ್ತರು;
ಅವರಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದವ ತೋರಿದ ಕಾರಣ.

ಉಳಿದ ಎಂಬತ್ತುನಾಲ್ಕು ಜೀವರಾಶಿಗಳೆಲ್ಲಾ
ನಿಮ್ಮುವನನಿಮಿಷವಾಗಿ ನೋಡುತ್ತಿರ್ಪವಯ್ಯಾ;
ಸಕಲ ನಿಷ್ಕಲಾತ್ಮಕ ಚೈತನ್ಯ ನೀನೆಯಾಗಿ.
ಸಕಲವು ನಿನ್ನಾಧಾರ, ನಿಷ್ಕಲವು ನಿನ್ನಾಧಾರ.
ಸಕಲ ನಿಷ್ಕಲದೊಡೆಯ ದೇವರ ದೇವ ಕಲಿದೇವ, ನಿಮ್ಮ ಕರಸ್ಥಲದ
ಹಂಗಿನೊಳಗಿರ್ದ ಕಾರಣ ಸಂಗನಬಸವಣ್ಣ.

೪೪

ವಿಷ್ಣು ದೇವರೆಂದು ಆರಾಧಿಸುವಿರಿ,
ವಿಷ್ಣು ದೇವರಾದಡೆ ತಾನೇರುವ ವಾಹನ
ಗರುಡದಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ
ಬ್ರಹ್ಮ ದೇವರೆಂದು ಆರಾಧಿಸುವಿರಿ.
ಬ್ರಹ್ಮ ದೇವರಾದಡೆ ತಾನೇರುವ ವಾಹನ
ಹಂಸೆಯಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಮೈಲಾರ ದೇವರೆಂದು ಆರಾಧಿಸುವಿರಿ,
ಮೈಲಾರ ದೇವರಾದಡೆ ತಾನೇರುವ ವಾಹನ
ಕುದುರೆಯಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಜಿನ ದೇವರೆಂದು ಆರಾಧಿಸುವಿರಿ,
ಜಿನ ದೇವರಾದಡೆ ತಾನೇರುವ ವಾಹನ
ಕತ್ತೆಯಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಭೈರವನೆ ದೇವರೆಂದು ಆರಾಧಿಸುವಿರಿ,
ಭೈರವನೆ ದೇವರಾದಡೆ ತಾನೇರುವ ವಾಹನ
ಚೇಳಿನಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಇದು ಕಾರಣ ನಾಗಲೋಕದ ನಾಗಗಣಂಗಳು,
ಕೊಂಬುದು ಬಸವಣ್ಣನ ಪ್ರಸಾದ.
ಮರ್ತ್ಯಲೋಕದ ಮಹಾಗಣಂಗಳು,
ಕೊಂಬುದು ಬಸವಣ್ಣನ ಪ್ರಸಾದ.
ದೇವಲೋಕದ ದೇವಗಣಂಗಳು,
ಕೊಂಬುದು ಬಸವಣ್ಣನ ಪ್ರಸಾದ.

ಇಂತೀ ನಿಮ್ಮ ಬಸವಣ್ಣನ ಪ್ರಸಾದ
ಉಂಬುತ್ತ, ಉಡುತ್ತ, ಕೊಂಬುತ್ತ, ಕೊಡುತ್ತ
ಅನ್ಯ ದೈನಕ್ಕೆರಗಿ ಆರಾಧಿಸುವ ಕುನ್ನಿಗಳನೆನ್ನ ಮುಖಕ್ಕೆ
ತೋರದಿರಯ್ಯಾ, ಕಲಿದೇವರದೇವಯ್ಯಾ ನಿಮ್ಮ ಧರ್ಮ.

೪೫

ಆದಿ ಅಂತರದ ಸಿಂಹಾಸನದಲ್ಲಿ
ಆಧಾರ ಮೂರ್ತಿಗಳನು ನಿರ್ಮಿಸಿದನು.
ನಮಗಾಶ್ರಯವಾವುದು ದೇವಾ ಎಂದು ಬಿನ್ನಹ ಮಾಡುವಲ್ಲಿ
ವಿಶ್ವತೋ ಪ್ರತಿಪಾಲಕನೆ, ವಿಶ್ವತೋ ಧಾರಕನೆ,
ಸರ್ವಜೀವಜಾಲಂಗಳಿಗೆ ಶೈತ್ಯಕಾಲ ಬಂದೂದೆಂದು
ಶಿವನು ಅನಂತಪ್ರಾಣಿಗಳಿಗೆ ಕಾರುಣ್ಯವ ಮಾಡಿದನು.
ಒಮ್ಮಿಂದವು ಪಾದಘಾತದೊಳು ಅನಂತಸುಖ.
ಉತ್ಪತ್ಯದೊಳು ಶಿವಶಿವಾ ಚೈತನ್ಯನಾಗನೆ
ನಿರ್ಮಿಸುವೆನೆಂದು ಪೃಥ್ವಿಗೆ ಕಾರುಣ್ಯವಮಾಡಿದ ಕಂದನು.
ಅಪ್ಪಿನಾಶ್ರಯದೊಳು ಜಲಮಜ್ಜನಪಾಕ ಅರ್ಪಿತವೆಂದು
ಅಪ್ಪಿಂಗೆ ಕಾರುಣ್ಯವ ಮಾಡಿದ ಕಂದನು.
ತೇಜದಗ್ನಿಯೊಳು ಶುದ್ಧಿಕೆ ನಿಮ್ಮ ಮುಖದಲ್ಲಿ ಎಂದು
ಅಗ್ನಿಗೆ ಕಾರುಣ್ಯವ ಮಾಡಿದನು ಕಂದನು.
ವಾಯು ಮನ ಘ್ರಾಣಗಂಧದೊಳು ಶೈತ್ಯದೊಳು
ಸುಖವಿರು ಕಂಡಾ ಎಂದು ವಾಯುವಿಂಗೆ
ಕಾರುಣ್ಯವ ಮಾಡಿದ ಕಂದನು.
ಗಗನ ಸರ್ವಾಶ್ರಯವಾಗಿ ಇರು ಕಂಡ್ಯೆ ಎಂದು
ಆಕಾಶಕ್ಕೆ ಕಾರುಣ್ಯವ ಮಾಡಿದ ಕಂದನು.
ವಿಶ್ವತೋಪ್ರತಿಪಾಲಕ ಬಸವಣ್ಣನು.
ವಿಶ್ವತೋಧಾರಕ ಬಸವಣ್ಣನು.
ಶರಣಹೃದಯ ಸಿಂಹಾಸನ ಬಸವಣ್ಣನು
ಎನ್ನ ಪ್ರಾಣವ ಪಾವನವ ಮಾಡಿದ ಕಂದನೆ ವಂದ್ಯ
ಕಲಿದೇವಾ, ನಿಮ್ಮ ಶರಣ ಬಸವನೆ ಜಯ ಜಯಾ.

೪೬

ಆಧಾರಕಾಲದಲ್ಲಿ ಅನಾದಿಯನಾಡುತ್ತಿಪ್ಪರು, ದೇವಗಣಂಗಳು,
ಸಿಂಹಾಸನಕಾಲದಲ್ಲಿ ಅತೀತವನಾಡುತ್ತಿಪ್ಪರು, ಮಹಾಪುರುಷರು
ಮಂದರಗಿರಿ ಕಾಲದಲ್ಲಿ ಯುಗಸಂಖ್ಯೆಯನಾಡುತ್ತಿಪ್ಪರು, ಕಾಲಪುರುಷರು.
ಆವ ಕಾಲದಲ್ಲಿಯೂ ನಂದೀಶ್ವರನ ಶಬ್ದವನಾಡುತ್ತಿಪ್ಪರು, ನಂದೀಶಗಣಂಗಳು,
ಕಲಿಕಾಲದಲ್ಲಿ ಉತ್ಪತ್ಯದ ಮಾತನಾಡುತ್ತಿಪ್ಪರು, ಈ ಪುರುಷಗಣಂಗಳು.
ಪ್ರಜ್ವಲಿತ ಕಾಲದಲ್ಲಿ ಭವನಾಶಿ ಎನುತ್ತಿಪ್ಪರು, ಗುರುಕಾರುಣ್ಯವುಳ್ಳವರು.
ದೇವಾಧಿದೇವನು ಬಸವಣ್ಣನು.
ಕಾಲಾಧಿದೇವನು ಬಸವಣ್ಣನು.
ಎಲ್ಲಾ ಕಾಲಸೂತ್ರವಿದನು ಬಸವಣ್ಣನು.
ಶಬುದಕಾಲದೇವನು ಬಸವಣ್ಣನು.
ಎಲ್ಲಾ ವಿಸ್ತಾರನು ಬಸವಣ್ಣನು.
ಲಿಂಗಕಾಯನು ಬಸವಣ್ಣನು.
ಜಂಗಮಕಾಯನು ಬಸವಣ್ಣನು.
ಪ್ರಸಾದಕಾಯನು ಬಸವಣ್ಣನು.
ಜ್ಞಾನಸಿಂಹಾಸನದ ಮೇಲೆ ನಿಮ್ಮ ಶರಣ
ಬಸವಣ್ಣನು, ಕಲಿದೇವರದೇವಾ.

೪೭

ಲಿಂಗೈಕ್ಯ, ಲಿಂಗವಂತ, ಲಿಂಗಪ್ರಾಣಿ,
ಪ್ರಾಣಲಿಂಗಿಗಳೆಂದೆನಬಹುದು, ಎನಬಹುದು.
ಉದಯಕಾಲ, ಮಧ್ಯಾನ್ನ, ವಿಚಿತ್ರಕಾಲ, ತ್ರಿಕಾಲ
ಲಿಂಗಾರ್ಚಕರೆಂದೆನಬಹುದು, ಎನಬಹುದು.
ಹೊನ್ನು, ಹೆಣ್ಣು, ಮಣ್ಣು, ತ್ರಿವಿಧವ ತೋರಿದ
ನಿಷ್ಪೃಹರೆಂದೆನಬಹುದು, ಎನಬಹುದು.
ಧಾರಣೆ, ಪಾರಣೆ, ಒಡಲದಂಡನೆ
ಕರಣದಂಡನೆವುಳ್ಳವರೆಂದೆನಬಹುದು, ಎನಬಹುದು
ಶೀಲವಂತರು, ಸಂಬಂಧಿಗಳು, ಒರತೆಯಗ್ಗಣಿಯ
ನೇಮಿಗಳೆಂದೆನಬಹುದು, ಎನಬಹುದು.

ನೇಮ ವ್ರತ ಪಾಕದ್ರವ್ಯವ ಒಲ್ಲೆವೆಂದೆನಬಹುದು, ಎನಬಹುದು.
ಶುದ್ಧಶೈವ, ಪೂರ್ವಶೈವ, ಮಾರ್ಗಶೈವ,
ವೀರಶೈವರೆಂದೆನಬಹುದು, ಎನಬಹುದು,
ಸರವೇದಿಗಳು, ಶಬ್ದವೇದಿಗಳು
ಮಹಾನುಭಾವಿಗಳೆಂದೆನಬಹುದು, ಎನಬಹುದು
ಇಂತಿವರೆಲ್ಲರು ಶಿವಪಥದೊಳಗೆ ಮಾಡುತ್ತ, ಆಡುತ್ತಿರ್ದರಲ್ಲದೆ
ಒಂದರ ಕುಳವು ತಿಳಿಯದು ನೋಡಾ.
ಆ ಒಂದು ದಾಸೋಹದಲ್ಲಿ ಬಸವಣ್ಣನು ಸ್ವತಂತ್ರನಾಗಿ,
ಲಿಂಗವು ಬಸವಣ್ಣನ ಒಡನೊಡನೆ ಆಡುತ್ತಿರ್ದನು ನೋಡಾ.
ಇದು ಕಾರಣ,
ಬಸವಣ್ಣನ ನಡೆ ಪರುಷ
ಬಸವಣ್ಣನ ನುಡಿ ಪರುಷ
ಬಸವಣ್ಣನ ದೃಷ್ಟಿ ಪರುಷ
ಬಸವಣ್ಣನ ಹಸ್ತ ಪರುಷ
ಬಸವಣ್ಣನ ಮನ ಪರುಷ
ಬಸವಣ್ಣನ ಭಾವ ಪರುಷ
ತನು ಮನ ಧನವ ಗುರುಲಿಂಗಜಂಗಮಕ್ಕೆ
ನಿವೇದಿಸಿದಾತ ಬಸವಣ್ಣ.
ಮನಃ ಪ್ರಾಣವ ನಿವೇದಿಸಿದಾತ ಬಸವಣ್ಣ.
ಇದು ಕಾರಣ,
ಅಂದಾದಿ ಇಂದಾದಿಯಾಗಿ
ಬಸವಣ್ಣನ ನೆನೆವುದು ಲಿಂಗಾರ್ಚನೆ.
ಬಸವಣ್ಣನ ನೆನವುದು ಪರತತ್ವ.
ಬಸವಣ್ಣನ ನೆನವುದೆ ಪರಮಕಲ್ಯಾಣ.
ಕಲಿದೇವಾ, ನಿಮ್ಮ ಶರಣ ಸಂಗನಬಸವಣ್ಣನ
ನೆನೆದು, ಸಮಸ್ತಗಣಂಗಳೆಲ್ಲರೂ ಅತಿಶುದ್ಧರಾದರಯ್ಯಾ.

೪೮

ಲಿಂಗದ ನಿಧಿಯೆ ಬಸವಾ
ಜಂಗಮದ ವಾರಿಧಿಯೆ ಬಸವಾ.
ಪ್ರಸಾದವ ತವನಿಧಿಯೆ ಬಸವಾ
ಅನುಭಾವದ ಮೇರುವೆ ಬಸವಾ
ಮಹವನೊಡಗೂಡಿದ ತನುವೊ!
ಬಸವಣ್ಣನೊ! ಕಲಿದೇವನೊ!!

೪೯

ಬಕಾರವೆ ಗುರುವಯ್ಯಾ, ಸಕಾರವೆ ಲಿಂಗವಯ್ಯಾ, ವಕಾರವೆ ಜಂಗಮವಯ್ಯಾ.
ಅದೆಂತೆಂದಡೆ,
ಬಕಾರಂ ಗುರುರೂಪಂಚ । ಸಕಾರಂ ಲಿಂಗಮೂರ್ತಿ[೧೩][ಹಿ][೧೩]
ವಕಾರಂ ಚರಮಾಖ್ಯಾತಂ । ತ್ರಿವಿಧಂ ತತ್ತ್ವನಿಶ್ಚಯಂ ।
ಇಂತೆಂದುದಾಗಿ,
ಉದಯ, ಮಧ್ಯ, ಸಾಯಂಕಾಲದಲ್ಲಿ
ಬಸವಾ, ಬಸವಾ, ಬಸವಾ ಎಂದು ಮಜ್ಜನಕ್ಕೆರೆವ
ಮಹಾಮಹಿಮರ ತೋರಾ, ಕಲಿದೇವರದೇವಾ

೫೦

ಉದಾಸೀನನಂ ಮಾಡಿದರೆಂದು ಬೆಂಬೀಳುವರೆ ಅಯ್ಯಾ ಬಸವಣ್ಣಾ.
ಎನ್ನ ಕಾಯದೊಳಗೆ ನಿನ್ನ ಕಾಯವಿಪ್ಪುದು ಬಸವಣ್ಣಾ.
ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು ಬಸವಣ್ಣಾ.
ಎನ್ನ ಕರಣ ನಿನ್ನ ಕರಣ ಬಸವಣ್ಣಾ.
ಆನು ನೀನಾದ ಕಾರಣ ರೂಪಿಂಗೆ ಕೇಡುಂಟು.
ನಿರೂಪು ಕರ್ಪುರ–ಅಗ್ನಿ ಬಸವಣ್ಣಾ.
ಚಿಂತಿಸುವರೆ ದೇವರದೇವ ಕಲಿದೇವಾ.

೧೩–೧೩ ಷು (ಬ)

೫೧

ನೆನವೆನಯ್ಯಾ ಲೋಹ ಪರುಷದ ಸಂಗದಂತಾಯಿತ್ತಾಗಿ,
ಬಸವಾ, ಬಸವಾ, ಬಸವಾ ಎಂಬ ಶಬ್ದದೊಳಗೆ
ಎನ್ನ ಗಮನ ನಿರ್ಗಮನವಾಯಿತ್ತು.
ಬಸವಾ ಎಂದೆನಯ್ಯಾ ಕಲಿದೇವರದೇವಾ
ಕಿಡಿಗೊಂಡ ಅರಗಿನ ಸಂಗದಂತಾಯಿತ್ತಾಗಿ.

*

ಸಿದ್ಧರಾಮ

೫೨

ಮುನ್ನ, ಮುನ್ನ, ಶಶಿ ರವಿಗಳಲಿಲ್ಲದ ಮುನ್ನ,
ಬ್ರಹ್ಮ ವಿಷ್ಣ್ವಾದಿಗಳುದ್ಭವಿಸದ [೧೩]ಮುನ್ನ[೧೩]
ಮೂರ್ತಿಗಳೆಂಟೂ ಒಂದಾಗುವ ಮುನ್ನ.
ತನು ಮಧ್ಯವಳೆಯದಲ್ಲಿ.
ಸಕಲ ಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ,
ಭಕ್ತಿ ಕಾರಣ ಬಸವನವಗ್ರಹಿಸಿಪ್ಪಲ್ಲಿ,
ಅದೆತ್ತಲಿದ್ದೆ? ಅದ ನೀ ಬಲ್ಲೆ ಅಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.
ಕುರುಹುಗೆಟ್ಟ ನಿಶ್ಚಿಂತ ಬಸವಣ್ಣನು.

೫೩

ಹೆಸರಿಡಬಾರದ ಘನತರ ಲಿಂಗವ ಹೆಸರಿಟ್ಟು,
ವಾಙ್ಮನಕ್ಕಗೋಚರನಪ್ಪ ಲಿಂಗವ ವಾಕ್ಯಕ್ಕೆ ತಂದು,
ಅತ್ಯತಿಷ್ಠದ್ದಶಾಂಗುಲನೆಂಬ ಲಿಂಗವ ಚಿತ್ತಕ್ಕೆ ತಂದು,
ಹೊತ್ತಿರ್ದ ಮಾಯಾಪ್ರಪಂಚ ಬಿಡಿಸಿದ ಬಸವಣ್ಣ.
ಎನ್ನ ಚಿತ್ತಶುದ್ಧಿಯ ಮಾಡಿದ ಬಸವಣ್ಣ

೧೩-೧೩ + ಮುನ್ನ ಮುನ್ನ(ಬ)

ಎನ್ನ ಮನದ ಮಲತ್ರಯಂಗಳ ಹರಿದು,
ಶುದ್ಧ ತಾತ್ಪರ್ಯವರುಹಿ ಮುಕ್ತನ ಮಾಡಿದ ಗುರು ಬಸವಣ್ಣ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕಾರಣ, ಬಸವಣ್ಣ ಧರೆಗೆ ಬಂದ.

೫೪

ಮಹವನೊಡಗೂಡಿದ ತನು ನಿನ್ನಕ್ಷರತ್ರಯವು ಬಸವಣ್ಣಾ.
ಕರುಣಾಮೃತಸಹಿತ ಇರುತಿಪ್ಪುವೈ;
[೧೪]ಕರಣ[೧೪] ಕಾನನದೊಳಗೆ ಬೆಳಗುತಿಹವೈ.
ಸಮತೆ ಸಾಯುಜ್ಯದ [೧೫][ಅನಿಮಿಷಾಕ್ಷರದಿಂದ][೧೫]
ಬಸವಾಕ್ಷರ[೧೬]ತ್ರಯ[೧೬] ಮಧುರ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೫೫

ಶುದ್ಧದೀಕ್ಷೆಯೊಳಾನು ಸಿದ್ಧನಾದೆನು ಬಸವತಂದೆ,
ಸಿದ್ಧದೀಕ್ಷೆಯೊಳಾನು ಸ್ವಯವಾದೆನೈ.
ಶುದ್ಧ ಸಿದ್ಧವು ಕೂಡಿ ಪ್ರಸಿದ್ಧಿ ದೀಕ್ಷೆಯೊಳು
ಹೊದ್ದಿ ನಡದೆನು ಬಸವಣ್ಣಾ.
ನಿನ್ನವರ ಹೊಲಬಿಗನಾಗಿ,
ಮತ್ತೆ ಪ್ರಸಾದವನು ಐದಾರನೇ ಗ್ರಹಿಸಿ,
ಮತ್ತೆ ಪಾದೋದಕವ ಈರೈದ ಧರಿಸಿ,
ಆನು ಹುಟ್ಟುಗೆಟ್ಟೆನು ಬಸವಣ್ಣಾ
ನಿಮ್ಮ ಕರುಣದಿಂದ ಆನಂದ ಗುರು ಕಪಿಲಸಿದ್ಧಮಲ್ಲೇಶ್ವರನ
ಕಾರಣದ ಶರಣರಿಗೆ ಶಿಶುವಾದೆನು.

೫೬

ಗುರುವಾಗಿ ಬಂದು, ಎನಗೆ ದೀಕ್ಷೆಯ ಮಾಡಿದಿರಿ ಬಸವಣ್ಣಾ.
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳದಿರಿ ಬಸವಣ್ಣಾ.
ಜಂಗಮವಾಗಿ ಬಂದೆನ್ನ ಪ್ರಪಂಚಿಕತನವ ಕಳದು,
ಪರಮಸೀಮೆಯ ಮಾಡಿದಿರಿ ಬಸವಣ್ಣಾ.

೧೪–೧೪ ಕರುಣ(ಬ) ೧೫–೧೫ ಅನುಷಕ್ಷರದಿಂದ(ಬ) ೧೬–೧೬(ಬ)

ಇದೆಲ್ಲವು ಬಸವಣ್ಣನಾಗಿ ಬಂದು,
ಎನಗೆ ಪ್ರಸಾದವ ನೀಡಿ ಸಲಹಿದನು.
ಕಪಿಲಸಿದ್ಧ ಮಲ್ಲಿಕಾರ್ಜುನಾ, ಇನ್ನೆನಗತಿಶಯವೇನೂ ಇಲ್ಲ.

೫೭

ಲಿಂಗದಲ್ಲಿ [೧೬]ಸಂಪನ್ನ[೧೬]ನಾಗಿ ಗುರುವಾದ ಬಸವಣ್ಣ.
ಗುರುವಿನಲ್ಲಿ ಸಂಪನ್ನನಾಗಿ ಜಂಗಮವಾದ ಬಸವಣ್ಣ
ಜಂಗಮದಲ್ಲಿ ಸಂಪನ್ನನಾಗಿ ತ್ರೈವಿದ್ಯಕ್ಕೆ ವಿದ್ಯರೂಪವಾದ ಬಸವಣ್ಣ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ಬಸವಣ್ಣ, ಸಾಕ್ಷಾತ್ಸಂಪನ್ನನಾದ.

೫೮

ಗುರುವಿಂಗಾದರೂ ಬಸವಣ್ಣನೇ ಬೇಕು.
ಲಿಂಗಕ್ಕಾದರೂ ಬಸವಣ್ಣನೇ ಬೇಕು.
ಜಂಗಮಕ್ಕಾದರೂ ಬಸವಣ್ಣನೇ ಬೇಕು
ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿಮಗೂ, ಎನಗೂ, ನಿಮ್ಮ ಶರಣರಿಗೂ ಬಸವಣ್ಣನೇ ಬೇಕು

೫೯

ಸರ್ವಾತ್ಮ ನೀನೆನ್ನ ಸರ್ವವನು ಮಾಡಿದೆ.
ಉರ್ವಿಯೊಳಗಣ ಶುದ್ಧಿಯನರುಹಿಸಿದಿರೈ
ಸರ್ವಾತ್ಮಕ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ
ನಿರ್ವಾಣ ಪದವಿತ್ತಾತ ಗುರು ಬಸವಣ್ಣನೈ.

೬೦

ನಾ ಬಲ್ಲೆನೈ ನಿನ್ನ, ನೀ ಬಲ್ಲೆಯೈ ಎನ್ನ, ಆರಯ್ಯ ಬಲ್ಲನೈ ಬಸವಣ್ಣನು.
ಭಾನುವಿನ ಉದಯಕ್ಕೆ ಆದಿಯಕ್ಷರಭೇದ ಆನತದಿ ನೀನಾದೆ ಬಸವತಂದೆ.
ಸೀಮೆಗೆಟ್ಟಾ ಲೋಕ ಏನಾದಡೇನಯ್ಯ, ಆನು ನಿನ್ನೊಳಗಡಗಿ

೧೬-೧೬ ಸಂಗ (ಬ)

ಐಕ್ಯಪದದ ಆನತವನೆಯ್ದಿ, ನಾ ಕೂಡೆ ಸುಖಿಯಾದೆ
ಬಳಿಕೇನಾದಡೇನಯ್ಯಾ ಬಸವಣ್ಣ, ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೧

ತನುಗುಣಪ್ರಪಂಚಿಕವ ಹೊದ್ದ ಬಸವಣ್ಣ;
ಸೀಮಾಸಂಬಂಧಿಗಳಲ್ಲಿ ನಿಲ್ಲ ಬಸವಣ್ಣ;
ಎರಡೆಂಟೆಂದರಿಯ ಬಸವಣ್ಣ;
ಅಂಗಮುಖವೆಲ್ಲವು ಲಿಂಗಮುಖವಾಗಿಪ್ಪ ಬಸವಣ್ಣ;
ಪ್ರಾಣವೆಲ್ಲವು ಲಿಂಗಪ್ರಾಣವಾಗಿಯೆ ಸಮನಿಸುವ ಬಸವಣ್ಣ;
ಅನರ್ಪಿತಾವಧಾನಂಗಳ ಭೇದವನು ಕಾಯದ ಕರದಿಂದರ್ಪಿಸದೆ,
ಸ್ವಾನುಭಾವ ಸಮ್ಯಜ್ಞಾನ ಕರಂಗಳಿಂದರ್ಪಿಸುವ ಬಸವಣ್ಣ.
ನಿತ್ಯಪ್ರಸಾದವ ಕೊಂಬ ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ ಪರಸಮಯವನೊಳಕೊಂಡಿಪ್ಪ
ಬಸವಣ್ಣನ ಪರಿಯಿಂತುಂಟು.

೬೨

ಕ್ಲುಪ್ತವ ಮಾಡಿ ತನಗೆ ಬೇಕೆನ್ನ, ಪ್ರಸಾದಿ ಬಸವಣ್ಣ.
ಬಂದುದನತಿಗಳದು ಅಲ್ಲ ಒಲ್ಲೆನೆನ್ನ, ಪ್ರಸಾದಿ ಬಸವಣ್ಣ.
ತಾನೆಂಬ ರೂಪ, ಅಯ್ಯನೆಂಬ ರೂಪಿನಲ್ಲಿ
ಲೋಪವ ಮಾಡಿದ ಪ್ರಸನ್ನ ಪ್ರಸಾದಿ ಕಾಣಾ ಬಸವಣ್ಣ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

೬೩

ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯಾ;
ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯಾ;
ಕಪಿಲಸಿದ್ಧಮಲ್ಲಿನಾಥಯ್ಯಾ.

೬೪

ನಾ ಮಾಡುವ ಭಕ್ತಿ ಬಸವಣ್ಣನದಯ್ಯಾ;
ನಾ ಮಾಡುವ ಯೋಗ ಬಸವಣ್ಣನದಯ್ಯಾ;
ಕಪಿಲಸಿದ್ಧಮಲ್ಲಿನಾಥಯ್ಯಾ.

೬೫

ತ್ರಿಣಯವಿನಯ ಇಷ್ಟದೃಷ್ಟಭಕ್ತಿಭೀಮ ಬಸವ;
ತಮನಸುಮನ ನಿಯತಸಮಯಭಕ್ತ ರೂಪ ಬಸವ;
ಪ್ರಾಣಕಾಯರೂಪ ತತ್ತ್ವಜ್ಞಾನವಿನಾಯಕ ಬಸವ;
ಕಪಿಲಸಿದ್ಧಮಲ್ಲಿನಾಥಯ್ಯಾ ಪ್ರಾಣಲಿಂಗ ಏಕ ಬಸವ.

೬೬

ಆವುದಾನೊಂದು ಭಕ್ತಿ ಬಸವಣ್ಣನದಯ್ಯಾ;
ಆವುದಾನೊಂದು ಯುಕ್ತಿ ಬಸವಣ್ಣನದಯ್ಯಾ;
ಆವುದಾನೊಂದು ಯೋಗಮಾರ್ಗ ಬಸವಣ್ಣನದಯ್ಯಾ;
ಕಪಿಲಸಿದ್ಧಮಲ್ಲಿನಾಥಯ್ಯಾ

೬೭

ಕಾಮಿಸಿದೆನಯ್ಯಾ ಬಸವಣ್ಣನ ಭಕ್ತಿಗೆ;
ಕಾಮಿಸಿದೆನಯ್ಯಾ ಬಸವಣ್ಣನ ಯುಕ್ತಿಗೆ;
ಕಾಮಿಸಿದ ಕಾಮವೆ ಕೈಸಾರಿತ್ತಯ್ಯಾ, ಬಸವಣ್ಣನ ಕರುಣದಿಂದ
ಕಪಿಲಸಿದ್ಧಮಲ್ಲಿನಾಥಯ್ಯಾ.

೬೮

ಮೂರ್ತಿಯ ಮೂಲಕ್ಕೆ ಬಸವನ ಭಕ್ತಿಯೆ ಕಾರಣ.
ಜ್ಞಾನದ ಸಂಬಂಧಕ್ಕೆ ಬಸವನೀ ಕಪಿಲಸಿದ್ಧಮಲ್ಲಿನಾಥಯ್ಯಾ.

೬೯

ನೋಟದ ಭಕ್ತಿ ಬಸವನಿಂದಾಯಿತ್ತು;
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ.
ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ ಬಸವಣ್ಣನಲ್ಲದೆ?
ಮಹಾಜ್ಞಾನ, ಮಹಾಪ್ರಕಾಶ, ಬಸವಣ್ಣನ ಧರ್ಮವಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯಾ.

೭೦

ಅಜನ ಕಲ್ಪಿತವಲ್ಲದ ಭಕ್ತಿ,
ವಿಷ್ಣುವಿನ ಕಲ್ಪಿತವಲ್ಲದ ಭಕ್ತಿ,
ರುದ್ರನ ಕಲ್ಪಿತವಲ್ಲದ ಭಕ್ತಿ,
ನಿನ್ನ ಕಲ್ಪಿತವಾಯಿತ್ತಯ್ಯಾ ಬಸವಾ.
ನೋಟಕಾರರ ನೋಟಕ್ಕೆ ಸಿಕ್ಕದ ಭಕ್ತಿ,
ಕೂಟಕ್ಕೆ ಕೂಟವಾಯಿತ್ತಯ್ಯಾ ಬಸವಾ.
ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ ಬಸವ ಗುರುವೆ
ಕಪಿಲಸಿದ್ಧಮಲ್ಲಿನಾಥಯ್ಯಾ.

೭೧

ಮುಕ್ತಿಯ ಲಾಂಛನ, ಮುಕ್ತಿಯ ರೂಪು ಕಾಣಾ ಬಸವ.
ಭಕ್ತಿಯ ಲಾಂಛನ, ಭಕ್ತಿಯ ರೂಪು ಕಾಣಾ ಬಸವ.
ನಮ್ಮ ಕಪಿಲಸಿದ್ಧ ಮಲ್ಲಿನಾಥಯ್ಯನ ರೂಪು ಕಾಣಾ ಬಸವ.

೭೨

ಭಕ್ತಿಗೆ ಭಕ್ತ ಬಸವಣ್ಣನಯ್ಯಾ,
ಯುಕ್ತಿಗೆ ಯುಕ್ತ ಬಸವಣ್ಣನಯ್ಯಾ
ಮುಕ್ತಿಗೆ ಮುಕ್ತ ಬಸವಣ್ಣನಯ್ಯಾ, ಕಪಿಲಸಿದ್ಧಮಲ್ಲಿನಾಥಯ್ಯ.

೭೩

ಆರೂಢದ ಮನದಲ್ಲಿ ನೀನೆ ನಿಂದ ಕಾರಣ,
ತೋರುವ ಶಿವಜ್ಞಾನದ ದೀಪ್ತಿ, ಬಸವಣ್ಣನದಯ್ಯಾ,
ತೋರುವ ಬೀರುವ ಐಕ್ಯದ ಭಕ್ತಿ, ಬಸವಣ್ಣನದಯ್ಯಾ,
ನಿಜದಲ್ಲಿ ನಿಂ[೧೭][ದ][೧೭] ನಿರ್ವಯಲಾಯಿತ್ತಯ್ಯಾ,
ಬಸವಣ್ಣನ ಕರುಣದಿಂದ, ಕಪಿಲಸಿದ್ಧಮಲ್ಲಿನಾಥಯ್ಯಾ.

೭೪

ಆಗಮವಿಚಾರ ಅಪ್ರಮಾಣ, ನಮೋ ಬಸವ ಬಸವಾ,
ನಮೋ ಜಯತು ಜಯತು ಕರುಣಾಕರ, ಪಾಹಿಮಾಂ ಬಸವ ಬಸವಾ.
ಮಾರ್ಗವಲಯ ನಿಯಮಾಚಾರ ಸಮಯಭಕ್ತ ಭಕ್ತ
ನಮೋ ಬಸವಾ ಕಪಿಲಸಿದ್ಧಮಲ್ಲಿನಾಥಯ್ಯಾ.

೭೫

'ಆಧಾರಾಧೇಯಧರ್ಮಕೂಲಂ' ನಮೋ ಬಸವ ಬಸವಾ.
'ಸ್ವಾದುಸಜ್ಜನ ಸಮಯಾಚಾರಂ' ನಮೋ ಬಸವ ಬಸವಾ.
'ಪ್ರಾಣಲಿಂಗಸಂಬಂಧಿತಂ' ನಮೋ ಬಸವ ಬಸವಾ.
'ಕಪಿಲಸಿದ್ಧಮಲ್ಲಿನಾಥಂ' ನಮೋ[೧೮][ಬಸವ][೧೮] ಬಸವಾ.

೭೬

ಶರಣಾರ್ಥಿ ಶರಣಾರ್ಥಿ ಬಸವ ಬಸವಾ ಗುರುವೆ,
ಗುರುವೆ ಬಸವ ಬಸವ ಬಸವಾ.
ಕಪಿಲಸಿದ್ಧಮಲ್ಲಿನಾಥಯ್ಯಾ, ನನ್ನಂಗ ನಿನ್ನಂಗ ಬಸವಣ್ಣಂಗರ್ಪಿತವಯ್ಯಾ.

೭೭

ಎಂದೆಂದೂ ಎನ್ನಂಗ ನಿನ್ನದಯ್ಯಾ ಬಸವಾ.
ಎಂದೆಂದೂ ಎನ್ನಂಗ ಮನ ಪ್ರಾಣ ನಿನ್ನದಯ್ಯಾ ಬಸವಾ.
ಕಪಿಲಸಿದ್ಧಮಲ್ಲಿನಾಥಯ್ಯನ ಗುರುಬಸವಣ್ಣಾ.

೧೭-೧೭ ದು (ಬ) ೧೮-೧೮ x (ಬ)

೭೮

ಹಿಂದೆ ಹಲವು ಯುಗಂಗಳು ತಿರುಗಿ ಬರುತ್ತಿಪ್ಪಲ್ಲಿ
ಅವನು ನೀ ಮಾಡಿದೆಯಲ್ಲದೆ.
ತಮ್ಮಾಜ್ಞೆಯಿಂದ ಬಂದುದಿಲ್ಲವಯ್ಯಾ ಬಸವಣ್ಣಾ.
ನಿಮ್ಮಾಜ್ಞೆಯಲ್ಲಿ ಯುಗಂಗಳು
ಭವಭವದಲ್ಲಿ ಎನ್ನನೆ ಕಾಡಿದವು ಬಸವಣ್ಣಾ.
ಸಂಸಾರವಾಗಿ ಎನ್ನನೆ ಕಾಡಿದವು ಬಸವಣ್ಣಾ.
ಹೊನ್ನು, ಹೆಣ್ಣು, ಮಣ್ಣು ತ್ರಿವಿಧವಾಗಿ
ಎನ್ನನೆ ಕಾಡಿದವು ಬಸವಣ್ಣಾ.
ಆಶಾಪಾಶಂಗಳಾಗಿ ಎನ್ನನು ಕಾಡಿದವು ಬಸವಣ್ಣಾ.
ಗುರು ಬಸವಣ್ಣಾ, ಇವೆಲ್ಲಾ ನಿಮ್ಮಾಧೀನದವು.
ನೀ ಮಾಡಿದಡಾದವು, ಬೇಡಾ ಎಂದಡೆ ಮಾದವು.
ಅವಕ್ಕೆ ಎನ್ನನೊಪ್ಪಿಸದೆ 'ನಿನ್ನವ ನಿನ್ನವ'ನೆನಿಸಾ,
ಕಪಿಲಸಿದ್ಧಮಲ್ಲಿಕಾರ್ಜುನನ ತೋರಿದ ಗುರು ಬಸವಣ್ಣಾ.

೭೯

ಹಿಂದೆ ಪರೀಕ್ಷಿಸಿ ತಿಳಿದು ನೋಡುವರೆ,
ಪರಿಯಾಯ ಪರಿಯಾಯದಿಂದ ಬಂದಂಗವ ನೀ ಬಲ್ಲೆ ಬಸವಣ್ಣಾ.
ನಾ ನೊಂದ ನೋವನೂ ನೀ ಬಲ್ಲೆ ಬಸವಣ್ಣಾ.
ನಾನಂದು ಕಾಲನ ಕಮ್ಮಟಕ್ಕೆ ಗುರಿಯಾಗಿ ಇಪ್ಪಂದು
ನೀನು ಶೂನ್ಯರುದ್ರನು ಬಸವಣ್ಣಾ.
ನಾನಂದು ಹಲವು ಪರಿಯ ಬಹುರೂಪನಾಡುವಲ್ಲಿ
ನೀನು ವಿಚಿತ್ರವಿನೋದನೆಂಬ ಗಣೇಶ್ವರನು ಬಸವಣ್ಣಾ.
ಎನ್ನಾದ್ಯಂತವ ನೀ ಬಲ್ಲೆ,
ಬಲ್ಲ ಕಾರಣ ಎನ್ನ ಪಾಲಿಸಿದೆ ಬಸವಣ್ಣಾ.
ನೀ ಪಾಲಿಸಿದ ಗುಣದಿಂದ ಪಾವನವಾದೆನು ಬಸವಣ್ಣಾ
ಶುದ್ಧ, ಸಿದ್ಧ, ಪ್ರಸಿದ್ಧವನರಿದೆ ಬಸವಣ್ಣಾ.
ಎಲೆ ಗುರುವೆ ಬಸವಣ್ಣಾ,
ನೀ ಪಾಲಿಸಿದ ಗುಣದಿಂದ ಜೀವನ್ಮುಕ್ತನಾದೆನು.

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ನಿನ್ನವರಿಗೆಯೂ ನಿನಗೂ ಯೋಗ್ಯನಾದೆ ಬಸವಣ್ಣಾ.

೮೦

ಬಸವ ಬಸವಾ ಭವರೋಗವೈದ್ಯ ಬಸವಾ.
ಬಸವ ಬಸವಾ ನಿಮ್ಮರಿವು ನೀವೆ [ಬಸವಾ]
ಬಸವ ಬಸವಾ ಕಾಲಕಲ್ಪಿತನಷ್ಟ ನೀನೆ ಬಸವಾ.
ಕಪಿಲಸಿದ್ಧಮಲ್ಲಿನಾಥನಲ್ಲಿ ನೀನೆಲ್ಲಿಯಡಗಿದೆಯೊ ಬಸವಾ.

೮೧

ಸ್ಥೂಲ, ಸೂಕ್ಷ್ಮ, ಕಾರಣನೆಂದೆಂಬರಲ್ಲಾ ನಿನ್ನನು.
ಅದರ ಹಿಂದು ಮುಂದನರಿಯರು, ಬಂದ ಹಾಂಗೆ ನುಡಿವರು.
ಸ್ಥೂಲಕ್ಕೆ ನೆಲೆಯಾವುದು ಹೇಳಿಹೆ, ಕೇಳಿರೆ ಮನುಜರಿರಾ.
ಸ್ಥೂಲವದು ಅನೇಕ ಬ್ರಹ್ಮಾಂಡಂಗಳ ಮೀರಿಪ್ಪುದು;
ಅದು ಸ್ಥೂಲವೇ? ಅಲ್ಲ, ಹಾಂಗಿರಲಿ.
ಶ್ರೀಗುರುಸ್ವಾಮಿ ವಿಸ್ತಾರ ವಿಸ್ತಾರ ವಿಸ್ತಾರವೆಂದು
ಕೊಟ್ಟ ಲಿಂಗವೀಗ ಸ್ಥೂಲ.
ಆ ಲಿಂಗವು ಸಕಲವ್ಯಾಪ್ತಿಯ ತನ್ನೊಳಗೆ
ಇಂಬಿಟ್ಟುಕೊಂಡಿರ್ದ ಕಾರಣ ಸೂಕ್ಷ್ಮನಾದ.
ಶಿಷ್ಯಕಾರಣ ಪರಶಿವಮೂರ್ತಿಯಾದ ಕಾರಣ ಕಾರಣನಾದ.
ಎಲೆ ಗುರುವೆ, ಲಿಂಗವೆ, ಜಂಗಮವೆ
ನೀವು ಒಂದಾದ ಭೇದವ ಲೋಕದ ಜಡರೆತ್ತ ಬಲ್ಲರು? ಬಲ್ಲ ಬಸವಣ್ಣ, ಆ ಬಸವಣ್ಣ
ಅವ್ವೆಯ ಮನೋನಾಥ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾಗಿ ಬದುಕಿದೆನು.

೮೨

ಏನೆಂದೆನಿಸದ ವಸ್ತು, ಅಪ್ರಮಾಣ ಮೂರ್ತಿ,
ಬಸವಾ ಎಂದೆಂಬ ಪದಕ್ಕೆ ನಿಂದಿತ್ತಯ್ಯಾ, ನಿಮ್ಮ ಪ್ರಸಾದ.
ಅರಿಯಬಾರದ ಬಸವನೆಂಬ ವಸ್ತುವನರುಹಿತ್ತಯ್ಯಾ ನಿಮ್ಮ ಪ್ರಸಾದ.

ಬಸವನೆಂಬ ನಿಜವ ನಿಮ್ಮಲ್ಲಿ ನಿಲಿಸಿತ್ತಯ್ಯಾ, ನಿಮ್ಮ ಪ್ರಸಾದ.
ಕಪಿಲಸಿದ್ಧಮಲ್ಲಿನಾಥಯ್ಯಾ, ನಿಮ್ಮ ಅರ್ಪಿತ ಅನರ್ಪಿತವಾಯಿತ್ತಯ್ಯಾ, ನಿಮ್ಮ ಬಸವವಿಡಿದು.

೬೩

ಗುರುವಿಡಿದು ತನುವಾಯಿತ್ತು.
ಲಿಂಗವಿಡಿದು ಮನವಾಯಿತ್ತು.
ಜಂಗಮವಿಡಿದು ಧನವಾಯಿತ್ತು.
ಬಸವಣ್ಣವಿಡಿದು ಭಕ್ತಿಯಾಯಿತ್ತು.
ಕಪಿಲಸಿದ್ಧಮಲ್ಲಿನಾಥಯ್ಯಾ.

೬೪

ಮುಕ್ತಿಯ ಕೂಟಕ್ಕೆ ಮೂಲಿಗ ನೀನೆ ಬಸವಾ.
ಭಕ್ತಿಯ ತನುಸಂಬಂಧಿ ನೀನೆ ಬಸವಾ
ಎನಿತೆನಿತು ಜರಿದರೂ ಬಸವಾ ಎಂಬುದ ಮಾಣುವನೆ ಅಯ್ಯಾ?
ಎನಿತೆನಿತು ಕಡಿದಡಂ ಬಸವಾ ಎಂಬುದ ಮಾಣುವೆನೆ ಅಯ್ಯಾ?
ಕಪಿಲಸಿದ್ಧಮಲ್ಲಿನಾಥಯ್ಯಾ.

೬೫

ಜಯಸಮಯವನಪ್ಪಿಪ್ಪ ಕರ ಬಸವಾ.
ಕರುಣಗೃಹ, ವಿಮಲಶುದ್ಧ ಸಮಯಭಾವೌರಿತ,
ಭರಿತಪೂರ ಪರೋಪಜೀವ, ನಮೋ ಬಸವಾ.
ನಮೋ ಪ್ರಾಣಲಿಂಗಿ ಬಸವಾ.
ಕಪಿಲಸಿದ್ಧ ಮಲ್ಲಿನಾಥಾ ನಮೋ ಬಸವಾ.

೬೭

ನಾನೇನೆಂಬ ಮನ ನೀನೆಯಾದೆ ಬಸವಾ.
ತಾನೆಂಬ ತನು ನೀನೆಯಾದೆ ಬಸವಾ.
ಕಪಿಲಸಿದ್ಧಮಲ್ಲಿನಾಥನೆ,
ನೀನೆಂಬ ಮಾಟ ನೀನೆ ಬಸವಾ.

೮೭

ತಾಯೆ, ತವರೆ, ಬಸವ ಬಸವಾ.
ಭಕ್ತಿ ಮುಕ್ತಿಯ ರೂಪು ಬಸವನ ಪ್ರಸಾದವಯ್ಯಾ,
ಕಪಿಲಸಿದ್ಧ ಮಲ್ಲಿನಾಥಯ್ಯಾ.

೮೮

ಬಸವ, ಬಸವಾ ನಿಮ್ಮಿಂದ ಕಂಡೆನಯ್ಯಾ ಭಕ್ತಿಯ,
ಬಸವ, ಬಸವಾ ನಿಮ್ಮಿಂದ ಕಂಡೆನಯ್ಯಾ ಜ್ಞಾನವ.
ಬಸವ, ಬಸವಾ ನಿಮ್ಮಿಂದ ಕಂಡೆನಯ್ಯಾ ವೈರಾಗ್ಯವ
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನೆ ಶಿವಪಥಿಕನಯ್ಯಾ.

೮೯

ಕರುಣಿ ಬಸವಾ, ಕಾಲಹರ ಬಸವಾ,
ನಿರ್ಮಳ [೧೯]ಬಸವ,[೧೯] ಶಿವಜ್ಞಾನಿ ಬಸವಾ.
ನಿಮ್ಮ ಧರ್ಮವಯ್ಯಾ, ಈ ಭಕ್ತಿಯ ಪಥವು.
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ.

೯೦

ಶಿವನ ಕೀರ್ತಿ ಬಸವಣ್ಣನ ಧರ್ಮವಯ್ಯಾ.
ಶಿವನ ಸ್ತೋತ್ರ ಬಸವಣ್ಣನ ಧರ್ಮವಯ್ಯಾ,
ಶಿವನ ಮಂತ್ರೋಚ್ಚರಣೆ ಬಸವಣ್ಣನ ಧರ್ಮವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ.

೧೯-೧೯ x (ಬ)

೯೧

ಕಾಲಿಲ್ಲದವಂಗೆ ಕಾಲ ಕೊಟ್ಟೆ ಬಸವಾ,
ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ,
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ,
ಕಪಿಲಸಿದ್ಧಮಲ್ಲಿನಾಥಯ್ಯಾ.

೯೨

ಬಾಲನಾಗಿರ್ದಂದು ಕರೆದು ಎತ್ತಿ ಮುದ್ದಿಕ್ಕಿ,
ಮೊಲೆವಾಲಕೊಟ್ಟು ಸಲಹಿದ ಬಸವಾ.
ಮೂಲಶಿವಜ್ಞಾನಕ್ಕೆ ದೀಪ್ತಿಯನಿಕ್ಕಿ ಸಲಹಿದ ಬಸವಾ.
ಎನಗೆ ನೀನೆ ಗತಿಯಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯ ಬಸವಾ.

೯೩

ಎನಗೆನ್ನ ಬಸವಣ್ಣನ ತೊತ್ತು, ನಮ್ಮ ತಾಯಿಯಾಗಬೇಕು.
ಎನಗೆನ್ನ ಬಸವಣ್ಣನ ತೊಂಡ, ನಮ್ಮ ತಂದೆಯಾಗಬೇಕು.
ಎನಗೆನ್ನ ಬಸವಣ್ಣನ ತೊತ್ತು ತೊಂಡರು,
ನಮ್ಮ ತಂದೆ ತಾಯಿಗಳಾದರು.
ನಿಮ್ಮ ತಂದೆ ತಾಯಿಗಳಾರು ಹೇಳಾ? ಕಪಿಲಸಿದ್ಧಮಲ್ಲಿನಾಥಯ್ಯಾ.

೯೪

ಆಗಮಜ್ಞಾನಕ್ಕೆ ನೀನೆ ಕರ್ತನು, ಬಸವ ಬಸವಾ
ಆಗಮವಿಡಿದ ಶಿವಭಕ್ತನಿಗೆ ನೀನೆ ಕರ್ತನು, ಬಸವ ಬಸವಾ
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯ ಬಸವಾ.

೯೫

ನಿನಗೆ ನೀನೆ ಕರ್ತನು ಬಸವಾ.
ಎನಗೆ ನೀನೆ ಕರ್ತನು ಬಸವಾ.
ನಾ ಮಾಡುವ ಭಕ್ತಿಗೆ ನೀನೆ ಕರ್ತನು ಬಸವಾ.
ಕರುಣಿ ಕಪಿಲಸಿದ್ಧಮಲ್ಲಿನಾಥ ಬಸವಾ.

೯೬

ಎನ್ನ ತನುವ ಕಡಿವುದು, ಬಸವಣ್ಣನ ಧರ್ಮವಯ್ಯಾ,
ಎನ್ನ ಮನವನೊರೆದು ನೋಡುವುದು, ಬಸವಣ್ಣನ ಧರ್ಮವಯ್ಯಾ,
ಎನ್ನ ಧನವ ಸೂರೆಯಾಡುವುದು, ಬಸವಣ್ಣನ ಧರ್ಮವಯ್ಯಾ, ಕಪಿಲಸಿದ್ಧಮಲ್ಲಿನಾಥಯ್ಯಾ.

೯೭

"ನಿಟಿಲಾ[ಕ್ಷಾ]ಕಾರ ಕರಣಿಕಂ ಭವಾ"
ಎಂದೆನಿಸದ ಬಸವ ಬಸವಾ.
ನಿಜತತ್ವಜ್ಞಾನ[೨೦][ತನು][೨೦] ಬಸವ ಬಸವಾ
ಕಪಿಲಸಿದ್ಧಮಲ್ಲಿನಾಥಯ್ಯಾ
ಬಸವಣ್ಣನಿಂದ ನಿಮ್ಮ ಪ್ರಾಣಲಿಂಗವ ಕಂಡೆನಯ್ಯಾ.

೯೮

ಬಸವಣ್ಣ ಬಸವಣ್ಣ, ಭಕ್ತಿ ಬೀಜ ನಷ್ಟ ಬಸವಣ್ಣ.
ಬಸವಣ್ಣ ಬಸವಣ್ಣ, ಮುಕ್ತಿ ಬೀಜ ನಷ್ಟ ಬಸವಣ್ಣ.
ಮೋಕ್ಷವೆಂಬುದು ಮುನ್ನವೆ ಅಡಗಿತ್ತು ಬಸವಣ್ಣ.
ತೋರಿದೆ ಬೀರಿದೆ ಹೋದೆಹೆನೆಂಬೆ, ಮಹಾಜ್ಞಾನಿ ಬಸವಣ್ಣ.
ನೀನೆಲ್ಲಿಯಡಗಿದೆಯೊ ಕಪಿಲಸಿದ್ಧಮಲ್ಲಿನಾಥ ಬಸವಾ.

೯೯

ನಾನು ನಾನೋ, ನೀನು ನೀನೋ ಬಸವ ಬಸವಾ
ಮೌನಮುಗ್ಧ ಬಸವ ನೀನೆ, ಕಪಿಲಸಿದ್ಧಮಲ್ಲಿನಾಥಯ್ಯಾ.

೧೦೦

ಆವ ಕಳೆ ಎಂಬುದು ನೀನೆಯಾದೆ, ಬಸವಲಿಂಗವೆ
ಮುಕ್ತಿಗೆ ಮೂಲಸ್ವರೂಪವು ನೀನಾಗಿ,

೨೦-೨೦ ತು (ಬ)

ನಿನ್ನ ರೂಪು ನಿನ್ನಲ್ಲಿಯೆ ತಲ್ಲೀಯವಾಯಿತ್ತು ಬಸವ ಗುರುವೆ,
ನಿಯಮಾಚಾರದ ರೂಪು ನಿಮ್ಮಲ್ಲಿಯೆ ತಲ್ಲೀಯವಾಯಿತ್ತಯ್ಯಾ;
ಕಪಿಲಸಿದ್ಧಮಲ್ಲಿನಾಥನ ಗುರುಬಸವಾ.

೧೦೧

ಸಮಯ ಸಮಯೋಚಿತ ಭಾವ,
ಭಾವ ನಷ್ಟವಾಗಿ ಕಾಲಕರ್ಮವಿಲ್ಲದೆ ಹೋಯಿತ್ತಯ್ಯಾ.
ತತ್ವಜ್ಞಾನ ಪ್ರಕಾಶಿಕೆಯಡಗಿತ್ತು;
ಆಧಾರಾಧೇಯವಡಗಿತ್ತಯ್ಯಾ;
ನಿಜಾಧಾರ ಸಮಯವಾಯಿತ್ತಯ್ಯಾ;
ಬಸವಾ, ಬಸವಾ, ಬಸವಾ ಎಂಬ ಅನುಭಾವ ಬಯಲಾಯಿತ್ತಯ್ಯಾ.
ಎಸಳೆಂಟರ ಹಸನಳಿಯಿತ್ತಯ್ಯಾ ಬಸವಾ ನಿಮ್ಮಲ್ಲಿ,
ನಿಜಯೋಗಸಮಾಧಿಯಾಯಿತ್ತಯ್ಯಾ ಬಸವಾ ನಿಮ್ಮಲ್ಲಿ,
ಕಪಿಲಸಿದ್ಧಮಲ್ಲಿನಾಥಯ್ಯಾ, ಬದುಕಿದೆ ನಾನಿಂದು.

೧೦೨

ಬಸವ ಬಸವಾ ಎಂಬ ಶಬ್ದವಡಗಿತ್ತು.
ಬಸವ ಬಸವಾ ಎಂಬ ಕಂಭ ಮುರಿಯಿತ್ತು.
ಬಸವ ಬಸವಾ ಎಂಬ ಮಾಟ ನಷ್ಟವಾಯಿತ್ತಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ.

೧೦೩

ನಿನ್ನಡಕ ನೀನೆಯಾದೆ ಬಸವಲಿಂಗವೆ.
ಎನ್ನ ಚಿತ್ಪಿಂಡದ ರೂಪು ನಿಮ್ಮಲ್ಲಿ,
ತಲ್ಲೀಯವಾಯಿತ್ತು ಬಸವ ಗುರುವೆ.
ಭಾವಿಸಿಹೆನೆಂಬ ಭಾವ ನಷ್ಟವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿನಾಥನ ಗುರುಬಸವಾ.

*

ಉರಿಲಿಂಗಪೆದ್ದಿ

೧೦೪

ಇಚ್ಛೆಯರಿದು ಕಾಲ ಕಾಲದಲೂ
ಇಚ್ಛೆಯ ಸಲಿಸಿ ನಿರುಪಾಧಿಕ ದಾಸೋಹವ ಮಾಡಿ,
ಶಿವ ನಾನೆಂಬ ಅಹಂಕಾರವಡಗಿದಡೆ [೨೧]ಆ[ತನೆ] ಭಕ್ತ [ನು][೨೧]
ಮಹಾವಸ್ತುಗಳ ಆವ ಕಾಲ, ಆವ ಹೊತ್ತು ಆತ ಬೆಸಸಿ[೨೨][ತ್ತು],[೨೨]
ಮಹಾಪ್ರಸಾದವೆಂದು ಪ್ರತ್ಯುತ್ತರವಿಲ್ಲದೆ,
ಆಜ್ಞೆಯಲು ನಡೆದು, ಆಜ್ಞೆಯಲು ನುಡಿದು ಇರಬಲ್ಲಡೆ ಆತನೆ ಭಕ್ತನು.
ಈ ಸದ್ಭಕ್ತಿ ಬಸವಣ್ಣಂಗಲ್ಲದೆ
ಸರ್ವ ಬ್ರಹ್ಮಾಂಡದೊಳಗಣ ಸರ್ವಲೋಕ[೨೩]ದ[೨೩]
ದೇವ, ದಾನ, ಮಾನವರಿಗೂ ಅಳವಡದು.
ಬ್ರಹ್ಮವಿಷ್ಣುಗಳಿಗೂ ಅಳವಡದು.
ಆರಿಗೂ ಆಗದ ಸದ್ಭಕ್ತಿ ಬಸವಣ್ಣಂಗಳವಟ್ಟಿತ್ತು.
ಆ ಬಸವಣ್ಣನೆ ಭಕ್ತನು.
ಬಸವಣ್ಣನ ನೆನವುದೆ ಭಕ್ತಿಯ ಪಥವು.
ಬಸವಣ್ಣನ ನೆನವುದೆ ಮುಕ್ತಿಯ ಪಥವು.
ಬಸವಣ್ಣನ ನೆನದು ಬದುಕಿದೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

*

ಸೊಡ್ಡಳ ಬಾಚರಸ

೧೦೫

ಬಸವ ಹರಿಯಿತ್ತು, ಬಸವ ಹರಿಯಿತ್ತು
ಬಸವ ಹರಿಯಿತ್ತು ಕಾಣಿಭೋ,

೨೧–೨೧ ಆ ಭಕ್ತನೆ (ಬ) ೨೨–೨೨ ತ್ತ (ಬ) ೨೩–೨೩ x (ಬ)

ತೊತ್ತಳದುಳಿಯಿತ್ತು, ತೊತ್ತಳದುಳಿಯಿತ್ತು.
ಮೀಮಾಂಸಕರ ಮಿತ್ತುವ ಮುರಿಯಿತ್ತು;
ಬೌದ್ಧ ಜೈನರ ಕೋಡಿನಲ್ಲಿರಿಯಿತ್ತು;
ಕೊಳಗಿನಲ್ಲರೆಯಿತ್ತು; ನೋಡಾ ಸೊಡ್ಡಳಾ ಸಂಗನಬಸವ.

೧೦೬

ಪ್ರಣವದ ಪ್ರಣವವೆ ನಕಾರ;
ಪ್ರಣವದ ದಂಡಕವೆ ಮಕಾರ;
ಪ್ರಣವದ ಕುಂಡಲಿಯೆ ಶಿಕಾರ;
ಪ್ರಣವದ ಅರ್ಧಚಂದ್ರವೆ ವಕಾರ;
ಪ್ರಣವದ ಬಿಂದುವೆ ಯಕಾರ.
ನಕಾರದ ದಂಡಕವೆ ಮಕಾರ.
ನಕಾರದ ಬಲದ ಕೋಡೆ ಶಿಕಾರ;
ನಕಾರದ ಎಡದ ಕೋಡೆ ವಕಾರ;
ನಕಾರದ ಬಿಂದುವೆ ಯಕಾರ;
ನಕಾರದ ತಾರಕವೆ ಓಂಕಾರ
ಮಕಾರದ ದಂಡಕವೆ ನಕಾರ;
ಮಕಾರದ ಬಲದ ಕೋಡೆ ಶಿಕಾರ;
ಮಕಾರದ ಎಡದ ಕೋಡೆ ವಕಾರ;
ಮಕಾರದ ಬಿಂದುವೆ ಯಕಾರ;
ಮಕಾರದ ತಾರಕವೆ ಓಂಕಾರ.
ಶಿಕಾರದ ದಂಡಕವೆ ನಕಾರ;
ಶಿಕಾರದ ಬಲದ ಕೋಡೆ ಮಕಾರ;
ಶಿಕಾರದ ಎಡದ ಕೋಡೆ ವಕಾರ;
ಶಿಕಾರದ ಬಿಂದುವೆ ಯಕಾರ;
ಶಿಕಾರದ ತಾರಕವೆ ಓಂಕಾರ.
ವಕಾರದ ದಂಡಕವೆ ನಕಾರ;
ವಕಾರದ ಬಲದ ಕೋಡೆ ಮಕಾರ;
ವಕಾರದ ಎಡದ ಕೋಡೆ ಶಿಕಾರ;

ವಕಾರದ ಬಿಂದುವೆ ಯಕಾರ;
ವಕಾರದ ತಾರಕವೆ ಓಂಕಾರ.
ಯಕಾರದ ದಂಡಕವೆ ನಕಾರ;
ಯಕಾರದ ಬಲದ ಕೋಡೆ ಮಕಾರ;
ಯಕಾರದ ಎಡದ ಕೋಡೆ ಶಿಕಾರ;
ಯಕಾರದ ಬಿಂದುವೆ ಮಕಾರ;
ಯಕಾರದ ತಾರಕವೆ ಓಂಕಾರ.
ಇಂತಪ್ಪ ಮೂವತ್ತಾರು ಮೂಲಪ್ರಣವಂಗಳೆ,
ಪ್ರಥಮಗುರು ಬಸವಣ್ಣನಾದುದಂ
ಸೊಡ್ಡಳಲಿಂಗದಲ್ಲಿ ಕಂಡು ಸುಖಿಯಾಗಿ, ನಾನು
ಬಸವಾ, ಬಸವಾ, ಬಸವಾ ಎಂದು ಜಪಿಸುತಿರ್ದೆನಯ್ಯಾ.

*

ಮರುಳಶಂಕರದೇವರು

೧೦೭

ತನುವಿನೊಳಗೆ ತನು ಸವೆಯದೆ,
ಮನದೊಳಗೆ ಮನ ಸವೆಯದೆ,
ಧನದೊಳಗೆ ಧನ ಸವೆಯದೆ,
[೨೪]ಅ[೨೪]ನುಮಾನವ[ನ]ರಿದು ಘನವ ಬೆರಸದೆ,
ಬರಿದೆ ತಮತಮಗೆ ಅರಿದೆಹೆನೆಂಬವರೆಲ್ಲಕ್ಕು;
ಕನಸಿನ ಲಿಂಗ ಕಾಣಿರಯ್ಯಾ.
ಈಹಿಂಗಲ್ಲ, ನಮ್ಮ ಸಂಗನಬಸವಣ್ಣನ ಪರಿ ಬೇರೆ,
ತನುವ, ದಾಸೋಹಕ್ಕೆ ಸವೆಸಿ,
ಮನವ, ಲಿಂಗಧ್ಯಾನದಲ್ಲಿ ಸವೆಸಿ,
ಧನವ, ಜಂಗಮದಲ್ಲಿ ಸವೆಸಿ,
ಅನುಮಾನವನರಿದು ಘನವ ಬೆರಸಬಲ್ಲ,

೨೪-೨೪ ಆ (ಬ)

ಶರಣ ಬಸವಣ್ಣನ ತನುವೆ ಶುದ್ಧ ಪ್ರಸಾದ.
ಮನವೆ ಸಿದ್ಧಪ್ರಸಾದ, ಧನವೆ ಪ್ರಸಿದ್ಧಪ್ರಸಾದ
ಮತ್ತುಳಿದವರ ತನು, ಮನ ಧನಂಗಳ
ವಿವರಿಸಿ ನೋಡಿದರೆ ಒಂದೂ ಶುದ್ಧವಲ್ಲ.
ಇಂತೀ ತನು, ಮನ, ಧನಂಗಳನೂ
ತ್ರಿವಿಧಲಿಂಗಕ್ಕರ್ಪಿಸಿದಡೆ ತ್ರಿವಿಧವೂ ಶುದ್ಧವಾಯಿತ್ತು.
ಇಂತೀ ತ್ರಿವಿಧದ ವರ್ಮವನರಿದು,
ತ್ರಿವಿಧಲಿಂಗಮುಖದಲ್ಲಿ ಕೊಟ್ಟುಕೊಳಬಲ್ಲ ಭಕ್ತನೆ ಬಸವಣ್ಣನು.
ಇಂತಪ್ಪ ಭಕ್ತ ಬಸವಣ್ಣನ ತ್ರಿವಿಧಪ್ರಸಾದವ,
ತ್ರಿಕಾಲದಲ್ಲಿಯೂ ನಾನು ಕೊಂಡು ಬದುಕಿದೆನಯ್ಯಾ.
ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ತ್ರಿವಿಧಭಕ್ತ ಬಸವಣ್ಣನ ನಿಲವ ನೀನೆ ಬಲ್ಲಿರಲ್ಲದೆ,
ನಾನೆತ್ತ ಬಲ್ಲೆನಯ್ಯಾ ಬಸವಣ್ಣನ ನಿಲವ? ನಿಮ್ಮ ಧರ್ಮ ನಿಮ್ಮ ಧರ್ಮ.

೧೦೮

ಜಂಗಮದ ಪಾದಾಂಬುವಿಂ ಮಜ್ಜನಮಾಡಿ, ಪ್ರಸಾದಂಬುವ ಮಾಡಿ,
ಎನಗೆನ್ನ ಗುರುತಂದೆ ಶಿವಕಲ್ಯಾಣವ ಮಾಡಿದ.
ಹಿಂಗದಿರು ಕಂಡಾ ಎಂದು ಕಂಕಣವ ಕಟ್ಟಿದ
ಲಿಂಗಕ್ಕೆ ಚೈತನ್ಯ ಪ್ರಸಾದವೆಂದು, ನನಗೆ ಚೈತನ್ಯ ಲಿಂಗವೆಂದು,
ತನಗೆ ಚೈತನ್ಯ ಜಂಗಮವೆಂದು ನಿರೂಪಿಸಿದನದೆಂತೆಂದಡೆ:
ಲಿಂಗಸ್ಯ ಚೇತನಂ ಶೇಷಃ ಚರಶ್ಶೇಷಸ್ಯ ಚೇತನಂ ।
ಭವತಾಂ ಚೇತನಂ ಲಿಂಗಮಿತಿ ಲಿಂಗಾಂಗಿನಾಂ ಮತಃ ।
ಇಂತೆಂದುದಾಗಿ,
ಜಂಗಮಪ್ರಸಾದ ಬಸವಣ್ಣನಿಂದಲ್ಲದೆ ದೊರಕೊಳದೆಂದು,
ನಾನು ಬಸವಣ್ಣನ ಸಾರಿದೆನು.
ಆ ಬಸವಣ್ಣ ಮಾಡಿದ ಉಪಕಾರವನೇನ ಹೇಳುವೆನಯ್ಯಾ?
ಒಡೆಯರೊಕ್ಕುದ ತಾ ಸವಿದು,
ತನ್ನ ಒಕ್ಕುದ ತನ್ನ ಸತಿಸುತರುಂಡು,
ಅವರೆಲ್ಲಾ ಉಂಡು ಮಿಕ್ಕುದ ತನ್ನ ಗೃಹಚರರುಂಡು,

ಇಂತಿವರೆಲ್ಲಾ ಉಂಡು ಮಿಕ್ಕ ಶೇಷಪ್ರಸಾದ
ಎನ್ನ ಲಿಂಗಕ್ಕೆ ಅರ್ಪಿತವಾಯಿತ್ತು.
ಎನಗೆ ಪರಮತೃಪ್ತಿಯಾಯಿತ್ತು.
ಆ ಪ್ರಸಾದದ ಕುಂಡವೆ ಎನ್ನ ಲಿಂಗಕ್ಕೂ, ಎನಗೂ ಗೃಹವಾಯಿತ್ತು.
ಆ ಪ್ರಸಾದದ ಪತ್ರವೆ ಎನ್ನ ಲಿಂಗಕ್ಕೆ ಪೂಜೆ, ಎನಗೆ ಹೊದಿಕೆಯಾಯಿತ್ತು.
ಇಂತೀ ಕ್ರಮವನರಿದೆನಾಗಿ,
ಎನ್ನ ತನುವೆ ಶುದ್ಧ ಪ್ರಸಾದವಾಯಿತ್ತು.
ಎನ್ನ ಮನವೆ ಸಿದ್ಧಪ್ರಸಾದವಾಯಿತ್ತು.
ಎನ್ನ ಪ್ರಾಣವೆ ಪ್ರಸಿದ್ಧ ಪ್ರಸಾದವಾಯಿತ್ತು.
ಗುರುವಾಜ್ಞೆವಿಡಿದೆನಾಗಿ ಮಹಾಪ್ರಸಾದಿಯಾದೆನು.
ಅದೆಂತೆಂದಡೆ;
ನಿರಂಜನಸ್ಯ ಶುದ್ಧಸ್ಯ । ನಿಷ್ಕಲಸ್ಯ ಚರಸ್ಯ ಚ ।
ಪಾದಾಂಬುನಾ ಲಿಂಗಮೂರ್ತಿಂ । ಸ್ನ[೨೫][ಪ್ಯ][೨೫] ಕುರ್ವೀತ [೨೬][ಭೋ][೨೬]ಜನಂ ।
ಪ್ರಸಾದೇನ ಗುರುಃ ಪಶ್ಚಾತ್ । ಶಿಷ್ಯ ಪಾಣೌ ವಿನಿಕ್ಷಿಪೇತ್ ।
ಇಂತೆಂದುದಾಗಿ,
ಇಂತಪ್ಪ ಬಸವಣ್ಣನ ಪ್ರಸಾದವನೆನ್ನ ಲಿಂಗಕ್ಕೆ ಕೊಟ್ಟು,
ನಾನು ಲಿಂಗಭೋಗೋಪಭೋಗಿಯಾಗಿ ಬದುಕಿದೆನಯ್ಯಾ.
ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸನ್ನ ಪ್ರಭುವೆ
ಶಾಂತ ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಿದ್ಧರಾಮಯ್ಯ ಪ್ರಭುದೇವರ ಕಂಡು,
ಉರಿಯುಂಡ ಕರ್ಪುರದಂತಾದೆನಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ.

೨೫–೨೫ ತಾ (ಬ) ೨೬–೨೬ ಭಾ(ಬ)

*

ಅಕ್ಕಮಹಾದೇವಿ

೧೦೯

ಆದಿ ಅನಾದಿಗಳಿಂದತ್ತಲಯ್ಯಾ ಬಸವಣ್ಣನು.
ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು
ನಾದಬಿಂದುಕಳಾತೀತ ಆದಿನಿರಂಜನನಯ್ಯಾ ಬಸವಣ್ಣನು.
ಆ ನಾದ ಸ್ವರೂಪೆ ಬಸವಣ್ಣನಾದ ಕಾರಣ,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು,
ಕಾಣಾ ಚೆನ್ನಮಲ್ಲಿಕಾರ್ಜುನಯ್ಯಾ.

೧೧೦

ದೇವಲೋಕದವರಿಗೂ ಬಸವಣ್ಣನೆ ದೇವರು.
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು.
ನಾಗಲೋಕದವರಿಗೂ ಬಸವಣ್ಣನೆ ದೇವರು.
ಮೇರುಗಿರಿ, ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು.
ಚೆನ್ನಮಲ್ಲಿಕಾರ್ಜುನಯ್ಯಾ ನಿಮಗೂ, ಎನಗೂ,
ನಿಮ್ಮ ಶರಣರಿಗೂ ಬಸವಣ್ಣನೆ ದೇವರು.

೧೧೧

ಪೃಥ್ವಿಯ ಗೆಲಿದ ಏಲೇಶ್ವರನ ಕಂಡೆ.
ಭಾವಭ್ರಮೆಯ ಗೆಲಿದ ಬ್ರಹ್ಮೇಶ್ವರನ ಕಂಡೆ.
ಸತ್ವ, ರಜ, ತಮ ತ್ರಿವಿಧವ ಗೆಲಿದ ತ್ರಿಪುರಾಂತಕನ ಕಂಡೆ.
ಅಂತರಂಗದ ಆತ್ಮಜ್ಞಾನದಿಂದ ಜ್ಯೋತಿಸಿದ್ಧಯ್ಯನ ಕಂಡೆ.
ಇವರೆಲ್ಲರ ಮಧ್ಯಸ್ಥಾನ ಪ್ರಾಣ, ಲಿಂಗ[೨೭]ಜಂಗಮವೆಂದು

---

೨೭ + ಮಧ್ಯಮ (ಶಿವ)

ಸುಜ್ಞಾನದಲ್ಲಿ ತೋರಿದ ಬಸವಣ್ಣ.
ಆ ಬಸವಣ್ಣನ ಪ್ರಸಾದದಿಂದ
ಚೆನ್ನಮಲ್ಲಿಕಾರ್ಜುನನ ಕಂಡೆನಯ್ಯಾ.

*

ಅಜ್ಞಾತ ಕರ್ತೃ

೧೧೨

ಬಸವಣ್ಣನ ಏಕಾಕ್ಷರದಿಂದ ಷಡಾಕ್ಷರ ಪುಟ್ಟಿತ್ತು.
ಇನ್ನು ಬಸವಣ್ಣನ ಏಕಾಕ್ಷರ, ತ್ರಯಾಕ್ಷರ,
ಪಂಚಾಕ್ಷರ, ಷಡಾಕ್ಷರವೆನ್ನ ಸರ್ವಾಂಗದಲ್ಲಿ
ತುಂಬಿ ಅಕ್ಷರಮಯವಾಯಿತ್ತು.
ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ ಬಸವಣ್ಣನ ಕಾರುಣ್ಯದಿಂದ.

೧೧೩

ಬಸವಣ್ಣನ ನೆನೆವುತ್ತ ನೆನೆವುತ್ತ ಗುರುವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಲಿಂಗವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಜಂಗಮವ ಕಂಡೆ
ಬಸವಣ್ಣನ ನೆನೆವುತ್ತ ನೆನೆವುತ್ತ ಪ್ರಸಾದವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಪಾದೋದಕವ ಕಂಡೆ
ಬಸವಣ್ಣನ ನೆನೆವುತ್ತ ನೆನೆವುತ್ತ ಪಂಚಾಚಾರವ ಕಂಡೆ
ಗೊಹೇಶ್ವರ ಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ
ಬಸವಣ್ಣನ ನೆನೆದ ಕಾರಣದಿಂದ.

*

ಕಿನ್ನರಿಬ್ರಹ್ಮಯ್ಯ

೧೧೪

ಪ್ರಣವದ ಚಿನ್ನಾದವೆ ಅಕಾರ.
ಪ್ರಣವದ ಚಿದ್ಬಿಂದುವೆ ಉಕಾರ.
ಪ್ರಣವದ ಚಿತ್ಕಳೆಯ ಮಕಾರ.
ಪ್ರಣವದ ಬಟ್ಟೆಯೆ ಬಕಾರ.
ಪ್ರಣವದ ಸೋಪಾನವೆ ಸಕಾರ.
ಪ್ರಣವದ ವರ್ತನೆಯೆ ವಕಾರ.
ಪ್ರಣವದ ಬಳ್ಳಿಯೆ ಬಕಾರ.
ಪ್ರಣವದ ಲೇಸೆ ಸಕಾರ.
ಪ್ರಣವದ ವರವೆ ವಕಾರ.
ಪ್ರಣವದ ಬಹಳಾಕಾರವೆ ಬಕಾರ.
ಪ್ರಣವದ ಸಹ[೨೮]ಜ[೨೮]ವೆ ಸಕಾರ.
ಪ್ರಣವದ ವಶವೆ ವಕಾರ.
ಪ್ರಣವದ ಭರವೆ ಬಕಾರ.
ಪ್ರಣವದ ಸರವೆ ಸಕಾರ.
ಪ್ರಣವದ ಇರವೆ ವಕಾರ.
ಪ್ರಣವದ ಬಲವೆ ಬಕಾರ.
ಪ್ರಣವದ ಲೇ[೨೯]ಸೆ[೨೯] ಸಕಾರ.
ಪ್ರಣವದ ಬಲ್ಮೆಯೆ ಬಕಾರ.
ಪ್ರಣವದ ಸಲ್ಮೆಯೆ ಸಕಾರ.
ಪ್ರಣವದ ಒಲ್ಮೆಯೆ ವಕಾರ.
ಪ್ರಣವದ ಪ[೩೦][ರ್ಯಂತ][೩೦] ವಾಕೆ ಬಕಾರ.
ಪ್ರಣವದ ಸೂಕ್ಷ್ಮವಾಕೆ ಸಕಾರ.

೨೮–೨೮ x (ಬ ೨) ೨೯–೨೯ಸಿ (ಬ) ೩೦–೩೦ ಶ್ಯಾಂತ (ಬ)

ಪ್ರಣವದ ವೈಖರ್ಯವಾಕೆ ವಕಾರ.
ಪ್ರಣವದ ಮೂಲವೆ ಬಕಾರ.
ಪ್ರಣವದ ಶಾಖೆಯೆ ಸಕಾರ.
ಪ್ರಣವದ ಫಲವೆ ವಕಾರ.
ಪ್ರಣವದ ಬಹಳನಾದವೆ ಸಕಾರ.
ಪ್ರಣವದ ಸನಾದವೆ ಸಕಾರ.
ಪ್ರಣವದ ಸುನಾದವೆ ವಕಾರ.
ಪ್ರಣವದ ಬಹಳಜ್ಞಾನವೆ ಬಕಾರ.
ಪ್ರಣವದ ಸಹಜಜ್ಞಾನವೆ ಸಕಾರ.
ಪ್ರಣವದ ಶುದ್ಧಜ್ಞಾನದೀಪ್ತಿಯೆ ವಕಾರ.
ಪ್ರಣವದ ಭಕ್ತಿಯೆ ಬಕಾರ.
ಪ್ರಣವದ ಸುಜ್ಞಾನವೆ ಸಕಾರ.
ಪ್ರಣವದ ವೈರಾಗ್ಯವೆ ವಕಾರ.
ಪ್ರಣವದ ಶಬ್ದವೆ ಬಕಾರ.
ಪ್ರಣವದ ನಿಃಶಬ್ದವೆ ಸಕಾರ.
ಪ್ರಣವದ ಶಬ್ದನಿಃಶಬ್ದದ ವಾಕುಗಳೆ ವಕಾರ.
ಇಂತಪ್ಪ ಪ್ರಣವ ಮಂತ್ರಂಗಳೇ
ಬಸವಾ ಎಂಬ ಪ್ರಣವ[೩೧]ನಾ[೩೧]ದ ತ್ರಯಸಂಬಂಧವಾದುದಂ
ತ್ರಿಪುರಾಂತಕಲಿಂಗದಲ್ಲಿ ಅರಿದು ಸುಖಿಯಾಗಿ
ಆನು ಬಸವಾ, ಬಸವಾ, ಬಸವಾ ಎಂದು ಜಪಿಸುತ್ತಿರ್ದೆನಯ್ಯಾ.

*

ಹಡಪದ ಅಪ್ಪಣ್ಣ

೧೧೫

ಆದಿ ಅನಾದಿಗಳೆಂಬವು ನಾಮಕ್ಕೆ ಬಾರದ ಮುನ್ನ,
ಶೂನ್ಯ ನಿಃಶೂನ್ಯ ಸುರಾಳ ನಿರಾಳವೆಂಬ ಸುಳುಹುದೋರದಂದು,

೩೧-೩೧ x (ಬ ೨)

ತಾನು ತಾನಾನೆಂಬ ತಲ್ಲಣವಿಲ್ಲದಂದು,
ಬಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ,
ನಿಮ್ಮನುವ ನೀವರಿದ ಘನಮಹಿಮರು ತಿಳಿದು ನೋಡಿರಣ್ಣಾ.
ಬಟ್ಟಬಯಲೆಂದಡಾರು? ಬಸವ.
ಆ ಬಸವನ ಆಮೂಲಾಂತವ ಬಲ್ಲವರು ನೀವು ಕೇಳಿರೆ,
ಬಸವಾ ಎಂಬ ತ್ರಯಾಕ್ಷರ, ಮೂಲಪ್ರಣವ,
ಮತ್ತೆ,
ಬ ಎಂಬುದೆ ಚಿನ್ನಾದವಾಯಿತ್ತು.
ಸ ಎಂಬುದೆ ಚಿದ್ಬಿಂದುವಾಯಿತ್ತು.
ವ ಎಂಬುದೆ ಚಿತ್ಕಳೆಯಾಯಿತ್ತು.
ಮತ್ತೆ,
ಬ ಎಂಬುದೆ ಅಕಾರವಾಯಿತ್ತು.
ಸ ಎಂಬುದೆ ಉಕಾರವಾಯಿತ್ತು.
ವ ಎಂಬುದೆ ಮಕಾರವಾಯಿತ್ತು.
ಮತ್ತೆ,
ಬ ಎಂಬುದೆ ನಾದವಾಯಿತ್ತು,
ಸ ಎಂಬುದೆ ಬಿಂದುವಾಯಿತ್ತು.
ವ ಎಂಬುದೆ ಕಳೆಯಾಯಿತ್ತು.
ಮತ್ತೆ,
ಬ ಎಂಬುದೆ ಗುರುವಾಯಿತ್ತು.
ಸ ಎಂಬುದೆ ಲಿಂಗವಾಯಿತ್ತು.
ವ ಎಂಬುದೆ ಜಂಗಮವಾಯಿತ್ತು.
ಮತ್ತೆ,
ಬ ಎಂಬ ನಾದವೆತ್ತಲು
ಸ ಎಂಬ ಬಿಂದು ಬಂದು ಕೂಡಲು
ವ ಎಂಬ ಕಳೆ ಬೆಳಗಲು
ಅಖಂಡ ಗೋಳಕಾಕಾರವಪ್ಪ
ಆದಿ ಪ್ರಣವವೆನಿಸಿತ್ತು ನೋಡಾ.
ಆದಿ ಪ್ರಣವ, ಅನಾದಿಪ್ರಣವ, ಅಂತ್ಯಪ್ರಣವ

೩೨-೩೨ ವವೇದಿ (ಬ್ರ)

ನಮ್ಮ ಬಸವಣ್ಣನ ಸ್ಥೂಲ, ಸೂಕ್ಷ್ಮ, ಕಾರಣ ಕಾಣಿರೆ,
ಇಂತಪ್ಪ ಬಸವಣ್ಣ ಬಯಲಬ್ರಹ್ಮವನೆ ಮೇದು,
ಮೆಲುಕಿರಿದು, ಗೋಮಯವಿಕ್ಕಲು ಪೃಥ್ವಿಯಾಯಿತ್ತು.
ಇಂತಪ್ಪ ಬಸವಣ್ಣ ಜಲವ ಬಿಡಲು ಅಪ್ಪುಮಯವಾಯಿತ್ತು.
ಇಂತಪ್ಪ ಬಸವಣ್ಣನ ತೇಜವೆ ಅಗ್ನಿಯಾಯಿತ್ತು.
ಇಂತಪ್ಪ ಬಸವಣ್ಣನ ಉಚ್ಛ್ವಾಸ ನಿಶ್ವಾಸವೆ ವಾಯುವಾಯಿತ್ತು.
ಇಂತಪ್ಪ ಬಸವಣ್ಣನ ಶಬ್ದವೆ ಆಕಾಶವಾಯಿತ್ತು.
ಇಂತಪ್ಪ ಬಸವಣ್ಣನ ಕಂಗಳ ಬೆಳಗೆ ಚಂದ್ರಸೂರ್ಯರಾದರು.
ಇಂತಪ್ಪ ಬಸವಣ್ಣನ ಬುದ್ಧಿಯೆ ಆತ್ಮವೆನಿಸಿ, ಅಷ್ಟತನುಮೂರ್ತಿಯೆನಿಸಿ,
ಅಜಾಂಡ, ಬ್ರಹ್ಮಾಂಡ, ಕರಾಂಡ ಕೋಟಾನುಕೋಟಿ
ಅಂಡ ಪಿಂಡಾಂಡಂಗಳಿಗೆ ಒಡಲಾಗಿ,
ಅಡಿ ಮುಡಿಗೆ ತಾನೆ ಆದಿಯಾಗಿ,
ಸರ್ವವು ಬಸವಣ್ಣನ ಒಡಲಲ್ಲಿ ಹುಟ್ಟುತ್ತ
ಬೆಳವುತ್ತ ಅಡಗುತ್ತಿಪ್ಪವು ಕಾಣಿರೆ.
ಇಂತೀ ಸರ್ವಪ್ರಾಣಿಗಳಿಗೆ ಬಸವಣ್ಣನ
ಗೋಮಯದಿಂದ ಹುಟ್ಟಿದ ಪೃಥ್ವಿಯೆ ಪದಾರ್ಥ.
ಜಲದಿಂದ ಹುಟ್ಟಿದ ಉದಕವೆ ಸಾರಾಯ.
ತೇಜದಿಂದ ಹುಟ್ಟಿದ ಅಗ್ನಿಯೆ ಕಳೆ.
ಉಚ್ಛ್ವಾಸ ನಿಶ್ವಾಸದಿಂದ ಹುಟ್ಟಿದ ವಾಯುವೆ ಚೈತನ್ಯ.
ಶಬ್ದದಿಂದ ಹುಟ್ಟಿದ ಆಕಾಶವೆ ಭಾವ.
ಕಂಗಳ ಬೆಳಗಿನಿಂದ ಹುಟ್ಟಿದ ಚಂದ್ರಸೂರ್ಯರೆ ಅರಿವು ಮರಹು.
ಬುದ್ಧಿಯಿಂದ ಹುಟ್ಟಿದ ಆತ್ಮನೆ ಚೈತನ್ಯಾತ್ಮಕನು.
ಇಂತೀ ಅಡಿಮುಡಿಗೆ ತಾನೆ ಆದಿಯಾಗಿ
ಆದಿಯಲ್ಲಿ ಹುಟ್ಟಿ, ಮಧ್ಯದಲ್ಲಿ ಬೆಳದು,
ಅಂತ್ಯದಲ್ಲಿ ನಮ್ಮ ಬಸವಣ್ಣನಲ್ಲಿ ಅಡಗುತ್ತಿಪ್ಪವು ಕಾಣಿರೆ
ಇಂತೀ ಸಕಲ ಪ್ರಾಣಿಗಳ ಒಳ ಹೊರಗೆ ಕೈಕೊಂಬುದಕ್ಕೆ
ಬೇರೊಂದು ದೇವರುಂಟಾದರೆ ಬಲ್ಲರೆ ನೀವು ಹೇಳಿರೆ,
ಅಲ್ಲದಿರ್ದಡೆ ನಿಮ್ಮ ವೇದ, ಶಾಸ್ತ್ರ, ಆಗಮ, ಪುರಾಣಂಗಳ ಕೈಯಲ್ಲಿ ಹೇಳಿಸಿರೆ,
ಅದು ಕಾರಣ,

ಅನಾದಿ ಸಂಸಿದ್ಧವಾಗಿ ಬಯಲಬ್ರಹ್ಮವೆ ಬಸವಣ್ಣನೆಂಬುದಂ
ಕಾಣುತ್ತಿರ್ದು, ಕೇಳುತ್ತಿರ್ದು,
ಕೀಳುದೈವಂಗಳನಾರಾಧಿಸಿ ಅರ್ಚಿಸಿ, ಪೂಜಿಸಿ,
ಹಲವು ಜಾತಿ, ಹಲವು ದರ್ಶನವೆನಿಸಿಕೊಂಡು ಹೊಲಬುದಪ್ಪದಿರಿ ಹುಲು ಮನುಜರಿರಾ.
ಇನ್ನಾದರು, ಅರಿದು ನೆನೆದು ಬದುಕಿ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ ಸಂಗನಬಸವಣ್ಣನ ಶ್ರೀಪಾದವ.

*

ತೋಂಟದ ಸಿದ್ಧಲಿಂಗ

೧೧೬

ಅನಾದಿ ಪರಶಿವ ತತ್ವದಿಂದ ಚಿತ್ತು ಉದಯಿಸಿತ್ತು.
ಆ ನಿರ್ಮಲ ಮಹಾಜ್ಞಾನಚಿತ್ಸ್ವರೂಪೆ ಬಸವಣ್ಣ ನೋಡಾ.
ಆ ಬಸವಣ್ಣನಿಂದ ನಾದ, ಬಿಂದು ಕಳೆ,
ಆ ನಾದ ಬಿಂದು ಕಳೆ ಸಮರಸವಾಗಿ
ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಪ್ಪ
ಮಹಾಲಿಂಗ ಉದಯಿಸಿತ್ತು ನೋಡಾ.
ಆ ಮಹಾಲಿಂಗದಿಂದ ಪಂಚಸಾದಾಖ್ಯಮೂರ್ತಿ
ಉತ್ಪತ್ಯವಾಯಿತ್ತು ನೋಡಾ.
ಇದು ಕಾರಣ ಆದಿ ಲಿಂಗ, ಅನಾದಿ ಶರಣನೆಂದೆಂಬೆ
ಬಸವಣ್ಣನಿಂದ ಲಿಂಗವಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

*

ಬಹುರೂಪಿ ಚೌಡಯ್ಯ

೧೧೭

ಆದಿಶುದ್ಧ, ಆಚಾರಲಿಂಗವೆನುತ್ತಿಪ್ಪರೆಲ್ಲರು
ಅನಾದಿಲಿಂಗದ ಭೇದವನರಿಯರಾಗಿ;

ನಾಶಿಕ ಪುಟದ ಆಶ್ರಯದಲ್ಲಿ ಲಿಂಗವನರಿಯರಾಗಿ;
ಕೆಲಬರಿಗೆ[೩೩]ದೂಷಣೆಯ ಮಾಡಿ,
ಹೋದ ಲಿಂಗವನರಿಯರಾಗಿ,
ದೂಷಣೆ ಪಥ್ಯವಾಗಿ ಮನ[೩೪]ದಾ[೩೪] ಶ್ರಯಕ್ಕೆ ತಂದಾತ ಬಸವಣ್ಣ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆನು.

*

ಸ್ವತಂತ್ರ ಸಿದ್ಧಲಿಂಗೇಶ್ವರ

೧೧೮

ಶಿವನ–ಶಿವಪ್ರಸಾದಿಯ,
ಉಭಯ ಸಂಬಂಧ ಸಹಭೋಗವೆಂತೆಂದಡೆ,
ಶಿವ, ತನ್ನ ಶ್ರೋತ್ರಂಗಳನು ಪ್ರಸಾದಿಯ ಶ್ರೋತ್ರದಲ್ಲಿ ಕೂಡಿ ಶಬ್ದವನರಿವನು.
ಶಿವ, ತನ್ನ ನೇತ್ರಂಗಳನು ಪ್ರಸಾದಿಯ ನೇತ್ರದಲ್ಲಿ ಕೂಡಿ ರೂಪನರಿವನು.
ಶಿವ, ತನ್ನ ಜಿಹ್ವೆಯ ಪ್ರಸಾದಿಯ ಜಿಹ್ವೆಯಲ್ಲಿ ಕೂಡಿ ರುಚಿಯನರಿವನು.
ಶಿವ, ತನ್ನ ಘ್ರಾಣವ ಪ್ರಸಾದಿಯ ಘ್ರಾಣದಲ್ಲಿ ಕೂಡಿ ಗಂಧವನರಿವನು.
ಶಿವ, ತಾನು ಬೇರೆ ಭೋಗಿಸಲೊಲ್ಲದೆ
ಪ್ರಸಾದಿಯ ಅಂಗವ ಹೊಕ್ಕು ಭೋಗಿಸುವನಾಗಿ,
ಸೋಹಂಯೆನ್ನದೆ ಪ್ರಸಾದಿ ಸಂಗನಬಸವಣ್ಣ.
ದ್ವೈತಾದ್ವೈತವ ಮೀರಿದ ಪ್ರಸಾದಿ ಸಂಗನಬಸವಣ್ಣ.
ಇಂತಪ್ಪ ಪ್ರಸಾದಿ ಸಂಗನಬಸವಣ್ಣನ
ಸುಖಾತಿಶಯವನೇನೆಂದುಪಮಿಸುವೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

---

೩೩ + ಲಿಂಗವು ಹಲಬರಿಗೆ (ಬ) ೩೪–೩೪ ರಾಗಿ(ಬ)

*

ಆಯ್ದಕ್ಕಿ ಮಾರಯ್ಯ

೧೧೯

ಹಮ್ಮು ಬಿಮ್ಮಳಿದ ಅನವರತ ಶಿವ ನೀನು, ಬಸವಣ್ಣಾ,
ಎನ್ನ ಕರಸ್ಥಲದ ಕಳೆ ನೀನು, ಬಸವಣ್ಣಾ.
ಎನ್ನ ಮನೋಮಧ್ಯದ ಸ್ವಯಂಜ್ಯೋತಿ ನೀನು, ಬಸವಣ್ಣಾ
ಅಮಲೇಶ್ವರಲಿಂಗದನುವಿನ ಕಳೆ ನೀನು, ಸಂಗನಬಸವಣ್ಣಾ.

೧೨೦

ಅಮೃತದ ಸವಿ ಸ್ವಾದಿಸುವರಿಗಲ್ಲದೆ
ಅಮೃತ ತನ್ನ ತಾ ಸ್ವಾದಿಸದ ಪರಿಯಂತೆ
ನಿತ್ಯ ತೃಪ್ತಂಗೆ ಆಪ್ಯಾಯನ ಉಂಟೆ ಬಸವಣ್ಣಾ?
ಏಳ್ನೂರೆಪ್ಪತ್ತಮರಗಣಂಗಳ ಕಟ್ಟಳೆಯ
ನೇಮದ ಕಟ್ಟು ನಿನ್ನದು ಬಸವಣ್ಣಾ.
ನಿನಗೆ ಭಾವ ನಿರ್ಭಾವವೆಂಬುದುಂಟೇ ಬಸವಣ್ಣಾ.
ಅಮಲೇಶ್ವರಲಿಂಗದಲ್ಲಿ ಸಂಗನಬಸವಣ್ಣಾ,
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು.

೧೨೧

ಮನದಲ್ಲಿ ಹುಟ್ಟಿದ ಅರಿವು
ಮಾಡುವ ಮಾಟದಲ್ಲಿ ಕಾಣಬಹುದು ಬಸವಣ್ಣಾ.
ಶರಣರ ಸಂಗಕ್ಕೆಳಸಿದ ಚಿತ್ತವ
ಅನುಭಾವದಲ್ಲಿ ಕಾಣಬಹುದು ಬಸವಣ್ಣಾ
ಒಳಹೊರಗೆ ತೆರಹಿಲ್ಲದ ಕೂಟ ನಿನ್ನದು ಬಸವಣ್ಣಾ
ಅಮಲೇಶ್ವರಲಿಂಗದಲ್ಲಿ ಸಂಗನಬಸವಣ್ಣಾ
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು.

*

ಅಕ್ಕನಾಗಮ್ಮ

೧೨೨

ಭಕ್ತಿಯ ತವನಿಧಿಯೇ ಬಸವಾ.
ಮುಕ್ತಿಯ ಮೂರುತಿಯೆ ಬಸವಾ.
ಲಿಂಗಜಂಗಮದ ಚೈತನ್ಯವೆ ಬಸವಾ.
ನಿಮ್ಮನಗಲಿಯಾನೆಂತು ಸೈರಿಸುವೆನು ಎಲೆ ಅಯ್ಯ ಬಸವಾ.
ಎಲೆ ಪರಮಗುರುವೆ ಬಸವಾ.
ಹಾ! ಹಾ! ಎನ್ನಂತಂಗದ ಜ್ಯೋತಿಯೆ ಬಸವಾ,
ನಿಮ್ಮೊಕ್ಕೈಮಿಕ್ಕ ಶೇಷಪ್ರಸಾದವನಿಕ್ಕಿ,
ಎನ್ನ ಪಾವನವ ಮಾಡಿ ಉಳುಹಿದೆಯಲ್ಲಾ ಬಸವಲಿಂಗವೆ.
ಎನಗಿನ್ನಾರು ಗತಿ-ಮತಿ ಹೇಳಯ್ಯಾ ಬಸವಣ್ಣಾ ನೀವಲ್ಲದೆ?
ಬಸವಣ್ಣಪ್ರಿಯ ಚೆನ್ನಸಂಗಯ್ಯಾ, ನೀವಗಲಿದರೆ
ಎನ್ನ ಪ್ರಾಣ ನಿಮ್ಮೊಳಗಗಲಬಲ್ಲುದೆ ಬಸವಾ.

೧೨೩

ಆಚಾರವೆಂಬುದು ಅಗೋಚರ ನೋಡಯ್ಯಾ; ಆರಿಗೂ ಸಾಧ್ಯವಲ್ಲ.
ಮರ್ತ್ಯಲೋಕದಲ್ಲಿ ಆ ಸದಾಚಾರದ ಬೆಳವಿಗೆಯ ಮಾಡಲೆಂದು,
ಬಸವಣ್ಣ ಬಂದು ಭಕ್ತಿಸ್ಥಲವ ಹರಹಿದ.
ಗುರುಲಿಂಗಜಂಗಮ ದಾಸೋಹ ಪಾದೋದಕ ಪ್ರಸಾದದ
ಹಾದಿಯನೆಲ್ಲರಿಗೆ ತೋರಿದ ಬಸವಣ್ಣನು.
ಶಿವಾಚಾರದ ಬೆಳವಿಗೆಯ ಘನವನಹುದಲ್ಲವೆಂದು ಬಿಜ್ಜಳ ತರ್ಕಿಸಲು,
ಅನಂತ ಮುಖದಿಂದ ಒಡಂಬಡಿಸಿ ಅಹುದೆನಿಸಿದ ಬಸವಣ್ಣನು.
ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಬಗಿದು ಹೊಕ್ಕಡೆ,
ಹಿಂದೆ ಲೋಕವರಿದು ಬದುಕಬೇಕೆಂದು ಸೆರಗ ಕೊಟ್ಟ ಬಸವಣ್ಣನು.
ನಾನು ಹಿಂದುಳಿದಹಳೆಂದು ಮುಂದಣ ಗತಿಯ ತೋರಿ,
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ತನ್ನ ಪ್ರಸನ್ನದೊಳಗೆ ಇಂಬಿಟ್ಟುಕೊಂಡನು,
ಎನ್ನ ಹೆತ್ತತಂದೆ ಸಂಗನಬಸವಣ್ಣನು.

*

ಸಿದ್ಧರಾಮ

೧೨೪

ಅರ್ಚಿಸಲು ಬೇಡ ಲಿಂಗವ
ನಿಚ್ಚಂ ಪೂಜಿಲುಬೇಡ, ಜಪತಪ ಬೇಡಂ
ಸಚ್ಚಿದಾನಂದ ಬಸವನ
ನೊಚ್ಚತ ನೆನೆ ನಿತ್ಯಪದವು ನಿನಗಿದು ಸತ್ಯಂ ॥*

ಬಸವಸ್ತೋತ್ರ ಸಮಾಪ್ತಂ

❖❖

---

* ಈ ಕಂದ ಪದ್ಯ, ಮೂಲತಃ ಸಿದ್ಧರಾಮನ ವಚನವಾಗಿದೆ. ನೋಡಿ : ಪು. ೬೫.

ವಚನಗಳ ಅಕಾರಾದಿ

* ಚೆನ್ನಂಜೇದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು
* ಬೋಳಬಸವರಾಜದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು

ಚೆನ್ನಂಜೇದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು

[ಸಾಲುಗಳ ಮುಂದಿನ ಅಂಕಿ, ವಚನಸಂಖ್ಯೆಯನ್ನು ಸೂಚಿಸುತ್ತದೆ]

---

* ಈ ಗುರುತಿನ ೧೮ ವಚನಗಳು ಎರಡೂ ಸಂಕಲನಗಳಲ್ಲಿವೆ.

❖❖


ಬೋಳಬಸವರಾಜದೇವರು ಸಂಪಾದಿಸಿದ ಬಸವಸ್ತೋತ್ರದ ವಚನಗಳು

[ಸಾಲುಗಳ ಮುಂದಿನ ಅಂಕಿ, ವಚನಸಂಖ್ಯೆಯನ್ನು ಸೂಚಿಸುತ್ತದೆ]

---

* ಈ ಗುರುತಿನ ೧೮ ವಚನಗಳು ಎರಡೂ ಸಂಕಲನಗಳಲ್ಲಿವೆ.

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359